ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯಮಾಲೆ

**ಯಕ್ಷಗಾನ ಸಾಹಿತ್ಯ ಸಂಪುಟ –**

# ಹಬ್ಬದ ಹಾಡುಗಳು

**(ಸಂಪುಟ–೨)**

**ಸಂಪಾದಕರು**

**ಡಾ. ಡಿ.ಬಿ. ನಾಯಕ**

**ಕರ್ನಾಟಕ ಸರ್ಕಾರ**

**ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ**

**ಬೆಂಗಳೂರು – ೫೬೦ ೦೦೨**

**HABBADA HADUGALU :** Edited by **Dr. D.B. Nayak,** Published by **Commissioner, Dept. of Kannada and Culture, Kannada Bhavana, J.C. Road, Bangalore-560 002** on the occasion of Suvarna Karnataka - 2006.

© ಕಾಯ್ದಿರಿಸಿದೆ

**ಆವೃತ್ತಿಯ ಹಕ್ಕು** : ಕನ್ನಡ ಮತ್ತು ಸಂಸ್ಕೃತಿ ಇಲಾಖೆ
**ಪ್ರಥಮ ಮುದ್ರಣ** : ೨೦೦೬
**ಪುಟಗಳು** : XVII + 656
**ಪ್ರತಿಗಳು** : ೧೦೦೦
**ಬಿಡಿ ಪ್ರತಿ ಬೆಲೆ** : ರೂ.೫೦/–

First Print : 2006
Pages : XVII + 656
Copies : 1000
Price : Rs.50/-

**ಪ್ರಕಾಶಕರು :**

**'ಸುವರ್ಣ ಕರ್ನಾಟಕ'** ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ
ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಕೆ.ಆರ್. ನಿರಂಜನ್, ಕೆ.ಎ.ಎಸ್.
ಅವರಿಂದ ಪ್ರಕಟಿತ

**ಸಹಕಾರ :** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

**ಮುಖಪುಟ ವಿನ್ಯಾಸ :** ಪ. ಸ. ಕುಮಾರ್

**ಮುದ್ರಕರು :**

**ಗೀತಾಂಜಲಿ ಗ್ರಾಫಿಕ್ಸ್**
# ೪, ಎಂ.ಎಸ್.ಆರ್. ಕೈಗಾರಿಕಾ ನಗರ,
ಗೋಕುಲ ಬಡಾವಣೆ, ಮತ್ತಿಕೆರೆ, ಬೆಂಗಳೂರು – ೫೬೦ ೦೫೪.
ದೂರವಾಣಿ : ೨೩೬೦೪೦೮೭

# ಪ್ರಸ್ತಾವನೆ

ಜೀವ ವಿಕಾಸದ ಘಟ್ಟಗಳಲ್ಲಿ ಮಾನವನ ಅಸ್ತಿತ್ವ ಅತ್ಯಂತ ಪ್ರಮುಖವಾದುದಾಗಿದೆ. ಮಾನವ ಮತ್ತು ನಿಸರ್ಗಗಳ ಸಂಪರ್ಕ ಗಾಢವಾಗುತ್ತ ಬೆಳೆದಂತೆಲ್ಲ ನಿಸರ್ಗದ ಎಲ್ಲ ಘಟನೆಗಳು ಬೆರಗು ಮೂಡಿಸಿದವು. ಧಿಮ್ಮೆಂದು ಸಿಡಿಯುವ ಜ್ವಾಲಾಮುಖಿ, ದಕ್ಕಿದ್ದನ್ನು ಕೊಚ್ಚಿ ಸೆಳೆದೊಯ್ಯುವ ಭೀಕರ ಪ್ರವಾಹ, ಇದಕ್ಕಿದ್ದಂತೆ ಮೂಡುವ ಸೂರ್ಯ ಮತ್ತು ಕವಿಯುವ ಗಾಢ ಕತ್ತಲೆ ಇತ್ಯಾದಿಗಳು ಯಾವುದೇ ಆದಿಮ ಗುಂಪಿನ ವ್ಯಕ್ತಿಯ ಭಯ ವಿಸ್ಮಯಗಳಾಗಿ ಸೀಮಿತವಾಗದೇ ಇಡೀ ವೃಂದದ ಸಾಮೂಹಿಕ ಅನುಭವಗಳಿಗೆ ಕಾರಣವಾಗುತ್ತವೆ. ಇಂಥ ಅನುಭವಗಳು ಕೇವಲ ಅವರ ಭಾವನಾ ಪ್ರಪಂಚಕ್ಕೆ ನಿರ್ದಿಷ್ಟಗೊಳ್ಳದೆ, ಅನಿಯಂತ್ರಿತ ಶಕ್ತಿಗಳ ಅದ್ಭುತ, ಅಮಾಯಕ ಭಯೋತ್ಪಾದಕ ಕಲ್ಪನೆಗಳಿಗೆ ಪ್ರೇರಣೆಯನ್ನು ಒದಗಿಸುತ್ತವೆ.

ಅಗೋಚರ ಶಕ್ತಿಗಳ ಮೂರ್ತರೂಪಗೊಳ್ಳುವ ಕಾರಣವಾಗಿ ಬೆಂಕಿಯ ಮೂರ್ತೀಕರಣದಲ್ಲಿ ಅಗ್ನಿದೇವತೆ, ಬೆಳಕಿನ ಮೂರ್ತೀಕರಣದಲ್ಲಿ ಸೂರ್ಯದೇವ, ಕೃಷಿ ಕಾರ್ಯಗಳ ಹಿನ್ನೆಲೆಯಲ್ಲಿ ಭೂಮಿ, ಭೂದೇವಿ, ಭೂಮಿತಾಯಿ, ಗೋಮಾತೆ, ಬಿರುಗಾಳಿ ಧಾರಾಕಾರ ಮಳೆಗಳು ವರುಣ, ಇಂದ್ರ ಮುಂತಾದ ದೇವತೆಗಳ ಸೃಷ್ಟಿಗೆ ಕಾರಣವಾದವು. ಈ ದೈವಿಶಕ್ತಿಗಳು ವ್ಯಷ್ಟಿ ಮತ್ತು ಸಮಷ್ಟಿಗಳ ಹಿತರಕ್ಷಣೆ ಮಾಡಬೇಕು ಹಾಗೂ ಸುಖ ಸಮೃದ್ಧಿಯನ್ನು ಕರುಣಿಸಬೇಕೆಂಬ ಹಿನ್ನೆಲೆಯಲ್ಲಿ ಅವುಗಳ ಅರ್ಚನೆ, ನೇಮ, ಸ್ತುತಿಗಳು ಪ್ರಾರಂಭವಾದವು !!.......ಎಳ್ಳು ಜೀರಿಗೆ ಬೆಳೆಯುವ ಭೂಮಿ ತಾಯಿಯ ಎದ್ದೊಂದುಗಳಿಗೆ ನೆನೆದೇನು" ಎಂದು ಸ್ತುತಿ ಮಾಡಲು ಪ್ರಾರಂಭವಾಯಿತು. ಜನಪದರ ಅಗಣಿತ ಆಚರಣೆಗಳಲ್ಲಿ ಪ್ರಧಾನವಾಗಿ ಸ್ತುತಿ ಕಂಡು ಬರುತ್ತದೆ. ದೈವೀಶಕ್ತಿಗಳ ಕೃಪೆಯನ್ನೂ ಕೋರುವುದು ಇಲ್ಲಿಯ ಮುಖ್ಯ ಉದ್ದೇಶವಾಗಿದೆ.

'ಹಬ್ಬ' ಎನ್ನುವ ಪದ ಮೂಲತಃ 'ಪರ್ವ' ಶಬ್ಧದ ತದ್ಭವರೂಪವಾಗಿದೆ. ನಮ್ಮ ಜನಾಂಗಿಕ ಜೀವನದ ನಿರ್ದಿಷ್ಟ ಕಾಲದ ಆಚರಣೆ–ಉತ್ಸವಕ್ಕೆ ಸಂಕೇತವಾಗಿರುವುದುಂಟು. ಪರ್ವ ಎಂದರೆ ಕಾಲ ವಿಭಜನೆ ಎಂದು ಅರ್ಥ. ತಿಂಗಳ ಮೊದಲ ಅರ್ಧಾವಧಿಯೊಳಗೆ ಚಂದ್ರನಲ್ಲಿ ಉಂಟಾಗುವ ನಾಲ್ಕು ಬದಲಾವಣೆಗಳ ಕಾಲ. ವಿಶೇಷತಃ ಎಂಟನೆಯ ಮತ್ತು ಹದಿನಾಲ್ಕನೆಯ ದಿನ. ಮಾನವನ ಬಯಕೆ ಅಥವಾ ಇಚ್ಛೆಯ ಸಂಕಲ್ಪ, ವ್ರತ, ಆ ಇಚ್ಛೆಯ ಪೂರ್ಣತೆಗಾಗಿ ಒಂದು ನಿರ್ದಿಷ್ಟ ಅವಧಿಯಲ್ಲಿ ಕೈಕೊಳ್ಳುವ ಆಚರಣೆಗಳ ರೂಢಿ ಉತ್ಸವಗಳೇ ಹಬ್ಬ : ಹೀಗಾಗಿ ಆಚರಣೆ ಮತ್ತು ಹಬ್ಬಗಳಿಗೆ ಬೇರ್ಪಡಿಸಲಾರದ ಸಂಬಂಧವಿದೆ. ಶಿಲಾಪೂರ್ವ ಮಾನವ, ನಾಗರಿಕತೆಯ ಬೆಳೆದಂತೆಲ್ಲ ಇಂದಿನ ಸ್ಥಿತಿಗೆ ತಲುಪಿದೆ. ನಮ್ಮ ಜನಾಂಗದ ಜೀವನ ವಿಕಾಸಗೊಳ್ಳುತ್ತ ಬಂದುದೇ ಒಂದು ರೋಚಕವಾದ ಸಾಹಸಮಯ ಸಂಗತಿಯಾಗಿದೆ.



ಆದಿ ಮಾನವನಿಂದ ಮೊದಲುಗೊಂಡು ಕಾಲಾನುಕ್ರಮದಲ್ಲಿ ಬೆಳೆದು ಬಂದ ಬೇಟೆ, ಗಡ್ಡೆ–ಗೆಣಸುಗಳ ಸಂಗ್ರಹ, ಒಂದೆಡೆ ನೆಲೆನಿಂತು ಕೃಷಿಗೆ ತೊಡಗಿದುದು, ಕಲಿಕೆಯ ವಿಧಾನ, ಅರ್ಚನೆ–ಆರಾಧನೆ, ಭಾವಾಭಿವ್ಯಕ್ತಿಯ ವಿವಿಧ ಮಾಧ್ಯಮಗಳನ್ನು ಕಂಡುಕೊಳ್ಳುವಿಕೆ ಮಾನವನ ಒಟ್ಟು ಸಂಸ್ಕೃತಿ ಸ್ವರೂಪ ರಚನೆಯ ಆಧಾರ ಸ್ತಂಭಗಳಾಗಿ ನಿಂತಿವೆ. ಮನುಷ್ಯನ ಅಸ್ತಿತ್ವದ ವಿವಿಧ ಹಂತಗಳು ಅವನ ಸಾಂಸ್ಕೃತಿಕ ಬೆಳವಣಿಗೆಯ ಜೊತೆಗೆ ಒಪ್ಪಂದ ಮಾಡಿಕೊಳ್ಳುತ್ತ ಪರಿವರ್ತನೆಗೆ ಒಳಗು ಮಾಡಿಕೊಳ್ಳುತ್ತ ಬಂದಿರುವ ಕಥೆಯೇ ಇತಿಹಾಸ ಪೂರ್ವಕಾಲದ ವಿಕಾಸದ ಕಥೆಯಾಗಿದೆ.

ಮಾನವನ ನಂಬಿಕೆ, ಆಚರಣೆ, ಶ್ರದ್ಧೆ ಹಾಗೂ ಹಬ್ಬಗಳು ಮಾನವನ ಸಂಸ್ಕೃತಿಯ ವಿಕಾಸವನ್ನು ಶೋಧಿಸುವಲ್ಲಿ ಆಧಾರ ಸಾಮಗ್ರಿಗಳನ್ನು ಒದಗಿಸುತ್ತವೆ. ಹೀಗಾಗಿ ಮಾನವ ಸಂಸ್ಕೃತಿಯ ಅಧ್ಯಯನದಲ್ಲಿ ಹಬ್ಬಗಳಿಗೆ ವಿಶೇಷ ಮಹತ್ವವಿದೆ.

ನಮ್ಮ ಭಾರತ ದೇಶವು ಅನೇಕ ಧರ್ಮಗಳ ನೆಲೆವೀಡಾಗಿದೆ. ಅನೇಕತೆಯಲ್ಲಿ ಏಕತೆಯನ್ನು ಮೆರೆಯುವುದು ನಮ್ಮ ದೇಶದ ವೈಶಿಷ್ಟ್ಯವಾಗಿದೆ. ಹೀಗಾಗಿ ಇಲ್ಲಿ ಅನೇಕ ಧರ್ಮಗಳಿಗೆ ಸಂಬಂಧಿಸಿದ ವಿವಿಧ ಬಗೆಯ ಹಬ್ಬಗಳು ಮತ್ತು ಜಾತ್ರೆಗಳು ಆಚರಣೆಯಲ್ಲಿವೆ. ಹಬ್ಬಗಳಲ್ಲಿ ಸಾರ್ವತ್ರಿಕವಾಗಿ ಆಚರಿಸುವ ಮತ್ತು ಆಯಾ ಗ್ರಾಮಗಳು ಸೀಮಿತವಾಗಿ ಆಚರಿಸುವ ಎರಡು ಬಗೆಯ ಸಂಪ್ರದಾಯಗಳು ಕಂಡು ಬರುತ್ತವೆ. ಆದರೆ ಈ ಎರಡೂ ಬಗೆಯ ಹಬ್ಬಗಳ ಉದ್ದೇಶ ಮಾತ್ರ ಒಂದೇ ಆಗಿದ್ದು ಅದು ಸಾಮಾಜಿಕ ಕಲ್ಯಾಣವೇ ಆಗಿದೆ. ಹಿಂದೂಗಳಲ್ಲಿ ಸಾರ್ವತ್ರಿಕವಾಗಿ ಉಗಾದಿ, ಮಣ್ಣೆತ್ತಿನ ಅಮಾವಾಸ್ಯೆ, ನಾಗರಪಂಚಮಿ, ಜೋಕುಮಾರ, ಗೌರಿ–ಗಣೇಶ, ಮಹಾನವಮಿ, ದೀಪಾವಳಿ, ಹೋಳಿ ಮುಂತಾದ ಹಬ್ಬಗಳನ್ನು ವೈಶಿಷ್ಟ್ಯಪೂರ್ಣವಾಗಿ ಆಚರಿಸುವುದುಂಟು. ಗ್ರಾಮದ ಜನರೆಲ್ಲ ಸೇರಿ ಆಚರಿಸುವ ಹಬ್ಬಗಳು ಆಯಾ ಗ್ರಾಮಗಳಲ್ಲಿ ನೆಲೆನಿಂತಿರುವ ಮಾರಮ್ಮ, ದುರ್ಗಮ್ಮ, ಮಾಯಮ್ಮ, ಮಾಸ್ತಮ್ಮ, ಲಕ್ಕಮ್ಮ, ಪೋಚಮ್ಮ, ಕಾಳಮ್ಮ, ಎಲ್ಲಮ್ಮ, ಬಸವೇಶ್ವರ, ಹನುಮಂತ ಮುಂತಾದ ದೇವತೆಗಳ ಹಬ್ಬ, ಉತ್ಸವ ಜಾತ್ರೆಗಳನ್ನು ಆಚರಿಸುತ್ತಾರೆ. ಗ್ರಾಮದೇವತೆಗಳ ಹಬ್ಬಗಳಲ್ಲಿ ಆಯಾ ಗ್ರಾಮಗಳ ಸಂಪ್ರದಾಯಕ್ಕೆ ಸಂಬಂಧಿಸಿದಂತೆ ವಿಭಿನ್ನವಾಗಿ ಮತ್ತು ವೈಶಿಷ್ಟ್ಯಪೂರ್ಣವಾಗಿ ಆಚರಣೆಗಳಿರುವುದು ಕಂಡು ಬರುತ್ತದೆ.

ಈ ಹಬ್ಬ ಮತ್ತು ಜಾತ್ರೆಗಳು ಮಾನವನು ತನ್ನ ಅವಿಶ್ರಾಂತವಾದ ದುಡಿಮೆಯ ನಡುವೆ ಬಿಡುವು ಮಾಡಿಕೊಂಡು ಎಲ್ಲರೊಡನೆ ಸಂತೋಷದಿಂದ ಕೂಡಿ ಬಾಳಲು ಸಹಕಾರಿಯಾಗಿದೆ. ಕುಟುಂಬಗಳು ಬೆಳೆದು ದೊಡ್ಡವುಗಳಾಗಿ, ವಿಭಜನೆಗೊಂಡು ಬದುಕಿನ ಅನಿವಾರ್ಯತೆಗಳಿಂದಾಗಿ ದೂರ ದೂರ ಚದುರಿ ಹೋದ ಬಂಧು ಬಾಂಧವರು, ಸಂಬಂಧಿಕರು, ಹಬ್ಬದ ನೆಪದಲ್ಲಿ ಆಗಾಗ್ಗೆ ಒಂದೆಡೆ ಕಲೆತು ಪರಸ್ಪರ ಕಷ್ಟ ಸುಖ ಸಂತೋಷಗಳನ್ನು ಹಂಚಿಕೊಳ್ಳಲು ಇವು ತುಂಬ ಸಹಾಯಕವಾಗಿವೆ. ದೇವ–ದೇವತೆಗಳನ್ನು ಪೂಜಿಸುವುದರಿಂದ ವ್ಯಕ್ತಿಗೆ, ಗ್ರಾಮಕ್ಕೆ ಹಾಗೂ ನಾಡಿಗೆ ಸುಖಸಮೃದ್ಧಿಯಾಗುತ್ತದೆಂಬ ನಂಬಿಕೆ ಹಬ್ಬ ಮತ್ತು ಜಾತ್ರೆಗಳು ಅವಿರತವಾಗಿ ಮುಂದುವರಿದುಕೊಂಡು ಬರಲು ಕಾರಣವಾಗಿದೆ.

ಹಬ್ಬಗಳನ್ನು ಆಚರಿಸುವಾಗ ಗ್ರಾಮದ ಬೇರೆ ಬೇರೆ ಜಾತಿ ಕಸಬುಗಳ ಜನರೆಲ್ಲರೂ ಭಾಗವಹಿಸಲು ಸಾಧ್ಯವಾಗುತ್ತದೆ. ಆಯಾ ಜಾತಿಯ ಹಾಗೂ ಕಸಬುಗಳ ಜನರು ತಮ್ಮದೇ ಆದ ಚಾರ್ಜಗಳನ್ನು ಸಲ್ಲಿಸುವುದರಿಂದ ಪರಸ್ಪರ ಸಂಬಂಧ ನವೀಕರಣಗೊಳ್ಳುತ್ತದೆ. ಅಲ್ಲದೆ ಗ್ರಾಮದ ರಸ್ತೆ ಒಳಚರಂಡಿಗಳು ಶುಚಿಗೊಳ್ಳುವ ಮೂಲಕ ಗ್ರಾಮದ ನೈರ್ಮಲ್ಯೀಕರಣಕ್ಕೆ ಸಹಾಯಕವಾಗುತ್ತದೆ. ಮನೆಗಳಿಗೆ ಸುಣ್ಣ ಬಣ್ಣಗಳನ್ನು ಸಾರಿಸಿ ವ್ಯವಸ್ಥೆ ಮಾಡುವುದರಿಂದ ಮನೆಗಳ ನವೀಕರಣಕ್ಕೆ ಪ್ರೇರಣೆಯು ಒದಗಿ ಬರುತ್ತದೆ. ಈ ಸುಣ್ಣ ಬಣ್ಣಗಳಿಂದ ಕ್ರಿಮಿಕೀಟಗಳು ನಾಶವಾಗಿ ಮನೆ ಮಂದಿಯ ಹಾಗೂ ಊರ ಜನರ ಆರೋಗ್ಯ ಕಾಪಾಡಿಕೊಳ್ಳಲು ಸಹಾಯಕಾರಿಯಾಗುತ್ತದೆ.

ಹಬ್ಬಗಳ ಆಚರಣೆಯ ಸಂದರ್ಭದಲ್ಲಿ ಕೆಲವು ವಿಶಿಷ್ಟ ಸಂಪ್ರದಾಯಗಳಿರುತ್ತವೆ. ಸಂಪ್ರದಾಯಗಳ ಕ್ರಿಯಾವಿಧಿಗಳ ಸಂದರ್ಭದಲ್ಲಿ ಹಾಡುಗಳು ಪ್ರಮುಖ ಪಾತ್ರವಹಿಸುತ್ತವೆ. ಮನುಷ್ಯ ಮೊದಲು ಅಭಿವ್ಯಕ್ತಿಯನ್ನು ನೀಡಿದ್ದು ಹಾಡಿನ ಮೂಲಕವೇ ಆಗಿದೆ. ಹೀಗಾಗಿ ದೇವದೇವತೆಗಳನ್ನು ತೃಪ್ತಿಪಡಿಸಲು ಕೆಲವು ವಿಶಿಷ್ಟ ಆಚರಣೆಗಳನ್ನು ಮಾಡುವಂತೆ ಸ್ತುತಿಯನ್ನು ಕೂಡ ಮಾಡಲಾಗುತ್ತದೆ. ಆ ಮೂಲಕವಾಗಿ ದೇವರನ್ನು ಪ್ರಸನ್ನಗೊಳಿಸಬಹುದೆಂಬ ಭಾವನೆಯಿದೆ. ಹೀಗೆ ಹಬ್ಬಗಳ ಆಚರಣೆಯ ಸಂದರ್ಭದಲ್ಲಿ ಸ್ತುತಿ, ಮಂಗಳಾಚರಣೆಯ ಹಾಡುಗಳೊಂದಿಗೆ ಹಬ್ಬಗಳ ಆಚರಣೆಗೆ ಸಂಬಂಧಿಸಿದ ಹಾಡುಗಳುಂಟು. ಜನಪದ ಸಾಹಿತ್ಯ ಹಾಗೂ ಸಂಸ್ಕೃತಿಯಲ್ಲಿ ಇವುಗಳಿಗೆ ವಿಶಿಷ್ಟವಾದ ಮಹತ್ವವಿದೆ. ಆದ್ದರಿಂದಾಗಿಯೋ ಪ್ರೊ॥ ದೇವೇಂದ್ರ ಸತ್ಯಾರ್ಥಿಯವರು "ಜಾನಪದ ಗೀತೆಗಳು ನಮ್ಮ ದೇಶದ ಘನವಾದ ಸೊತ್ತು. ಭಾರತದ ಸಾಂಸ್ಕೃತಿಕ ಪರಂಪರೆಯ ಬಹುಮಟ್ಟಿನ ತಿರುಳು ಇವುಗಳಲ್ಲಿ ಹುದುಗಿದೆ. ಭಾರತದ ಲಕ್ಷಾಂತರ ಜನರಿಗೆ ಬಾಗಿಲುಗಳನ್ನು ತೆರೆದಿಟ್ಟ ಕಾವ್ಯ ಮತ್ತು ಸಂಗೀತ ಮಹಾ ದೇವಾಲಯಗಳಿವು. ಇವು ಜನತೆಯ ಹೃದಯದಿಂದ ಉಕ್ಕಿ ಬಂದ ನುಡಿಗಳಾದ್ದರಿಂದ ಅವುಗಳಲ್ಲಿ ಭಾರತದ ಹಳ್ಳಿಗಾಡಿನ ಜೀವನದ ನೋವು–ನಲಿವುಗಳನ್ನು ನಾವು ಅನುಭವಿಸುತ್ತೇವೆ. ನಿತ್ಯ ಜೀವನದ ಅವಶ್ಯಕತೆಗಳನ್ನು ದೊರಕಿಸಿಕೊಳ್ಳುವುದಕ್ಕೆ ಒಂದೇ ಸಮನೆ ದುಡಿಯುವ ಸಾಮಾನ್ಯ ಜನತೆಯ ನಿಕಟ ಸಂಪರ್ಕ ಇವುಗಳಿಂದ ನಮಗೆ ಉಂಟಾಗುತ್ತದೆ" ಎಂದಿದ್ದಾರೆ. ಹೀಗೆ ಒಂದು ದೇಶದ ಅಮೂಲ್ಯ ಸಂಪತ್ತಾಗಿರುವ ಇವು ಸಾಂಸ್ಕೃತಿಕ ತವನಿಧಿಗಳಾಗಿವೆ. ಇವುಗಳ ಸಂಗ್ರಹ ಹಾಗೂ ಅಧ್ಯಯನದಿಂದಾಗಿ ಒಂದು ದೇಶದ ಸಂಸ್ಕೃತಿಯ ವಿಕಾಸವನ್ನು ಗುರುತಿಸಿಕೊಳ್ಳುವುದರ ಜೊತೆಗೆ ಸಾಂಸ್ಕೃತಿಕ ಮೌಲ್ಯಗಳನ್ನು ಅರಿತುಕೊಳ್ಳಬಹುದಾಗಿದೆ. ಆದ್ದರಿಂದಾಗಿಯೇ ರವೀಂದ್ರನಾಥ ಠಾಕೂರ ಅವರು "ಜಾನಪದ ಗೀತಗಳು ಜನತೆಯ ಮನಸ್ಸು ಮತ್ತು ಹೃದಯವನ್ನು ತಿಳಿಯಲು ನಮಗೆ ಸಹಾಯಕಾರಿಯಾಗಿವೆ. ಬೇರೆ ಬೇರೆ ಪ್ರದೇಶದ ಹಳ್ಳಿಯ ಹಾಡುಗಳಲ್ಲಿ ಕಂಡು ಬರುವ ಸಮಾನ ಗುಣಗಳಿಂದ ಭಾರತದಾದ್ಯಂತವೂ ಮಾನವ ಸ್ವಭಾವದ ವೈವಿಧ್ಯತೆಯಲ್ಲಿರುವ ಏಕತೆಯನ್ನು ನಾವು ನೋಡುತ್ತೇವೆ. ಎಲ್ಲ ದೇಶಗಳ ಲೋಕ ಗೀತೆಗಳನ್ನು ಸಂಗ್ರಹಿಸಿ ತೌಲನಿಕವಾಗಿ ಅಧ್ಯಯನ ಮಾಡಿದಲ್ಲಿ ಎಲ್ಲ ಮಾನವ ಕುಲಕ್ಕೂ ಸಮಾನಾವಾದ ಮನಸ್ಸು ಹೃದಯಗಳು ಅವುಗಳಲ್ಲಿ ಅಡಗಿರುವುದನ್ನು ಕಾಣಬಹುದಾಗಿದೆ" ಎಂದಿದ್ದಾರೆ.



ಜನಪದ ಹಾಡುಗಳ ಪ್ರಪಂಚ ಬಹು ವ್ಯಾಪಕವೂ, ವೈವಿಧ್ಯಮಯವೂ ಆಗಿದೆ. ಜಾನಪದರು ತಮ್ಮ ಎಲ್ಲ ಬಗೆಯ ಚಟುವಟಿಕೆಗಳ ಸಂದರ್ಭದಲ್ಲಿ ಹಾಡುಗಳನ್ನು ಹಾಡುವುದುಂಟು. ತಾವು ಮಾಡುತ್ತಿರುವ ಕೆಲಸದ ಶ್ರಮದ ಅರಿವು ತಮಗಾಗದಿರಲೆಂಬ ಕಾರಣದಿಂದಾಗಿ ಹಾಡುಗಳು ಅವರಿಂದ ಸಹಜವಾಗಿಯೇ ಸೃಷ್ಟಿಯಾಗುತ್ತವೆ. ಮನೋರಂಜನೆಯ ಉದ್ದೇಶದ ಹಿನ್ನೆಲೆಯಿಂದಾಗಿಯೂ ಅಪಾರ ಸಂಖ್ಯೆಯ ಹಾಡುಗಳು ರೂಪುದಾಳಿವೆ. ದೇವತೆಗಳ ಸಂತೃಪ್ತಿಗಾಗಿ ಮಾಡುವ ಹಬ್ಬ ಹರಿದಿನಗಳ ಆಚರಣೆಯ ಸಂದರ್ಭದಲ್ಲಿಯೂ ವೈವಿಧ್ಯಮಯವಾದ ಹಾಡುಗಳು ಮೈದಾಳಿವೆ. ಈ ಹಾಡುಗಳಲ್ಲಿ ಜನಪದರ ಭಾವನೆ, ಆಲೋಚನೆ, ಸೃಜನ ಸಾಮರ್ಥ್ಯ ಹಾಗೂ ಜಾನಪದ ಸಂಸ್ಕೃತಿಯ ಮೌಲ್ಯಗಳು ಅಭಿವ್ಯಕ್ತಿಯನ್ನು ಕಂಡಿವೆ. ಹೀಗಾಗಿ ಇವುಗಳ ಸಂಗ್ರಹ ಹಾಗೂ ಅಧ್ಯಯನವು ಮಹತ್ವಪೂರ್ಣವಾಗಿದೆ. ಈ ಹಾಡುಗಳನ್ನು ಹಾಡುವ ಸಂದರ್ಭದೊಂದಿಗೆ ಅವುಗಳ ಸ್ವರೂಪ, ಲಕ್ಷಣ, ವೈವಿಧ್ಯತೆ, ವೈಶಿಷ್ಟ್ಯ ಮತ್ತು ಮಹತ್ವಗಳನ್ನು ಸ್ಥೂಲವಾಗಿ ಗುರುತಿಸುವ ಪ್ರಯತ್ನವೂ ಇಲ್ಲಿದೆ.

ಹಬ್ಬದ ಹಾಡುಗಳು ಸಂಪುಟ–೧ರಲ್ಲಿ ಯುಗಾದಿ, ಮಣ್ಣೆತ್ತಿನ ಅಮವಾಸ್ಯೆ, ನಾಗರಪಂಚಮಿ, ಜೋಕುಮಾರ, ಮಹಾನವಮಿ, ದೀಪಾವಳಿ ಹಾಗೂ ಶೀಗಿ ಹಬ್ಬದ ಹಾಡುಗಳನ್ನು ಸಂಗ್ರಹಿಸಲಾಗಿದೆ. ಪ್ರಸ್ತುತ ಸಂಪುಟ–೨ರಲ್ಲಿ ಗೌರಿಹಬ್ಬ, ಯಳ್ಳ ಅಮವಾಸ್ಯೆ, ಶಿವರಾತ್ರಿ ಹಾಗೂ ಹೋಳಿಹಬ್ಬಗಳಿಗೆ ಸಂಬಂಧಿಸಿದ ಹಾಡುಗಳನ್ನು ಸಂಗ್ರಹಿಸಲಾಗಿದೆ. ಹೀಗಾಗಿ ಇಲ್ಲಿ ಈ ಹಬ್ಬದ ಹಾಡುಗಳನ್ನು ಹಾಡುವ ಸಂದರ್ಭ, ಅವುಗಳ ವಸ್ತು, ಸ್ವರೂಪ, ಲಕ್ಷಣ, ವೈಶಿಷ್ಟ್ಯ ಹಾಗೂ ಮಹತ್ವಗಳನ್ನು ಸ್ಥೂಲವಾಗಿ ಇಲ್ಲಿ ವಿವರಿಸಲಾಗಿದೆ.

ಸೀಗಿ ಹುಣ್ಣಿಮೆಗೆ ಸೀಗವ್ವನ ಹಬ್ಬವನ್ನು ಆಚರಿಸಿದರೆ, ಗೌರಿ ಹುಣ್ಣಿಮೆಗೆ ಜಾನಪದರು ಶಕ್ತಿಯ ಪ್ರತೀಕವಾಗಿ ಗೌರಮ್ಮನ ಹಬ್ಬವನ್ನು ಆಚರಿಸುತ್ತಾರೆ. ಇದನ್ನು ಸುಗ್ಗಿಯ ಹಬ್ಬವೆಂತಲೂ ಕರೆಯುವುದುಂಟು. ಈ ಹುಣ್ಣಿಮೆಯಂದು ಕುಂಬಾರನ ಮನೆಯಿಂದ ಮಣ್ಣಿನ ಗುಪ್ಪೆಯಾಕಾರದ ಮೂರ್ತಿಯನ್ನು ತಂದು ಪೂಜಿಸಿದರೆ, ಕೆಲವು ಕಡೆಗಳಲ್ಲಿ ಯುವತಿಯರು ಕೆರೆಗೋ, ಹೊಳೆಗೋ, ಹೋಗಿ ಅಲ್ಲಿಂದಲೇ ಸ್ವಲ್ಪ ದೊಡ್ಡ ಆಕಾರದ ಗೌರಿಯಾಕೃತಿಯನ್ನು ಮಾಡಿಕೊಂಡು ಬರುತ್ತಾರೆ. ಇನ್ನೂ ಕೆಲವು ಕಡೆಗಳಲ್ಲಿ ಯುವತಿಯರು ಓಣಿಯ ಹೆಣ್ಣು ಮಕ್ಕಳು ಸೇರಿ ಕುಂಬಾರ ಅಥವಾ ಜೀನಗಾರರ ಮನೆಗಳಿಗೆ ಹೋಗಿ ಅಲ್ಲಿ ತಯಾರಿಸಿರುವ ಗೌರಮ್ಮನ ಮೂರ್ತಿಯನ್ನು ಊದುತ್ತ, ಬಾರಿಸುತ್ತ, ಹಾಡುಗಳನ್ನು ಹಾಡುತ್ತ ಹೊತ್ತು ತರುತ್ತಾರೆ. ಒಂದೊಂದು ಓಣಿಯ ನಿಗದಿ ಪಡಿಸಲಾದ ಕಟ್ಟೆಯ ಮೇಲೆ ಕೂಡ್ರಿಸುತ್ತಾರೆ. ಕೆಲವು ಕಡೆಗಳಲ್ಲಿ ಈಶ್ವರನ ದೇವಸ್ಥಾನದಲ್ಲಿ ಕೂಡಿಸುವುದುಂಟು. ಹೂ, ಕಾಯಿ, ಹಣ್ಣು ಪತ್ರೆಯಿಂದ ಅಲಂಕಾರಗೊಳಿಸುತ್ತಾರೆ. ವಿಶೇಷವಾಗಿ ಅವರಿ, ಕಾರೆಳ್ಳು, ಚಂಡು ಹೂಗಳಿಂದ ಅಲಂಕೃತಗೊಳಿಸುತ್ತಾರೆ. ಗೌರಿಗೆ ದಿನಾಲು ಒಂದೊಂದು ತರಹದ ಆರತಿಯನ್ನೆತ್ತಿ ಹೂವುಗಳನ್ನೇರಿಸುತ್ತಾರೆ. ಸಿಹಿ ಇರುವ ಅಡುಗೆ ಮಾಡಿ ಗೌರಮ್ಮನಿಗೆ  ಎಡೆ ಹಿಡಿದು ನೈವೇದ್ಯ ಸಲ್ಲಿಸುವುದುಂಟು. ಪ್ರತಿದಿನ ಸಂಜೆ ಓಣಿಯ ಹೆಣ್ಣು ಮಕ್ಕಳು ಸೇರಿ ಆರತಿ ಮಾಡುತ್ತ

*ಕಣಕದಾರುತಿ ಮಾಡೇನ ಗೌರಿ*
*ಭಾಳದೀವಿಗೆ ಹಚ್ಚೇನಗೌರಿ*
*ಹಾರೂರಾಡುದು ಹಾದಿ ಬೀದ್ಯಾಗ*
*ಸೆಟ್ಟರಾಡುದು ಪಟ್ಟಣ ಸಾಲ್ಯಾಗ*
*ನಾವಾಡೂದು ಗೌರೀ ಹುಣ್ಣಿಮ್ಯಾಗ*
*ಏಕದಾರೂತೆ ಗೌರಿಗೆ ಬೆಳಾಗೀರುರುತೆ"*

ಹಾಡುತ್ತಾರೆ. ದಿನಾಲು ಬೇರೆ ಬೇರೆ ಆರತಿಯನ್ನು ಮಾಡಿ ಪೂಜಿಸುತ್ತಾರೆ. ಗೌರಿಯು ಮನೆಯ ಮಗಳೆಂದು ತಿಳಿದು ವರುಷಕ್ಕೊಮ್ಮೆ ಕರೆಯಿಸಿ, ಆದರದಿಂದ ಹಸಿರುಬಳೆ, ಕುಂಕುಮ, ಅರಿಷಿಣ ಪತ್ತಲ ಮೊದಲಾದ ಮಂಗಳಕರ ವಸ್ತುಗಳನ್ನು, ಕೊರಳಿಗೆ ಬಂಗಾರದ ಒಡವೆಗಳನ್ನು ಹಾಕಿ ಭಕ್ತಿ ಭಾವದಿಂದ ಪೂಜಿಸುವುದು ವಿಶೇಷವಾಗಿದೆ.

ಆರತಿಯ ಹಾಡುಗಳೊಂದಿಗೆ,

*ಬಂಗಾರ ಹೆಣ್ಣೂಲಾ ಬೆನ್ನೀಗೆ ಬಡಿಯೂತ*
*ಅಲ್ಲಿ ನಮ್ಮ ಗೌರಾ ಪಗಡ್ಯಾಡೆಸೋ*
*ಅಲ್ಲಿ ನಮ್ಮ ಗೌರಾ ಪಗಡ್ಯಾಡಿದರಾಡಲಿ*
*ಬಲ್ಲಿದ್ದ ಶಿವಾ ಮನಸೋತ ಸೋ*
*ಬಲ್ಲಿದ್ದ ರಾಮಾ ಮನಸೋತರ ಸೋಲಲಿ*
*ಹರಳಾಕಿದ ಮಂಚಾಲಿಕಿ ಲಿಕಿ ಸೋ॥* ಎಂದು

ಅನೇಕ ಬಗೆಯ ಹಾಡುಗಳನ್ನು ಹಾಡಿ ಸಂತೋಷಪಡುತ್ತಾರೆ. ಸಣ್ಣ ಮಕ್ಕಳೂ ಕೂಡ ತಮ್ಮ ತೊದಲು ನುಡಿಗಳಿಂದ

*ಗೌರಿ, ಗೌರಿ ಗಾಣಾ ಗೌರಿ*
*ಮ್ಯಾಣಾ ಗೌರಿಕುಳ್ಳಿ ಗೌರಿ*
*ಕುಡಕಿ ಗೌರಿ*
*ಕುಂಕುಮ ಗೌರಿ*
*ಅವರಿಯಂತ ಅಣ್ಣನ ಕೋಡ ಅಣ್ಣನ ಕೋಡ*
*ತೊಗರಿಯಂತ ತಮ್ಮನಕೋಡ ತಮ್ಮನ ಕೋಡ*

ಎಂದು ಗೌರಿಯ ಸ್ತುತಿ ಮಾಡುವುದುಂಟು.

ಐದು ದಿವಸಗಲ್ಲಿ ಗೌರಿಗೆ ಮಾಡಬೇಕಾದ ಶಾಸ್ತ್ರಗಳೆಲ್ಲ ಮುಗಿಯುತ್ತವೆ. ಒಂದು ದಿನ ಉಡಿ ತುಂಬಿ ಗೌರಿಯನ್ನು ಗಂಡನ ಮನೆಗೆ ಕಳುಹಿಸುತ್ತಾರೆ. ಆಗ ಉಡಿ ತುಂಬುವ ಹಾಡುಗಳನ್ನು ಹಾಡುತ್ತಾರೆ. ಅಲ್ಲದೆ ಗಂಗೆಯನ್ನು ಶಿವ ಮದುವೆಯಾಗಿರುವ, ಅದನ್ನು ಕೇಳಿದ ಗೌರಿಸಿಟ್ಟಿಗೆದ್ದು, ಗಂಗೆಯೊಂದಿಗೆ ಸವತಿ ಮಾತ್ಸರ್ಯದಿಂದ ವಾದ–ಸಂವಾದಕ್ಕಿಳಿಯುವ, ಗೌರಿಯು ಗಣಪನನ್ನು



ಹೆರುವ, ಶಿವನ ಮನೆಗೆ ಅವಳನ್ನು ಸಂಭ್ರಮದಿಂದ ಕಳುಹಿಸಿಕೊಡುವ ಮುಂತಾದ ಕೌಟುಂಬಿಕ ಹಾಗೂ ಶೃಂಗಾರ ವಿಷಯಗಳಿಗೆ ಸಂಬಂಧಿಸಿದ ಹಾಡುಗಳನ್ನು ಹಾಡುತ್ತಾರೆ. ಅವುಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಒಂದು ದಿನ ಗಂಗೆಯು ಶೀವನ ಜೊತೆಗೆ ಜಗಳವಾಡಿ ಮಾಯವಾಗುವಳು. ಅವಳ ಸುಳಿವು ಯಾರಿಗೂ ತಿಳಿಯಲಿಲ್ಲ. ಆಗ ಸಮೀಪದಲ್ಲಿಯೇ ಹುಲ್ಲು ಮೇಯುತ್ತಿದ್ದ ಕತ್ತೆಯೊಂದು "ಪಾತಾಳ ಲೋಕದಲ್ಲಿ ಆಳದ ಮರದ ಬುಡದಲ್ಲಿ ಗಂಗೆ ಅಡಗಿರುವಳೆಂದು" ಅರಚಿತಂತೆ. ಅಡಗಿ ಕುಳಿತಿದ್ದ ಗಂಗೆಗೆ ಸಿಟ್ಟು ಬಂದು, ಪಾತಾಳ ಲೋಕದಿಂದ ಹೊರಬಂದು ಕತ್ತೆಯ ಮೂಗನ್ನು ಸೀಳಿದಳೆಂದು ಜನಪದರು ನಂಬಿರುವುದನ್ನು ಒಂದು ಹಾಡು ಅಭಿವ್ಯಕ್ತಪಡಿಸುತ್ತದೆ. ಅಂದಿನಿಂದ ಕತ್ತೆಯ ಮೂಗಿನ ಸೆಂಬೆಗಳು ಹರಿದು ಜೋತಾಡುತ್ತಿವೆ ಎಂಬ ಸ್ವಾರಸ್ಯದ ಘಟನೆಯು ಹಾಡಿನಲ್ಲಿ ವ್ಯಕ್ತವಾಗಿರುವುದುಂಟು.

*ಮೇಲ ಲೋಕ ಹುಡುಕಿ, ನಡುವಿನ ಲೋಕ ಹುಡುಕಿ*
*ಪಾತಾಳ ಲೋಕಕ ಇಳಿದಾರ /*
*ಎಲ್ಲೆಲ್ಲಿ ಹುಡುಕಿದರ ಸಿರಿಗಂಗಿ ಸಿಗವಳ್ಳ*
*ಆಲದ ಮರದಾಗ ಅಡಗ್ಯಾಳ*
*ಅಲ್ಲೊಂದು ಒತ್ರ್ಯಾಗಿ, ಸುತ್ತೆಲ್ಲ ಹಸುರಾಗಿ*
*ಹಸುರಾಗ ನಿಂತು ಒದರೀತ / ಹಿರಿಗತ್ತಿ*
*ಸಿರಿಗಂಗಿ ಇಲ್ಲಿ ಅಡಗ್ಯಾಳ*
*ಆಲದ ಮರಬಿಟ್ಟು, ಹೊರಗ ಹರಿದಾಳ ಗಂಗಿ*
*ಕತ್ತೆಯ ಮೂಗು ಸೀಳ್ಯಾಳ*
*ನೆನೆಯಕ್ಕಿ ನೆನೆಗಡಲೆ ಗೊನೆಯ ಬಾಳೆಯಹಣ್ಣು*
*ತನುವೇರಿದಡರಿ ಬಿಳಿಯಲೆ ತಗೊಂಡು*
*ಗಂಗವ್ವ ಪೂಜೆಗೈದಾರ ॥*

ಇಂತಹ ಸಂವಾದದ ಹಾಡುಗಳನ್ನು ಹೆಣ್ಣು ಮಕ್ಕಳು ರಾತ್ರಿಯಿಡೀ ಹಾಡಿ ನಲಿಯುತ್ತಾರೆ. ಇಂಥ ಹಾಡುಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಗಂಗೀ ಗೌರಿಯರ ಸಂವಾದದ ವಿಷಯವನ್ನು ಕುರಿತು 'ತರುಳ ಚರಪತಿ' ಕವಿಯು 'ಗಂಗೀ ಗೌರಿ ಸಂವಾದ' ಎಂಬ ಹಾಡುಗಬ್ಬವನ್ನು ರಚಿಸಿರುವುದುಂಟು. ಈ ಹಾಡುಗಬ್ಬವನ್ನು ಕೂಡ ಇಲ್ಲಿ ಸಂಗ್ರಹಿಸಲಾಗಿದೆ. ಈ ಕಥೆಯು ಜನಸಾಮಾನ್ಯರ ಅನುಭವದ ಕಥೆಯಾಗಿದೆ. ಗಂಗಿ ಗೌರಿಯರು ದೇವಲೋಕದವರಿದ್ದರೂ ಕೂಡ ಕಾವ್ಯವನ್ನು ಓದುತ್ತ ಕೇಳುತ್ತ ಹೋದಂತೆ ಅವರು ನಮ್ಮವರೇ ಆಗಿ ಬಿಡುತ್ತಾರೆ. ಅವರು ಜಗಳಾಡುವುದಂತೂ ನಮಗೆಲ್ಲ ಚಿರಪರಿಚಿತದಂತೆಯೇ ಇದೆ. ಇಬ್ಬರು ಹೆಂಡಿರನ್ನು ಮಾಡಿಕೊಂಡವನ ಮನೆಯಲ್ಲಿ ನಡೆಯುವ ನಿತ್ಯ ಕಲಹ ; ಸವತಿ ಮಕ್ಕಳಾದ ಗಂಗೆ ಗೌರಿಯರು

ನಿತ್ಯ ಜೀವನದಿಂದ ಎತ್ತಿಕೊಂಡಿರುವ ಪಾತ್ರಗಳಾಗಿ ತೋರುತ್ತವೆ. ಇವರು ರಕ್ತ ಮಾಂಸದಿಂದ ಕೂಡಿರುವ ಜೀವಂತ ಪಾತ್ರಗಳಾಗಿ ಮಾತನಾಡುತ್ತಾರೆ. ಈ ಕಾವ್ಯದ ಜೀವಾಳ ಶೃಂಗಾರ ರಸವಾಗಿದೆ. ಶಿವ ಗಂಗೆಯರ ಸಂಭಾಷಣೆಯಲ್ಲಿ ಶೃಂಗಾರ ರಸದ ಝಳುಕಿದೆ. ಹೀಗಾಗಿ ಇದೊಂದು ಶೃಂಗಾರ ರಸದ ಮಡುವಾಗಿ ಕಂಗೊಳಿಸಿದೆ.

ಗಂಗೀ ಗೌರಿಯರ ನಡುವೆ ನಡೆಯುವ ಸಂವಾದದ ಶೈಲಿಯು ಸರಳವಾಗಿದ್ದು, ಹೃದಯಂಗಮವಾಗಿರುವುದುಂಟು. ಜನಪದದ ಶೈಲಿ ಇಲ್ಲಿ ತುಂಬ ಚೆಲ್ಲುವರಿದಿದೆ. ಜನತೆಯ ಆಡುನುಡಿ, ಪಡೆನುಡಿ, ನಾಣ್ಣುಡಿಗಳು ಅತ್ಯಂತ ಸಹಜವಾಗಿ ಈ ಕಾವ್ಯದಲ್ಲಿ ಬೆರೆತುಕೊಂಡು ಬಂದಿವೆ. ಉದಾಹರಣೆಗಾಗಿ ಕೆಲವೊಂದನ್ನು ಇಲ್ಲಿ ಅವಲೋಕಿಸಬಹುದು.

**೧) ಪರದೇಸಿ ಮುನಿ ಕೇಳು ತಿರಿದುಂಬ ಜೋಗಿನೀ**
**ಪರಸತಿಯರ ನೋಡ ಸಲ್ಲ**
**ವಿರಸಮಾತುಗಳಿಂದ ಸರಸವಾಡಲು**
**ಸಿರಸವನುಳಿಹಿಕೊ ಜೋಗಿ ॥**

**೨) ಪಿಡಿ ನಡುವಿನ ಬಾಲೆ ನುಡಿ ಗಿಳಿ ಕೋಗಿಲೆ**
**ಸಡಗರ ರೂಪ ಸಂಪನ್ನೆ**
**ಅಡವಿಯ ಮೃಗಸಿಂಹ ಕೆಡವಿಕೊಂದಾವೆ ನಿನ್ನ**
**ಒಡೆಯಾನ ಮಾಡಿಕೊ ಎನ್ನ ॥**

**೩) ಮಿಂಡಿ ನೀ ಹರೆಯಾದ ಹೆಣ್ಣೆ ಪ್ರಾಯದ**
**ಗಂಡರಿಲ್ಲದ ಜೀವ ಸಲ್ಲ ॥**

**೪) ಅನ್ನ ದೈವದೆ ದೈವ ಇನ್ನೂ ದೈವಗಳಿಲ್ಲ**
**ಕುನ್ನಿ ಮಾನವ ಕೇಳಲೊ ॥**

ಗಂಗೀ ಗೌರಿ ಸಂವಾದದ ಈ ಕಾವ್ಯವು ಬೆದಂಡೆ ಗಬ್ಬದ ಎಲ್ಲ ಲಕ್ಷಣಗಳನ್ನು ಒಳಗೊಂಡ ಒಂದು ಉತ್ತಮ ಹಾಡುಗಬ್ಬವಾಗಿದೆ. ಕಂದಪದ್ಯದೊಂದಿಗೆ ಇಲ್ಲಿ ಸಾಂಗತ್ಯ, ಸುವ್ವಿಹಾಡು, ಒರಳಕ್ಕೀಯ ಪದ, ಜೋಗಿಪದ, ಜೋಗುಳ ಪದ, ಮಂಗಳಾರತಿಯ ಪದಗಳು ಅಂದರೆ, ಜನಪದ ಮಟ್ಟುಗಳು ಬಳಕೆಯಾಗಿವೆ. ಈ ಬಗೆಯ ಬೆದಂಡೆ ರೂಪದ ಹಾಡುಗಬ್ಬ ಕನ್ನಡದಲ್ಲಿ ದೊರೆತಿರುವುದು ಇದು ಮೊದಲನೆಯದಾಗಿದೆ. ಹೀಗಾಗಿ ಇದೊಂದು ಅತ್ಯಂತ ಮಹತ್ವದ ಕಾವ್ಯವಾಗಿರುವುದರಿಂದ ಇಲ್ಲಿ ಅದನ್ನು ಸಂಗ್ರಹಿಸಲಾಗಿದೆ.

ಮಳೆಗಾಲ ಮುಗಿದು ಚಳಿಗಾಲ ಆರಂಭವಾಗುವ ಸಂಧಿಕಾಲದಲ್ಲಿ ಎಳ್ಳಮವಾಸ್ಯೆ ಬರುತ್ತದೆ. ಈ ಅಮವಾಸ್ಯೆಯ ದಿವಸದಂದು ರೈತರು ತಮ್ಮ ಹೊಲದ ಬೆಳೆಸು ಹುಲುಸಾಗಲೆಂದು ಭೂದೇವಿಗೆ



ಸಂಪ್ರೀತಗೊಳಿಸಲು, ಭಕ್ಷ್ಯ ಭೋಜನದ ನೈವೇದ್ಯವನ್ನು ಅರ್ಪಿಸುತ್ತಾರೆ. ಇದಕ್ಕೆ ಚರಗ ಚೆಲ್ಲಾಡುವುದು ಅಥವಾ ಸೂರಾಡುವುದು ಎಂದು ಕರೆಯುತ್ತಾರೆ. ಮುಂಗಾರು ಬೆಳೆಗಳಿಗೆ ಶೀಗಿ ಹುಣ್ಣಿಮೆಯೆಂದು ಕರೆಯುತ್ತಾರೆ. ಮುಂಗಾರು ಬೆಳೆಗಳಿಗೆ ಶೀಗಿ ಹುಣ್ಣಿಮೆಯೆಂದು ಚರಗ ಚೆಲ್ಲಾಡಿದರೆ ಹಿಂಗಾರು ಬೆಳೆಗಳಿಗೆ ಈ ಅಮಾವಾಸ್ಯೆಯೆಂದು ಚೆಲ್ಲುತ್ತಾರೆ. ಅಮವಾಸ್ಯೆಯ ಮೊದಲದಿನದಂದು ಹೆಣ್ಣು ಮಕ್ಕಳು ವಿವಿಧ ತಿಂಡಿ–ತಿನಿಸುಗಳನ್ನು ಮಾಡಲು ತೊಡಗುತ್ತಾರೆ. ಭೂಮಿಯಲ್ಲಿ ಬೆಳೆದ ಅನೇಕ ತರಹದ ಕಾಯಿಪಲ್ಲೆ–ತರಕಾರಿಗಳನ್ನು ಸೇರಿಸಿ ವಿಶಿಷ್ಟ ಭೋಜ್ಯಗಳನ್ನು ಏರ್ಪಡಿಸುತ್ತಾರೆ. ಹೀಗೆ ಸಿದ್ಧತೆ ಮಾಡಿಕೊಳ್ಳುವುದಕ್ಕೆ 'ಕಾಯಿಪಲ್ಯ ಸೋಸುವುದು' ಎಂದು ಕರೆಯುತ್ತಾರೆ. ಇಡೀ ರಾತ್ರಿ ಹೆಣ್ಣು ಮಕ್ಕಳು ಭಕ್ಷ್ಯ ಭೋಜ್ಯಗಳನ್ನು ತಯಾರಿಸುತ್ತಾರೆ. ಸಜ್ಜಿರೊಟ್ಟಿಗೆ ಎಳ್ಳು ಬೆರೆಸಿ, ಅರಿಷಿಣ ಪುಡಿ ಸೇರಿಸಿ ವಿಶೇಷವಾಗಿ ರೊಟ್ಟಿ ತಯಾರಿಸುತ್ತಾರೆ. ಚಪಾತಿ, ಕರಿಗಡುಬು, ಕರ್ಚಿಕಾಯಿ, ಎಳ್ಳು, ಹೋಳಿಗೆ, ಶೇಂಗಾ ಹೋಳಿಗೆ, ಹೂರಣ ಹೋಳಿಗೆ, ಹಪ್ಪಳ, ಸಂಡಿಗೆ, ಬದನೆಕಾಯಿ, ಉಪ್ಪಿನಕಾಯಿ, ಮೊಳಕೆಯೊಡೆದ ಹಸಿರುಕಾಳು, ಕಡ್ಲಿಕಾಳು ಪಲ್ಯ, ಮೊಸರು ಚಟ್ನಿ ಮುಂತಾದ ರುಚಿ ರುಚಿಯಾದ ಭೋಜನದ ತಿನಿಸುಗಳನ್ನು ತಯಾರಿಸುತ್ತಾರೆ. ಮುಂಜಾನೆ ಅತಿ ಸಂಭ್ರಮದಿಂದ ಮನೆಮಂದಿಯೆಲ್ಲ ಎತ್ತಿನ ಬಂಡಿಯನ್ನು ಕಟ್ಟಿಕೊಂಡು ಹೊಲಕ್ಕೆ ಹೋಗುತ್ತಾರೆ.

ಹೊಲದಲ್ಲಿರುವ ಬನ್ನಿಗಿಡದ ಬುಡದಲ್ಲಾಗಲಿ, ಇಲ್ಲವೆ ಬೆಳೆದ ಫಸಲಿನಲ್ಲಾಗಲಿ ಐದು ಕಲ್ಲುಗಳನ್ನು ಆರಿಸಿಕೊಂಡು ಅವುಗಳನ್ನು ನೀರಿನಿಂದ ತೊಳೆದು ಸಾಲಾಗಿ ಇಟ್ಟು ವಿಭೂತಿ, ಕುಂಕುಮ ಹಚ್ಚಿ, ಪಣತಿಯಲ್ಲಿ ಎಣ್ಣೆದೀಪ ಬೆಳಗುತ್ತಾರೆ. ಐದು ಕಲ್ಲುಗಳ ಮಧ್ಯದಲ್ಲಿ ಮಣ್ಣಿನ ಹೆಂಟಿಯನ್ನು ಇಡುತ್ತಾರೆ. ಇದಕ್ಕೆ ಕೊಂತ್ಯಮ್ಮ (ಕುಂತಿ) ಎಂದು ಕರೆಯುವುದುಂಟು. ಉಳಿದವರು ಪಾಂಡವರಾಗಿದ್ದಾರೆ. ಈ ಪಂಚ ಪಾಂಡವರಿಗೆ ಕೊಂತಿಯೊಂದಿಗೆ ಪೂಜೆ ಸಲ್ಲಿಸಿ ಯಕ್ಕಿಯ ಗಿಡದ ಎಲೆಯಲ್ಲಿ ಎಡೆಯನ್ನು ಅರ್ಪಿಸುತ್ತಾರೆ. ಹೀಗೆ ಎಡೆ ಅರ್ಪಿಸಿದ ನಂತರ ಉಳಿದ ನೈವೇದ್ಯವನ್ನು ಬೆಳೆದ ಫಸಲಿನ ನಾಲ್ಕೂ ದಿಕ್ಕುಗಳಿಗೆ ಹೋಗಿ ಹುಲ್ಲುಲ್ಲೋ......ಹುಲ್ಲುಲ್ಲೋ ಎಂದು ಹೇಳುತ್ತ ಚರಗ ಚೆಲ್ಲುತ್ತಾರೆ. ನಂತರ ಮನೆ ಮಂದಿ, ಆಪ್ತರು ಹಾಗೂ ನೆರೆಹೊರೆಯ ಹೊಲದ ಜನರೆಲ್ಲರೂ ಸೇರಿ ಸಂತೋಷದಿಂದ ಊಟ ಮಾಡುತ್ತಾರೆ. ಸಾಯಂಕಾಲ ಮನೆಗೆ ಬರುವಾಗ ತಮ್ಮ ತಮ್ಮ ಹೊಲಗಳಲ್ಲಿ ಬೆಳೆದಿರುವ ಫಸಲಿನ ಕೆಲವು ಸಸಿಗಳನ್ನು ಕಿತ್ತುಕೊಂಡು ಬರುತ್ತಾರೆ.

ಎಳ್ಳಮಾಸಿ ಹಬ್ಬದ ಸಂದರ್ಭದಲ್ಲಿ ತರಕಾರಿ ಕಾಯಿಪಲ್ಯ ಸೋಸುವ ಸಿದ್ಧಪಡಿಸುವ ಸಂದರ್ಭದಲ್ಲಿ ಮಹಿಳೆಯರು ಹಾಡುವ ಹಾಡು ಹಾಗೂ ಶೃಂಗಾರ ರಸಕ್ಕೆ ಸಂಬಂಧಿಸಿದ ಹಾಡುಗಳನ್ನು ಹಾಡುತ್ತಾರೆ. ಅವುಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಮಾಘ ಮಾಸದ ಬಹುಳ ಚತುದರ್ಶಿಯಂದು ಶಿವರಾತ್ರಿ ಅಮವಾಸ್ಯೆಯು ಬರುತ್ತದೆ. ಇದಕ್ಕೆ ಮಹಾಶಿವರಾತ್ರಿಯಂದು ಜನಪದರು ಭಾವಿಸಿದ್ದೂ ಅಂದು ಶಿವನಿಗೆ ವಿಶೇಷ ಪೂಜೆಯನ್ನು ಸಲ್ಲಿಸುತ್ತಾರೆ.

ಅಂತೆಯೇ ಅವರು :

*ಬೇಡ ಬೇಟೆಗೆ ಹೋಗಿ, ಬಿಲ್ವ ಪತ್ತರಿಕೊಯ್ದ*
*ಬೇಡ ಕನ್ನಯ್ಯ ಶಿವಪೂಜೆ / ಮಾಡಿದರ*
*ನಾಡೊಳಗೆ ನೋಡು ಶಿವರಾತ್ರಿ"* – ಎಂದು

ಶಿವರಾತ್ರಿಯ ಮಹತ್ವವನ್ನು ಅರಿತಿದ್ದಾರೆ.

ಅಮವಾಸ್ಯೆಯ ಮುನ್ನಾದಿನವನ್ನು ಶಿವಯೋಗವೆಂದು ಕರೆದು ಅಂದು ಪರಂಜ್ಯೋತಿ ಶಿವನ ಆರಾಧನೆ ಮಾಡುತ್ತಾರೆ. ಪರಶಿವನ ಆರಾಧನೆಗೆ ಮಹಾಶಿವರಾತ್ರಿಯು ಬಹು ಪ್ರಶಸ್ತವಾದ ದಿನವೆಂದು ಭಾವಿಸಲಾಗಿದೆ.

ಮನುಷ್ಯನಿಗೆ ಎಂಥ ಕಷ್ಟ ಬಂದರೂ 'ಶಿವ' ಎಂಬ ಶಬ್ದವನ್ನು ಜಪಿಸುವುದರಿಂದ ಎಲ್ಲ ಬಗೆಯ ಕಷ್ಟಗಳು ದೂರವಾಗುತ್ತವೆಂದು ಜನಪದರು ನಂಬಿದ್ದಾರೆ. ಅದ್ದರಿಂದಾಗಿಯೋ ಶಿವಧ್ಯಾನವನ್ನು ಮಾಡಿ ಸದ್ಗತಿ ಕಂಡ ಶಿವಶರಣರ ನಿದರ್ಶನಗಳನ್ನು ನೆನಪಿಗೆ ತಂದುಕೊಳ್ಳುತ್ತಾರೆ. ಶಿವರಾತ್ರಿಯ ದಿವಸ ನಾಲ್ಕು ಯಾಮಗಳಲ್ಲಿ ರುದ್ರಾಭಿಷೇಕ ಮಾಡುವುದರಿಂದ ನಾಲ್ಕು ವೇದಗಳಷ್ಟೇ ಫಲ ಪ್ರಾಪ್ತವಾಗುತ್ತದೆಂದು ಜನಪದರು ನಂಬಿದ್ದಾರೆ. ಅಂತೆಯೇ ಶಿವರಾತ್ರಿಯ ಅಮವಾಸ್ಯೆಯಂದು ಪೂಜೆ, ಅರ್ಚನೆಗಳನ್ನು ಮಾಡುತ್ತ ಭಕ್ತಿ ಪೂರ್ವಕವಾಗಿ ಶಿವಸ್ತುತಿಯನ್ನು, ಶಿವ ಮಹಿಮೆಯನ್ನು ಕುರಿತು ಭಜನೆ ಮಾಡುತ್ತಾರಲ್ಲದೆ ಅನೇಕ ಹಾಡುಗಳನ್ನು ಹಾಡುತ್ತಾರೆ.

ಶಿವ ಪೂಜೆ ಮಾಡಿ "ಕೊಕ್ಕಾಬುತ್ತಿ, ಕ್ವಾಡ ಬುತ್ತಿ ನಾಡಿಗೆಲ್ಲ ಒಂದೇ ಬತ್ತಿ" ಎಂದು ಶಿವದೀಪ ಬೆಳಗುತ್ತಾರೆ. ಶಿವಸ್ತುತಿ ಹಾಗೂ ಶಿವ ಮಹಿಮೆಗೆ ಸಂಬಂಧಿಸಿದ ಹಾಡುಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಇವು ಜನಪದರ ಭಕ್ತಿಭಾವದ ಜೊತೆಗೆ, ಜನಪರ ಕಾಳಜಿಯನ್ನು ಅಭಿವ್ಯಕ್ತಿಸುತ್ತವೆ. ಶರಣರ ಬಗೆಗಿರುವ ಅನೇಕ ಅಂಶಗಳು ಇವುಗಳಲ್ಲಿ ನಿಹಿತವಾಗಿದ್ದು ಇವುಗಳ ಅಧ್ಯಯನದಿಂದ ಶರಣರ ಚರಿತ್ರೆಯನ್ನು ರೂಪಿಸುವಲ್ಲಿ ಸಹಯೋಗವನ್ನು ಪಡೆಯಬಹುದಾಗಿದೆ.

ಫಾಲ್ಗುಣ ಮಾಸದಲ್ಲಿ ಬರುವ ಹೋಳಿ ಹಬ್ಬವು ಜನಪದರಲ್ಲಿ ಮಹತ್ವದ ಹಬ್ಬಗಳಲ್ಲಿ ಒಂದಾಗಿದೆ. ವಸಂತೋತ್ಸವೆಂದು ಕರೆಯಲ್ಪಡುವ ಈ ಹಬ್ಬವು ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಕಾಮ ದಹನಕ್ಕೆ ಸಂಬಂಧಿಸಿದಂತೆ ಪುರಾಣ, ಮಹಾಭಾರತ, ಭಾಗವತ್‌ಗಳಲ್ಲಿ ಇದರ ಕಥೆಯು ಕಂಡು ಬರುತ್ತದೆ. ತಾರಕಾಸುರನ ಬಾಧೆ ಉಪಟಳಕ್ಕೆ ಬೇಸತ್ತ ದೇವ–ದೇವತೆಗಳು ಶಿವನಲ್ಲಿಗೆ ಮೊರೆ ಹೋಗಲು ಆಲೋಚಿಸುತ್ತಾರೆ. ಆದರೆ ಶಿವನು ಧ್ಯಾನಸ್ಥನಾಗಿರುವುದರಿಂದ ಚಿಂತಾಕ್ರಾಂತರಾಗುತ್ತಾರೆ. ದೇವ–ದೇವತೆಗಳ ಪ್ರಾರ್ಥನೆಯ ಮೇರೆಗೆ ಮನ್ಮಥನು ಧ್ಯಾನಸ್ಥ ಶಿವನ ತಪಸ್ಸನ್ನು ಭಗ್ನಗೊಳಿಸುತ್ತಾನೆ. ಶಿವನ ಹಣೆಗಣ್ಣಿನ ಉರಿಗೆ ಮನ್ಮಥನು ಸುಟ್ಟು ಬೂದಿಯಾದುದು. ರತಿ ಪ್ರಲಾಪಿಸುವುದು, ಸುಟ್ಟು ಹೋದ ಕಾಮನು ನೆನೆದಾಗ ಮನದಲ್ಲಿಯೇ ಇರುವುದಾಗಿ ಶಿವನು ಅಭಯ ಕೊಡುವುದು ಪುರಾಣ–



ಕಾವ್ಯಗಳಲ್ಲಿಯ ಕಥೆ. ಆದರೆ ಜನಪದರು ಇದನ್ನು ರೂಪಾಂತರಗೊಳಿಸಿದ್ದಾರೆ. ಪಾರ್ವತಿ–ಮಹಾದೇವರು ಸಭೆಯಲ್ಲಿದ್ದಾಗ ಮಹಾದೇವನು "ಪಾರೋತಿ ಹೇಳ ಚಲುವ್ಯಾರ"? ಎಂದು ಪ್ರಶ್ನಿಸಿದಾಗ ಪಾರೋತಿ "ತೀರ ಚೆಲುವನು ಕಾಮಣ್ಣ" ಎಂದು ಉತ್ತರಿಸುತ್ತಾಳೆ. ಶಿವನು ತನ್ನನ್ನು ಮೀರಿ ಮನ್ಮಥನ ಹೆಸರು ಹೇಳಿದ್ದಕ್ಕಾಗಿ ಸಿಟ್ಟಿಗೆದ್ದು ಶಿವನು "ಬಿಟ್ಟಾನೋ ಉರಿಗಣ್ಣ" ಸುಟ್ಟು ಬೂದ್ಯಾದ ಕಾಮಣ್ಣ. ಇದನ್ನು ನೋಡಿದ ರತಿಯು ಹೊಟ್ಟೆ ಬಡಿದುಕೊಂಡು ಹೊರಳಾಡುತ್ತ ಅಳತೊಡಗುತ್ತಾಳೆ. ಅವಳ ರೋಧನವು ಇಡೀ ಸಭೆಯನ್ನು ಕಳವಳಗೊಳಿಸುತ್ತದೆ. ಪಾರ್ವತಿಯ ಕೋರಿಕೆಯ ಮೇರೆಗೆ ಮಹಾದೇವನು "ಕಾಮನು ಕರೆದಾಗೆಲ್ಲ ಮೂಡಿ ಬರುತ್ತಾನೆ" ಎಂದು ಅಭಯವನ್ನು ನೀಡಿದನು. ಮನ್ಮಥನಿಗೆ ಪುನರ್ಜನ್ಮ ಪ್ರಾಪ್ತವಾಯಿತು. ಇದರಿಂದಾಗಿ ಪಾರ್ವತಿ, ರತಿ ಹಾಗೂ ಅಲ್ಲಿ ನೆರೆದಿದ್ದ ದೇವ–ದೇವತೆಗಳಿಗೆ ಸಂತೋಷವೇ ಸಂತೋಷವಾಗುತ್ತದೆ. ಈ ಸಂತೋಷದ ಆಚರಣೆಯೇ ಜನಪದರ ಕಾಮನ ಹಬ್ಬವಾಗಿದೆ. ಈ ಹಬ್ಬದ ಆಚರಣೆಯನ್ನು ಕಾಮನ ಬದುಕಿನ ಕಥೆಯನ್ನು ಮತ್ತಷ್ಟು ಹಿಗ್ಗಿಸಿತು. ಕಾಮ ಇಡೀ ಜನಸಮುದಾಯದ ಹೃದಯ–ಮನಸ್ಸುಗಳಲ್ಲಿ ನೆಲೆ ನಿಲ್ಲುವಂತಾಯಿತು. ಕಾಮ ಗಂಡು ಹೆಣ್ಣಿನಲ್ಲಿ ಪ್ರೇಮವನ್ನು ಸ್ಫುರಿಸುವ ಜೀವಂತ ಸೆಲೆಯಾದ, ಮನುಷ್ಯ, ಪ್ರಾಣಿ, ಪಶು, ಪಕ್ಷಿ ಮುಂತಾದ ಅಖಿಲ ಜೀವ ಜಾಲಗಳಲ್ಲಿ ತರು, ಲತೆ, ಪುಷ್ಪಗಳಲ್ಲಿ ಚೈತನ್ಯ, ಉತ್ಸಾಹಗಳನ್ನು ಚಿಮ್ಮುವ ಪ್ರಚಂಡ ಶಕ್ತಿಯಾದ.

ಜನಪದ ಸಾಹಿತ್ಯದಲ್ಲಿ ಕಾಮನ ಹಬ್ಬಕ್ಕೆ ಸಂಬಂಧಿಸಿದ ಅಪಾರ ಸಾಹಿತ್ಯವಿದೆ. ಹಾಡು, ಲಾವಣಿ, ದುಂದುಮೆಪದಗಳು ಜನಪದ ಸಾಹಿತ್ಯದಲ್ಲಿ ವಿಶಿಷ್ಟವಾಗಿ ಕಂಡುಬರುತ್ತವೆ. ಹಳ್ಳಿಗಳಲ್ಲಿ ಕಾಮನಹಬ್ಬದ ಸಂದರ್ಭದಲ್ಲಿ ಈ ಹಾಡುಗಳನ್ನು ಇಂದಿಗೂ ಹಾಡುವುದು, ಕೇಳುವುದು ನಡೆದಿರುತ್ತದೆ. ಶೃಂಗಾರಭರಿತವಾದ ಹಾಡುಗಳೊಂದಿಗೆ ಕುಣಿದು ಕುಪ್ಪಳಿಸಿ ಮನಸ್ಸಿನ ಕಾಮೋದ್ರೇಕ ಭಾವನೆಗಳನ್ನು ಹೊರಹಾಕಿ ಮನಸ್ಸನ್ನು ಹಗುರ ಮಾಡಿಕೊಳ್ಳಲು ಇದೊಂದು ವಿಶೇಷವಾದ ಸಂದರ್ಭವಾಗಿದೆ. ಸುಗ್ಗಿಯ ನಂತರದ ಬಿಡುವಿನ ಈ ಸಮಯದಲ್ಲಿ ಹಾಡಿ, ಕುಣಿದು ದಣಿದ ಜೀವಕ್ಕೆ ನೆಮ್ಮದಿಯನ್ನು, ಸುಖ ಸಂತೋಷವನ್ನು ಪಡೆಯಲಾಗುತ್ತದೆ. ಹಲವು ಹೋಳಿಯ ಹಾಡುಗಳು ಅವಾಚ್ಯ ಹಾಗೂ ಅಶ್ಲೀಲವಾಗಿರುತ್ತದೆ. ಇವು ಮಾನವನ ಮೂಲ ಪ್ರವೃತ್ತಿಯನ್ನು ಸಂಕೇತಿಸುವ ಪ್ರಾಚೀನತೆಯ ಕೊಂಡಿಯಾಗಿ ಉಳಿದುಕೊಂಡಿರುವಂತೆ ತೋರುತ್ತವೆ.

ಶಿವರಾತ್ರಿ ಅಮವಾಸ್ಯೆಯಿಂದ ಹಿಡಿದು ಹೋಳಿಹುಣ್ಣಿಮೆಯ ಆಚರಣೆಯವರೆಗೆ ಹದಿನೈದು ದಿವಸಗಳ ಕಾಲ ಶೃಂಗಾರ ರಸಕ್ಕೆ ಸಂಬಂಧಿಸಿದ ಗೀತೆಗಳೊಂದಿಗೆ ಅನೇಕ ಪ್ರಕಾರದ ಗೀತೆಗಳನ್ನು ಹಾಡಲಾಗುತ್ತದೆ.

*"ಚಂದದ ಹೆಣ್ಣು ಕಂಡೆನಪ್ಪ,*
*ದೊರತಾಳೇನೊ ನನಗ ಇವಳ*
*ಜರದ ಸೆರಗಿಲೆ ಸಿಂಬಿಮಾಡಿ*
*ನೀರ ತರವಳೊ"*

*"ಕೋಗಿಲೆಯಂತ ಸ್ವರನಿಂದು*
*ಮೂಗ ಸಂಪಿಗಿ ತೆನಿಕಾಣ*
*ಭೋಗ ಸಂವಿ ತೋರಸ್ತೇನ ನೋಡ*
*ರುಚಿ ಹತ್ತದ ಮ್ಯಾಲ*
*ಹೋಗ ಅಂದರ ಹೋಗಕ್ಕಿಲ್ಲ ನೋಡ"*

ಇಂತಹ ಶೃಂಗಾರ ರಸಭರಿತವಾದ ಹಾಡುಗಳನ್ನು ಯುವಕರು ಹಾಡಿ ಸಂತೋಷಪಡುತ್ತಾರೆ.

ಹೋಳಿ ಹಬ್ಬದ ಆಚರಣೆಯ ಸಂದರ್ಭದಲ್ಲಿ ಹಾಡುವ ಹಾಡುಗಳನ್ನು ಸಾಮಾನ್ಯವಾಗಿ ಮೂರು ಪ್ರಕಾರಗಳಲ್ಲಿ ವಿಂಗಡಿಸಬಹುದಾಗಿದೆ.

೧. ಬಿಡಿ ಹಾಡುಗಳು
೨. ಕಥನ ಗೀತೆಗಳು
೩. ದುಂದುಮೆ ಪದಗಳು

ಬಿಡಿ ಹಾಡುಗಳು–ನುಡಿಗಳು ಅಂದರೆ ಭಾವ ಪ್ರಧಾನವಾದ ಹಾಡುಗಳೆಂದು ಅರ್ಥ. ಹೋಲಿ ಅಂದರೆ 'ಹೋಲಿಕಾ'ಳನ್ನು ಕುರಿತು, ಪ್ರೀತಿ, ಪ್ರೇಮವನ್ನು ಕುರಿತು ಅನೇಕ ಬಿಡಿ ಬಿಡಿಯಾದ ಹಾಡುಗಳನ್ನು ಈ ಸಂದರ್ಭದಲ್ಲಿ ಹಾಡುವುದುಂಟು. ಇಲ್ಲಿ ವಸ್ತುವಿಗಿಂತಲೂ ಭಾವವು ಪ್ರಧಾನವಾದ ಪಾತ್ರವನ್ನು ವಹಿಸುತ್ತದೆ. ಶೃಂಗಾರ ರಸ ಪ್ರಧಾನವಾದ ಇವು ಅತ್ಯಂತ ಆಕರ್ಷಕವಾಗಿರುತ್ತದೆ. ಜನಪದರು ತಮ್ಮ ಅಂತರಾಳದ ಮನದ ರತಿ ಭಾವವನ್ನು ಹೊರಹಾಕಿ ಮನಸ್ಸನ್ನು ಹಗುರ ಮಾಡಿಕೊಳ್ಳಲು ಇವು ಸಹಾಯಕವಾಗಿದೆ. ಮೇಲು ನೋಟದಲ್ಲಿ ಕೆಲವು ಹಾಡುಗಳು ಅಶ್ಲೀಲವಾಗಿ ಕಾಣುತ್ತವೆ. ಆದರೆ ಜನಪದರಲ್ಲಿ ಶ್ಲೀಲ–ಅಶ್ಲೀಲದ ಪ್ರಶ್ನೆಯೇ ಬರುವುದಿಲ್ಲ. ಅವರದು ಏನಿದ್ದರೂ ತೆರೆದ ಬದುಕು. ಹೀಗಾಗಿ ಈ ಸಂದರ್ಭದಲ್ಲಿ ಶೃಂಗಾರ ರಸಕ್ಕೆ ಸಂಬಂಧಿಸಿದ ಹಾಡುಗಳನ್ನು ಹಾಡಿ ಮನಸ್ಸನ್ನು ಮುದಗೊಳಿಸಿಕೊಳ್ಳುತ್ತಾರೆ. ಹೋಳಿ ಹಬ್ಬದ ಆಚರಣೆಯು ಅಂತಹ ಅವಕಾಶವನ್ನು ಜನಪದರಿಗೆ ಒದಗಿಸಿರುವುದು ಒಂದು ವಿಶೇಷವಾಗಿದೆ. ಈ ಸಂದರ್ಭದಲ್ಲಿ ಶೃಂಗಾರ ರಸವನ್ನು ಹೊರಸೂಸಿ ಮನಸ್ಸು ಹಗುರ ಮಾಡಿಕೊಳ್ಳಲು ಜನಪದರು ಅವಕಾಶವನ್ನು ಸೃಷ್ಟಿಸಿಕೊಂಡಿದ್ದಾರೆ. ಯಾವುದೇ ಬಗೆಯ ನಿರ್ಬಂಧಗಳು ಈ ಪ್ರಸಂಗದಲ್ಲಿ ಇರುವುದಿಲ್ಲ. ಅಂತೆಯೇ ಯುವಕರಿಂದ ಹಿಡಿದು, ವಯಸ್ಸಾದವರೆಲ್ಲರೂ ತಮ್ಮ ಮನಸ್ಸಿನಲ್ಲಿ ಓತಪ್ರೋತವಾಗಿ ಹರಿದು ಬರುವ ರತಿಭಾವವನ್ನು ಹಾಡುಗಳ ಮುಖಾಂತರ ಹೊರಹಾಕಿ ಬದುಕನ್ನು ಸವಿಯುತ್ತಾರೆ.

*"ಚಿಗರಿ ಮಾಟದ ಹೆಣ್ಣು*
*ಇದರೀಗಿ ಬಂದರ*
*ಬಾಣ ಬಡದಾಂಗಾತೊ ಎದಿಯಾಗ"* ಎಂದು



ರತಿಭಾವವನ್ನು ಹೊರಹಾಕಿ ಆನಂದಪಡುತ್ತಾರೆ. ಶೃಂಗಾರದ ಜುಳುಕು ಇರುವ ಇಂತಹ ಅನೇಕ ಹಾಡುಗಳು ಈ ಸಂದರ್ಭದಲ್ಲಿ ತಾನೇ ತಾನಾಗಿ ಹೊರಹೊಮ್ಮುತ್ತವೆ. ಜನಪದರ ಆಶುಕವಿತ್ವಕ್ಕೆ ಇವು ತೋರು ಬೆರಳಾಗಿ ನಿಲ್ಲುತ್ತವೆ.

ಕಾಮ–ರತಿಯರನ್ನು ಕುರಿತಾಗಿ ಹಾಡುವ ಹಾಡುಗಳ ಸ್ಪರ್ಧೆಯೂ ನಡೆಯುವುದು ಒಂದು ವಿಶೇಷವಾದ ಸಂಗತಿಯಾಗಿದೆ.

*ಕಾಮಣ್ಣ ಕಟ್ಟುತಲಿ, ಗೊನೆಮುಳ್ಳ ಸುರಿಯುತಲಿ*
*ಸೀತಾಳ ಬಾವಿ ತೆಗೆಸುತಲಿ ನಮಕಾಮ*
*ಜೀತ ಹೋಗ್ಯಾನ ಶಿವನಲ್ಲಿ.*

*ಕಾಮಣ್ಣನ ಹೆಂಡಂದಿರು ಕಾಡಿಗಣ್ಣೀನವರು*
*ಎಲ್ಲಿಗೆ ಹೋಗ್ಯಾರ ನಿಮ್ಮವರು । ಮ್ಯಾಲಿನ*
*ಚಕ್ರ ತರಲ್ಲಿ ಹೋಗ್ಯಾರ*

*ನಿಂತಲ್ಲಿ ರಾಮಣ್ಣನ ಅಂಗಿಯ ಕಳಿಸ್ಯಾರ*
*ತಂಗಿದ್ದರೇಷ್ಟ ಮರಗೊಳ । ಕಾಮಣ್ಣನ*
*ತಾಯಿದ್ದರೆಷ್ಟು ಅಳುವಳ ।*

*ರಾಮಣ್ಣನ ಬೂದ್ಯಾಗ ಟೆಂಗಿನ ಗಿಡ ಹುಟ್ಟಿ*
*ಟೊಂಗಿ ಟೊಂಗೆಲ್ಲಿ ಗಿಣಿ ಕುಂತ । ಮಾತ್ಯಾಡವ*
*ತಂಗಿ ನೀಲಮ್ಮನ ಕರಿತರ್‍ಯ ॥*

ಇಂತಹ ಹಾಡುಗಳು ಜನಪದರಲ್ಲಿ ಆಶುಕವಿತ್ವವನ್ನು ಸ್ಫುರಿಸುವುದರ ಜೊತೆಗೆ ಜನಪದ ಸಾಹಿತ್ಯವನ್ನು ಶ್ರೀಮಂತಗೊಳಿಸಲು ಸಹಾಯಕವಾಗಿವೆ.

ಹೋಳಿ ಹಾಡುಗಳಲ್ಲಿ ಕಥನರೂಪದ ಹಾಡುಗಳು ಕೂಡ ಉಂಟು. ಇಲ್ಲಿ ಶೃಂಗಾರ, ವೀರರಸಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ಪೌರಾಣಿಕ, ಧಾರ್ಮಿಕ, ಐತಿಹಾಸಿಕ ಮುಂತಾದ ಕಥಾ ವಸ್ತುಗಳ ಹಿನ್ನೆಲೆಯಲ್ಲಿ ಇವು ರಚಿತವಾಗಿವೆ. ಶ್ರೀ ಕೃಷ್ಣ ದಕ್ಷಬ್ರಹ್ಮ ಅಭಿಮನ್ಯು, ಇಂದ್ರಜೀತು, ಬಾಣಾಸುರರೊಂದಿಗೆ ಧಾರ್ಮಿಕ, ಐತಿಹಾಸಿಕ ವ್ಯಕ್ತಿಗಳ ಬದುಕಿನ ಪ್ರಮುಖ ಘಟನೆಗಳ ಹಿನ್ನೆಲೆಯಲ್ಲಿ ರಚಿತವಾಗಿರುವ ಅನೇಕ ಹಾಡುಗಳು ಕೂಡ ಲಭ್ಯವಾಗುತ್ತವೆ.

ಹೋಳಿ ಹುಣ್ಣಿಮೆಯ ಮೂಲವನ್ನು ಕುರಿತ 'ಹೋಳಿ ಹುಣ್ಣಿಮೆಯ ಮೂಲ ಕಥೆ' ಎಂಬ ಕಥನ ಗೀತೆಯಲ್ಲಿ ಹೋಳಿ ಹುಣ್ಣಿಮೆ ಹಬ್ಬದ ಪೌರಾಣಿಕ ಕಥೆಯಿದೆ. ಇದು ಜನಪದರ ಪೌರಾಣಿಕ ಪ್ರಜ್ಞೆಯ ಜೊತೆಗೆ ಅವರ ವಾಸ್ತವ ದೃಷ್ಟಿಕೋನವನ್ನು ಬಿಂಬಿಸುತ್ತದೆ. ಶಿವನ ಹಣೆಗಣ್ಣಿಗೆ ಆಹುತಿಯಾದ ಕಾಮನು ಶಿವನ ಕೃಪೆಯಿಂದ

*"ಕಾಮಿನಿ ಕೇಳವ್ವ ನಿನ್ನ ನೇಮವಾದ ವಾಸನೆಯಿಂದ*
*ಭೂಮಿಯೊಳು ಹುಟ್ಟುವಿರಿ ಹೋಗು ಬ್ರಾಹ್ಮಣ ಜನ್ಮದಿ ನಿನ್ನ*
*ಸ್ವಾಮಿಯು ಹುಟ್ಟುವನವನು ಕಾಮಿಪನು ಹೊಲೆಯ ವೇಶ್ಯಾಗು*
*ತಾಮಸ ಗುಣದಲಿಂಥ ನಾಮವಾಯಿತೆನಗೆಂದು*
*ಭೂಮಿಯು ಮರುಗುತಾ ರಮಣೀಯ ಕರ್ಣಾಟಕದ*
*ಸೀಮೆಯೊಳು ಮುಖ್ಯವಾದ ಗ್ರಾಮದೊಳು ಕೃಷ್ಣಭಟ್ಟಾನೆಂಬಾ॥*

ಹೀಗೆ ಬ್ರಾಹ್ಮಣರ ವಂಶದಲ್ಲಿ ಕೃಷ್ಣಭಟ್ಟನೆಂಬ ಕಾಮನು ಹುಟ್ಟಿ ಬರುವುದು, ರತಿಯು ಹೊಲೆಯರ ವಂಶದಲ್ಲಿ 'ಹೋಳಿ' ಯೆಂಬ ಹೆಸರಿನ ಚೆಲುವೆಯಾಗಿ ಅವತರಿಸುವುದು ವಿಶಿಷ್ಟವಾದ ಸಂಗತಿಯಾಗಿದೆ.

ನಂತರ ಅವರಿಬ್ಬರಲ್ಲಿ ಪ್ರೇಮಾಂಕುರವಾಗುವುದು. ಸಮಾಜ ಅದಕ್ಕೆ ಅಡ್ಡಿಯನ್ನುಂಟು ಮಾಡುವುದು. ಕೊನೆಗೆ ಕಾಮನು ಸಾವನ್ನಪ್ಪುವುದು ಸಾಮಾಜಿಕವಾಗಿ ಸಂಘರ್ಷವನ್ನು ಎತ್ತಿ ತೋರಿಸುತ್ತದೆ.

ಕೃಷ್ಣನ ಹುಟ್ಟು, ಗೋಪಿಕಾ ಸ್ತ್ರೀಯರೊಂದಿಗಿನ ಅವನ ರಾಸಲೀಲೆಗೆ ಸಂಬಂಧಿಸಿದ 'ಕೃಷ್ಣನ ಹೋಳಿ ಪದ' ವಿಶೇಷವಾಗಿ ಗಮನ ಸೆಳೆಯುವಂತಿದೆ.

ಹೋಳಿ ಹಾಡುಗಳಲ್ಲಿ ಸಾಮಾಜಿಕ ವಿಷಯಕ್ಕೆ ಸಂಬಂಧಿಸಿದ ಹಾಡುಗಳುಂಟು. ದೇವದಾಸಿ ಪದ, ಮೋಸ ಮಾಡಿದ ಹೆಣ್ಣು, ಕುಡುಕಗಂಡ ಇಂತಹ ವಿಷಯಗಳು ಜನಪದರ ದೈನಂದಿನ ಬದುಕಿನಲ್ಲಿ ಸಹಜವಾಗಿ ಕಂಡು ಬರುವ ಸಂಗತಿಗಳಾಗಿದ್ದು, ಇವುಗಳನ್ನು ಕುರಿತು ಅಭಿವ್ಯಕ್ತಿಯನ್ನು ಇಲ್ಲಿ ನೀಡಲಾಗಿದೆ.

ಹೋಳಿ ಆಚರಣೆಯ ಸಮಯದಲ್ಲಿ ದುಂದುಮೆ ಎಂಬ ತೊಗಲು ವಾದ್ಯದ ತಾಳ ತಾನಗಳಿಗೆ ಹೊಂದಿಕೊಂಡು ಹಾಡುವ ಹಾಡುಗಳನ್ನು ಹಾಡುತ್ತಾರೆ. ಇವುಗಳಿಗೆ ದುಂದುಮೆ ಪದಗಳೆಂದು ಕರೆಯುತ್ತಾರೆ. ಜನಪದ ಕವಿಗಳು ಇಂತಹ ಹಾಡುಗಳನ್ನು ರಚಿಸಿದ್ದಾರೆ. ಪೌರಾಣಿಕ, ಐತಿಹಾಸಿಕ, ಧಾರ್ಮಿಕ ಕಥಾ ವಸ್ತುಗಳು ಇಂತಹ ದುಂದುಮೆ ಹಾಡುಗಳಿಗೆ ಕಥಾವಸ್ತುವಾಗಿರುತ್ತದೆ. ಕಿತ್ತೂರಿನ ವೀರರಾಣಿ ಚೆನ್ನಮ್ಮ, ನುಲಿಯ ಚಂದಯ್ಯ, ಕೀಚಕ, ಆದಯ್ಯ ಮುಂತಾದ ಕಥಾ ವಸ್ತುವನ್ನು ಆಯ್ಕೆ ಮಾಡಿಕೊಂಡು ದುಂದುಮೆ ಪದಗಳನ್ನು ಜನಪದ ಕವಿಗಳು ರಚಿಸುವುದುಂಟು.

ಪ್ರಸ್ತುತ ಸಂಕಲನದಲ್ಲಿ ಈಗಾಗಲೆ ವಿದ್ವಾಂಸರು ಸಂಗ್ರಹಿಸಿ ಪ್ರಕಟಿಸುವ ಬಿಡಿ ಹಾಡುಗಳು, ಕಥನ ಗೀತೆಗಳು ಹಾಗು ದುಂದುಮೆ ಪದಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಹೀಗೆ ಪ್ರಸ್ತುತ ಸಂಕಲನದಲ್ಲಿ ಹಿಂದುಗಳಲ್ಲಿ ಆಚರಣೆಯಲ್ಲಿರುವ ಹಬ್ಬಗಳಿಗೆ ಸಂಬಂಧಿಸಿದ ಜನಪದ ಹಾಡುಗಳನ್ನು ಸಂಗ್ರಹಿಸಲಾಗಿದೆ. ಈಗಾಗಲೇ ಸಂಪಾದನೆ ಮಾಡಿ ಪ್ರಕಟಿಸಿರುವ ವಿದ್ವಾಂಸರ ಕೃತಿಗಳಲ್ಲಿಯ ಹಾಡುಗಳನ್ನು ಸಂಗ್ರಹಿಸಿ ವೈಜ್ಞಾನಿಕವಾದ ವಿಭಾಗ ಕ್ರಮಕ್ಕೆ ಒಳಪಡಿಸಿ ಅವುಗಳನ್ನು ಇಲ್ಲಿ ಕೊಡಲಾಗಿದೆ.



*"ಆದಾವ ಜೋಳ ಉಳದಾವ ನಮ್ಮ ಹಾಡ*
*ಬೆರಳಾಗಿನ ಚಿನ್ನದುಂಗರ ಸವದಾವ"*

ಎಂದು ಗರತಿ ಬೀಸುಕಲ್ಲು ಹಿಡಿದು ಹಾಡಿದಂತೆ, ಜನಪದರಲ್ಲಿ ಅಪಾರ ಸಂಖ್ಯೆಯಲ್ಲಿ ಹಾಡುಗಳಿವೆ. ಹಾಡಿನ ಖಣಿಜವೇ ಅವರಲ್ಲಿ ಅಡಗಿದೆ. ಹಬ್ಬದ ಹಾಡುಗಳಂತೂ ಅದೆಷ್ಟೋ ಪ್ರಮಾಣದಲ್ಲಿವೆ. ಹೀಗಾಗಿ ಇಲ್ಲಿ ಹಾಡುಗಳನ್ನು ಒಂದು ಸಂಪುಟದಲ್ಲಿ ಸೇರಿಸುವುದು ಕಷ್ಟವಾಗಿರುವುದರಿಂದ ಎರಡು ಸಂಪುಟಗಳಲ್ಲಿ ಅಂದರೆ 'ಹಬ್ಬದ ಹಾಡುಗಳು ಸಂಪುಟ–೧' ಮತ್ತು 'ಹಬ್ಬದ ಹಾಡುಗಳು ಸಂಪುಟ–೨' ಎಂದು ಸಂಪಾದನೆ ಮಾಡಲಾಗಿದೆ. ಆದಾಗ್ಯೂ ಇನ್ನೊಂದು ಸಂಪುಟ ಆಗುವಷ್ಟು ಹಾಡುಗಳು ಸಂಪಾದನೆಗಳಿಂದ ಹೊರಗುಳಿದಿವೆ. ಅನುಬಂಧದಲ್ಲಿ ಆಧಾರ ಗ್ರಂಥಗಳ ಭಾಗದಲ್ಲಿ ಸಂಪಾದನ ಕೃತಿಗಳ ಪಟ್ಟಿಯನ್ನು ಕೊಡಲಾಗಿದೆ. ಅವುಗಳಿಂದ ಹಾಡುಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಕಾರಣ ಆ ಸಂಪಾದಕರಿಗೆಲ್ಲ ನಾನು ಋಣಿಯಾಗಿದ್ದೇನೆ. ಅಲ್ಲದೆ ಬಿಡಿ ಬಿಡಿಯಾಗಿ ಕೆಲವು ಹಾಡುಗಳನ್ನು ಕೆಲವು ಗ್ರಂಥಗಳಿಂದ ಸಂಗ್ರಹಿಸಲಾಗಿದ್ದು, ಅವುಗಳನ್ನು ಕೂಡ ಇಲ್ಲಿ ಹೆಸರಿಸಲಾಗಿದೆ. ವಿಷಯಕ್ಕೆ ಪೂರಕವಾದ ಮಾಹಿತಿ ಸಂಗ್ರಹಿಸಲು ಕೆಲವು ಗ್ರಂಥಗಳ ಸಹಾಯವನ್ನು ಪಡೆಯಲಾಗಿದ್ದು ಅವುಗಳ ಪಟ್ಟಿಯನ್ನು ಸಹಾಯಕ ಗ್ರಂಥಗಳ ಪಟ್ಟಿಯಲ್ಲಿ ನೀಡಲಾಗಿದೆ. ಕಾರಣ ಆ ಗ್ರಂಥಗಳ ಲೇಖಕರಿಗೂ ಕೂಡ ನಾನು ಕೃತಜ್ಞನಾಗಿದ್ದೇನೆ. ಈ ಮಹತ್ವಪೂರ್ಣ ಸಂಪಾದನಾ ಸಂಪುಟವನ್ನು ಸಿದ್ಧಪಡಿಸಲು ಅಣಿಗೊಳಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿಜಕ್ಕೂ ಮೆಚ್ಚುಗೆಗೆ ಅರ್ಹವಾಗಿದೆ. ಕಾರಣ ನಿರ್ದೇಶಕರಿಗೂ ಹಾಗೂ ಉಳಿದೆಲ್ಲ ಅಧಿಕಾರಿಗಳಿಗೂ ಅನಂತ ವಂದನೆಗಳನ್ನು ಸಲ್ಲಿಸುತ್ತೇನೆ.

ಈ ಮಹತ್ವಪೂರ್ಣ ಸಮಗ್ರ ಕನ್ನಡ ಜನ ಪದ ಸಾಹಿತ್ಯ ಸಂಪುಟ ಯೋಜನೆಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತ, ಅದನ್ನು ಅರ್ಥಪೂರ್ಣಗೊಳಿಸುತ್ತಿರುವ ಡಾ॥ ಹಿ.ಶೀ.ರಾಮಚಂದ್ರೇಗೌಡ ಅವರಿಗೆ ಅನಂತ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಪ್ರಸ್ತುತ ಹಬ್ಬದ ಹಾಡುಗಳು ಸಂಪುಟ–೨ನ್ನು ಅಚ್ಚು–ಕಟ್ಟಾಗಿ ಹೊರಬರಲು ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿ, ಹಸ್ತಪ್ರತಿಯನ್ನು ಪರಿಶೀಲನೆ ಮಾಡಿ ಪ್ರೋತ್ಸಾಹಿಸಿದ ಗುರುಗಳಾದ ಡಾ.ಎಂ.ಎಸ್. ಲಠ್ಠೆ ಅವರಿಗೂ ಹಾಗೂ ಪ್ರಕಟನಾ ಮಂಡಳಿಯ ಎಲ್ಲ ಸದಸ್ಯರಿಗೂ ನಾನು ಋಣಿಯಾಗಿದ್ದೇನೆ. ಈ ಬೃಹತ್ ಸಂಪುಟ ಹೊರಬರಲು ಪರೋಕ್ಷ ಹಾಗೂ ಅಪರೋಕ್ಷವಾಗಿ ಸಲಹೆ ಸೂಚನೆಗಳನ್ನು ನೀಡಿದ, ಸಹಾಯ ಸಹಕಾರ ಮಾಡಿದ ಎಲ್ಲ ವಿದ್ವಾಂಸರಿಗೂ, ಸ್ನೇಹಿತರಿಗೂ ನಾನು ಉಪಕೃತನಾಗಿದ್ದೇನೆ.

ಈ ಕೃತಿಯನ್ನು ಓದುಗರು ಮೆಚ್ಚಿಕೊಂಡಲ್ಲಿ ನನ್ನ ಶ್ರಮ ಸಾರ್ಥಕವೆಂದು ಭಾವಿಸುವೆ. ಕೊರತೆಗಳೇನಾದರೂ ಕಂಡು ಬಂದಲ್ಲಿ ಅದನ್ನು ಸೂಚಿಸಿದಲ್ಲಿ ತೆರೆದ ಹೃದಯದಿಂದ ಸ್ವಾಗತಿಸುತ್ತೇನೆ.

***ಡಾ॥ ಡಿ.ಬಿ. ನಾಯಕ***
ಸಂಪಾದಕರು

# ಪರಿವಿಡಿ


**ಪ್ರಸ್ತಾವನೆ**

**I ಗೌರಿಹಬ್ಬದ ಹಾಡುಗಳು**

೧ ಗಂಗೀಗೌರಿ ಹಾಡು – ೧

೨. ಗಂಗೀಗೌರಿ ಹಾಡು – ೨

೩. ಗೌರಿ ಹಾಡು

೪. ಗೌರಿಯನ್ನು ಕಳುಹಿಸಿ ಕೊಡುವ ಹಾಡು – ೧

೫. ಗೌರಿಯನ್ನು ಕಳುಹಿಸಿ ಕೊಡುವ ಹಾಡು – ೨

೬. ಗಂಗೀ ಗೌರಿ ಸಂವಾದ

೭. ಶಿವ ಯಾರಿಗೆ ಒಳ್ಳೆಯವ

೮. ನರಗುಂದದ ಗೌರೀ ಹುಣ್ಣಿಮೆ

೯. ಬೆಳಿಯೋ ಬಿಳಿಜ್ವಾಳವ

೧೦. ಹನುಮಂತನ ಹಾಡು

೧೧. ಲೇವಡಿ ಪದ

೧೨. ಮಂಗಳಾರತಿ ಹಾಡು

**II ಎಳ್ಳಮಾಸೀ ಹಾಡು**

**III ಶಿವರಾತ್ರಿ ಹಾಡು**

**IV ಹೋಳಿ ಹಾಡುಗಳು**

೧ ಹೋಳಿ ಹಾಡುಗಳು

೨. ದುಂದುಮೆ ಪದಗಳು

೩. ಸಂಕೀರ್ಣ ಪದಗಳು

**ಅನುಬಂಧ**

ಆಕರ ಗ್ರಂಥಗಳು

ಸಹಾಯಕ ಗ್ರಂಥಗಳು

ಪದಕೋಶ

ಸಾಂಸ್ಕೃತಿಕ

# ಗೌರಿ ಹಬ್ಬದ ಹಾಡುಗಳು



## ೧. ಗಂಗಿ ಗೌರೀ ಹಾಡು

೧

ಗಂಗಿನ ತರಬೇಕಂತ ನಂದಿನ ಸೃಂಗಾರ ಮಾಡಿ ॥
ಕೊಂಬಣಸ ಕೊರಳಽ ಹುಲಗೆಜ್ಜೆ। ಕೋಲ ॥ ೧ ॥

ಕೊಂಬುಽ ಅಣಸ ಕೊರಳ ಹುಲಗೆಜ್ಜಿ ಶಿವರಾಯಾ ॥
ಗಂಗಿಽನ ತರವ್ರೋಽ ನಡದಾರ। ಕೋ ॥ ೨ ॥

ಹಳ್ಳಽದ ದಂಡಿಽಗಿ ಹೂವ ಕೋವ್ರೂ ಜಾಣಿ।
ಲಿಂಗಕೊಂಡ್ಹೋವಽ ದಯಮಾಡ। ಕೋ ॥ ೩ ॥

ಲಿಂಗಕೊಂಡ್ಹೋವಽ ದಯಮಾಡಿದ್ರ ಮಾಡೇನ ॥
ನಮ್ಮವ್ವ ನಮಗಽ ಬೈದಾಳ। ಕೋ ॥ ೪ ॥

ಹಳ್ಳಽದ ದಂಡಿಽಗಿ ಹೂವ ಕೋವ್ರೂ ಜಾಣಿ ॥
ಲಿಂಗಕ್ಕೆರಡ್ಹೋವಽ ದಯಮಾಡ। ಕೋ ॥ ೫ ॥

ಲಿಂಗಕ್ಕೆರಡ್ಹೋವ ದಯಮಾಡಿದ್ರ ಮಾಡೇನ ॥
ನಮ್ಮಪ್ಪ ನಮಗಽ ಬಡಿದಾನ। ಕೋ ॥ ೬ ॥

ನಿಮ್ಮವ್ವ ಬೈದಽರ ನಿಮ್ಮಪ್ಪ ಬಡಿದಽರ ॥
ಬೇಗ ಬಾ ಗಂಗಾ ಜಡಿಯಾಗ। ಕೋ ॥ ೭ ॥

ಬಂದಽರ ಬಂದೇನ ನೆಂಬಿಗಿಲ್ಲೋ ಶಿವನೆ ॥
ರಂಭಾಽಳೊ ನಿನ್ನ ಮನಿಯಾಗ। ಕೋ ॥ ೮ ॥

ನನ್ನಾಣಿ ನಿನ್ನಾಣಿ ಮತ್ತ ನಿಂಗದಾಣಿ ॥
ರಂಬಿಲ್ಲ ನನ್ನ ಮನಿಯಾಗ। ಕೋ ॥ ೯ ॥

ಬಂದಽರ ಬರುವೇನೊ ನಂಬಿಗಿಲ್ಲೋ ಶಿವನೆ ॥
ಮಡದ್ಯಾಳೊ ನಿನ್ನ ಮನಿಯಾಗ। ಕೋ ॥ ೧೦ ॥

ನನ್ನಾಣಿ ನಿನ್ನಾಣಿ ಮತ್ತ ದೇವಽರಾಣಿ ॥
ಮಡದಿಲ್ಲ ನನ್ನ ಮನಿಯಾಗ। ಕೋ ॥ ೧೧ ॥

* * * * *

ಜಡಿಯಾಗ ಹೋಗೂದು ಗಿಣಿರಾಮ ಕಂಡಾನ ॥
ಹೋಗಿ ಹೇಳ್ಯಾನಽ ಗೌರವ್ವ । ಕೋ ॥ ೧೨ ॥

ಮನಗಿಽದ ಗೌರವ್ವ ಮೈಮುರಿದು ಎದ್ದಾಳ ॥
ತಣ್ಣೀರ ಗಿಂಡೀಲಿ ಮಕ ತೊಳೆದ । ಕೋ ॥ ೧೩ ॥

ತಣ್ಣೀರ ಗಿಂಡೀಲಿ ಮಕ ತೊಳೆದ ಗೌರವ್ವ ।
ಹ್ವಾದಾಳಣ್ಣಾಽನ ಅರಮನಿಗಿ । ಕೋ ॥ ೧೪ ॥

ಎಂದಿಲ್ಲ ಗೌರವ್ವ ಇಂದ್ಯಾಕ ಬಂದಾಳ ॥
ಕುಂಡಽರ ಕುಡರೇ ಮಣಿಚೌಕಿ । ಕೋ ॥ ೧೫ ॥

ಕುಂಡಽರ ಬಂದಿಲ್ಲ ನಿಂದಽರ ಬಂದಿಲ್ಲ ॥
ನಾ ಒಂದ ಕನಸ ಹೇಳಿಬಂದೆ । ಕೋ ॥ ೧೬ ॥

ಕೆರಿಮ್ಯಾಲಿ ಕೆರಿಹುಟ್ಟಿ ಕೆರಿಮ್ಯಾಲಿ ಮರಹುಟ್ಟಿ ॥
ಮರದ ಮ್ಯಾಲೊಬ್ಬಽ ಬಲಿಹಾಕಿ । ಕೋ ॥ ೧೭ ॥

ಕೆರಿಯಂದ್ರ ಶಿವರಾಯಾ ಮರ ಅಂದ್ರ ಜಡಿಗೋಳು ॥
ಬಲಿಯಂದ್ರ ಒಳಗ ಸಿರಗಂಗಿ । ಕೋ ॥ ೧೮ ॥

ದೇಶಾನೆ ಆಳವರಿಗೇಸೊಂದು ಹೆಂಡಽರ ॥
ನಿನಗ್ಯಾಕ ತಂಗೀ ಪರದುಕ್ಕ । ಕೋ ॥ ೧೯ ॥

ಕಿಡಿಕಿಽಡಿನಾದಾಳ ಕಿಡಚುಂಡನಾದಾಳ ॥
ಎಡವಿಽದ ಬೆರಳೋಽಂದರವಿಲ್ಲ । ಕೋ ॥ ೨೦ ॥

ಎಡವೀದ ಬೆರಳೊಂದರವಿಲ್ಲ ಗೌರವ್ವ ॥
ಬಂದಾಳ ತನ್ನ ಅರಮನಿಗೆ । ಕೋ ॥ ೨೧ ॥

* * * * *

ಗೊಬ್ಬೂರ ಹಾದೀಲಿ ಒಬ್ಬಯ್ಯ ಬರತಾನ ॥
ಅಬ್ಬರಣಿ ಗೌರೀ ನೀರಿಽಡ । ಕೋ ॥ ೨೨ ॥

ಒಂದ್ ಗಿಂಡಿ ಇಡು ಅಂದ್ರ ಎರಡ ಗಿಂಡಿ ಇಟ್ಟಾಳ ॥
ನಿನಗಿಬ್ಬರೇನ ಪುರುಷಽರ । ಕೋ ॥ ೨೩ ॥

ಅಯ್ಯಯ್ಯ ಶಿವಶಿವ ಅಣಕಽದ ಮಾತ್ಯಾಕೊ ॥
ಸರವ ಕೆಂಜೆಽಡಿ ಮಣಿಮುಕುಟ । ಕೋ ॥ ೨೪ ॥



ಸರವಽನೆ ಕೆಂಜೆಽಡಿ ಮಣಿಮುಕಟದೊಳಗಿನ ॥
ಸಿರಿಗಂಗಾಗೊಂದಽ ನಿನಗೊಂದ । ಕೋ ॥ ೨೫ ॥

ಗೊಬ್ಬೂರ ಹಾದೀಲಿ ಒಬ್ಬಯ್ಯ ಬರತಾನ ॥
ಅಬ್ಬರಣಿ ಗೌರಿಽ ಎರಿಮಾಡಿ । ಕೋ ॥ ೨೬ ॥

ಒಂದೆಽಡಿ ಮಾಡಂದ್ರ ಎರಡೆಽಡಿ ಮಾಡ್ಯಾಳ ॥
ನಿನಗಿಬ್ಬರೇನ ಪುರುಷಽರ । ಕೋ ॥ ೨೭ ॥

ಅಯ್ಯಯ್ಯ ಶಿವಶಿವ ಅಣಕಽದ ಮಾತ್ಯಾಕೊ ॥
ಸರವ ಕೆಂಜೆಽಡಿ ಮಣಿಮುಕುಟ । ಕೋ ॥ ೨೮ ॥

ಸರವಽನೆ ಕೆಂಜೆಽಡಿ ಮಣಿಮುಕುಟದೊಳಗಿಽನ ॥
ಸಿರಗಂಗಿಗೊಂದಽ ನಿಮಗೊಂದ । ಕೋ ॥ ೨೯ ॥

ಗಂಗೀನ ತಂದಽರ ತಂಗೀನ ತಂದಂಗ ॥
ನಿಂಗಽವ ತಾನ ಬಡಿತೇನ । ಕೋ ॥ ೩೦ ॥

ಗಂಗಿಽನ ತಂದಽರ ತಂಗೀನ ತಂದಂಗ ॥
ಖಂಡಽವ ತಾರಽ ಬಡಿತೇನ । ಕೋ ॥ ೩೧ ॥

* * * * *

ಬೆಳ್ಳಿ ಬಟ್ಟಲದಾಗ ಎಳ್ಳೆಣ್ಣೆ ತಕ್ಕೊಂಡು ॥
ಗೌರ್ಯ್ಹೊದಳವನಽ ತೆಲಿ ಹೂಸ । ಕೋ ॥ ೩೨ ॥

ತೆಲಿಯೆಂಬ ಭಾಂವಕ ಒತ್ತ್ಯಾಳ ಒರಿಸ್ಯಾಳ ॥
ಟೊಂಕಂಬು ಭಾಂವಽಕಿಳಿದಾಳ । ಕೋ ॥ ೩೩ ॥

ಟೊಂಕಂಬೊ ಭಾಂವಕ ಒತ್ತ್ಯಾಳ ಒರಿಸ್ಯಾಳ ॥
ಪಾದಂಬ ಭಾವಂಽಕಿಳಿದಾಳ । ಕೋ ॥ ೩೪ ॥

ಪಾದಂಬೋ ಭಾಂವಕ ಒತ್ತ್ಯಾಳ ಒರಿಸ್ಯಾಳ ॥
ನೆಲ ಸೋಸಿ ಗಂಗಿ ಹರಿದಾಳ । ಕೋ ॥ ೩೫ ॥

ಗಂಗ್ಹ್ಯೋದ ಮರುದಿಽನ ಗೌರಿ ಮುಟ್ಟನಾದಾಳ ॥
ಮಿಂದೆನೆಂದಽರ ನೀರಿಲ್ಲ । ಕೋ ॥ ೩೬ ॥

ಮಿಂದೇನು ಅಂದಽರ ನೀರಿಲ್ಲ ಶಿವರಾಯಾ ॥
ಹಾಲಿಽನ ಕ್ವಡಾ ಖಲವ್ಯಾನ । ಕೋ ॥ ೩೭ ॥

ಹಾಲೀಲಿ ಮಿಂದಿದರ ಹೋಗೕವು ಮುಡಚಾಟ ॥
ತಂಗಿ ಗಂಗಮನ ಖಳವೕರಿ । ಕೋ ॥ ೩೮ ॥

ಗಂಗ್ಯೋದ ಮರದೀನ ಗೌರಿ ಮುಟ್ಟನಾದಾಳ ॥
ಮಿಂದೇನಂದಾರೕ ನೀರಿಲ್ಲ । ಕೋ ॥ ೩೯ ॥

ಮಿಂದೇನು ಅಂದರೕ ನೀರಿಲ್ಲ ಶಿವರಾಯಾ ॥
ತುಪ್ಪೕದ ಕ್ವಡಾ ಖಳವ್ಯಾನ । ಕೋ ॥ ೪೦ ॥

ತುಪ್ಪೀಲಿ ಮಿಂದಿದರ ಹೋಗೕವ ಮುಡಚಾಟ ॥
ತಂಗಿ ಗಂಗಮನ ಖಳುವೕರಿ । ಕೋ ॥ ೪೧ ॥

* * *



## ೧. ಗಂಗೀ ಗೌರೀ ಹಾಡು (೨)

ಅಡವಿಯನ್ನಿ ಮರನೆ
ಗಿಡವ ಬನ್ನಿ ಮರನೆ
ಅಡವ್ಯಾಗ ಇರುವಂಥ
ಸಾರಂಗ ಸರದೂಳಿ
ಹೆಬ್ಬೕಲಿ ಹುಲಿ ಕರಡಿ
ಎಡಬಲ ಹಾಂವು ತೇಳೋ ದೇವಾ ।
ಎನ್ನ ಮೇಲಾಡಿ ಶ್ರೀಗಂಗೀನ ತಂದಿ ।
ಎನ್ನ ತಪ್ಪೇನು ಕಂಡಿ ॥ ೧ ॥

ಪಟ್ಟಣದ ದಾರಿ ಮ್ಯಾಲ
ಹಿಟ್ಟಗಲ್ಲಿನ ಮ್ಯಾಲ
ಕತ್ತೀಯ ವರಿಯಂಗ
ವರಿಯವರು ಇದ್ದಲ್ಲಿ
ಇಪ್ಪತ್ತು ಗಾಂವುದ ತಪನಿದ್ದೋೕ ದೇವಾ
ಎನ್ನ ಮೇಲಾಡಿ ಶ್ರೀಗಂಗೀನ ತಂದಿ ।
ಎನದನ ತಪ್ಪೇನು ಕಂಡಿ ॥ ೨ ॥

ಸಾರಂಗ ದಾರಿಮ್ಯಾಲ
ಸಾಲಗಲ್ಲಿನ ಮ್ಯಾಲ
ಭೂಜೀಯ ಮಣಿಯಂಗ
ಮಣಿಯವರು ಇದ್ದಲ್ಲಿ
ನಾಲ್ವತ್ತು ಗಾಂವುದ ತಪನಿದ್ದೋೕ ದೇವಾ
ಎನ್ನ ಮೇಲಾಡಿ ಶ್ರೀಗಂಗೀನ ತಂದಿ ।
ಎನ್ನ ತಪ್ಪೇನು ಕಂಡಿ ॥ ೩ ॥

ತನುವ ಇಲ್ಲದ ಗಂಗಿ
ಥಣ್ಣೀರಿಗ್ಹೋದಾಗ
ನಿಂಬೀಹಣ್ಣೀನಂಗ
ತುಂಬೀದ ಕುಚಗಳು
ಬಂದ ಕುಂತಾಳ ಜಡಿಯೊಳಗೋ ದೇವಾ
ಎನ್ನ ಮೇಲಾಡಿ ಶ್ರೀಗಂಗೀನ ತಂದಿ ।
ಎನ್ನ ತಪ್ಪೇನು ಕಂಡಿ ॥ ೪ ॥

ಒಟ್ಟಿದ ಬಣವೀಗಿ
ಕಿಚಗುಳ್ಳ ಬಿದ್ದಂಗ
ಮುತ್ತೀನ ರಾಸೀಗಿ
ಕಳ್ಳರು ಬಿದ್ದಂಗ
ಚಿಕ್ಕಂದಿನೊಗತಾನಾ
ಮತ್ತೊಬ್ಬಿಗಾಯ್ತಂದ
ಹೊಟ್ಯಾಗ ಭೆಂಕಿ ಬರಕ್ಯಾದೋ ದೇವಾ
ಎನ್ನ ಮೇಲಾಡಿ ಶ್ರೀಗಂಗೀನ ತುದಿ ।
ಎನ್ನ ತಪ್ಪೇನು ಕಂಡಿ ॥ ೫ ॥

* * *



## ೩. ಗೌರಿ ಹಾಡು

ಬೇಸತ್ತು ಮಲಗೀದಿ
ಆನಿ ಬಂದಾವೆ ಅಗಸ್ಯಾಗೆ । ಕೋಲೆ ।
ಆನಿ ಬಂದಾವೆ ಅಗಸೆ ಗೌರವ್ವನ
ತಂದಿ ಬಂದಾನೆ ಕರೆಯಾಕೆ । ಕೋಲೆ ।
ಹತ್ತು ಕಾಲಿನೇಣಿ ಉಪ್ಪುರಗಿ ನಿಲ ಹಾಕಿ
ಹತ್ತಿ ನೋಡ್ಯಾಳೆ ತವರೂರ । ಕೋಲೆ ।
ಹತ್ತೇನ ನೋಡ್ಯಾಳೆ ತವರೂರ ಹಾದ್ಯಾಗ ।
ಅವರಪ್ಪ ಗಿರಿರಾಜ ಬರುತಾನೆ । ಕೋಲೆ ।

ಬಂದ ಗಿರಿರಾಜಗೆ ಗಿಂಡೀಲಿ ನೀರಕೊಟ್ಟು
ಕುಂದರಕ ಹಾಕ್ಯಾಳೆ ಚವುಕೆಯ । ಕೋಲೆ ।

ಕುಂದರಕ ಬಂದಿಲ್ಲ ನಿಂದಿರಕ ಬಂದಿಲ್ಲ
ಮಗಳೆ ಗೌರವ್ವನ ಕರಿಬಂದೆ । ಕೋಲೆ ।

ಆರುಕಾಲಿನೇಣಿ ಆವುರಿಗೆ ನಿಲ ಹಾಕಿ
ಏರಿ ನೋಡ್ಯಾಳೆ ತವರೂರ । ಕೋಲೆ ।

ಏರೇನ ನೋಡ್ಯಾಳೆ ತವರೂರ ಹಾದ್ಯಾಗೆ
ವಾರೀಗಿ ಗೆಣತೇರ ಬರುತಾರೆ । ಕೋಲೆ ।

ಬಂದಂತ ಗೆಣತೇರಿಗೆ ಗಿಂಡೀಲಿ ನೀರಕೊಟ್ಟು ।
ಕುಂದರ ಹಾಕ್ಯಾಳೆ ಚವುಕೆಯ । ಕೋಲೆ ।

ಕುಂದರಕ ಬಂದಿಲ್ಲ ನಿಂದರಕ ಬಂದಿಲ್ಲ
ಗೆಣತಿ ಗೌರವ್ವನ ಕರಿಬಂದೆ । ಕೋಲೆ ।

ನಮ್ಮನಿ ಊರಾಗೆ ತುಂಬಿದ ಹುಣಿವ್ಯಪ್ಪ ।
ಕಳುವಿ ಕೊಡರಿ ನಮ್ಮ ಗೌರಿಯ । ಕೋಲೆ ।

ಉಟ್ಟು ಸೀರಿ ಬಿಚ್ಚಿಡೆ ಸಿರಿಗೌರಿ
ಉಟುಗೊಳೆ ಹಳೆಯ ಪಟಗೀಯ । ಕೋಲೆ ।

ಉಟ್ಟಗೊಳೆ ಹಳೆಯ ಪಟಗೀ ತವರಿಗ್ಹೋಗಿ
ಉಟುಬರುವಂತೆ ಹೊಸ ಗಳಗೀಯ । ಕೋಲೆ ।

ಇತ್ತ ಬಾರೆ ಸಿರಿಗೌರಿ ಮತ್ತೊಂದು ಹೇಳೇನಿ
ಬಾಗಿಲುದಾಗ ಬೆಳೆದೆ ಸುಳಿಬಾಳೆ । ಕೋಲೆ ।

ಬಾಗಿಲುದಾಗ ಬೆಳೆದಾ ಸುಳಿಬಾಳೆ ಕೊಯ್ದು
ನೀಡೆ ಗೆಣತೇರಿಗೆ ಹುಳಿಬುತ್ತಿ । ಕೋಲೆ ।

ಹುಳಿಬುತ್ತಿ ಉಣ್ಣಾಕೆ ಬಡವರಲ್ಲಿ ಶಿವನೆ
ಹತ್ತೆಮ್ಮಿ ಕರೆದ ನೊರೆಹಾಲು । ಕೋಲೆ ।

ಹತ್ತೆಮ್ಮಿ ಕರೆದ ನೊರೆಹಾಲು ಸಕ್ಕರಿ ತುಪ್ಪ
ಐತೇಳು ಗೆಣತೇರ ಮನಿಯಾಗೆ । ಕೋಲೆ ।

ಶಾಲಿಗ್ಹೋಗೊ ಜನವ ಓಡ್ಯೋಡಿ ಬಂದಾರೆ
ಯಾಕ ಹಡೆದವ್ವ ಅಳತೀದಿ । ಕೋಲೆ ।

ನಮ್ಮನಿ ಊರಾಗೆ ತುಂಬಿದ ಹುಣಿವ್ಯಪ್ಪ
ನಿಮ್ಮಜ್ಜ ನಿನ್ನ ಕರಿಬಂದ । ಕೋಲೆ ।

ನಿಮ್ಮಜ್ಜ ನಿನ್ನ ಕರಿಯ ಬಂದ್ಯೆದಾರೆ
ಕಳುವಲಿಲ್ಲ ನಿಮ್ಮ ಶಿವರಾಯ । ಕೋಲೆ ।

ಗಂಜೀಯ ಕುಡಿವ್ಯಾರು ಹಂಜೀಯ ನೂಲಾರು
ರಂಜಿಣಿಗಿ ಸಂಜೇಲಿ ಒರಗ್ಯಾರೆ । ಕೋಲೆ ।

ರಂಜಿಣಿಗಿ ಸಂಜೇಲಿ ಒರಗಾ ತವರೀಗ್ಹೋಗಿ
ಏನುಂಡು ಬರುತೀ ಸಿರಿಗೌರ । ಕೋಲೆ ।

ರಾಟೀಯ ನೂಲೋರೆ ರಾಕಾಟಿಯ ಕುಡಿಯೋರೆ
ರಾಟೀ ಸಂದೇಲಿ ಒರಗೋರೆ । ಕೋಲೆ ।

ರಾಟೀಯ ಸಂದೇಲಿ ಒರಗೋ ತವರೀಗ್ಹೋಗಿ
ಏನುಂಡು ಬರುತಿ ಸಿರಿಗೌರಿ । ಕೋಲೆ ।

ರಾಗೀಯ ರೊಟ್ಟಿಯ ರಾಜಗಿರಿ ಪಲ್ಲೇವು
ರಾಜಕ ತವರೂರು ಬಡವರು । ಕೋಲೆ ।

ರಾಜಕ ತವರೂರು ಬಡವರು ಮನೆಯಾಗೆ
ಒಂದಿನ ಇದ್ದು ಬರುತೇನೆ । ಕೋಲೆ ।

* * *



## ೪. ಗೌರಿಯನ್ನು ಕಳುಹಿಸಿಕೊಡುವ ಹಾಡು – ೧

ಕಲ್ಲಾಗ ಮಳಿಬಂದು ಕಲ್ಲೆಲ್ಲ ಹಸಿಗೊಂಡು
ಕಲ್ಲಾಗ ಕವಳಿ ಬೆಳೆದಾವ ಕೋಲ ॥

ಕಲ್ಲಾಗ ಕವಳಿ ಬೆಳೆದಾವ ಗೌರಮ್ಮ
ನಲ್ಲಿ ನೀ ಹ್ಯಾಂಗ ತಪಸಿದ್ದೆ ಕೋಲ ॥

ನನ್ನ ತಪದಗೊಡಿ ನಿನಗೇನ ಮಾಡದು
ಸುಮ್ಮನ ಹೋಗ ಹುಚ ಜೋಗಿ ಕೋಲ ॥

ಆನಿಆನಿಮುಂದ ಆನಿಯಮರಿಮುಂದ
ಮ್ಯಾನೆದಗೌಡರ ಮಗ ಮುಂದ ಕೋಲ ॥

ಮ್ಯಾನೆದಗೌಡರ ಮಗ ಮುಂದ ಶರಣಗೌಡ
ಆನಿಮ್ಯಾಲ ಗೌರಿ ಖಳವ್ಯಾಕನ ಕೋಲ ॥

ಒಂಟಿಒಂಟಿಯ ಮುಂದ ಒಂಟಿಯಮರಿ ಮುಂದ
ಬಂಡಗೌಡರ ಮಗ ಮುಂದ ಕೋಲ ॥

ಬಂಟನೆ ಗೌಡರ ಮಗ ಮುಂದ ಶರಣ ಬಸವ
ಒಂಟ್ಹೇರಿ ಗೌರಿ ಖಳವ್ಯಾರ ಕೋಲ

ಕುದರಿ ಕುದರಿ ಮುಂದ ಕುದರಿಯ ಮರಿ ಮುಂದ
ಚದರಗೌಡರ ಮಗ ಮುಂದ ಕೋಲ

ಚದುರನೆ ಗೌಡರ ಮನಗ ಮುಂದ ಭೋಗೇಶ
ಕುದುರೇರಿ ಗೌರಿ ಖಲವ್ಯಾರ ಕೋಲ ॥

ಹೊಸ್ತಲ ಧಾಟಾಗ ಏನಂದಿ ಗೌರಮ್ಮ
ಹೊಸ್ತಲಿಗಿ ಹೊನ್ನ ಜಡಿರೆಂದ ಕೋಲ ॥

ಬಾಗಲ ಧಾಟಾಗ ಏನಂದಿ ಗೌರಮ್ಮ
ಬಾಗಲಿಗಿ ಮುತ್ತ ಜಡಿರೆಂದ ಕೋಲ

ಹೂಗಾರ ಗೌರಿಗಿ ಏನೇನ ಸಿಂಗಾರ
ಹೂವಿನ ಹಾರ ಜನಿವಾರ ಕೋಲ ॥

ಈಸು ಗೌರಿಗೊಳು ಅಗಸೀಗಿ ಹೋಗ್ಯಾರ
ಅಗಸೀಯ ತೆರಿಯೋ ತಳವಾರ ಕೋಲ ||

ಇವ ಅಗಸಿಗೊಳು ಸುಮ್ಮನ್ಯಾಕ ತೆರಿಯಲಿ
ಬಗಸಿ ತುಂಬ ಅಡಕಿ ಬಿಲಿ ಎಲಿಯ ಕೋಲ ||

ಬಗಸಿ ಥುಂಬ ಅಡಕಿ ಬಿಳಿ ಎಲಿಯ ಕೊಟ್ಟರ
ಅಗಸಿಯ ತೆರದ ತಳವಾರ ಕೋಲ ||

ಅಗಸಿಯ ತೆರದ ತಳವಾರ ಗೌರಮ್ಮ
ಹೋಗ್ಯಾಳ ಶಿವನ ಅರಮನಿಗೆ ಕೋಲ ||

* * *



## ೫. ಗೌರಿಯನ್ನು ಕಳುಹಿಸಿಕೊಡುವ ಹಾಡು – ೨

ಬಾಗಿಲ ಧಾಟಟಿಗೆ ಏನಂದಿ ಗೌರಮ್ಮ
ಸಿಂಗಾರ ನಮಗ ಘನವಾಗಿ ಕೋಲ

ಸಿಂಗಾರ ನಮಗ ಘನವಾಗಿ ದೇವಿಂದ್ರ
ನಿಂಗವಂತನ ಭೂಮಿ ಬೆಳಿಲಂದೆ ಕೋಲ

ಬಾಗಿಲ ಧಾಟಟಗೆ ಏನಂದಿ ಗೌರಮ್ಮ
ಭಾಗ್ಯವ ನಮಗ ಘನವಾಗೆ ಕೋಲ
ಭಾಗ್ಯವ ನಮಗ ಘನವಾಗಿ ಬಸುರಾಜನ
ಭಾಗ್ಯವಂತನ ಭೂಮಿ ಬೆಳಿಲಂದೆ ಕೋಲ
ಶೆಟ್ಟಿ ಶೆಟ್ಟೇರಿ ಗೌರಿ ಶೆಟ್ಟೇರ ಮನಿಯಿನ ಗೌರಿ
ಶೆಟ್ಟಿ ಬಸರಾಜನ ಮನಿ ಗೌರಿ ಕೋಲ
ಶೆಟ್ಟನೆ ಬಸರಾಜನ ಮನಿಗೌರಿ ಹೋಗತಾಳ
ನಾಲತ ಪಂಜಿನ ಬೆಳಕೀಲಿ ಕೋಲ
ರಾಯ ರಾಯರ ಗೌರಿ ರಾಯರ ಮನಿಯನ ಗೌರಿ
ರಾಯನಿಂಗಣ್ಣನ ಮನಿಗೌರಿ ಕೋಲ
ರಾಯನ ನಿಂಗಣ್ಣನ ಮನಿಗೌರಿ ಹೋಗುತಾಳ
ನಾಲತ ಪಂಜಿನ ಬೆಳಕಲಿ ಕೋಲ

ದಿಡ್ಡಿತೆರಿಯೆ ನನ್ನ ಬುದ್ದುಳ್ಳ ತಳವಾರ
ಗಿದ್ದನ ತುಂಬ ಅಡಕಿ ಬಿಳಿ ಎಲಿಯ ಕೋಲ
ಗಿದ್ದನ ತುಂಬ ಅಡಕಿ ಬಿಳಿ ಎಲಿಯ ತೊಗೊಂಡು
ದಿಗ್ಗನ ಬಂದ ದಿಡ್ಡಿ ತೆರದಾನೆ ಕೋಲ

ಅಗಸಿ ತೆರಿಯ ನನ್ನ ಸೊಗಸುಳ್ಳ ತಳವಾರ
ಬಗಸಿ ತುಂಬ ಅಡಕಿ ಬಿಳಿ ಎಲಿಯ ಕೋಲ
ಬಗಸಿಗೆ ತುಂಬ ಅಡಕಿ ಬಿಳಿ ಎಲಿಯ ತೊಗೊಂಡು
ಸೊಗಸಿಲಿ ಬಂದಗಿಸಿ ತೆರುದಾನೆ ಕೋಲ
ಕಳವಿ ಬಂದೇನಮ್ಮ ಕಳವುಳ್ಳ ಗೌರಮ್ಮನ
ಬಿಳಿಮುತ್ತಿನ ಕಿನ್ನ ಚೆಲುವಿನ್ನ ಕೋಲ
ಬಿಳಿಮುತ್ತಿನ ಕಿನ್ನ ಚೆಲುವಿನ್ನ
ಕಳವಿ ಬಂದೇವ ಶಿವನ ಅರಮನಿಗೆ ಕೋಲ
ಬಿಟ್ಟ ಬಂದೇನಮ್ಮ ಪಟ್ಟದ ಗೌರಮ್ಮನ
ಬೆಳದಿಂಗಳಕಿನ್ನ ಚಲುವಿನ್ನ ಕೋಲ

## ೬. ಗಂಗಿ ಗೌರೀ ಸಂವಾದ

೧

**ಕಂದ :**

ಅಂಬರದ ಗಂಗೆಯನು ಬೊಂಬೆರೂಪನೆ ಮಾಡಿ
ಅಂಬಿಗ ಶರಣನಾತ್ಮಜಳೆನಿಸುವ
ಕುಂಭನಿಗೆ ಚೋದ್ಯವೆನಿಸುವ ಶಿವಗಂಗೆಯನು
ಹಂಬಲಿಸಿ ತಂದ ಹರುಷಾಬ್ಧಿ ಕಥೆಯ ॥ ೧ ॥

ಆಕಾಶಗಂಗೆಯನು ಏಕರೂಪ ಮಾಡಿ
ಸಾಕಾರ ರತ್ನಗಿರಿಯೊಳಗಿರುಸುತ
ಓಂ ಕಾರರೂಪ ಶಿವ ಜೋಗಿರೂಪನೆ ತಾಳಿ
ಬೇಕೆಂದು ತಂದ ಶ್ರೀಗಂಗೆ ಕಥೆಯ ॥ ೨ ॥

**ವಚನ : ರಾಗ : ತೆಲುಗ ಕಾಂಬೋದಿ :**

ಗಂಗೆಯನು ತಂದ ವಚನವ ಕೇಳಿ ಜನವೆಲ್ಲ। ನಮ್ಮ
ಸಂಗಮೇಶ ದೈವಕಿನ್ನು ಮಿಗಿಲಿಲ್ಲ ॥ ಪಲ್ಲ ॥

ಗುರುವೆ ನಿಮ್ಮ ಚರಣಕಮಲ ಗುರುರಾಯ। ಮುಕ್ತಿ
ಪರಮ ಪದವನಿತ್ತು ರಕ್ಷಿಪುದು ಗುರುರಾಯ
ವರವನಿತ್ತು ಕರುಣಿಸುತಲಿ ಗುರುರಾಯ। ಗಂಗೆ
ಗಿರಿಜೆ ಜಗಳ ಕೇಳಿ ಶಿವನು ಗುರುರಾಯ ॥ ೧ ॥

ಎನ್ನ ಗುರುವೆ ಕೇಳ್ಯೆ ನಿಮ್ಮ ಗುರುರಾಯ। ಸಂ
ಪನ್ನೆ ನೀಲಲೋಚನೆಯು ಗುರುರಾಯ
ತನ್ನ ಪುರುಷ ಬಸವೇಶ್ವರಗೆ ಗುರುರಾಯ। ಮತ್ತೆ
ವರ್ಣಿಸಿ ಪೇಳಿದನು ಕಥೆಯ ಗುರುರಾಯ ॥ ೨ ॥

ಎಲ್ಲ ಲೋಕ ಭುವನಸ್ಥಲಕೆ ಗುರುರಾಯ। ಮುಕ್ತಿ
ಕಲ್ಯಾಣ ಪಟ್ಟಣದೊಳಗೆ ಗುರುರಾಯ
ಬಲ್ಲಿದ ಬಸವೇಶ ತನ್ನ ಗುರುರಾಯ। ಪ್ರಾಣ
ದೊಲ್ಲಭೆಯ ಕೇಳುತಿರ್ದ ಗುರುರಾಯ ॥ ೩ ॥



ನೀಲಾಂಬಿಕೆ ನೀನು ಪೇಳು ಎಲೆ ಹೆಣ್ಣೆ। ಶಿವನು
ಬಾಲೆ ಗಂಗೆ ತಂದ ಕಥೆಯ ಎಲೆ ಹೆಣ್ಣೆ
ಆಲಿಸುವೆನು ಕರ್ಣದಲ್ಲಿ ಎಲೆ ಹೆಣ್ಣೆ। ಮುಕ್ತಿ
ಶೀಲವಂತೆ ಭಕ್ತಿ ಕಾಂತೆ ಎಲೆ ಹೆಣ್ಣೆ ॥ ೪ ॥

ಅರಸಿ ನೀಲರತ್ನ ವೇಣಿ ಎಲೆ ಹೆಣ್ಣೆ। ನಮ್ಮ
ಪರಮ ಗಿರಿಜೆಗಂಗೆ ಜಗಳ ಎಲೆ ಹೆಣ್ಣೆ
ಹರನು ಸಂತೈಸಿದ ಕಥೆಯ ಎಲೆ ಹೆಣ್ಣೆ। ಅಮೃತ
ಸುರಿಯೆ ಕರ್ಣಗಳಿಗೆ ನೀನು ಎಲೆ ಹೆಣ್ಣೆ ॥ ೫ ॥

ಪುರುಷ ಬಸವೇಶ್ವರನ ನುಡಿಗೆ ನೀಲಮ್ಮ। ಬಹಳ
ಹರುಷವೇರಿ ಲಿಂಗದೊಳಗೆ ನೀಲಮ್ಮ
ಅರಸಿ ಗಂಗೆಗೌರಿ ಜಗಳ ನೀಲಮ್ಮ। ಗಂಡ
ಗೊರೆದು ಪೇಳಿದಳು ಕಥೆಯ ನೀಲಮ್ಮ ॥ ೬ ॥

ಮೂಲಮಂತ್ರ ಪ್ರಣಮರೂಪ ಬಸವಯ್ಯ। ಪೇಳ್ವೆ
ಲಾಲಿಸಿನ್ನು ರತ್ನಮಣಿಯೆ ಬಸವಯ್ಯ
ಆಲಿನಟ್ಟು ಲಿಂಗದೊಳಗೆ ನೀಲಮ್ಮ। ತನ್ನ
ಶೂಲಧರನಬ ಸ್ತುತಿ ಮಾಡಿದಳು ನೀಲಮ್ಮ ॥ ೭ ॥

ಶಿವನೆ ನಿಮ್ಮ ಸ್ತುತಿಯ ಮಾಳ್ಪೆ ಲಿಂಗಯ್ಯ। ಎನ್ನ
ಭವದ ಕರ್ಮಕಳೆದು ಸಲಹೊ ಲಿಂಗಯ್ಯ
ಯುವತಿ ಗಿರಿಜೆ ನೀವಲ್ಲದೆ ಲಿಂಗಯ್ಯ। ಇನ್ನು
ಭುವನದೊಳಗೆ ದೈವವಿಲ್ಲ ಲಿಂಗಯ್ಯ ॥ ೮ ॥

ಶಿವನ ಭಕ್ತ ಲಾಲಿಸಿನ್ನು ಬಸವಯ್ಯ। ಒಂದು
ನೆವದಿ ಬಂದ ಜಗಳ ಕತೆಯ ಬಸವಯ್ಯ
ವಿವರದಿಂದ ಕೇಳ್ದವರಿಗೆ ಬಸವಯ್ಯ। ಅಮೃತ
ದ್ರವಿಸುವುದು ಬಾಳುವಂತೆ ಬಸವಯ್ಯ ॥ ೯ ॥

ಸಂಗನ ಶರಣನೇ ಕೇಳು ಬಸವಯ್ಯ। ಶಿವನು
ಗಂಗೆ ತಂದ ಕತೆಗಳನು ಬಸವಯ್ಯ
ಸಂಗತ್ಯ ವಚನ ಪದದಿ ಬಸವಯ್ಯ ಶಿವನು। ಮೂ
ರಂಗದಲ್ಲಿ ಕೃತಿಯ ಕೇಳು ಬಸವಯ್ಯ ॥ ೧೦ ॥

ಮುಂದೆ ಕೇಳು ಮುಕ್ತಿಧರನೆ ಬಸವಯ್ಯ । ಭುವನ
ಕೊಂದು ರತ್ನ ರಜತಾದ್ರಿಯು ಬಸವಯ್ಯ
ಸಂದ ಶರಣ ಭಕ್ತಗಣದಿ ಬಸವಯ್ಯ । ಮುಕ್ತಿ
ಸಿಂಧು ನೀನೆ ಮುನಿಗಳೊಡೆಯ ಬಸವಯ್ಯ ॥ ೧೧ ॥

**ಪದನು :**

ವೃಷಭವಾಹನನೆ ಕೇಳು ಬಸವಯ್ಯ ಶಶಿಧರನ ಒಡ್ಡೋಲಗ
ಮುಸುಕಿ ಹತ್ತೆಂಟು ಕೋಟಿ ದೇವದೇವಾದಿಗಳು ಪಸರಿಸಿತು
ವಾಲಗದೊಳು ॥ ಪಲ್ಲ ॥

ದೇವಗಣ ಭಕ್ತಗಣವು ಬಸವಯ್ಯ ಕಾಮಪಿತರಜಹರಿಗಳು
ದೇವೇಂದ್ರ ಸುರಮುನಿಯು ದಿಕುಪಾಲಕರೆಲ್ಲ ತೀವಿಕೊಂಡಿಹುದೋಲಗದಿ
ಜಾವ ತಿಥಿ ಗಳಿಗೆಗಳನು ಹೇಳುವ ಜೋಯಿಸ ಬ್ರಸ್ಪತಿಗಳು
ಕೋವಿದ ನಂದಿ ಭೃಂಗಿ ವೀರಭದ್ರಾದಿಗಳು ತೀವಿಕೊಂಡಿಹುದೋಲಗದಿ ॥ ೧ ॥

ವಾಮಭಾಗದಲಿ ವಿಷ್ಣು ಬಲದಲ್ಲಿ ಆ ಮಹಾನವಬ್ರಹ್ಮರು
ವ್ಯೋಮಕೇಶರ ನಟ್ಟನಡುವೆ ನಿಸ್ಸೀಮನು ಭೂಮಿಯಾಕಾಶದೊಡೆಯ
ಸೋಮಸೂರ್ಯರು ಕೋಟಿಯು ನವಗ್ರಹರು ಸ್ತೋಮ ಸ್ತೋಮದಲ್ಲಿದ್ದರು
ಕೋಮಲಾಂಗದ ಮಂತ್ರಶಕ್ತಿಯರು ಭಕ್ತಿಯರು ಕಾಮಹರ ನೋಲಗದೊಳು ॥ ೨ ॥

ಕಿನ್ನರರು ಕಿಂಪುರುಷರು ಬಸವಯ್ಯ ಪನ್ನಗಧರರೆಲ್ಲರೂ
ಮುನ್ನವೋಲೈಸಿದ ಶರಣಭಕ್ತಾದಿಗಳು ಸನ್ನಿಧಿಯೊಳೊಪ್ಪುತಿಹರು
ಚೆನ್ನಬಸವಯ್ಯ ಕೇಳಿ ಗುರುರಾಯ ತನ್ನೊಳಗೆ ಒಂದು ನೆನೆದು
ಕನ್ನೆ ಗೌರಿಯ ನೋಡಿಯೆನ್ನ ಪ್ರಾಣವೆ ಎಂದು ಮನ್ನಿಸುತ ಮನೆಗೆ ಕಳುಹಿ ॥ ೩ ॥

ತೊಡೆಯ ಮೇಲಣ ಮಡದಿಯು ಗುರುರಾಯ ಒಡನೆ ಮುಂಡಾಡಿಯಪ್ಪಿ
ಪಡೆಯಲಿಲ್ಲವು ಗಿರಿಜೆ ತಿರುಕಮಕ್ಕಳನೆಂದು ನುಡಿದ ತನ್ನಾತ್ಮದಲ್ಲಿ
ಒಡವೆ ವಸ್ತುಗಳ ನೋಡಿ ಇನ್ನೊಬ್ಬ ಮಡದಿಯನು ತರುವೆನೆನುತ
ಗಡಿಬಡಿಸುತಿರ್ದನೊಡ್ಡೋಲಗವ ಕಳುಹಿದರೆ ತಡೆಯದೆ ಬಯಲಾದರು ॥ ೪ ॥

ಎಲ್ಲರನು ಕಳುಹಿಕೊಡುತ ಗುರುರಾಯ ಬಲ್ಲಿದ  ನಾರಂದನಾ
ಮೆಲ್ಲನೆ ಕೈವಿಡಿದು ಏಕಾಂತ ಸ್ಥಳದೊಳಗೆ ಅಲ್ಲಿ ಮೂರ್ತಗಳ ಮಾಡಿ
ಚೆಲ್ವ ನಾರದನೆ ಕೇಳು ನೀ ಮುನ್ನ ಎಲ್ಲ ರಾಜ್ಯಗಳ ಬಲ್ಲೆ
ಕಲ್ಲುಗುಂಡು ಗಿರಿಯು ಗವ್ವರದೊಳಗಿರುವ ಬಲ್ಲವರ ನೋಡಬೇಕು ॥ ೫ ॥



ಬೆಸಸಿದರೆ ಗುರುರಾಯಗೆ ನಾರಂದ ಮಿಸುನಿ ಹಾವುಗೆಯ ತಂದು
ಹೊಸೆದು ಜಡೆಗಳ ಮಾಡಿ ಭಸಿತ ಸರ್ವಾಂಗದಲಿ ವಿಷಯ ಹಾವುಗಳ ಧರಿಸಿ
ಎಸೆವ ಕಂಥೆಗಳ ತೊಟ್ಟು ಪಣೆಯೊಳಗೆ ಮಸಣ ಬೂದಿಗಳನಿಟ್ಟು
ಶಶಿಮುಖಿಯ ತರುವುದನು ಉಸುರದೆ ನಾರದಗೆ ಮುಸುಕಿಲಿ ಮಾಡಿಕೊಂಡು ॥ ೬ ॥

ತನುಮನದ ಪ್ರಾಣಲಿಂಗಿ ಕೇಳಿನ್ನು ಮುನಿಯವತಾರದ ಜೋಗಿ
ಜನವಶ್ಯ ರಾಜವಶ್ಯಗಳೆಂಬ ಬೂದಿಯನು ಕೊನೆಯುಗುರಿನೊಳಗಡಸಿ
ದಿನ ವಾರ ಮೋರ್ತಗಳನು ತಾ ತನ್ನ ಮನದೊಳಗೆ ತಿಳಿದುಕೊಳುತ
ಘನಗುರು ಸಂಗಮೇಶ್ವರಲಿಂಗ ತೆರಳಿದನು ಮುನಿ ನಾರಂದನ ಕೂಡಿ ॥ ೭ ॥

**ಸಂಗತ್ಯ :**

ಶೂಲಿಯ ಶರಣನೆ ಲಾಲಿಸು ಮುಕ್ತಿಗ
ಶಾಲಯಕಧಿಪತಿಯರಸಾ
ಮೂಲೋಕದರಸಿಯು ಬಾಲೆ ಶ್ರೀಗೌರಿಯ
ಮೇಲೆ ಗಂಗೆಯ ತಂದ ಶಿವನು ॥ ೧ ॥

ರೂಪಿಲ್ಲದವನಾ ಮಗನ ಸುಖನಾತ್ಮಜಿ
ನೆಪದಿ ರಕ್ಷಿಪಳವಳಾ
ಅಪರಂಪರ ಶಿರದೊಳಗಿಟ್ಟ ಗಂಗೆಯ
ಗೋಪತಿಯರಸ ಕೇಳ್ಪುರುಷ ॥ ೨ ॥

ನಾಲ್ಕೊಂದು ಮಕ್ಕಳ ಪಡೆದ ಮಹಿಮೆಯೊ
ಶಾಕಾರವಾದನಾತ್ಮಜನ
ಸೋಕಲು ಪಾಪನಿರ್ಲೇಪವ ಮಾಡಿದ
ಓಂಕಾರ ಪ್ರಣಮಸ್ವರೂಪ ॥ ೩ ॥

ಸಂಗನಬಸವಯ್ಯ ಲಿಂಗಮೂರುತಿ ಕೋಟಿ
ಅಂಗಜ ರೂಪಿನ ಜೋಗಿ
ಬಂಗಾರ ಪುತ್ತಳಿ ಗಂಗೆಯ ಶಿವ ತಂದ
ಶೃಂಗಾರ ಕಥೆಯ ಕೇಳುವುದು ॥ ೪ ॥

ಮೆಟ್ಟುವ ಹಾವುಗೆ ಮತಿಯೊಳದೃಶವ
ಇಟ್ಟಾನು ತನ್ನಯ ಪಣೆಗೆ
ಪಟ್ಟಪಟ್ಟಾವಳಿ ಜಿಬಿ ನಾಣ್ಯದ ಕಂಥೆ
ತೊಟ್ಟಾನು ಮಲೆಯಾಳ ಜೋಗಿ ॥ ೫ ॥

ಆರಾರಿಗಳವಲ್ಲ ಅಪರಂಜಿ ಮುನಿರಾಯ
ಭಾರಿ ಕಿನ್ನರಿಗಳ ಪಿಡಿದು
ಮೂರುಲೋಕದ ಮುನಿಗಳ ಗುರುನಾಥನು
ಆರು ಶಾಸ್ತ್ರಗಳಳವಡಿಸಿ ॥ ೬ ॥

ಚಿಟ್ಟಿಗ ನಾರಂದ ಮುನಿಗೊಂದು ವೇಷವ
ಮುಟ್ಟಿ ತಾ ಧರಿಸಿದ ಶಿವನ
ತೊಟ್ಟ ಎರಳೆಚರ್ಮ ಸುಟ್ಟ ಬೂದಿಯ ಲೇಪ
ಬಿಟ್ಟಾನವನ ಕಿರುಜಡೆಯ ॥ ೭ ॥

ಬಗೆಬಗೆ ರೂಪನು ನಗೆಯಿಂದ ಧರಿಸಿದ
ಹಗಲುಗತ್ತಲೆ ಅದೃಶ್ಯಗಳ
ಉಗುರೊಳಗಡಗಿಸಿ ನಿಗಮಕಗೋಚರ
ನಗೆ ಮುಖದಲಿ ತೆರಳಿದನು ॥ ೮ ॥

ಮಾರಹರನು ಚಿಕ್ಕನಾರಂದ ಮುನಿಗೂಡಿ
ಮೇರು ಮಂದರಗಳನಿಳಿದು
ಈರೇಳು ಲೋಕದ ನವಭಾಂಡಪೃಥ್ವಿಯಾ
ಘೋರಾರಣ್ಯಗಳ ನೋಡುತಲಿ ॥ ೯ ॥

ನಡದಾನು ರಾಜ್ಯದ ಗಡಿಸೀಮೆಯ ದಾಟಿ
ಬೆಡಗು ತಾಣಗಳ ನೋಡುತಲಿ
ನಡುರಾಜ್ಯ ಗಿಡುರಾಜ್ಯ ಪಡೆರಾಜ್ಯ ಪರರಾಜ್ಯ
ಬಡಗು ರಾಜ್ಯಗಳ ನೋಡುತಲಿ ॥ ೧೦ ॥

ಉರಲೋಕ ನರಲೋಕ ಸುರಲೋಕ ಹರಲೋಕ
ಪರಲೋಕ ಪರಬ್ರಹ್ಮಲೋಕ
ತಿರುಗೂತ ಬರಗೂತ ಸೊರಗೂತ ಬಳಲೂತ
ಸರವಾರಗಳ ನೋಡುತಲಿ ॥ ೧೧ ॥

ತೆಗ್ಗುತೆವರನೆ ಮೆಟ್ಟಿ ಬಗ್ಗೆಬಾರದ ಗವಿ
ಎಗ್ಗಳ ಗಿಡುಗಂಟಿಯೊಳಗೆ
ಮುಗ್ಗುತ ಎಡವುತ ಮುನಿಮಹಾಜೋಗಿಯು
ನುಗ್ಗಾಗಿ ನುಡಿದ ನಾರದಗೆ ॥ ೧೨ ॥

ವರಮುನಿ ನಾರಂದ ಸರವಾರ ಸುಡಲಿನ್ನು
ಶರಿರವು ಬಳಲಿ ಬಾಯಾರಿ
ಹರಣಗಳಳಿವುತ ಒರಗೂದುಚಿತವೇನು
ತಿರುಗುವಾ ಬಾ ನಮ್ಮ ಸ್ಥಲಕೆ ॥ ೧೩ ॥



ಎಲವೋ ನಾರಂದ ಮಲೆಯೋಳ್ಯಾತಕೆ ಬಂದೆ
ಬಲಗಳಳಿದು ಬಳಲಿದರೆ
ಹಲವು ವಿಹಾರದಿ ನೆಲೆಯರಿದುಣಿಸುವ
ಲಲನೆಯರುಂಟೆ ಈ ಸ್ಥಲದಿ ॥ ೧೪ ॥

ನಾಡು ದೇಶಗಳನು ನೋಡಿ ಬಳಲಿದೆವು ಕಾ
ಡಾಡಡವಿಗಳಸುಲಿನ್ನು
ಬೇಡಿದ ಬಯಕೆಯ ನೀಡುವರಾರುಂಟು
ಮೂಢ ನಾರಂದ ಬಾ ಮನಿಗೆ ॥ ೧೫ ॥

ಬಾರೆಲೊ ನಾರಂದಾ ಊರು ಸೀಮೆಗಳೊಳು
ನೀರು ಹಾರಗಳುಂಟೆ ನಮಗೆ
ದಾರಿ ಬಿಟ್ಟೆಯ ಸುಡು ಅರಣ್ಯದೊಳಗೊಬ್ಬ
ನಾರೀಯರನು ಕಂಡುದಿಲ್ಲ ॥ ೧೬ ॥

ಇತ್ತ ತಿರುಗು ನಾರಂದಮುನಿ ಹೋಗುವ
ಅತ್ತಣ ಗಿರಿಗಳು ಸುಡಲಿ
ತುತ್ತು ಆಹಾರಗಳಿಲ್ಲವೆಂದರೆ ಮುನಿ
ಉತ್ತರಗಳ ಕೊಟ್ಟ ಶಿವಗೆ ॥ ೧೭ ॥

**ಪದನು :**

ಕೇಳು ಕೇಳೆನ್ನ ಗುರುವೆ ಎನ್ನ ಜನ್ಮಪಾವನದ ಮೂರ್ತಿ ನೀನು
ಭಾಳಲೋಚನ ಶಿವನ ಬೇಡಿದರೆ ಏನುಂಟು ಹಾಳು ಅರಣ್ಯದೊಳಗೆ ॥ ಪಲ್ಲ ॥

ಮುನಿಯ ವೇಷವ ತಾಳಲು ನಮಗಿನ್ನು ತನುವಿಗೆಲ್ಲಿಯದು ಸುಖವು
ಕೊನರು ತರಗೆಲೆಗಳನು ಆಹಾರಗಳ ಮೆದ್ದು ವನದೊಳಗೆ ಚರಿಸಬೇಕು
ತನುಮನವ ದಂಡಿಸುತಲಿ ಗುರುರಾಯ ಮನವನೊಬ್ಬುಳಿಯ ಮಾಡಿ
ಹಾನಿಹರಿಗಳಿಗಂಜಿ ಹೆದರದೆ ನಾವಿನ್ನು ಘನರಾಜ್ಯ ನೋಡಬೇಕು ॥ ೧ ॥

ಉಣ್ಣಲೂಟವ ಬೇಡಲಿಕೆ ಗುರುರಾಯ ಹೆಣ್ಣಿನ ಅರಮನಿಗಳಿಗೆ
ಹಣ್ಣು ಹಂಪಲಗಳ ಸಲಿಸುತಲಿ ಅಡವಿ ಅರಣ್ಯಗಳ ನೋಡಬೇಕು
ಕಣ್ಣುಮೂರುಳ್ಳ ಶಿವನೆ ಕೈಕಾಲು ದಣ್ಣನೆ ದಣಿಯಬೇಕು
ಬೆಣ್ಣೆಮುದ್ದೆಗಳಾಗಿ ಇದ್ದಂತ ಶರೀರಗಳ ಸಣ್ಣಿಸಿ ಕಳೆಯಬೇಕು ॥ ೨ ॥

ಪರದೇಶಿಯಾದ ಮೇಲೆ ಗುರುರಾಯ ಶರೀರಕೆಲ್ಲಿಯದು ಸುಖವು
ದೊರಕಿದುದನುಂಡುಕೊಂಡು ಗುರುರಾಯ ಮತ್ತೊರಗಬೇಕೆಲ್ಯಾದರು
ಸರವರವ ನೋಡಬೇಕು ಗುರುರಾಯ ಪರಬ್ರಹ್ಮ ಋಷಿಗಳುಂಟು
ಶಿರವ ತಲೆಕೆಳಕಾಗಿ ಮಾಡುವ ತವಸಿಗಳ ಚರಣಗಳ ನೋಡಬೇಕು ॥ ೩ ॥

ಬಿಸಿಯ ಕೋಡ್ಗಲ್ಲ ಮೇಲೆ ಗುರುರಾಯ ಮಸೆದ ಕೂರಲಗನಿಟ್ಟು
ಮಿಸುಕದೆ ಕೈಕಾಲು ತಲೆಕೆಳಗೆ ಮಾಡುವರ ಕುಶಲಗಳ ನೋಡಬೇಕು
ದಶವಾಯುಗಳು ಸೂಸದೆ ಗುರುರಾಯ ಉಸುರ ಉನ್ಮನಿಯಲಿಟ್ಟು
ಭಸಿತರುದ್ರಾಕ್ಷಿಗಳ ಮುನಿಗಳ ನೋಡಿದರೆ ಹಸುತೃಷೆಗಳಿಲ್ಲ ನಮಗೆ ‖ ೪ ‖

ಶರಣು ಶರಣಾರ್ಥಿ ಗುರುವೆ ನೀ ಮುನ್ನ ಅರಿಯದಾ ಋಷಿಗಳುಂಟೆ
ಮೆರೆವ ಮೂವತ್ತಾರ್ಕೋಟಿ ಮುನಿಗಳು ನಿಮ್ಮ ಚರಣಕಮಲದಲಿರುವರು
ತೆರಳಿ ಸರವರವ ಪೊಕ್ಕು ನೋಡುವ ಪರಿಗಳನು ಬಲ್ಲೆವೇನ
ಪರಮಗುರು ಸಂಗಮೇಶ್ವರ ನೀನೆ ಬಲ್ಲೆಂದು ಚರಣಕೆರಗುತ ನುಡಿದನು ‖ ೫ ‖

**ವಚನ :**

ಮೂರು ಮೂರ್ತಿಗಳವಲ್ಲ ನೀ ಗುರುರಾಯ । ಮಹಾ
ಮೇರುಗಿರಿಯನಿಳಿದು ಬಂದೆ ಗುರುರಾಯ
ಘೋರಾರಣ್ಯಗಳ ನೋಡಿತಾಲೆ ಗುರುರಾಯ । ನಿಮ್ಮ
ಗಾರುಡಗಳು ತಿಳಿಯವೆಮಗೆ ಗುರುರಾಯ ‖ ೧ ‖

ಗೆಜ್ಜೆಕಾಲ ಚಿಕ್ಕಮುನಿ ಗುರುರಾಯ । ನನ್ನ
ಅಜ್ಜು ತಿಳಿದು ಮನವ ನೋಡು ಗುರುರಾಯ
ವಜ್ರದೇಹವಸ್ತು ನೀನು ಗುರುರಾಯ । ನಿನ್ನ
ಹೆಜ್ಜೆ ಹಿಡಿದು ನಾನು ಬರುವೆ ಗುರುರಾಯ ‖ ೨ ‖

ನಾರಂದನ ನುಡಿಗೆ ನಗುತ ಗುರುರಾಯ । ಮುಂದೆ
ಘೋರಾರಣ್ಯಗಳನು ಹೊಕ್ಕು ಗುರುರಾಯ
ಕಾರುಮಿಂಚಿನ ಬೆಳಗಿನಂತೆ ಗುರುರಾಯ । ಅಲ್ಲಿ
ವಾರಿರತ್ನಗಿರಿಯ ಕಂಡು ಗುರುರಾಯ ‖ ೩ ‖

ಆಗ ಬೇಗದಲ್ಲಿ ನಡೆದು ಗುರುರಾಯ । ಬಯಕೆ
ಜಾಗ ಇರವನರಸುತಲಿ ಗುರುರಾಯ
ಸಾಗಿ ಮುಂದಕ್ಕಡಿಗಳಿಡುತ ಗುರುರಾಯ । ಪುಷ್ಪ
ರಾಗಗಿರಿಯ ಕಂಡ ಶಿವನು ಗುರುರಾಯ ‖ ೪ ‖

ಚಿತ್ರಕೂಟ ಪರ್ವತಗಳನು ಗುರುರಾಯ । ವೇದ
ಶಾಸ್ತ್ರಗಳಿಗೆ ನಿಲಕದಿಹವು ಗುರುರಾಯ
ಕ್ಷೇತ್ರ ನವರತ್ನಗಿರಿಯು ಗುರುರಾಯ । ಜಗದ
ಸೂತ್ರಧಾರಿ ನೋಡಿ ಕಂಡ ಗುರುರಾಯ ‖ ೫ ‖



ಮೂರು ಪರ್ವತಗಳ ಸುತ್ತ ಗುರುರಾಯ । ರತ್ನ
ವಾರಿಧಿಯ ನಡುಮಧ್ಯದಲ್ಲಿ ಗುರುರಾಯ
ಆರು ಮೂರು ನವಕೋಟಿಗಳು ಗುರುರಾಯ । ಬ್ರಹ್ಮ
ನಾರಾಯಣರಿಗಳವಲ್ಲವು ಗುರುರಾಯ ‖ ೬ ‖

ಅಲ್ಲಿ ಸ್ಥಳವ ನೋಡುವೆನೆಂದು ಗುರುರಾಯ । ಶಿವನು
ಕಲ್ಲು ಮುಳ್ಳು ಹುಲ್ಲಿನೊಳಗೆ ಗುರುರಾಯ
ಹಳ್ಳ ಹೊಳೆಯ ಹಿಡಿದು ಬರುತ ಗುರುರಾಯ । ಮುಂದೆ
ಮಲ್ಲಿಗೆ ವನವ ಕಂಡ ಗುರುರಾಯ ‖ ೭ ‖

ಶೃಂಗಾರದ ತೋಟದೊಳಗೆ ಗುರುರಾಯ । ರತ್ನ
ಬಂಗಾರದ ಬೊಂಬೆ ಇರಲು ಗುರುರಾಯ
ಲಿಂಗಪೂಜೆ ಪರಮಜ್ಞಾನಿ ಗುರುರಾಯ । ಮುಕ್ತಿ
ಯಂಗನೆಯ ಕಂಡ ಶಿವನು ಗುರುರಾಯ ‖ ೮ ‖

ನೀರೆಯೊಬ್ಬ ಸತಿಯು ಅಲ್ಲಿ ಗುರುರಾಯ । ವನಕೆ
ನೀರ ಬಿಟ್ಟು ಪುಷ್ಪವೆತ್ತಿ ಗುರುರಾಯ
ಹಾರಕಮಲಗಳ ಧರಿಸಿ ಗುರುರಾಯ । ತನಗೆ
ಮೂರು ವೇಳೆ ಶಿವನ ಪೂಜೆ ಗುರುರಾಯ ‖ ೯ ‖

ಜಾಜಿಮಲ್ಲಿಗೆಗಳ ಹಾರ ಗುರುರಾಯ । ತನ್ನ
ಪೂಜೆ ಕಳಸಕುಚದ ಮೇಲೆ ಗುರುರಾಯ
ಮೂಜಗದ ಶಿವನ ಪೂಜೆ ಗುರುರಾಯ । ಮಾಡು
ಸೋಜಿಗವ ಕಂಡ ಶಿವನು ಗುರುರಾಯ ‖ ೧೦ ‖

ಮನದ ಬಯಕೆ ಸೇರಿತೆಂದು ಗುರುರಾಯ । ಅವಳ
ವನದ ತಂಪಿನೊಳಗೆ ನಿಂದು ಗುರುರಾಯ
ಮನೆಯ ಹಂಬಲಗಳ ಬಿಟ್ಟು ಗುರುರಾಯ । ಚಿಕ್ಕ
ಮುನಿಯ ಕೂಡೆ ಮಾತಾಡಿದನು ಗುರುರಾಯ ‖ ೧೧ ‖

ತನುಮ ನಾರಂದೀಶ ನೋಡು ಮುನಿರಾಯ । ಇವಳ
ಕೊನರು ಕೊಬ್ಬು ಚೆಲ್ವಿಕೆಗಳ ಗುರುರಾಯ
ವನಿತೆ ಗಿರಿಜೆ ಪಾರ್ವತಿಯು ಮುನಿರಾಯ । ಇವಳ
ಕೊನೆಯ ಉಗುರು ಹೋಲಲರಿಯಾಳು ನೀ ರಾಯ ‖ ೧೨ ‖

ಒಡೆಯ ನೀವು ನುಡಿದರೇನು ಗುರುರಾಯ । ನಮ್ಮ
ಪಡೆದ ಗಿರಿಜೆಗಿವಳು ಸರಿಯೆ ಎಲೆ ದೇವ
ಅಡವಿ ಚೆಂಚಕಾಡ ಮನುಜಳೆಲೆ ದೇವ । ಒಂದು
ಬೆಡಗ ಮಾಡಿ ತಿರುಗುತಿಹಳು ಎಲೆ ದೇವ ॥ ೧೩ ॥

ಭೂಪಾರಾವ ತಿರುಗಿದೆವೊ ಮುನಿರಾಯ । ಇಂಥ
ರೂಪ ಸತಿಯ ಕಂಡುದಿಲ್ಲ ಮುನಿರಾಯ
ನೋಂಪಿ ನೋಮತಲ್ಲದಿವಳು ಮುನಿರಾಯ । ಜಗದ
ಪಾಪಿಗಳಿಗೆ ಸಲುವಳೇನೊ ಮುನಿರಾಯ ॥ ೧೪ ॥

ಕಣ್ಣುಗೆಟ್ಟು ನುಡಿಯೆ ಸಲ್ಲದೆಲೆ ದೇವ । ಸುಟ್ಟ
ಸುಣ್ಣ ಮಾರುವರ ಮಗಳು ಎಲೆ ದೇವ
ತಣ್ಣೀರೊಳಗೆ ಹುಟ್ಟಿ ಬೆಳೆದಳೆಲೆ ದೇವ । ಮೂರು
ಕಣ್ಣ ನಿಮಗೆ ಸಲ್ಲಳಿವಳು ಎಲೆ ದೇವ ॥ ೧೫ ॥

ಎಳೆಯ ಬಾಲ ನೀ ಕೇಳೆಲೊ ಮುನಿರಾಯ । ನಿನಗೆ
ತಿಳಿಯದಿನ್ನು ಇವಳ ಮಹಿಮೆ ಮುನಿರಾಯ
ಕಳೆಯು ಜೀವರತ್ನ ಇವಳು ಮುನಿರಾಯ । ನೋಡಿ
ಬಳಲಿಕೆಗಳ ಮರೆದೆವಿಲ್ಲಿ ಮುನಿರಾಯ ॥ ೧೬ ॥

ಬಾಡಿ ಬಳಲಿ ಕಣ್ಣುಗೆಟ್ಟಿರೆಲೆ ದೇವ । ಕಪ್ಪೆ
ಏಡಿ ತಿಂಬವರ ಮಗಳು ಎಲೆ ದೇವ
ಕೋಡಿ ಮಗಳು ಎಂದು ತಿಳಿದು ಎಲೆ ದೇವ । ಅಡವಿ
ಗೂಡಿಸಿನ್ನು ಬಿಟ್ಟರಿವಳ ಎಲೆ ದೇವ ॥ ೧೭ ॥

ದಡ್ಡ ಮನುಜ ನಾರಂದನೆ ಮುನಿರಾಯ । ಇವಳು
ದೊಡ್ಡವರ ಮಗಳಾದಾಳೊ ಮುನಿರಾಯ
ದೊಡ್ಡತೋಟ ಖಾಸಭಾಗ ಮುನಿರಾಯ । ಲಿಂಗ
ದೊಡ್ಡೋಲಗವ ನೋಡು ನೀ ಮುನಿರಾಯ ॥ ೧೮ ॥

ಸೃಷ್ಟಿಗೀಶ ಶಿವನೆ ಕೇಳು ಗುರುರಾಯ । ಇವಳು
ಕೆಟ್ಟವ್ಯಾಳ್ಯೆ ಜನಿಸಿದವಳು ಎಲೆ ದೇವ
ಪಟ್ಟುಗುಡುಮ ಪರದೇಶಿಯು ಗುರುರಾಯ । ಜನನಿ
ಬಿಟ್ಟು ಹೋದರಡವಿಯೊಳಗೆ ಎಲೆ ದೇವ ॥ ೧೯ ॥

ದಾಂಟಿಸಿದರೆ ಗಿರಿಯ ಸೇರಿ ಎಲೆ ದೇವ । ಶಸ್ತ್ರ
ಈಟಿ ಬಿಲ್ಲು ಬಾಣಗಳನು ಎಲೆ ದೇವ



ಕಾಟಗಾರ ಕೂಡಿಕೊಂಡು ಎಲೆ ದೇವ । ಇವಳ
ಬೇಟೆ ಅರ್ತಿಗಳನು ನೋಡು ಎಲೆ ದೇವ ॥ ೨೦ ॥

**ಕಂದ**

ಸಿದ್ಧರಿಬ್ಬರು ಕೂಡಿ ಮದ್ದು ಮಂತ್ರವ ಕಲಿತು
ಶಬ್ದಗಳಾಲಿಸುತ ನೋಡುತಿರಲು
ಲುಬ್ಧ ಕಾಟಕರು ಪಂದಿಯ ಆರ್ಭಟಿಸುತಲಿ
ಗದ್ದಲಿಸಿ ಆಡುತಿರೆ ಬೇಂಟೆಗಳನು ॥ ೧ ॥

ರೂಢಿಗೀಶ್ವರ ಶಿವನು ನಾಡುದೇಶಗಳ ತಿರಿಗಿ
ನೋಡುತಿರೆ ವಿಸ್ಮಯ ಶ್ರೀಗಂಗೆಯ
ಕಾಡುಚಂಚರ ಬೇಂಟೆಗಳ ಕಂಡು ಪರಶಿವನ
ಕೂಡೆ ಬಣ್ಣಿಸಿ ಪೇಳುತಿರ್ದ ಮುನಿಪ ॥ ೨ ॥

**ಪದನು**

ನೋಡು ನೋಡೆನ್ನ ಗುರುವೆ ನೋಡಿವಳ ಗಾಡಿಕಾರ್ತಿಯ ಬೇಂಟೆಯ
ಕೂಡಿರ್ದಮೃಗದೊಳಗೆ ಓಡಾಡಿಸೆದಡೆ ಮೂಡಿಹಾಯ್ದವು ಬೆನ್ನಿಲಿ ॥ ಪಲ್ಲವಿ ॥

ಚಲುವ ಚಲ್ಲಣವನುಟ್ಟು ಕಾಸಿಯಿಂದುಲಿವ ಕಂಜರವ ಕಟ್ಟಿ
ಲಲಿತ ಶ್ರೀಗಂಧವನು ಮೈಯೊಳಗೆ ಪೂಸಿಕೊಂಡಲಗು ಆಯುಧವ ಪಿಡಿದು
ಗುಲಗಂಜಿದಂಡೆಗಳನು ತಾ ತನ್ನ ತಲೆಮೊಲೆಗೆ ಸಿಂಗರಿಸುತ
ಮಲೆಯು ಮಂಜಿರ ಗಿರಿಗಂಹ್ವಾರಗಳ ಪೊಕ್ಕು ಹಲವು ಬಲೆಗಳ ಬೀಸುತ ॥ ೧ ॥

ಮೀರಿ ಕಾಸಿಗಳನುಟ್ಟು ಅವಳಿನ್ನು ವಾರಿಚೆಮ್ಮುರಿಯ ಸುತ್ತಿ
ಈರೇಳು ಭುವನಗಳು ಮರುಳಾಗಿ ಬೀಳ್ವಂತೆ ಸೇರಿ ತಿಲಕವನಿಡುತಲಿ
ಮಾರ ಮನ್ಮಥನ ಬಿಲ್ಲು ಕಣ್ಣೆಂಬ ಕಾರಮಿಂದಿನ ಬಾಣದಿ
ಹಾರುವ ಪಕ್ಷಿಗಳ ತೋರಿ ತಾನೆಸೆದರೆ ಧಾರುಣಿಗೆ ಒರಗುತಿಹವು ॥ ೨ ॥

ಜಲ್ಲಿಮೃಗ ಸಾರಂಗನ ಅಪ್ಪಳಿಸಿ ಕೊಲ್ಲುವ ಹುಲಿ ಕರಡಿಯು
ಬಲ್ಲಿದ ಮದದಾನೆ ಬರುವ ಸಂಭ್ರಮನೋಡಿ ಬಿಲ್ಲ ಜೇವಡೆಗೈವುತ
ಗಲ್ಲಿಸಿ ಎಸೆದಡಿನ್ನು ಗಾಯದೊಳಗೆಲ್ಲವೊರಗಲು ಧರಣಿಗೆ
ಹಲ್ಲುಟೊಂಕವು ಕರುಳುಖಂಡಗಳು ಸುರಿವುತಲಿ ಚೆಲ್ಲಿದವು ರಕ್ತಮಳೆಯ ॥ ೩ ॥

ಕಾಡಪಂದಿಗಳ ಕಂಡು ಕಂಗೆಟ್ಟು ಬೇಡ ನಾಯಕರೋಡಲು
ಕೂಡೆ ಬೆಂಬಲವಾಗಿ ಬಂದು ಸೀಳಿದವಾಗ ಹೇಡಿ ಕಾಟಕರ ಕುಲವ
ನಾಡಾಡಿ ಹಂದಿಯಲ್ಲ ಶ್ರೀಕೃಷ್ಣ ಆಡಿದನು ವರಹರೂಪಾ
ಮೂಢ ನರಕಾಸುರನ ಕೊಂದು ಸೀಳಿದನೆಂಬ ರೂಢಿಗಚ್ಚರಿಯಾಯಿತು ॥ ೪ ॥

ಮಂದಿಗಳ ಸೀಳಿಸೀಳಿ ಅಪ್ಪಳಿಸಿ ಕೊಂದು ಕೊಲೆಗಳನಾಡುತ
ಪಂದಿಯೆಲ್ಲವು ಕೃಷ್ಣರೂಪಾದ ನಮಗಿನ್ನು ಬಂದಿತು ಪ್ರಳಯವೆನುತ
ನಿಂದಿರದೆ ಓಡಿ ಬರುತ ಕಾಟಕರು ಬಂದು ಪಾದಕ್ಕೆರಗಲು
ಇಂದುಮುಖಿ ತನ್ನಹಸ್ತವ ನೀಡಿ ನೋಡಿದರೆ ಕುಂದಣ ಪರಿಯಾಯಿತು ॥ ೫ ॥

ಎಡಬಲನ ಕೂಡಿಕೊಳುತ ಆ ಕ್ಷಣದಿ ನಡೆದಳಾ ಹಂದಿ ಮೇಲೆ
ಬಿಡುಬಿಡು ನಾಯಿಗಳ ಒಡನೆ ತೂರಿದಳಾಗ ಸಿಡಿಲ ಮರಿಯಾರ್ಭಟದಲಿ
ಗುಡುಗುಡಿಸಿ ಆರ್ಭಟಿಸುವ ಪಂದಿಯ ಪಡೆಯ ದಂಡುಗಳನೆಲ್ಲ
ತುಡಕಿ ಎದೆಗುಂಡಿಗೆಯನಿರಿದು ಕೆಡಹಿದಳಾಗ ಗಡಿನಾಡ ಬೇಂಟೆಗಾರ್ತಿ ॥ ೬ ॥

ಬೊಬ್ಬೆಯಬ್ಬರಗಳಿಂದ ಶ್ರೀಗಂಗೆ ಹೆಬ್ಬುಲಿಯ ಮಾರ್ಬಲಗಳಾ
ತಬ್ಬಿಬ್ಬುಗಳ ಮಾಡಿ ಸೀಳಿ ಕೆಡಹಿದಳಾಗ ಕೊಬ್ಬ ಹರಿಯಿತು ನೆಲದೊಳು
ಇಬ್ಬದಿಯ ಜನಗಳೆಲ್ಲ ಭಲಭಲರೆ ಹಬ್ಬ ನಮಗಾಯಿತೆನುತ
ಒಬ್ಬಿಬ್ಬರುಳಿಯದೆ ಎಲ್ಲ ಜನರೊಡಗೂಡಿ ಉಬ್ಬಿ ಮುಂದಕೆ ನಡೆವುತ ॥ ೭ ॥

ಅಡವಿಜೀವಿಗಳ ಕೊಂದು ಮುಂದಕ್ಕೆ ನಡೆದಳು ಹೊಳೆಯ ತಡಿಗೆ
ತೊಡಕುಬಲೆಗಳ ಬೀಸಿ ಜಲಚರವ ಕೊಲುವಂಥ ಸಡಗರವ ನೋಡು ಗುರುವೆ
ಒಡವೆವಸ್ತುಗಳ ತೆಗೆದು ಮೇಲಿಂದ ಮಿಡಿದು ಹಾರಲು ಮಡುವಿಗೆ
ಕಡಲೊಳಗೆ ಇದ್ದಂಥ ಜಲಚರಾದಿಗಳೆಲ್ಲ ಗಡಬಡಿಸಿ ಕಂಗೆಡುತಲಿ ॥ ೮ ॥

ಬಿಟ್ಟು ಬಲೆಗಳ ಹಾಸುತಾ ಗಾಣದೊಳಗಿಟ್ಟಳು ಮಧುಮಾಂಸವ
ಎಷ್ಟು ಜೀವನವೆಲ್ಲ ತಿನಬಂದು ಸಿಲ್ಲಿದವೊ ಕಟ್ಟಿದಳು ಉರಿಲಿನೊಳಗೆ
ಕೆಟ್ಟ ಮೋರೆಯ ಮೊಸಳೆಯ ಜಲದೊಳಗೆ ಬೆಟ್ಟದಂಥಾ ಪ್ರಾಣಿಯು
ಕೃಷ್ಣಾವತಾರದ ಮತ್ಸ್ಯಕೂರ್ಮಾದಿಗಳ ದಟ್ಟಿಸಿಯೊರಗಿಸಿದಳು ॥ ೯ ॥

ಹರುಗೋಲುಗಳನೇರುತ ತಾ ತನ್ನ ಸರಿಯವರ ಕೂಡಿಕೊಳುತ
ಗಿರಗಿರನೆ ತಿರಿಗಿ ಹುಯ್ಯಲ ಬೊಬ್ಬೆಗಳ ಮಾಡಿ ಸರಳುಸರಳೆಸೆದಾಡುತ
ಅರರೆ ಭಲಭಲರೆನುತಲಿ ಪುಟ್ಟಗಳ ತುರಗವಾಟದಿ ಓಡಿಸಿ
ಅರ್ತಿಯಾನಂದಗಳ ನೋಡುತಲಿ ಜಲಚರವ ಹೊರಿಸಕೊಳುತಾ ನಡೆದಳು ॥ ೧೦ ॥

ಇಂತು ಬೇಂಟೆಗಳನಾಡಿ ಶ್ರೀಗುರುವೆ ಅನಂತ ಜೀವಿಗಳ ಕೊಂದು
ಮುಂತೆ ತಮ್ಮಯ ತೋಟದೊಡ್ಡಿ ಗುಡಿಸಿಲಿನೊಳಗೆ ಸಂತೈಸಿಕೊಂಡಿರುವಳು
ಇಂತಿವಳ ಲಿಂಗಪೂಜೆ ಸುಲಿನ್ನು ಅಂತಕನ ಗುರುಸ್ವಾಮಿಯು
ಅಂತುಕಾರಣದಿಂದ ಅಡವಿಯೊಳು ಬಿಸುಟರು ತಾಂತ್ರಿಕ ಜೋಗಿ ಕೇಳು ॥ ೧೧ ॥

ನಾರದನ ನುಡಿಗಳಿನ್ನು ಗುರುವಿಂಗೆ ಸರಿಬಾರವು ಮನಸಿಗೆ
ನೀರ ಬೊಬ್ಬುಳಿಯ ಸ್ತ್ರೀಯಳ ಕಂಡು ಮನಸೋತು ಮೀರಿಹುದು ಕಾಮತತ್ವ



ಆರ ಮಾತನು ಕೇಳದೆ ಗುರುರಾಯ ಸೇರಿ ಸನ್ನಿಧಿಗೆ ಬಂದು
ಸಾರಿ ಗುರುಸಂಗಮೇಶ್ವರಲಿಂಗ ನುಡಿಸಿದನು ಜಲಜಕುಲದ ಸ್ತ್ರೀಯಳ ॥ ೧೨ ॥

## ಸಂಗತ್ಯ

ಚಿಕ್ಕಮುನಿಯನು ಕೂಡಿ ಪೊಕ್ಕಾನು ತೋಟವ
ಮುಕ್ಕಣ್ಣ ಮುನಿ ಮಹಾಜೋಗಿ
ಸಕ್ಕರೆವಿಲ್ಲಿನ ಕೋಟಿ ಮನ್ಮಥರೂಪ
ಚಕ್ಕಂದ ಚದುರೆಯೊಳ್ ನುಡಿದ ॥ ೧ ॥

ಮಲ್ಲಿಗೆ ಮುಡಿಯೋಳಮ್ಮನಥನರಗಿಳಿಯೆ
ನಲ್ಲನಾಯಕರುಂಟೆ ನಿನಗೆ
ಹುಲ್ಲೆ ಕರಡಿ ಸಿಂಹ ಶಾರ್ದೂಲ ಮೃಗ ನಿನ್ನ
ಕೊಲ್ಲದಿಹವೆ ಗೋಣಮುರಿದು ॥ ೨ ॥

ತೋಟಗಾರತಿ ಕೇಳು ಕೋಟಿಚಂದ್ರರು ನಿನ್ನ
ನೋಟವ ಪೋಲ್ವರಿಲ್ಲ
ಬೇಟೆಯನಾಡಲು ಬಲವಂತ ಮೃಗ ನಿನ್ನ
ನೀಟಿನ ರೂಪ ಸೀಳದಿಹವೆ ॥ ೩ ॥

ಜಾಲಗಾರತಿ ಕೇಳು ಜಲಚರಗಳನು ನೀ
ಗಾಳವ ಹಾಕಿ ಕೊಲ್ಲುವರೆ
ಮೇಲಾದ ಮತ್ಸ್ಯಕೂರ್ಮನು ಜಲಚರ ನಿನ್ನ
ಸೀಳಿ ಕೊಲ್ಲುವೆ ಬಿಡದಿಹವೆ ॥ ೪ ॥

ಜಗದೊಳು ಮನ್ಮಥಜಯಸಿರಿಯಳೆ ನಿನ್ನ
ಉಗುರುಗೊನೆಗೆ ಸಮನಿಲ್ಲ
ಮೃಗಸಿಂಹ ಶಾರ್ದೂಲ ಬಗಿದು ಬೇಟೆಯನಾಡಿ
ನಗೆಮೊಗಗಳ ಸೀಳದಿಹವೆ ॥ ೫ ॥

ಚಂದ್ರ ಕಳೆಯ ಚದುರವೆಣ್ಣೆ ನೀನೆನ್ನ
ಮಂದಿರಕೊಡೆಯಾನ ಮಾಡು
ಬಂದಂಥ ದುರಿತವ ಪರಿಹರಿಸುವೆನು ಮ
ಹೀಂದ್ರಜಾಲದ ಮುನಿರಾಯ ॥ ೬ ॥

ಪುರುಷರಿಲ್ಲದ ನಾರಿ ಸರಸವಾಡಲು ಮೃಗ
ವರಸಿ ಕೊಲದೆ ಬಿಡದಿಹವೆ
ವರುಷವು ಹದಿನಾರು ಪ್ರಾಯದ ಮುನಿ ನಾನು
ಹರಸಿಕೊ ಪ್ರಾಣೇಶನೆನುತ ॥ ೭ ॥

ಬಸವಮಂತ್ರಿಯೆ ಕೇಳು ಬಿಸಿಗಣ್ಣ ಮುನಿರಾಯ
ಕುಶಲದ ಮಾತನಾಡಿದರೆ
ಶಶಿಮುಖಿ ಮನದೊಳು ಹೊಸೆದಂತೆ ಕೋಪವು
ಮಸಗುತ ಮಾತನಾಡಿದಳು ॥ ೮ ॥

ಎಲ್ಲಿಯ ಮುನಿಯೊ ನೀನೆಲ್ಲಿಯ ಜೋಗಿಯೊ
ಎಲ್ಲಿ ಸನ್ಯಾಸಿ ಋಷಿಯೋ
ಬಲ್ಲತನವೆ ನಮ್ಮ ನಲ್ಲರ ಕೇಳುವುದು
ಇಲ್ಲ ಸಂನ್ಯಾಸಿಯ ಮಾರ್ಗ ॥ ೯ ॥

ಪರದೇಶಿ ಮುನಿ ಕೇಳು ತಿರಿದುಂಬ ಜೋಗಿ ನೀ
ಪರಸತಿಯರ ನೋಡ ಸಲ್ಲ
ವಿರಸ ಮಾತುಗಳಿಂದ ಸರಸವನಾಡಲು
ಸಿರಸವನುಳುಹಿಕೊ ಜೋಗಿ ॥ ೧೦ ॥

ಜೋಗಿವೇಷವ ತಾಳಿ ನೀಗಿ ಕಳೆಯಲುಬೇಕು
ತಾಗು ನಿರೋಧ ಮೋಹಗಳ
ಕೂಗುವ ಕಾಮಕ್ರೋಧವನೆಲ್ಲವ ಸುಟ್ಟು
ಮಾಗಿ ಕೋಗಿಲೆಯಾಗಬೇಕು ॥ ೧೧ ॥

ಸಂನ್ಯಾಸಿಯಾದರೆ ಕನ್ನೆವೆಣ್ಣುಗಳನು
ಕಣ್ಣೀಲಿ ನೋಡ ಸಲ್ಲ
ಹೊನ್ನು ಹೆಣ್ಣು ಮಣ್ಣು ಮೂರನಳಿದು ಸಂ
ಪನ್ನ ಜೋಗಿಗಳಾಗಬೇಕು ॥ ೧೨ ॥

ಋಷಿಯ ವೇಷವ ತಾಳಿ ಹಸುತೃಷೆನಿದ್ರೆಯ
ಕಸಮಾಡಿ ಕಳೆಯಲಿ ಬೇಕು
ಪಶುಪತಿಗಳವಲ್ಲ ಪರದೇಶಿ ಮುನಿ ಕೇಳು
ಶಶಿಮುಖಿಯೊಳಾಟ ಸಲ್ಲ ॥ ೧೩ ॥

ತ್ರಾಣಗಳರಿದು ತಲ್ಲಣವಡಗಿ ಮನ
ಕಾಣದಂತಡಗಿರಬೇಕು
ಮಾಣದೆ ಹರಿಯಜರಳವಲ್ಲ ರೂಪಿಗೆ
ಜಾಣತನಗಳೇಕೆ ಜೋಗಿ ॥ ೧೪ ॥

ಜಾಣತನಗಳಲ್ಲ ಜಯಸಿರಿಯಳೆ ನಿನ್ನ
ಪ್ರಾಣಸಂಗಾತಿಯ ಜೋಗಿ



ಕೋಣ ಹಾಯ್ದು ಮೃಗ ಕೊಂದಾವೆನುತ ನಿನ್ನ
ಪ್ರಾಣಕೆ ಚಿಂತಿಸುತಿಹೆನು ॥ ೧೫ ॥

ಪಿಡಿನಡುವಿನ ಬಾಲೆ ನುಡಿ ಗಿಳಿಕೋಗಿಲೆ
ಸಡಗರ ರೂಪಸಂಪನ್ನೆ
ಅಡವಿಯ ಮೃಗಸಿಂಹ ಕೆಡವಿ ಕೊಂದಾವೆ ನಿನ್ನ
ಒಡೆಯಾನ ಮಾಡಿಕೊ ಎನ್ನ ॥ ೧೬ ॥

ಕೊಡೆಯ ಹಾವುಗೆ ಜೋಗಿ ನುಡಿಯೆ ಸಲ್ಲದು ಕೇಳು
ಅಡವಿ ಮೃಗ ನಮ್ಮ ಬಳಗ
ಕಡಿವ ಕರಿಸಿ ಸಿಂಹ ಸಾರಂಗ ಮೃಗ ನಮ್ಮ
ಒಡಲೋಳಗುದ್ಭವಿಸಿದವು ॥ ೧೭ ॥

ಹುಚ್ಚುಮುನಿಯೆ ಕೇಳು ಹುಲಿ ಸಾರಂಗ
ಕಚ್ಚುವ ಮೃಗ ನಮ್ಮ ಬಳಗ
ನುಚ್ಚುನುರಿಯ ಗಂಡರಿಲ್ಲ ಕೇಳೆಲೆ ಮುನಿ
ಕಿಚ್ಚು ಗಣ್ಣನು ನಮ್ಮ ಪ್ರಾಣ ॥ ೧೮ ॥

ಹೊಂದಾವರೆ ಮೊಗ್ಗೆ ಮೊಲೆಯಳೆ ಕೇಳು ಗೋ
ವಿಂದ ಶಿವನ ಕಾಣಲರಿಯ
ಮಂದಮತಿಯ ಮಾನವಳಿಗೆಲ್ಲಿಯ ಶಿವ
ಹೊಂದಿಕೆ ಮಾಡಿಕೊ ತರಳೆ ॥ ೧೯ ॥

ಭಜನೆಯ ಮಾತನಾಡಲಿ ಬೇಡ ಮುನಿ ನಿಮ್ಮ
ಅಜಹರಿ ಸುರರಿಗಸಾಧ್ಯ
ತ್ರಿಜಗವಂದ್ಯನ ನಿಜವಾಗಿ ಭಜಿಸಲು
ಹುಜುರು ನಿಂದಿಹ ನಮ್ಮ ಶಿವನು ॥ ೨೦ ॥

ಗುಂಡಿನ ಮರೆಯ ಮಾನವ ಕೇಳು ಶಿವನನು –
ಕಂಡವರುಂಟೆ ಕಲಿಯುಗದಿ
ಮಿಂಡಿ ನೀ ಹರೆಯಾದ ಹೆಣ್ಣೆ ಪ್ರಾಯದ
ಗಂಡರಿಲ್ಲದ ಜೀವ ಸಲ್ಲ ॥ ೨೧ ॥

ಮನುಜರೂಪನೆ ಕೇಳು ವಿನಯ ಸಲ್ಲದು ನಮ್ಮ
ಘನಗಿರಿ ಗಹ್ವರದೊಳಗೆ
ಮುನಿಪ ವಶಿಷ್ಠ ವಿಶ್ವಾಮಿತ್ರ ಮಾಂಡವ್ಯ
ತನುಜೆಯೆಂದೆನ್ನ ಭಾವಿಪರು ॥ ೨೨ ॥

ಅಂತಹ ಋಷಿಯಲ್ಲ ಅಪರಂಜಿ ಮುನಿರಾಯ
ಮುಂತೆ ಮುಕ್ತಿಯನೀವ ಜೋಗಿ
ಚಿಂತಿತಾರ್ಥವನೀವ ಚಿನ್ಮಯರೂಪನ
ಸಂತೈಸಿಕೊಳ್ಳೆ ನೀನರಿಯೆ ॥ ೨೩ ॥

ಬೆಡಗು ಸಲ್ಲದು ನಮ್ಮ ಒಡೆಯ ಪರಂಜ್ಯೋತಿ
ಒಡಲ ಹೃತ್ಕಮಲದೊಳಿಹನು
ನುಡಿಯು ನಿಷ್ಠುರವಾಗಿ ಬರುತಿವೆ ಮುನಿ ನೀನು
ನಡೆ ನಿಮ್ಮ ಪಡೆಗಿರಿಗಳಿಗೆ ॥ ೨೪ ॥

ಹೋಗಲಿ ಬಂದುದಿಲ್ಲವೆ ಹೊಸ ಮಲೆಯಾಳ
ಜೋಗಿಗಳ್ಗಿರುವು ಕೇಳಾವು
ಜಾಗ ಇರವ ನೋಡ ಬಂದಂಥ ಮುನಿ ನಿನ್ನ
ಭಾಗದ ಒಡೆಯನೆ ನಾನು ॥ ೨೫ ॥

ಒಡೆಯನೆಂದೆನಬೇಡ ಬಡಮುನಿ ಎಲೆ ಜೋಗಿ
ಪೊಡವಿ ಈರೇಳು ಲೋಕಗಳ
ಒಡಲೊಳಗಿಂಬಿಟ್ಟು ಬಿಡದೆನ್ನ ಕರಸ್ಥಲ
ಕೊಡೆಯನಾಗಿಹ ನಮ್ಮ ಶಿವನು ॥ ೨೬ ॥

ಭಾಳಾಕ್ಷರೂಪೆಂದು ತಾಳ್ದಿವು ಕೋಪವ
ಸೀಳಿ ಕೊಲ್ವೆವು ನರರುಗಳ
ಜಾಳು ಮಾತುಗಳನಾಡಲಿ ಬೇಡ ಕಿವಿಗೊಟ್ಟು
ಕೇಳಲೆ ಮುನಿ ನಮ್ಮ ಘನವ ॥ ೨೭ ॥

ಮುನಿರಾಯ ಕೇಳಿನ್ನು ಮನೆದೈವ ಶಿವನಿಗೆ
ತನು ಮನ ಧನಗಳನಿತ್ತು
ಇನಿಯಾದೆ ಪರಬ್ರಹ್ಮ ಪ್ರಾಣದೊಲ್ಲಭನನು
ಘನಸ್ತುತಿಯನು ಕೇಳ್ಮನಿಪ ॥ ೨೮ ॥

ಮಲ್ಲಿಕಾರ್ಜುನ ಪ್ರಾಣದೊಲ್ಲಭ ಶಿವನಿಗೆ
ನೆಲ್ಲು ಬಿದಿರಕ್ಕಿಗಳ ತಂದು
ಕಲ್ಲೊರಳೊಳು ಹಾಕಿ ತಳಿಸುವ ಸತಿಯರ
ಸೊಲ್ಲ ಲಾಲಿಸು ಮುನಿರಾಯ ॥ ೨೯ ॥

ಕಳೆಯುಳ್ಳ ಸತಿಯರು ಎಳಮುತ್ತು ಮಾಣಿಕ
ಸೆಳೆ ನಡುಗಳು ಬಳುಕುತಲಿ



ಗಳರವ ಕೋಗಿಲೆಯೆಳದುಂಬೆ ಗಾನದಿ
ತಳಿಸುವ ವಚನವ ಕೇಳು ॥ ೩೦ ॥

ಹೂವಿನರಳು ಬಾಲಸ್ತ್ರೀಯರುಗಳು ತಮ್ಮ
ಯೌವನಗಳ ಬಣ್ಣಿಸುತಲಿ
ಎಸೆವ ದುಕೂಲವನುಟ್ಟು ಭಸಿತ ರುದ್ರಾಕ್ಷಿಯ
ಶಶಿಮುಖಿಯರು ಪಾಡುತಿಹರು ॥ ೩೧ ॥

ಆವ ಜನ್ಮದಿ ದೇವನೆ ಮನೆದೈವ
ಭಾವ ಭೇದಗಳಿಲ್ಲ ನಮಗೆ
ಮೂವರರಿಯದ ಭಾವನ ಮಹಿಮೆಯ
ಸೂವಿಯ ವಚನವ ಕೇಳು ॥ ೩೨ ॥

**ಒರಳಕ್ಕಿಯ ಪದನು :**

ಸುವ್ವೀ ಸುವ್ವೀ ಸುವ್ವಾಲೇ
ಸುವ್ವೆಂದು ಪಾಡಿರಿ ಶೂನ್ಯ ಪ್ರಕಾಶಗೆ
ಸುವ್ವೀ ಸುವ್ವೀ ಸುವ್ವಾಲೇ

ಚಂಚುವೆಣ್ಣುಗಳೆಲ್ಲ ಕೂಡೂತ ತಮ್ಮ
ಮಿಂಚುಳ್ಳ ನಯನಾದಿ ನೋಡುತ
ಪಂಚಮುಖದ ಪರಶಿವನ ಕೊಂಡಾಡುತ
ಗೊಂಚಲ ಹಾವುಗೆ ಜೋಗಿ ನೀ ಕೇಳು ॥ ೧ ॥

ಬೇಟಕಾರ್ತಿಯರೆಲ್ಲ ಕೂಡುತ ಶಶಿ
ಜೂಟ ಶಿವನ ಕೊಂಡಾಡುತ
ಆಡಬೇಟಗಳೆಲ್ಲ ಶಿವನೊಳಗಲ್ಲದೆ
ಕೀಟಕ ಮನುಜರನೊಲ್ಲವೊ ಜೋಗಿ ॥ ೨ ॥

ದುಂಡುದೋಳುಗಳೆತ್ತಿ ತಳಿಸುತ ತಮ್ಮ
ಗಂಡನೇ ಶಿವನೆಂದು ಪಾಡುತ
ಮೊಂಡಮೂಕೊರೆಯ ದೈವವನರಿಯೆವು
ರುಂಡಮಾಲೆಯ ಜೋಗಿ ನುಡಿಗಳ ಕೇಳು ॥ ೩ ॥

ಸುಲಿಪಲ್ಲ ಬೆಳಗುತ ರಂಜಿಸಿ ತಮ್ಮ
ತಲೆ ಮೊಲೆಗಳ ಕಟ್ಟಿ ನುಣ್ಣಿಸಿ
ಮಲಹರಮಂತ್ರವು ಮನದೊಳಗಲ್ಲದೆ
ಹೊಲೆಮಾರಿ ದೈವವನೊಲ್ಲೆವೊ ಜೋಗಿ ॥ ೪ ॥

ಬಿದಿರಿಕ್ಕಿಗಳ ತಂದು ತಳಿಸುತ ತಮ್ಮ
ಅಧರ ಮಾಣಿಕ ಬಿಚ್ಚಿ ಪಾಡುತ
ಮದಹರಮಂತ್ರವು ಮನದೊಳಗಲ್ಲದೆ
ಸದೆಮಾರಿ ದೈವವನೊಲ್ಲವೊ ಜೋಗಿ ॥ ೫ ॥

ಸರುವಾರದವರೆಲ್ಲ ಕೂಡುತ ನಮ್ಮ
ಪರಮಶಿವನ ಕೊಂಡಾಡುತ
ಹರಹರವೆನುತಲಿ ಗುರುಪಾದವಲ್ಲದೆ
ಸುರಿಮಾರಿ ದೈವವನರಿಯೆವೊ ಜೋಗಿ ॥ ೬ ॥

ಕುಂಜರವೈರಿಯ ಪೂಜೆಗೆ ನಾವು
ಮಂಜಿನ ನೀರನು ತರುವೆವೊ
ಎಂಜಲು ಅಗುಳುಗಳಿಲ್ಲದೆ ಶಿವನಿಗೆ
ಸಂಜೀವದಗ್ಗಣಿಯ ತರುವೆವೊ ಜೋಗಿ ॥ ೭ ॥

ಗಂಧಾಕ್ಷತೆಗಳನು ಇಡುತಾ ಗೋ
ವಿಂದನ ಪುಷ್ಪವ ಧರಿಸುತೆ
ತಂದು ಧೂಪದೀಪಾರಗಿಗಳನೆತ್ತಿ
ವಂದಿಸಿ ಶಿವನೊಳಗಿರುವೆವೊ ಜೋಗಿ ॥ ೮ ॥

ಇಂತೆಂದು ಅಕ್ಕಿಯ ತಳಿಸುವ ನಮ್ಮ
ಕಂತುಹರಗೆ ಬೋನವ ಮಾಡುತ
ಸಂತೋಷದಿಂದಲ್ಲಿ ಶಿವನಿಗರ್ಪಿಸುತ ಅ
ನಂತ ಕಾಲದೊಳಿರುವೆವು ಜೋಗಿ ॥ ೯ ॥

ನಾಡಿನ ಮುನ್ನಾರೆಂಬುತ ನೀ ನಮ್ಮ
ಕೂಡೆ ಜಾಣಿಕೆಯ ನೀನಾಡಲು
ಮಾಡಿದ ಸರಳು ಬಾಣಗಳಿಂದೆಚ್ಚಡೆ
ಮೂಡಿ ಹಾಯ್ವವು ನಿನ್ನ ಬೆನ್ನಲಿ ಜೋಗಿ ॥ ೧೦ ॥

ಕನ್ನೆವೆಣ್ಣುಗಳನು ಕಾಣುತ ನೀ
ಚುನ್ನಾದ ಸರಸವನಾಡಲು
ಪನ್ನಂಗಧರಶಿವನಾದರೆ ಕೊಲುವೆವೊ
ಇನ್ನು ಸುಮ್ಮನೆ ಹೋಗು ಕಿನ್ನರಿ ಜೋಗಿ ॥ ೧೧ ॥

ಲೋಕದ ಮುನ್ನಾರೆಂಬುತಾ ನೀ
ಜೋಕೆ ಸರಸವನಾಡಲು



ಏಕೋದೇವ ಶಿವನಾದರೆ ನಾವೀಗ
ನೂಕಿ ಕೆಡಹಿ ಬೇಗಲೆಸೆವೆವೊ ಜೋಗಿ ॥ ೧೨ ॥

ಪರಶಿವ ರೂಪೆಂದು ತಾಳ್ದೆವು ನಿಮ್ಮ
ವಿರಸ ಸರಸಗಳು ಸಾಕಿನ್ನು
ವರಗುರುಸಂಗನ ಒಡಲೊಳಗಿರುವೆವು
ಶರಣು ಶರಣಾರ್ಥಿ ಹೋಗಯ್ಯ ಜೋಗಿ ॥ ೧೩ ॥

ಕಲ್ಯಾಣಪುರಪತಿ ಕೇಳಿನ್ನು ಸೊಲ್ಲಿಗೆ
ಸಿಲುಕದಭೇದ್ಯನು ಶಿವನು
ಮಲ್ಲಿಕಾರ್ಜುನ ಜೋಗಿ ತಲ್ಲಣಗೊಳಿಸಿದ
ರಿಲ್ಲಿಗೆ ಸಂಧಿಗೆ ಶರಣು ಶರಣಾರ್ಥಿ ॥ ೧೪ ॥

ಸಂಧಿ ಟಕ್ಕಂ ಕಂದ ೪, ವಚನ ೩೧, ಪದನು ೨೪, ಸಂಗತ್ಯ ೪೯,
ಒರಳಿಕ್ಕಿ ಪದನು ೧೪, ಉಭಯಂ ೧೨೨ ಕ್ಕಂ ಮಂಗಳ ಮಹಾ ಶ್ರೀ ಶ್ರೀ

## ಗಂಗಿ ಗೌರೀ ಸಂವಾದ

### ೨

**ವಚನ :**

ಪರಮಪುಣ್ಯ ಜೋಗಿ ಕೇಳು ಗುರುರಾಯ । ತಮ್ಮ
ಶಿರವ ತೂಗಿ ಬೆರಗಾಗುತಲಿ ಗುರುರಾಯ
ಧರೆಯ ಮನುಜಳಲ್ಲವೆಂದು ಗುರುರಾಯ । ಅವಳು
ಇರುವ ಸ್ಥಳವ ಕೇಳಿತಿರ್ದ ಗುರುರಾಯ ॥ ೧ ॥

ತಾಯಿತಂದೆ ನಿನಗುಂಟೇನೆಲೆ ಹೆಣ್ಣೆ। ನಿನ್ನ
ಸಾಯಸಗಳ ಕೇಳಿದೆವು ಎಲೆ ಹೆಣ್ಣೆ
ಕಾಯ ಜೀವ ಸಲಹಿದವರು ಎಲೆ ಹೆಣ್ಣೆ। ಅವರು
ಆವ ಠಾವಿನಲ್ಲಿ ಇಹರು ಎಲೆ ಹೆಣ್ಣೆ ॥ ೨ ॥

ತಂದೆತಾಯಿ ಬಂಧುಬಳಗ ಎಲೆ ಜೋಗಿ । ನನ್ನ
ಹೊಂದಿಕೊಂಡು ಗಿರಿಯೊಳಿಹರು ಎಲೆ ಜೋಗಿ
ಕಂದಿ ಕುಂದಿ ಬಳಲಗೊಡದೆ ಎಲೆ ಜೋಗಿ । ನಮ್ಮ
ನಂದನದೊಳಗಿಟ್ಟರಂತೆ ಎಲೆ ಜೋಗಿ ॥ ೩ ॥

ಋಷಿಗಳು ನೀವು ಕೇಳ್ದಿರಿನ್ನು ಎಲೆ ಜೋಗಿ । ನಮಗೆ
ಹುಸಿಯ ನುಡಿಯು ಸಲ್ಲದಿನ್ನು ಎಲೆ ಜೋಗಿ
ವಸುಧೆಯೊಳಗೆ ಜನಿಸಿ ಬಂದೆ ಎಲೆ ಜೋಗಿ । ನನ್ನ
ದೆಸೆಯ ಲಾಲಿಸಿನ್ನು ಕೇಳು ಎಲೆ ಜೋಗಿ ॥ ೪ ॥

ಗಾರುಡಿಗ ಗುರುವೆ ಕೇಳು ಎಲೆ ಜೋಗಿ । ನಿರಾ
ಭಾರಿ ನಾನು ನಿರ್ಮಳಾಂಗಿ ಎಲೆ ಜೋಗಿ
ನೀರೆ ಅಂಬಿಗಾರ ಮಗಳು ಎಲೆ ಜೋಗಿ । ನನ್ನ
ಘೋರ ತಪಸುಮಾಡಿ ಪಡೆದರೆಲೆ ಜೋಗಿ ॥ ೫ ॥

ನನ್ನ ಪುಣ್ಯ ಉಂಡೇನೆಂದು ಎಲೆ ಜೋಗಿ । ತಪಸ
ಮುನ್ನಮಾಡಿ ಪಡೆದರಯ್ಯ ಎಲೆ ಜೋಗಿ
ಚೆನ್ನಬಸವನ ರನ್ನಗೊಳ ಎಲೆ ಜೋಗಿ । ಸಂ
ಪನ್ನೆ ಗಂಗೆಯೆಂದು ಕರೆದರೆಲೆ ಜೋಗಿ ॥ ೬ ॥



ಶಶಿಮುಖಿಯೆ ಮಿಸಿನಿರೂಪೆ ಎಲೆ ಹೆಣ್ಣೆ। ನಮ್ಮ
ಬಸವಗೊರಳ ಗಂಗೆದೇವಿ ಎಲೆ ಹೆಣ್ಣೆ
ವಸುಧೆಯೊಳಗೆ ಬಸವಣ್ಣನ ಎಲೆ ಹೆಣ್ಣೆ। ಕೊರಳ
ಹೆಸರೇನು ಪರಿಯಲ್ಲಿಟ್ಟರೆಲೆ ಹೆಣ್ಣೆ ॥ ೭ ॥

ಮಂದ್ರಗಿರಿಯ ಮುನಿಯೆ ಕೇಳು ಎಲೆ ಜೋಗಿ । ನಮ್ಮ
ತಂದೆ ಬಸವನ ಕೊರಳಿನಲ್ಲಿ ಎಲೆ ಜೋಗಿ
ಬಿಂದು ನಾದ ಕಳೆಗಳಿಂದ ಎಲೆ ಜೋಗಿ । ಜನಿಸಿ
ಬಂದಳೆಂದು ಹೆಸರನಿಟ್ಟರೆಲೆ ಜೋಗಿ ॥ ೮ ॥

ಬಸವಗೊರಳ ಗಂಗೆದೊಗಲಿಂದೆ ಎಲೆ ಜೋಗಿ । ಜನಿಸಿ
ವಸುಧೆ ಜನರ ಹೊರೆವಳೆಂದೆ ಎಲೆ ಜೋಗಿ
ಎಸೆವ ವೇಚ ಶ್ರುತಿ ಪೌರಾಣ ಎಲೆ ಜೋಗಿ । ಕೊರಳ
ಹೆಸರನಿಟ್ಟು ಕರಸಿದಾವೊ ಎಲೆ ಜೋಗಿ ॥ ೯ ॥

ಪಡೆದಾಕ್ಷಣವೆ ತಿಳಿದು ನೋಡಿ ಎಲೆ ಜೋಗಿ । ನೀ ಪಾ
ಲ್ಗಡಲ ಗಂಗಾದೇವಿಯೆಂದು ಎಲೆ ಜೋಗಿ
ಒಡೆಯ ಬಸವನ ಕೊರಳ ಶಕ್ತಿ ಎಲೆ ಜೋಗಿ । ಎಂದು
ನುಡಿದು ತೊಟ್ಟಿಲಗಳ ಕಟ್ಟಿದರು ಎಲೆ ಜೋಗಿ ॥ ೧೦ ॥

ಬಸವಣ್ಣನ ಮಗಳೆ ಎನುತ ಎಲೆ ಜೋಗಿ । ನನಗೆ
ಮಿಸುನಿ ತೊಟ್ಟಿಲಗಳ ಕಟ್ಟಿ ಎಲೆ ಜೋಗಿ
ಸಿಸುವ ನೋಡಿ ಮಲಗಿಸುತಲಿ ಎಲೆ ಜೋಗಿ । ಅವರ
ಕುಸಲಾದ ಜೋಗುಳವ ಕೇಳು ಎಲೆ ಜೋಗಿ ॥ ೧೧ ॥

**ಜೋಗುಳ ಪದನು :**

ಜೋ ಜೋ ಎನ್ನ ಬಂಧುಗಳ ಸಿರಿಯೆ
ಜೋ ಜೋ ಎನ್ನ ಚಂದ್ರರ ಕಳೆಯೆ
ಜೋ ಜೋ ನಮ್ಮ ನಂದಿಯ ಶಿಶುವೇ । ಹೀಗೆ
ಜೋಯೆಂದು ಪಾಡಿರಿ ಶ್ರೀನಿಲಗಂಗೆಗೆs ಜೋ ಜೋ ॥ ಪಲ್ಲ ॥

ತುಂಬಿದ ಹೊಳೆಯೊಳು ಅಂಬಿಗ ಶರಣಿ
ಹಂಬಲಿಸಿಯೆನ್ನ ತಪಸ ಮಾಡಿದರೆ
ರಂಭೆ ಜ್ಞಾನಶಕ್ತಿ ಜನಿಸಿದಳೆಂದು । ತನ್ನ
ಕುಂಭಕುಚವೆಂಬ ಮೊಲೆಯನೂಡಿದಳುs ಜೋ ಜೋ ॥ ೧ ॥

ಸತಿಪತಿ ಈರ್ವರು ಅತಿ ಹರುಷದಲ್ಲಿ
ರತನು ಮಾಣಿಕ ಮುತ್ತು ಸೇರಿತುಯೆಂದು
ಹತ್ತಿರದಾ ಬಂಧುಬಳಗಗಳೆಲ್ಲಾ । ನಮಗೆ
ಗತಿಮುಕ್ತಿ ಗಂಗೆ ನೀನಲ್ಲದಿಲ್ಲs ಜೋ ಜೋ ॥ ೨ ॥

ಬಣ್ಣನದ ತೊಟ್ಟಿಲಿಗೆ ರನ್ನದ ಸರಪಳಿಯು
ಸಣ್ಣ ಬಣ್ಣಗಳ ಹಾಸಿ ಮಲಗಿಸಿ
ಹೆಣ್ಣು ಜಾತಿಗಳೆಲ್ಲ ತೂಗುತ ನೋಡಿ । ಮೂರು
ಕಣ್ಣುಳ್ಳ ಶಿವನ ಮಡದೆಂದು ಪಾಡೀ ಜೋ ಜೋ ॥ ೩ ॥

ಸೂರ್ಯಚಂದ್ರಾದಿಗಳ ಅರಳೆಲೆ ಬಟ್ಟು
ನೀರ ಸಮುದ್ರದ ಮಾಗಾಯನಿಟ್ಟು
ಮೂರು ಲೋಕಗಳ ಕಿರುಗೆಜ್ಜೆ ನಾರಿ । ಜಗದ
ಘೋರ ಪಾತಕದ ಕರ್ಮಸಂಹಾರೀ ಜೋ ಜೋ ॥ ೪ ॥

ಯೋಗಿಣಿ ಜೋಗಿಣಿ ಮಾಗಣಿಯರೆಲ್ಲ
ರಾಗರಚನೆಯಿಂದ ತೂಗಿ ಪಾಡುತಲಿ
ನಾಗಭೂಷಣ ಶಿವನ ಜ್ಞಾನದೊಳಿಹೆವು । ಕೃಷ್ಣ
ಭಾಗೀರತಿ ಗಂಗೆ ರಕ್ಷಿಸಿ ಹೊರವೇ ಜೋ ಜೋ ॥ ೫ ॥

ಶಂಭು ಶಂಕರನ ಮಡದಿ ನೀ ಜೋ ಜೋ
ಅಂಬಾರ ಪುರದ ನಿರ್ಮಾಯಿ ಜೋ ಜೋ
ಅಂಬಿಗ ಶರಣಾರ ಮಗಳೆ ನೀ ಜೋ ಜೋ । ನಿನ್ನ
ನಂಬಿದ ಭಕ್ತರ ಸಲಹಿಕೊ ತಾಯಿs ಜೋ ಜೋ ॥ ೬ ॥

ಹನ್ನೆರಡು ವರುಷವು ತಪಸಿರಲೆಂದು
ಚೆನ್ನ ಬಾಲತ್ವದಿ ಸುಳಿದೆ ನೀ ಬಂದು
ನಿನ್ನ ಶ್ರೀಪಾದವ ಬಿಡೆವು ಎಂದೆಂದುs । ನಮ್ಮ
ಚೆನ್ನಬಸವಣ್ಣನ ಕೊರಳ ಶ್ರೀಗಂಗೆs ಜೋ ಜೋ ॥ ೭ ॥

ಸಾಕಿ ಸಲಹಿ ನನ್ನ ದೊಡ್ಡವಳ ಮಾಡಿ
ಲೋಕದ ಮನುಜರಿಗಳವಲ್ಲ ನೋಡಿ
ಈಕೆಗೆ ಶಿವನೇ ಗಂಡೆಂದು ಪಾಡೀ । ಎನ್ನ
ಏಕಾಂತ ವನದೊಳಗಿಟ್ಟರು ನೋಡೀ ಜೋ ಜೋ ॥ ೮ ॥

ಕಂಗಳ ಕಾಂತಿಯ ಜೋಗಿ ನೀ ಕೇಳು
ಲಿಂಗಪೂಜೆಗಳು ಆವಾಗ ನಮಗೆ
ಸಂಗ ಸಮರಸವಿಲ್ಲ ಭವಿಗಳ ಹೊಂದೆs । ನಮ್ಮ
ಸಂಗನ ಬಸವನ ಘನವ ಕೇಳ್ಮಂದೇ ಜೋ ಜೋ ॥ ೯ ॥



**ಕಂದ :**

ಬಸವ ಸೃಷ್ಟಿಯನು ಪಸರಿಸುವೆ ಕೇಳ್ಮಂದೆ
ವಸುಧೆ ಈರೇಳು ಸಚರಾಚರಂಗಳು
ಪಶುಜೀವಿ ಹರಿಯಜರು ಸುರಮುನಿಗಳೆಲ್ಲ
ಬಸವನಾತ್ಮದಲಿ ಜನಿಸಿದರಖಿಳ ಕೋಟಿ ಜನರು ॥ ೧ ॥

ಸೃಷ್ಟಿಗೊಡೆಯನು ಬಸವ ಶ್ರೀ ಮಹಾಗಂಗೆಯನು
ಸೃಷ್ಟಿಸಿದ ತನ್ನಯ ಶ್ರೀ ಕಂಠದೊಳು
ವಿಷ್ಣುಪಾದದಿ ಜನಿಸಿದಳೆಂಬ ಭ್ರಷ್ಟರನು ಹಳಿದು
ದೃಷ್ಟವನು ಪೇಳಿದಳು ಶ್ರುತಿಶಾಸ್ತ್ರದಿಂ ॥ ೨ ॥

**ಸಂಗತ್ಯ :**

ಜೋಗಿ ಮುನೀಶಾನೆ ಆಗ ಮಹಿಮಗೆನ್ನ
ಯೋಗಾವ ಮಾಡಿ ಪಡದಾರು
ನಾಗಭೂಷಣ ಶಿವಗರ್ಪಿಸಿದ ನನ್ನ
ಭೋಗವೆ ಪರಮನೊಳೈಕ್ಯ ॥ ೧ ॥

ಶಿವಶರಣರಿಗೊಪ್ಪು ಭವಿ ನರರಿಗೆ ತಪ್ಪು
ಜವನಾದ ಕಾಲಗೆ ಮುಪ್ಪು
ರವಿಕೋಟಿ ತೇಜನೆ ಅವನೀಶ ಮುನಿರಾಯ
ವಿವರಿಸು ಬಸವಸೃಷ್ಟಿಯನು ॥ ೨ ॥

ಸಿಂಗಾಳ ದೀಪದ ಜೋಗಿ ಕೇಳೆಲೆ ಮುನಿ
ಸಂಗನ ಬಸವನ ಕೊರಳ
ಗಂಗೆದೊಗಲೊಳಿಂದ ಜನಿಸಿದ ಕಾರಣ
ಗಂಗೆದೇವಿಯೆಂಬ ಪೆಸರು ॥ ೩ ॥

ಆದಿಯ ಕೇಳಿನ್ನನಾದಿಯ ಬಸವನ
ಓದುವ ಕಂಠದೊಳ್ಮನ್ನ
ನಾದ ಕಳೆಯು ಬಿಂದು ನಾನಾ ಕತನಗಳಿಂದ
ಮೇದಿನಿಯೊಳು ಜನಿಸಿದೆನು ॥ ೪ ॥

ಉತ್ಪತ್ತಿ ಸ್ಥಿತಿ ಲಯ ಸತ್ವರಜತಮಗಳ
ಮಥನವ ಮಾಡಿ ಜನ್ಮಿಸಿದೆ
ಇಂತಾ ವಾದಿಗಳು ಮತಿಗೆಟ್ಟ ಮಾನವರು
ಗತಿತಪ್ಪಿ ನುಡಿವುದ ಕೇಳು ॥ ೫ ॥

ಭೇದವಾದಿತರ್ಕ ಮನುಜರುಗಳು ವಿಷ್ಣು
ಪಾದದಿ ಜನಿಸಿದಳೆನುತ
ಹೋದರು ನರಕದ ಪುಳುಗೊಂಡದೊಳಗೆಮ
ಬಾಧೆಯು ಜನ್ಮ ಜನ್ಮದಲಿ ॥ ೬ ॥

ನಾರಣಗೆ ಭೂಮಿಯ ಧಾರೆಯನೆರೆಯಲು
ಮೂರಡಿ ಇಡಲೊಂದು ಪಾದ
ಮೇರುವಿನೊಳಗೊಂದ ತೋರಿದನಾಕ್ಷಣ
ವಾರಿಜೋದ್ಭವ ಕಂಡ ಬ್ರಹ್ಮ ॥ ೭ ॥

ವಿಷಮಯ ಪಾದವು ಎಸೆಯಿತು ನಮಗೆಂದು
ಮಿಸುನಿ ಕಮಂಡಲದುದಕ
ಹಸನಾಗಿ ತೆಗೆವುತ ಕುಸುಮಕ್ಷತೆಗಳಿಂದ
ಶಶಿಧರ ಶಿವನೆಂದು ಭಜಿಸಿ ॥ ೮ ॥

ಅಂಗಜನಣ್ಣನ ಪಾದಗಳಿಗಭಿಷೇಕ
ಗಂಗೆಯ ತಂದು ನೀಡಿದರೆ
ಉಂಗುಷ್ಟ ತುದಿಯಲಿ ಗಂಗೆ ಹರಿಯಿತೆಂದು
ಭಂಗ ಹೀನರು ಬಳಲಿದರು ॥ ೯ ॥

ಪಶುಪತಿ ಪಾದವು ಪುಸಿಯಾಗಲ್ಶಾಪಿಸಿ
ಕುಸಿಯಾಗಲು ಶ್ರೀಹರಿಪಾದ
ವಸುಧೆಯೊಳಲಿಯಲ್ಕೆ ಪೆಸರಾಯ್ತೊ ವೈಕುಂಠ
ಶಶಿಧರರೂಪ ಕೇಳ್ಮುನಿಪ ॥ ೧೦ ॥

ಆದಿಯನರಿಯದ ವಾದಿ ಕುರಿಗಳೆಲ್ಲ
ಹೋದರು ನರಕದ ಕುಳಿಗೆ
ಮೇದಿನಿ ಹದಿನಾಲ್ಕು ಪಿರಮಹಾಬಸವನ
ಪಾದದಿ ಜನಿಸಿದುಮಖಿಳಾ ॥ ೧೧ ॥

ಬಿನುಗರ ನುಡಿಯೆ ತಿರಲಿ ಕೇಳೆಲೊ ಮುನಿ
ಘನಮಹಿಮ ನಮ್ಮ ಬಸವಾ
ಮನುಮುನಿ ಅಜಹರಿ ಸುರರು ದೇವತೆಗಳ
ನೆನಹು ಮಾತ್ರದಿ ನಿರ್ಮಿಸಿದ ॥ ೧೨ ॥

ಎಡದ ಭಾಗದಿ ವಿಷ್ಣು ಬಲದ ಭಾಗದಿ ಬ್ರಹ್ಮ
ನಡುವೆ ರುದ್ರನ ನಿರ್ಮಿಸಿದನು
ಪಡೆದ ತಂದೆಯು ನಮ್ಮೊಡೆಯ ಬಸವ ಕೊರ
ಳೆಡೆಯೊಳು ನಾನು ಜನ್ಮಿಸಿದೆ ॥ ೧೩ ॥



ಪೃಥ್ವಿಯೇ ಬ್ರಹ್ಮ ಜಲವೇ ವಿಷ್ಣು
ಅಗ್ನಿಯ ತತ್ವವೇ ರುದ್ರನಂಶ
ಮತ್ತೆ ಮಾರುತ ಈಶ್ವರ ಸದಾಶಿವ ಪಂಚ
ತತ್ವವೆ ಬಸವನಾತ್ಮಗಳು ॥ ೧೪ ॥

ಭೂಮಿಯಕಾಶ ಭೂಮಂಡಲದ ಬುದ್ಬುದ
ಆ ಮಹಾ ಜೀವರಾಶಿಗಳು
ಕಾಮಪಿತರು ಮೊದಲಾದಖಿಳ ಜನ
ರೋಮರೋಮದಿ ಜನಿಸಿದರು ॥ ೧೫ ॥

ರೂಪುಚಿತ್ರನೆ ಕೇಳು ಗೌಪ್ಯವಲ್ಲವು ನಮ್ಮ
ಭೂಪತಿ ಬಸವನ ರಾಣಿ
ಗೋಪಿಯಾತ್ಮಗಳು ಸುಜಾತವೆನುತ ತಮ್ಮ
ಶ್ರೀಪತಿ ಜನಿಸಿಯೇ ಬಂದ ॥ ೧೬ ॥

ಕಂದರ್ಪ ಪಿತನು ಗೋವಿಂದ ನಾರಾಯಣ
ತಂದೆಗಳೆಂದು ಭಾವಿಸುತ
ನಂದಿಬಸವನೇರಲಿಲ್ಲ ಕೇಳೆಲೆ ಮುನಿ
ಒಂದೊಂದು ಜನನವ ತಾಳಿ ॥ ೧೭ ॥

ಆವ ಜನ್ಮಕೆ ಗೋವಿನಾತ್ಮವುಯೆಂದು
ಕಾಮಪಿತನು ಜನಿಸಿದರೆ
ದೇವತೆಗಳು ಕೂಡಿ ಹೆಸರಿಟ್ಟು ಕರೆದರು
ಗೋವಿಂದ ಗೋವಿಂದ ಎನುತ ॥ ೧೮ ॥

ನಿಶ್ಚಲರೂಪಿನ ಜೋಗಿ ಕೇಳೆಲೊ ಮುನಿ
ಅಚ್ಯುತನೆನ್ನ ಗರ್ಭದಲಿ
ಮತ್ಸ್ಯಾವತಾರ ಕೂರ್ಮಗಳಾಗಿ ಜನಿಸುತ
ಕೆಚ್ಚುದಾನವರ ಸೀಳಿದನು ॥ ೧೯ ॥

ಬಾಯಬಡಿಕರೇನ ಬಲ್ಲರೊ ಮುನಿರಾಯಾ
ಗೋವಿಂದ ಅಜಹರಿ ಬಲ್ಲ
ಆವೆ ರೂಪುಗಳಿಂದ ಜನಿಸಿದ ಕಾರಣ
ತಾಯಿಗಳೆಂದು ಭಾವಿಸುತ ॥ ೨೦ ॥

ಮೂಲ ಪ್ರಳಯಗಳಿಂದ ಶ್ರೀಹರಿ ತನ್ನ
ಆಲದೆಲೆಯ ಮೇಲೆ ಶಯನ
ಕಾಲೂರಿನಿಂದೇ ನಿನ್ನ ಗರ್ಭದೊಳೆಂದು
ನೀಲಲೋಹಿತ ನುತಿಸಿದನು ॥ ೨೧ ॥

ಸೃಷ್ಟಿ ಈರೇಳು ಲೋಕಾದಿ ಲೋಕವು ನಿನ್ನ
ಹೊಟ್ಟೆಯೊಳಡಗಿದವೆನುತ
ಮುಟ್ಟಿ ಭಜಹಿಸಿ ಎನ್ನ ಹೆಸರಿಟ್ಟು ಕರೆದರೆ
ಕೃಷ್ಣವೇಣಿಯ ಪೆಸರೆನಗೆ ॥ ೨೨ ॥

ಆರು ಬಲ್ಲರೊ ನಮ್ಮ ಆದಿ ಅನಾದಿಯ
ನೀರು ಭೂಪ್ರಳಯದ ರಹಿತ
ಈರೇಳು ಲೋಕದ ಪಿತಮಹ ಬಸವನ
ನಾರಾಯಣನು ತಾನೆ ಬಲ್ಲ ॥ ೨೩ ॥

ತಂಗಿಯಾದಳು ತನ್ನ ಅಂಗದ ಜನನಿಯು
ಲಿಂಗಬಸವ ನಿರ್ಮಿಸಿದ
ಶೃಂಗವೆರಡನು ತನ್ನಂಗದ ಫಣೆಗಿಟ್ಟು
ಗಂಗೆ ತಾ ಮಾಡಿ ಪೂಜಿಸಿದ ॥ ೨೪ ॥

ಹರನವತಾರನೆ ವರಮುನಿ ಕೇಳಿನ್ನ
ಗುರುಪರಂಜ್ಯೋತಿ ಬಸವನ
ಹರಿಯಜ ಸುರರಗಣಿತ ದೇವ ಋಷಿಗಳು
ಚರಣದಿ ಜನಿಸಿದರುಖಿಳಾ ॥ ೨೫ ॥

ಕಡುಚಲ್ವ ಗಂಗೆಯ ನುಡಿಯನಾಲಿಸಿ ಕೇಳಿ
ಮೃಡನವತಾರನಿಂತೆಂದ
ಮಡದಿ ಕೇಳೆಲೆ ನಿಮ್ಮ ಒಡೆಯ ಬಸವನೊಳು
ಅಡಗಿದವೆಷ್ಟೊ ಲೋಕಗಳು ॥ ೨೬ ॥

ಬಾಲೆ ಕೇಳೆಲೆ ನಿನ್ನ ಲೋಲ ಬಸವ ಪ್ರಳಯ
ಕಾಲದೊಳೆಂತಡಗಿದನು
ಭೂಲೋಕ ಭುವಲೋಕ ಸತ್ಯಲೋಕದ ಜನ
ಓಲೈಸಿದರಾವ ಸ್ಥಲದಿ ॥ ೨೭ ॥

ಜಾಳೇಂದ್ರದೇಶದ ಜೋಗಿ ಕೇಳಲೆ ಮುನಿ
ಕಾಳುಕಾಳಂಧರ ಮಯದಿ
ತಾಳಿದ ಸ್ಥಲ ಸ್ಥಲದೊಳಗಿಟ್ಟನಾದಿಯ
ಕೇಳೆಲೆ ಮುನಿರಾಯ ಜೋಗಿ ॥ ೨೮ ॥



**ಪದನು :**

ಎಲೆ ಜೋಗಿ ನೀನು ಕೇಳು ಬಸವಣ್ಣ ಕುಲ ಮಹಾದೈವದೊಡೆಯ
ಸಲಹುತಲಿ ಈರೇಳು ಲೋಕಗಳ ನಿರ್ಮಿಸಿದ ಮಲೆನಾಡ ಜೋಗಿ ನೀ ಕೇಳು

ಆದಿ ಮಧ್ಯಾಂತ ಶೂನ್ಯ ಎಲೆ ಜೋಗಿ ನಾದ ಕಳೆ ಬಿಂದು ಶೂನ್ಯ
ಮೂದೇವ ಮೂರ್ತಿಗಳು ಮುನ್ನವೇ ಶೂನ್ಯವು ಭೇದಿಸುವರಿಲ್ಲದಂದು
ಓದುವ ಪ್ರಣಮರೂಪ ಬಸವಯ್ಯ ಸಾಧಿಸಿ ನೆಗೆದನೆಂದು
ಮಾದೇವ ಮೊದಲಾದ ದೇವರ್ಕಳೆಲ್ಲರು ಪಾದ ಪದ್ಮದೊಳಡಗಲು ॥ ೧ ॥

ಯುಗಪ್ರಳಯ ಜಗಪ್ರಳಯವು ಎಲೆ ಜೋಗಿ ಹಗಲಿರುಳು ಏಕ ಪ್ರಳಯ
ಮಿಗಿಲಾದ ಪ್ರಳಯದಲಿ ಬಸವಣ್ಣ ಪುಟ್ಟಿದನು ತಗಲು ತಾಕಿಲ್ಲದಂದು
ಮಿಗಿಲು ಮಿಂಚುಗಳೆಲ್ಲವು ಮುನಿರಾಯ ದಗಿಲು ಭುಗಿಲೆಂಬ ಸಿಡಿಲು
ನಿಗಮಗೋಚರವೆಲ್ಲ ಬಸವದಂಡೇಶ್ವರನ ಉಗುರ ಕೊನೆಯೊಳಡಗಲು ॥ ೨ ॥

ಪ್ರಳಯ ಪ್ರಳಯಗಳಿಗಂದು ಬಸವಣ್ಣ ಹಳಬನಾಗಿರ್ದನಂದು
ಕಳೆಯುಳ್ಳ ಸೂರ್ಯಚಂದ್ರಾದಿಗಳು ಕಣ್ಣೊಳಗೆ ಸುಳಿದು ಸೂಸುತಲಿಂದು
ಬೆಳೆಬಿತ್ತು ಯೋನಿಮುಖದಿ ಜನಿಸಿದವು ಹುಳುರಾಸಿ ಮೊದಲಾದವು
ಇಳೆಯ ಬ್ರಹ್ಮಾಂಡ ಸಚರಚರಂಗಳು ಎಲ್ಲ ತಳಪಾಯದೊಳಡಗಲು ॥ ೩ ॥

ಪೊಡವಿ ಈರೇಳು ಭುವನ ಎಲೆ ಜೋಗಿ ಕಡಲೇಳು ಸಾಗರಗಳು
ಮಡದಿ ಹೆಣ್ಣು ಗಂಡು ನಾನಾಜೀವನವೆಲ್ಲ ಎಡದ ಪಾದದೊಳಡಗಲು
ಜಡೆದಲೆಯ ಜೋಗಿ ಕೇಳು ಬಸವಣ್ಣ ಪಡೆದ ನಾನಾ ದೈವವ
ಮೃಡಬ್ರಹ್ಮ ಹರಿಯಾದಿ ದೇವದೇವೇಂದ್ರರು ಎಡದ ಪಾದದೊಳಡಗಲು ॥ ೪ ॥

ಹುಲಿಯ ಚರ್ಮದ ಜೋಗಿಯೆ ಕೇಳಿನ್ನು ಬೆಲೆಯುಂಟೆ ಬಸವಣ್ಣಗೆ
ಹಲವು ದೈವಂಗಳಿಗೆ ಪಿತನು ತಾನೆನಿಸಿದನು ಲಲಿತಾಂಗ ಜೋಗಿ ಕೇಳು
ಜನಪ್ರಳಯ ಮಹಪ್ರಳಯವ ಬಸವಣ್ಣನ ಸ್ಥಲಸ್ಥಲದೊಳಿಟ್ಟು ಮೆರೆದ
ಸಲೆ ಗುರಬಸವಣ್ಣ ಸಂಗಮೇಶ್ವರನೆಂದು ಉಲಿದವು ವೇದ ಶ್ರುತಿಯು ॥ ೫ ॥

**ಶ್ರುತಿ :**

ಶೃಂಗಮಧ್ಯಂ ಹರಿಶ್ಚೈವ ಯೋಗೋರಮ್ಯ ಉರಸ್ತಥಾ ।
ದೇವ ನಾಸಾಪುಟಃ ವಾಯುಃ ಚಕ್ಷುರ್ಭಾನು ನಿಶಾಕರೌ ॥ ॥ ೧ ॥

ಗಾತ್ರಂ ವೈ ವಿಶ್ವರೂಪಶ್ಯ ಪದಮೇವ ಚತುರ್ಯುಗಮ್ ।
ಅಂಡಜಂ ಸರ್ವತೀರ್ಥಾಣಿ ವಾಮಃ ಸರ್ವಾಶ್ಯ ದೇವತಾ ॥ ॥ ೨ ॥

ಲಿಂಗಾನಿ ರೋಮರೋಮಾಣಿ ರಂಗಮಧ್ಯಂತು ಪೀಠಕಂ ।
ಶೃಂಗಮಧ್ಯೇ ಶಿವೋ ದೃಷ್ಟಃ ಕಂಠಸ್ಥಾನೇ ತು ಜಾನ್ಹವೀ ।
ವೃಷಭಾದನ್ಯಃ ಕಃ ಯೋಗೀ ಜಗದಾನಂದಕಾರಣಂ ॥ ॥ ೩ ॥

**ವಚನ :**

ಇಂತು ಸಕಲ ದೇವತೆಗಳ ಎಲೆ ಜೋಗಿ । ಆಽ
ನಂತ ಕಾಲ ಅಡಗಿಸಿದ್ದರೆಲೆ ಜೋಗಿ
ಮುಂತೆ ಧರೆಯಕಾಶಗಳಿಗೆಲೆ ಜೋಗಿ । ಪ್ರಳಯ
ವಾಂತು ಜಗವ ಸೃಷ್ಟಿಸಿದನು ಎಲೆ ಜೋಗಿ ॥ ೧ ॥

ಸನ್ಯಾಸಿಗಳು ನೀವು ಕೇಳಿ ಎಲೆ ಜೋಗಿ । ಪ್ರಳಯ
ವನ್ನು ಮುನ್ನ ಹೆಪ್ಪುಗೊಟ್ಟರೆಲೆ ಜೋಗಿ
ತನ್ನ ಸೃಷ್ಟಿ ಜಗದ ಜೀವಿಗೆಲೆ ಜೋಗಿ । ಅವರಿ
ಗನ್ನ ಉದಕ ಕಲ್ಪಿಸಿದನು ಎಲೆ ಜೋಗಿ ॥ ೨ ॥

ಸತ್ಯಭಾವ ಋಷಿಯೆ ಕೇಳು ಎಲೆ ಜೋಗಿ । ಜಗಕೆ
ಬಿತ್ತು ಬೆಳಸು ನಿರ್ಮಿಸಿದನು ಎಲೆ ಜೋಗಿ
ಎತ್ತುಯೆಂಬ ರೂಪತಾಳಿ ಎಲೆ ಜೋಗಿ । ಜಗಕೆ
ತುತ್ತು ಮಾಡಿ ಉಣ್ಣಿಸಿದನು ಎಲೆ ಜೋಗಿ ॥ ೩ ॥

ಹರಗಿ ಬಿತ್ತಿ ಹಸನಮಾಡಿ ಎಲೆ ಜೋಗಿ । ತನ್ನ
ನೊರೆಯು ಜೊಲ್ಲು ಶೇಷಗಳನು ಎಲೆ ಜೋಗಿ
ಹರಿಯು ಬ್ರಹ್ಮರುದ್ರಾದಿಗಳು ಎಲೆ ಜೋಗಿ । ಸಲಿಸಿ
ಪರಮ ಮುಕ್ತಿ ಪಡೆದರಯ್ಯ ಎಲೆ ಜೋಗಿ ॥ ೪ ॥

ಮೆಟ್ಟಿ ತುಳಿದು ಮೆದ್ದು ಬಿಟ್ಟು ಎಲೆ ಜೋಗಿ । ಹಂತಿ
ಗಟ್ಟಿ ತಿರಿಗಿ ಹಸನ ಮಾಡಿ ಎಲೆ ಜೋಗಿ
ಮುಟ್ಟಿ ಪ್ರಸಾದಗಳ ಮಾಡಿ ಎಲೆ ಜೋಗಿ । ನಮ್ಮ
ಸೃಷ್ಟಿ ದೈವಗಳಿಗೆ ಯೋಗ್ಯ ಎಲೆ ಜೋಗಿ ॥ ೫ ॥

ಎಸೆವ ಭಾರಿ ಕಂಥೆ ಋಷಿಯೆ ಎಲೆ ಜೋಗಿ । ಇದನು
ಹುಸಿಯು ಸಟಿಯನಾಡುವರ್ಗೆ ಎಲೆ ಜೋಗಿ
ಮುಸುಕಿ ಭವದ ಕರ್ಮಗಳಲಿ ಎಲೆ ಜೋಗಿ । ಬಿದ್ದು
ವಸವಹರು ನಾಯಿ ಜನ್ಮಕೆಲೆ ಜೋಗಿ ॥ ೬ ॥

ನೀಲಕಂಠಮುನಿಯೆ ಕೇಳು ಎಲೆ ಜೋಗಿ । ನಂದಿ
ಕಾಲಸಗಣಿ ಸತಿಯ ಮೂತ್ರ ಎಲೆ ಜೋಗಿ



ಮೂಲೆಮನೆಯ ಒಳಗೆ ಹೊರಗೆ ಎಲೆ ಜೋಗಿ । ತಳಿಯೆ
ಕಾಲಕರ್ಮ ಕೆಟ್ಟು ಕಳಿವುದೆಲೆ ಜೋಗಿ ॥ ೭ ॥

ಮಿಣಿಯು ಕಣ್ಣಿ ಜತ್ತಿಗೆಗಳು ಎಲೆ ಜೋಗಿ । ಮತ್ತೆ
ಎಣಿಸಲಿಲ್ಲ ಸಿದ್ಧಿ ಕಾಣೆ ಎಲೆ ಜೋಗಿ
ದಣಿಯಲುಂಡು ಜರಿದು ನುಡಿವರ್ಗೆ ಎಲೆ ಜೋಗಿ । ಭವದ
ಕುಣಿಯ ನಾಯ ಜನ್ಮ ಜನ್ಮ ಎಲೆ ಜೋಗಿ ॥ ೮ ॥

ಹೊನ್ನ ಹಾವುಗೆಯ ಮನಿಯೆ ಎಲೆ ಜೋಗಿ । ಕೇಳು
ಮನ್ನಿಸ್ಯುಂಡು ತೃಪ್ತಿಬಟ್ಟು ಎಲೆ ಜೋಗಿ
ಕಣ್ಣು ತಪ್ಪಿ ಜರಿದು ನುಡಿವರ್ಗೆ ಎಲೆ ಜೋಗಿ । ಭವದ
ಕುನ್ನಿ ನಾಯಿ ಜನ್ಮ ಸಾಕ್ಷಿ ಎಲೆ ಜೋಗಿ ॥ ೯ ॥

ಸಂಕುಗೊರಳ ಮುನಿಯೆ ಕೇಳು ಎಲೆ ಜೋಗಿ । ಜಗದ
ಮಂಕುಮರುಳು ತಾಳುಬೋಳು ಎಲೆ ಜೋಗಿ
ಸಂಕೆಗೊಳದೆ ಜರಿದರಿನ್ನು ಎಲೆ ಜೋಗಿ । ನಮ್ಮ
ಓಂಕಾರರೂಪ ಬಸವಣ್ಣನು ಎಲೆ ಜೋಗಿ ॥ ೧೦ ॥

ಭಾವಶುದ್ಧ ಬಸವಣ್ಣನು ಎಲೆ ಜೋಗಿ । ನಮ್ಮ
ದೈವ ಮನೆಯ ಬಸವಣ್ಣನು ಎಲೆ ಜೋಗಿ
ಹಾವ ಕೊರಳೊಳಿಟ್ಟ ಮುನಿಯೆ ಎಲೆ ಜೋಗಿ । ನಮಗೆ
ನೋವು ಜನನ ಮರಣವಿಲ್ಲ ಎಲೆ ಜೋಗಿ ॥ ೧೧ ॥

ಸಿಂಗಿನಾಥ ಮುನಿಯೆ ಕೇಳು ಎಲೆ ಜೋಗಿ । ಬಸವ
ನಂಗಚರ್ಮ ಹರಿಗೋಲೆಮಗೆ ಎಲೆ ಜೋಗಿ
ಲಿಂಗಮೂರ್ತಿ ಬಸವಣ್ಣಗೆ ಎಲೆ ಜೋಗಿ । ಕೊರಳ
ಗಂಗೆಯಿಂದ ಜನಿಸಿ ಬಂದೆ ಎಲೆ ಜೋಗಿ ॥ ೧೨ ॥

ಯತಿ ಮಹಾಮುನಿಯೆ ಕೇಳು ಎಲೆ ಜೋಗಿ । ಜಗದ
ಪಿತನು ನಮ್ಮ ಬಸವಣ್ಣನು ಎಲೆ ಜೋಗಿ ।
ಶ್ರುತಿ ಪೌರಾಣ ಪೊಗಳಲರಿಯವೆಲೆ ಜೋಗಿ । ಮಂದ
ಮತಿಗಳೇನ ಬಲ್ಲರಯ್ಯ ಎಲೆ ಜೋಗಿ ॥ ೧೩ ॥

ಇತ್ತಂಡದ ಪ್ರಸಂಗಗಳ ನೀಲಮ್ಮ । ಜಗವ
ಪೆತ್ತ ಬಸವನೊಳಗೆ ಪೇಳ್ದಳು ನೀಲಮ್ಮ
ಉತ್ತಮಾಂಗಿ ಬಸವನ ರಾಣಿ ನೀಲಮ್ಮ । ದ್ವಿತೀಯ
ಅರ್ತಿ ಸಂಧಿ ಮುಗಿಸಿದಳು ನೀಲಮ್ಮ ॥ ೧೪ ॥

ಕೋಟಿ ಭವದ ರಾಟಗಳನು ಗುರುರಾಯ । ಕಡಿದು
ದಾಂಟಿಸುವ ಧರ್ಮಗುರುವೆ ಗುರುರಾಯ
ಆಟ ಬೇಟಿ ನೋಟ ಕೂಟ ಗುರುರಾಯ । ಕಪಟ
ನಾಟಕವಯ್ಯ ನಿಮ್ಮ ಸೂತ್ರ ಗುರುರಾಯ ॥ ೧೫ ॥

ಸಂಧಿ ೨ಕ್ಕಂ ಕಂದ ೨, ವಚನ ೨೬, ಪದನು ೫, ಸಂಗತ್ಯ. ೨೮,
ಜೋಗುಳ ಪದನು ೯, ಉಭಯಂ ೧೯೫ ಕ್ಕಂ ಮಂಗಳ ಮಹಾ ಶ್ರೀ ಶ್ರೀ



# ಗಂಗಿ ಗೌರೀ ಸಂವಾದ

೩

**ಪದನು :**

ಬಸವಯ್ಯ ನೀನು ಕೇಳು ಗಂಗೆಯ ಕುಶಲವಿನೋದ ನುಡಿಯ
ಮಸಣಬೂದಿಯ ಜೋಗಿ ಮಾತನಾಡಲು ನಿನ್ನ ದೆಸೆಯಲಲ್ಲಾಡಿಸಿದಳು ॥ ಪಲ್ಲ ॥

ಶಿವ ತನ್ನ ಲೀಲೆಗಾಗಿ ಬಸವಯ್ಯ ಭುವನ ಬ್ರಹ್ಮಾಂಡ ತಿರುಗಿ
ಯುವತಿಗಿರಿಜೆಯ ಮೇಲೆ ಸವತಿಯನು ತಹೆನೆಂದು ಗವಿಗಿರಿಗಳನೆ ಪೊಕ್ಕು
ತವನಿಧಿಯ ಶ್ರೀಗಂಗೆಯ ಗುರುರಾಯ ನೆವದಿಂದ ಬೋಧಿಸಿದರೆ
ಕವಲಿಲ್ಲ ಮನದೊಳಗೆ  ಕಾಂತೆಗಂಗೆ ನಿಮ್ಮ ವಿವರವ ಬೋಧಿಸಿದಳು ॥ ೧ ॥

ಮುಪ್ಪುರವ ಸುಟ್ಟು ಶಿವನ ಜ್ಞಾನದೊಳಗಿಪ್ಪ ಬಸವಯ್ಯ ಕೇಳು
ಒಪ್ಪುವ ದೇವನೊಳವನೆಲ್ಲ ಮರ್ತ್ಯಕ್ಕೆ ತಪ್ಪದಲೆ ತಂದೆ ನೀನು
ಸಪ್ಪುಳಿಲ್ಲದ ಶರಣರಾ ಒಡಲೊಳಗೆ ಗೌಪ್ಯಮಾಡಿಯೆ ಸಲಹಿದೆ
ಕಪ್ಪುಗೊರಳ ಶಿವನ ಕರದೊಳಗಿಟ್ಟಂಥ ಸತ್ಪುರುಷ ಬಸವಯ್ಯ ಕೇಳು ॥ ೨ ॥

ದಂಡನಾಯಕನೆ ಕೇಳು ಬಸವಯ್ಯ ಮಂಡಲಕಧಿಕ ನೀನು
ಕೊಂಡೆಮಂಚಣ್ಣಗಳ ಪವಾಡಗಳ ಗೆಲಿದಂಥ ಗಂಡ ದೂರಕರಿಗೆಲ್ಲ
ಉಂಡುಟ್ಟು ಮಿಕ್ಕುದೆಲ್ಲ ಬಸವಯ್ಯ ಹಿಂಡುದೈವಕೆ ಮೀಸಲು
ಅಂಡಲೆದು ಉಂಡಿಲ್ಲೆಂಬ ಪರವಾದಿಗಳ ಗುಂಡಿಗೆಯ ಶೂಲ ನೀನು ॥ ೩ ॥

ಕಾಂತೆ ನೀಲಲೋಚನೆ ನೀನೆಮಗೆ ತಂತ್ರದ ಕತೆಯ ಪೇಳ್ದೆ
ಎಂತು ಬಣ್ಣಿಪೆ ಎನ್ನ ಏಕಾಂತ ಮೂರ್ತಿಯ ಸಂತವಿಟ್ಟ ಸ್ತ್ರೀಯಳೆ
ದಂತಿಗಮನದಿ ಪೇಳುವೆ ಪರಶಿವಮಂತ್ರದ ಶಕ್ತಿ ನೀನು
ಶಾಂತಿಸ್ಥೈರಣೆಯುಳ್ಳ ಶಿವಲಿಂಗಮೂರ್ತಿಯ ಅಂತರಂಗದ ಜ್ಯೋತಿಯೆ ॥ ೪ ॥

ಚಂದ್ರಕಾಂತದ ಸ್ತ್ರೀಯಳೆ ಕೇಳಿನ್ನು ಮಂದಾಲಗಿರಿಯ ಜೋಗಿ
ಬಂದು ಗಂಗೆಯ ಕೂಡೆ ಮಾತನಾಡಲು ಮಡದಿಯೆಂದಪರಿ ಹೇಗೆ ಹೇಳು
ಬೆಂದ ಮಸಣದ ಬೂದಿಯ ತಲೆಗೆಲ್ಲ ಮಂದಮಲಕನೆ ಮಾಡುತಾ
ತಂದೆ ಗುರುಸಂಗಮೇಶ್ವರನು ಕೊಂಡೊಯ್ದ ಅಂದವನು ಪೇಳು ನಮಗೆ ॥ ೫ ॥

**ಸಂಗತ್ಯ :**

ಹರಶರಣರ ಹೃತ್ಕಮಲಾರ್ಕತೇಜನೆ
ಹರುಷಾಬ್ಧಿ ನಿಜ ಪಾಲ್ಗಡಲೆ
ಧರೆಯು ಮೂಲೋಕವ ರಕ್ಷಿಪ ಗಂಗೆಯ
ಮರುಳ್ಮಾಡಿ ಪೊಯ್ದುದ ಕೇಳು ॥ ೧ ॥

ಚಲಂದಕವೈರಿ ಮಸ್ತಕಶೂಲ ಬಸವಯ್ಯ
ಒಲಿದು ಕೇಳಿನ್ನು ಮೆಲ್ಲಗ್ತೆಯ
ಹುಲಿಯ ಚರ್ಮವನುಟ್ಟು ಮಲೆನಾಡ ಜೋಗಿಯ
ಸ್ಥಲಕುಲಗಳನು ಕೇಳಿದಳು ॥ ೨ ॥

ಮುತ್ತಿನ ಕಂಥೆಯ ಮುನಿ ಮಹಾಜೋಗಿ ನೀ
ವೆತ್ತಲಿಂದುದ್ಭವಿಸಿದಿರಿ
ಮರ್ತ್ಯಲೋಕದ ಮಾನವರಲ್ಲ ಮುನಿರಾಯ
ಕುತ್ತಿಗೆಗಳ ಮಾತು ಬೆಡಗು ॥ ೩ ॥

ಸಾಗರಗುಣದ ಸನ್ಮಾನಿಯೆ ನೀ ಕೇಳು
ನಾಗಲೋಕಗಳ ನೋಡುತಲಿ
ಮೇಗಾಡಂಬರ ಮಠಮಾನ್ಯದ ಮುನಿರಾಯ
ಭಾಗ್ಯ ಸಂಪನ್ನದ ಜೋಗಿ ॥ ೪ ॥

ಧನಪತಿ ಕುಬೇರ ಮನೆಯ ಮಗಳ ಮಗ
ಘನ ನವಲಕ್ಷ್ಮಿ ಎಂಬುವರು
ವನಜಾಕ್ಷಿಯರು ನಮ್ಮ ಮನೆ ರಜದೆಗೆವಂಥ
ಕೊನೆಯ ಬಾಗಿಲ ಸೇವಕರು ॥ ೫ ॥

ಮುತ್ತಯ್ಯ ಗಳಿಸಿದ ದ್ರವ್ಯವು ಮೂ
ವತ್ತಾರ್ಕೋಟಿ ಎತ್ತಿಲಿ ಹೇರ್ವರಿಲ್ಲ
ಮರ್ತ್ಯಲೋಕದ ಮಾನವ ಭೂಪರಿಗೆ ಹುಣಿಸೆಯ
ಬೀಜಾವ ಮಾಡಿ ಚೆಲ್ಲಿದವು ॥ ೬ ॥

ಯೋಗಿಜೋಗಿಯು ಶ್ರವಣಸನ್ಯಾಸಿಗಳು ನಮ್ಮ
ಬಾಗಿಲ ಕಾವ ಸೇವಕರು
ತೂಗುಮಂಚವು ಪಟ್ಟೆಮಂಚ ಸುಪ್ಪತ್ತಿಗೆ
ಭೋಗವನಾರು ಬಣ್ಣಿಪರು ॥ ೭ ॥



ಕುಟಿಲಸಿದ್ಧರು ನವಕೋಟಿ ಮುನಿಗಳೆಮ್ಮ
ಮಟವ ಬಳಿವ ಸೇವಕರು
ನಿಟಿಲಲೋಚನೆ ನಿರ್ವಾಣಿ ನಿರಂಜನ
ವಟವೃಕ್ಷ ಪರಂಜ್ಯೋತಿ ನಾವು ॥ ೮ ॥

ವೇದಶಾಸ್ತ್ರವನೋದುವ ಮುನಿಗಳು ನಮ್ಮ
ಪಾದವ ತೊಳೆವ ಸೇವಕರು
ಆದಿಭೈರವ ಸಿಂಗಿನಾಥ ಜೋಗಿಗಳೆಮ್ಮ
ಕಾದುಕೊಂಡಿಹರರಮನೆಯ ॥ ೯ ॥

ಮೇರುಗಿರಿಯ ಮಠವನು ಕಂಡವರಿಲ್ಲ
ಸೂರ್ಯಚಂದ್ರಗಿರಿಗಗಣಿತವು
ಆರು ಶಾಸ್ತ್ರವು ನಾಲ್ಕು ವೇದ ಪುರಾಣಿಕೆ
ದೂರವಾಗಿಹ ನಮ್ಮ ಸ್ಥಲವು ॥ ೧೦ ॥

ಬಿಟ್ಟು ನಮ್ಮಯ ಗಿರಿ ಗುಪ್ತಾರಗಳನೀಗ
ಚಿಟ್ಟಿಗ ಮುನಿಯನು ಕೂಡಿ
ಸೃಷ್ಟಿಗೀರೇಳು ಲೋಕವನೆಲ್ಲ ತಿರುಗುತ
ನಿಟ್ಟುಳ್ಳ ಶರಣರನರಸಿ ॥ ೧೧ ॥

ಚರಿಸುತ ಬರಲೋರ್ವ ಮುರವೈರಿ ಮಾಧವ
ಚರಣವ ಪಿಡಿದು ಭಜಿಪರು
ವರಹವತಾರದ ಪರಿ ಕಂಕಳಾಯುಧ
ಧರಿಸಿದ ಶರಣು ಮಾಡುತಲಿ ॥ ೧೨ ॥

ಸರಸಿಜೋದ್ಭವನ ಮುನಿಗ್ಹೋಗಿ ನಿಲ್ಲಲು
ಎರಗಿ ಕುಳ್ಳಿರಿಸಿ ಭಕ್ತಿಯಲಿ
ವರಮುನಿ ಜೋಗಿಗಳೆನುತ ಸುವರ್ಣದ
ಶಿರವ ಕಪಾಲವನಿತ್ತ ॥ ೧೩ ॥

ಕಾಮನ ಮನೆಗೆ ಹೋದರ ತನ್ನ ಶರೀರವ
ಸ್ವಾಮಿಗರ್ಪಿಸಿದನು ಕೇಳು
ಈ ಮಹಾಭಕ್ತಿಭಾವನೆಗಳ ಕೈಕೊಂಡು
ಭೂಮಿಯೊಳಗೆ ಚರಿಸುತಲಿ ॥ ೧೪ ॥

ಹಾಲ ಸಮುದ್ರದ ನೀಲಗಂಗೆಯ ಕೇಳು
ಮೇಲು ದೇಶಗಳ ನೋಡುತಲಿ

ಪಾಲಿಸಿ ಪರಮಲೀಲೆಯಿಂದಾಡುವ
ಬಾಲಸ್ತ್ರೀಯರ ಭಕ್ತಿ ಕೇಳು ॥ ೧೫ ॥

ವಾಣಿಯು ಮಾಧವ ಪಾಣಿಯು ಚಂದ್ರನ
ರಾಣಿಯು ರೋಹಿಣಿದೇವಿ
ಚಾಣಿರಂಭೆಯು ಊರ್ವಸಿ ಚಿತ್ರಾಂಗಿಯು
ಮಾಣದೆ ಭಕ್ತಿ ಮಾಡಿದರು ॥ ೧೬ ॥

ದೇವಗಂಗೆಯು ನಾಗಕನ್ಯೆಯು ಮರ್ತ್ಯದ
ಜೀವಗನ್ನೆಯರು ಭಕ್ತಿಯಲಿ
ತಾವರೆ ಕಮಲದಿ ಸೇವೆಗಳನು ಮಾಡಿ
ಭಾವಭಿಕ್ಷೆಗಳ ನೀಡಿದರು ॥ ೧೭ ॥

ವಿಮಲೇರ ಭಕ್ತಿಗಳ ಕೈಕೊಂಡ ಮುನಿಗಳ
ಸೀಮೆಗಳ ನೋಡುತ ಬರಲು
ಹೇಮಗಿರಿರಾಜನ ಮಗಳು ಪಾರ್ವತಿ ಭಕ್ತಿಯ
ಕ್ರಮದಿ ನಿಂದಿರಿಸುತಲೆಮ್ಮ ॥ ೧೮ ॥

ಮುನಿರಾಯ ಜೋಗಿಯೆ ಘನಪುಣ್ಯ ಕ್ಷೇತ್ರವೆ
ನೆನವೆಂಬ ನಿಜದ ಪಾಲ್ಗಡಲೆ
ವನವ ಸಂಚರಿಸುತ ದಣಿದು ಬಂದಿರಿಯೆಂದು
ತನುಮನಗಳ ಧಾರೆಯೆರೆದು ॥ ೧೯ ॥

ಮುನಿಯ ಕಾಣುತಲೆದ್ದು ವಿನಯದಿ ಶರಣೆಂದು
ವನಜಾಕ್ಷಿ ಹಸ್ತವ ಮುಗಿದು
ಮನದೊಳುತ್ಸಹಗೊಂಡು ಘನಮಹಿಮನ ನೋಡಿ
ವನಿತೆಪಾರ್ವತಿ ಕೊಂಡಾಡಿದಳು ॥ ೨೦ ॥

**ವಚನ :**

ಜೋಗಿ ಬಂದನು ನೋಡಿರೇ ನಿರಂಜನ ಸ್ವಾಮಿ ಬಂದನು ಕಾಣಿರೇ
ಜಾಗರ ಸ್ವಪ್ನದ ಕಿನ್ನರಿಗಳ ಪಿಡಿದು ಜೋಗಿ ಬಂದನು ಕಾಣಿರೇ ॥ ಪಲ್ಲ ॥

ಆದಿ ಪ್ರಣಮ ಸಿಂಗಿ ಓಂಕಾರನಾದ
ಮಾಧವನಯನಾದಿ ಪೂಜಿತವಾದ
ವೇದಶಾಸ್ತ್ರಗಳಿಗೆ ನಿಲುಕದೆ ಹೋದ। ಭಕ್ತ
ಸಾಧಕಮುನಿಗಳ ಮನಕೆ ವಿನೋದ ॥ ೧ ॥



ನೊಸಲೊಳು ಕತ್ತುರಿ ಬಿಸಿಗಣ್ಣ ಜೋಗಿ
ಕುಸುಮಶರನ ಪಿತನಮಿತಾಂಗ ಜೋಗಿ
ಮೀಸುನಿಗಪ್ಪರ ತಲೆಯೋಡಿನ ಜೋಗಿ। ಮರ್ತ್ಯ
ವಸುಧೆ ಈರೇಳುಲೋಕ ರಕ್ಷಿಸಬಂದ ಜೋಗಿ ॥ ೨ ॥

ಕಪ್ಪುಗೊರಳ ನೀಲಕಂಠದ ಜೋಗಿ
ಪುಷ್ಪಶರನ ಸುಟ್ಟ ಭಸಿತಾಂಗ ಜೋಗಿ
ಸರ್ಪಭೂಷಣ ಸಕಲಾತ್ಮಕ ಜೋಗಿ। ಸುಟ್ಟ
ಕರ್ಪುರ ಜ್ಯೋತಿಯ ಪ್ರಕಾಶದ ಜೋಗಿ ॥ ೩ ॥

ನವಕೋಟಿಸಿದ್ಧರ ಗುರುನಾಥ ಜೋಗಿ
ಭುವನದೊಳಗೆ ನಿಮಗೆಣೆಗಾಣೆ ಜೋಗಿ
ರವಿಕೋಟಿ ತೇಜದ ಪ್ರಕಾಶದ ಜೋಗಿ। ಎಮ್ಮ
ಭವ ಮಾಲೆಗಳನು ಖಂಡಿಸಬಂದ ಜೋಗಿ ॥ ೪ ॥

ಬಂಗಾರ ಹಾವುಗೆ ಶೃಂಗಾರ ಜೋಗಿ
ಸಂಗೀತ ಪ್ರಬಂಧ ನುಡಿಸುವ ಜೋಗಿ
ಜಂಗುಳಿ ದೈವದ ಪಿತ ಮಹಾಜೋಗಿ। ಮುಕ್ತಿ
ಯಂಗನೆಯರ ಪ್ರಾಣಲಿಂಗವೆ ಜೋಗಿ ॥ ೫ ॥

ಮುದುಕ ತದುಕನಲ್ಲ ಮುನಿ ಮಹಾಜೋಗಿ
ಹದಿನಾರು ವರುಷದ ಪ್ರಾಯದ ಜೋಗಿ
ವಿಧಿಯು ಮೃತ್ಯುವಿನೆದೆದಲ್ಲಣ ಜೋಗಿ। ನಮ್ಮ
ಹೃದಯ ಕಮಲದ ಪರಶಿವನೆಂಬ ಜೋಗಿ ॥ ೬ ॥

ಚಿಮ್ಮುರಿದುರುಬಿನ ಕಿನ್ನರಿ ಜೋಗಿ
ಮನ್ನೆಯರಸೇನೊ ಮಹಾರಾಯ ಜೋಗಿ
ಇನ್ನು ಈ ಲೋಕದ ಮುನಿಯಲ್ಲ ಜೋಗಿ। ಮುಕ್ತಿ
ಹೊನ್ನ ಪಂಜರದರಗಿಳಿ ರಾಮಜೋಗಿ ॥ ೭ ॥

ಕಣ್ಣು ಮೂಗಿಲಿ ಕರಚಲ್ವನೆ ಜೋಗಿ
ಬಣ್ಣಿಸಲಳವಲ್ಲ ಬಗೆ ನಿನ್ನ ಜೋಗಿ
ಹೆಣ್ಣು ಜಾತಿಯು ನೋಡಿ ಉಣ್ಣಾರು ಜೋಗಿ। ನಿಮ್ಮ
ಸಣ್ಣರಾಗಕೆ ಸಿಲುಕದವರಾರೊ ಜೋಗಿ ॥ ೮ ॥

ಇಂಥ ಚಲ್ವಿಕೆಯ ನೀ ಪಡೆದೆಲೊ ಜೋಗಿ
ಭ್ರಾಂತುಭ್ರಮೆಗಳ ಬಿಟ್ಟು ಬಾರೆಲೊ ಜೋಗಿ

ಮಂತ್ರಾಗಾರುಡ ಬಲ್ಲ ಮಲೆಯಾಳ ಜೋಗಿ । ನಮ್ಮ
ತಂತ್ರವಿನ್ನಾರಿಗೆ ತಿಳಿಯದೊ ಜೋಗಿ ॥ ೯ ॥

ಆದ ದೇಶದರಸಿನ ಮಗ ನೀನು ಜೋಗಿ
ದೇವಲೋಕದ ಪುರುಷರೊಳಗಿಲ್ಲ ಜೋಗಿ
ದೇವೇಂದ್ರ ಅಜಹರಿ ಗುರುವೇನೊ ಜೋಗಿ । ನಮ್ಮ
ಜೀವರತ್ನವ ಸೂರೆಗೊಳಬಂದ ಜೋಗಿ ॥ ೧೦ ॥

ಮನವ ನೋಡಲಿ ಬಂದ ಮುನಿ ಮಹಾಜೋಗಿ
ಮನ್ಮಥರರಸೇನೊ ಮಲೆಯಾಳ ಜೋಗಿ
ಕನಕಗೃಹಕಿನ್ನು ಬಿಜಮಾಡಿ ಜೋಗಿ । ನಮ್ಮ
ಘನಗುರು ಸಂಗಮೇಶ್ವರನೇನೊ ಜೋಗಿ ॥ ೧೧ ॥

**ಸಂಗತ್ಯ :**

ಹೀಗೆಂದು ಸ್ತುತಿಸುತ ಜೋಗಿಯ ಕೊಂಡಾಡಿ
ಬೇಗದಿಂ ಉಪಚರಿಸಿದಳು
ರಾಗಮಂಚದ ಮೇಲೆ ಜೋಗಿಯ ಕುಳ್ಳಿರಿಸಿ
ಅಗಚೆ ತಿಳಿದು ನೋಡಿದಳು ॥ ೧ ॥

ಎಲ್ಲ ಜೋಗಿಗಳೊಳಗಿಲ್ಲ ಇಂತವರೆಂದು
ಹಲ್ಲುದಾಳಿಂಬರದಂಥ
ಗಲ್ಲ ಚಂಪಕಬಿಂಬ ಸೊಲ್ಲು ಮಾಣಿಕ ರತ್ನ
ಅಲ್ಲಮಪ್ರಭುವೆಂಬ ಜೋಗಿ ॥ ೨ ॥

ಇಂತಪ್ಪ ಜೋಗಿಯ ಬಿಡಬಾರದೆನುತಲಿ
ಕಾಂತೆ ತನ್ನಯ ಮನದೊಳಗೆ
ಸಂತೋಷದಿಂದಲಿ ಸಕಲ ಉಪಚರಿಯಿಂದ
ನಂತಕಾಲದೊಳರ್ಚಿಸಿದಳು ॥ ೩ ॥

ಮಿಂಡಮಕ್ಕಳ ಜೋಗಿಯ ಕಂಡು ಪಾರ್ವತಿ
ದುಂಡು ಮಲ್ಲಿಗೆಯ ಪೂಜೆಯಲಿ
ಗಂಡರ ಕಾಣದೆ ತಂಡತಂಡದ ಊಟ
ಮಂಡಲದೊಳಗುಣಿಸಿದಳು ॥ ೪ ॥

ಅಣ್ಣ ಸ್ತ್ರೀಯಳು ನಮ್ಮ ಪುಣ್ಯ ಸ್ತ್ರೀಯಳು ಮಹಾ
ಪೆಣ್ಣು ಕುಲಕೆ ರತ್ನಮಣಿಯು
ಹಣ್ಣು ಕಜ್ಜಾಯಗಳನುಣ್ಣಿಸುವಳಿನ್ನು
ಕಣ್ಣುದಪ್ಪೊದಳೊಂದು ದಿವಸ ॥ ೫ ॥



ಎಳೆಮಿಂಚು ಜೋಗಿಯ ತಿಳಿದು ನೋಡಿಯೆ ಕಂಡು
ಕವಳಿಸಿದಳೊಂದು ದಿವಸ
ಕೊಳಕಮನವ ಕಂಡು ಹಳಿವ್ರತ ಮನದೊಳು
ಕಳಿದು ಬಿಟ್ಟೆವು ನಾವಿನ್ನವಲ ॥ ೬ ॥

ನಂಬಬಾರದು ನಮ್ಮ ಗಂಭೀರ ಹೋದಾವು
ಎಂಬುತ ಮರ್ತ್ಯಕ್ಕಿಳಿದೆವು
ಕುಂಭಿನಿ ಹದಿನಾಲ್ಕು ಡಂಬರಿಗಳ ನೋಡಿ
ಹಂಬಲಿಸದೆ ನಿನ್ನ ಗಿರಿಯ ॥ ೭ ॥

ಮಾಯಪಾಶಗಳಿಗೆ ಗಾಯತ್ರಿಗಳನೊಡ್ಡಿ
ಕಾಯಕಸಿದ್ಧಿಗಳುs ಪಡೆದೆವು
ರಾಯರ ಭಕ್ತಿಗಳಾಯುತಗಳ ನೋಡಿ
ತೋಯಜಾಕ್ಷಿಯೆ ನಿನ್ನ ಸ್ಥಲವ ॥ ೮ ॥

ಮೆಟ್ಟಿಲು ನಮ್ಮಯ ಘಟ್ಟಿಯೋಗದ ಮನ
ಬಿಟ್ಟೆವು ಪರಬ್ರಹ್ಮಸ್ಥಲವ
ಚಿಟ್ಟಿಗ ಮುನಿಮಾತು ಸುಟ್ಟುಹೋಯಿತು ನಿನ್ನ
ದೃಷ್ಟಿಯೊಳೇನುಂಟು ತರುಳೆ ॥ ೯ ॥

ಕಡೆಗಣ್ಣ ನೋಟಕೆ ಬೆಡಗುಯೋಗದ ಮನ
ಬಿಡಿಸಿಕೊಂಡೆವು ನಿನ್ನ ಬಳಿಗೆ
ನುಡಿಯಲು ನಿನ್ನಯ ಕಡುಚಲ್ವ ಮಾತಿಗೆ
ಒಡೆದವು ಹೃದಯದೊಳ್ಕಮಲ ॥ ೧೦ ॥

ಲಲನೆಯ ಮೊಹಕೆ ಸಿಲುಕಬಾರದು ಎಂದು
ಹಲವು ವಿದ್ಯೆಗಳನೇ ಕಲಿತು
ಬಲವಂತ ಚಲವಂತ ನಲವಂತ ಕೆಡಿಸಿದ
ಮಲೆಯಾಳ ವಿದ್ಯವ ಕೇಳು ॥ ೧೧ ॥

ವೇದಗಳನು ಬಲ್ಲ ಮಾಧವ ಜೋಗಿಯೊಳಾ
ಡಿದೆ ತರ್ಕದ ವಿದ್ಯೆಗಳ
ವಾದಿಸಿ ಎಮ್ಮಯ ಬೂದಿಯ ಚೆಲ್ಲಲು
ವಾದದ ಕಾಣದೆ ಹೋದ ॥ ೧೨ ॥

ಚುಕ್ಕಲಪರ್ವತ ದಿಕ್ಕುನಾಳುವನೊಬ್ಬ
ರಕ್ಕಸ ಮೋರೆಯ ಜೋಗಿ

ಇಕ್ಕಿದ ಮೋಡಿಯ ತರ್ಕವ ಗೆಲೆಯುತ
ಹಕ್ಕಿಯ ರೂಪವ ತಾಳುತಲಿ ॥ ೧೩ ॥

ಮುದ್ದು ಶ್ರೀಮುಕುಟವನೊದ್ದು ದಾಡುವನೆಂದು
ಹದ್ದಿನ ತೆರದಿ ಹಾರಿದರೆ
ಸಿದ್ಧರು ನವಕೋಟಿವಿದ್ಯೆಜಾಲಗಳಿಂದ
ಒದ್ದುತುಳಿದು ಗೋಣ ಮುರಿದೆ ॥ ೧೪ ॥

ಸತ್ತ ತಲೆಯು ಕೈಗೆ ಹತ್ತಿಯಾರ್ಭಡಿಸಿ ಕ
ಣ್ಗತ್ತಲೆ ಕವಿದು ಕಂಗೆಡಲು
ಮತ್ತೆ ನೋಡಿದರತ್ತ ರಣಮಯ ಹೆಣಮಯ
ನೆತ್ತರ ಹಾರವ ಬೇಡಿದರೆ ॥ ೧೫ ॥

ಗೆಣೆಕಾರ ತನ್ನಯ ಹಣೆಯ ರಕ್ತವ ಚೆಲ್ಲಿ
ಉಣಿಸಿದ ತಲೆಯೋಡುಗಳಿಗೆ
ಕುಳಿತಿರ್ದ ಜನವೆಲ್ಲ ಹಣೆಯ ಗಾಯವ ಕಂಡು
ಮುಳಿಗಿದರಕಟಕಟ ಎನಲು ॥ ೧೬ ॥

ಮೀರಿದ ಭೂತವು ಹೀರಲು ರಕ್ತವ
ಕಾರಿ ಬಿದ್ದನು ಸೊರಗುತಲಿ
ಸೇರಿರ್ದ ಜನವೆಲ್ಲ ಯಾರ ಇಳಿಯ ನೋಡಿ
ಗಾರುಡಿಗರು ಸತ್ತರೆನುತ ॥ ೧೭ ॥

ಸೊರಗಿ ಬಿದ್ದರ ಕಂಡು ಮುನಿದೆದ್ದು ಉಪಚರಿಸಿ
ಗರಿಯ ತಾಂಬುಲಗಳಲಿ ಉಳುಹಿ
ಧರೆಯ ಗಾರುಡಿಗಾರ ಮುರಿಮೊತ್ತಿ ಚರಿಸುತ
ಬರಲೊಬ್ಬ ತಡೆದನು ಕೇಳು ॥ ೧೮ ॥

ಪಾತಾಳ ಲೋಕದ ವೇತಾಳನೆಂಬುವ
ಭೂಮಿಯಕಾರದ ಜೋಗಿ
ತಾಕಿದನೆನ್ನಯ ಭೀತಿಸುಮಂತ್ರಕೆ
ಸೋತು ಹೋದನು ನಿಮಿಷದಲ್ಲಿ ॥ ೧೯ ॥

ಲಲನೆ ಕೇಳೆಲೆ ಮತ್ತೆ ಜಲಂಧರನೆಂಬನ
ಬಲುಹನಿನ್ನೇನ ಪೇಳುವೆನು
ಹಲವು ಮಂತ್ರಗಳಿಂದ ಕೆಲವು ದೇವತೆಗಳ
ಬಲು ಸಂಕೋಲೆಗಳನೆ ಹಾಕಿ ॥ ೨೦ ॥



ಹನ್ನೆರಡು ವರುಷವು ಅನ್ನವ ಕಾಣದೆ
ಕನ್ನವ ಕಡಿದೋಡಿಬರಲು
ಪನ್ನಗಧರನನು ಮರೆಯಬಿದ್ದರು ಯಾನೆ
ನನ್ನ ಪಟ್ಟಣಕವ ಬರಲು ॥ ೨೧ ॥

ಇದಿರ ರೂಪನೆ ತಾಳಿ ಇದಿರಾಗಿ ನಡೆವುತ
ಒದಗಿ ಆಡಿದೆ ಅವನೊಡನೆ
ಪದರ ವಿದ್ಯೆಗಳಿಂದ ತುಂದಿ ಮೊದಲಾಡಲು
ಒದಗಿತು ಕೋಪಟೋಪಗಳು ॥ ೨೨ ॥

ಭೂಮಿ ಚಕ್ರಗಳಿಂದ ಆ ಮಹಾದೈತ್ಯನ
ಗೋಮಾಳಗಳ ಮುರಿದೊತ್ತಿ
ತಾಮಸ ತಲೆಯನು ನೇಮದಿಂ ಧರಿಸಿದೆ
ಸೋಮವದನೆಯೆ ಕೇಳಿನ್ನು ॥ ೨೩ ॥

ಕೊಲ್ಲಾಪುರದೊಳೊಬ್ಬ ಬಲ್ಲಿದ ದುರ್ಗಿ ತಾ
ಎಲ್ಲ ವಿದ್ಯೆಕೆ ಗುರುವೆನಿಸಿ
ಕಳ್ಳಜೋಗಿಗಳನು ಮೆಲ್ಲನೆ ಹಿಡಿತಂದು
ಮುಳ್ಳನೂರಿಸಿ ತಿರುಹುವಳು ॥ ೨೪ ॥

ಬಿರಿದ ಸಾರಲು ಕೇಳಿ ಗರ್ವ ಮುರಿವೆನೆಂದು
ಪುರದೊಳು ನಾ ಹೋಗಿ ನಿಲಲು
ಉರವಣಿಸುತಲೆದ್ದು ಬಿರಿನೋಟದಿಂದಲ್ಲಿ
ಸುರಿದಾಳು ತನ್ನ ವಿದ್ಯೆಗಳ ॥ ೨೫ ॥

ಸಿಂಗಿಕಾಳಕೂಟ ನುಂಗಬಾರದ ವಿಷ
ಹಿಂಗದೆ ಮೋಡಿ ಹಾಕಿದರೆ
ಅಂಗೈಯಲೊರಸುತ ಜಂಗುಳಿದುರ್ಗಿಯ
ಶೃಂಗಾರ ಮೂಗುಗಳನರಿದೆ ॥ ೨೬ ॥

ಮಾರಿಯ ಮುರಿದೊತ್ತಿ ಭಾರಿ ಕಿನ್ನರಿಮಾಡಿ
ತೋರಿದೆ ನಾನಾ ವಿದ್ಯೆಗಳ
ಮೂರುಲೋಕದೊಳಗೆನಗೆಣೆಯಿಲ್ಲ ಶ್ರೀಗಂಗೆ
ಮೀರಿದ ಮಲೆಯಾಳ ಜೋಗಿ ॥ ೨೭ ॥

ಭಾರಿ ವಿದ್ಯೆವು ನಮ್ಮ ಗಾರುಡವಿದ್ಯೆವು
ಮೂರು ಲೋಕದ ಇಂದ್ರಜಾಲ

ನಾರಸಿಂಹನ ಮಂತ್ರ ವೀರಭದ್ರನ ಯಂತ್ರ
ಹಾರಿಹೋದವು ನಿನ್ನ ಬಳಿಯ ॥ ೨೮ ॥

ಇಂಥ ವಿದ್ಯೆಗಳೆಲ್ಲ ಏನಾಗಿ ಹೋದವೊ
ಕಾಂತೆ ನಿನ್ನಯ ಸ್ಥಲದೊಳಗೆ
ಚಿಂತೆ ಹತ್ತಿತು ನಿನ್ನ ಚೆಲ್ವರೂಪಿಗೆ ಚಂದ್ರ
ಕಾಂತೆ ನೀ ಕಡೆಗೆಡಬೇಡ ॥ ೨೯ ॥

ಏನು ಕಾರಣ ಮುನ್ನ ತಪವ ನೀ ಮಾಡಿದೆ
ನಾನು ಸಿಲ್ಕಿದೆ ನಿನ್ನ ಬಲೆಗೆ
ಮಾನಿನಿ ಸತಿಸುತರೆನಗಿಲ್ಲ ಶ್ರೀಗಂಗೆ
ನಾನು ನೀನೇಕ ಪ್ರಾಣಿಗಳು ॥ ೩೦ ॥

ದೇಶದೇಶವ ತಿರುಗಿ ಬೇಸತ್ತೆನೆಲೆ ಗಂಗೆ ಸ
ನ್ಯಾಸಿ ಶಿವನ ಮಾರ್ಗಗಳು
ಶೇಷಣಿಗಳವಲ್ಲ ಗಳಿಸಿದ ದ್ರವ್ಯವ
ಕೂಸು ಕುನ್ನಿಗಳುಂಬೋರಿಲ್ಲ ॥ ೩೧ ॥

ಹೆಂಡಿರು ಮಕ್ಕಳು ಎನಗಿಲ್ಲ ಶ್ರೀಗಂಗೆ
ಉಂಡುಟ್ಟು ಸುಖದೊಳಗಿಹುದು
ಮಂಡೆ ಮಾಣಿಕ ಮಾಡಿ ಸಲಹುವೆನೆಲೆ ಗಂಗೆ
ಕೆಂಚಗಣ್ಣಿನ ಶಿವನಾಣೆ ॥ ೩೨ ॥

ಜ್ಞಾನಿಬಸವ ಕೇಳು ಆನಂದ ಜೋಗಿಯು
ನಾನಾ ಗಾರುಡಗಳ ಮಾಡಿ
ಮಾನಿನಿಯೆಳ ಬಾಯ ಮೌನವ ಮಾಡಿದ
ಭಾನು ಪ್ರಕಾಶದ ಜೋಗಿ ॥ ೩೩ ॥

ಹಲವು ಬೋಧೆಗಳೇತಕೆನುತಲಿ ಮಲೆಯಾಳ
ಒಲುಮೆಯ ಬೂದಿಯ ತೆಗೆದು
ತಲೆ ಮಾಲೆಗಳ ಮೇಲೆ ಮಂತ್ರಿಸಿ ಚೆಲ್ಲಲು
ಮಲಗಿತು ಜ್ಞಾನದ ಜ್ಯೋತಿ ॥ ೩೪ ॥

ದೇವಬಸವ ಕೇಳು ಭಾವಜ ಹರಜೋಗಿ
ಸ್ತ್ರೀವಶ್ಯ ಜನವಶ್ಯಗಳನು
ಭಾವೆಯ ತಲೆಯೊಳು ಕಾಮಾರಿ ತಳೆಯಲು
ಜೀವದ ಜ್ಞಾನವ ತಿಳಿದು ॥ ೩೫ ॥



ತಳೆಯಲು ಚಂದ್ರನ ಕಳೆಯೇರಿ ಕಾಂತಿಯು
ತಿಳಿದಳು ತನ್ನಯ ಶಿವನ
ಸುಳಿದಾನು ಎನ್ನಯ ಎಳೆಭಕ್ತಿಭಾವಕೆ
ತಳಿರ ಪಾದಕೆ ಎರಗಿದಳು ॥ ೩೬ ॥

ಖಾಸಭಗದೊಳಿಹ ಏಸೊಂದು ದಿನಿಸಿನ
ಮೀಸಲ ಫಲಗಳ ನೀಡಿ
ಸಾಸಿರ ಭಾಗದಿ ಸೋಸಿದ ಬಿಳಿಯೆಲೆ
ಈಶನಿಗೆಡೆಮಾಡಿದಳು ॥ ೩೭ ॥

ಮರುಗ ಮಲ್ಲಿಗೆ ಜಾಜಿ ಸುರಗಿ ಸೇವಂತಿಗೆ
ಸರಗಳ ಮಾಡಿ ಧರಿಸುತ
ಬೆರಸಿದ ಕಸ್ತೂರಿ ಪುನಗನು ಲೇಪಿಸಿ
ಕರವ ಮುಗಿದು ಸ್ತುತಿಸಿದಳು ॥ ೩೮ ॥

**ಜೋಗಿ ಪದನು :**

ಜೋಗಿ ಬಂದನು ನೋಡಿರೆ ನಿರಂಜನ ಜೋಗಿ ಬಂದನು ಕಾಣಿರೆ
ನಾಗಸ್ವರಸುರಲೋಕವೆಂಬ ಕಿನ್ನರಿ ಪಿಡಿದು ಜೋಗಿ ಬಂದನು ನೋಡಿರೆ ॥ ಪಲ್ಲ ॥

ಮೂರು ನಾಳವ ನೋಡಿ ಮಧ್ಯನಾಳವ ಹೊಳವುಮಾಡಿ
ಆರಾದಿ ಚಕ್ರದ ಪೀಠವದರ ಮೇಲೆ ಊರ್ಧ್ವಮುಖ ಶೂನ್ಯಶೂಲ
ಮೂರು ತನು ಸೋರೆಕಾಯಿ ಈಡಪಿಂಗ ತಂತಿಸ್ವರವೇ ಜೀವಾಳವು
ಆರಾರು ಮೆಟ್ಟಿನ ಕಿನ್ನರಿಯ ನುಡಿಸುತ ॥ ೧ ॥

ದಶದಿಕ್ಕು ಪದನಂಗಳೆ ನಿರಾಕಾರ ಜಟಾಮುಕುಟವು
ಶಶಿರವಿಗಳಗ್ನಿ ನೇತ್ರಂಗಳು ಮೇರುವಂದಿರುವೆ ಕಾಮಾಕ್ಷಿಯು
ಎಸೆವ ನಕ್ಷತ್ರಂಗಳೆ ಕೊರಳಲ್ಲಿ ವಸರಿಸಿದ ದಾರಗಳು
ಕುಸುಮಶರನ ಸುಟ್ಟ ಬೂದಿಯ ಮೈಯೊಳು ಪೂಸಿ ॥ ೨ ॥

ಫಣಿಮಣಿಗಳ ಭರಣವು ಪಂಚಮಹಾತತ್ವವೆ ಜನ್ನಿವಾರ
ಬಣಗುವೆಣನ ಸೀಳಿ ಚರ್ಮವನುಗಿದುಟ್ಟು ಗಜಚರ್ಮಗಳ ಪೊದ್ದನು
ಗುಣತ್ರಯವೆ ಹುಲ್ಲೆಯ ಮರಿ ಡಮರುಗ ಹಸ್ತಚಕ್ರದ ಶೂಲವು
ಪ್ರಣಮವೇ ಸಿಂಗಿ ತಲೆಯೋಡು ಕಪ್ಪರವಿಡಿದು ॥ ೩ ॥

ರಾಗದಿವ್ಯ ಫಣಿಯ ಮೇಲೆ ವೈರಾಗಯದ ಕಂತೆ ತೊಟ್ಟು
ಸಾಗರವೆಂಬ ಕಮಂಡಲ ಬ್ರಹ್ಮಾಂಡವೇ ಕಪ್ಪಾಳ
ಆಗುಹೋಗೆರಡಿಲ್ಲದೆ ಅಖಂಡ ಪರಿಪೂರ್ಣವಾದ
ಶ್ರೀಗುರುಶರಣನು ಭಾವಭಿಕ್ಷೆಕೆ ಬಂದ ॥ ೪ ॥

ಆದಿಮಧ್ಯಂತರಹಿತ ಸಕಲ ತತ್ವವೇ ನಿತ್ಯತೃಪ್ತ
ವೇದಶಾಸ್ತ್ರಗಮ ಪೌರಾಣ ಸ್ತುತಿಗಳನ್ನು ಭೇದಿಸದಗಮ ಜೋಗಿ
ನಾದ ಕಳೆ ಬಿಂದುಗಳಿಗೆ ಸಿಲುಕದಿಂದ ಮೂದೇವರೊಡೆಯ ಜೋಗಿ
ಆದಿಗುರು ಪರಶಿವ ಸಂಗಮೇಶ್ವರನೆಂಬ ಜೋಗಿ ॥ ೫ ॥

**ವಚನ :**

ವೇಣಿ ಕಿನ್ನರಿಯ ಪಿಡಿದನೆರ ಜೋಗಿ । ಭಕ್ತಿ
ಪ್ರಾಣಕಲ್ಪ ಚಿಂತಮಣಿಯೆ ಎಲೆ ಜೋಗಿ
ವಾಣಿಪತಿಗೆ ನಿಲುಕದಿಹನ ಎಲೆ ಜೋಗಿ । ನನ್ನ
ಪ್ರಾಣವಾದರೆ ನಿನ್ನಾ ದಯ ಎಲೆ ಜೋಗಿ ॥ ೧ ॥

ಕಲಹಪ್ರಿಯ ನಾರದನೆ ಮುನಿರಾಯ । ನೀನು
ಒಲಿದು ಕೇಳು ಇವಳ ಸ್ತುತಿಯ ಮುನಿರಾಯ
ಬಲೆಗಾರರ ಮಗಳಲ್ಲವೊ ಮುನಿರಾಯ । ನನ್ನ
ತಲೆಯೊಳಗಣ ಬ್ರಹ್ಮಕಾಂತಿಯು ಮುನಿರಾಯ ॥ ೨ ॥

ಇಂಥ ಸತಿಯ ಬಿಟ್ಟರಿನ್ನು ಮುನಿರಾಯ । ನಮಗೆ
ಎಂಥ ಮುಕ್ತಿ ದೊರಕುವದೊ ಮುನಿರಾಯ
ಮಂತ್ರದಿಂದ ಮರುಳಾದಳೊ ಮುನಿರಾಯ । ದೇ
ಶಾಂತ್ರ ಫಲವು ದಕ್ಕಿತೆಮಗೆ ಮುನಿರಾಯ ॥ ೩ ॥

ಏನೆಂದು ಹೇಳಿ ಶಿವನು ನಗುತ ಗುರುರಾಯ ರತ್ನ
ಕೆಂದಾವರೆಯ ಹೂವ ಮಾಡಿ ಗುರುರಾಯ
ಚಂದ್ರಕಾಂತಿ ಜಡಯೊಳಿಟ್ಟು ಗುರುರಾಯ । ಮುಕ್ತಿ
ಮಂದಿರದೊಳಗಡಿಸಿದನು ಗುರುರಾಯ ॥ ೪ ॥

ಮರುಳ ಮಾಡಿ ಶಿರದೊಳಿಟ್ಟು ಗುರುರಾಯ । ಪುಷ್ಪ
ದರಳು ಮಡಿ ಧರಿಸಿಕೊಂಡು ಗುರುರಾಯ
ಮರುಳ ಜಾತಿ ಕಂಡರೆಂದು ಗುರುರಾಯ । ಶಿವನು
ಇರುಳು ಹಗಲು ಚಿಂತಿಸಿದನು ಗುರುರಾಯ ॥ ೫ ॥

ಮಡದಿ ಗಿರಿಜೆ ಕಂಡಳೆಂದು ಗುರುರಾಯ । ತನ್ನ
ಜಡೆಯ ಸುತ್ತಿ ಮಡಗಿಕೊಂಡು ಗುರುರಾಯ
ಬೆಡಗಿನಿಂದ ನಡೆದು ಬರುತ ಗುರುರಾಯ । ಮುನಿಯೆ
ಒಡೆಯದಿರು ಸುದ್ದಿಗಳನು ಗುರುರಾಯ ॥ ೬ ॥



ಆರು ಕಾಣಗೊಡದೆ ಬಂದು ಗುರುರಾಯ । ಚಿತ್ರ
ಸೇರಿಕೊಂಡು ಅರಮನೆಯನು ಗುರುರಾಯ
ನಾರಿ ಗಿರಿಜೆ ಕಂಡಳೆಂದು ಗುರುರಾಯ । ಶಿವಗೆ
ತೋರಿತಿನ್ನು ಎದೆಯ ಬಾಗಿಲು ಗುರುರಾಯ ॥ ೭ ॥

ದೇವಮನೆ ಹೊಕ್ಕರಾಗ ಗುರುರಾಯ । ಚಿಕ್ಕ
ಭಾವೆಗೌರಿ ಪಾದತೊಳೆಯೆ ಗುರುರಾಯ
ಸೇವೆಮಾಡಿ ಸಲಿಸಿಕೊಂಡು ಗುರುರಾಯ । ತಮ್ಮ
ಚಾವಡಿಗೆ ನಡೆದು ಬಂದು ಗುರುರಾಯ ॥ ೮ ॥

ಮುತ್ತಿನ ಸಿಂಹಾಸನದ ಮೇಲೆ ಗುರುರಾಯ । ಜಗದ
ಕರ್ತ ಬಂದು ಮಂಡಿಸಿದನು ಗುರುರಾಯ
ಸುತ್ತ ಬಂದ ಮೆರೆದರಾಗ ಗುರುರಾಯ । ನಮ್ಮ
ಹೆತ್ತ ಶಿವನು ಬಂದನೆಂದು ಗುರುರಾಯ ॥ ೯ ॥

ದೊಡ್ಡ ಹರಿಯು ಬ್ರಹ್ಮಾದಿಗಳು ಗುರುರಾಯ । ಶಿವಗೆ
ಒಡ್ಡೋಲಗವ ಕೊಟ್ಟರಾಗ ಗುರುರಾಯ
ಗಡ್ಡಜಡೆಯ ಘನ ಮಹಾಂಶು ಗುರುರಾಯ । ಕರವ
ನೊಡ್ಡಿ ಶಿವನ ಓಲೈಸಿದರು ಗುರುರಾಯ ॥ ೧೦ ॥

ನಿಗಮದೊಡೆಯ ಸಿಂಹಾಸನದಿ ಗುರುರಾಯ । ಕುಳಿತು
ಭುಗಿಲು ಹುಟ್ಟಿತೆದೆಯೊಳಿನ್ನು ಗುರುರಾಯ
ಅಗಜೆ ಗಿರಿಜೆ ಕಂಡಳೆಂದು ಗುರುರಾಯ । ಚಿಂತೆ
ಮಿಗಿಲು ಹುಟ್ಟಿ ನೋಡುತಿರಲು ಗುರುರಾಯ ॥ ೧೧ ॥

ಇಂಥ ಪರಮ ಗಿರಿಜೆದೇವಿ ಗುರುರಾಯ । ತಮ್ಮ
ಚಿತ್ತದೊಳಗೆ ಎರಡಾಗುತಲಿ ಗುರುರಾಯ
ಹೊತ್ತು ನಿಮಿಷ ಕುಳಿತುದಿಲ್ಲ ಗುರುರಾಯ । ಶಿವಗೆ
ಎತ್ತಣಿಂದ ಕೇಡು ಬಂತೊ ಗುರುರಾಯ ॥ ೧೨ ॥

ಎಂಟು ದಿಕ್ಕುಗಳನು ನೋಡಿ ಗುರುರಾಯ । ಶಿವನು
ತುಂಟತನವ ಮಾಡಿದಾನೊ ಗುರುರಾಯ
ಗಂಟಲೊಳಗೆ ತಡೆಗಳಿಲ್ಲ ಗುರುರಾಯ । ನಮಗೆ
ಕಂಟಕಗಳ ತಂದ ಶಿವನು ಗುರುರಾಯ ॥ ೧೩ ॥

ಮಾಯ ಮಾಡಿದ ಮರ್ತ್ಯದವರೊಳಗೆ ಗುರುರಾಯ । ಶಿವನು
ಕಾಯ ಜೀವಗಳನು ಕಳೆದನೇನೊ ಗುರುರಾಯ
ಬಾಯ ತಡೆಗಳಿದ್ದುದಿಲ್ಲ ಗುರುರಾಯ । ದೊಡ್ಡ
ಹಾವಳಿಯ ತಂದ ಶಿವನು ಗುರುರಾಯ ॥ ೧೪ ॥

ಅಳ್ಳೆದೆಯೊಳು ಸಲಿಸಿಕೊಂಡು ಗುರುರಾಯ । ಶಿವನು
ವೀಳ್ಯೆಗಳನು ಬೇಡಲಿಲ್ಲ ಗುರುರಾಯ
ಕಳ್ಳನಹುದು  ಬಲ್ಲ ಕೆಲಸವು ಗುರುರಾಯ । ದೊಡ್ಡ
ತಳ್ಳಿಗಳನು ಮಾಡಿಕೊಂಡ ಗುರುರಾಯ ॥ ೧೫ ॥

ತಿಳಿದುನೋಡಲಿಲ್ಲ ಶಿವನು ಗುರುರಾಯ । ಎದ್ದು
ಕುಳಿತುಕೊಂಡು ಚಿಂತಿಸುತಲಿ ಗುರುರಾಯ
ಗಳಿಲನೆದ್ದು ಸಿಂಗಿರುಸುತಲಿ ಗುರುರಾಯ । ಶಿವನ
ತಿಳಿದೆನೆಂದು ನಡೆದಳಾಗ ಗುರುರಾಯ ॥ ೧೬ ॥

ಮೆರೆವ ದುಕುಲಾಂಬರವನುಟ್ಟು ಗುರುರಾಯ । ಸರ್ವಾ
ಭರಣ ಹಾರಗಳನು ತೊಟ್ಟು ಗುರುರಾಯ
ಶರಣ ಸತಿಯರ ಕೂಡಿಕೊಂಡು ಗುರುರಾಯ । ತಮ್ಮ
ಹರನ ಓಲಗಕೆ ನಡೆದಳು ಗುರುರಾಯ ॥ ೧೭ ॥

ಪಡೆದ ಮಗನ ಕೂಡಿಕೊಂಡು ಗುರುರಾಯ । ಶಿವನ
ಮಡದಿ ಬಂದು ಪಾದಕೆರಗಲು ಗುರುರಾಯ
ತೊಡೆಯ ಮೇಲೆ ಕುಳಿತಳಾಗ ಗುರುರಾಯ । ಶಿವನು
ಮಡದಿಯ ನೋಡಿ ನಗುತಲಿರ್ದ ಗುರುರಾಯ ॥ ೧೮ ॥

ಭಾಗೀರಥಿಯ ಜಡೆಯೊಳಿಟ್ಟು ಗುರುರಾಯ । ಶಿವನು
ಹೇಗಾದಿತೊ ಜಗದೊಳಗಯೆನುತ ಗುರುರಾಯ
ಕೂಗಿ ಕದನಗಳ ಮಾಡುವಳು ಗುರುರಾಯ । ಎಂದು
ಧ್ಯಾನಿಸಿದ ಚಿಂತೆಗಳನು ಗುರುರಾಯ ॥ ೧೯ ॥

ಸೂಚನೆಯ ಕಂಡಳಿನ್ನು ಗಿರಿಜಾತೆ । ಭಾಳ
ಲೋಚನ ಶಿವನ ತಂದ ಕಳವ ಗಿರಿಜಾತೆ
ನುಚಿಕೆಗಳ ಕೊಂಬೆನೆಂದು ಗಿರಿಜಾತೆ । ಶಿವನ
ಯೋಚಿಸಿ ಮಾತಾಡಿಸಿದಳು ಗಿರಿಜಾತೆ ॥ ೨೦ ॥

**ಪದನು :**

ಪರಮಗುರು ಪ್ರಾಣಲಿಂಗಿ ನೀಯೆನ್ನ ಹೊರೆದು ಪಾಲಿಸುವ ಶಿವನೇ
ತಿರುಗುತಲಿ ಆವಾವ ರಾಜ್ಯಗಳ ಚರಿಸಿದಿರಿ ಶರೀರಗಳು ಬಡವಾದವು ॥ ಪ ॥



ಪಟ್ಟಮಂಚದ ಮೇಲೆ ಶಿವನಿಗೆ ಪಟ್ಟುಪಟ್ಟಾವಳಿಯ ಹಾಸಿಕೆ
ಎಷ್ಟು ವರ್ಣದ ಪೂಜೆ ಸರ್ವಸಂಭ್ರಮಗಳನು ಮುಟ್ಟಿಹೇಳುವರಿಗಳವೆ
ಮಟ್ಟಿಹಾರುವನ ಮಾತು ಕೇಳುತ ಸುಟ್ಟರಾಜ್ಯಗಳ ತಿರುಗಿ
ಮೆಟ್ಟಿನಡೆದು ಪಾದಪದ್ಮಂಗಳು ಕಂದಿಹವು ಸೃಷ್ಟಿಪಾಲಕನೆ ನಿಮಗೆ ॥ ೧ ॥

ವೇದಶಾಸ್ತ್ರದಲಿ ತಿಳಿದು ಹರಿ ನಿಮ್ಮ ಪಾದಪದ್ಮವ ಭಜಿಸಲು
ಪೂಜಿಸಲು ಪುಷ್ಪ ಕಂದಲು ತನ್ನ ಕಣ್ಣೆಂಬ ನೈದಿಲನವೇರಿಸಿದನು
ಮಾಧವ ಶ್ರೀಕೃಷ್ಣಗೆ ಶಿವ ನಿಮ್ಮ ಮೇದಿನಿಯ ಧಾರೆಯೆರೆದು
ಹಾದಿ ಬಟ್ಟೆಗಳರಗೊಡವಿಲ್ಲದ ಅರಮನೆಯೊಳೋದಿಕೊಂಡಿರಬಾರದೆ ॥ ೨ ॥

ನರಹರಿಯು ನಯನವಿಟ್ಟು ಪೂಜಿಸುವ ಶ್ರೀಚರಣ ಕಂದಿದವೋ
ಸರಸಿಜೋದ್ಭವ ಮುಟ್ಟಿಪೂಜಿಸುವ ಶ್ರೀಮುಕುಟ ಭರದಿ ತೂಕಗಳಾದವೋ
ಬಿರುಗಾಳಿಗಳು ಬೀಸಲು ಜಡೆಯೆಲ್ಲ ಗಿರಿಯ ಮಣ್ಣುಗಳಾದವೋ
ಎರೆದು ಮಜ್ಜನ ಮಾಡಿ ದುಗುಡವನು ಬಿಡಿಸುವೆನು ಅರಮನೆಗೆ ತೆರಳಿ ಗುರುವೇ ॥ ೩ ॥

ಗುರುವೆ ಪರಶಿವನೆ ನಿಮ್ಮ ಚೆಲ್ವಿಕೆಯ ಉರಗೇಂದ್ರ ಹೇಳಲಳವೆ
ಅರುವತ್ತಾರು ಕೋಟಿ ದೈತ್ಯರನು ಕೊಲುವಾಗ ಕರಕರನೆ ಕಂದಲಿಲ್ಲ
ಬರಿಯ ರಾಜ್ಯಗಳ ತಿರುಗಿ ಶಿವ ನಿಮ್ಮ ಸಿರಿಮೊಗವು ಕಂದಲೇಕೆ
ಅರಿಯಬಾರದು ನಿಮ್ಮ ದುಗುಡಗಳ ನಮಗಿನ್ನು ಮರೆ ಮಾಡಲಿ ಬೇಡವಯ್ಯ ॥ ೪ ॥

ಕುಲಗಿರಿಗಳೊಳು ತಿರುಗುತಾ ಶಿವ ನಿಮ್ಮ ಸಲೆ ಸಿದ್ಧರೊಳಗಾಡಿದೊ
ಹಲವು ಮಂತ್ರಗಳನು ಕಲಿತು ಜಾಲೇಂದ್ರನ ತಲೆಯ ನೆಲದೊಳು ಕೆಡಹಿದೊ
ಉಲಿದು ಬೊಬ್ಬೆಗಳಿಕ್ಕುತ ಇಂದ್ರನ ತಲೆ ಮಣ್ಣ ಕಚ್ಚುತಿರಲು
ತೊಲಗದೆ ರಕ್ತ ರಣಮಂಡಲಂಗಳ ಕಂಡು ಉಲಿಕಿ ಮನದೊಳು ಬೆದರಿದೊ ॥ ೫ ॥

ಭಸ್ಮಸೂರಗೆ ನಿಮ್ಮಯ ಉರಿಹಸ್ತವ ವಶಮಾಡಲಾಕ್ಷಣ
ಪಶುಮಾನವ ದೆಸೆಗೆಡಿಸಿದಾರ್ಭಟವೊ ಪುಸಿಯಾಡಲಿ ಬೇಡವಯ್ಯ
ಶಶಿಮುಖಿಯ ರೂಪತಾಳಿ ವಿಷ್ಣುವು ಭಸ್ಮಸುರನ ಕೊಲ್ಲುತ
ಮಿಸುನಿ ಪುತ್ಥಳಿ ಹೆಣ್ಣುರೂಪಗಿ ತೋರಿದರೆ ಒಸೆದು ಕೂಡಿದ ಭ್ರಮೆಗಳೋ ॥ ೬ ॥

ಮಂತ್ರಿ ಬಸವಯ್ಯ ಕೇಳಿ ಗೌರಮ್ಮ ಇಂತು ಹಾಸ್ಯಗಳನಾಡಿ
ಸಂತೈಸಿಕೊಂಡು ಇರಲಾರದೆ ಸಭೆಯೊಳಗೆ ಮುಂತೆ ಬಯಲನೆ ಮಾಡುತ
ಸಂತತ ಗುರುಸಂಗನ ತೊಡೆಯೊಳಗೆ ಅಂತು ಬಲ್ಮೆಯಲಿ ಕುಳಿತು
ಇಂತು ಸೈರಣೆ ಈತಗೇಕೆಂದು ಕೇಳಿದಳು ಅಂತರಂಗದ ಬಲ್ಮೆಯಲಿ ॥ ೭ ॥

**ವಚನ :**

ಈಶ ಶಿವನು ನೋಡಿ ನಗುತ ಎಲೆ ದೇವಾ । ನಿಮ್ಮ
ಆಸೆ ಬಾಸೆ ಇಳಿಯಿತಿನ್ನು ಎಲೆ ದೇವಾ
ದೇಶ ಸೀಮೆ ತಿರುಗಿ ಬಂದೆ ಎಲೆ ದೇವಾ । ನಿಮಗೆ
ಏಸು ಪೀಡೆ ಸೋಕಿದಾವೊ ಎಲೆ ದೇವಾ ॥ ೧ ॥

ಕಾಗೊಮೋರೆ ನಾರಂದನು ಎಲೆ ದೇವಾ । ನಿಮಗೆ
ಜೋಗಿ ರೂಪ ಧರಿಸಿಕೊಂಡು ಎಲೆ ದೇವಾ
ಸಾಗಿ ರಾಜ್ಯ ತಿರುಗುವಾಗ ಎಲೆ ದೇವಾ । ದೊಡ್ಡ
ಮೂಗಪೀಡೆ ಸೋಂಕಿತೇನೊ ಎಲೆ ದೇವಾ ॥ ೨ ॥

ಸುತ್ತಿ ಬಳಸಲಿ ತಿರುಗುವಾಗ ಎಲೆ ದೇವಾ । ದೇಹ
ಬಿತ್ತಿತಿನ್ನು ಅಕ್ಕುಟಕುಟಾ ಎಲೆ ದೇವಾ
ಸತ್ತ ಪೀಡೆ ಏಸು ಉಂಟೊ ಎಲೆ ದೇವಾ । ನಿಮ್ಮ
ನೆತ್ತಿ ಜಡೆಯ ಹೊಕ್ಕವೇನೊ ಎಲೆ ದೇವಾ ॥ ೩ ॥

ಬಣ್ಣವಳಿದು ಶರೀರವಿಳಿದು ಎಲೆ ದೇವಾ । ನಿಮ್ಮ
ಕಣ್ಣದೃಷ್ಟಿ ತಗ್ಗಿತ್ಯಾಕೆ ಎಲೆ ದೇವಾ
ಮಣ್ಣು ಮಸಣ ತಿರುಗುವಾಗ ಎಲೆ ದೇವಾ । ದೊಡ್ಡ
ಹೆಣ್ಣು ಪೀಡೆ ಸೋಂಕಿತೇನೊ ಎಲೆ ದೇವಾ ॥ ೪ ॥

ಕೆಟ್ಟ ಮೋರೆಯ ನಾರಂದನು ಎಲೆ ದೇವಾ । ನಿಮ್ಮ
ಬೆಟ್ಟದೊಳಗೆ ಹೊಗಿಸಿದಾನೊ ಎಲೆ ದೇವಾ
ರೊಟ್ಟಿ ಹಿಂಡಿ ಪಲ್ಲೆಕಾಯಿ ಎಲೆ ದೇವಾ । ನಿಮ್ಮ
ಮುಟ್ಟಿ ಜಡೆಯ ಹೊಕ್ಕಿತೇನೊ ಎಲೆ ದೇವಾ ॥ ೫ ॥

ಜೂಟಕಾರ ಮುನಿಯು ನಿಮ್ಮ ಎಲೆ ದೇವಾ । ಹಾಳು
ತೋಟದೊಳಗೆ ಹೊಗಿಸಿದಾನೊ ಎಲೆ ದೇವಾ
ಸೋಟಿ ಹರುಕ ಮೂಳ ಪೀಡೆ ಎಲೆ ದೇವಾ । ನಿಮ್ಮ
ಕೂಟದೊಳಗೆ ಕೂಡಿತೇನೊ ಎಲೆ ದೇವಾ ॥ ೬ ॥

ಏಳು ಎರಡು ಯುಗದಲಿಂಥ ಎಲೆ ದೇವಾ । ಒಂದು
ಕಾಲದೊಳು ಗುರುತನರಿಯೆ ಎಲೆ ದೇವಾ
ಬಾಲಿ ಬದುಕುವ ವೇಳೆಯಲ್ಲಿ ಎಲೆ ದೇವಾ । ನಮ್ಮ
ಕೂಳ ನೀರ ಕೆಡಿಸ ಬಂತೊ ಎಲೆ ದೇವಾ ॥ ೭ ॥



ಎಷ್ಟು ಬಲಿಯ ಕೊಟ್ಟರಿನ್ನು ಎಲೆ ದೇವಾ । ಬಹಳ
ಕಷ್ಟವಿನ್ನು ಬಿಡುವುದಲ್ಲ ಎಲೆ ದೇವಾ
ಭ್ರಷ್ಟ ಮುನಿಯು ಕೆಡಿಸಿದಾನು ಎಲೆ ದೇವಾ । ಪೂರ್ವ
ದೃಷ್ಟವಿನ್ನು ಬದುಕುವುದು ಎಲೆ ದೇವಾ ॥ ೮ ॥

ಆವ ಕಾಲದಲ್ಲಿ ನಮಗೆ ಎಲೆ ದೇವಾ । ನಿಮ್ಮ
ಗೋವಿಂದಜರ ಹಗಯು ಎಲೆ ದೇವಾ
ಸಾವು ನೋವು ಬೇನೆಗಳನು ಎಲೆ ದೇವಾ । ಕಂಡು
ತಾವು ನೋಡಿ ನಗುವರಿನ್ನು ಎಲೆ ದೇವಾ ॥ ೯ ॥

ಎಂಥ ವಿಧಿಯು ನಮಗೆ ಬಂತೊ ಎಲೆ ದೇವಾ । ಜಗದ
ಜಂತು ಮಾನವರ ಪಾಡೇನೆಲೆ ದೇವಾ
ಎಂತು ಮಾಡಿ ಬಿಡದಿದ್ದರೆಲೆ ದೇವಾ । ನಮಗೆ
ಇಂತು ಮೂರು ಬಟ್ಟೆ ನಾವು ಎಲೆ ದೇವಾ ॥ ೧೦ ॥

**ಸಂಗತ್ಯ :**

ದೇವತೆಗಳು ಕೂಡಿ ಸೇರಲಾರದೆ ನಿಂದ
ಜೀವಕೆ ಮೂಲ ಮಾಡಿದರು
ಆವ ಪರಿಯಲಿಂದ ಶಿವ ನೀವು ಅಳಿದಾರೆ
ತಾವೆ ರಾಜ್ಯವನ್ನಾಳ್ವೆನುತ ॥ ೧ ॥

ಕೋಕ ಮುನಿಯು ನಾರಂದ ನೋಡಿ ಪ್ರಾಣದ
ಏಕೋ ಶಿವನ ಕರೆದೊಯ್ದು
ಲೋಕದ ಮನುಜಾರಿಗಳವಲ್ಲ ರೂಪಿಗೆ
ಸೋಕಿದವೇನೊ ಕಾಲಮೃತ್ಯು

ಹಲವು ಮಂತ್ರವ ಮಾಡಿ ಬಿಡಿಸುವ ವೈದ್ಯಗೆ
ತಲೆಯೆಲ್ಲ ಕಣ್ಣಾಗಬೇಕು
ನೆಲೆಯಿಲ್ಲ ನಮ್ಮಯ್ಯ ಸಂಸಾರ ಬದುಕಿಗೆ
ಕಲಹ ಕಂಟಕ ಮುಂದೆ ನಮಗೆ ॥ ೩ ॥

ಆವಾವ ಕಂಟಕ ಬಂದರೆ ಉಣಬೇಕು
ದೇವ ನೀ ನಡೆ ಅರಮನೆಗೆ
ಸೇವೆಗಳನು ಮಾಡಿ ಸಕಲುಪಚರದಿಂದೆ
ನೋವು ಬ್ಯಾನಿಯ ಬಿಡಿಸುವೆನು ॥ ೪ ॥

ಸಕಲ ಪೀಡೆಯು ನಿಮ್ಮ ಶಿಖದಲೆಯೊಳಗಿಂದು
ಸಕುನಗಾರ್ತಿಯರು ಪೇಳಿದರು
ಅಖಿಳರಿಗಳವಲ್ಲ ಮಕುಟವ ಬಿಡಿಸಲು
ವಿಕಳತೆ ನಾ ಬಿಡಿಸುವೆನು ॥ ೫ ॥

ಜಡೆದಲೆಯನು ಬಿಚ್ಚಿ ಒಡೆದು ಹಿಕ್ಕನೆ ಮಾಡಿ
ತೊಡೆವೆನು ಸಂಪಿಗೆ ಎಣ್ಣೆಗಳಾ
ಅಡಕಳವೆಯನಿಕ್ಕಿ ಸುಡುವ ನೀರೆರೆದರೆ
ಕಡೆಗೆ ನಿಲ್ವದು ನಿಮ್ಮ ಮೃತ್ಯು ॥ ೬ ॥

ಎಣ್ಣೆ ಮಜ್ಜನಗಳು ಮಾಡಲು ಶರೀರವು
ಬಣ್ಣ ಬಾಹುದು ನಿಮಿಷದಲ್ಲಿ
ಕಣ್ಣಿಗಂಜನಗಳನೆಚ್ಚಲು ಸೋಂಕಿದ
ಹೆಣ್ಣು ಪೀಡೆಯು ಕಡೆ ನಿಲ್ಲುವುದು ॥ ೭ ॥

ಅವರಿವರೇತಕೆ ಭವಹರ ರುದ್ರನೆ
ಜಯ ಜಯ ನಿಮ್ಮಯ ಶರೀರ
ಯುವತಿಗಿರಿಜೆಯ ಮಾತಿಗೆ ಶಿವ ನಸುನಗುತ
ಇವಳೇನ ಬಲ್ಲಾಳೊ ಎನುತ ॥ ೮ ॥

ಆರಾರು ಅರಿಯದ ಮೀರಿದ ಕಳವನು
ಗೌರಿಗೆ ಹೇಳಿದರಾರು
ಪೋರನಹುದು ಚಿಕ್ಕನಾರಂದ ಮುನಿಯು
ಹಣ್ಣಿತು ಮುಂದಣ ಕಥನ ॥ ೯ ॥

ಬಣ್ಣನೆ ಮಾತುಗಳಾಡುತ ನಾರಂದ
ಕಣ್ಣೀಲಿ ಮೀಟಿದನೇನೊ
ಹೆಣ್ಣಿನ ಮಾತನು ಇವಳೇನು ಬಲ್ಲಳೊ
ಹಣ್ಣಿತು ಮುಂದಣ ಕಥನ ॥ ೧೦ ॥

ಕತನಗಳನು ಇಕ್ಕಿ ಕಡೆಯಲ್ಲಿ ತಾ ಕುಳಿತು
ಹಿತಕಾರಿಯಾಗಿ ನಿಂದಿಹನು
ಕುತಕದ ಮಾತುಗಳ ಇವಳೇನ ಬಲ್ಲಳೊ
ಯತಿಮುನಿ ಜಾಡಿಗನಹುದು. ॥ ೧೧ ॥

ಗಂಭೀರ ಮುನಿಯೆಂದು ರಂಭಿಸಿ ಕರದೊಯ್ದು
ರಂಭೆಯ ತಂದುದ ಮಾಜಿದರೆ



ತುಂಬಿದೋಲಗದೊಳು ಅಂಬಿಗಿತ್ತಿಯು ಎಂದು
ಸಿಂಬೆಯ ಮಗನು ಸೂಚಿಸಿದ ॥ ೧೨ ॥

ರಂಡೆಯ ಮಗನು ನಾರಂದಮುನಿಯೆಂದು
ಕೆಂಡಗಣ್ಣಿನ ಶಿವ ನಗುತ
ಹೆಂಡರಿಬ್ಬರ ಜಗಳ ನೋಡಲುಬೇಕೆಂದು
ಮಂಡಿಸಿದನು ಸರ್ವ ಜನರ ॥ ೧೩ ॥

ಜಗಳವಾಡಲು ಕಂಡು ಆಗ ಉಣ್ಣುದ ಬಿಟ್ಟು
ನಗುವರು ಕುಹಕದ ನುಡಿಗೆ
ಅಗಜೆಗೆ ಗಂಗೆಗೆ ಮಿಗಿಲಾಗಿ ಬೀಳಲು
ಜಗವೆಲ್ಲ ನೆರೆದುದು ಮುಂದೆ ॥ ೧೪ ॥

ಗಿರಿಜೆಯ ನುಡಿಗೇಳಿ ಹರ ನಸುನಗುತಲಿ
ಇವರರ್ತಿ ನೋಡಬೇಕೆನುತ
ಮರೆಮಾಡಿ ಮಾತೊಂದು ಅರುಹಿ ನೋಡುವೆನೆಂದು
ಪರಶಿವ ನುಡಿದಾ ಪಾರ್ವತಿಗೆ ॥ ೧೫ ॥

**ಪದನು :**

ಪ್ರಾಣದೊಲ್ಲಭೆ ಕೇಳು ಗಿರಿಜಾತೆ ಜಾಣತನದ ನುಡಿಗಳ
ಹೂಣಿಸಿ ಸಭೆಯೊಳಗೆ ಹುಸಿಮಾತನಾಡವರೆ ಕಾಣದುದ ನುಡಿವರೇನೆ ॥ ಪಲ್ಲವಿ ॥

ಎಲ್ಲಿಯ ಮಾತುಗಳು ಗಿರಿಜಾತೆ ನಾನೊಂದು ಮಲ್ಲಿಗೆಯ ಹೂವ ತಂದೆ
ಸಲ್ಲಲಿ ಶಿವಗೆಂದು ಅರ್ಪಿತವ ಮಾಡಿದರೆ ಬಲ್ಲವರ ಜರಿವರೇನೆ
ಎಲ್ಲರು ಮುಡಿವುದಲ್ಲ ಗಿರಿಜಾತೆ ಅಲ್ಲಮಪ್ರಭುವೇ ಬಲ್ಲ
ಮಲ್ಲಿಕಾರ್ಜುನದೇವ ಮಂಡೆಯೊಳು ಧರಿಸಿದನು ಚಲ್ವಗಿರಿಜಾತೆ ಕೇಳು ॥ ೧ ॥

ದೇಶದೇಶವ ತಿರುಗುತ ಎಲೆಗೌರಿ ದಾಸಾಳದ ಹೂವ ತಂದೆ
ಈಶ್ವರನ ಜಡೆಯೊಳಗಿಟ್ಟು ಅರ್ಪಿಸಿದರೆ ಹಾಸ್ಯಮಾಡಿ ಜರಿವರೇನೆ
ಮೀಸಲಳಿಯದ ಪುಷ್ಪವು ಗಿರಿಜಾತೆ ಹೇಸಿಮಾನವರಿಗೆ ಸಲ್ಲದು
ದೋಷದುರ್ಗುಣಗಳು ಅಳಿದಂತೆ ಪರಶಿವನ ಬಾಸಿಂಗದರಳು ಕಾಣೆ ॥ ೨ ॥

ಮೇದಿನಿಯ ತಿರುಗಿ ಬರುತಾ ನಾನೊಂದು ಕೇದಗೆಯ ಹೂವ ತಂದೆ
ಸಾದು ಕಸ್ತೂರಿ ಪುಣುಗು ಜವಾದಿಗೆಣೆಯೆಂದು ಮಾದೇವಗರ್ಪಿಸಿದೆವು
ಕಾದು ಕರಗಿದ ಚಿನ್ನಕೆ ಎಲೆಗೌರಿ ವ್ಯಾಧಿ ವಿಘ್ನಗಳ್ಯಾತಕೆ
ಓದುವ ಗಿಳಿ ನನ್ನ ಅರಮನೆಯ ಕೋಗಿಲೆಯ ಗಾದೆನುಡಿಗಳ ನುಡಿವರೆ ॥ ೩ ॥

ಮಡದಿ ಗಿರಿಜಾತೆ ಕೇಳು ಎಲೆಗೌರಿ ಬೆಡಗು–ಬಿಂಕವು ಸಲ್ಲದು
ಬಿಡದೆ ಎಂಬತ್ತು ನಾಲ್ಕು ಲಕ್ಷ ಜೀವಿಗಳೆಲ್ಲ ಅಡಗೆರಗಿ ಶರಣೆಂಬರೇ
ಗುಡುಗು ಮಿಂಚಿನ ಸಿಡಿಲಿನಾ ಗರ್ಜನೆಯ ಒಡನೆ ಹುಟ್ಟಿದ ಪುಷ್ಪವ
ದೃಢದಿಂದ ಶಿವನ ಮುಡಿಯೊಳಗಿಟ್ಟೆವು ಕಡುಚೆಲ್ವೆ ಗಿರಿಜೆ ಕೇಳು ॥ ೪ ॥

ಹರನಿಂತು ಮರೆಮಾತನು ಗುರುರಾಯ ಗಿರಿಜೆಯೊಡನೆ ಪೇಳಲು
ಅರಿಯಾದಕಳವಲ್ಲ ಅಮ್ಮಾಜಿ ಪಾರ್ವತಿಯು ಧರೆಯು ಮೂಲೋಕದೊಳಗೆ
ಗಿರಿಜೆ ಗಂಗೆಯ ಜಗಳವ ಗುರುರಾಯ ಇರದೆ ಬಸವಗೆ ಪೇಳಲು
ತರುಳೆ ಗಂಗೆಯ ತಂದ ಸಂಧಿ ಸಮಾಪ್ತವು ಗುರು ಸಂಗಮೇಶ ಜಯತು ॥ ೫ ॥

**ಸಂಗತ್ಯ :**

ಮುತ್ತೈದೆ ನೀಲಮ್ಮ ಮುನಿಮಹಾಜೋಗಿಯ
ಪುತ್ಥಳಿಯ ರೂಪ ಬಣ್ಣಿಸುತ
ಮರ್ತ್ಯಲೋಕದ ಮಹಾಮಹಿಮ ಬಸವನೊಳು
ಚಿತ್ರದ ಕತೆಯ ಪೇಳಿದಳು ॥ ೧ ॥

ಹರನವಾಹನ ಜಯ ಶರಣುಬಸವ ಜಯ
ಮರಣ ವಿದೂರನೆ ಜಯತು
ಕಿರಣಕೋಟಿಯೆ ಜಯ ಮರಣಪಾಲಿಪ ಜಯ
ಕರುಣಾಸಾಗರ ಜಯ ಜಯತು ॥ ೨ ॥

ನಂದಿವಾಹನ ಜಯ ಬಂಧಮೋಕ್ಷನೆ ಜಯ
ಒಂದು ಮೂರಾದನೆ ಜಯತು
ಮಂದಾಲಗಿರಿಗಳ ನಂದವೆ ಜಯ ಗಂಗೇ
ತಂದ ಸಂಧಿಗೆ ಶರಣಾರ್ಥಿ ॥ ೩ ॥

ಸಂಧಿ ೨ಕ್ಕಂ ೨, ವಚನ ೪೧, ಜೋಗಿ ಪದನು ೧೭,
ಸಂಗತ್ಯ. ೭೬, ಉಭಯಂ ೩೩೪ ಕ್ಕಂ ಮಂಗಳ ಮಹಾ ಶ್ರೀ ಶ್ರೀ



# ಗಂಗಿ ಗೌರೀ ಸಂವಾದ

## ೪

**ಕಂದ :**

ಗಿರಿಜೆಗಂಗೆಯ ಜಗಳವ ಹರಶರಣರ್ಗಹುದೇನು
ಹರಶರಣ ಕಲ್ಪತರುವೆನಿಪ
ವರ ಕುತರ್ಕಗಳಿಂದ ಸರಿಬೆಸದಿ ಹೋದಡೆ
ಪರವಾದಿ ದೂಷಕರ ಎದೆದಲ್ಲಣಂ

**ವಚನ :**

ಗಂಗೆಗೌರಿ ಜಗಳ ಕೇಳಿ ಜನರೆಲ್ಲ। ನಮ್ಮ
ಸಂಗಮೇಶ ಕೇಳುತಿರ್ದ ನಗುತೆಲ್ಲ ॥ ಪಲ್ಲ ॥

ಸತಿಯೆ ನೀಲರತ್ನವೆ ನೀ ಎಲೆ ಹೆಣ್ಣೆ। ನಿನ್ನ
ಮತಿಗೆ ಮಂಗಳಾತ್ಮಕ ಶಿವನು ಎಲೆ ಹೆಣ್ಣೆ
ಕತನ ಗೌರಿಗಂಗೆ ಜಗಳ ಎಲೆ ಹೆಣ್ಣೆ। ಪೇಳು
ಪೃತುವಿ ಜನರು ಕೇಳುವಂತೆ ಎಲೆ ಹೆಣ್ಣೆ ॥ ೧ ॥

ಹಳಗನ್ನಡಗಳಲ್ಲವಿನ್ನು ಬಸವಯ್ಯ। ಗೋಪ್ಯ
ಒಳಗನ್ನಡಗಳಲ್ಲವಿನ್ನು ಬಸವಯ್ಯ
ಎಳೆಯ ಬಾಲ ನಗುವಂತಿನ್ನು ಬಸವಯ್ಯ। ಎನ್ನ
ತಿಳಿಗನ್ನಡವ ಲಾಲಿಸಿನ್ನು ಬಸವಯ್ಯ ॥ ೨ ॥

ಹಾಲು ಮಥನ ಮಾಡುತಿರಲು ಬಸವಯ್ಯ। ಒಂದು
ಹಲವು ಆಗಿ ತೋರುವಂತೆ ಬಸವಯ್ಯ
ಶೂಲಿ ಸತಿಯರುಗಳ ಜಗಳ ಬಸವಯ್ಯ। ಭಕ್ತಿ
ಲೀಲೆ ಪುರುಷ ಲಾಲಿಸಿನ್ನು ಬಸವಯ್ಯ ॥ ೩ ॥

ಕಬ್ಬುವಿಲ್ಲನೊಯಿರಿ ಕೇಳು ಬಸವಯ್ಯ। ಸತಿಯ
ರಿಬ್ಬರೊಳಗೆ ಜಗಳವಿಟ್ಟು ಬಸವಯ್ಯ
ಉಬ್ಬಿಯುಬ್ಬಿ ನೋಡಿ ನಗುತ ಬಸವಯ್ಯ। ಜಗಕೆ
ಹಬ್ಬಿಸಿದ ಕಥೆಯ ಕೇಳಿ ಬಸವಯ್ಯ ॥ ೪ ॥

ಮೃಡನ ಭಕ್ತಿ ಲಾಲಿಸಿನ್ನು ಬಸವಯ್ಯ। ಶಿವನ
ತೊಡೆಯೊಳ್ ಗೌರಿ ಮುಡಿಯೊಳ್ ಗಂಗೆ ಬಸವಯ್ಯ
ನಡುವೆ ಕೂತುಕೊಂಡು ಶಿವನು ಬಸವಯ್ಯ। ದೊಡ್ಡ
ತೊಡರ ಹಾಕಿ ನಗುತಲಿದ್ದ ಬಸವಯ್ಯ ॥ ೫ ॥

ಸಂಗಮೇಶ ಶಿವನು ನಗುತ ಬಸವಯ್ಯ। ತನ್ನ
ತುಂಗಜಡೆಯೊಳಿರ್ದ ಸತಿಗೆ ಬಸವಯ್ಯ
ಮಂಗಮಲಕು ಭೇದಗಳನು ಬಸವಯ್ಯ। ತಮ್ಮ
ಲಿಂಗದೊಳಗೆ ಸೂಚಿಸಿದನು ಬಸವಯ್ಯ ॥ ೬ ॥

ತೇಜೋಮೂರ್ತಿ ತಂದ ಮೇಲೆ ಗುರುರಾಯ। ಮತ್ತೆ
ಮಾಜಿಕೊಂಡು ಮುಳುಗಲೇಕೆ ಗುರುರಾಯ
ಜಾಜಿ ಮಲ್ಲಿಗೆಯ ಚೆಂಡು ಗುರುರಾಯ। ತನ್ನ
ರಾಜಸಭೆಗೆ ತೋರಿಸಿದನು ಗುರುರಾಯ ॥ ೭ ॥

ಅಂಜಿ ಅಳುಕಿ ನೋಡುತಿರಲು ಗುರುರಾಯ। ಕೋಟಿ
ಪಂಜು ಬೆಳಗು ತೋರುವಂತೆ ಗುರುರಾಯ
ಕುಂಜರಗಮನೆ ಗಿರಿಜಾದೇವಿ ಗುರುರಾಯ। ಕಣ್ಣಿ
ಗಂಜನವು ಸೋಂಕಿದಂತೆ ಗುರುರಾಯ ॥ ೮ ॥

ಗಿರಿಜೆದೇವಿ ತಿಳಿದು ನೋಡಿ ಎಲೆ ದೇವ। ನನ್ನ
ತರಕಿವಳ ತಂದರೆಂದು ಎಲೆ ದೇವ
ಹರುಹ ಹೇಳಿ ಕಳುಹಿ ಕೊಡುವೆ ಎಲೆ ದೇವ। ಎಂದು
ಬಿರಿಗೋಪಗಳ ಮಸಗುತಿರ್ದಳೆಲೆ ದೇವ ॥ ೯ ॥

ನೋಡಿ ತಿಳಿದು ಕಂಡಳಾಗ ಗುರುರಾಯ। ಇವಳು
ಪೀಡೆಯಹುದು ಹೆಣ್ಣು ಅಲ್ಲ ಗುರುರಾಯ
ಓಡಿಸುವೆನು ಇರ್ದ ಸ್ಥಲಕೆ ಗುರುರಾಯ। ತಂತ್ರ
ಹೂಡಿ ಮಾತನಾಡಿಸಿದಳು ಗುರುರಾಯ ॥ ೧೦ ॥

**ಪದನು :**

ಹಣಕಿ ನೋಡುವಳಾರೆಲೆ ನೀ ನಮ್ಮ ತ್ರಿಣಯನ ಜಡೆಯವೊಳಗೆ
ಬಣಗು ಭೂತವೆ ನೀನು ಹೆಣಮೂಳೆ ಇರಬೇಡ ಕುಣಿಹಾಳ ಸೇರಿಕೊಳ್ಳೆ ॥ ಪಲ್ಲ ॥



ಪ್ರೇತಭೂತವೊ ರಾಕ್ಷಸಿಯೊ ನೀ ಮುನ್ನ ಜಾತಿ ಜಲ್ಮದಗೇಡಿಯೆ
ಆತುಕೊಂಡಿರಬೇಡ ಶಿವನ ಮಂಡೆಯ ಮೇಲೆ ಭೂತಳಕಿಳಿದು ಬಾರೆ
ಬೇತಾಳ ನಿನಾದರೆ ನಮ್ಮಲ್ಲಿಗಾತರಿಸು ಮುದ್ದೆಗಳನು
ಹೋತು ಕುರಿ ಕೋಣಗಳ ಬೇಡಿ ತಿಂಬುದಕಿಂತ ಗ್ವಾತದ ಕುಳಿಗೆ ಹೋಗೆ ॥ ೧ ॥

ಹೊಲೆಯ ಮಾದಿಗರ ಮಗಳೆ ನೀ ಮುನ್ನ ಕುಲದಲಾರಾರ ಜಲ್ಮ
ಸಲೆ ಪೀಡೆ ಪಿಶಾಚಿಯಾದರೆ ನೀ ಮುನ್ನ ನೆಲೆದಪ್ಪಿ ತಿರುಗುತಿರಲು
ಹಲವು ಮಂತ್ರಗಳ ಮಾಡಿ ನಮ್ಮವರು ಕೊಲೆಗಳ ಕೊಲ್ಲಿಸುತಲಿ
ಮೊಲೆ ಮೂಗು ಕಿವಿಗಳನು ಕೊಯ್ದಡಂಬಡಿಸುವರು ತಲೆ ಮುಡಿಯ ಬಿಟ್ಟ ಸಾರೆ ॥ ೨ ॥

ದಾರಿ ಬಟ್ಟೆಗಳ ಸೇರಿಕೊಳ್ಳಿ ಎಲೆ ಪೀಡೆ ನೀರಬಾವಿಗಳ ಸೇರಿಕೊಳ್ಳಿ
ಊರೂರ ಮರದ ಹೋಟೆಲುಗಳೊಳಗೆ ಸೇರಿದರೆ ಆರು ಬರುತಿರಲು ಸಾರೆ
ಪಾರು ಪಜೀತಿಗಳಾಗದೆ ನನ್ನ ಕೂಡೆ ತೋರಿ ಮಾತುಗಳನಾಡೆ
ಮೀರಿ ಸುಮ್ಮನೆ ನೀನು ಗರ್ವದಲಿ ಇರ್ದರೆ ಗಾರುಮಾಡದೆ ಬಿಡುವನೆ ॥ ೩ ॥

ಬಡವಮನುಜರನು ಪಿಡಿದರೆ ಎಲೆ ಪೀಡೆ ಅಡಿಗಡಿಗೆ ಶರಣೆಂಬರು
ಗಡಿಗೆಮಡಕೆಗಳಿಂದ ಹೊಸ ಕೂಳುಗಳ ಮಾಡಿ ಬಿಡದೆ ಹಾಕುವರು ನಿನಗೆ
ಮೃಡನ ಜಡೆಯೊಳು ಸೇರಲು ಎಲೆ ಪೀಡೆ ಹುಡಿಪುಡಿಯು ನಿನ್ನ ಬಾಯಲಿ
ಬಿಡುಬಿಡು ಜಡೆಗಳನು ತುಡುಗಣಿ ಹೊಲತಿಯೆಂದು ಒಡನೆ ಗರ್ಜಿಸಿ ನುಡಿದಳು ॥ ೪ ॥

ಹುಚ್ಚು ಮರುಳೆ ಪೀಡೆಯೆ ನೀ ಮುನ್ನ ಎಚ್ಚತ್ತು ತಿಳಿದು ನೋಡೆ
ಅಚ್ಯುತನ ಮಗನು ತಾನೆಂದರೆ ಬಿಡಲಿಲ್ಲ ಕಿಚ್ಚುಗಣ್ಣಿಲಿ ಉರುಹಿದ
ಕಿಚ್ಚುಗಣ್ಣಿನ ಕೋಪದಿ ಎಲೆ ಪೀಡೆ ಕೆಚ್ಚು ದಾನವರಳಿದರು
ನಚ್ಚಿಕೊಂಡಿರಬೇಡ ಗುರುಸಂಗಮೇಶ್ವರ ಬಚ್ಚಲ ಕುಳಿಗೆ ಹೋಗೆ ॥ ೫ ॥

**ವಚನ :**

ಅಗಜೆ ಕೋಪದಲಿ ನುಡಿದರೆಲೆ ದೇವ। ಜಡೆಯ
ಬಗಿದು ಗಂಗೆಯ ನೆಗಹಿಕೊಂಡು ಎಲೆ ದೇವ
ನಿಗಮದೊಡೆಯ ಶಿವನ ಬಲದಿ ಎಲೆ ದೇವ। ಗಂಗೆ
ಮುಗುಳು ನಗೆಯೊಳ್ ನುಡಿದಳಾಗ ಎಲೆ ದೇವ ॥ ೧ ॥

ಜರಿದು ಮಾತನಾಡಿದರೆ ಅಕ್ಕಯ್ಯ। ಪುಷ್ಪ
ದರಳನಾ ಶಿವನ ಮುಡಿಗೆ ಅಕ್ಕಯ್ಯ
ಹರನ ಉರಿಯ ಕಣ್ಣ ಶಾಂತಿ ಅಕ್ಕಯ್ಯ। ನಿನ್ನ
ಸರಿಯ ಮಡದಿ ಜರಿಯದಿರೆ ಅಕ್ಕಯ್ಯ ॥ ೨ ॥

ದೇಶದೇಶದ ಪೀಡೆಗಳು ಅಕ್ಕಯ್ಯ । ನಿನ್ನ
ಕೇಶದೊಳಗೆ ಹುದುಗಲಿನ್ನು ಅಕ್ಕಯ್ಯ
ಸೂಸಿ ಸ್ನಾನವ ಮಾಡುತಿರಲು ಅಕ್ಕಯ್ಯ । ನಿನ್ನ
ದೋಷರಹಿತ ಗಂಗದೇವಿ ಅಕ್ಕಯ್ಯ ॥ ೩ ॥

ಅಂಬಿಗ ಶರಣಾರ ಮಗಳೆ ಅಕ್ಕಯ್ಯ । ಜಗವ
ತುಂಬಿಕೊಂಡು ಸಲಹುವೆನೆ ಅಕ್ಕಯ್ಯ
ಶಂಭು ಶಿವನು ಎನ್ನ ಮೆಚ್ಚಿ ಅಕ್ಕಯ್ಯ । ಚೆಲ್ವ
ರಂಭೆ ನಿನ್ನ ಮೇಲೆ ತಂದನಕ್ಕಯ್ಯ ॥ ೪ ॥

ವೇಷಧಾರಿ ನುಡಿಯು ಸಲ್ಲದೆಲೆ ತಂಗಿ । ನಿನಗೆ
ಸೇಸೆಯಿಟ್ಟು ತಂದನೇನೆ ಎಲೆ ತಂಗಿ
ವೇಸಿ ಮಾತ್ರ ನೀನು ಕಾಣೆ ಎಲೆ ತಂಗಿ । ನಮ್ಮ
ದೇಶ ಬಿಟ್ಟು ಎದ್ದು ಹೋಗೆ ಎಲೆ ತಂಗಿ ॥ ೫ ॥

ಎದ್ದು ಹೋಗಬಂದುದಿಲ್ಲಕ್ಕಯ್ಯ । ನಿನಗೆ
ಬುದ್ಧಿಶಕ್ತಿ ಹೇಳಬಂದೆ ಅಕ್ಕಯ್ಯ
ಶುದ್ಧ ಕಸ್ತುರಿಯ ಮೃಗವ ಅಕ್ಕಯ್ಯ । ಶಿವನು
ಮುದ್ದಿಸಿ ಮುಂಡಾಡಿ ತಂದನಕ್ಕಯ್ಯ ॥ ೬ ॥

ಉಬ್ಬಿ ಮಾತನಾಡಿದರೆ ಎಲೆ ತಂಗಿ । ನಿನ್ನ
ಕಬ್ಬಿಲಿಗರ ಕುಲವ ಬಲ್ಲೆನೆಲೆ ತಂಗಿ
ಗಬ್ಬುಮಡಕಿ ನಿನ್ನೊಳುಂಟು ಎಲೆ ತಂಗಿ । ಶಿವಗೆ
ಮಬ್ಬಹತ್ತಿ ನಿನ್ನ ತಂದೆನೆಲೆ ತಂಗಿ ॥ ೭ ॥

ತಾವರೆ ಕೆಸರೊಳಿರಲು ಅಕ್ಕಯ್ಯ । ನಮ್ಮ
ದೇವರಿಗೆ ಅರ್ಪಿತವು ಅಕ್ಕಯ್ಯ
ಬಾಯ ಬಡುಕತನವು ಬೇಡ ಅಕ್ಕಯ್ಯ । ಸರ್ವ
ಜೀವ ದಯಾಪರಿ ತಂದನಕ್ಕಯ್ಯ ॥ ೮ ॥

ಮುಡಿಯೊಳಿರ್ದು ನುಡಿವವಳು ನೀನಾರೆ । ನಿನ್ನ
ಬೆಡಗ ಹೊಸ್ತು ಎನ್ನ ದೊರೆಯ ಅಕ್ಕಯ್ಯ
ತೊಡೆಯ ಬಿಟ್ಟು ಕಡೆಗೆ ಸಾರೆ ಅಕ್ಕಯ್ಯ । ನಿನಗೆ
ಒಡೆಯಳಾಗಿ ಹೇಳಿಬಂದೆ ಅಕ್ಕಯ್ಯ ॥ ೯ ॥



ಜಕ್ಕಿಸಾದೇನು ಎದುರೆ ಅಕ್ಕಯ್ಯ । ನಾನು
ಚಿಕ್ಕವಳೆ ನಿನ್ನ ಕಣ್ಣಿಗೆ ಅಕ್ಕಯ್ಯ
ಸೊಕ್ಕಿದವರ ಹಲ್ಲ ಕಳೆವೆನಕ್ಕಯ್ಯ । ನಾನು
ದಕ್ಕಿದಳು ಶಿವನಿಗಾನು ಅಕ್ಕಯ್ಯ ॥ ೧೦ ॥

ಉಬ್ಬಿ ಮಾತನಾಡಿದಿರೆ ಎಲೆ ತಂಗಿ । ನಿನ್ನ
ಕೊಬ್ಬು ಮಚ್ಚರವ ಬಲ್ಲೆ ಎಲೆ ತಂಗಿ
ಕಬ್ಬುತಿಂದ ನರಿಯು ಸೊಕ್ಕಿ ಎಲೆ ತಂಗಿ । ಹುಲಿಯ
ತಬ್ಬಿಕೊಂಬ ಸರಸ ಬೇಡ ಎಲೆ ತಂಗಿ ॥ ೧೧ ॥

ಎತ್ತುವಾಸೆಯೆನ್ನೊಳಗೇಕೆ ಅಕ್ಕಯ್ಯ । ನಾನು
ಒತ್ತಿರಿಸಿಕೊಂಬವಳಲ್ಲ ಅಕ್ಕಯ್ಯ
ಸತ್ಯವಿಡಿದು ಮಾತನಾಡೆ ಅಕ್ಕಯ್ಯ । ನೀನು
ಮಿತ್ತುಕರ ಕೊಳಲಿ ಬೇಡ ಅಕ್ಕಯ್ಯ ॥ ೧೨ ॥

ನಿನ್ನ ಬಿಂಕ ಎನ್ನ ಕೂಡೇನಕ್ಕಯ್ಯ । ನೀನು
ಇನ್ನು ಆಡ ಸಲ್ಲ ಕೇಳು ಅಕ್ಕಯ್ಯ
ಆಡಿದ ಶಿವನು ಎನ್ನೊಳಾದನಕ್ಕಯ್ಯ । ಬಹಳ
ಹೊನ್ನ ವೆಚ್ಚಮಾಡಿ  ತಂದರಕ್ಕಯ್ಯ ॥ ೧೩ ॥

ತಂದರೆಂಬ ಗರ್ವವೇನೆ ಎಲೆ ತಂಗಿ । ನಿಮ್ಮ
ಕುಂದು ಜಲ್ಮ ಮರೆಯದಿರು ಎಲೆ ತಂಗಿ
ಮುಂದೆ ಬಂದ ಕಿವಿಗೆಯಿಂದ ಎಲೆ ತಂಗಿ । ಹಿಂದೆ
ಬಂದ ಕೋಡು ದೊಡ್ಡದೇನೆ ಎಲೆ ತಂಗಿ ॥ ೧೪ ॥

ಹೋಗ ಪ್ರಾಯ ನೆನೆಯಲೇಕೆ ಅಕ್ಕಯ್ಯ । ನೀನು
ಭೇದಿಸಿದರೆ ಕಾಣಲುಂಟೇನಕ್ಕಯ್ಯ
ಆದಿ ಶವಿನು ಎನ್ನೊಳಾದನಕ್ಕಯ್ಯ । ನಿನ್ನ
ವಾದ ಬಿಟ್ಟು ಕಡೆಗೆ ಸೇರೆ ಅಕ್ಕಯ್ಯ ॥ ೧೫ ॥

ಸಣ್ಣವಳು ಎನ್ನ ಸರಿಯೇನೆಲೆ ತಂಗಿ । ಒಳ್ಳೆ
ಬಣ್ಣ ಬಿಳಿದನುಟ್ಟರೇನೆ ಎಲೆ ತಂಗಿ
ಎಣ್ಣೆ ಕಣ್ಣಿಗೊಯಿಂದ ಕಾಣೆ ಎಲೆ ತಂಗಿ । ಸುಟ್ಟ
ಸುಣ್ಣದಂತೆ ನಿನ್ನ ಸರಸ ಎಲೆ ತಂಗಿ ॥ ೧೬ ॥

ಆನೆ ದೊಡ್ಡದಾದರೇನೆ ಅಕ್ಕಯ್ಯ । ಅದರ
ಅಂಕುಸಾವೆ ಸಣ್ಣದೇನು ಅಕ್ಕಯ್ಯ
ನಿನಗೆಷ್ಟು ದೊಡ್ಡತನ ಅಕ್ಕಯ್ಯ । ನಿನ್ನ
ಸೊಕ್ಕ ಮುರಿವುದಕ್ಕೆ ಬಂದೆನಕ್ಕಯ್ಯ ॥ ೧೭ ॥

ಹುಚ್ಚು ಮರುಳನಾಡದಿರೆ ಎಲೆ ತಂಗಿ । ನಿನ್ನ
ಮಚ್ಚುರವ ಕೇಳಿ ಬಲ್ಲೆ ಎಲೆ ತಂಗಿ
ಮೆಚ್ಚಿದವಗೆ ಮರಣ ಸುಖವೆ ಎಲೆ ತಂಗಿ । ಆತ
ಇಚ್ಚೆಕಾರ ದೇವ ಕಾಣೆ ಎಲೆ ತಂಗಿ ॥ ೧೮ ॥

ಕಾಲಿಲೊದ್ದ ಮೋಹ ಕಾಣೆ ಅಕ್ಕಯ್ಯ । ಕನ್ಯೆ
ಬಾಲೆ ನಿನಗೆ ಮನವ ಸೋತನೆ ಅಕ್ಕಯ್ಯ
ಸೋಲು ಗೆಲುವು ಎನ್ನೊಡನೆ ಅಕ್ಕಯ್ಯ । ನಿನ್ನ
ಮೇಲೆ ಬಂದ ಬಗೆಯ ಕಾಣೆ ಅಕ್ಕಯ್ಯ ॥ ೧೯ ॥

ಹರುಗೋಲವರ ಮಗಳು ನೀನು ಎಲೆ ತಂಗಿ । ನಿನ್ನ
ಕರುಳುಖಂಡ ಎಲ್ಲಿ ಬಿಟ್ಟೆ ಎಲೆ ತಂಗಿ
ಸುರೆಯ ಮಾಂಸ ನಾರುವಳೆ ಎಲೆ ತಂಗಿ । ಶಿವಗೆ
ಮರುಳು ಹತ್ತಿ ನಿನ್ನ ತಂದ ಎಲೆ ತಂಗಿ ॥ ೨೦ ॥

ಕೆಚ್ಚಲೊಳಗೆ ಅಮೃತವಿರಲು ಅಕ್ಕಯ್ಯ । ನಮ್ಮ
ಕಿಚ್ಚುಗಣ್ಣಗರ್ಪಿತಾವೆ ಅಕ್ಕಯ್ಯ
ಅಚ್ಯುತ ಗೋವಿಂದನೊಡೆಯ ಅಕ್ಕಯ್ಯ । ನನ್ನ
ಮೆಚ್ಚಿ ಮಂಡೆಯೊಳಿಟ್ಟು ಮೆರೆವ ಅಕ್ಕಯ್ಯ ॥ ೨೧ ॥

ಖಂಡಮಾಂಸರೋಹಿತಾವೆ ಎಲೆ ತಂಗಿ । ನೀನು
ಉಂಡು ಜಲ್ಮ ಹಿಂಗಲಿಲ್ಲ ಎಲೆ ತಂಗಿ
ಗಂಡು ಮೀರಿ ಸೊಕ್ಕಿ ನುಡಿವೆ ಎಲೆ ತಂಗಿ । ಶಿವನ
ಮಂಡೆ ಬಿಟ್ಟು ಕಡೆಗೆ ನಿಲ್ಲೆ ಎಲೆ ತಂಗಿ ॥ ೨೨ ॥

ಹಿರಿಯಳೆಂದು ತಾಳಿದೆನು ಅಕ್ಕಯ್ಯ । ನಿನ್ನ
ಪರದೇಶಿಯ ನೆಲೆಯ ಬಲ್ಲೆನಕ್ಕಯ್ಯ
ಹಿರಿಯ ತಪಸ ಮಾಡಿ ಬಂದೆನಕ್ಕಯ್ಯ । ನಮ್ಮ
ಹರನ ತೊಡೆಯ ಬಿಟ್ಟು ನಿಲ್ಲೆ ಅಕ್ಕಯ್ಯ ॥ ೨೩ ॥



ನಾರಿ ನನ್ನ ನೆಲೆಯ ಬಲ್ಲೆಯಾ ತಂಗಿ । ಸುತ್ತ
ಮೂರುಲೋಕ ನನ್ನ ಬಳಗ ಎಲೆ ತಂಗಿ
ಹಾರುವರ ಮಗಳು ನಾನು ಎಲೆ ತಂಗಿ । ಚೆಲ್ವ
ಮಾರಹರನ ಪಟ್ಟದರಸಿ ಎಲೆ ತಂಗಿ ॥ ೨೪ ॥

ಮಾತನಾಡಿ ಕೆಡಿಸಿಕೊಂಡೆ ಅಕ್ಕಯ್ಯ । ನಿಮ್ಮ
ಜಾತಿ ಹಾರುವ ಕುಲವು ಸುಡಲಿ ಅಕ್ಕಯ್ಯ
ಹೋತಮಾಡಿ ಕೊಲ್ಲಿಸುವಿರಿ ಅಕ್ಕಯ್ಯ । ದೊಡ್ಡ
ಪಾತಕಾರು ನಿಮ್ಮ ಜನ್ಮವಕ್ಕಯ್ಯ ॥ ೨೫ ॥

ಸಾಮವೇದಗಳು ಓದಿ ಎಲೆ ತಂಗಿ । ಸರ್ವ
ಹೋಮಗಳನು ಮಾಡುವೆವು ಎಲೆ ತಂಗಿ
ಕಾಮ ಕ್ರೋಧ ಲೋಭ ಕುರಿಯು ಎಲೆ ತಂಗಿ । ಸುಟ್ಟು
ಸ್ವಾಮಿ ಶಿವಗೆ ಯೋಗ್ಯರಾವು ಎಲೆ ತಂಗಿ ॥ ೨೬ ॥

ಹಂಡೆಮಲುಕನೊಡೆಯ ಕೇಳು ಎಲೆ ತಂಗಿ । ಆತ
ಉಂಡ ಮನೆಗೆ ಎರಡ ಬಗೆಯನೆಲೆ ತಂಗಿ
ಉಂಡು ನಾವು ಸುಖದೊಳೆಲೆ ತಂಗಿ । ಶಿವನ
ಕೊಂಡಾಡುವ ಜಗಳ ಬೇಡ ಎಲೆ ತಂಗಿ ॥ ೨೭ ॥

ಏಕೋದೇವನ ಮಡದಿ ಕೇಳು ಅಕ್ಕಯ್ಯ । ನನಗೆ
ಯಾಕೆ ಮರೆಯ ಮಾಡಿ ಪೇಳ್ವಿರಕ್ಕಯ್ಯ
ನಾಲ್ಕು ಯುಗದ ಹೋಮ ಹಿಂಸೆ ಅಕ್ಕಯ್ಯ । ಹೊನ್ನು
ತೂಕ ತಿಂದ ಜನ್ಮ ಸುಡಲಿ ಅಕ್ಕಯ್ಯ ॥ ೨೮ ॥

ಸಮ್ಮಗಾರ್ತಿ ಕಬ್ಬೆರವಳೆ ಎಲೆ ತಂಗಿ । ಹೋಮ
ಬೊಮ್ಮ ವಿಷ್ಣು ಫಲವೆ ಎಲೆ ತಂಗಿ
ನಮ್ಮ ಸಿರಿಯ ಹೇಳಲಳವೆ ಎಲೆ ತಂಗಿ । ಶಿವನು
ನಿನ್ನ ತಂದ ನೆಲೆಯ ಬಲ್ಲೆನೆಲೆ ತಂಗಿ ॥ ೨೯ ॥

ನೆಲೆಯ ಕೇಳು ಪೇಳುವೆನು ಅಕ್ಕಯ್ಯ । ದಕ್ಷ
ಬಲವನಳಿದು ಬಯಲಾದುದನು ಅಕ್ಕಯ್ಯ
ಲಲನೆ ನಿನ್ನ ಪಡುಪಾಟುಗಳ ಅಕ್ಕಯ್ಯ । ಚಿತ್ತ
ವೊಲಿದು ಕೇಳು ಹೇಳುವೆನು ಅಕ್ಕಯ್ಯ ॥ ೩೦ ॥

ಭೂಮಿಯೊಳಗೆ ಪರ್ವತೇಶನಕ್ಕಯ್ಯ । ತನ್ನ
ಪ್ರೇಮದಿಂದ ಎನ್ನ ತಂದನಕ್ಕಯ್ಯ
ನಾವು ನೀವು ಮಾಡುವದೇನಕ್ಕಯ್ಯ । ನಿನಗೆ
ಸ್ವಾಮಿಯಾಣೆ ಸುಮ್ಮನಿರೆ ಅಕ್ಕಯ್ಯ ॥ ೩೦ ॥

**ಪದನು :**

ಅಕ್ಕಯ್ಯ ನೀನು ಕೇಳೆ ನೀ ಮುನ್ನ ದಕ್ಷಣಾನ ಮಗಳು ಕಾಣೆ
ಮುಕ್ಕಣ್ಣ ಪರಶಿವನು ಹೊರಗೆಂದು ನಿಮ್ಮಪ್ಪ ಇಕ್ಕಿ ಕೆಟ್ಟನು ಹೋಮವ ॥ ಪಲ್ಲ ॥

ಹಾರುವರನೆಲ್ಲ ಕೂಡಿ ನಿಮ್ಮಪ್ಪ ಮೀರಿ ಹೋಮವನಿಕ್ಕಿದ
ಸಾರಿ ಹೇಳಲು ಕೇಳದಿರ್ದರೆ ನೀ ಮುನ್ನ ಹಾರಿಬೀಳಲು ಅಗ್ನಿಯ
ತೂರಿ ಅಗ್ನಿಗೆ ಬೀಳಲು ಬೇಗದಿಂದಾರಿ ಹೋಯಿತು ಬೆಂಕಿಯು
ಮೋರೆ ಕರ್‍ರನೆ ಕಂದಿ ಕಾಳಮ್ಮನಾದರೆ ಮಾರಹರನು ಮೆಚ್ಚಲಿಲ್ಲ ॥ ೧ ॥

ತಂದೆತಾಯಿಗಳು ಸತ್ತು ಎಲೆ ಗೌರಿ ಬಂಧು ಬಳಗಗಳು ಕೆಟ್ಟು
ಹಿಂದು ಮುಂದಾರ ಕಾಣದೆ ಗಿರಿರಾಜಗೆ ಕಂದಳಾಗಿಯೆ ಜನಿಸಿದೆ
ಹೊಂದಿ ಹೊರೆಯಲು ನಿನ್ನನು ಎಲೆ ಗೌರಿ ಬಂದು ಬೇಡುವರಿಲ್ಲದೆ
ತಂದೆತಾಯಿಗಳೆಲ್ಲ ಮದುವೆ ಮೀರಿದಳೆಂದು ನೊಂದು ಯೋಚಿಸಿದರಾಗ ॥ ೨ ॥

ಆರು ಬಾರದುದ ಕಂಡು ಎಲೆ ಗೌರಿ ದಾರಿದೋರಿದರು ನಿನಗೆ
ಘೋರ ತಪವನೆ ಮಾಡು ಶಿವ ಬಂದು ಮೆಚ್ಚುವನು ಹಂಬಲ್ಯಾತಕೆ
ಗೌರಿ ನೀ ಬಾರೆನುತಲಿ ಗಿರಿರಾಜ ಸೇರಿಸಿದ ಅಡವಿಯೊಳಗೆ
ಮಾರಹರ ಶಿವನು ನಿನ್ನಯ ಗಂಡನೆನುತಲಿ ಊರಿಗೆ ತಿರುಗಿ ಹೋದ ॥ ೩ ॥

ಎಂಟೆಂಟು ಗುಂಡಮೇಲೆ ಎಲೆ ಗೌರಿ ಒಂಟಿ ಕಾಲಲಿ ನಿಲ್ಲುತ
ಸುಂಟರ ಗಾಳಿಗಳು ಬಂದು ಆರ್ಭಟಿಸಿದರೆ ಉಂಟು ಮಾಡದೆ ಗ್ಯಾನವ
ಗಂಟೆ ಓಂಕಾರ ಧ್ವನಿಗೆ ಕರ್ಮಗಳು ದಂಟುಸೆದೆಗಳ ಮಾಡುತ
ಕಂಟಕಂಗಳ ಗೆಲಿದು ಕರಿಕಂಠ ಶಿವನೊಳಗೆ ಪಂಟಿಸಿದೆ ಜ್ಞಾನವೆರಸಿ ॥ ೪ ॥

ಕೂಳು ನೀರುಗಳ ತೊರೆದು ಎಲೆಗೌರಿ ಗಾಳಿಯಾಹಾರಮಾಡಿ
ನೀಳುಗಲ್ಲಿನ ಮೇಲೆ ಉಗ್ರತಪಸನು ಮಾಡಿ ಗೋಳಿಡುತ ಪರಶಿವನಿಗೆ
ದಾಳಿಡುವ ಗುಡುಗು ಮಿಂಚು ಆರ್ಭಟಿಯ ಜಾಳುಮಾಡಿಯೆ ಕಳೆವುತ
ಹೇಳಲೇನಕ್ಕ ನಿನ್ನಯ ಬಂದ ಪಡಿಪಾಟ ಮೇಲೆ ಶಿವನೊಳು ಬೆರೆಸಿದೆ ॥ ೫ ॥



ಮಾಜಿ ನಿನ್ನಯ ರೂಪನು ಬಂದು ಗಿರಿರಾಜಗೆ ಮಗಳಾಗುತಾ
ಸೂಜಿಗಲ್ಲಿನ ಮೇಲೆ ಉಗ್ರತಪಸನು ಮಾಡಿ ಮೂಜಗದ ಶಿವನ ಪಡೆದೆ
ಬೀಜ ನಿನ್ನಯ ಮೂಲವಾ ಹೇಳಿದರೆ ಸೋಜಿಗವು ಕಾಣೆ ಅಕ್ಕ
ಜೂಜಿಂದ ಹರಿಬ್ರಹ್ಮಸುರರೆಲ್ಲ ಕೆಟ್ಟರು ಮಾಜಿಕೊ ನಿನ್ನ ಕುಲವು ॥ ೬ ॥

ಮಂದಮತಿ ಗಿರಿಜೆ ಕೇಳು ಪೂರ್ವದ ತಂದೆ ದಕ್ಷಬ್ರಹ್ಮನ
ಬಂಧು ಬಳಗಗಳೆಲ್ಲ ಕೆಟ್ಟುಹೋದರು ಶಿವನ ಕಂದನ ದೆಸೆಗಳಿಂದ
ಮುಂದೆ ನಿನ್ನಯ ಕುಲವನು ಹೇಳಿದರೆ ಒಂದಿಷ್ಟು ಹುರುಳಿಲ್ಲವು
ಇಂದು ನಮ್ಮಯ ಕುಲದ ಶರಣರಿಗೆ ಬೆಲೆಯುಂಟು ಅಂದವ ನೋಡಿ ನಡಿಯೆ ॥ ೭ ॥

**ಸಂಗತ್ಯ :**

ಕಪ್ಪು ಕುಲದ ಕಬ್ಬೆರವಳೆ ಕೇಳ್ನೀ ನಮ್ಮ
ವಿಪ್ರರ ಸ್ಥಲಕುಲಗಳನು
ಹಿಪ್ಪಿಯ ತಿಂದ ನರಿ ಸೊಕ್ಕಿ ತಲೆಗೇರಿ
ತಪ್ರತಿಮ ಬೋಧೆಗಳಳವೆ ॥ ೧ ॥

ನಾಯಿ ಕೂಗಲು ಬೆಳಗಾಗಬಲ್ಲದೆ ನಿನ್ನ
ಕಾಯ ಸೊಕ್ಕಿಲಿ ಬೊಗಳಿದರೆ
ಮಾಯವಹರೆ ನಮ್ಮ ಮಂತ್ರ ಸುಜಾತದ
ದೇವ ಬ್ರಹ್ಮನಿಗೆಣೆಯಹರು ॥ ೨ ॥

ಹೊಲೆ ಶೂದ್ರ ಜಾತಿ ಕೇಳಲಹ ಕೃಷ್ಣ
ನೊಲುಮಯೊಳಧಿಕ ವಿಪ್ರನು
ಮಲಗೆದ್ದು ಕಾಣಲು ಫಲವಹುದೆ ನಮ್ಮ
ಕುಲದ ಹಾರುವರಿಗೆಣೆಯಾರು ॥ ೩ ॥

ಒಂಟಿ ಹಾರುವನ ಕಾಣಲು ಕರ್ಮದೋಷವು
ಗಂಟಿಕ್ಕಿದಲ್ಲದೆ ಬಿಡದು
ಕುಂಟ ಕುರುಡ ಮುನಿವರ್ಗಗಳನು ನೀಲ
ಕಂಠ ಶಿವನು ರಕ್ಷಿಸುವನು ॥ ೪ ॥

ಕಂಡುದನಾಡಲು ಮಂಡೆ ನೋವುಗಳೇಕೆ
ರಂಡೇರಾದರು ನಿಮ್ಮ ಬಳಗ
ಕೆಂಡಗಣ್ಣಿನ ಮಾರ್ತಂಡ ಶರಭ ದಕ್ಷ
ಚೆಂಡನಾಡಿದ ತಲೆಗಳನು ॥ ೫ ॥

ಅಂಧಕ ಹೊಲೆಯಳೇ ನಿಂದ್ಯವನಾಡಲು
ಹಂದಿಯ ಜಲ್ಮ ಕೇಳ್ನಿನಗೆ
ಬೆಂದು ಹೋಹನೆ ನಮ್ಮ ತಂದೆ ವೀರೇಶನ
ದ್ವಂದ್ವ ಚರಣದೊಳಗಿಹನು ॥ ೬ ॥

ಅಕ್ಕ ಗಿರಿಜೆ ಕೇಳು ಚೊಕ್ಕಟ ತಲೆಯನು
ಇಕ್ಕಿದ ಹೋಮದ ಕುಳಿಗೆ
ಮಿಕ್ಕ ರುಂಡಕೆ ಒಂದು ತಕ್ಕಷ್ಟು ಕುರಿದಲೆ
ಇಕ್ಕಿ ಬಾಳಿದ ಜಲ್ಮ ಸುಡಲಿ ॥ ೭ ॥

ಹೀನ ಹೊಲತಿ ನಿನ್ನ ನಾನಾ ಮಂತ್ರಗಳಿಂದ
ಶ್ವಾನನ ಮಾಡಿ ಕೂಗಿಸಲು
ಹಾನಿಯಹುದೆ ನಮ್ಮ ಜ್ಞಾನ ಸುಜಾತದ
ಜ್ಞಾನದ ವಿಪ್ರರಿಗೆಣೆಯಾರು ॥ ೮ ॥

ಗಿರಿಜೆ ಕೇಳೆಲೆ ನಿಮ್ಮ ನರಹರಿ ಧ್ಯಾನದಿ
ಕರವ ಕಳೆದುಕೊಂಡನೊಬ್ಬ
ಹಿರಿಯ ಬ್ರಹ್ಮನು ಕೆಟ್ಟ ತರುಳ ಕಾಮನ ಸುಟ್ಟ
ಮರೆ ಮಾಡಿಕೊಳ್ಳೆ ನಿನ್ನವರ ॥ ೯ ॥

ಕುಕ್ಕುಟ ಹೊಲತಿ ನೀ ಲೆಕ್ಕವ ಬಲ್ಲೇನೆ
ಮುಕ್ಕಣ್ಣ ಕುಣಿದಾಡಿಸುವನು
ಮಕ್ಕಳಿಲ್ಲದ ಬಂಜೆ ದುಃಖವುಂಟು ನಿನಗೆ
ಎಕ್ಕಲ ನರಕ ತಪ್ಪುವದೆ ॥ ೧೦ ॥

ಅಕ್ಕಗಿರಿಜೆ ಕೇಳು ಮಕ್ಕಳಿಲ್ಲೆನಬೇಡ
ಸೊಕ್ಕಿದವರ ಹಲ್ಲಮುರಿವ
ಲೆಕ್ಕ ಎಂಬತ್ನಾಲ್ಕುಲಕ್ಷ ಜೀವಿಗಳೆನ್ನ
ಕುಕ್ಷಿಯಿಂದುದ್ಭವಿಸಿದವು ॥ ೧೧ ॥

ಬಂಜೆಯೆಂದೆನಬೇಡ ಸಂಜೀವಧರನಿಗೆ
ನಂಜುಂಡ ಶಿವನ ಮುಕ್ತಾಂಗಿ
ಅಂಜಲೇತಕೆ ನಿನ್ನ ರಂಜನೆಗಳಿಗೆ ನಿ
ರಂಜನ ಶಿವನ ಬಲುಹೆನಗೆ ॥ ೧೨ ॥



ನಾರಿ ಕೇಳೆಲೆ ಪಿತ್ತ ಮೀರಿತು ನನಗಿನ್ನು
ತೋರುವೆ ಶಿವನ ಬಲುಮೆಯ
ಏರುವ ಮುದಿಯೆತ್ತು ಕೋರಿತೊಗಲು ಬೋಕಿ
ಊರೂರ ತಿರುಗಿಕೊಂಡಿಹನು ॥ ೧೩ ॥

ಅನ್ನವಗಾಣದೆ ಕನ್ನವನಿಕ್ಕಿದ
ಮುನ್ನ ಕೊಲಿಸಿಕೊಂಡ ಶಿವನು
ತನ್ನ ಬದುಕು ಸುಡಲೆನ್ನ ಗಾಯಗಳನು
ಹನ್ನೆರಡು ವರುಷವಾರೈದೆ ॥ ೧೪ ॥

ಸೂಸಕ ತೊಂಡಲ ಬಾಸೆಯ ಸತಿಯಳೆ
ಈಸಿದೆ ಶಿವನೊಳಗಾನು
ಲೇಸಿನವಳೆ ನೀನು ಗಾಸಿಯಾಗಲಿ ಬೇಡ
ಕಾಸಿನ ಬದುಕಿಲ್ಲ ಶಿವಗೆ ॥ ೧೫ ॥

ಮಗನೊಬ್ಬ ಮದುವೆಯ ನೆಲೆಯ ಕಾಣದೆ ಹೋದ
ನಗೆಯಲ್ಲ ಕೇಳಲೆ ನೀನು
ಯಾಗದಲಿ ಮಾಡಿದ ಮಿಗಿಲು ಕರ್ಮಗಳಿಂದ
ತಗುಲಿಕೊಂಡೆಲ್ಲೆ ಮುಪ್ಪಿನವನ ॥ ೧೬ ॥

**ವಚನ :**

ಅದು ಮಾತ ನುಡಿಯದಿರೆ ಅಕ್ಕಯ್ಯ । ಶಿವನು
ಮುದುಕನಹುದು ಪಾಪಿಕಣ್ಣಿಗೆ ಅಕ್ಕಯ್ಯ
ಸೆದೆ ಮಾನವಗೆ ದೂರ ಶಿವನು ಅಕ್ಕಯ್ಯ । ವಜ್ರ
ಕದವೆ ನನ್ನ ಅರಮನೆಗೆ ಅಕ್ಕಯ್ಯ ॥ ೧ ॥

ಮೀರಿ ನೆತ್ತಿಗೇರಿದವಳೆ ಎಲೆ ತಂಗಿ । ನಿನ್ನ
ಪೋರಗುಣವ ಬಿಡದೆ ಹೋದೆಯೆಲೆ ತಂಗಿ
ಕೋರಿತೊಗಲ ಉಟ್ಟ ಶಿವನು ಎಲೆ ತಂಗಿ । ಬಂದ
ಪೂರ್ವದಲ್ಲಿ ಹಣೆಯ ಬರಹ ಎಲೆತಂಗಿ ॥ ೨ ॥

ನೋತ ನೋಂಪಿ ತಪ್ಪುವದೇನೆ ಅಕ್ಕಯ್ಯ । ನಿನ್ನ
ಕೋತಿ ಶಬ್ದ ನುಡಿಯದಿರೆಲೆ ಅಕ್ಕಯ್ಯ
ತಾತ ಬ್ರಹ್ಮ ಹರಿಯರೊಡೆಯ ಅಕ್ಕಯ್ಯ । ಪರಂ
ಜ್ಯೋತಿ ನನ್ನ ಪುರುಷ ನೋಡು ಅಕ್ಕಯ್ಯ ॥ ೩ ॥

ಕರಿಯ ತೊಗಲು ಕರದ ಓಡು ಎಲೆ ತಂಗಿ । ಶಿವನು
ಪರದೇಶಿಯು ನೆಲೆಗಳಿಲ್ಲ ಎಲೆ ತಂಗಿ
ಹರಕ ಹುಲಿಯ ಚರ್ಮನುಟ್ಟನೆಲೆ ತಂಗಿ । ಬಂದೆ
ನರಕಿ ನಿನ್ನ ಹಣೆಯ ಬರಹ ಎಲೆತಂಗಿ ॥ ೪ ॥

ವ್ಯಾಘ್ರಸೂರನೆಂಬ ದನುಜನಕ್ಕಯ್ಯ । ದೊಡ್ಡ
ಉಗ್ರ ತಪಸ ಮಾಡಿದನು ಅಕ್ಕಯ್ಯ
ಶೀಘ್ರದಿಂದ ಸೀಮೆಗೆಡಸಲಕ್ಕಯ್ಯ । ಶಂಭು
ಭರ್ಗೋದೇವ ಸೀಳಿ ಪೊರ್ದನಕ್ಕಯ್ಯ ॥ ೫ ॥

ಮಡದಿ ಕೇಳು ಮಡಲಿಗಿಲ್ಲ ಎಲೆ ತಂಗಿ । ಶಿವಗೆ
ಬಡತನವು ಅವ ಕಾಲಕೆಲೆ ತಂಗಿ
ನಡೆಯದಾನೆ ತೊಗಲ ಪೊರ್ದನೆಲೆ ತಂಗಿ । ಮುಂದೆ
ಗಡಿಗೆ ಕೋಲು ನಿನಗೆ ತಪ್ಪದೆಲೆ ತಂಗಿ ॥ ೬ ॥

ಕೆಟ್ಟ ಮೋರೆ ದನುಜ ಕೇಳು ಅಕ್ಕಯ್ಯ । ಶಿವನು
ಹೊಟ್ಟೆಯೊಳಗೆ ನುಂಗಿ ಕಳೆದನಕ್ಕಯ್ಯ
ಪಟ್ಟದೊಡೆಯನೆಂದು ನುಡಿದನಕ್ಕಯ್ಯ । ಅವನ
ಮೆಟ್ಟಿ ಸೀಳಿ ಚರ್ಮ ಪೊರ್ದನಕ್ಕಯ್ಯ ॥ ೭ ॥

ಕಪ್ಪುಗೊರಳು ತಪ್ಪು ಹೆಜ್ಜೆ ಎಲೆ ತಂಗಿ । ಶಿವಗೆ
ಉಪ್ಪು ಹುಳಿಗೆ ಗತಿಗಳಿಲ್ಲ ಎಲೆ ತಂಗಿ
ತಿಪ್ಪೆ ಊರ ಸುಟ್ಟ ಕರ್ಮಿಗೆ ಎಲೆ ತಂಗಿ । ಬ್ರಹ್ಮ
ಮುಪ್ಪಿನವಗೆ ಬರದನೇನೊ ಎಲೆ ತಂಗಿ ॥ ೮ ॥

ಕಪಟ ನಟ ನಾಟಕದ ಶಿವಗೆ ಅಕ್ಕಯ್ಯ । ಮುನ್ನ
ತಪಸ ಮಾಡಿ ಬಂದೆ ಕಾಣೆ ಅಕ್ಕಯ್ಯ
ಕಪಿಯ ಮಾತ ನುಡಿಯದಿರೆ ಅಕ್ಕಯ್ಯ । ನಮ್ಮ
ತ್ರಿಪುರ ಸಂಹಾರಿ ಶಿವನು ಅಕ್ಕಯ್ಯ ॥ ೯ ॥

ಸಾರಿದೆನು ಹುಲ್ಲ ಹಿಡಿದು ಎಲೆ ತಂಗಿ । ಶಿವನು
ಗೂರು ಕೆಮ್ಮುರೋಗದವನು ಎಲೆ ತಂಗಿ
ಪೋರಿ ನೀನು ಚಿಕ್ಕ ಹುಡಿಗಿ ಎಲೆ ತಂಗಿ । ಬಿಟ್ಟು
ಸೇರಿಕೊಳ್ಳಿ ಪ್ರಾಯದವನ ಎಲೆ ತಂಗಿ ॥ ೧೦ ॥



ಪಾದಕರ್ತ ವೇದಶಾಸ್ತ್ರ ಅಕ್ಕಯ್ಯ । ಶಿವನ
ಪಾದಕಮಲ ಕಾಣಲರಿಯವಕ್ಕಯ್ಯ
ಆದಿವ್ಯಾಧಿ ಶಿವನಿಗುಂಟೇನಕ್ಕಯ್ಯ । ನಿಮ್ಮ
ಮಾದಿಗರ ಗುಣಕೆ ಹೋದಿರಕ್ಕಯ್ಯ ॥ ೧೧ ॥

**ಪದನು :**

ಮಾದಿಗರಾರು ಹೇಳೆ ಜಗದೊಳಗೆ ಮಾದಿಗರಾರು ಹೇಳೆ
ಬೋಧಿಸಿದ ಗುರುವಿನಾಜ್ಞೆಯ ಮೀರಿದವನೀಗ ಮಾದಿಗವನು ಕಾಣೆ ॥ ಪಲ್ಲ ॥

ಸಾಧು ಸಜ್ಜನ ಭಕ್ತಿಯ ಹೇಳಿದರೆ ವಾದಿಸಿದವ ಮಾದಿಗ
ಕ್ರೋಧ ಮಚ್ಚರದಿ ಸತ್ಪುರುಷನ ಕಂಡು ವಾದಿಸಿದವ ಮಾದಿಗ
ಓದಿ ಧರ್ಮವ ತಪ್ಪುವ ಎಂಜಲ ಹಾದಿಸೂಳೆಯ ನೆಚ್ಚುವ
ವೇದಶಾಸ್ತ್ರದಲಿ ಬ್ರಾಹ್ಮಣನಾದರಾಗಲಿ ಸಾದಿಸಿವ ಮಾದಿಗ ॥ ೧ ॥

ಗುರುವಾದರಾಗಲಿನ್ನು ಧರೆಯೊಳಗೆ ಶಿಷ್ಯನಾದರು ಆಗಲಿ
ಪರಧನ ಪರಸತಿಯನು ಕಂಡು ಭ್ರಮಿಸುವ ನರಕೀಟಕವು ಮಾದಿಗ
ಬರಿಯ ಬನ್ನಣೆಗಳಿಂದ ಮನೆಯೊಳಗೆ ಕಿರುಕುಳದ ದೈವಗಳ ಮಾಡಿ
ಗುರುಕೊಟ್ಟ ಲಿಂಗವನು ಅಡಿಮಾಡಿ ಬೀಳುವವ ಸುರೆಗುಡಿಕನವ ಮಾದಿಗ ॥ ೨ ॥

ಕೊಟ್ಟ ಬಾಸೆಗೆ ತಪ್ಪುವವ ಗುರುವನು ಬಿಟ್ಟು ಬೈವವ ಮಾದಿಗ
ಕೆಟ್ಟ ಗುಣದಲಿ ತಿರುಗಿ ಶ್ರೇಷ್ಠನೆಂದೆನಿಸುವ ಲೊಟ್ಟಗುಣದವ ಮಾದಿಗ
ಕೆಟ್ಟ ನ್ಯಾಯಗಳ ಪೇಳಿ ಮನೆಯೊಳಗೆ ಬಿಟ್ಟು ತಿಂಬವ ಮಾದಿಗ
ಕೊಟ್ಟ ಗುರುವಿನ ಮಂತ್ರವ ಮೀರಿ ನಡೆವವನು ಭ್ರಷ್ಟ ಹೊಲೆಯವ ಮಾದಿಗ ॥ ೩ ॥

ನೀತಿ ಮಾರ್ಗವ ಪೇಳಲು ಹಿರಿಯರ ಮಾತ ಮೀರಲು ಮಾದಿಗ
ಗಾತಕತನದಿಂದ ಗೋಪ್ಯದಲಿ ಕೊಲುವಂಥ ಪಾತಕನವ ಮಾದಿಗ
ಮಾತೆ ತಂದೆಯ ಸಲಹದೆ ಹಿರಿಯರೊಳು ಧಾತುಗಟ್ಟವ ಮಾದಿಗ
ಜಾತಿ ಬ್ರಾಹ್ಮಣನಾದರಾಗಲಿ ಹೊಲತಿಗೆ ಸೋತು ಕೆಟ್ಟವ ಮಾದಿಗ ॥ ೪ ॥

ಹಲವು ಬೋಧೆಗಳ ಕೇಳಿ ಗೂಗೆ ತಾ ಕಲಿಯ ಬಲ್ಲುದೆ ಜ್ಞಾನವ
ಚಲುವ ಗಿಳಿಗಳು ಬಂದು ಓದ ಕಲಿಯಲು ತಮ್ಮ ಮಲವ ತಿಂಬುದ ಬಿಡುವೆವೆ
ಎಲೆ ಹುಚ್ಚು ಮರುಳೆ ಕೇಳು ನೀ ನಮ್ಮ ಹೊಲೆಯ ಮಾದಿಗರೆಂದರೆ
ಒಲುಮೆ ಮದ್ದನೆಯಿಕ್ಕಿ ಬಲವನಳಿವುತ ನಿನ್ನ ತಲೆಯ ಚೆಂಡಾಡಿಸುವೆನು ॥ ೫ ॥

**ಸಂಗತ್ಯ :**

ಹುಚ್ಚುಗಿರಿಜೆ ಕೇಳು ಹೆಚ್ಚಿನ ನುಡಿ ಬೇಡ
ಬಚ್ಚಲುದಕವ ಮೀಯಿಸುವೆನು
ಸಚ್ಚಿದಾನಂದ ಮೆಚ್ಚಿನ ಸತಿ ನಾನು
ಮುಚ್ಚಿಕೊಳ್ಳೆಲೆ ನಿನ್ನ ಬಿಗುಹ ॥ ೧ ॥

ಹಾರುವ ಕುಲವೆಂದು ಮೀರಿ ನುಡಿಯಬೇಡ
ಕಾರಿಸುವೆನು ತಿಂದ ಕೂಳ
ಯಾರ ಇಳಿಯ ಬಿಟ್ಟು ದೂರ ಮಾಡುವೆ ನಿನ್ನ
ಬಾರಿಸುವೆನು ಬೆನ್ನ ತೊಗಲ ॥ ೨ ॥

ಅಕ್ಕ ಗಿರಿಜೆ ಕೇಳು ಮರ್ಕಟಗುಣದವಳೆ
ಎಕ್ಕಲ ಜೋಗಿಯರ ಮಗಳೆ
ಕುಕ್ಕೆ ಹೊಲತಿ ನಿನ್ನ ಲೆಕ್ಕಿಸುವೆನೆ ನಮ್ಮ
ಮುಕ್ಕಣ್ಣ ಶಿವನ ಬಲುಹೆನಗೆ ॥ ೩ ॥

ಮಂಗಲಹೊಲತಿ ಕೇಳು ಮುಂಗೈಯ ಚಾಚಲು
ಅಂಗುಳ ನಾಲಿಗೆ ಕೊಯ್ವೆ
ಹೆಂಗಸು–ಬಾಡಿಗ ನಿನಗಾದ ಶಿವನ ಗ
ಣಂಗಳ ಬಲುಹುಂಟು ಎನಗೆ ॥ ೪ ॥

ಕಲ್ಲ ಗಿರಿಜೆ ಕೇಳು ಸೊಲ್ಲಡಗಲಿ ನಿನ್ನ
ಎಲ್ಲಿಯ ಶಿವಗಣ ನಿನಗೆ
ಎಲ್ಲ ದೇವರ ದೇವ ಅಲ್ಲಮ ಪ್ರಭುರಾಯ
ಬಲ್ಲಿದ ಶಿವಗೆಣೆಯಾರು ॥ ೫ ॥

ಕುಲ್ಲ ಹೊಲತಿ ಕೇಳು ಬಲ್ಲಿದನೆನಬೇಡ
ಹುಲ್ಲು ನೀರನೆ ಹೊರಿಸಿದರು
ಅಲ್ಲದ ಮಾತನು ಮೆಲ್ಲನೆ ನುಡಿಯಲು
ಹಲ್ಲ ಮುರಿಸಿದರು ಶಿವನ ॥ ೬ ॥

ದೊಡ್ಡವನೆನಬೇಡ ಗಡ್ಡಜಡೆಯ ಕಿತ್ತು
ರುಡ್ಡ ಗೋಲಿಲೆ ಹೊಯ್ಸಿದರು
ವಡ್ಡತನಗಳಿಂದ ಗುಂಡು ಮಣ್ಣನೆ ಹೊರಿಸಿ
ಅಡ್ಡ ಬೀಳಿಸಿದರು ಶಿವನ ॥ ೭ ॥



ಬಂಟನೆಂದನಬೇಡ ಒಂಟಿಗಾಲುಗಳಿಂದ
ಎಂಟು ದಿನವು ನಿಲ್ಲಿಸಿದರು
ಕುಂಟಣಿತನದಿಂದ ಉಂಟುಮಾಡಿದ ತನ್ನ
ಬಂಟತನವು ಸುಡಲಿನ್ನು ॥ ೮ ॥

ಹಿರಿಯನೆಂದೆನಬೇಡ ಸೆರಗಾದ ಅರುವೆಯ
ಶಿರಕೆ ಸುತ್ತಿದ ನಿಮ್ಮ ಶಿವನು
ಹೊರಗೆಂದುಣಗವ ಬರಮಾಡಿ ಹೊಯ್ಯಲು
ಎರಗೀದ ಶಿವಶರಣರಿಗೆ ॥ ೯ ॥

ಎಷ್ಟು ತಪ್ಪುಗಳನು ಅಷ್ಟನೊಳಕೊಂಡು
ಪಟ್ಟಗಟ್ಟಲು ಪರಶಿವಗೆ
ನಿಷ್ಠೆಯೊಳಿರುತಿರೆ ದುಷ್ಟಬುದ್ಧಿಗಳಿಂದ
ಕೆಟ್ಟ ಹೊಲತಿ ನಿನ್ನ ತಂದ ॥ ೧೦ ॥

ನಿನ್ನ ಬಲ್ಲರೊ ನಿಮ್ಮ ಶಿವನ ಬಲ್ಲರೊ ನಮ್ಮ
ಮುನ್ನಿನ ಶಿವಗಣ ಪದವು
ಅನ್ಯೋನ್ಯವಾಗಿ ನುಡಿಯೆ ಕರುಳನು ಸೀಳಿ
ಜನ್ನಿವಾರಗಳ ಮಾಡುವರು ॥ ೧೧ ॥

ಅಕ್ಕ ಕೇಳೆಲೆ ನಮ್ಮ ಮುಕ್ಕಣ್ಣ ಪರಶಿವ
ಭಕ್ತಿಭಾವಕೆ ಮರುಳಾಗಿ
ಭಕ್ತಗಣಂಗಳ ಯುಕ್ತಿ ಭಾವಕೆ ಮೆಚ್ಚಿ
ಮುಕ್ತಿಗಳನು ಕೊಟ್ಟು ಶಿವನು ॥ ೧೨ ॥

ಹೇಳುದೇತಕೆ ನಮ್ಮ ಭಾಳಾಕ್ಷಶರಣರು
ಏಳುಕೋಟಿಗಳವರಿರಲು
ಮೇಳ ನಿನ್ನಯ ಭಕ್ತಿ ತೋಳ ಬಲು ಮೇಗಾದ
ಹೇಳೆಲೆ ನಿನಗ ತಂದವರ ॥ ೧೩ ॥

ಮತ್ತೆ ಕೇಳಲೆ ನಮ್ಮ ಪುತ್ರರ ಮಹಿಮೆಯ
ಮೃತ್ಯುದೈವದ ಗಂಡ ಶರಭ
ಚಿತ್ತವು ಕನಲುತ ಎತ್ತಿ ನೀ ನುಡಿದರೆ
ಕಿತ್ತು ಹಾಕುವ ನಿನ್ನ ಕರುಳ ॥ ೧೪ ॥

ದಿಕ್ಕು ದೇವತೆಗಳ ಗಂಡ ಶರಭನೀಗ
ಡೊಕ್ಕೆಯ ಸೀಳಿ ಕೊಲ್ಲುವನು
ಸೊಕ್ಕ ಮುರಿದು ನಾರಸಿಂಹನ ಸೀಳಿದ
ಮುಕ್ಕಣ್ಣ ಶರಭವತಾರ ॥ ೧೫ ॥

ಶರಣಬಸವ ಕೇಳು ಹರಸತಿ ತನ್ನಯ
ಶರಭನ ಬಲುಹ ತೋರಿದರೆ
ಜರಿವ್ರುತ ಜಡಿಯುತ ತರುಳರ ಗುಣಗಳ
ಗಿರಿಜಾದೇವಿಗೆ ಬೋಧಿಸಿದಳು ॥ ೧೬ ॥

ಬಸವ ಮಂತ್ರಿಯೆ ಜಯ ಅಸಮಾಕ್ಷ ಶಿವಜಯ
ಪಶುಜೀವಿ ಹರಿಯಜರೊಡೆಯ
ಬಿಸುಗಣ್ಣ ಸತಿಯರು ಮಸಗುವ ಕಥನದ
ಕುಸಲಾದ ಸಂಧಿಗೆ ಶರಣು ॥ ೧೭ ॥

ಸಂಧಿ ೪ಕ್ಕಂ ಕಂದ ೧, ವಚನ ೫೩, ಪದನು ೧೭,
ಸಂಗತ್ಯ. ೩೩, ಉಭಯಂ ೪೩೮ ಕ್ಕಂ ಮಂಗಳ ಮಹಾ ಶ್ರೀ ಶ್ರೀ



## ಗಂಗಿ ಗೌರೀ ಸಂವಾದ

೫

**ವಚನ :**

ಸುತರ ಬಲುಮೆಗಳನು ಕೇಳೆಲೆ ಹೆಣ್ಣೆ। ನಿನ್ನ
ಹತಮಾಡಿ ಹಲ್ಲ ಮುರಿವರೆಲೆ ಹೆಣ್ಣೆ
ರತುನ ಮಾಣಿಕದ ಮನೆಯೊಳೆಲೆ ಹೆಣ್ಣೆ। ನಿನ್ನ
ಹಿತದಿಂದ ರಕ್ಷಿಸುವೆನು ಎಲೆ ಹೆಣ್ಣೆ ॥ ೧ ॥

ಎಲ್ಲ ಮಕ್ಕಳಿನ್ನು ಕೇಳು ಅಕ್ಕಯ್ಯ। ಚಿಕ್ಕ
ನಲ್ಲೇರುಗಳು ಬಂದಮೇಲೆ ಅಕ್ಕಯ್ಯ
ಹಲ್ಲು ಹೋದ ಮುದುಕಿ ನೀನು ಅಕ್ಕಯ್ಯ। ನಿನಗೆ
ಹುಲ್ಲ ಮನೆಯು ಸೋಬಿತಾನೆ ಅಕ್ಕಯ್ಯ ॥ ೨ ॥

ಸೊಸೆಯ ಮಗನ ನಂಬಬೇಡ ಅಕ್ಕಯ್ಯ। ಅವನು
ಬಿಸಿಗಣ್ಣಿನ ಕೋಪದವನು ಅಕ್ಕಯ್ಯ
ಕಸವ ನೀರ ಹೊರಿಸುವಾರು ಅಕ್ಕಯ್ಯ। ನಿನ್ನ
ಮಸಣಕ್ಕೀಡಮಾಡದಿಹರೆ ಅಕ್ಕಯ್ಯ ॥ ೩ ॥

ಷಣ್ಮುಖನ ನಂಬಬೇಡ ಅಕ್ಕಯ್ಯ। ಅವನು
ಸೆಣಸಿ ತಾರಕನ ಕೊಂದನಕ್ಕಯ್ಯ
ಗುಣವು ಮುಳ್ಳ ಮೊನೆಯಷ್ಟಿಲ್ಲ ಅಕ್ಕಯ್ಯ। ನಿನ್ನ
ಹಣೆಯ ಬರಹದ ಕರ್ಮಫಲವೆ ಅಕ್ಕಯ್ಯ ॥ ೪ ॥

ನೂರುವರುಷ ತುಂಬಿತಿನ್ನು ಅಕ್ಕಯ್ಯ। ನಿನಗೆ
ನೀರು ಗಂಜಿ  ಹೊಯ್ವರಿಲ್ಲ ಅಕ್ಕಯ್ಯ
ಸೇರಿಕೊಳ್ಳೆ ಹಿರಿಯ ಮಗನ ಅಕ್ಕಯ್ಯ। ನಮ್ಮ
ಕೇರಿಯೊಳಗೆ ಸುಖದೊಳಿರೆ ಅಕ್ಕಯ್ಯ ॥ ೫ ॥

ಬಿಗುಹು ಬಿಂಕ ಸಲ್ಲದಿನ್ನು ಅಕ್ಕಯ್ಯ। ನಿನಗೆ
ತೊಗಲು ಜೋಲು ಬಿದ್ದವೆಲೆ ಅಕ್ಕಯ್ಯ
ಜಗದ ಜನರ ಹಗೆಯು ಕಾಣೆ ಅಕ್ಕಯ್ಯ। ನಿನ್ನ
ಹುಗಿದು ಹಾಕೋರಿಲ್ಲ ಅಕ್ಕಯ್ಯ ॥ ೬ ॥

ಮುದುಕಿ ಕೇಳು ಗಿರಿಜಾದೇವಿ ಅಕ್ಕಯ್ಯ । ಅವಗೆ
ಮದುವೆ ಮುಂಜಿ ಆಗಲಿಲ್ಲ ಅಕ್ಕಯ್ಯ
ಕದುರು ಹಂಜಿ ನೂತುಕೊಂಡು ಅಕ್ಕಯ್ಯ । ನಮ್ಮ
ಸದನದೊಳಗೆ ಸುಖದೊಳಿರೆ ಅಕ್ಕಯ್ಯ ॥ ೭ ॥

ಬಣ್ಣನೆಯ ನುಡಿಗಳಲ್ಲ ಅಕ್ಕಯ್ಯ । ಮಾಯ
ಕಣ್ಣ ದೇವತೆಗಳು ಅಳಿದಾರಕ್ಕಯ್ಯ
ಹೆಣ್ಣು ಜನ್ಮ ನಿನ್ನ ಪಾಡೇನಕ್ಕಯ್ಯ । ನಿನ್ನ
ಮಣ್ಣಿಗ್ಹಾದಿ ಮಾಡಿಕೊಳ್ಳಿ ಅಕ್ಕಯ್ಯ ॥ ೮ ॥

ಮುದ್ದು ಮೊಗದ ಗಿರಿಜಾದೇವಿ ಅಕ್ಕಯ್ಯ । ನೀನು
ಬಿದ್ದು ಹೋಹ ದಿನವು ಬಂತು ಅಕ್ಕಯ್ಯ
ಸದ್ದು ಸಪ್ಪಳಿಲ್ಲದಂತೆ ಅಕ್ಕಯ್ಯ । ನಮ್ಮ
ಬುದ್ಧಿ ಮಾತಿನೊಳಗೆ ನಡೆಯೆ ಅಕ್ಕಯ್ಯ ॥ ೯ ॥

ಮತ್ತೆ ಕೇಳು ಮಂತ್ರಿ ಬಸವ ಗುರುರಾಯ । ಮನೆಯ
ತೊತ್ತುಮಾಡಿ ಜಾಡಿಸಿದರೆ ಗುರುರಾಯ
ಎತ್ತಿ ಕೋಪಾಟೋಪಗಳಲಿ ಗುರುರಾಯ । ಗಿರಿಜೆ
ಹತ್ತಿಸಿನ್ನು ಜಾಳಿಸಿದಾಳು ಗುರುರಾಯ ॥ ೧೦ ॥

ಹೊಟ್ಟೆಕೂಳ ತಿಂದ ನಾಯಿ ಎಲೆ ಹೆಣ್ಣೆ । ದೊಡ್ಡ
ಬೆಟ್ಟಗಿರಿಗೆ ಬೊಗುಳಲೇನು ಎಲೆ ಹೆಣ್ಣೆ
ನಟ್ಟಗುಂಡು ನಡುಗುವಾದೆ ಎಲೆ ಹೆಣ್ಣೆ । ನಿನ್ನ
ಲೊಟ್ಟೆಜಾತಿ ಗುಣಕೆ ಹೋದೆ ಎಲೆ ಹೆಣ್ಣೆ ॥ ೧೧ ॥

ಜೋಕುಮಾರ ಹೊಲತಿ ಕೇಳು ಎಲೆ ಹೆಣ್ಣೆ । ನಾಯಿ
ಸಿಕ್ಕ ಹಳೆಯ ತೊಗಲುಗಳನು ಎಲೆ ಹೆಣ್ಣೆ
ತಾಕಿ ಹಸ್ತಿಮದ್ದಾನೆಗಳು ಎಲೆ ಹೆಣ್ಣೆ । ಕೆಡಹಿ
ನೂಕುವದು ಮೂಲಹೊಲತಿ ಎಲೆ ಹೆಣ್ಣೆ ॥ ೧೨ ॥

ಮೂಳಹೊಲತಿ ಕಬ್ಯಾರವಳೆ ಎಲೆ ಹೆಣ್ಣೆ । ನಿನ್ನ
ಕೋಳಿ ಹಂದಿ ಮೀನ ಮರತಿ ಎಲೆ ಹೆಣ್ಣೆ
ತೋಳುತೊಡೆಯ ಬಲುಮೆ ಇದ್ದರೆಲೆ ಹೆಣ್ಣೆ । ಸಂತಿ
ಸೂಳೆಯಾಗಿ ಜಲ್ಮ ಹರಿಯೆ ಎಲೆ ಹೆಣ್ಣೆ ॥ ೧೩ ॥



**ಪದನು :**

ಸೂಳೆ ವೇಶಿಯರು ಎಂದು ನೀ ನಮ್ಮ ಬಾಳ್ವರ ನುಡಿವರೇನೇ
ತಾಳಿದೆನು ನಾನೀಗ ನಿನ್ನ ಸುಳಿವಳಿಗಳನು ಹೇಳಿದರೆ ಹುರುಳಿಲ್ಲವೇ ॥ ಪಲ್ಲ ॥

ದೇವಿ ಗಿರಿಜೆ ಕೇಳು ನಿಂಬಳಗ ಆವ ಸುದ್ದಗಳು ಹೇಳೆ
ಭಾವೆ ಛಾಯಾದೇವಿ ಯಮಧರ್ಮನ ರಾಣಿ ದೇವಪುರುಷನ ನುಂಗಳೆ
ಭೂವಳಯ ಬಲ್ಲ ಕೆಲಸ ಬ್ರಹಸ್ಪತಿಯು ದೇವಚಂದ್ರನ ಕೂಡಳಿ
ತಾವರೆಗಂಧಿರತಿದೇವಿಯನು ತಾ ಪಡೆದು ಹಾವಿನೊಳಗಾದ ಚಂದ್ರ ॥ ೧ ॥

ಸಪ್ತ ಋಷಿಗಳ ಹೆಂಡರು ಪುರುಷರಿಗೆ ಪುಷ್ಟಜಾತಿಯನೆ ತರುತಾ
ಅಪ್ಪಿಕೊಳ್ಳರೇ ಅಗ್ನಿಪುರುಷನ ಬೇಗದಲಿ ತಪ್ಪಿ ಶಿಶುಗಳ ಪಡೆಯರೆ
ಮುಪ್ಪುರದ ಪತಿವ್ರತೆಯರು ಕೃಷ್ಣನ ಅಪ್ಪಿ ಬತ್ತಲೆಯಾಗರೆ
ದರ್ಪಣದ ಮುಖಿ ಧರ್ಮರಾಯನ ರಾಣಿಗೆ ನೆಪ್ಪುಹರಿಯದೆ ಕರ್ಣಗೆ ॥ ೨ ॥

ಮಾನವರ ಹೇಳಲಳವೆ ಅಭಿಮಾನವಗೇಡಿನ ಬಗೆಯನು
ಊನವಿಲ್ಲದೆ ಕೊಂತಿ ಐವರನು ಭ್ರಮಿಸುತಲಿ ತಾನು ಮಕ್ಕಳ ಪಡೆಯಳೆ
ಹೀನ ಮಾನವರ ಮಾತು ಅಂತಿರಲಿ ನೀನಾವ ಸುದ್ದ ಹೇಳು
ನಾನಾಗಿ ನಿನ್ನ ಅಪರಾಧಗಳ ನುಂಗಿದರೆ ಹೀನಗುಣಗಳ ತೋರಿದೆ ॥ ೩ ॥

ನಿನ್ನಯ ಮದುವೆಗಳಿಗೆ ಶಿವ ತಾನು ಹನ್ನೆರಡು ಕೋಟಿ ದ್ರವ್ಯ
ಹೊನ್ನಧಾರೆಯನೆರೆದು ನಿನ್ನ ಮದುವೆಯನಾಗಿ ತನ್ನ ತೊಡೆಯೊಳಗಿರಿಸಿದ
ಉನ್ನತ ಐಶ್ವರ್ಯದಿ ಇರುತಿರಲು ಅನ್ಯ ಬ್ರಹ್ಮನ ಭ್ರಮಿಸಲು
ನಿನ್ನ ಕೊಲಲಾರದೆ ಮುನ್ನ ಬ್ರಹ್ಮನ ಶಿರವ ತನ್ನ ಉಗುರಿಲಿ ಚಿವುಟಿದ ॥ ೪ ॥

ಕಪ್ಪು ಕುಲದವಳು ಎಂದು ನೀ ನಮ್ಮ ನಿಷ್ಠಲದಿ ನುಡಿವರೇನೆ
ತುಪ್ಪಬೋನವನುಂಡು ಪರರ ಭ್ರಮಿಸುವಳೀಗ ಕಪ್ಪುಗುಲದವಳು ಕಾಣೆ
ತೊಪ್ಪಲರಿವೆಯ ಗಿರಿಜೆಯೆ ನಿನ್ನ ಗುಣ ಗೋಪ್ಯಮಾಡಲು ಮಾಜಿದೆ
ಕುಪ್ಪಸವ ಹೊಲಿವ ಚಿಪ್ಪಿಗನ ಗುಪ್ತಸುದ್ದಿಯ ಮರೆದೆಯಾ ॥ ೫ ॥

ಮುತ್ತೈದೆ ಗಿರಿಜೆ ಕೇಳು ನಿನ್ನಯ ಸತ್ಯಗಳು ಸುಡಲಿ ಇನ್ನು
ಮತ್ತೆ ನಿನ್ನಯ ಚಿತ್ತಗುಣಭಾವಗಳ ಕಂಡು ಹತ್ತು ತಲೆಯವಗಿತ್ತನು
ಎತ್ತಿ ಕೊಂಡೊಯ್ದು ತಿಳಿದು ರಾವಣನು ಚಿತ್ತ ಮನಸಿಗೆ ಬಾರದೆ
ಹೊತ್ತ ಮೋರೆಯ ಮುದುಕಿ ಛೀ ಎಂದು ದಬ್ಬಿದರೆ ಮತ್ತೆ ನಮ್ಮನು ಕೂಡಿದೆ ॥ ೬ ॥

ಹೆಡಗಿದಲೆ ಗಿರಿಜೆ ಕೇಳು ನಿನ್ನಯ ಮುಡಿದಲೆಗೆ ನೆರೆ ಬಂದವು
ಗಡಿಗೆಮಡಕೆಯ ತೊಳೆದು ನಮ್ಮ ಅರಮನೆಯೊಳಗೆ ಅಡಿಗೆ ಬಾಣಸಿಯಾಗಿರೆ
ನಡೆ ನುಡಿಯು ಕೆಟ್ಟಮೇಲೆ ಎಲೆ ಗೌರಿ ಬಡಿವಾರ ಇನ್ಯಾತಕೆ
ಒಡೆಯ ಸಂಗಮನಾಥನರಮನೆಯೊಳಗಿನ್ನು ನುಡಿಯದೆ ಸುಮ್ಮನಿರೆ ॥ ೭ ॥

**ವಚನ :**

ಮನವ ನೋಯಿಸಿ ನುಡಿದರಿನ್ನು ಎಲೆದೇವ। ಗೌರಿ
ಘನಕೋಪಗಳ ತಾಳ್ದಳಿನ್ನು ಎಲೆದೇವ
ಅನಲು ಜನಿಸಿ ಮನದೊಳಿನ್ನು ಎಲೆದೇವ। ಚಿಕ್ಕ
ಸುನಿಯ ಮಾಡಿ ಗರ್ಜಿಸಿದಳು ಎಲೆದೇವ ॥ ೧ ॥

ಬೀದಿ ಹೊಲತಿ ಕಬ್ಬೆರವಳೆ ಎಲೆ ಹೆಣ್ಣೆ। ನಮ್ಮ
ಹಾದರಗಳನೇನ ಬಲ್ಲೆ ಎಲೆ ಹೆಣ್ಣೆ
ಸೋದಿಸುತ್ತ ಮನವ ನೋಡಿ ಎಲೆ ಹೆಣ್ಣೆ। ಬಿನದ
ಚೆಪ್ಪಿಗವತಾರದಲಿದ್ದ ಎಲೆ ಹೆಣ್ಣೆ ॥ ೨ ॥

ಬ್ರಹ್ಮರಾವಳನು ಕೇಳು ಎಲೆ ಹೆಣ್ಣೆ। ಶಿವಗೆ
ಇಮ್ಮಡಿಯ ಘನವೆಂದೆನಲು ಎಲೆ ಹೆಣ್ಣೆ
ಹಮ್ಮ ಮುರಿದು ಹತಮಾಡಿದನು ಎಲೆ ಹೆಣ್ಣೆ। ಚಿಕ್ಕ
ಚುಮ್ಮನಾಯಿ ಬೊಗಳಲೇನು ಎಲೆ ಹೆಣ್ಣೆ ॥ ೩ ॥

ಕುಡಿದು ನೆತ್ತೆಗೇರಿದವಳೆ ಎಲೆ ಹೆಣ್ಣೆ। ಎನ್ನ
ಒಡೆಯ ಮನವ ನೋಡಿದಾನ ಎಲೆ ಹೆಣ್ಣೆ
ತುಡುಕಿ ತುಳುಕಿ ಸೂಸದಿರಲು ಎಲೆ ಹೆಣ್ಣೆ। ಮೆಚ್ಚಿ
ತೊಡೆಯ ಮೇಲೆ ಮಲಗಿಕೊಂಡ ಎಲೆ ಹೆಣ್ಣೆ ॥ ೪ ॥

ಭವದ ಕುರಿಯೆ ಹೇಮನರಿಯೆ ಎಲೆ ಹೆಣ್ಣೆ। ಸರ್ವ
ಭುವನಕೆಲ್ಲ ಅಧಿಕನಾವ ಎಲೆ ಹೆಣ್ಣೆ
ಶಿವನ ಅರ್ಧದೇಹಿ ನಾನು ಎಲೆ ಹೆಣ್ಣೆ। ಬೇರೆ
ಶಿವನು ಹೋಹ ಶರೀರವುಂಟೆನೆಲೆ ಹೆಣ್ಣೆ ॥ ೫ ॥

ಚೆನ್ನ ಶಿವನ ಮಡದಿ ನಾನು ಎಲೆ ಹೆಣ್ಣೆ। ಚಿಕ್ಕ
ಕುನ್ನಿ ನಾಯಿ ಜರಿದರೇನು ಎಲೆ ಹೆಣ್ಣೆ
ಅನ್ಯ ಹಾದರಗಳು ಉಂಟೆ ಎಲೆ ಹೆಣ್ಣೆ। ಕೇಳು
ತೊನ್ನಹೊಲತಿ ಕೆಟ್ಟ ಮೂಳಿ ಎಲೆಹೆಣ್ಣೆ ॥ ೬ ॥

ಹೆಜ್ಜವುಂಟೆ ವಜ್ರಕಿನ್ನು ಎಲೆ ಹೆಣ್ಣೆ। ಚಿಕ್ಕ
ಗುಜ್ಜಿನಾಯಿ ಬೊಗಳಲೇನು ಎಲೆಹೆಣ್ಣೆ
ಸೆಜ್ಜೆ ಗೃಹದ ದೇವತೆಗಳು ಎಲೆ ಹೆಣ್ಣೆ। ನನ್ನ
ಹೆಜ್ಜೆಯೊಳು ಉರುಳಿದಾರು ಎಲೆ ಹೆಣ್ಣೆ ॥ ೭ ॥



ಬಲೆಯ ಹಾಕಿ ಕೊಲೆಯ ಕೊಲ್ವೆ ಎಲೆ ಹೆಣ್ಣೆ। ನಿನ್ನ
ಹೊಲೆಯ ಮಾತ ಒಪ್ಪರಿನ್ನು ಎಲೆ ಹೆಣ್ಣೆ
ಕಲೆಯ ನೆಲೆಯ ಬಲ್ಲ ಹಿರಿಯರೆಲೆ ಹೆಣ್ಣೆ। ನನ್ನ
ನೆಲೆಯನಾರು ಕಂಡುದಿಲ್ಲ ಎಲೆ ಹೆಣ್ಣೆ ॥ ೮ ॥

ಮುಪ್ಪುವುಂಟೆ ಶಿವನ ಮಡದಿಗೆಲೆ ತಂಗಿ। ನಿನ್ನ
ಕಪ್ಪು ಹೊಲಸ ಮನವನೊಪ್ಪರೆಲೆ ತಂಗಿ
ತಿಪ್ಪೆ ಮಲವ ಬಳಿವ ಮೂಳಿ ಎಲೆ ತಂಗಿ। ಶಿವಗೆ
ಕರ್ಪುರದ ಜ್ಯೋತಿ ನಾನು ಎಲೆ ತಂಗಿ ॥ ೯ ॥

ಹೆಂಡಿ ಹಿಡಿವ ಮೂಳಿ ಬಂದು ಎಲೆ ಹೆಣ್ಣೆ। ಚಲ್ವ
ಗೊಂಡೆಯೆಂದಳವನೇರಲು ಎಲೆ ಹೆಣ್ಣೆ
ಕಂಡು ಸಗಣಿ ಎನ್ನದೆಂಬ ಎಲೆ ಹೆಣ್ಣೆ। ನಿನ್ನ
ಗುಂಡಗುಣಕೆ ಹೋದೆ ನೀನು ಎಲೆ ಹೆಣ್ಣೆ ॥ ೧೦ ॥

ಕತ್ತೆ ಪರಿಮಳವ ಹೊತ್ತರೆ ಎಲೆ ಹೆಣ್ಣೆ। ಅದರ
ಯುಕ್ತಿ ಪರಿಮಳವ ಬಲ್ಲುದೆ ಎಲೆ ಹೆಣ್ಣೆ
ತೊತ್ತಿಗುಂಟೆ ಗರತಿಭಾವ ಎಲೆ ಹೆಣ್ಣೆ। ಶಿವನ
ನೆತ್ತಿಯೊಳಗೆ ಇದ್ದರೇನೆ ಎಲೆ ಹೆಣ್ಣೆ ॥ ೧೧ ॥

ದೇವಭಕ್ತರೆಲ್ಲ ಕೂಡಿ ಎಲೆ ಹೆಣ್ಣೆ। ಚಿಕ್ಕ
ಭಾವೆ ತಂದು ಸಲಹಿದರು ಎಲೆ ಹೆಣ್ಣೆ
ಜೀವ ಸೊಕ್ಕಿ ನುಡಿಯದಿರೆಲೆ ಹೆಣ್ಣೆ। ಛೀ
ಹೇವಗೆಟ್ಟ ಹೇಸಿಮೂಳಿ ಎಲೆ ಹೆಣ್ಣೆ ॥ ೧೨ ॥

ಕೆಟ್ಟ ಹೊಲತಿ ಕಬ್ಬೆರವಳೆ ಎಲೆ ಹೆಣ್ಣೆ। ನಿನಗೆ
ಹುಟ್ಟರೇನೆ ಗಂಡರುಗಳು ಎಲೆ ಹೆಣ್ಣೆ
ಹೊಟ್ಟೆಹೊರೆದು ಬಾಳೊಕಿಂತ ಎಲೆ ಹೆಣ್ಣೆ। ಒಂದು
ಕಟ್ಟೆಕೆರೆಯ ಭಾವಿ ಬೀಳೆ ಎಲೆ ಹೆಣ್ಣೆ ॥ ೧೩ ॥

ನೆತ್ತಿ ಜೆಡೆಯ ಬಿಡಿಸದಿರ್ದಡೆಲೆ ಹೆಣ್ಣೆ। ನಾನು
ಹೊತ್ತಗಿರಿಯು ಕುಚಗಳಲ್ಲ ಎಲೆ ಹೆಣ್ಣೆ
ಸುತ್ತಿಕೊಂಡು ಮುಂದಲೆಗಳ ಎಲೆ ಹೆಣ್ಣೆ। ನಿನ್ನ
ಕುತ್ತಿಗೆಯ ಮುರಿಯದಿಹೆನೆ ಎಲೆ ಹೆಣ್ಣೆ ॥ ೧೪ ॥

ತೊಡೆಯ ಬಿಟ್ಟು ಕಡೆಗೆ ನಿಂತು ಗುರುರಾಯ। ಗೌರಿ
ಗುಡಿಗುಡಿಸಿ ಘರ್ಜಿಸಿದಳು ಗುರುರಾಯ

ನಡುಗಿತಿನ್ನು ಭೂಮಿ ಗಗನ ಗುರುರಾಯ । ಸಪ್ತ
ಕಡಲು ಒಡೆದು ಬೆದರಿದಾವು ಗುರುರಾಯ ॥ ೧೫ ॥

ಬಹುಕೋಪದಲಿ ಗರ್ಜಿಸಿದರೆ ಗುರುರಾಯ । ಗಂಗೆ
ಮಹಿತಳಕ್ಕೆ ಮುಳುಗಿದಂತೆ ಗುರುರಾಯ
ಮಹದೇವನ ಮುಖವ ನೋಡಿ ಗುರುರಾಯ । ಗಂಗೆ
ಬಹುದುಃಖದಿ ದುಃಖಿಸಿದಳು ಗುರುರಾಯ ॥ ೧೬ ॥

ಕೇಳಿ ಘರ್ಜನೆಯ ಧ್ವನಿಗೆ ಗುರುರಾಯ । ಗಂಗೆ
ಬಾಳೆ ಸುಳಿಗಳಂತೆ ನಡುಗಿ ಗುರುರಾಯ
ಆಳೊ ಶಿವನ ಮುಖವ ನೋಡಿ ಗುರುರಾಯ । ಗಂಗೆ
ಪ್ರಳಾಪದಲಿ ಶೋಕಿಸಿದಳು ಗುರುರಾಯ ॥ ೧೭ ॥

**ಪದನು :**

ಅಯ್ಯಯ್ಯೊ ಪಾಪಿ ಶಿವನೆ ನನಗಿನ್ನು ಬೈಯಬಾರದ ಬೈಗಳ
ಕೈಯಾರೆ ಕೊಲ್ವಂತೆ ಅಂತರಿಸಿ ನಿಂದಳು ಸುಯ್ಯಲಾರೆನು ಪ್ರಾಣವ ॥ ಪಲ್ಲ ॥

ಇಂತು ಬೈಗುಳವ ಕೇಳಿ ಎಲೆ ಶಿವನೆ ಎಂತು ಸೈರಿಸುವೆನಿನ್ನು
ಹಂತಿಗಟ್ಟನೆ ಕಟ್ಟಿ ಹಲವು ಮಂತ್ರಗಳಿಂದ ಮುಂತೆ ಕೊರಳನೆ ಮುರಿವಳು
ಪಂತ ಪಾಡುಗಳಿಂದ ತಾ ತನ್ನ ಸಂತ ಮೂವರ ಕೈಯಲಿ
ಅಂತರಂಗವ ಬಗಿದು ಸೀಳಿ ಕೊಲಿಸುವಳೀಗ ಪಂಥ ಸುಕುಮಾರರಿಂದ ॥ ೧ ॥

ಜೋಗಿ ವೇಷವನೆ ತಾಳಿ ನೀ ನನ್ನ ಸಾಗಿ ಗಿರಿಗಳನೆ ಹೊಕ್ಕು
ಸೋಗೆಗಂಗಳ ಸೊಬಗೆ ಎಂದೆನುತ ನೀನೆನ್ನ ಹೀಗೆ ಮೋಸವ ಮಾಳ್ಪರೆ
ನಾಗಲೋಕದ ಸಿದ್ಧರೊಡೆಯನೆಂದಾಗರ ಉಳಿಯ ಮಾಡಿದೆ
ಆಗ ಬೇಗದಿ ನನ್ನನೀಗ ಕಳೆವೆನು ಎಂದು ಬೇಗೆಯುರಿಯೊಳಗಿಕ್ಕಿದೆ ॥ ೨ ॥

ಮಡದಿ ಮಕ್ಕಳು ಇಲ್ಲವು ನನಗಿನ್ನು ಪಡೆದ ತಾಯಿಗಳಿಲ್ಲವು
ಒಡವೆಯನು ಗಳಿಸಿದೆನು ಎಂಬುವರು ಇಲ್ಲವೆಂದು ಬೆಡಗು ಮಾಡಿದೆ ನನ್ನನು
ತೊಡೆಯ ಜಾಗವು ತನ್ನದು ಮೇಲಣ ಮುಡಿಯ ಜಾಗವು ನನ್ನದು
ಕಡುಪಾಪಿ ದೊಡ್ಡ ರಕ್ಕಸಿ ನಿನ್ನ ಹೆಂಡತಿ ಕಡಿದು ತಿನ್ನದೆ ಬಿಡುವಳೆ ॥ ೩ ॥

ನೀನಾಗಿ ತಂದ ಮೇಲೆ ಅವಳೆನ್ನ ಸ್ಥಾನಮಾನವ ನೋಡದೆ
ಸ್ಥಾನ ಸೂಕರ ಕೆಟ್ಟ ಜಾತಿಗಳು ಎಂದೆನುತ ಹೀನ ನುಡಿಗಳ ನುಡಿಸಿದೆ
ವಾನರರ ಜಾತಿಯವಳು ಬಳಿಕೆನ್ನ ಊನ ಮಾಡದೆ ಬಿಡುವಳೆ
ಸೂನ್ಯ ಸೇಡೆಗಳಿಂದ ಮರೆದಿಕ್ಕಿ ಕೊಲಿಸುವಳು ನಾನು ಸೈರಿಸಲಾರೆನು ॥ ೪ ॥



ಎಲ್ಲಿಯ ಮುದುಕಿ ಇವಳು ಶಿವಶಿವಾ ಹಲ್ಲು ಹೋದವಳಲ್ಲವು
ಕಲ್ಲುಗುಂಡುಗಳೆಲ್ಲ ಕರಗಿ ಮಣ್ಣಾದವು ಸೊಲ್ಲು ಶಬ್ದಗಳಿಂದಲಿ
ಎಲ್ಲರನು ನೋಡಲಿಕೆ ಅವಳಿಗಿನ್ನೆಲ್ಲಿ ಬಂದಿತೊ ಹರೆಯವು
ಮಲ್ಲಿಕಾರ್ಜುನದೇವ ಮೋಸಮಾಡುತಲೆನ್ನ ಕೊಲ್ಲಲು ಕರತಂದಿರಿ ॥ ೫ ॥

ಮುದುಕಿ ಇವಳೆಂದು ನಾನು ಶಿವಶಿವಾ ಹದನ ಮುನ್ನರಿತುದಿಲ್ಲ
ಕದರು ಹಂಜಿಯ ಕೊಟ್ಟ ಪರಿ ಇವಳೆನ್ನ ಹಗೆಯ ಮುಗುಚದೆ ಬಿಡುವಳೆ
ಬದುಕುಭಾಗ್ಯಗಳು ಕೆಟ್ಟು ಶಿವ ನಿಮ್ಮ ಉದಕಮಜ್ಜನವಳಿಯಲಿ
ಕುದಿಕುದಿತು ನೊಂದು ದುಃಖವು ನಿಮ್ಮ ಕೈಮೈಗೆ ಸಂದುಸಂದನೆ ತಾಗಲಿ ॥ ೬ ॥

ಕಣ್ಣು ಮೂರುಳ್ಳ ಶಿವನೆ ನಿನ್ನಯ ಯಾವ ಪುಣ್ಯಗಳನುಣ್ಣಲಿಲ್ಲ
ಕಣ್ಣೀರು ಕೂಳುಗಳ ತಿನಿಸುತಲಿ ನೀ ನನ್ನ ಮಣ್ಣಕಲಸಲಿ ತಂದಿರೇ
ಹೆಣ್ಣು ಹೆತ್ತವರೆಲ್ಲರು ಅಡವಿ ಅರಣ್ಯಗಳ ತಿರುಗಿ ಬಳಲಿ
ಬಣ್ಣದ ಗಿಳಿ ನಮ್ಮ ಬಯಲು ಮಾಡಿದೆ ಎಂದು ಕಣ್ಣೀರನೆ ಸುರಿವರು ॥ ೭ ॥

ಯಾಕೆ ಬಯಲಾದೆ ಮಗಳೆ ನೀ ನಮ್ಮ ಸಾಕಲಾರದೆ ಹೋದೆಯಾ
ಕಾಕು ದೈವದ ಭಜನೆ ನಮಗಿಲ್ಲ ನಿನ್ನಯ ಜೋಕೆ ಪಾದವ ನಂಬಿದೆ
ಆಕಾಶ ನುಂಗಿತೇನೊ ಶಿವಶಿವಾ ಭೂಕಾಂತೆ ಅಳಿಯಿತೇನೊ
ಕೋಕಿಲೆ ಕೊಳರ್ವಕ್ಕಿ ಅಳಿಯಂಚೆ ನವಿಲೆಂದು ಶೋಕಮಾಡಿಯೆ ಸುಯ್ವರು ॥ ೮ ॥

ನಮ್ಮ ಬಳಲಿಕೆಗಳೆಲ್ಲ ಶಿವಶಿವಾ ನಿಮ್ಮ ಬಂಧುಬಳಕಗೆ ತಾಗಲಿ
ಬೊಮ್ಮ ಹರಿರುದ್ರಾದಿ ಸಕಲ ಮುನಿಗಳು ನಿಮ್ಮ ನಂಬದೆ ಬಯಲಾಗಲಿ
ಇಮ್ಮಡಿಯ ದುಃಖ ನಿಮ್ಮ ಕೈಮೈಗೆ ಗಮ್ಮನೆ ಹಾವಾಗಲಿ
ನಮ್ಮ ಶಾಪದಿ ನೀವು ನಿರ್ವಯಲ ಬೆರೆಯೆಂದು ದುಮ್ಮಾನ ದುಃಖದೊಳಗೆ ॥ ೯ ॥

ಸಾರಿದಳು ಹಲ್ಲ ಹಿಡಿದು ಶಿವ ನಿಮ್ಮ ದಾರಿಗಳು ಬೇಡವೆಂದು
ಗೌರಿಯಲಿ ತಪ್ಪಿಲ್ಲ ಎನ್ನ ಪೂರ್ವಾಜಿತದ ಘೋರಪಾಪದ ಫಲವಿದು
ಹಾರಿಹೋಗುವ ಪಕ್ಷಿಯ ಶಿವಶಿವಾ ಮೀರಿ ಜಡೆಯೊಳು ಹುದಿಗಿದೆ
ಮಾರಿ ಮಸಣೆಗೆ ನನ್ನ ಸೇರಿಸಿದೆ ಶಿವನೆಂದು ನೀರ ಸುರಿವುತ ಕಣ್ಣಲಿ ॥ ೧೦ ॥

ಜಗಳ ಕತನಗಳ ಶಿವ ಕೇಳಿ ಮುಗುಳು ನಗೆಗಳ ನಗುತಲಿ
ಅಗಜೆ ಗಂಗೆಯನೀಗ ಕೂಡಿಸುವೆನೆನುತಲಿ ಗಗನ ಹೂಮಗಳೆಗರೆಸುತ
ತೆಗೆದಪ್ಪಿ ಮುಂಡಾಡುತಾ ಗಂಗೆಯ ಒಗುವ ಕಣ್ಣಿರನೊರಸಿ
ಮೃಗಮದಗಂಧಿ ಮುಕ್ತಾಂಗನೆ ನೀನೆನಲು ಮುಗಿಯೆ ಐದನೇ ಸಂಧಿಯು ॥ ೧೧ ॥

**ವಚನ :**

ಹೆಣ್ಣು ನೊಂದು ದುಃಖಿಸಿದರೆ ಗುರುರಾಯ । ಗಂಗೆ
ಕಣ್ಣೀರ ತೊಡೆದ ಕೇಳು ಶಿವನು ಗುರುರಾಯ

ಹಣ್ಣು ಹಾಲು ಬೆರಸಿದಂತೆ ಗುರುರಾಯ । ಮುಂದೆ
ತಣ್ಣಗವರನಿರಿಸಿದಾನು ಗುರುರಾಯ ॥ ೧ ॥

ಗೌರಿಗಂಗೆ ಸಂವಾದಗಳ ಗುರುರಾಯ । ನಮ್ಮ
ಮಾರಹರನು ಕೇಳಿ ನಗುತ ಗುರುರಾಯ
ಈರೇಳು ಜಗವು ಕೇಳಿದಲ್ಲಿ ಗುರುರಾಯ । ತರ್ಕ
ಪೂರೈಸಿದ ಸಂಧಿಗೆ ಶರಣು ಗುರುರಾಯ ॥ ೨ ॥

ಶರಣು ಶರಣು ಮರಣರಹಿತ ಗುರುರಾಯ । ಎನ್ನ
ಹರಣ ಭವದ ರೋಗವೈದ್ಯ ಗುರುರಾಯ
ಚರಸ್ಮರಣೆ ಮಾಡುವೆನು ಗುರುರಾಯ । ಮುಕ್ತಿ
ಯೆರೆದು ಸಲಹಿ ರಕ್ಷಿಪುದು ಗುರುರಾಯ ॥ ೩ ॥

ಸಂಧಿ ೫ಕ್ಕಂ ವಚನ ೫೧, ಪದನು ೧೮,
ಉಭಯಂ ೪೮೯ ಕ್ಕಂ ಮಂಗಳ ಮಹಾ ಶ್ರೀ ಶ್ರೀ



## ಗಂಗಿ ಗೌರೀ ಸಂವಾದ

### ೬

**ಕಂದ :**

ಮುಂದಣ ಕಥಾಮೃತದಿ ಇಂದುಧರ ತನ್ನ ಸತಿಯರನು
ಒಂದಾಗಿ ಕೂಡಿಸುವೆನೆನಲು ಒಲ್ಲದಿರಲು
ಮಂದಿಮಕ್ಕಳನು ಹಂಚಿಕೊಂಡೀರ್ವರು
ಕಂದ ಗಣಪತಿ ಶಾಸ್ತ್ರವ ಕೀರ್ತಿಸಿದರು

ಪದನು :

ಗಂಗೆಗೌರಮ್ಮರು ತಾವಿಬ್ಬರು ಸಂಗಾತ ಇರಲೊಲ್ಲದೆ ಬಂದಿತು
ಜಗಳವು ಕೊಂಬಂತೆ ಪರ್ವತಾ ಲಿಂಗ ತಾ ನೋಡುತಲಿರ್ದನು ॥ ಪಲ್ಲ ॥

ಮಾತ ಕೇಳದೆನ್ನೊಳು ಎಲೆ ಗಂಗೆ ಮಲೆತುಕೊಂಡಿರುವರೇನೆ
ನೀತಿ ನಿನಗಿದು ಹಿರಿಯತನಕೆ ಒಮ್ಮೆನಾ ತಾಳಿದೆನು ಕಾಣೆಲೆ ॥ ೧ ॥

ಬೆಟ್ಟವರ್ಧನನ ಮಗಳೆ ನಿನಗೆಷ್ಟು ರಟ್ಟೆಯತನವೇತಕೆ
ಹುಟ್ಟ ಹಿಡಿದು ಹರುಗೋಲ ತೆಗೆವವರಲ್ಲಿ ಹುಟ್ಟಿದ ಮಗಳಲ್ಲವೆ ॥ ೨ ॥

ಆದರದಕೆ ಕುಂದೇನೇ ನೀ ನನಗೆ ಮುಂದೆ ಬಾಹ ಬನ್ನಣೆಯ ಪೇಳಿ
ಮೇದಿನೀಯೊಳಗೆಲ್ಲ ಚರಸಾಡಿದೆನೆಂಬ ಭೇದವನು ಮರದೆಯಲ್ಲೆ ॥ ೩ ॥

ಕುಲಗೇಡಿ ನಿನ್ನ ತಂದು ನಮ್ಮಯ್ಯ ನೆಲೆಗೆಟ್ಟು ತಿರಿದುಂಡನೆ
ಒಲುಮೆಯ ಮಧ್ಯದಲಿ ಬೆನ್ನಮೇಲಣ ಚರ್ಮ ನೆಲವದು ಹೋಗಿತ್ತೆಲೆ ॥ ೪ ॥

ಒಂಟೆತ್ತಿಗೆಣೆಯಿಲ್ಲದೆ ನಿನ್ನನು ತಂದು ನೆಂಟರೆಲ್ಲರು ಹಾನಿಯೆ
ಬಂಟನಾದನು ಗಂಗೆ ಬಾಣನಿಗಾಳಾದ ಉಂಟಲ್ಲವೆಂದು ಹೇಳೆ ॥ ೫ ॥

ಹಾಲು ಬೋನವನು ಸವಿದು ವೀಳ್ಯವ ಮೇಲೆ ಹಾಕುವರೇತಕೆ
ಬಾಲೆ ನೀ ಮುಂಚೆ ಬಂದರೆ ಏನು ನಾ ಹೆಚ್ಚು ಸಂಚಿಯ ಹಿಡಿಸುವೆನು ॥ ೬ ॥

ಪಂಚಾಮೃತವನು ಸವಿದು ವೀಳ್ಯವ ಹಿಂಚು ಹಾಕುವದೇತಕೆ
ಕೆಂಚಿ ನೀ ಮುಂಚೆ ಬಂದರೇನೆ ನಾ ಹಿಂಚು ಮಂಚದ ಕೆಳಗೆ ಒರಗೆ ॥ ೭ ॥

ಹೀನವ ನುಡಿದಳೆಂದು ಗೌರಮ್ಮ ಮೋನವ ತಾಳಿದಳು
ಭಾನುಕಳೆಯನು ಸೂಡಿದಭವ ಮನೆಗೆ ಬಾರಾ ಮೋಸವಿದೇಕೆಂದನು ॥ ೮ ॥

ನೀನೊಂದ ಹೆಣ್ಣ ತಂದು ಅವಳ ದೊಡ್ಡ ಪಾವನವನು ಮಾಡಿದೆ
ಏನ ಹೇಳುವೆ ಎನ್ನ ಬಂಡುಗೆಲಿದಾಳೆಂದು ತಾನು ಬಲು ಕೋಪದೊಳು ॥ ೯ ॥

ಯಾಕೆ ಕೊಂಡಾಡಿದಿರೇ ನೀವಿಬ್ಬರೂ ವಾಕುವಾದಗಳೇತಕೆ
ಸಾಕು ಜಗಳ ಗಂಗೆ ನೀ ಕಿರಿಯವಳೆಂದು ಜೋಕಿಲಿ ಇರಿಯೆಂದನು ॥ ೧೦ ॥

ತಂದಿರೆ ಬಂದಿರಲ್ಲೇ ನೀವಿಬ್ಬರು ಕೊಂಡಾಡುವದೇತಕೆ
ಇಂದುಮೊದಲು ಗಂಗೆ ಕುಂದ ನುಡಿಯಬೇಡ ಎಂದನು ಶಿವ ದೇವಿಗೆ ॥ ೧೧ ॥

ಆಕೆ ಪಾರ್ವತಿದೇವಿಯಾ ಪಾದದ ಮೇಲೆ ಈಕೆ ಗಂಗೆಯ ನೂಕಿದ
ಲೋಕದೊಡೆಯ ಪರ್ವತಮಲ್ಲ ಇಬ್ಬರನು ಏಕವ ಮಾಡಿದನು ॥ ೧೨ ॥

ಸಂಗತ್ಯ :

ಸಂಗಮೇಶ್ವರನೇ ಶ್ರೀರಂಗನಯನ ಪಾ
ದಂಗಳ ಚರಣ ಪೂಜಿಪನೆ
ಹಿಂಗದೀರೇಳು ಲೋಕಂಗಳ ಸಲಹುವ
ಗಂಗೆಯ ಕೃತಿಯ ಲಾಲಿಪುದು ॥ ೧ ॥

ಎಲ್ಲ ದೇವರ ದೇವ ಅಲ್ಲಮಪ್ರಭುರಾಯ
ಕಲ್ಯಾಣ ಪುರವರಾಧೀಶ
ಮಲ್ಲಿಕಾರ್ಜುನ ಭಕ್ತ ಬಸವ ತನ್ನಯ ಪ್ರಾಣ
ದೊಲ್ಲಭೆಯನು ಕೇಳುತಿರ್ದ ॥ ೨ ॥

ಯೋಗಿ ಹೃತ್ಕಮಲದ ಭೋಗಿ ಪ್ರಪಂಚುಗಳ
ನೀಗಿ ಕಳೆವ ನಿರ್ಮಳಾಂಗಿ
ಭಾಗೀರಥಿಯು ನೊಂದು ಶೋಕಿಸಿದರೆ ಶಿವ
ಹೇಗೆ ಸಂತೈಸಿದ ಪೇಳು ॥ ೩ ॥

ಪಂಚವದನವುಳ್ಳ ಪರಶಿವ ರೂಪ ನೀ
ಕಿಂಚಿತವ ಮಾಡಿ ರಕ್ಷಿಪ
ಅಂಚೆಗಮನ ಕೋಟಿ ಮಿಂಚಿನ ಪ್ರತಿಯುಳ್ಳ
ಕೆಂಚೆ ಗಂಗೆಯ ಸಂತೈಸಿದುದ ॥ ೪ ॥

ಭೂಪ ಬಸವ ಕೇಳುವ ಕೋಪಿಸಿ ಗೌರಮ್ಮ
ಶ್ರೀಪತಿಯೊಡನೆ ಪೇಳುತಲಿ
ಚಾಪಲಾಕ್ಷಿಯ ಇಂತು ಶೋಕಗಳನು ಕಂಡು
ಗೋಪತಿ ಶಿವ ನಸುನಗುತ ॥ ೫ ॥



ಅತ್ತು ದುಃಖಿಸುತಿರ್ದ ಚಿತ್ರದ ಬೊಂಬೆಯ
ನೆತ್ತಿಯಿಂದಿಳುಹಿ ಮುಂಡಾಡಿ
ಮುತ್ತು ಸುರಿವ ಕಣ್ಣೀರೊರಸುತ ಮುಖ ನೋಡಿ
ಕಸ್ತೂರಿ ಮೃಗವೆ ಬಾರೆನುತ ॥ ೬ ॥

ಜಡೆಯ ಶ್ರೀಗಂಗೆಯ ತೊಡೆಯೊಳಗಿಳುಹಿಟ್ಟು
ಪಿಡಿದು ಚೆಂದುಟಿ ಚಂದ್ರಬಿಂಬಗಳ
ಬಿಡುಬಿಡು ನಿನ್ನಯ ಕಡುದುಃಖವನು ಪಾ
ಲ್ಗಡಲ ಗಂಗೆಯೆ ಭೀಮರತಿಯೆ ॥ ೭ ॥

ಸೋಕ ಮಾಡಲು ನನ್ನ ಏಕಾಂಗಿ ಸ್ತ್ರೀಯಳೆ
ಲೋಕವು ಹತವಹುವಿನ್ನು
ಕಾಕ ಮೋರೆಯ ಗೌರಿ ನಿಕ್ಕರಿಸಲು ನಿನ್ನ
ಕೋಗಿಲೆ ಸ್ವರಕೇನು ಹಾನಿ ॥ ೮ ॥

ನೀನು ಮುನಿದರಿನ್ನು ಹಾನಿಯಹವು ಲೋಕ
ಕಾನನವುರಿದಿ ಸುಡುವವು
ಧ್ಯಾನ ಮೋನವು ಜಪತಪ ಸೀಮೆ ಕೆಟ್ಟವು
ಧ್ಯಾನವ ಕಾಣದಲಿಹರು ॥ ೯ ॥

ಅಡಗಿ ಹೋದರೆ ನೀನು ಪೊಡವಿ ಈರೇಳಕ್ಕೆ
ಬಡಿದಾಟ ಬಹಿರಂಗದಲ್ಲಿ
ಒಡಲಗಿಚ್ಚಿಗೆ ತಮ್ಮ ದೃಢಮನಗಳ ಬಿಟ್ಟು
ಕುಡಿದವರು ಹೊಲೆಯರ ನೀರ ॥ ೧೦ ॥

ಆ ಜಾತಿ ಈ ಜಾತಿ ಮೂಜಾತಿಗಳು ಎಲ್ಲ
ಮಾಜುವವೆತಿ ನಿನ್ನ ಮುಂದೆ
ಸೂಜಾತಿ ಹಾರುವ ಕುಲಹೀನ ಹೊಲೆಯರು
ಭೋಜನಗಳ ಬಯಸುವರು ॥ ೧೧ ॥

ಉಕ್ಕಿ ತುಳುಕಲು ನೀ ಉರಿವ ಕಾಮಗಳಿಂದ
ಸೊಕ್ಕುವರೆಲೆ ನಿನ್ನ ಮರೆದು
ಚೊಕ್ಕಟ ಹೊಲೆಜಾತಿವೆಣ್ಣಗಳೆಂಜಲ ತಿಂದು
ಸಿಕ್ಕುವರೆಲೆ ಯಮಪುರಕೆ ॥ ೧೨ ॥

ನಿನ್ನಿಂದ ಕುಲಚಲ ನಿನ್ನಿಂದ ಜಲಮಲ
ನಿನ್ನಿಂದ ಸಕಲ ಸಂಪದವು
ಮುನ್ನ ನೀನಿಲ್ಲದಿದ್ದರೆ ಅನ್ಯವೇನುಂಟು
ಚೆನ್ನಬಸವ ರನ್ನಗೊರಳೆ ॥ ೧೩ ॥

ಮತ್ತೆ ಕೇಳೆಲೆ ನನ್ನ ಚಿತ್ರಸಾಲೆಯ ಬೊಂಬೆ
ತೊತ್ತು ಬಲ್ಲಳೆ ನಿನ್ನ ನೆಲೆಯ
ಸತ್ತ ಪಿತರ ನೆನಸಿಕೊಂಡು ಪಾರ್ವತಿ
ಸುತ್ತಿಕೊಂಡಳು ನಿನ್ನ ಬಿಡದೆ ॥ ೧೪ ॥

ಯಾತರ ಹಿರಿಯಾಳು ಖೆಮೋತಿ ಗಿರಿಜೆ ತನ್ನ
ಸೂತಕ ಕಳೆವುದರಿಯಳು
ಪಾತಕ ಹೊಲೆಮೂಳಿ ಯಾತರನರಿಯಾದೆ
ಜಾತಿಯ ಬಗುಳಲೇನಹುದು ॥ ೧೫ ॥

ಹುಚ್ಚುನಾಯಿಗಳು ಹೊಟ್ಟೆಗೆಂದಾನೆಯ ಕಂಡು
ಅಚ್ಚುಬಿಚ್ಚೆಯ ಬೊಗುಳಿದರೆ
ಹೆಚ್ಚಿನ ಮದಕರಿ ಕಚ್ಚಿತು ತನಗೆಂದು
ರಚ್ಚೆಗಿಕ್ಕುವದೆ ಮದ್ದಾನೆ ॥ ೧೬ ॥

ಹೆಣ್ಣು ಗಂಗೆಯ ಪಿತ ಚನ್ನಬಸವ ಕೇಳು
ಕಣ್ಣು ಮೂರುಳ್ಳನ ನುಡಿಯ
ಹುಣ್ಣಿವೆ ಚಂದ್ರನ ಹುಸಿಮಾಡಿ ಗಂಗೆಯ
ಬಣ್ಣಿಸಿದನು ವಚನದಲಿ ॥ ೧೭ ॥

**ವಚನ :**

ತುಂಗಕುಚದ ಸಿಂಗಾರವೆ ಎಲೆ ಗಂಗೆ। ನನಗೆ
ಮಂಗಳಾರತಿಯ ಬೆಳಗೆ ಎಲೆ ಗಂಗೆ
ಹಿಂಗಲರಿಯೆ ನಿನ್ನದೆಂದು ಎಲೆ ಗಂಗೆ। ನನ್ನ
ಲಿಂಗ ಜಡಿಯೊಳಿಟ್ಟು ತಂದೆ ಎಲೆ ಗಂಗೆ ॥ ೧ ॥

ಶಾಪುವುಂಟೆ ನಿನಗೆ ಕೇಳು ಎಲೆ ಗಂಗೆ। ನನ್ನ
ಗೋಪತಿಯ ಶಿವನ ಮಡದಿ ಎಲೆ ಗಂಗೆ
ತಾಪವುರಿಗಣ್ಣ ಶಾಂತಿ ಎಲೆ ಗಂಗೆ। ನನ್ನ
ದೀಪ ಹೃದಯಕಮಲ ಜ್ಯೋತಿ ಎಲೆ ಗಂಗೆ ॥ ೨ ॥

ಬಂಡು ಮಾಡಿದ ನುಡಿಗಳೆಲ್ಲ ಎಲೆ ಗಂಗೆ। ನಮ್ಮ
ಕೆಂಡದೊಳಗೆ ಬಿದ್ದ ತೃಣವೆ ಎಲೆ ಗಂಗೆ
ಹಿಂಡು ದನುಜ ಜೀವ ಪ್ರಾಣಿ ಎಲೆ ಗಂಗೆ। ನನ್ನ
ದುಂಡುಮಲ್ಲಿಗೆಯ ಚೆಂಡೆ ಎಲೆ ಗಂಗೆ ॥ ೩ ॥

ಇಂದ್ರ ಕೆಟ್ಟ ಚಂದ್ರನಳಿದ ಎಲೆ ಗಂಗೆ। ಅವಳ
ಬಂಧುಬಳಗ ಬ್ರಹ್ಮ ಕೆಟ್ಟರೆಲೆ ಗಂಗೆ



ನೊಂದುಬೆಂದು ಬೊಗಳಲೇನು ಎಲೆ ಗಂಗೆ। ನಿನ್ನ
ಒಂದು ರೋಮ ತಾಕಲರಿಯವೆಲೆ ಗಂಗೆ ॥ ೪ ॥

ಶಾರದೆಯು ಕೆಟ್ಟಳಿನ್ನು ಎಲೆ ಗಂಗೆ। ಅವಳ
ಭೂರಿದೇವತೆಗಳು ಮಡಿದರೆಲೆ ಗಂಗೆ
ಪಾರುವತಿ ನೊಂದು ನುಡಿದರೆಲೆ ಗಂಗೆ। ನಿನಗೆ
ಭಾರವುಂಟೆ ಮಂತ್ರಶಕ್ತಿ ಎಲೆ ಗಂಗೆ ॥ ೫ ॥

ಕಾಮನುರಿದ ಭೀಮನಳಿದನೆಲೆ ಗಂಗೆ। ಅವಳ
ನಾಮ ದೇವತೆಗಳು ಮಡಿದರೆಲೆ ಗಂಗೆ
ಸೀಮೆ ಕೆಟ್ಟು ನುಡಿದರೇನು ಎಲೆ ಗಂಗೆ। ನನ್ನ
ಹೇಮಪುತ್ಥಳಿಯ ಬೊಂಬೆ ಎಲೆ ಗಂಗೆ ॥ ೬ ॥

ಬಿದಿಗೆಚಂದ್ರ ಕೋಟಿ ಸೂರ್ಯರೆಲೆ ಗಂಗೆ। ನಿನ್ನ
ಅಧರಕಳೆಯ ಹೋಲಲರಿಯರೆಲೆ ಗಂಗೆ
ಹದಿನೆಂಟು ಜಾತಿಜಲ್ಮಗಳು ಎಲೆ ಗಂಗೆ। ನಿನ್ನ
ಉದಕ ಮಿಂದು ಮುಕ್ತರಹನು ಎಲೆ ಗಂಗೆ ॥ ೭ ॥

**ಪದನು :**

ಕೃಷ್ಣವತಿಗಂಗೆ ಕೇಳು ಲೋಕದ ಭ್ರಷ್ಟಮನುಜನರು ಬಲ್ಲರೇ
ಕುಷ್ಟರೋಗದ ಚಂದ್ರ ಮೊದಲಾದ ಸುರರೆಲ್ಲ ಮುಟ್ಟಿಮೀಯಲು ಪಾವನ ॥ ಪಲ್ಲ ॥

ಮಿತಿಯಿಲ್ಲದಾ ರಕ್ಕಸರನು ವಿಷ್ಣು ಹತಮಾಡಿ ಸಂಹರಿಸುತ
ಅತಿ ಪಾಪದೋಷಗಳು ಆವರಿಸಿದರೆ ನಿನ್ನ ಸುತನಾಗಿ ಸ್ನಾನಗೈಯೆ
ಮತಿವಂತೆ ಗಂಗಾಮೃತೆ ನಾ ನಿನ್ನ ವ್ರತವ ಬಿಡಲಾರೆನೆಂದು
ಸುತನ ಹೆಸರಿಲಿ ಕರೆಸಿಕೊ ಎಂದು ನುಡಿದರೆ ಅತಿ ಹರುಷವನು ತಾಳದೆ ॥ ೧ ॥

ಕೃಷ್ಣದೇವರ ಹೆಸರಲಿ ಶ್ರೀಗಂಗೆ ಕೃಷ್ಣವೇಣಿಗಳಾಗುತ
ಸೃಷ್ಟಿ ಈರೇಳನು ಕೊಟ್ಟು ರಕ್ಷಿಸುವಂಥ ಕಟ್ಟಾಣಿ ಮುತ್ತೆ ನನಗೆ
ಎಷ್ಟು ಬ್ರಹ್ಮರು ಮಡಿದರೂ ರುದ್ರನ ಕಟ್ಟುರಿಯ ಹಂಗಿನವರು
ಸುಟ್ಟ ಬೂದಿಯನು ನಿನ್ನೊಳಗೆ ಬೆರಿಸಿದರೆ ಹುಟ್ಟು ಜಲ್ಮವೆ ಪಾವನ ॥ ೨ ॥

ರಾಮಾವತಾರರಿಗೆ ಹನುಮಂತ ತಾ ಮಹಾ ಬಂಟನಾಗಿ
ಗ್ರಾಮ ಲೆಂಕಾಪುರವ ಸುಟ್ಟು ಬೂಧಿಯ ಮಾಡಿ ತಾಮಸವು ತಲೆಗೇರಲು
ಹೋಮದುರಿಯನು ತಾಳದೆ ನಿನ್ನೊಳಗೆ ನೇಮ ನಿತ್ಯದಿ ಮುಳುಗಲು
ಭೀಮ ಹನುಮಂತನ ರಕ್ಷಿಸಿದ ಕಾರಣ ಭೀಮರತಿ ಗಂಗೆಯಾದೆ ॥ ೩ ॥

ಭಾಗ್ಯದಲಿ ಗರ್ವಿಸುತಲಿ ಇರಲೊಬ್ಬ ಯೋಗಿಮಣಿ ವಿಭೂತಿಗೆ
ತೂಗಿನೋಡಲು ಮತ್ತೆ ಸರಿಬಾರದಿರೆ ಕಂಡು ಆಗ ತಲ್ಲಣಗೊಳುತಲಿ
ನೀಗಿ ಕಳೆವೆನು ಪ್ರಾಣವಾ ಎಂದೆನುತ ಆಗ ನಿನ್ನೊಳು ಮುಳುಗಲು
ಭಾಗ್ಯ ಕುಬೇರನ ರಕ್ಷಿಸಿದ ಕಾರಣದಿ ಭಾಗೀರತಿ ಗಂಗೆಯಾದೆ ॥ ೪ ॥

ನನ್ನ ಜಡೆಯೊಳಗಿರುತಲಿ ಎಲೆ ಗಂಗೆ ಇನ್ನು ಚಿಂತೆಗಳೇತಕೆ
ಮುನ್ನೂರು ಅರವತ್ತು ನಾಮಗಳ ಧರಿಸಿದೆ ನಿನ್ನ ವರ್ಣಿಸುವರಳವೆ
ಮುನ್ನಿನ ಹಿರಿಯರೆಲ್ಲ ಎಲೆ ಗಂಗೆ ನಿನ್ನ ಪೂಜಿಸಿ ಮರೆದರು
ಅನ್ಯೋನ್ಯವೆಂದು ಬೊಗಳುವ ಬ್ರಹ್ಮಜಾತಿಗೆ ಇನ್ನು ದೃಷ್ಟವ ತೋರಿದೆ ॥ ೫ ॥

**ವಚನ :**

ಇರುಳು ಹಗಲು ವಿಪ್ರಜಾತಿ ಎಲೆ ಗಂಗೆ। ನಿನ್ನ
ಶರಧಿಯೊಳಗೆ ಮುಳುಗುತಿಹರು ಎಲೆ ಗಂಗೆ
ಬೆರಳನೆಣಿಸಿ ಮೂಗ ಮುಟ್ಟಿ ಎಲೆ ಗಂಗೆ। ನಿನ್ನ
ಚರಣಕಮಲ ಕಾಣಲರಿಯರೆಲೆ ಗಂಗೆ ॥ ೧ ॥

ವಾರ ತಿಥಿಯ ದಿನಗಳಲ್ಲಿ ಎಲೆ ಗಂಗೆ। ತಮ್ಮ
ನಾರಸಿಂಹ ಹರಿಗೋವಿಂದ ಎಲೆ ಗಂಗೆ
ಘೋರ ಅಶ್ವಗಜವ ಕೊಂದರೆಲೆ ಗಂಗೆ। ನಿನ್ನ
ನೀರು ಹೊಗದೆ ಜನ್ಮವಿಲ್ಲ ಎಲೆ ಗಂಗೆ ॥ ೨ ॥

ಯತಿಪಾತಕ ದಿನಗಳಲ್ಲಿ ಎಲೆ ಗಂಗೆ। ತಮ್ಮ
ಪಿತರು ಹಿತರ ಕೂಡಿಕೊಂಡು ಎಲೆ ಗಂಗೆ
ಹತವ ಮಾಡಿ ಜೀವಗಳನು ಎಲೆ ಗಂಗೆ। ನಿನ್ನ
ರತುನ ಪಾದ ಕಾಣಲರಿಯರೆಲೆ ಗಂಗೆ ॥ ೩ ॥

ಸೂರ್ಯಚಂದ್ರ ಗ್ರಹಣದಲ್ಲಿ ಎಲೆ ಗಂಗೆ। ತಮ್ಮ
ಹಾರುವರ ಕೂಡಿಕೊಂಡು ಎಲೆ ಗಂಗೆ
ನೂರು ಕರ್ಮ ಮುಳುಗಿ ಕಳೆದು ಎಲೆ ಗಂಗೆ। ನಿನ್ನ
ಮೀರಿ ನಡೆಯೆ ಜನ್ಮವಿಲ್ಲ ಎಲೆ ಗಂಗೆ ॥ ೪ ॥

ಬ್ರಹ್ಮ ವಶ್ಯ ಕರ್ಮಗಳನು ಎಲೆ ಗಂಗೆ। ನಿನ್ನ
ನಿರ್ಮಳವ ಮಾಡಿ ಕಳೆವೆ ಎಲೆ ಗಂಗೆ
ಮರ್ಮವರಿಯದೆ ನುಡಿವವರ್ಗೆ ಎಲೆ ಗಂಗೆ। ನಿನ್ನ
ಧರ್ಮಗುಣವ ಪಾಲಿಸಿನ್ನು ಎಲೆ ಗಂಗೆ ॥ ೫ ॥

ಹಾರುಜಾತಿಗಳಂತಿರಲಿ ಎಲೆ ಗಂಗೆ। ಸಮತಿ
ನಾರಿಗಿರಿಜೆ ನುಡಿದ ನುಡಿಯ ಎಲೆ ಗಂಗೆ



ತೂರಿ ಬೂದಿಗಳ ಮಾಡಿದೆವು ಎಲೆ ಗಂಗೆ। ಸೂತ್ರ
ದಾರಿ ಶಿವನು ಎಂದು ತಿಳಿಯೆ ಎಲೆ ಗಂಗೆ ॥ ೬ ॥

ತಿಳಿದು ನೋಡು ಪೂರ್ವದಲಿ ಎಲೆ ಗಂಗೆ। ನಿಮ್ಮ
ಕಳೆಯು ಒಂದೆ ಶರೀರ ಬೇರೆ ಎಲೆ ಗಂಗೆ
ಅಳಲು ಬಳಲು ನಿಮಗೆ ಉಂಟೆ ಎಲೆ ಗಂಗೆ। ನನ್ನ
ಹೊಳೆವ ಕನ್ನಡಿಯ ಬೆಳಕೆ ಎಲೆ ಗಂಗೆ ॥ ೭ ॥

ನಳಿನಮುಖಿಯ ಸಂತೈಸಿದರೆ ಗುರುರಾಯ। ಸತಿಗೆ
ತಿಳಿಯಿತಿನ್ನು ಪೂರ್ವಜ್ಞಾನ ಗುರುರಾಯ
ಇಳೆಯ ಕಪಟನಟನಾಟಕನು ಗುರುರಾಯ। ಎಂದು
ಬಳಿಕ ಶಿವನ ಸ್ತುತಿ ಮಾಡಿದಳು ಗುರುರಾಯ ॥ ೮ ॥

ಲೋಕರತ್ನ ಮಾಣಿಕವು ಎಲೆ ಗಂಗೆ। ಗಿರಿಜೆ
ಯಾಕಾರವೆ ಆದಿಶಕ್ತಿ ಎಲೆ ಗಂಗೆ
ಬೇಕು ನಿನಗೆ ಗಿರಿಜಾದೇವಿ ಎಲೆ ಗಂಗೆ। ನನ್ನ
ಏಕೋರೂಪ ತಿಳಿದು ನೋಡು ಎಲೆ ಗಂಗೆ ॥ ೯ ॥

**ಪದನು :**

ತ್ರಿಪುರಸಂಹಾರಿ ಕೇಳು ವಿಷ್ಣುವ ಕಪಟನಾಟಕನೆಂಬರು
ಕಪಿಯ ಮನುಜರು ಏನಬಲ್ಲರು ವಿಷ್ಣುವಿನ ಗುಪಿತದಿಂದಾಡಿಸುವುದ ॥ ಪಲ್ಲ ॥

ಇರುವೆ ಮೊದಲಾನೆ ಕಡೆಯು ಎಂದೆಂಬ ನಾನಾ ಜೀವನಗಳೆಲ್ಲ
ಮೀನಕೇತನಪಿತನು ರಕ್ಷಿಸಿದನೆಂಬರು ಹಾನಿ ಬಂದಿರೆ ಮಗನಿಗೆ
ಆನಂದಮೂರ್ತಿ ಕೇಳು ಮನ್ಮಥನ ನೀನೆ ರಕ್ಷಿಸಿದವನೆಂದು
ಧ್ಯಾನಿಸುತ ವೇದಶಾಸ್ತ್ರಗಳೆಲ್ಲ ಕೂಗುವವು ನೀನೆ ಸೂತ್ರಿಕನು ಎಂದು ॥ ೧ ॥

ಒದಗಿ ಕಪಟನಾಟಕಾ ಹರಿ ತನ್ನ ಉದರ ಜಲದುರ್ಗದೊಳಗೆ
ಹದಿನಾರು ಸಾವಿರ ಗೋಪಸ್ತ್ರೀಯರು ಭೋಗಪದಗಳಿನ್ನಾರಿಗಳವು
ಒದಗಿ ಕಾಲವು ತುಂಬಲು ಬೇಡನ ಶರಕೆ ಗುರಿಯಾದ ಕೃಷ್ಣ
ಬೆದರಿ ಬೊಬ್ಬೆಗೊಂಡು ಪಟ್ಟಣ ಬಯಲಾಯಿತು ಅದು ಯರ ನಟ ನಾಟಕ ॥ ೨ ॥

ಪಶುಪತಿಯೆ ಶಿವನೆ ಕೇಳು ವಿಷ್ಣುವಿನ ಎಸೆವ ನಾಟಕವೆಂಬರು
ದಶ ಅವತಾರದಲಿ ಜಲ್ಮ ಜಲ್ಮಾದಿಗಳು ಬೆಸುಗೆಯಾಡಿಸಿದರಾರು
ಮುಸುಕಿ ಹಿರಣ್ಯನ ಹೀರುತಲಿ ದೆಸೆದೆಸೆಗಳಾರ್ಭಟಿಸಲು
ಬಿಸಿಗಣ್ಣ ವೀರಭದ್ರನ ಕೊಟ್ಟು ಮರ್ದಿಸಿದ ಕುಶಲನಾಟಕವಾರದು ॥ ೩ ॥

ಮತ್ತ ಬುದ್ಧಿಗಳನಳಿದ ನರಹರಿಗೆ ತತ್ವಜ್ಞಾನವು ಸೇರಲು
ಹತ್ತಾವತಾರದಲಿ ನಿಮ್ಮ ಶ್ರೀಪಾದವನು ಭೃತ್ಯತ್ವದಲಿ ಪೂಜಿಸಿ

ಉತ್ತಮ ಚಾಂಡಾಲರು ಇಲ್ಲೆನಲು ಮತ್ತೆ ಸಾಕ್ಷಿಯ ಕಾಣದೆ
ಮರ್ತ್ಯಲೋಕದೊಳಗೆ ಶ್ರೀರಾಮಲಿಂಗವನು ಅರ್ತಿಯಲಿ ಪೂಜಿಸಿದನು ॥ ೪ ॥

ಚಿನುಮಯ ಶಿವನೆ ನಿಮ್ಮ ಲೋಕದೊಳು ನೆನೆಯದಾರಾರು ಇಲ್ಲ
ಹನುಮಂತ ಕೋಟಿಲಿಂಗವ ಭಜಿಸಿ ಪಡೆದನು ಮಯ್ಯೂರ ಪೂಜೆಗಳನು
ಮುನಿಜನಾದಿಗಳೆಲ್ಲರು ತಾ ತಮ್ಮ ಮನದ ಲಿಂಗವ ಪಡೆದರು
ನೆನಹೆಂಬ ಜವೆಯ ಜಗದೊಳು ಹುಡಿಯಾಡಿಪನೆ ನಿನಗಾರು ಸರಿಯಲ್ಲವು ॥ ೫ ॥

ಉತ್ಪತ್ಯ ಸ್ಥಿತಿಗಳೆಂಬ ಜವೆಗಳನು ಪೃಥ್ವಿಯಾಕಾಶಕೆಲ್ಲ
ಮಥನಸೂತ್ರವ ಹೂಡಿ ವಿಶ್ವನಾಟಕವೆಂಬ ಶ್ರುತಿವೇದ ಸಾರುತಿವೆ ಕೋ
ಹತವಹ ಕೋಟಿ ಜೀವ ಅಕ್ಷಣಕೆ ಸ್ಥಿತಿವಹ ಕೋಟಿ ಜೀವ
ಶಿತಕಂಠ ಶಿವನೆ ನಿನ್ನಯ ವಿಶ್ವನಾಟಕವು ಶ್ರುತಿ ಬ್ರಹ್ಮಗಳವಲ್ಲವು ॥ ೬ ॥

ಬಯಲ ರೂಪನೆ ಮಾಡುವೆ ಶಿವಶಿವ ರೂಪ ಬಯಲನೆ ಮಾಡುವೆ
ಜಯ ಜಯತ ಜಗದ ಸೂತ್ರವ ಹೂಡಿಯಾಡಿಪನೆ ಜಯತು ಜಗಭರಿತದೇವ
ಸವತಿ ಮಚ್ಚರ ಜಗಳವ ಶಿವ ನಿಮ್ಮ ಕಿವಿಯೊಳಗೆ ಲಾಲಿಸುತಲಿ
ನಯನದೃಷ್ಟಿಲಿ ನೋಡಿ ನಲಿನಲಿದು ನಗುವಂಥ ಜಯಸಂಗಮೇಶಗುರುವೆ ॥ ೭ ॥

**ಸಂಗತ್ಯ :**

ಆನೆ ಮೊದಲು ಇರುವೆ ಕಡೆಯೆಂದೆಂಬ
ನಾನಾ ಜೀವದ ಬೊಂಬೆಗಳಿಗೆ
ನೀನೆ ಜಗದ ಸೂತ್ರಧಾರಿ ಕೇಳೆಲೆ ನಮ್ಮ
ಹಾನಿ ಒಳ್ಳಿತು ನಿಮ್ಮದಲವೆ ॥ ೧ ॥

ದೇವಶಿವನೆ ನಿಮ್ಮ ಮಹಿಮೆಯ ತಿಳಿಯಲ್ಕೆ
ಗೋವಿಂದ ಅಜಸುರರಿಗರಿದು
ನಾವು ಸತಿಯರೇನ ಬಲ್ಲೆವು ಗುರು ಸರ್ವ
ಜೀವದಯಾಪಾರಿ ಬಲ್ಲ ॥ ೨ ॥

ನನ್ನ ಬಿನ್ನಪವನು ಕೇಳೆಲೆ ಪರಶಿವ
ಕನ್ಯೆ ಗಿರಿಜೆ ನನಗಿನ್ನು
ಅನ್ಯೋನ್ಯವಿಲ್ಲದೆ ಕೂಡಿಸಿದರೆ ಮತ್ತೆ
ಭಿನ್ನವಾಗಿಯೆ ಕಾಣಿಸುವದು ॥ ೩ ॥

ಏಕೋ ಶಿವನೆ ಕೇಳು ಆಕೆಯೊಡನೆ ನಾನು
ನೂಕಲಾರೆನು ಒಗತನವ
ಕಾಕು ನಿಷ್ಠುರದಿ ಸಾಕಿದ ಸುನಿಯೆಂದು
ಹಾಕುವಳೆನಗೆ ಕೂಳುಗಳ ॥ ೪ ॥



ಶಂಕರ ಪರಶಿವ ಓಂಕಾರ ರೂಪನೆ
ಡೊಂಕು ಬರಲು ಅವಳೊಡನೆ
ಕಂಕುಳ ಸೀರೆಯ ಹೊಲತಿ ನೀ ಹೋಗೆಂದು
ಜಂಕಿಸಿ ಜರಿವಳು ಎನ್ನ ॥ ೫ ॥

ಒಂದು ಕುಟುಂಬಗಳಾದರೆ ಜಗಳವು
ಬಂದಿತು ಬಾರದಲಿರದು
ಹೊಂದಿ ನಾ ನಡೆದರೆ ಹೊರಕುಲದವಳೆಂದು
ಸಂದು ಸಂದನೆ ಮುರಿಸುವಳು ॥ ೬ ॥

ಹರನೆ ಕೇಳೆಲೆ ನಮ್ಮ ಎರಡಾರ ಜಗಳದಿ
ಸರಕು ಮಾಡರು ನಿಮ್ಮ ಕಡೆಗೆ
ಹರಕುತನಗಳಿಂದ ಇವಳ ತಂದನುಯೆಂದು
ಒರಗಿಸುವಳು ನಿಮಿಷದಲ್ಲಿ ॥ ೭ ॥

ಎಚ್ಚರದೊಳು ಮನೆಯೊಳಗಣ ದ್ರವ್ಯವ
ವೆಚ್ಚಮಾಡಿ ಕೆಡಿಸುವಳು
ಕಿಚ್ಚುಗಣ್ಣನೆ ಕಿರಿನಗೆಯಲಿ ದಾರಿದ್ರ್ಯ
ನುಚ್ಚುಬೋನವೆ ಗತಿ ನಿನಗೆ ॥ ೮ ॥

ಕಾಳಗ ಕತನಗಳಿಂದಲಿ ದ್ರವ್ಯವ
ಗಾಳೀಲಿ ತೂರಿ ಚೆಲ್ಲುವಳು
ಕೂಳ ಕಾಣೆನುಯೆಂದು ಕುದಿಕುದಿಯುತ ಕೈಗೆ
ಜೋಳಿಗೆಯನು ಹಿಡಿಸುವಳು ॥ ೯ ॥

ಅಂಜಿಕೆ ಅಳುಕುಗಳಿಲ್ಲದೆ ಬದುಕನು
ಎಂಜಲಗಲಸಿ ಬಿಡುವಳು
ನಂಜುಂಡ ಶಿವ ಕೇಳು ನಗೆಯಲ್ಲ ಬೋನದ
ಗಂಜಿಯೆ ಶೋಭಿತ ನಿನಗೆ ॥ ೧೦ ॥

ಕಂಟಕತನಗಳ ಮಾಡುತ ಮನೆಯೊಳು
ನೆಂಟರಿಷ್ಟರ ತಿನಿಸುವಳು
ಗಂಟಿ ನಾಗರ ಸುತ್ತ ಸೆಳೆಕೊಂಡು ನಿನ್ನನು
ಒಂಟೆತ್ತಿಲಿ ನಿಲಿಸುವಳು ॥ ೧೧ ॥

ಕರಕರೆ ಕೂಳನು ಸಲಿಸಲು ಕೈಮ್ಯಾಗ
ಕೆರಕು ಹಿಡಿವುದೆಲೆ ನಿಮಗೆ
ಶರೀರಕೆ ಬೆಂಕಿ ಬಿಸಿನೀರನು ಕಾಣದೆ
ಹೊರಗೆ ಹೋಗುವೆ ನಿಮಿಷದಲ್ಲಿ ॥ ೧೨ ॥

ಏಸು ಒಗೆತನಗಳ ಕೆಡಿಸಿದೆ ಗಿರಿಜೆಯೊ
ಘೀಸಲಾರೆ ಒಗೆತನವ
ಬಾಸೆಪಾಲಕ ಭಾಳನೇತ್ರ ಭಾವಕಿಯಳು
ಹೇಸಿಕೆಯೊಳಡಗಿಡಬೇಡ ॥ ೧೩ ॥

ಬೇಡ ಶಿವನೆ ನಿಮ್ಮ ಬೇಡಿಕೊಂಬೆನು ಮಾತ
ನಾಡಿಸದಿರು ಅವಳೊಡನೆ
ರೂಢಿಗೀಶ್ವರ ಶಿವನೋಡಿ ಶ್ರೀನಯದಿ
ಮಾಡಿಸು ಗಗನರಮನೆಯ ॥ ೧೪ ॥

ಮುತ್ತು ಮಾನಿಕ ನವರತ್ನಗಳಿಂದ
ತೆತ್ತಿಸಿ ಮೆರೆವ ಅರಮನೆಯ
ಸುತ್ತ ಕೋಟೆಯ ಮೇಲೆ ಪುತ್ಥಳಿ ಬೊಂಬೆಯ
ಸತ್ತಿಗೆ ಸಾಲುಗಳೆಸೆಯೆ ॥ ೧೫ ॥

ವಿಪರೀತ ಅರಮನೆಯ ಅ ಪರಂಪರ ಮಾಡು
ತ್ರಿಪುರಸಂಹಾರಿ ನಾ ನಿನಗೆ
ಜಪಸ್ತೋತ್ರಗಳ ಮಾಡಿ ಕುಪಿತದಿ ಮನೆಯೊಳು
ಜಪಿಸಿಕೊಂಡಿರುವೆನು ನಿಮ್ಮ ॥ ೧೬ ॥

ಮಾರಹರನೆ ಮಂತ್ರ ಮೂರುತಿ ಕೇಳಿನ್ನು
ಯಾರ ಮನೆಯೊಳ್ ಮಕ್ಕಳಿಲ್ಲ
ನಾರಸಿಂಹನ ಎದೆದಲ್ಲಣ ಶರಭನ
ವೀರನವನ ಕೊಡಿಸೆನಗೆ ॥ ೧೭ ॥

ಹಸುಮಗ ವೀರನ ವಶಮಾಡಿ ಕೊಟ್ಟರೆ
ಸಿಸುಮಾಡಿ ಸಲಹಿಕೊಂಬೆ
ಸೊಸೆ ಭದ್ರಕಾಳಮ್ಮ ಕುಶಲದಿ ನಡೆದರೆ
ಹೆಸರು ಬಾಹುದು ಶಿವ ನಿಮಗೆ ॥ ೧೮ ॥

ಚೆನ್ನಶಿವನೆ ಕೇಳು ನಿನ್ನ ಮಗನು ಸೊಸೆಗೆ
ಹೊನ್ನಮಳೆಯ ಕರೆಸುವುದು
ಅನ್ನ ಉದಕ ಸರ್ವ ರನ್ನಮಂಚದ ಮೇಲೆ
ನಿನ್ನ ಭೋಗಕೆ ಕಡೆಯಿಲ್ಲ ॥ ೧೯ ॥

ತುಪ್ಪಬೋನವನುಂಡು ಚಂದ್ರ ಮಂಚದಮೇಲೆ
ಕರ್ಪೂರ ವೀಳ್ಯವ ಸವಿದು



ಪುಷ್ಪಶಯನ ಮೇಲೆ ಒಪ್ಪುವ ನಯನಕೆ
ಕರ್ಪೂರ ಜ್ಯೋತಿ ನಾ ನಿಮಗೆ ॥ ೨೦ ॥

ಇಬ್ಬರ ಹರೆಯದಿ ಹಬ್ಬವಾದುದು ನಿಮ್ಮ
ಉಬ್ಬು ಹೇಳುವರಾರು ಶಿವನೆ
ಕಬ್ಬುವಿಲ್ಲನ ವೈರಿ ಇಬ್ಬರ ಹರೆಯದಿ
ಹೆಬ್ಬುಲಿಯಾಗಿರಬಹುದು ॥ ೨೧ ॥

ಅವಳ ನಂಬಲಿ ಬೇಡ ಧವಳ ದೇಹವನೆಲ್ಲ
ಕವಳವೇರಿಸಿ ಕೆಡಿಸುವಳು
ಹವಳ ಮಾಣಿಕ ಮುತ್ತು ಗೌಳದ ಸರವೆಂದು
ಜವಳಿ ಹಸ್ತವು ಮುಗಿದಿರಲು ॥ ೨೨ ॥

ಮಂತ್ರಿಬಸವ ಗಂಗೆ ತಂತ್ರದ ನುಡಿಗೇಳಿ
ಚಿಂತಾಯಕ ನಸುನಗುತ
ಇಂತು ಬಯಕೆಗಳನಂತವಾಗಲಿಯೆಂದು
ಸಂತಸಗಳ ಧಾರೆಯೆರೆದು ॥ ೨೩ ॥

ಬಯಸಿ ತಂದುದಕಿನ್ನು ನಯವಾಯಿತೆನುತಲಿ
ಸವತಿಗಿಮ್ಮಡಿಯ ಮಾಡಿದನು
ಜಯಸಿರಿಲಕ್ಷ್ಮಿಯ ನುಡಿಯ ಭಾವಕೆ ಮೆಚ್ಚಿ
ಸಾಗರದೊಳಗಿದ್ದುದನು ॥ ೨೪ ॥

ನಂದಿಬಸವ ಕೇಳು ಮುಂದಾಳ ನುಡಿಗಳ
ಕಂದರಿಬ್ಬರ ಕಥೆಗಳನು
ಇಂದುಧರನ ಕೂಡೆ ಒಂದೊಂದು ಪರಿಯಲಿ
ಮುಂದೆ ಪೇಳಿದ ವಚನದಲ್ಲಿ ॥ ೨೫ ॥

ಈರೇಳು ಧರಣಿಯಾರೈದು ಸಲಹುವ
ಮಾರಾರಿ ಹರಭಕ್ತ ಜನರು
ನಾರಿಗಿರಿಜೆ ಗಂಗೆ ಸೇರಿ ಸುಖದೊಳಿರ್ದ
ಆರನೆಯ ಸಂಧಿಗೆ ಶರಣು ॥ ೨೬ ॥

ಸಂಧಿ ೪ಕ್ಕಂ ಕಂದ ೧, ವಚನ ೧೬, ಪದನು ೨೪,
ಸಂಗತ್ಯ, ೪೩, ಉಭಯಕ್ಕಂ ೫೭೩ ಕ್ಕಂ ಮಂಗಳ ಮಹಾ ಶ್ರೀ ಶ್ರೀ

## ಗಂಗಿ ಗೌರೀ ಸಂವಾದ

೭

**ವಚನ :**

ವಚನ ಮಂತ್ರಮೂರ್ತಿ ಕೇಳು ಗುರುರಾಯ । ಅಕ್ಕ
ಗಿರಿಜೆ ಮಗನ ಶಾಸ್ತ್ರಗಳನು ಗುರುರಾಯ
ಹರಿಬ್ರಹ್ಮ ಸಂವಾದಗಳ ಗುರುರಾಯ । ಸುರರಿ
ಗೊರೆದು ಪೇಳುತಿರ್ದ ಕತೆಯ ಗುರುರಾಯ ॥ ೧ ॥

ಕರ್ತ ಶಿವನೇ ಕರುಣಾನಿಧಿಯೆ ಗುರುರಾಯ । ಜ್ಞಾನ
ಚಿತ್ತವಿಟ್ಟು ಲಾಲಿಸಿನ್ನು ಗುರುರಾಯ
ಹಸ್ತಿಮುಖದ ವಿಘ್ನೇಶ್ವರನು ಗುರುರಾಯ । ಅವನ
ತತ್ವಶಾಸ್ತ್ರಗಳನು ಕೇಳು ಗುರುರಾಯ ॥ ೨ ॥

ಇರುತಲೊಂದು ದಿವಸದಲ್ಲಿ ಗುರುರಾಯ । ತಮ್ಮ
ಸುರಮುನಿಗಳ ಕೂಡಿಕೊಂಡು ಗುರುರಾಯ
ಹೊರಗೆ ಒಂದು ತೋಟದೊಳಗೆ ಗುರುರಾಯ । ಕುಳಿತು
ಕರದ ಪುಸ್ತಕಗಳ ಬಿಟ್ಟು ಗುರುರಾಯ ॥ ೩ ॥

ರಕ್ಕಸರ ಗುರುವು ಶುಕ್ರ ಗುರುರಾಯ । ತಮ್ಮ
ಅಕ್ಕರಿನ ಗುರ್ವಾಚಾರ್ಯ ಗುರುರಾಯ
ಮಿಕ್ಕಿನ ಸಕಲ ಬ್ರಹ್ಮಜಾತಿ ಗುರುರಾಯ । ಸುತ್ತ
ಕಿಕ್ಕಿರಿದು ಕುಳಿತರಾಗ ಗುರುರಾಯ ॥ ೪ ॥

ನಟ್ಟ ನಡುವೆ ವಿಘ್ನೇಶ್ವರನು ಗುರುರಾಯ । ಎಡದಿ
ಮಟ್ಟಿ ನಾಮದವರ ನೋಡು ಗುರುರಾಯ
ಉಟ್ಟ ಧೋತ್ರ ಜನ್ನಿವಾರ ಗುರುರಾಯ । ದೇವ
ಪುಟ್ಟ ಸಾಲಿಗ್ರಾಮದವರು ಗುರುರಾಯ ॥ ೫ ॥

ಹಾಸಿಗೆಗಳ ಹಾಸಿಕೊಂಡು ಗುರುರಾಯ । ತಮ್ಮ
ಆಸನಗಳ ಬಲಿದುಕೊಂಡು ಗುರುರಾಯ
ಕೇಶವ ನಾರಾಯಣರು ಗುರುರಾಯ । ತಕ್ಕ
ಭೂಸುರರು ಕುಳಿತರಲ್ಲಿ ಗುರುರಾಯ ॥ ೬ ॥



ಎಣಿಕೆಯಿಲ್ಲದ ವೈದಿಕರು ಗುರುರಾಯ । ಮತ್ತೆ
ಕುಳಿತುಕೊಂಡು ಕೇಲಿತಿಹರು ಗುರುರಾಯ
ಗಣಿತ ವೇದಶಾಸ್ತ್ರಗಳನು ಗುರುರಾಯ । ನಿಮ್ಮ
ಗಣಪನೋದಿ ಹೇಳುತಿರ್ದ ಗುರುರಾಯ ॥ ೭ ॥

ಕೇಳಿಯೆಂದು ವಿಪ್ರಜಾತಿ ಗುರುರಾಯ । ತಮ್ಮ
ತಾಳಪುಸ್ತಕಗಳ ಬಿಟ್ಟು ಗುರುರಾಯ
ಕಾಳಗಗಳ ಹರಿಬ್ರಹ್ಮ ಗುರುರಾಯ । ಅವರ
ಹಾಳುಹರಟೆ ನೋಡುತಿರ್ದ ಗುರುರಾಯ ॥ ೮ ॥

**ಶ್ಲೋಕ :**

ಸೃಷ್ಟಿಶ್ಚತುರ್ಮುಖೋ ಬ್ರಹ್ಮಾ ತತ್ಪದಂ ತು ಜನಾರ್ದನಃ ।
ಕಾರಣಂ ತು ಮಹದೇವಸ್ತರ್ಕವೇದಾ ರಥೀಯತೇ ॥ ॥ ೧ ॥

ಉತ್ಪತ್ತಿರ್ಬ್ರಹ್ಮಣಃ ಸೃಷ್ಟಿಃ ಸ್ಥಿತಿಗತೇಶ್ಚ ಶ್ರೀಹರಿಃ ।
ಲಯೋತ್ಪತ್ತಿ ಸ್ಥಿತಿಕರ್ತಾ ಶ್ರೀರುದ್ರಃ ಶೃಣು ಷಣ್ಮುಖ ॥ ॥ ೨ ॥

**ಪದನು :**

ಗುರುವರ್ಯರೆ ಕೇಳಿರಿ ನೀ ನಮ್ಮವರ ಪೌರಾಣದ ಕಥೆಗಳ
ಪರಬ್ರಹ್ಮ ಶಿವನೆ ಕರ್ತನು ಎಂದು ವೇದಗಳು ಬರೆದೋದಿ ಸಾರುತಿವೇಕೊ ॥ ಪಲ್ಲ ॥

ಆದಿ ಪರಶಿವನ ಮುಂದೆ ಹರಿಯಜರು ವಾದ ತರ್ಕವ ಮಾಡುತ
ಮೇದಿನಿಯ ಹದಿನಾಲ್ಕು ಸೃಷ್ಟಿ ಕರ್ತನುಯೆಂದು ವಾದಿಸಿದ ಹರಿಯೊಡನೆ
ಕ್ರೋಧದಿ ನಾರಾಯಣ ಎಲೆ ಬ್ರಹ್ಮ ವಾದ ಸಲ್ಲದು ನಮ್ಮೊಳು
ಆದಖಿಳ ಬ್ರಹ್ಮಾಂಡ ಸೃಷ್ಟಿ ಸ್ಥಿತಿಯೆರಡೆನಗೆ ಓದಿ ಹೇಳುವುದ್ಯಾತಕೆ ॥ ೧ ॥

ಅಂಗಜನ ಪಿತನೆ ಕೇಳು ಭರದಿಂದ ಕಂಗೆಡಿಸಿ ಪಿಡಿದು ನಿನ್ನ
ನುಂಗುತಲಿ ಎನ್ನ ಅಧೋದ್ವಾರದಲಿ ಹೊರಡಿಸುವೆ ಅಂಗಸತ್ವವನರಿಯಲೊ
ಮುಂಗಾಣದೆಲೆ ಬ್ರಹ್ಮನೆ ನೀನೆನ್ನ ಕಂಗೆಡಿಸಿ ನುಂಗುತಿರಲು
ಅಂಗುಳದ ಬ್ರಹ್ಮದ್ವಾರದಿ ನಾನು ಹೊರುಡುವೆನು ಭಂಗಗೆಡದಜ ಕೇಳೆಲೊ ॥ ೨ ॥

ಭ್ರಷ್ಟ ಕೇಳೆಲೆ ಬ್ರಹ್ಮನೇ ನಾ ನಿನ್ನ ನುಂಗಿ ವೃಷ್ಟಿಯಲ್ಲಿ ಹಾಯಲಾಪೆ
ಇಷ್ಟೊಂದು ಮಾತುಗಳು ನಿನಗೇಕೆ ಎಂದರೆ ಸಿಟ್ಟುಹತ್ತಿತು ಬ್ರಹ್ಮಗೆ
ಭ್ರಷ್ಟನೆನಬೇಡ ಹರಿಯೆ ನುಂಗಿದರೆ ವೃಷ್ಟಿಯಲಿ ನಾ ಬರುವೆನೆ
ವಿಷ್ಣುದೇವರೆ ನಿಮ್ಮ ಶ್ರೀನಾಭಿಕಮಲದ ಸೃಷ್ಟಿಯಲಿ ನಾ ಬರುವೆನು ॥ ೩ ॥

ಸರಗುರುವೆ ನೀವು ಕೇಳಿ ಇಬ್ಬರಿಗೆ ಒಡಕುತೊಡಕುಗಳಾಗುತ
ಪರಬ್ರಹ್ಮ ಶಿವನ ಪಾಲಗದೊಳಗೆ ಇಬ್ಬರು ಸರಿಬೆಸದಿ ಹೊಯ್ದಾಡಲು

ಗರಗರನೆ ಹಲ್ಲ ಮಸೆದು ವಾಲಗದಿ ಸರಿಸರಿದು ಆರ್ಭಟಿಸಲು
ಧರೆ ಶ್ರೀಕೈಲಾಸ ಗದ್ದಲಿಸಿ ನಡುಗಿದವು ಹರಿಯಜರ ಸಂವಾದಕೆ ॥ ೪ ॥

ಸೃಷ್ಟೀಗೀಶ್ವರನ ಮುಂದೆ ಹರಿಯಜರು ಜಟ್ಟಿಜಟ್ಟಿಗಳಂದದಿ
ಮುಟ್ಟಿ ಶಿರಕರಗಳಿಗೆ ಹೆಣಗಿ ಬೀಳತಲಾಗ ತಟ್ಟಿ ತೊಡರನೆ ಹಾಕುತ
ಸಿಟ್ಟು ಕೋಪಗಳು ಹುಟ್ಟಿ ಬದಿಬದಿಯ ಹೆಟ್ಟಿ ತಿವಿತಿದಾಡಲು
ಹೊಟ್ಟು ಹೊಟ್ಟುಗಳೇಕೆ ಹರಿಯಜರು ಆರ್ಭಟಿಸಿ ಜುಟ್ಟು ಜುಟ್ಟನೆ ಪಿಡಿವುತ ॥ ೫ ॥

ಮುಂದಲೆಗೆ ಮುಂದಲೆಗಳ ಪಿಡಿಪಿಡಿದು ಕೂದಲ ಸುತ್ತಿಕೊಂಡು
ಸಂದುಸಂದನೆ ತಿವಿದು ಸಂಕಟಾರ್ಭಟದಿ ಗೋವಿಂದ ಬೊಬ್ಬೆಗಳಿಕ್ಕುತ
ನೊಂದ ನೋವನೆ ನೋಡದೆ ಹರಿಯನೆ ಬಾಧಿಸಿ ತಕ್ಕೈಸುತ
ಎಂದು ಹುಟ್ಟಿದ ಕೋಪ ಹುಟ್ಟಿ ಆರ್ಭಟಿಸುತ್ತ ಬಂದು ನೆಲಕಪ್ಪಳಿದ ॥ ೬ ॥

ಬಿದ್ದು ಬೊಬ್ಬೆಗಳಿಕ್ಕುತ ಆರ್ಭಟಿಸಿ ಎದ್ದು ಕೋ ಎಂದು ಕೂಗಿ
ಎದೆಗುಂದಿ ಮೇಲೆ ತಿವಿದರೆ ಗದ್ದಲಿಸಿ ಭೂಮಿ ನಡುಗೆ
ಇದ್ದಲಿಯ ವರ್ಣದವನೆ ನಾ ನಿನ್ನ ಸದ್ದು ಮಾಡಲಿ ಗೊಡುವೆನೆ
ವಿದ್ಯೆಗಳ ನೋಡೆಂದು ವೀರಬೊಬ್ಬೆಗಳಿಂದ ಮುಕ್ಕುಂದಗದ್ದಲಿಸಿ ಆರ್ಭಟಿಸುತ ॥ ೭ ॥

ಮತ್ತೆ ಸಿಡಿಲೆರಗಿದಂತೆ ಆರ್ಭಟಿಸಿ ಎತ್ತಿ ನುಂಗಿದ ಹರಿಯನು
ನೆತ್ತಿಗೇರಲಿಗೊಡದೆ ಸತ್ವಸಾಹಸದಿಂದ ಒತ್ತಿ ತೀವ್ರದಿ ಕೆಡಹಿದ
ಸುತ್ತಿದ್ದ ಜನಗಳೆಲ್ಲ ಹರಿಮಾತು ವ್ಯರ್ಥವಾಯಿತು ಎನುತಲಿ
ಸತ್ಯಋಷಿಗಳು ಎಲ್ಲ ಸಾಕ್ಷಿ ಸಮರಸದಿಂದ ಮತ್ತೆ ಪ್ರತಿ ಹೆಸರಿಡುತಲಿ ॥ ೮ ॥

ಮದನಹರ ಶಿವನ ಸುರರೆಲ್ಲ ಅಧಿಕ ಸಂಭ್ರಮಗಳಿಂದ
ಅಧೋದ್ವಾರದಲಿ ಬಂದ ನಾರಾಯಣಗೆ ಅಧೋಕ್ಷನೆಂಬ ಹೆಸರಿಟ್ಟರು
ನದಿಗಳಾರ್ಭಟಿಸುವಂತೆ ನರಹರಿಗೆ ಒದಗಿತು ಕೋಪಟೋಪ
ಹುದುಗಲೇತಕೆ ಇವನ ಸದರ ಮಾಡುವೆನೆಂದ ಗದಗದಿಸಿ ಆರ್ಭಟಿಸುತ ॥ ೯ ॥

ನೊಂಕಿ ಆರ್ಭಟಿಸಿ ಪಿಡಿದು ನರಹರಿಯು ನೀಕರಿಸಿ ಅವಚಿಕೊಂಡು
ಆಕಾಶಗಳು ಬಾಯ ತೆರೆವಂತೆ ಆರ್ಭಟಿಸಿ ಸೋಂಕಿಸೋಂಕದೆ ನುಂಗಿದ
ಸೂಕರನ ಸತ್ವದಿಂದ ನರಹರಿಯು ನೂಕಿಕಧೋದ್ವಾರಕೆ ಒತ್ತಲು
ಏಕೋದೇವನ ಧ್ಯಾನದೊಳು ಸತ್ವಗಳ ಗೆಲಿದು ಜೋಕೆ ಕಮಲದಿ ಜನಿಸಿದ ॥ ೧೦ ॥

ಪರಶಿವನ ಒಡ್ಡೋಲಗ ಬೆರಗಾಗಿ ಕರವ ಮುಗಿದು ಗೋಳಿಡುತಲಿ
ಹರಹರ ಎನುತಲಿ ಬ್ರಹ್ಮದೇವರಿಗಾಗ ಸುರರು ಪ್ರತಿ ಹೆಸರಿಡುತಲಿ
ಹರಿಯ ನಾಭಿಯ ಕಮಲದಿ ಜನಿಸಿದನು ಸರಿಯಹರಿಲ್ಲವೆನುತ
ಸರಸಿಜೋದ್ಭವನೆಂಬ ನಾಮಗಳನಿಡುತಲಿ ಕರೆಕರೆದು ಮುಂಡಾಡುತ ॥ ೧೧ ॥



ಸಭೆಯ ಜನರೆಲ್ಲ ಕೂಡಿ ಹರಿಯಜರಿಬ್ಬರನು ಕರೆದು ತಂದು
ಕಬ್ಬುವಿಲ್ಲನ ವೈರಿಪಾದದೊಳು ಕೆಡಿಸಿದರು ಮಬ್ಬುಹರಿಯಿತು ಜ್ಞಾನಕೆ
ಉಬ್ಬಿ ಪರಶಿವನ ನೋಡಿ ಹರಿಯಜರು ಗರ್ಭಗಳನೀಡಾಡುತ
ಇಬ್ಬರನು ಆಡಿಸುವ ಪರಶಿವನು ನೀನೆಂದು ಶಬ್ದದಲಿ ಕೊಂಡಾಡಲು ॥ ೧೨ ॥

ಮುಗುಳುನಗೆಗಳ ನಗುತಲಿ ಪರಶಿವನು ಜಗದೊಳಗೆ ಚೋದ್ಯವಾದ
ಒಗುಮಿಗೆಯ ಪದವ ಕೊಟ್ಟನು ತನ್ನ ಶ್ರೀಹರಿಗೆ ಜಗದ ಪಿತ ಬ್ರಹ್ಮನೆಂದು
ಹಗಲೆ ಜಾಗ್ರತ ಪದವನು ಪರಶಿವನು ಮಿಗಿಲಾಗಿ ತೋರಿಸಿದನು
ಹಗಲಿರುಳೆ ಜಾಗ್ರ ಸ್ವಪ್ನದ ಪದವನೊಳಕೊಂಡ ನಿಗಮಗೋಚರನೆಸೆದನು ॥ ೧೩ ॥

ರಕ್ಕಸರ ಗುರುವೆ ಕೇಳು ನರಹರಿಯು ಹೊಕ್ಕು ಜನನವ ಮಾಜುತ
ಹೊಕ್ಕುಳದ ನಾಭಿಯಲಿ ಬ್ರಹ್ಮ ಜನಿಸಿದನೆಂದು ಒಕ್ಕಣಿಸುವರು ವೇದದಿ
ಮುಕ್ಕಣ್ಣ ಪರಶಿವನನು ಬ್ರಹ್ಮನು ಅಕ್ಕರದ ಮಗನೆನುತಲಿ
ಮುಕ್ಕುಂದ ನರಹರಿಗ ಮೊಮ್ಮಗನು ಎನುತಲಿ ಸೊಕ್ಕಿಕೆಡದಿರೆ ಕೆಲಬರು ॥ ೧೪ ॥

ವೇದವೇದಾದಿಗಳು ಎಲ್ಲ ಪೂರ್ವದ ಹಾದಿಗಳ ತಪ್ಪಿ ನಡೆದು
ವೇದವ್ಯಾಸ ತನ್ನ ತೋಳಳಿದು ವ್ರತಕೆಟ್ಟು ಮಾಧವನು ಘನವೆನುತಲಿ
ಆದಿ ಪರಶಿವನ ಮರೆದು ನರಕಕ್ಕೆ ಹೋದರಗಣಿತ ಕೋಟಿಯು
ಮಾಧವನ ವಂಶದಲಿ ನೀವೆಲ್ಲ ಕೇಳಿರೆ ವೇದಶಾಸ್ತ್ರದಲಿ ತಿಳಿದು ॥ ೧೫ ॥

ಗಂಗಾಧರ ಶಿವನೆ ಕೇಳು ಗಣಪತಿಯ ಶೃಂಗಾರ ಪೌರಾಣದ
ಮಂಗಳಾತ್ಮಕ ನಿಮ್ಮ ಮಹಿಮೆಗಳ ಕೇಳಿ ಹಿಂಗಿತೇಳೇಳು ಜಲ್ಮ
ಸಂಗಡದ ವಿಪ್ರಜಾತಿಯೆಂದು ಸಾಷ್ಟಾಂಗವೆರಗಿ ಕೆಡಹಿದರು
ಅಂಗಭವಗಳನಳಿದು ಆತ್ಮಶುದ್ಧಿಗಳಿಂದ ಲಿಂಗಧ್ಯಾನದಿ ಕೇಳುತ ॥ ೧೬ ॥

ಆನೆಮುಖ ಗಣಪನೆ ನೀ ನಮಗೆ ಜ್ಞಾನಶಾಸ್ತ್ರವ ಪೇಳಿದೆ
ಏನೆಂದು ಹೇಳುವೆವು ನಿಮ್ಮ ಘನಮಹಿಮೆಯನು ಸ್ವಾನುಭವದ ಹಿರಿಯರೆ
ದಾನಗುಣನಿಧಿಯೆ ಕೇಳು ವ್ಯಾಸನು ಜ್ಞಾನಶಾಸ್ತ್ರದಿ ಬಲ್ಲಿದ
ಏನು ಕಾರಣ ಹರಿಯು ಘನವೆಂದು ಕೆಟ್ಟನು ನೀ ನಮಗೆ ಪೇಳು ಗುರುವೆ ॥ ೧೭ ॥

ದೋಷಿ ಬ್ರಾಹ್ಮಣರೆ ಕೇಳಿ ವ್ಯಾಸರಿಗೆ ದೋಷ ದುರ್ಗುಣ ಸೇರಿತು
ಭಾಷೆ ಪಲ್ಲಟವಾಗಿ ಬಗುಳಿದನು ಧರೆಯೊಳಗೆ ದೂಷಕನ ಕಥೆಯ ಕೇಳಿ
ಕಾಶಿಯ ಸ್ಥಲದಲೊಬ್ಬ ಶಿವಮುನಿಯು ಈಶ್ವರನ ಪೂಜೆ ಮಾಡಿ
ಹಾಸ್ಯಾರ್ಥಗಳ ಮಾಡಿ ಶೂದ್ರಜಾತಿಗಳಿಂದು ದೂಷಿಸಿದ ಶಿವಶರಣರ ॥ ೧೮ ॥

ಸಮಗಾರ ಹೊಲೆಯ ಮಾದಿಗರು ತಮ್ಮ ಶರಣರು ಎಂದೆನುತಲಿ
ಉಮಾಪತಿ ಶಿವನ ಪೂಜೆಯ ಮಾಡಿ ಮೆರೆವಿರಿ ನಿಮ್ಮ ದೈವದ ಘನವ

ನೆಮ್ಮಿ ಕೇಳಿರೇ ಮುನಿಗಳೆ ಆ ಹರಿಯ ಮೊಮ್ಮಗನು ನಿಮ್ಮ ದೈವ
ಇಮ್ಮಡಿಯ ಹದಿನಾಲ್ಕು ಭುವನನಟಕನೆಂಬ ನಮ್ಮ ಹರಿಗೆಣೆಯದಾರು ॥ ೧೯ ॥

ಬಾಲಮುನಿ ಶೂದ್ರಜಾತಿ ಬಿಡುಬಿಡು ಶೂಲಿದೈವದ ಪೂಜೆಯ
ಮೂಲ ನಾರಾಯಣನ ನಾ ನಿಮಗೆ ಮೇಲು ಪದಗಳ ಕೊಡಿಸುವೆ
ಶೀಲವಂತರುಗಳು ಎಂದು ಶೂದ್ರರು ನೂಲ ಹರವಿಗೆ ಸುತ್ತುತ
ನಾಲಿಗೆಯಲಿ ನಂಜಿ ನೊಡ್ವರು ಪ್ರಸಾದಗಳ ಬಿಡುಬಿಡು ಹೊಲೆ ನಡತೆಯ ॥ ೨೦ ॥

ಇಂತು ನಿಂದಿಸಲು ಕೇಳಿ ಶಿವಮುನಿ ಆನಂತ ಕೋಪವ ತಾಳುತ
ತಂತಿ ಕರುಳನೆ ಮಾಡಿ ಬಾರಿಸುವೆ ನಾನೆಂದು ದಂತಿ ಮದವೇರಿದಂತೆ
ಮುಂತೆ ಕೇಲೆಲೊ ಬೇಗನೆ ಪ್ರಸಾದವನು ಇಂತು ನಿಂದಿಸಲು ಒಬ್ಬ
ಅಂತು ಹೊಲೆಯರ ಮನೆಯ ಹಂದ್ಯಾಗಿ ಜನಿಸಿದನು ಅಂತವನ ಕೇಳಿ ಮರೆದೆ ॥ ೨೧ ॥

ಮರೆದ ಮಾನವ ಕೇಳೆಲೊ ಶಿವನಲಿ ದುರುಳ ಆಚಾರ್ಯನೊಬ್ಬ
ನರಜಲ್ಮ ಜಂಗಮದ ತೀರ್ಥಪ್ರಸಾದವನು ಪರಮಲಿಂಗಕೆ ಕೊಡುವರೆ
ಕರದಿ ಕಿವಿಗಳ ಮುಚ್ಚುತ ಶಿವ ನೊಂದು ಪರವಾದಿ ದೂಪಕ ನೀ
ವರಹಜಲ್ಮದಿ ನರಕವನು ಭಕ್ಷಿಸೆಂದು ಹರನು ಶಾಪವ ಕೊಟ್ಟನು ॥ ೨೨ ॥

**ಶ್ಲೋಕ :**

ಪ್ರಸಾದ ನಿಂದಕಃ ಸೂತ್ರಿಕಃ ಮರ್ತ್ಯಲೋಕಂ ಗಮಿಷ್ಯತಿ
ಜನ್ಮನಾ ಸೂಕರೋ ಭೂತ್ವಾ ಜಾಯತೇ ಹಿ ನ ಸಂಶಯಃ ॥ ೧ ॥

ವಿಶಾಪಂ ಕುರು ಮೇ ಸ್ವಾಮಿನ್ ಮದ್ರೂಪಂ ಚ ಮಮ ಪ್ರಭೋ
ಭಕ್ತಸ್ವಾತ್ಮಸ್ವರೂಪಾಯ ನಮಸ್ತೇ ಭಕ್ತದೇಹಿನೇ ॥ ೨ ॥

ಅನ್ಯೋನ್ಯ ಸುವಿಚಾರಸ್ತು ಚರೋಚ್ಛಿಷ್ಟಾನ್ನಸೇವನಾತ್
ಕ್ಷಯಂತೇ ಕ್ರೋಡ ಜನ್ಮಾನಿ ತಥ್ಯಂ ತೇ ಶೈವ ಸೂತ್ರಿಕ ॥ ೩ ॥

ಲಿಂಗ ಜಂಗಮ ತೀರ್ಥಾನಾಂ ಪ್ರಸಾದ ಭಸ್ಮದೂಷಕಃ
ಕಲ್ಪಾಂತನರಕಂ ಯಾತಿ ಯಾವಚ್ಚಂದ್ರದಿವಾಕರೌ ॥ ೪ ॥

**ಪದನು :**

ಪಾದತೀರ್ಥವ ನಿಂದಿಸಿ ಜಗದೊಳಗೆ ಹೋದರಣಿತ ಕೋಟಿಯು
ಬಾಧೆ ಯಮಧರ್ಮನ ಕೊಂಡದೊಳಗುರುಳಿದರು ಈ ವಿಧಿಯು ನಿಮಗೆ ಬಿಡದು
ಮಾದಿಗರ ನಡತೆಯೆಂದು ನೀ ನಮ್ಮ ಶೂದ್ರರೆಂದೆನ್ನಬಹುದೆ
ವೇದವ್ಯಾಸನೆ ಕೇಳು ನೀನಾವ ಕುಲದವನು ವಾದಿಕಬ್ಬೇರ ಮರೆದೆಯ ॥ ೧ ॥

ವಶಿಷ್ಠನಾವ ಜಾತಿ ವರ್ಣಿಸಲು ಕಾಸ್ಯಪನಾವ ಕುಲವು
ಹುಸಿಯ ನುಡಿಯಲಿ ಬೇಡ ಕೌಟಿಲ್ಯನಾಯಿದ ವಿಶ್ವಮಿತ್ರನು ಆರೆಲೊ



ಉಸುರಿ ಹೇಳುಲು ಗೌತುಮ ಜಗದೊಳಗೆ ತಸ್ಕರನಾವ ಕುಲದ ಜಾತಿ
ಹೆಸರ ಹೇಳಲು ಬಾರದ ಅಜಮಿಳಋಷಿಯು ಕಸಮಳೆಯ ಮಗ ನಾರದ ॥ ೨ ॥

ಅರನೊಳ್ಳಿದರೆಂಬಿರಿ ಎಲೆ ವ್ಯಾಸ ಭಾರದ್ವಜ ಬಡಗಿ ಮಗನು
ನೀರಪ್ರಳಯಕೆ ಒಂದು ರೋಮ ಉರುಳಲು ಕಂಚಗಾರರ ಮಗ ಕೇಳೆಲೊ
ತೋರಿಹೇಳಲು ಬಾರದು ಕೌಶಿಕನು ದೂರ್ವಾಸನಾರು ಪೇಳು
ಮೀರಿದ ದಧೀಚಿಮುನಿಯಿಂದಲಿ ಹುಟ್ಟಿದ ಹಾರುವ ಕುಲವಾವುದು ॥ ೩ ॥

ಜಲನದಿಯ ಮೂಲಗಳನು ಮುನಿವರ್ಗ ನೆಲೆಯ ಹೇಳುವರೆಯೆಂದು
ಹಲವು ಕೋಪವ ತಾಳಿ ಉರಿದೆದ್ದು ಬರುತಿಹಿರಿ ಸಲುವುದೇ ನಿಮಗೆ ನಡತೆ
ಎಲೆ ವೇದವ್ಯಾಸ ಕೇಳು ನೀನೆಮ್ಮ ಮಲಹರ ಶಿವಶರಣರ
ಹೊಲೆಯ ಮಾದಿಗ ಶೂದ್ರಜಾತಿಗಳು ನೀವೆಂದು ಕುಲವ ಹೀನಿಸಿ ನುಡಿವರೆ ॥ ೪ ॥

ಮನುಜ ಕೇಳೆಲೆ ವ್ಯಾಸನು ಚಿತ್ತದಲಿ ಮುನಿಜನ ಶಿವಶರಣ
ಮನವನೊಬ್ಬುಳಿ ಮಾಡಿ ಶಿವನ ಶ್ರೀಪಾದವನು ಘನವರಿದು ಭಜಿಸುತಿರಲು
ಹನಿಮಳೆ ಹಳ್ಳಕೊಳ್ಳ ನೀರುಗಳು ಘನನದಿಯ ಬೆರೆಸಿದಂತೆ
ತನುಮನವನಿತ್ತು ಶಿವನೊಳಗೈಕ್ಯವಾದರು ಬಿನುಗು ಕೇಳೆಲೊ ವ್ಯಾಸನೆ ॥ ೫ ॥

ಮಂದಮತಿ ಮನುಜ ಕೇಳು ನಿನ್ನಯ ಚಂದ ನಡತೆಯ ಸುದ್ದಿಯ
ಸಂಧ್ಯಾನ ಮಂತ್ರಗಳ ಜಪಸ್ತೋತ್ರಗಳ ಮಾಡಿ ಮಿಂದು ಮಡಿಗಳನುಡತಲಿ
ಬಂದು ಕುಳಿತೆಡೆಯ ಮುಂದೆ ಕೃಷ್ಣಗೋವಿಂದಗರ್ಪಣ ಮಾಡುತ
ತಿಂದು ಮಿಕ್ಕೆಂಜಲವನು ತಿಪ್ಪೆಯೊಳು ಸೇರಿದರೆ ಹಂದಿನಾಯ್ಗಳು ತಿಂಬವು ॥ ೬ ॥

ನಿತ್ಯನೇಮವನೆ ಮಾಡಿ ಪತ್ರಾವಳಿಯ ಸುತ್ತಲೆಡೆ ಬಡಿಸಿಕೊಂಡು
ಮತ್ತೆ ಶ್ರೀಹರಿಗರ್ಪಣ ಮಾಡಿದನ್ನವನು ತುತ್ತು ಕೊಳೆಂಜಲೆನುತ
ಅತ್ತಿತ್ತ ಮಾಡಿ ತಿಂದು ಮಿಕ್ಕುದನು ಎತ್ತಿ ತಿಪ್ಪೆಗೆ ಸುರುವುತ
ಕತ್ತೆನಾಯ್ಗಳು ತಿಂದು ಕಸಮಳಲ ಕಲಸುವಿರಿ ಎತ್ತಣದು ಹರಿಯರ್ಪಣ ॥ ೭ ॥

ಎಲ್ಲ ಜಾತಿಗೆ ಜಾತಿಯು ಬ್ರಾಹ್ಮಣರು ಸೊಲ್ಲು ಸುಶಬ್ದಕರು
ಬಲ್ಲವರು ಎನುತಲಿ ಚಾಂಡಾಲ ಕಾಗೆಗೆ ಹಲ್ಲುಬಾಯ್ಗಳ ತೆರೆವಿರಿ
ನಲ್ಲ ಕೂಳನೆ ಚೆಲ್ಲುತ ಅಡ್ಡಬಿದ್ದು ಗಲ್ಲಗಲ್ಲವ ಬಡಿವುತ
ಕುಲ್ಲ ಚಾಂಡಾಲರಿಗೆ ಎಲ್ಲಿಯದು ಸುಜಲ್ಮವು ಬಲ್ಲತನ ಬರಿದಾಯಿತು ॥ ೮ ॥

ಹೊನ್ನಿಗಾಸೆಯನು ಮಾಡಿ ಕಾಡೊಳಗೆ ಮುನ್ನ ಕೂಳುಗಳ ತಿಂದು
ಚೆನ್ನ ಬ್ರಾಹ್ಮಣರೆಂದು ಬೊಗಳುವ ಹೊಲೆಯರಿಗೆ ಎಲ್ಲಿಯದು ಸುಜಲ್ಮವು
ಅನ್ನವೇ ದೈವವೆಂದು ವೇದಗಳು ಮುನ್ನ ಸಾರಿದವೇತಕೊ
ಅನ್ನದಾನಿಯೆಂಬ ಶಿವ ತಾನೆ ರೂಪಾದ ಕುನ್ನಿ ಮನುಜರು ಬಲ್ಲರೇ ॥ ೯ ॥

ಹರಣ ಅವಗಡಕಾಲಕೆ ಅನ್ನಗಳು ಪರಮಪಾವನವಾದವು
ಹರಿಹರಿದು ಕಂಡಕಂಡವರ ಮನೆಬೇಡುತಲಿ ತಿರಿದರೆ ದೊರಕದಿನ್ನು
ಅರೆಕೂಳುಗಳು ಬೀಳಲು ಅದಕಿನ್ನು ಶರಣುಶರಣೆನ್ನುತಿಹರು
ನರಹರಿಯ ಕುಲಗಳನು ಬೆದಕಿ ನೋಡುವೆನೆಂದು ಹರಣ ಚೈತನ್ಯಗೈದು ॥ ೧೦ ॥

ಅನ್ನಕಾಲಗಳು ಬರಲು ಎಲೆ ವ್ಯಾಸ ಹೊನ್ನ ಇಕ್ಕಲು ಕಾಣರು
ಚೆನ್ನಯ್ಯಹರಳಯ್ಯಗಳ ಮನೆಯ ಉದಕಗಳು ಪಾನ್ಯಪಾವನವಾದವು
ಅನ್ನ ಉದಕಗಳಿಲ್ಲದೆ ಸಿರಿಯವರು ಮುನ್ನ ಉರುಳಿದರು ಕೋಟಿ
ಅನ್ನದೈವವೆ ದೈವ ಇನ್ನು ದೈವಗಳಿಲ್ಲ ಕುನ್ನಿ ಮಾನವ ಕೇಳೆಲೊ ॥ ೧೧ ॥

ನುಡಿದ ನುಡಿಗಳ ಕೇಳುತ ವ್ಯಾಸನು ಗುಡುಗುಡಿಸಿ ಆರ್ಭಟಿಸುತ
ಒಡೆಯ ಶ್ರೀಹರಿ ನಿಮ್ಮ ನಡತೆ ಹಳಿದನು ಎಂದು ಕೆಡಬಡಿದ ಶಿವ ಋಷಿಯನು
ತರಕವೇತಕೆ ಎಮ್ಮೊಳು ಎಲೆ ವ್ಯಾಸ ನರಹರಿಯ ಘನವೆಂದರೆ
ಪುರಹರನ ಜರಿದು ಕರಗಳನೆತ್ತಿ ಪೊಗಳಿದರೆ ನರಹರಿಯ ಪೂಜಿಸುವೆವು
ಒರೆದ ನುಡಿಯನು ಕೇಳುತ ವ್ಯಾಸನು ಪುರಹರನ ಜರಿದು ಜರಿದು
ನರಹರಿಯು ಈರೇಳು ಭುವನದೊಡೆಯನು ಎಂದು ಕರವೆತ್ತಿ ಬೊಬ್ಬಿರಿದನು ॥ ೧೩ ॥

ಮಂಡಲವು ಬೆರಗಾಗುತ ಕೇಳಿ ಭೂಮಂಡಲವು ಕೋಪಗೈಯ್ಯೆ
ದಂಡನಾಯಕ ಬಸವ ವಿಶ್ವಮಾಯದಿ ಬಂದು ಖಂಡಿಸಿದ ಕರತೋಳ್ಗಳ
ರುಂಡ ಬೀಳಲು ನೆಲದೊಳು ಬಸವಣ್ಣ ತೋಳ್ಕೊಂಡೊಯ್ದು ತನ್ನ ಧ್ವಜಕೆ
ಅಂಡಿಯಲಿ ಇದ್ದಂಥ ಮುನಿಜನಾದಿಗಳೆಲ್ಲ ಕೊಂಡಾಡಿದರು ವೃಷಭನ ॥ ೧೪ ॥

ಶರಣುಶರಣಾರ್ಥಿ ಬಸವ ನೀ ಮುನ್ನ ಪರವಾದಿ ಎದೆದಲ್ಲಣ
ಹರುವ ಮಾಡಿದೆ ಇವನ ದೂಷಕನ ತೋಳ್ಗಳು ಮೆರೆಯಲಿ ನಿಮ್ಮಧ್ವಜದಿ
ಅರರೆ ಬಲಬಲ್ಲರೆನುತಲಿ ಮುನಿಜರು ಕರವೆತ್ತಿ ಕೊಂಡಾಡುತ
ಉರುಳಿಬಿದ್ದಂಥ ವ್ಯಾಸನ ಕಂಡು ಮುನಿಜನನಿಕರ ಕರೆಕರೆದು ಎಬ್ಬಿಸುತ ॥ ೧೫ ॥

**ವಚನ :**

ಏಳು ಏಳು ಎಚ್ಚತ್ತಿನ್ನು ಎಲೆ ವ್ಯಾಸ। ನಿನ್ನ
ತೋಳು ಹರಿದುಹೋಯಿತಿನ್ನು ಎಲೆ ವ್ಯಾಸ
ಮೂಳನಾಗಿ ನೆಲಕೆ ಬಿದ್ದೆ ಎಲೆ ವ್ಯಾಸ। ನಿನ್ನ
ಅಳೋದೈವ ಎಲ್ಲಿ ಹೋದನೆಲೆ ವ್ಯಾಸ ॥ ೧ ॥

ಎತ್ತಿ ಮೆರೆವ ತೋಳ್ಗಳೆಲ್ಲಿ ಎಲೆ ವ್ಯಾಸ। ಗಗನ
ಕತ್ತರಿಸಿ ಒಯ್ದವೇನೊ ಎಲೆ ವ್ಯಾಸ
ಮುತ್ತಿಕೊಂಡ ಮುನಿಗಳೆಲ್ಲ ಎಲೆ ವ್ಯಾಸ। ನಿನ್ನ
ಚಿತ್ತಹರಿಯ ಎತ್ತ ಹೋದನೆ ವ್ಯಾಸ ॥ ೨ ॥



ಕೊಂಡಾಡುವ ಕರಗಳನು ಎಲೆ ವ್ಯಾಸ। ಭೂ
ಮಂಡಲವು ನುಂಗಿತೇನೊ ಎಲೆ ವ್ಯಾಸ
ಮೊಂಡನಾಗಿ ನೆಲಕೆ ಬಿದ್ದೆ ಎಲೆ ವ್ಯಾಸ। ನಿನ್ನ
ಪುಂಡರೀಕನು ಆಗಲಿ ಹೋದನೆಲೆ ವ್ಯಾಸ ॥ ೩ ॥

ಮುಟ್ಟಿತೇನೊ ಮುನಿಯ ಶಾಪ ಎಲೆ ವ್ಯಾಸ। ನಿನ್ನ
ರಟ್ಟೆತೋಳು ಹರಿಯಿತೇನೊ ಎಲೆ ವ್ಯಾಸ
ಸೃಷ್ಟಿಗೊಡೆಯ ಶ್ರೀಹರಿಯು ಎಲೆ ವ್ಯಾಸ। ನಿನ್ನ
ಭ್ರಷ್ಟನೆಂದು ಬಿಟ್ಟು ಹೋದನೆಲೆ ವ್ಯಾಸ ॥ ೪ ॥

ನಿಂದಿಸಿದರೆ ಶಿವಮುನಿಗಳ ಎಲೆ ವ್ಯಾಸ। ಜಗಕೆ
ಹಂದಿಯಾಗಿ ಚರಿಸುವರೊ ಎಲೆ ವ್ಯಾಸ
ಕಂದ ನಿನ್ನ ರಟ್ಟೆ ಹರಿಯಿತೇನೊ ಎಲೆ ವ್ಯಾಸ। ನಿನ್ನ
ತಂದೆ ಹರಿಯು ಸಂದನೇನೊ ಎಲೆ ವ್ಯಾಸ ॥ ೫ ॥

ಶ್ರೀಮುದ್ರೆಗಳು ಸಾಲಿಗ್ರಾಮ ಎಲೆ ವ್ಯಾಸ। ನಿನ್ನ
ನೇಮನಿತ್ಯ ದೇವಪೂಜೆ ಎಲೆ ವ್ಯಾಸ
ಭೂಮಿಯೊಳಗೆ ಉರುಳಿತಿದೆ ಕೋ ಎಲೆ ವ್ಯಾಸ। ರಂಗ
ಧಾಮನೆಲ್ಲಿ ಅಗಲಿಹೋದನೆಲೆ ವ್ಯಾಸ ॥ ೬ ॥

ವೇದಶಾಸ್ತ್ರ ಶ್ರುತಿಪೌರಾಣ ಎಲೆ ವ್ಯಾಸ। ರಕ್ತ
ವೇದದೊಳಗೆ ಉರುಳಿತಿವೆ ಕೋ ಎಲೆ ವ್ಯಾಸ
ಓದಿ ಬರೆವ ರಟ್ಟೆ ಹರಿಯಿತೆ ಎಲೆ ವ್ಯಾಸ। ನಿಮ್ಮ
ಮಾದವೇಶನಗಲಿ ಹೋದನೆಲೆ ವ್ಯಾಸ ॥ ೭ ॥

ಉಂಬ ಉಡುವ ಹರಿಯಿತೇನೊ ಎಲೆ ವ್ಯಾಸ। ತ್ರಿ
ಯಂಬಕನ ಜರಿದರಿನ್ನು ಎಲೆ ವ್ಯಾಸ
ಡೊಂಬಮೂಳ ಶಿವನ ಮರೆದೆ ಎಲೆ ವ್ಯಾಸ। ನಿನಗೆ
ಕುಂಭಿನಿ ನರಕ ತುಪ್ಪದಿನ್ನು ಎಲೆ ವ್ಯಾಸ ॥ ೮ ॥

ಸುಸ್ತಿಬೌಳಿ ಮುಸುಕಿತೇನೊ ಎಲೆ ವ್ಯಾಸ। ನಿನ್ನ
ಪುಸ್ತಕಗಳು ಉರುಳುತಿವೆ ಕೋ ಎಲೆ ವ್ಯಾಸ
ಮಸ್ತಕವನು ಕಾಯ್ವ ಹರಿಯು ಎಲೆ ವ್ಯಾಸ। ಜಗದ
ಗಸ್ತಿ ತಿರುಗಹೋದನೇನೊ ಎಲೆ ವ್ಯಾಸ ॥ ೯ ॥

ದಾರಿಬಟ್ಟೆಯೊಳಗೆ ಬಿದ್ದ ಎಲೆ ವ್ಯಾಸ। ನಿನಗೆ
ನೀರ ಹೊಯ್ವರಿಲ್ಲ ಬಾಯೊಳೆಲೆ ವ್ಯಾಸ

ಸೋರಿ ಸುರಿವ ರಕ್ತಗಳನು ಎಲೆ ವ್ಯಾಸ। ಕಂಡು
ನಾರಾಯಣನು ಬಂದುದಿಲ್ಲ ಎಲೆ ವ್ಯಾಸ ॥ ೧೦ ॥

ಹರಣದೊಡೆಯ ಹರಿಗೋವಿಂದನೆಲೆ ವ್ಯಾಸ। ನಿನ್ನ
ಬರಡುಮಾಡಿ ಬಿಟ್ಟು ಹೋದನೆಲೆ ವ್ಯಾಸ
ಕುರುಡಮೂಳ ಶಿವನ ಜರಿದೆ ಎಲೆ ವ್ಯಾಸ। ಎಂದು
ಗರುಡನೇರಿ ಹರಿಯು ಹೋದ ಎಲೆ ವ್ಯಾಸ ॥ ೧೧ ॥

ಹಾಸ್ಯಾರ್ಥಗಳ ನುಡಿದರಿನ್ನು ಗುರುಚಾರ್ಯ। ವೇದ
ವ್ಯಾಸಪರಚಾರಿಸುತಲೆದ್ದು ಗುರುಚಾರ್ಯ
ಕೇಶವ ಶ್ರೀಕೃಷ್ಣನಿರಲು ಗುರುಚಾರ್ಯ। ನಮಗೆ
ಏಸೊ ತೋಳ್ಗಿವನೆನುತ ಗುರುಚಾರ್ಯ ॥ ೧೨ ॥

ದೇವತೆಗಳ ಗುರುವೆ ಕೇಳು ಗುರುಚಾರ್ಯ। ಜರಿಯೆ
ಹೇವ ಹುಟ್ಟಿ ಮನದೊಳಿನ್ನು ಗುರುಚಾರ್ಯ
ತೀವಿ ಪಚಾರಿಸುತಲೆದ್ದು ಗುರುಚಾರ್ಯ। ವ್ಯಾಸ
ಗೋವಿಂದನ ಬಳಿಗೆ ನಡೆದು ಗುರುಚಾರ್ಯ ॥ ೧೩ ॥

ನಡೆದು ಹೊಕ್ಕು ವೈಕುಂಠವನು ಗುರುಚಾರ್ಯ। ಕೃಷ್ಣ
ನಡಿಯ ಶ್ರೀಪಾದಗಳಿಗೆರಗಿ ಗುರುಚಾರ್ಯ
ಒಡೆಯ ನಿಮ್ಮ ನಂಬಿ ಪೂಗಳ್ವೆ ಗುರುಚಾರ್ಯ। ಎಂದು
ಕಡಿದ ರಟ್ಟೆಗಳ ತೋರಿದನು ಗುರುಚಾರ್ಯ ॥ ೧೪ ॥

ಚನ್ನಕೇಶವನ ಶ್ರೀಹರಿಯೆ ಎಲೆ ದೇವ। ಮೂಲ
ನಿನ್ನ ಸೂತ್ರವೆಂದು ಬಗೆದೆ ಎಲೆ ದೇವ
ಅನ್ಯರಿಂದ ರಟ್ಟೆ ಹರಿತೆಲೆ ದೇವ। ಹರಿಯೆ
ನನ್ನ ಕೇಡು ನಿನ್ನದಯ್ಯ ಎಲೆ ದೇವ ॥ ೧೫ ॥

ಆದಿಮೂಲ ಕಪಟನೆಂದು ಎಲೆ ದೇವ। ನಾಲ್ಕು
ವೇದ ಶಾಸ್ತ್ರದಲಿ ತಿಳಿದು ಎಲೆ ದೇವ
ವಾದಿಮುನಿಗಳಿಂದ ಶಿವನ ಎಲೆ ದೇವ। ಜರಿಯೆ
ಸೇದಿ ರಟ್ಟೆ ಹರಿಯ ಹೊಯ್ದರೆಲೆ ದೇವ ॥ ೧೬ ॥

ಗಳಿಲನೆದ್ದು ಪೇಳುತಿರಲು ಎಲೆ ದೇವ। ಕೃಷ್ಣ
ನಳಿನನಾಭ ಧ್ಯಾನಿಸುತಲಿ ಎಲೆ ದೇವ
ಕೊಳಕ ಭ್ರಷ್ಟ ಕೇಳಲೊ ನೀ ಗುರುಚಾರ್ಯ ॥ ೧೭ ॥



ಜಾಳುಮನುಜ ಕೇಳಲೊ ನೀನೆಲೆ ವ್ಯಾಸ। ನನ್ನ
ಅಳೋ ದೈವವನೇಕೆ ಹಳಿದ್ಯೊ ಎಲೆ ವ್ಯಾಸ
ಹೇಳಲೆಂದು ಕಳುಹಿಕೊಟ್ಟರೆಲೆ ವ್ಯಾಸ। ನನ್ನ
ಆಳ್ದ ಶಿವನೆ ಎನ್ನ ಕರ್ತ ಎಲೆ ವ್ಯಾಸ ॥ ೧೮ ॥

ಬಿನುಗುಮನುಜ ನರಗುರಿಯೆ ನೀ ಎಲೆ ವ್ಯಾಸ। ನನ್ನ
ತನುಮನವೆ ಶಿವನದಯ್ಯ ಎಲೆ ವ್ಯಾಸ
ಜನಕನಾಗಿ ರಕ್ಷಿಸಿದನು ಎಲೆ ವ್ಯಾಸ। ಶಿವನ
ಘನವ ಕೇಳು ಶ್ರುತಿ ಶಾಸ್ತ್ರದಲಿ ಎಲೆ ವ್ಯಾಸ ॥ ೧೯ ॥

**ಶ್ಲೋಕ :**

ದೇಹೋ ದೇವಾಲಯಃ ಪ್ರೋಕ್ತೋ ಜೀವೋ ದೇವಃ ಸದಾಶಿವಃ।
ತ್ಯಜೇದಜ್ಞಾನನಿರ್ಮಾಲ್ಯಂ ಸೋಹಂಭಾವೇನ ಪೂಜಯೇತ್ ॥ ॥ ೧ ॥

ಯಜ್ಞಕರ್ತಾ ಚತುರ್ವೇದೋ ವೇದಕರ್ತಾ ಜಗತ್ಪತೀ।
ಅಹಮೇವ ಜಗತ್ಕರ್ತಾ ಮಮ ಕರ್ತಾ ಮಹೇಶ್ವರಃ ॥ ॥ ೨ ॥

**ಪದನು :**

ಪಾಪಿ ಕೇಳಲೆ ವ್ಯಾಸನೆ ನೀ ನಮ್ಮ ಭೂಪತಿ ಶಿವನನು ಹಳಿದರೆ
ಗೋಪತಿಯ ಶಿವನೆ ಶ್ರೀಪಾದವನು ನಾ ಭಜಿಸಿ ಈಸು ಪುಣ್ಯಗಳ ಪಡೆದೆ ॥ ಪಲ್ಲ ॥

ಸಾಸಿರ ಕಮಲದಲ್ಲಿ ನಾ ಮುನ್ನ ಈಶ್ವರನ ಶ್ರೀಚರಣಕೆ
ಸೂಸಿಹೋಗಲು ಪುಷ್ಪ ನನ್ನ ಶ್ರೀನರಯದಲಿ ಲೇಸುಕುಸುಮವ ಧರಿಸಿದೆ
ಏಸು ಯುಗಗಳ ಪೂಜೆಯ ಹೇಳುವರೆ ಶೇಷನಿಗಳವಲ್ಲವು
ದೂಷಕನಾಡುತಲಿ ದುರುಳುತನದಲಿ ಹಳಿದೆ ಕೇಶವನು ನಿನಗಿಲ್ಲವು ॥ ೧ ॥

ಬೆಂಕಿ ಉರಿಗಣ್ಣ ಶಿವನ ನಾ ಮುನ್ನ ಬಿಂಕವಿಲ್ಲದೆ ಪೂಜಿಸಿ
ಶಂಕುಚಕ್ರವ ಪಡೆದು ಸರ್ವರಕ್ಕಸರನು ಶಂಕೆಯಿಲ್ಲದೆ ಗೆಲಿದೆನು
ಪಂಕಜನಾಭನನು ಪರಶಿವನ ಲೆಂಕನಾಗಿಯು ನಡೆದರೆ
ಶಂಕರನಾರಾಯಣನೆಂಬ ನಾಮವ ಕೊಟ್ಟರು ಕಂಕಿಮಾನವ ಕೇಳೆಲೊ ॥ ೨ ॥

ಗೋವ ಕೇಳಲೊ ವ್ಯಾಸನೆ ನಾ ಮುನ್ನ ರಾವಳನ ಕಥನದಿಂದ
ಜೀವಹಿಂಸೆಗಳಿಂದ ಬ್ರಹ್ಮೇತಿಗಳು ಸುತ್ತೆ ದೇವ ಪೂಜೆಯ ಮಾಡಿದೆ
ನಾವು ಹೇಳಲು ಯಾತಕೆ ಎಲೆ ವ್ಯಾಸ ಭೂವಳಯ ಬಲ್ಲದಿನ್ನು
ತಾಯಿತಂದೆಯು ಎನ್ನ ಜೀವಕರ್ತನು ಶಿವನು ನಾಯಿಮನುಜರು ಬಲ್ಲರೇ ॥ ೩ ॥

ಅನ್ಯನಾಟಕ ನನ್ನದು ಎಲೆ ವ್ಯಾಸ ನನ್ನ ನಾಟಕ ತನನದು
ಮುನ್ನ ಈರೇಳ್ಬುವನ ಜಗವ ನಾ ರಕ್ಷಿಸುವೆ ತನ್ನ ತಾ ರಕ್ಷಿಸುವನು
ನನ್ನ ಮಗ ಮನ್ಮಥನನು ಉರುಹಿದರೆ ಇನ್ನು ನಾ ರಕ್ಷಿಸಿದೆನೆ
ನಿನ್ನ ಪಾಡುಗಳೇನು ಎಲೆ ವೇದವ್ಯಾಸ ಮುನ್ನಿನ ಸ್ಥಲಕೆ ಹೋಗು || ೪ ||

ತ್ರಿಪುರದವರು ಕೆಟ್ಟರು ಎಲೆ ವ್ಯಾಸ ಅಪರಂಪರರು ಕೆಟ್ಟರು
ತಪಸುಮಾಡಿ ಶಿವನೊಳು ಸೆಣಸಿ ಕೆಟ್ಟರು ಕಪಿಮಾನವ ನಿನ್ನ ಪಾಡೇನು
ಲಿಪಿಗಳನು ಮಿರಲಳವೆ ಶಿವ ಬರೆದ ವಿಪರೀತವ ನೋಡು ನೀನು
ಜಪಸ್ತೋತ್ರಗಳ ಮಾಡು ಶಿವನು ಶ್ರೀಪಾದವನು ಕೃಪೆಮಾಡಿ ರಕ್ಷಿಸುವನು || ೫ ||

ವ್ಯಾಸ ಕೇಳೆಲೊ ಮಾನವ ನೀ ಮೊದಲಿನ ಕಾಶಿಯ ಸ್ಥಲಕೆ ಹೋಗು
ಈಶ್ವರನ ಶಿವನ ಶ್ರೀಪಾದಗಳ ಭಜಿಸಿದರೆ ಸಾವಿರ ತೋಳ್ಗಳೀವಾ
ಕೇಶವ ನಾರಾಯಣ ಶ್ರೀಹರಿಯೆ ಲೇಸುಲೇಸೆಂದೆನುತಲಿ
ಸೂಸಲೀಯದೆ ಮನವನೊಬ್ಬುಳಿಯನು ಮಾಡಿ ಕಾಶಿಯ ಸ್ಥಲಕೆ ನಡೆದ || ೬ ||

ಬಂದು ಮುನಿಗಳನು ಕಂಡು ಅಡಿಗೆರಗಿ ದ್ವಂದ್ವಪಾದಗಳ ಪಿಡಿದು
ಕಂದ ಮಾಡಿದ ತಪ್ಪ ಕಾಯಿ ಮುನಿಗಳೆಯೆಂದು ಮುಂದುರುಳಿದನು ವ್ಯಾಸನು
ಮಂದಮತಿ ಮಾಯಾಪಾಶ ತೊಡರಿದ ಸಂದೇಹಿ ಕರ್ಮಿ ನಾನು
ನಂದೀಕೇಶ್ವರ ಬಸವ ತೋಳ ಕಿತ್ತನು ಗೋವಿಂದನಾ ಕೈಲಾಗದು || ೭ ||

ನರಹರಿ ಗಿರಿಹರಿಗಳ ಕೈಗಳಲಿ ಕರತೋಳ್ಗಳನೀವುದು ನಿಮ್ಮ
ಬೆರಳ ಉಗುರೊಳಗಿರುವ ಮಣ್ಣಿನಷ್ಟಾಗದು ಬರಿಯ ಹಮ್ಮಿಲಿ ಮೆರೆವರು
ಶರಿರ ಕಪಟನಾಟಕ ಎಂದೆನುತ ಬೆರೆತು ಬೆಪ್ಪನೆ ಕೆಟ್ಟೆನು
ಹರನೇ ತ್ರಾಹಿ ಪರಶಿವ ಮುನಿಗಳೆ ನಿಮ್ಮ ಚರಣದಡಿಗಳ ಲೆಂಕನು || ೮ ||

ಕೇಳೆ ಮುನಿಗಳು ನಗುತಲಿ ಎಲೆ ವ್ಯಾಸ ಏಳೇಳು ಎಂದೆನುತಲಿ
ಬಾಳನೋಚನ ಶಿವನ ಪಾದಗಳ ಕೊಂಡಾಡೆ ತೋಳ್ಗಳ ಕೊಡುವ ನಿನಗೆ
ಹೇಳಿದರೆ ನಡೆದು ಬಂದು ಶಿವನ ಗುಡಿಯ ಗಾಳಿಮಂಟಪದಿ ನಿಂದು
ಅಳಿಯದೊಡೆಯನೆ ರಕ್ಷಿಪನೆ ತ್ರಾಹಿ ತ್ರಾಹೆಂದು ಶಿವನೇಳ್ಗೆಯ ಕೊಂಡಾಡಿದ || ೯ ||

**ವಚನ :**

ತ್ರಾಹಿ ತ್ರಾಹಿ ವಿಶ್ವನಾಥ ಗುರುರಾಯ । ಸರ್ವ
ದ್ರೋಹಿ ನಾನು ಮುಂದರಿಯದೆ ಗುರುರಾಯ
ಸಾಹಸಗಳ ಹೊಗಳಿ ಕೆಟ್ಟೆ ಗುರುರಾಯ । ವಿಷ್ಣು
ಬಾಹಿರಂಗ ಬರಿದೆ ಹೋಯಿತು ಗುರುರಾಯ || ೧ ||



ಕಾಲನಳಿದ ಕಾಲನುರಿದ ಗುರುರಾಯ । ದೊಡ್ಡ
ಮೇಲಾದವರು ಮಡಿದರಿನ್ನು ಗುರುರಾಯ
ನೂಲೆಳೆಯ ನೊಣನೋಪಾದಿ ಗುರುರಾಯ । ಕಪಟ
ನೀಲಕಂಠ ರಕ್ಷಿಸಿನ್ನು ಗುರುರಾಯ || ೨ ||

ತಪ್ಪನುಡಿದು ದಕ್ಷ ಕೆಟ್ಟ ಗುರುರಾಯ । ಬಹಳ
ಒಪ್ಪಿ ಮೆರೆವ ಹಿರಿಯರಳಿದರು ಗುರುರಾಯ
ತಪ್ಪು ತ್ರಾಹಿ ಸರ್ವದ್ರೋಹಿ ಗುರುರಾಯ । ಎನ್ನ
ಕಪ್ಪುಗೊರಳ ಶಿವನೆ ಸಲುಹೊ ಗುರುರಾಯ || ೩ ||

ಪುಂಡರೀಕಾಕ್ಷನ ಪೊಗಳೆ ಎಲೆ ದೇವ । ರಟ್ಟೆ
ತುಂಡು ಹರಿಯ ಹೊಯ್ಸಿಕೊಂಡೆ ಎಲೆ ದೇವ
ಪೊಂದನೆಂದು ಜಗವು ಕೂಗಿತೆಲೆ ದೇವ । ಎನ್ನ
ಕೆಂಡಗಣ್ಣ ಶಿವನೆ ಸಲುಹೊ ಎಲೆ ದೇವ || ೪ ||

ಪವಾಡಗಳ ಮೆರೆಯಲೆಂದು ಎಲೆ ದೇವ । ಬಸವ
ಕಯ್ಯರಟ್ಟೆ ಹರಿಯ ಹೊಯ್ಸಿದನು ಎಲೆ ದೇವ
ಮೂವರರಿಯದ ಭವ ನೀನು ಎಲೆ ದೇವ । ಜಗದ
ಕೂವಡಗಳ ಮಾಣಿಸಯ್ಯ ಎಲೆ ದೇವ || ೫ ||

ಕುಸುಮವೃಷ್ಟಿ ಸುರಿಯಿತಿನ್ನು ಗುರುಚಾರ್ಯ । ದೇವ
ಋಷಿಗಳೆಲ್ಲ ಸ್ತುತಿಗೈದರು ಗುರುಚಾರ್ಯ
ಕಸಮಾನವನ ಮಾತೇನೆಂದು ಗುರುಚಾರ್ಯ । ದೇವ
ಋಷಿಗಳೆಲ್ಲ ಬಿನ್ನೈಸಿದರು ಗುರುಚಾರ್ಯ ||೬ ||

ಹರಿಯ ಮಗನ ರಕ್ಷಿಸಿದಿರಿ ಗುರುಚಾರ್ಯ । ಬ್ರಹ್ಮ
ಗುರುವಿಸಿದರೆ ಶಿಕ್ಷಿಸಿದಿರಿ ಗುರುಚಾರ್ಯ
ಶರಣಾಗರ ರಕ್ಷಾಮಣಿಯೆ ಗುರುಚಾರ್ಯ । ನಿಮ್ಮ
ಬಿರಿದು ವೇದ ಸಾರುತಿದೆ ಕೋ ಗುರುಚಾರ್ಯ || ೭ ||

ಜಯತು ಜಯತು ವಿಶ್ವನಾಥ ಗುರುರಾಯ । ವಿಷ್ಣು
ನಯನ ಚರಣ ಪೂಜಿತನೆ ಗುರುರಾಯ
ಭಯವ ಬಿಡಿಸಿ ತೋಳ್ಗಳೆತ್ತು ಗುರುರಾಯ । ವಿಶ್ವ
ಮಯ ನಾಟಕನೆ ರಕ್ಷಿಸಿನ್ನು ಗುರುರಾಯ || ೮ ||

ವ್ಯಾಸ ಶಿವನ ಸ್ತುತಿಮಾಡಿದರೆ ಗುರುರಾಯ । ನಮ್ಮ
ಕಾಶಿಯರಸು ಕರುಣಿಸಿದನು ಗುರುರಾಯ
ಮೀಸಲಾದ ಪರಮ ಹಸ್ತ ಗುರುರಾಯ । ವೇದ
ವ್ಯಾಸಗಿತ್ತು ರಕ್ಷಿಸಿದ ಗುರುರಾಯ || ೯ ||

ನೋಡು ನೋಡು ಲೇಸಾಯ್ತಿನ್ನು ಗುರುಚಾರ್ಯ । ಚಂದ್ರ
ಮೂಡಿದಂತೆ ಪರಮ ಹಸ್ತ ಗುರುಚಾರ್ಯ
ರೂಢಿಸುತಲಿ ಶಿವನ ಹೊಗಳಿ ಗುರುಚಾರ್ಯ । ಅವಗೆ
ಓಡಿತಿನ್ನು ಭವದ ಮೃತ್ಯು ಗುರುಚಾರ್ಯ ॥ ೧೦ ॥

ಪುರದ ಕಾಶಿ ಪಟ್ಟಣವೆಲ್ಲ ಗುರುಚಾರ್ಯ । ತಮ್ಮ
ಶಿರವ ತೂಗಿ ಬೆರಗಾಗುತಲಿ ಗುರುಚಾರ್ಯ
ಸುರಿದರಿನ್ನು ಪೂಮಳೆಗಳ ಗುರುಚಾರ್ಯ । ವ್ಯಾಸ
ಪರಮಭಕ್ತನಾದನಂದು ಗುರುಚಾರ್ಯ ॥ ೧೧ ॥

ಜಳಕಗಿಳಕ ಸಂಧ್ಯಾನಗಳು ಗುರುಚಾರ್ಯ । ತನ್ನ
ಕೊಳಕನೆಲ್ಲ ಜಾಡಿಸಿದನು ಗುರುಚಾರ್ಯ
ನಳಿನನಾಭ ಮುದ್ರೆಗಿದ್ರೆಗಳನ್ನು ಗುರುಚಾರ್ಯ । ದೊಡ್ಡ
ಹೊಳೆಯ ಕೂಡಿ ಬಿಟ್ಟನಲ್ಲಿ ಗುರುಚಾರ್ಯ ॥ ೧೨ ॥

ಸಾಲಿಗ್ರಾಮ ದೇವಪೂಜೆ ಗುರುಚಾರ್ಯ । ಇದ್ದ
ವಾಲಿಕುಂತ ಪುಸ್ತಕಗಳ ಗುರುಚಾರ್ಯ
ಮೂಲನದಿಗಳೊಳಗೆ ಬಿಟ್ಟು ಆಚಾರ್ಯ । ಶಿವನ
ಲೀಲೆಪದದೊಳಾಡುತಿದ್ದ ಗುರುಚಾರ್ಯ ॥ ೧೩ ॥

ವಿಷ್ಣು ಸುತ್ತಿಯ ಪುಸ್ತಕಗಳ ಗುರುಚಾರ್ಯ । ಹರಿಯ
ಸೃಷ್ಟಿ ಸ್ತುತಿಗಳೆಂಬ ಶಾಸ್ತ್ರ ಗುರುಚಾರ್ಯ
ಸುಟ್ಟು ಬೂದಿಗಳನು ಮಾಡಿ ಗುರುಚಾರ್ಯ । ಶಿವನ
ನಿಷ್ಠೆ ಪದದೊಳಾಡುತಿರ್ದ ಗುರುಚಾರ್ಯ ॥ ೧೪ ॥

ಮಡಿಯನುಟ್ಟು ಗಿಡವ ಸುತ್ತಿ ಗುರುಚಾರ್ಯ । ಮೂಗು
ಪಿಡಿದು ಬೆರಳನೆಣಿಸುತಲಿ ಗುರುಚಾರ್ಯ
ಒಡಲು ವಿಷ್ಣುರುದ್ರಶಿಖಿಯು ಗುರುಚಾರ್ಯ । ಎಂಬ
ಜಡ ತಂತ್ರಗಳ ಜಾಡಿಸಿದನು ಗುರುಚಾರ್ಯ ॥ ೧೫ ॥

ಬೆರಳ ದಬ್ಬೆ ಕರಿಕೆಗಿರಿಕೆ ಗುರುಚಾರ್ಯ । ತಮ್ಮ
ಅರಳಿಮರದ ಬುಡಕೆ ಹಾಕಿ ಗುರುಚಾರ್ಯ
ಕರುಳನೊಟ್ಟಿ ಅನಲ ಬಿಸುಟು ಗುರುಚಾರ್ಯ । ವ್ಯಾಸ
ಮರುಳನಗೆಯ ನಗುತಲಿರ್ದ ಗುರುಚಾರ್ಯ ॥ ೧೬ ॥

ಹೇಸಿ ಮತವನೆಲ್ಲ ಸುಟ್ಟು ಗುರುಚಾರ್ಯ । ವೇದ
ವ್ಯಾಸ ಶಿವನ ಪಾದದಲ್ಲಿ ಗುರುಚಾರ್ಯ
ಭಾಸೆಪಾಲಮುನಿಗಳೊಡನೆ ಗುರುಚಾರ್ಯ । ಆತ
ಈಶ ಪದದೊಳಾಡಿದಾನು ಗುರುಚಾರ್ಯ ॥ ೧೭ ॥



ನಿಂದಿಸಿದರೆ ಕೆಟ್ಟು ಹೋಹರು ಗುರುಚಾರ್ಯ । ಮರಳಿ
ವಂದಿಸಿದರೆ ಮುಕ್ತರಹರು ಗುರುಚಾರ್ಯ
ದ್ವಂದ್ವಕರ್ಮಗಳನು ಕಳೆದು ಗುರುಚಾರ್ಯ । ತಿಳಿದು
ಮುಂದೆ ಪಾದವ ಗಳಿಸಿಕೊಳ್ಳಿ ಗುರುಚಾರ್ಯ ॥ ೧೮ ॥

ಹಣೆಯ ಕಣ್ಣ ಶಿವನೆ ಗುರುಚಾರ್ಯ । ಪೂರ್ವ
ಎಣಿಕೆ ಶಾಸ್ತ್ರ ಪೇಳಿದರಲೆ ಗುರುಚಾರ್ಯ
ಮಣಿದು ಹಸ್ತಗಳನು ಮುಗಿದು ಗುರುಚಾರ್ಯ । ನಿಮ್ಮ
ಗಣಪತಿಯ ಸ್ತುತಿ ಮಾಡಿದಾರು ಗುರುಚಾರ್ಯ ॥ ೧೯ ॥

ಕೆಂಡಗಣ್ಣ ಶಿವನೆ ಕೇಳು ಗುರುಚಾರ್ಯ । ಅವನ
ಉಂಡು ಊಟ ವಸ್ತಗಳನು ಗುರುಚಾರ್ಯ
ಮಂಡೆಮಣಿದು ಹಸ್ತಮುಗಿದು ಗುರುಚಾರ್ಯ । ಅವನ
ಕೊಂಡಾಡಿದರು ಕೆಲಬಲದಲ್ಲಿ ಗುರುಚಾರ್ಯ ॥ ೨೦ ॥

**ಪದನು :**

ಪಾರ್ವತಿಯ ವರಪುತ್ರನೆ ನೀ ನಮಗೆ ಪೂರ್ವದ ಕಥೆಯ ಪೇಳ್ದೆ
ಉರ್ವಿಯೊಳಾರು ನಿಮಗೆಣೆಯಿಲ್ಲದ ಗಣನಾಥ ನಿರ್ಮಾಣ ಪರಮಾತ್ಮನೆ ॥ ಪಲ್ಲ ॥

ಹುಗ್ಗಿ ಹೋಳಿಗೆ ತುಪ್ಪವು ಪರಿಪರಿಯ ವಗ್ಗರಣೆ ಕಾಯಿಪಲ್ಯೆ
ಅಗ್ಗತರದ ಹಲವು ಜೇನಸು ಪದಾರ್ಥಗಳ ನುಗ್ಗೆ ಬಾಳಕ ಸಂಡಿಗೆ
ಹಿಗ್ಗುತಲಿ ತಲೆ ಸವಿಸವಿದು ಸುಖಿಸುವುದು ನುಗ್ಗು ಮಾನವರಿಗುಂಟೆ
ಭರ್ಗೋದೇವನ ಪಾದಪೂಜಿಸಿ ಗಣನಾಥ ಸುಗ್ಗಿ ತೆರವಿಲ್ಲ ನಿಮಗೆ ॥ ೧ ॥

ಹಣ್ಣು ಸಕ್ಕರೆ ಚಿನಿಪಾಲಿನ ಬಗೆಬಗೆಯ ಎಣ್ಣೆ ಹೂರಿಗೆ ಪಾಯಸ
ಬೆಣ್ಣೆ ಕಾಸಿದ ತುಪ್ಪ ಬೆಲೆಯಿಲ್ಲದಾವುಗಳ ದೊಣ್ಣೆಯ ಮಡಗಿಕೊಂಡು
ಉಣ್ಣುತಲಿ ತಲಿ ಸವಿಸವಿದು ಸುರಿಸುತಲಿ ಮಣ್ಣು ಮಾನವರಿಗುಂಟೆ
ಕಣ್ಣು ಮೂರುಳ್ಳನ ಪೂಜಿಸಿದ ಗಣನಾಥ ಹುಣ್ಣಿವೆ ಅಮವಾಸಿ ನಿಮಗೆ ॥ ೨ ॥

ತೋಪು ಶಕಲಾತಿ ಪಟ್ಟುಪಟ್ಟಾವಳಿಯ ಮೇಲೆ ಲೇಪಿಸಿದ ಕಸ್ತೂರಿಗಳು
ಪಾಪಧನರಿಗುಂಟೆ ನಿಮ್ಮ ಶ್ರೀಪದಗಳ ನೋಂಪಿ ನೋಂತರಿಗಲ್ಲದ
ದೀಪಧೂಪವು ಗಂಟೆ ಶಂಖದಿಂದ ಶ್ರೀಪತಿಯ ಭಜಿಸಿ ಪಡೆದ
ತಾಪವಿಘ್ನಾದಿಗಳ ಕಳೆದಂಥ ಗಣನಾಥ ನೀ ಪಾಲಿಸುದೆಮ್ಮನು ॥ ೩ ॥

ಹಲವು ವ್ಯಾಪಾರ ಮಾಡಿ ಹಸುತೃಷೆಗೆ ತಲೆಯು ಪಾದಗಳು ಬಳಲಿ
ಹೊಲೆಯನಾಳಾಗಿ ದಾವತಿ ಮಾಡಿದರಿಲ್ಲ ತಲೆಯ ಹಣೆಯಲಿ ಬರೆಯದು
ಬಲುಕಾಲಗಳ ಬದುಕುವೆಯೆಂದೆನುತ ಕುಲಗಿರಿಗಳು ಕರಗಳು
ತಲೆ ನೆಲೆದೊಳಗುರುಳಿ ನಾಗಾರ್ಜುನ ಕೆಟ್ಟ ಹೊಲೆಯ ಮಾನವನಿಗಳವೆ ॥ ೪ ॥

ದೇವ ಸುರಗುರುವು ನಾನು ಬಳಲುತಲಿ ಧಾವತಿಗೊಳುತಲಿಹೆನು
ಆವ ತಾವಿಗೆ ಹೋಗಿ ಜ್ಯೋತಿ ಶಾಸ್ತ್ರವ ಪೇಳೆ ಕಾವಿಧೋತ್ರವ ಕೊಡುವರು
ಗೋವಿನಮೃತವನೀಯಲು ಹಿಡಿತುಂಬ ಶಾಂವಿ ಅಕ್ಕಯನು ತಂದು
ಹೂವಿನರಳುಗಳೆಂದು ನಾಲ್ಕು ಸುಮಗಳ ಮಾಡಿ ತಾವೆ ಸೆರಗಿಲಿ ಇಟ್ಟರು ॥ ೫ ॥

ಮದುವೆ ಮುಂಜಿಗೆ ಹೋಗದೆ ಮನೆಯೊಳಗೆ ಕುದಿಕುದಿದು ಸಾಯುತಿಹರು
ಮುದಿಯ ಹಾರುವ ನಮಗೆ ಮೂಲವಾದನು ಎಂದು ಹೊದೆವ ಅರಿವೆಯ ಕೊಡುವರು
ಉದರಲಂಪಟವು ಸುಡಲಿ ಗಣನಾಥ ಹುದುಗಲೇತಕೆ ಬಡತನ
ಎದೆ ತಲೆಯ ಬಡಿದುಕೊಂಡರೆ ಮುಂದೆ ನಮಗಿಲ್ಲ ಚದುರ ನಿಮ್ಮನು ಭಜಿಸಿದೆ ॥ ೬ ॥

ರಕ್ಕಸರ ಗುರುವು ಎಂದು ಪಾದದೊಳಗಿಕ್ಕಿ ಸಾಷ್ಟಾಂಗವೆರಗಿ
ಅಕ್ಕಟಕಟಾ ವಿಧಿಯ ಮೀರಬಾರದು ಎಂದು ಒಕ್ಕಣ್ಣ ನಾನಾದೆನು
ಲೆಕ್ಕವಿಲ್ಲದೆ ದೊರೆಗಳ ಗುರು ನಾನು ಕುಕ್ಕಿ ಹೊರಸನು ಕಾಣೆನು
ಒಕ್ಕಣಿಸಿ ಹೇಳಲೇತಕೆ ತಂದೆ ಗಣನಾಥ ರಕ್ಷಪಾಲನೆ ಜಯತು ॥ ೭ ॥

**ವಚನ :**

ಅಷ್ಟಭೋಗಿ ಶ್ರೀಗಣೇಶ ಗುರುರಾಯ। ಹಿಂದೆ
ನಷ್ಟವಾದುವೇಸು ಯುಗವು ಗುರುರಾಯ
ಎಷ್ಟು ಮಂದಿ ಅಳಿದರಿನ್ನುಜ ಗುರುರಾಯ। ನಮಗೆ
ದೃಷ್ಟ ನಿತ್ಯಪದವ ತೋರು ಗುರುರಾಯ ॥ ೧ ॥

ಗುರುಚಾರ್ಯರೆ ನೀವು ಕೇಳಿ ಎಲೆ ಮಂತ್ರಿ। ಹಿಂದೆ
ಪರಮಯುಗವು ಹೋದವೆಷ್ಟೊ ಎಲೆ ಮಂತ್ರಿ
ಒರೆದು ಪೇಳುವರಿಗಳವೆ ಎಲೆ ಮಂತ್ರಿ। ನಮ್ಮ
ಪರಮಗುರುವು ನಿತ್ಯನೊಬ್ಬನೆಲೆ ಮಂತ್ರಿ ॥ ೨ ॥

ಮುತ್ತ್ಯ ಮೂರು ತೆರೆದ ಸುರಿದು ಎಲೆ ಮಂತ್ರಿ। ನಿಮ್ಮ
ಸತ್ತ ಅಜ್ಜ ಆರು ತೆರೆದ ಎಲೆ ಮಂತ್ರಿ
ಅತ್ತಲಿಂದ ಆದ ಹಿರಿಯರೆಲೆ ಮಂತ್ರಿ। ಎಲ್ಲ
ಸತ್ತು ಹೋದರುಳಿಯಲಿಲ್ಲ ಎಲೆ ಮಂತ್ರಿ ॥ ೩ ॥

ಇಪ್ಪತ್ತೊಂದು ಯುಗದಿಂದತ್ತ ಎಲೆ ಮಂತ್ರಿ। ಒದಿ
ಮುಪ್ಪು ತಪ್ಪುಗಳನು ಕಳೆದು ಎಲೆ ಮಂತ್ರಿ
ಒಪ್ಪಿ ಮೆರೆದ ಹಿರಿಯರೆಲ್ಲ ಎಲೆ ಮಂತ್ರಿ। ಅಂದಿ
ಗಿಪ್ಪತ್ತೇಳುಕೋಟಿ ಸತ್ತರೆಲೆ ಮಂತ್ರಿ ॥ ೪ ॥



ಅಳಿವರಲ್ಲದೆ ಉಳಿವರಿಲ್ಲ ಎಲೆ ಮಂತ್ರಿ। ಅವರು
ತೊಳಲಿಬಳಲಿ ಭವದ ಕುರಿಗಳೆಲೆ ಮಂತ್ರಿ
ಪ್ರಳಯರಹಿತ ಶಿವ ತಾನೊಬ್ಬ ಎಲೆ ಮಂತ್ರಿ। ಮುಂದೆ
ತಿಳಿದು ನೋಡು ಸುಜ್ಞಾನದಲ್ಲಿ ಎಲೆ ಮಂತ್ರಿ ॥ ೫ ॥

ವಾಕುವಾದಿ ವಾಟಕರಿಗೆ ಎಲೆ ಮಂತ್ರಿ। ನಮ್ಮ
ಏಕೋಶಿವನು ಸಾಧ್ಯವಲ್ಲ ಎಲೆ ಮಂತ್ರಿ
ನಾಲ್ಕುವೇದ ಶಾಸ್ತ್ರ ಶಬ್ದ ಎಲೆ ಮಂತ್ರಿ। ನಮ್ಮ
ಪಿನಾಕಿಪಾದ ಕಂಡುದಿಲ್ಲ ಎಲೆ ಮಂತ್ರಿ ॥ ೬ ॥

ಕೂಟದವರೆ ನೀವು ಕೇಳಿ ಎಲೆ ಮಂತ್ರಿ। ಶ್ರುತಿಯ
ಪಾಟಕರ್ಗೆ ಸಾಧ್ಯವಲ್ಲ ಎಲೆ ಮಂತ್ರಿ
ಕೋಟಿಬ್ರಹ್ಮ ವಿಷ್ಣ್ವಾದಿಗಳು ಎಲೆ ಮಂತ್ರಿ। ಶಶಿ
ಜೂಟ ಶಿವನ ಕಂಡುದಿಲ್ಲ ಎಲೆ ಮಂತ್ರಿ ॥ ೭ ॥

ನಾ ದೊಡ್ಡವನು ತಾ ದೊಡ್ಡವನು ಎಲೆ ಮಂತ್ರಿ। ಎಂಬ
ವಾದಿ ಮನುಜರಳಿದರಿನ್ನು ಎಲೆ ಮಂತ್ರಿ
ಈ ದೇಹವು ಸ್ಥಿರವಲ್ಲ ಎಲೆ ಮಂತ್ರಿ। ಶಿವನ
ಪಾದಪೂಜೆ ಒಂದೇ ಸ್ಥಿರವು ಎಲೆ ಮಂತ್ರಿ ॥ ೮ ॥

ಗುರು ಸುಕ್ರಚರ್ಯರೆ ನೀನು ಎಲೆ ಮಂತ್ರಿ। ಕೇಳು
ಪರಮ ಮಂತ್ರಗಾಯತ್ರಿಯನು ಎಲೆ ಮಂತ್ರಿ
ಹರನು ಭರ್ಗೋದೇವ ಸಹಿತ ಎಲೆ ಮಂತ್ರಿ। ಎಂದು
ಹರಿಬ್ರಹ್ಮರಿಗಸಾಧ್ಯ ಶಿವನು ಎಲೆ ಮಂತ್ರಿ ॥ ೯ ॥

ದೃಢವ ತಿಳಿದು ಮನಡೊಳಿನ್ನು ಎಲೆ ಮಂತ್ರಿ। ಶಿವನ
ಅಡಿಯ ಪೂಜೆ ಮಾಡುವರು ಎಲೆ ಮಂತ್ರಿ
ಮೃಡನ ಮಂತ್ರ ಜಪಸ್ತೋತ್ರಗಳ ಎಲೆ ಮಂತ್ರಿ। ಶಿವನ
ಎಡಬಲದಲ್ಲಿ ವಾಲೈಸುವರು ಎಲೆ ಮಂತ್ರಿ ॥ ೧೦ ॥

ನಾನಾವೇದಶಾಸ್ತ್ರಗಳೆಲ್ಲ ಎಲೆ ಮಂತ್ರಿ। ಅನ್ನ
ದಾನಿ ಶಿವನು ದೈವವೆಂದು ಎಲೆ ಮಂತ್ರಿ
ಓಂ ನಮಃ ಶಿವಾಯ ಎನುತ ಮಂತ್ರಿ। ಬ್ರಹ್ಮ
ಸ್ಥಾನದಲ್ಲಿ ಧ್ಯಾನಿಸುವುದು ಎಲೆ ಮಂತ್ರಿ ॥ ೧೧ ॥

ಕಂದುಗೊರಳ ಶಿವನೆ ಕೇಳು ಎಲೆ ದೇವ। ಹೀಂ
ಗೆಂದು ಪೌರಾಣಗಳು ಪೇಳೆ ಎಲೆ ದೇವ
ಮಂದಿ ಮಂತ್ರಿ ಸಕಲರೆಲ್ಲ ಎಲೆ ದೇವ। ಅವಗೆ
ವಂದಿಸುತ್ತ ಕರವ ಮುಗಿದರೆಲೆ ದೇವ ॥ ೧೨ ॥

ಆದಿ ಪುಸ್ತಕಗಳ ತೆಗೆದು ಎಲೆ ದೇವ । ಮತ್ತೆ
ಓದಿ ಅರ್ಥಗಳನು ಮಾಡಿ ಎಲೆ ದೇವ
ಭೇದಿಸುತ್ತ ತಿಳಿದರಾಗ ಎಲೆ ದೇವ । ಶಿವನ
ಸೋದಿಸಿದ ಚಿನ್ನವೆಂದು ಎಲೆ ದೇವ ॥ ೧೩ ॥

ಇಂತಿ ಪೌರಾಣಗಳ ಕೇಳಿ ಗುರುರಾಯ । ಅವಗೆ
ಮುಂತೆ ವೀಳ್ಯ ವಿಭೂತಿಯನು ಗುರುರಾಯ
ಸಂತವಿಟ್ಟು ಸಕಲರೆಲ್ಲ ಗುರುರಾಯ । ಕೂಡಿ
ಮಂತ್ರಿಗಣಪ ನೆಗೆದನಾಗ ಗುರುರಾಯ ॥ ೧೪ ॥

ಇಲಿಯ ವಾಹನಗಳನೇರಿ ಗುರುರಾಯ । ತಮ್ಮ
ಬಲವ ಕೂಡಿ ಬೇಗ ಬರಲು ಗುರುರಾಯ
ಉಲಿದು ಪೊಗಳುವವರಿಲ್ಲ ಗುರುರಾಯ । ತಮ್ಮ
ತಲೆಯ ತಗ್ಗಿ ಬರುತಲಿರ್ದ ಗುರುರಾಯ ॥ ೧೫ ॥

ಸಿಟ್ಟು ಕೋಪಗಳನು ಬಿಟ್ಟು ಎಲೆ ದೇವ । ತಮ್ಮ
ಹೊಟ್ಟೆಯವನ ಕೂಡಿಕೊಂಡು ಎಲೆ ದೇವ
ಪಟ್ಟಣಬೀದಿಯ ಒಳಗೆ ಬರಲು ಎಲೆ ದೇವ । ಕಂಡು
ಕಟ್ಟೆಯವರು ಸಡ್ಡೆ ಮಾಡರೆಲೆ ದೇವ ॥ ೧೬ ॥

ಆರು ಅರಿಯದವನೆ ಗಣಪ ಗುರುರಾಯ । ಎಂದು
ಊರುಕೇರಿ ನೋಡರವನ ಗುರುರಾಯ
ದಾರಿ ಬಾಜಾರಗಳ ಬಿಟ್ಟು ಗುರುರಾಯ । ಬ್ರಹ್ಮ
ಕೇರಿಯೊಳಗೆ ನಡೆದನಾಗ ಗುರುರಾಯ ॥ ೧೭ ॥

ಸಾಗಿಸುವರೊಬ್ಬರಿಲ್ಲ ಗುರುರಾಯ । ಮತ್ತೆ
ಬೇಗ ಬಂದು ಮನೆಯ ಹೊಕ್ಕು ಗುರುರಾಯ
ಆಗ ತನ್ನ ಗೆಳೆಯರೆಲ್ಲ ಗುರುರಾಯ । ಮನೆಗೆ
ಗೂಗೆ ಬಂದು ಸೇರಿದಂತೆ ಗುರುರಾಯ ॥ ೧೮ ॥

ಎಳ್ಳ ಚಿಗುಳಿ ತಂಬಿಟ್ಟುಗಳು ಗುರುರಾಯ । ಮತ್ತೆ
ಒಳ್ಳೆ ಕಬ್ಬು ಕಡಲೆ ಬೆಲ್ಲ ಗುರುರಾಯ
ತಳ್ಳಿ ಬಳ್ಳಿ ಹುಳ್ಳಿ ಶಾಸ್ತ್ರ ಗುರುರಾಯ । ಹೇಳಿ
ಡೊಳ್ಳು ತುಂಬಿ ಸುಖದೊಳಿರುವ ಗುರುರಾಯ ॥ ೧೯ ॥

ಗಿರಿಜೆ ಮಗನ ಅರ್ತಿಯಿಂತು ಗುರುರಾಯ । ನನ್ನ
ತರುಳಪುತ್ರನರ್ತಿ ಕೇಳು ಗುರುರಾಯ



ಪರವಾದಿಗಳಿಗೆದೆದಲ್ಲಣ ಗುರುರಾಯ । ಮುಂದೆ
ಉರಿಯ ಕಣ್ಣ ಶರಭನ ಕಥೆಯ ಗುರುರಾಯ ॥ ೨೦ ॥

ಕರ್ತ ಶಿವನೆ ಶರಣು ಶರಣು ಗುರುರಾಯ । ನಮ್ಮ
ಮೃತ್ಯುಂಜಯನೆ ಶರಣು ಶರಣು ಗುರುರಾಯ
ಅರ್ಥ ಪ್ರಾನ ಅಪರಂಜಿಯೆ ಗುರುರಾಯ । ಗಣಪ
ನರ್ತಿ ಕಥೆಗೆ ಶರಣು ಗುರುರಾಯ ॥ ೨೧ ॥

ಲೋಕರತ್ನ ನಮಮಣಿಯೆ ನೀಲಮ್ಮ । ಜಗವ
ಸಾಕೊ ಬಸವನೊಳಗೆ ಪೇಳಿ ನೀಲಮ್ಮ
ಬೇಕು ಪಂಚಾಮೃತಗಳೆಂದು ನೀಲಮ್ಮ । ಮೂರು
ನಾಕು ಸಂಧಿ ಮುಗಿಸಿದಾಳು ನೀಲಮ್ಮ ॥ ೨೨ ॥

ಸಂಧಿ ೭ಕ್ಕಂ ಶ್ಲೋಕ ೪, ವಚನ ೬೯, ಪದನು ೫೩,
ಉಭಯಕ್ಕಂ ೭೦೩ ಕ್ಕಂ ಮಂಗಳ ಮಹಾ ಶ್ರೀ ಶ್ರೀ

* * *

# ಗಂಗಿ ಗೌರೀ ಸಂವಾದ

## ೮

**ಕಂದ :**

ಮುಂದಣ ಕಥಾಮೃತದಿಂ ಇಂದುಧರ ಪರಶಿವನು
ಮಂದಮತಿ ದಕ್ಷಣನ ಕೊಲ್ವೆನೆನಲು
ಕಂದ ಶರಭಾವತಾರ ಹೊಯ್ದು ದಕ್ಷನ ಶಿರವ
ಚಂಡಾಡಿ ತರಿದ ಚಲುವ ಕಥೆಯನು ॥ ೧ ॥

**ಪದನು :**

ಕಮಲ ಶತಕೋಟಿ ತೇಜ ಗುರುರಾಯ ತಿಮಿರಕುಲ ಮಾತಂಡನೆ
ವಿಮಲಮತಿಗಳ ಕೊಟ್ಟು ರಕ್ಷಿಪ ಕೇಳಿನ್ನು ಸಮಯ ದಕ್ಷನ ಕಥೆಯನು ॥ ಪಲ್ಲ ॥

ದೇವ ಗಿರಿಜಾ ಪಾರ್ವತಿ ದಕ್ಷನಿಗೆ ಮೋಹದ ಮಗಳೆನಿಸಿದರೆ
ಭಾವಜ ಹರನು ತನ್ನಳಿಯನೆಂದೆನುತಲಿ ಜೀವಗರ್ಪಿಸಿ ಮನದೊಳು
ದೇವ ತನ್ನಳಿಯನೆಂದು ಪೇಕ್ಷದಿಂ ಭಾವಪಲ್ಲಟವಾಗಿರೆ
ಮಾವ ಅಳಿಯಗೆ ಬಿದ್ದ ಜಗಳ ಕಥನವ ಕೇಳಿ ದೇವಗಣ ಭಕ್ತಜನರು ॥ ೧ ॥

ಮಂದಮತಿಗಳಲಿ ದಕ್ಷನೀ ಜಗಕೆ ಕರ್ತನಾಗುವೆನೆನುತಲಿ
ಚಿತ್ತದೊಳು ಶಿವನ ಗರ್ವಿಕೆಯ ಮುರಿಸುವೆನುತ ಸುತ್ತಿಕೊಂಡನು ದೋಷವ
ಉತ್ತಮ ಕುಲದೊಳಗೆ ತಾ ತಿಂಬ ತೊತ್ತಿನೆಂಜಲಗಲಸಿದ
ಕತ್ತರಿಸಬೇಕು ಶಿರಗಳನೆಂಬುವ ದಕ್ಷಣನಕ್ರತುವಿನ ಕಥೆಯ ಕೇಳಿ ॥ ೨ ॥

ನಿನ್ನ ಕರುಣಾಮೃತದಲಿ ನೀನಮ್ಮ ತನ್ನ ಪುರುಷಗೆ ಹೇಳುತ
ಮಾನ್ಯ ಮಾರ್ತಾಂಡ ದೂಷಕರೆದೆದಲ್ಲಣಗೆ ವರ್ಣಿವರ್ಣಿಸಿ ಹೇಳುತ
ಎನ್ನ ಮನಃಪ್ರಿಯ ಕೇಳು ಬಸವಯ್ಯ ಹೊನ್ನಪುತ್ಥಳಿ ಗಂಗೆಯಾ
ಚೆನ್ನಶರಭತಾರನ ಕಥೆಯ ಕಾಳಗವ ತನ್ನ ಕರ್ತಗೆ ಪೇಳ್ದಳು ॥ ೩ ॥

ಚಕ್ಷು ಮೂರುಳ್ಳ ಶಿವನೆ ಕೇಳಿನ್ನು ದಕ್ಷಬ್ರಹ್ಮನ ಕಥೆಯನು
ಲಕ್ಷ ಬ್ರಹ್ಮರನೆಲ್ಲ ನಗೆಗೆಡಮಾಡಿದನು ಪಕ್ಷ ಶರಭವತಾರನು



ಯಕ್ಷರಾಕ್ಷಸರು ಕೂಡಿ ಯಜ್ಞಗಳ ಆ ಕ್ಷಣದಿ ನಿರ್ಮಿಸುತಲಿ
ಪಕ್ಷ ಬಂಧುಬಳಗ ನೆಂಟರಿಷ್ಟರ ಕೂಡಿ ಭಿಕ್ಷುಕನ ನಿನ್ನ ಮಾಡಿ ॥ ೪ ॥

ಅಷ್ಟದಿಕ್ಕರನೆ ಕರೆಸಿ ದಕ್ಷಣನು ಕಷ್ಟಯಜ್ಞಗಳನೆ ಇಕ್ಕಿ
ಸುಟ್ಟು ಕಳೆವೆನು ಶಿವನ ವಂಶಾದಿಗಳನೆಂದು ಶ್ರೇಷ್ಠತನದಲಿ ಗರ್ವಿಸಿ
ವಿಷ್ಣುವನು ಕರೆಸಿಕೊಂಡು ಮನೆಯೊಳಗೆ ಗೋಷ್ಠಿ ಮಾತುಗಳಾಡುತ
ಸೃಷ್ಟಿಪಾಲಕ ಶ್ರೀಹರಿ ನಿಮಗಲ್ಲದೆ ಪುಟ್ಟ ಶಿವನಿಗೆ ಸಲ್ಲದು ॥ ೫ ॥

ವಾಲಗಕೆ ನಾ ಹೋದರೆ ಅವ ನನ್ನ ಕಾಲಕಸವನೆ ಮಾಡಿದ
ಆಲಿಗಳ ತೆಗೆದು ಈಕ್ಷಿಸಿ ನೋಡಿದರೆ ನಾ ಮೂಲೆಯಲಿ ಕುಳಿತುಕೊಂಡೆ
ನೂಲೆಳೆಯ ಹುಲುಮನುಜರು ಬರಲೆದ್ದು ವಾಲಗದಿ ಕುಳ್ಳಿರಿಸುವಾ
ಮೇಲಾದ ಹಿರಿಯತನಗಳ ಮಾತನಾಡಿದರೆ ನಾಲಿಗೆಯು ಬೀಳುತಿಹುದೆ ॥ ೬ ॥

ಎಂಟು ದಿಕ್ಕಿನ ಬಳಗದಿ ಅವನೆನ್ನ ಒಂಟಿ ಮಿತ್ತನೆ ಮಾಡಿದ
ಮಂಟಪದಿ ಬಂದು ಕುಳ್ಳಿರು ಮಾವನೆಂದರೆ ಗಂಟಲವು ಬೀಳುತಿಹುದೆ
ನೆಂಟರ ಮಗನೆನುತಲಿ ನಾ ನೋಡಿ ನಂಟು ಮಾಡಿದೆ ಮಗಳನು
ಒಂಟಿಯಂತೆ ಮೋರೆ ಮೇಲಕೆತ್ತಿದನವನ ನಂಟುತನ ಹಾಳಾಗಲಿ ॥ ೭ ॥

ಮಗಳ ಕೊಡದಾ ಮುನ್ನವೆ ಮನೆಯೊಳಗೆ ಅಗುಳಿಗುಪ್ಪುಗಳಿಲ್ಲವು
ಹಗಲಿರುಳು ದಾರಿದ್ರ್ಯ ಎಡೆಗೊಂಡು ಅವಗಿನ್ನು ಬೊಗಸೆ ಅಂಬಲಿಗಾಣವೆ
ನಗೆಗೇಡುಗಳ ನೋಡದೆ ನಾ ನನ್ನ ಮುಗುಳುನಗೆ ಮುದ್ದು ಮಗಳ
ಅಗಜೆ ಗೌರಮ್ಮ ಕೊಟ್ಟ ಮೂರ್ತಗಳಿಂದವಗೆ ಮಿಗಿಲು ಪದವಾಯಿತು ॥ ೮ ॥

ನನ್ನ ಮಗಳಿಂದಲವಗೆ ಶ್ರೀಹರಿಯೆ ಹೊನ್ನಬೆಟ್ಟಗಳಾದವು
ತನ್ನ ದಾರಿದ್ರ್ಯಗಳು ಹಿಂಗುತಲಿ ಸರ್ವರಿಗೆ ಮುನ್ನ ಸಿರಿಧನಿಯಾದನು
ಅತ್ತೆ ಮಾವಗಳಿಂದಲಿ ಭಾಗ್ಯಸಂಪನ್ನ ನಾನಾದೆನೆನುತ
ತನ್ನ ಕಂಗಳ ತೆಗೆದು ನೋಡಲಿಲ್ಲವು ಅವನ ಹೊನ್ನಸಿರಿ ಹಾಳಾಗಲಿ ॥ ೯ ॥

ಅಳಿಯ ದೊರೆತನ ಮಾಡಲು ಒಂದಿವಸ ಸಭೆಗೆ ನಾ ಹೋಗಿ ನಿಲಲು
ಘುಳಘುಳಿಪ ವಾಲಗದಿ ತಾವಿಲ್ಲದಿರುತಿರಲು ಕೆಳಗೆ ಕುಳಿತರೆ ಕರೆಯನು
ಹುಳ ನೊಣನ ನೋಡುವಂತೆ ಅವ ನನ್ನ ಬಳಿದ ಕಸವನೆ ಮಾಡಿದ
ತಿಳಿಯದೆ ನಾ ಮಗಳ ಕೊಟ್ಟೆವಕಟಕಟಾ ಅಳಿಯತನ ಹಾಳಾಗಲಿ ॥ ೧೦ ॥

ಕುಲದಲೊಳ್ಳೆವನೆನುತಲಿ ನಾ ನನ್ನ ಮಗಳ ಪಾರ್ವತಿಯ ಕೊಟ್ಟೆ
ಹಲವು ದೇಶದಿ ತಿರುಗಿ ಹರಿಹರಿದು ತಿಂಬುತಲಿ ಹೊಲೆಯ ಮಾದಿಗರ ಕಲಸಿದ

ಎಲುತೊಗಲು ನರಮಾಂಸವ ತಿಂಬುತಲಿ ಮಲಗಿ ಕಾಡೊಳಗಿರುವನು
ಬಲು ಕಳ್ಳಚೋರ ಗಾರುಡಿಗರೊಳು ಗಾರುಡಿಗ ನೆಲೆಯ ಕಾಣಲಿ ಬಾರದು ॥ ೧೧ ॥

ಹಿರಿಯ ಮನಗನು ಸವರಿದ ಶ್ರೀಹರಿಯೇ ಕಿರಯ ಮಗನನುರಿಹಿದ
ಸುರರು ದೇವಾದಿದೇವರ್ಕಳಿಗೆ ತನ್ನ ಚರಣಕ್ಷೆಯ ಹೊರಿಸಿದ
ತಿರುಕ ಹೊಲೆಯನ ಮಗನಿಗೆ ಅಕಟಕಟಾ ದೊರೆತನಗಳಿಷ್ಟೇತಕೆ
ಇರಿದು ಕೊಲ್ಲಲಿಬೇಕು ಹರನು ಬಯಲಾದರೆ ಸ್ಥಿರಪಟ್ಟ ನಿನಗಹುದು ॥ ೧೨ ॥

ಇಮ್ಮಡಿಯ ಗರ್ವದವನು ನರಹರಿಯೆ ನಂಬಬಾರದು ಕರ್ಮಿಯ
ನಮ್ಮ ಬಂಧುಬಳಗ ನೆಂಟರಿಷ್ಟರ ಕೊಂದ ಹೆಮ್ಮೆಕಾರನು ಗರ್ವಿಯು
ಸುಮ್ಮನಿರಬಾರದು ಕರ್ಮಿಯನು ಚಿಮ್ಮಿಕಹಾಕಿಸಲುಬೇಕು
ಎಮ್ಮೆ ಕೋಣಗಳಂತೆ ಮೈಮರೆದಿದ್ದರೆ ನಮ್ಮ ತಲೆಗವ ತರುವನು ॥ ೧೩ ॥

ನರಹರಿಯೆ ಕೇಳು ನೀನು ಶಿವಗಿರಿಗೆ ಸುರಿಯಬೇಕಗಿಮಳೆಯ
ಹರನ ವಂಶಾದಿಗಳ ಸುಟ್ಟು ಬೂದಿಯ ಮಾಡಿ ಪರಿಹರಿಸಿ ಕಳೆಯಬೇಕು
ಪರಿಹರಿಸದಿದ್ದರಿನ್ನು ಅವ ನಮ್ಮ ಹಿರಿಯತನಗಳ ಬಲ್ಲನೆ
ಕುರಿಯ ತಲೆಗಳ ಮಾಡಿ ಕಡಿಕಡಿದು ಶಿರಗಳನು ಉರುಳಿಸುವ ಪಾದದೆಡೆಗೆ ॥ ೧೪ ॥

ಅಗ್ನಿಯುರಿ ಹಸ್ತದವನ ಕೈಯಿಂದ ಭಗ್ನವಾಗುತೆ ಹೋಗುತ
ಪ್ರಾಜ್ಞ ಶ್ರೀಹರಿಯಿಂದ ಪ್ರಾಣ ಉಳಿಯಿತು ಎಂಬ ಸುಜ್ಞಾನವನರಿಯನು
ಲಗ್ನ ಮೂರ್ತಗಳಿಂದ ನಲಿನಲಿದು ಯಜ್ಞಗಳ ಮಾಳ್ಪೆವೆನುತ
ಅಜ್ಞಾನ ತಾಮಸಗಳಾವರಿಸಿ ದಕ್ಷಣು ಯಜ್ಞ ಕೊಂಡವ ರಚಿಸಿದ ॥ ೧೫ ॥

ಕಾಳರಕ್ಕಸರು ಎದ್ದು ದಕ್ಷಣಗೆ ಹೇಳಿದರು ನಿಜವಾಕ್ಯವ
ಕೂಳಮಾರಿಯ ನೋಡಬೇಕೆನುತಲಿ ದಾಳಿಡುವ ಕೈಲಾಸಕೆ
ಏಳೇಳು ದಕ್ಷಬ್ರಹ್ಮ ಯಜ್ಞಕೆ ಖೂಳ ತೂಳರು ಒದಗಿತು
ಏಳುನೂರು ಗಾವುದದ್ದಗಲ ಕೊಂಡಗಳ ಹೇಳಲಿನ್ನಾರಿಗಳವು ॥ ೧೬ ॥

ನಿಟ್ಟು ಲಕ್ಕಸಗಾವುದ ನಿರ್ಮಿಸುತ ಸೃಷ್ಟಿಸಿದರಾಕ್ಷಣದಲಿ
ಬೆಟ್ಟ ತರುಗಿರಿಗಳನು ಕಡಿಕಡಿದು ಹೋಮಗಳನಟ್ಟಿದರು ಕೈಲಾಸಕೆ
ಎಷ್ಟು ಪಂಚಾಮೃತಗಳ ಯಜ್ಞದಲಿ ಇಟ್ಟರಗಣಿತ ಕೊಡಗಳ
ಸುಟ್ಟು ಉರಿ ಭುಗಿಲಿಡಲು ಕೈಲಾಸ ಕಂದಿದರೆ ವಿಷ್ಣು ತಾ ಬೆರಗಾದನು ॥ ೧೭ ॥

ಯೋಗಪರ್ವತಗಳಲ್ಲಿ ಆ ಕ್ಷಣದಿ ಬೇಗೆವುರಿ ಆರ್ಭಟಿಸಲು
ಮೂಗಿನುಸುರನೆ ನೋಡಿ ವಿಷ್ಣು ಬೆರಗಾಗುತಲಿ ಹೇಗಾದಿತೋ ಎನುತಲಿ



ನಾಗಭೂಷಣನಟಕ ನಮಗಿನ್ನು ಈಗ ತಿಳಿಯದು ಎನುತಲಿ
ಆಗಲಾಗಲಿ ಭಲರೆ ದಕ್ಷ ಎಂದೆನುತ ಬಲಭಾಗದಲಿ ಒಡಗೂಡಿದ ॥ ೧೮ ॥

ಅಂಜಬೇಡೆಲೆ ದಕ್ಷನೆ ಶಿವಗಿರಿಗೆ ಮಂಜಿನ ಮಳೆ ಕರೆಯಿತು
ಕಂಜಬಾಣನ ಕೊಂದ ಕೊಲೆಯೆಂದು ತಿರುಗಿತು ಅಂಜಿಕೆಯ ಮಾತೇತಕೆ
ನಂಜುಗೊರಳ ನಗುತಲಿ ನಯನದಲಿ ಅಂಜನದ ಬೆಂಕ್ಯಡರಲು
ಪಂಜು ಕಟ್ಟಿದ ತ್ರಿಪುರವು ಉರಿದಂತೆ ಧನಂಜಯಂಬಕನುರಿದ ॥ ೧೯ ॥

ತನಕಪರ್ವತಗಳಲಿ ಸುರಗುರುವು ಶಕುನಶಾಸ್ತ್ರಗಳ ನೋಡಿ
ಮಕರಧ್ವಜನ ಪಿತನೆ ಮಾತನಾಲಿಸಿ ಕೇಳು ಸುಖಕರವು ನಮಗಾಹದು
ಸಕಲ ವಡಬಾಗ್ನಿ ಅಡರಿ ಈಶ್ವರಗೆ ಲಿಖಿತದಿನಗಳು ತುಂಬಿರಲು
ಅಖಿಳ ಬೂದಿಯಾಗಿ ಸುಟ್ಟು ಬಯಲಹನೆಂದು ಶಕುನ ಸಾರುತಿವೆ ಕೋ ॥ ೨೦ ॥

ಸುರಗುರುವಿನ ಶಕುನವ ಲಾಲಿಸುತ ಅರರೆ ಭಲಭಲರೆನುತಲಿ
ಹರನ ಹಣೆಯಬರಹ ಹರಿಯಿತಿಲ್ಲಿಗೆ  ಎಂದು ಹರಿಹರಿದು ಕುಣಿದಾಡುತ
ಮುರವೈರಿಯೊಡಗೂಡುತಾ ದಕ್ಷಣು ಕರಸಲಗಣಿತ ವಿಪ್ರರ
ಇರದೆ ಬಂದರು ಒಂದು ಕೋಟ್ಯಾನುಕೋಟಿಗಳು ಮರಣದ ಕುರಿಗಳಂತೆ ॥ ೨೧ ॥

ಕಣಜದ ಹೊನ್ನ ತೆಗೆಸಿ ದಕ್ಷಣು ಹಣದಾನಗಳ ಮಾಡಲು
ಎಣಿಕೆ ಇಲ್ಲದೆ ವಿಪ್ರಜಾತಿಗಳು ನೆರೆದರು ಕುಣಿಕುಣಿದು ನಲಿದಾಡುತ
ಕಣುಕ ಸಕ್ಕರೆ ತುಪ್ಪವು ನಮಗಿನ್ನು ಎಣಿಕೆ ಮೆದೆಮೆದೆ ಹೂರಿಗೆ
ದಣಿದಣಿಯಲುಂಡು ಸುಖಿಸುವೆವೆಂದು ಯಜ್ಞದಲ್ಲಿ ಕುಳಿತುಕೊಂಡರು ಬೇಗದಿ ॥ ೨೨ ॥

ಗಾರಿಗೆ ಮಂಡಿಗೆಗಳು ಪರಿಪರಿಯ ಹೂರಣದ ಕಡುಬಿನಿಂದ
ಸಾರಾಯ ಹಲವು ಜೇನಸಿನ ಪಾಯಿಸಗಳು ಕಾರಾನ ಪಳೆದೆಗಳನು
ಮೀರಿ ಉಣಿಸುವೆನೆನುತಲಿ ದಕ್ಷಣು ಹಾರೈಸಿ ಬರತಲಿರಲು
ಹಾರುವರ ಕುಲಕೆ ಕಡೆಮೊದಲಿಲ್ಲ ಪರಶಿವನೆ ಸೇರಿ ಕುಳಿತುರು ಯಜ್ಞದಿ ॥ ೨೩ ॥

ಉಟ್ಟ ತಂಗಲ ಧೋತ್ರದಿ ನಗುನಗುತ ಜುಟ್ಟುಗಳ ನೇವರಿಸುತ
ಹೊಟ್ಟೆಯೆದೆಗಳ ಮೇಲೆ ಮಟ್ಟಿಗಳ ಬಡಿಬಡಿದು ಘಟ್ಟಬೆಟ್ಟಗಳಂದದಿ
ಕೆಟ್ಟ ಮಂತ್ರಗಳ ಜಪಿಸಿ ಜರಿಜರಿದು ಮುಟ್ಟಿ ಧಾವತಿಗೊಳುತಲಿ
ಸುಟ್ಟುಹೋಗಲಿ ಶಿವನು ಬಟ್ಟಬಯಲಾಗಲಿ ಎಂದು ದಿಟ್ಟಸಿದರಾಕಾಶವ ॥ ೨೪ ॥

ಮಿಂಡಿ ಹೆಣ್ಣುಗಳು ಎಲ್ಲಾ ಆರತಿಯ ತಂಡತಂಡದಲೆತ್ತುತ
ಕೊಂಡಮ್ಮ ವೆಂಕಟಾದ್ರಿಯ ಮಗಳು ನರಸಮ್ಮ ದುಂಡುದೋಳಿನ ರುಕುಮಿಣಿ

ಕೆಂಡಬೆಂಕಿಗಳೆ ನೀವು ಕೈಲಾಸವನು ಕೊಂಡು ಬೂದಿಗಳ ಮಾಡಿ
ರಂಡೆಯಾಗಲಿ ನಿಮ್ಮ ಗಿರಿಜೆ ಪಾರ್ವತಿಯೆಂದು ಬಂಡುಬಂಡಿಲಿ ಶಾಪಿಸಿ ॥ ೨೫ ॥

ಸೋನಮ್ಮ ವೆಂಕಮ್ಮನು ಗಿರಿಯಮ್ಮ ಬಾಗಮ್ಮ ಕಮಳಮ್ಮನು
ಸೀನವಾಸನ ಮಗಳು ಶ್ರೀ ನೀಲಕೃಷ್ಣಮ್ಮ ತಾನು ಕುಂಬವ ತೊಡೆವ್ರುತ
ಮೀನಾಕ್ಷಿ ನಾಗಮ್ಮನು ಭಾನಮ್ಮ ಜ್ಞಾನಿಗಳ ಲಚುಮಕ್ಕನು
ಹಾನಿಯಾಗಲಿ ಗಿರಿಜೆ ಪಾರ್ವತಿಯ ಸಂಸಾರ ತಾನು ಶಿವಿ ಬಯಲಾಗಲಿ ॥ ೨೬ ॥

ಎಂದು ಮಾತುಗಳ ಕೇಳಿ ಪಾರ್ವತಿಯು ಮಂದಿರಗಳ ಪೊರಡುತ
ಇಂದುಮುಖಿಯರೆ ನಮ್ಮ ಶಾಪಿಸಿದ ಶಾಪ ನಿಮ್ಮ ಸಂದುಸಂದಿಗೆ ತಾಕಲಿ
ತಂದೆ ಕೇಳೆಲೊ ದಕ್ಷಾ ನನ ಗಂಡ ಬೆಂದುಹೋಗುವ ಪುರುಷನೆ
ಮಂದಮತಿ ಕವಿದು ಮಾಯದ ದಾಳಿ ಮಾಡಿದರೆ ಬಂದೀತು ಪ್ರಳಯ ನಿಮಗೆ ॥ ೨೭ ॥

ಎಲೆ ತಂದೆ ದಕ್ಷಬ್ರಹ್ಮ ಕೇಳಿನ್ನು ಕಲಹ ಸಲ್ಲದು ಶಿವನೊಳು
ಹೊಲೆಯ ಮಾದಿಗರಾರು ಬೋಧಿಸಿದರೊ ನಿನಗೆ ತಲೆಗೆ ತಾಟದೆ ಬಿಡುವರೆ
ಲಲನೆ ಮಾತುಗಳ ಕೇಳಿ ದಕ್ಷಾನು ಬಲು ಕೋಪದಲಿ ಗರ್ಜಿಸಿ
ಹೊಲೆಗಲಿತ ಮೂಳಿ ನಿನ್ನ ಕರೆದವರಾರು ಸಲುಗೆ ಸಲ್ಲದು ಎಮ್ಮೊಳು ॥ ೨೮ ॥

ಮಾವ ಹಿರಿಯನು ಎನ್ನದೆ ನಿನ ಗಂಡ ಗೋವಮಜುನರ ಮಾಡಿದ
ಜೀವಹಿಂಸಕನವನ ಸಾಯಗೊಲ್ಲದೆ ಬಿಡೆವು ಗಾವುದಿಯ ಕೈಗ್ಯೆವುದೆ
ದೇವ ನಿಂದೆಗಳ ಕೇಳಿ ಗೌರಮ್ಮ ನಾವು ಇರಬಾರದೆನುತ
ಪಾವಕನ ಕೊಂಡದೊಳು ಮುಳುಗಿ ಮಾಜಲು ಬೇಗೆ ಹಾವಳಿಯು ಘನವಾಯಿತು ॥ ೨೯ ॥

ಹೇಳಿದರೆ ಕೇಳುವವನೇ ದಕ್ಷಾನ ಬಾಳಲಿಖಿತವು ತೊಡೆಯಿತು
ದಾಳಿ ಕಥನಗಳಿನ್ನು ಬಹವೆಂದು ಗೌರಮ್ಮ ಹೇಳಿ ಮುಳುಗುತ ಯಜ್ಞದಿ
ಕಾಳಿ ಮಹಾಂಕಾಳಿಯಾಗಿ ಗೌರಮ್ಮ ಗಾಳಿಧೂಳಿಗಳ ಕೂಡಿ
ಕಾಳಗ ಕತನಗಳ ನ್ನೋಡಬೇಕೆನುತಗ್ನಿ ಮೂಲೆಯಲಿ ಕುಳಿತಳಾಗ ॥ ೩೦ ॥

ಗಣಪ ತಾನೆದ್ದು ಬಂದು ಅಜ್ಜಗೆ ಮಣಿದು ಬಿನ್ನಹ ಮಾಡಿದ
ಸೆಣಸಿ ಕೆಟ್ಟರು ದೇವದಾನವರು ಶಿವನೊಳಗೆ ಕುಣಿಗಣ್ಣ ತಾತ ಕೇಳು
ಬಣಗು ಮುತ್ತಯ್ಯ ಕೇಳು ಬಲು ಮುದುಕ ಕುಳಿತಲ್ಲಿ ಏಳಲಾರೆ
ತ್ರಿಣಯ ಶಿವನೊಳು ಸೆಣಸಿ ಹಣೆಬರಹ ಕಳೆವರೆ ಹೆಣಮೋರೆ ತಾತ ಕೇಳು ॥ ೩೧ ॥

ಮೊಮ್ಮಗನ ಮಾತುಗಳನು ಎಲೆ ತಾತ ಗಮ್ಮನಾದರೆ ಕೇಳೆಲೊ
ಕಮ್ಮಗೋಲನ ಪಿತನು ಮೊದಲಾದ ಸುರರೆಲ್ಲ ಹಮ್ಮಿನಿಂದಲೆ ಕೆಟ್ಟರು



ಕೆಮ್ಮು ತಲೆಬೇನೆರೋಗಿ ಕೇಳಿನ್ನು ಹೆಮ್ಮೆಗರ್ವಿಕೆ ಬೇಡವು
ಸಮ್ಮಗಾರರ ಸಾವು ನಿನಗಾಗಲೆಲೆ ತಾತ ಕಮ್ಮಟವೆ ನಿನಗೆ ಮೂಲ ॥ ೩೨ ॥

ಆಡಿದ ಮಾತುಗಳಿಗೆ ದಕ್ಷಾನು ನೋಡುತಲಿ ಬಿರುಗೋಪದಿ
ಗೂಡುಹೊಟ್ಟೆಯ ಮೂಳ ನಿನಗೇಕೆ ಇಷ್ಟೊಂದು ಝಾಡಿಸಿ ಮಗಳ ಮಗನ
ಜೇಡರೆಂಜಲಗಳ್ಳರ ಮಗ ನಿನ್ನ ನೋಡಿ ಪಾವನ ಮಾಡಿದೆ
ಕೋಡಿ ಹೊಲೆಯರ ಮಗನೆ ಶಿರಹೋದ ಮೂಲ ನೀನಾಡಬಹುದೆಲೊ ನಮ್ಮನು ॥ ೩೩ ॥

ಘೋರ ಗರ್ವಿಸಿದೆ ಕೇಳು ಶ್ರೀಹರಿಯೆ ಸೇರಿತು ಮದಮತ್ಸರ
ಹೇರುಕೊಬ್ಬರಿ ಕಬ್ಬುಕಡಲೆ ಬೆಲ್ಲಗಳಿಂದ ಸೂರೆಹೋಯಿತು ಮನೆತನ
ತಾರಿದೊಡಲಲಿ ಬಂದನು ನಮ್ಮನೆಗೆ ಭೇರಿಹೊಟ್ಟೆಯ ಗಾವುದಿ
ನೂರಾರರ ಹಾರ ಒಬ್ಬನೆ ಇವ ತಿಂದ ಮೀರಿ ನುಡಿಯಲುಬಹುದೆ ಇವನ ॥ ೩೪ ॥

ಕೆಟ್ಟೆನಿವನಿಂದ ಹರಿಯೆ ಮನೆಬದುಕು ಕೆಟ್ಟುಹೋಯಿತು ನೆಲದೊಳು
ಒಟ್ಟಿಲೊಟ್ಟಿಲು ಚಿಗುಳಿ ತಂಬಿಟ್ಟು ಮೇವೆಗಳ ಹೊಟ್ಟೆ ನೆತ್ತಿಲ ಕೆಡಿಸಿದ
ಹುಟ್ಟಿದಾರಭ್ಯ ಮೊದಲು ನಮ್ಮನೆಯ ಹೊಟ್ಟೆಕೂಳಲಿ ಬದುಕಿದ
ಬಿಟ್ಟು ಆಡಲಿಬಹುದು ಭಲಭಲರೆ ಎನುತಲಿ ಕುಟ್ಟಿದನು ಬಾಯಮೇಲೆ ॥ ೩೫ ॥

ಆಗ ಬೇಗದಿ ಹೊಯ್ವುತಾ ದಕ್ಷಾನು ಬೇಗೆಯುರಿ ಬೊಬ್ಬೆಗಳಲಿ
ಸಾಗಿಸಿದ ಕೈಲಾಸಪಟ್ಟಣಕೆ ಅಗ್ನಿಮಳೆ ಬೇಗ ಉರಿ ಗದ್ದಲಿಸುತ
ಮೇಘ ಸಿಡಿಲಾರ್ಭಟದಲಿ ಪಟ್ಟಣದ ಯೋಗಿ ಮುನಿಜನಗಳೆಲ್ಲ
ನೀಗಿಹೋಯಿತು ನಮ್ಮ ಕೈಲಾಸಪಟ್ಟಣವೆಂದಗ ತಲ್ಲಣಗೊಳುತಲಿ ॥ ೩೬ ॥

ಜ್ವಾಲಾಗ್ನಿ ವಡಬಾಗ್ನಿಯು ದಕ್ಷಾನು ಮೇಲಾದ ಪ್ರಳಯಾಗ್ನಿಯು
ಮೂಲಮಂತ್ರಗಳಿಂದ ಜಪಿಜಪಿಸಿ ಸುಡುತಿರಲು ಕೈಲಾಸ ಆರ್ಭಡಿಸುತ
ಸ್ಥೂಲ ಸೂಕ್ಷ್ಮತನುವಿನ ಯೋಗಿಗಳು ಗಾಲುಮೇಲುಗಳಾಗುತ
ಶೂಲಧರ ಶಿವನೆ ಹರಹರಯೆಂದು ಬಳಲುತಿರೆ ನೀಲಕಂಠನುಪಮಿಸಿದ ॥ ೩೭ ॥

ವಡಬಾಗ್ನಿ ಅಡರಿದಡೆ ಶಿವ ನಮ್ಮ ಕಿಡಿಗಣ್ಣುಗಳು ಸೂಸಲು
ಒಡೆಯನ ಬಲಭಾಗದ ಕಿಡಿಗಣ್ಣುಗಳ ಬೆಂಕಿ ಸಿಡಿಲುಮರಿ ರೂಪಾಯಿತು
ದಡಿಗದಾನವರ ಗಂಡ ಬೆಸಸಿದರೆ ಗುಡುಗುಡಿಸಿ ಆರ್ಭಡಿಸುತ
ಕಡಿದು ಬಿಡುಟುವೆ ಪರವಾದಿ ಶಿರಗಳನೆಂದು ನಡೆದ ದಕ್ಷಾ ಯಜ್ಞಕೆ ॥ ೩೮ ॥

ಮೂವತ್ತು ಎರಡಾಯುಧಾ ಹಸ್ತದಲಿ ದೇವ ಪಿಡಿದಾರ್ಭಡಿಸಲು
ಗೋವಿಂದಜಹರಿಯು ಸುರಮುನಿಗಳ ಹೃದಯ ಜೀವ ತಲ್ಲಣಿಸುವಂತೆ

ಗೋವ ದಕ್ಷನ ತಲೆಯನು ಆರ್ಭಡಿಸಿ ತೀವಿ ಕಟ್ಟುವೆನೆನುತಲಿ
ದೇವಶರಭವತಾರ ಘುಡಿಘುಡಿಸಿ ನಡೆದನು ಭೂವಳಯಕಾರ್ಭಡಿಸುತ ॥ ೩೯ ॥

ವಾಮಭಾಗದಿ ಬೆಮರಿಣಿ ಬಲುದುರ್ಗಿ ತಾಮಸವೇ ಬೊಬ್ಬಿಡುತಲಿ
ಭೂಮಿಯಾಕಾಶಗಳ ನುಂಗಿಬಿಡುವೆನೆಂದು ಸ್ವಾಮಿಬೆನ್ನಲಿ ನಡೆದಳು
ಗ್ರಾಮದುರ್ಗಗಳನಿಳಿದು ದಕ್ಷಣನ ಸೀಮೆ ತುದಿಗಳ ಮೆಟ್ಟಲು
ಭೂಮಿಗಿರಿದುರ್ಗಗಳು ತಲ್ಲಣಿಸಿ ನಡುಗಿದರೆ ಹೋಮದುಪಟಳವೆನುತಲಿ ॥ ೪೦ ॥

ಮರುಳ ತಂಡವು ಎಡದಲಿ ಶರಭನ ದುರುಳ ಭೂವು ಬಲದಲಿ
ಕುರುಳುಗೂದಲು ತಲೆಯ ಚಂಡಿಚಾಮುಂಡಿಯರು ಕರುಳ ಹೀರುವೆನುತಲಿ
ಕೊರಳದಾರದ ವಿಪ್ರರ ಕಡಿಕಡಿದು ಉರುಳಿಸುವೆವೆನುತಲಾಗ
ಬೆರಳ ಬೊಬ್ಬೆಗಳಿಂದ ಗದ್ದಲಿಸಿ ಆರ್ಭಡಿಸಿ ಮರಳಿ ಭೂಮಿಗಳದುರಲು ॥ ೪೧ ॥

ಒದಗಿ ನಾರದನು ಬಂದು ಯಜ್ಞದಲಿ ತುದಿಯ ಬೊಬ್ಬೆಗಳಿಕ್ಕುತ
ಕುದುರೆಮಂದಿಯು ದಂಡು ಕಾಲಾಳು ರಕ್ಕಸರು ಮುದುಕ ನಿನ ಹೋಮ ಸುಡಲಿ
ಗದಗದಿಸಿ ನಡುಗುತಿರಲು ಭೂಮಿಗಳು ಚದುರ ಬೊಬ್ಬೆಗಳಿಕ್ಕುತ
ಒದಗಿದನು ವೀರಶರಭವತಾರನೆಲೆ ದಕ್ಷ ಇದೇ ಕಡೆಯೂಟ ನಿನಗೆ ॥ ೪೨ ॥

ನಾರದನ ಬೊಬ್ಬೆಗಳಿಗೆ ರಕ್ಕಸರು ಕಾರುಮೇಘಗಳಂದದಿ
ನೂರುತೊಂಬತ್ತಾರು ಲಕ್ಷದಲಿ ತೋರಿದರು ವೀರಶರಭತಾರಗೆ
ದಾರಿಬಟ್ಟೆಗಳ ಕಟ್ಟಿ ದಕ್ಷಣನ ಮೂರುವರೆಕೋಟಿ ದಂಡು
ವೀರಬೊಬ್ಬೆಗಳಿಂದ ಸುತ್ತು ಗಟ್ಟಿದರಾಗ ದಾರಿನೋಟಕಿಲ್ಲದಂತೆ ॥ ೪೩ ॥

ಶಂಕೆಗಳು ತಮಗಿಲ್ಲದೆ ರಕ್ಕಸರ ಮುಂಕೊಂಡು ಬೊಬ್ಬಿಡುತಲಿ
ಕೊಂಕಿಬಾಣವು ಬಿಲ್ಲು ಬಗೆಬಗೆಯ ಆಯುಧದಿ ಬೆಂಕಿಮಳೆಗಳ ಸುರಿದರು
ಶಂಕರವತಾರ ಶರಭ ಭವಗಿರಿ ಅಂಕುಶಾಯುಧವ ಪಿಡಿದು
ಬೆಂಕಿಗಿರಿಗಳ ಮೇಲೆ ಧುಮುಕಿದನು ಬೇಗದಲಿ ಬಿರಿದಂಕ ಶರಭವತಾರನು ॥ ೪೪ ॥

ಸುರರು ರಕ್ಕಸರು ಮಿಕ್ಕಿನ ಹರಿಯುಜರು ದಿಕುಪಾಲರು
ನೆರೆದಿರ್ದ ಚಂದ್ರಸೂರ್ಯಾದಿಗಳು ಬೊಬ್ಬಿಡುತ ಬೆರಸಿ ಮುತ್ತಿದರಾಕ್ಷಣ
ಸುರಿಗೆಬಾಣವು ಚಕ್ರಾದಿ ಗದೆಯಿಂದ ಪರಿಪರಿಯ ಮಾರಿಮುಖದ
ನರಹರಿಯು ಸುರರು ಕೋಟ್ಯಾನುಕೋಟಿಗಳೆಲ್ಲ ಸುರಿಗಿಶಾಸ್ತ್ರದ ಮಳೆಗಳ ॥ ೪೫ ॥

ಭರ್ಗೋದೇವನ ಹಸ್ತಿಗೆ ಇರುವೆಗಳು ಮುಗ್ಗಿ ಕಡಿಯಲು ಮಣಿಯದೆ
ನುಗ್ಗು ಮಾನವರನು ಲಗ್ಗೆ ಮಾಡುವೆನೆಂದು ಖಡ್ಗದೊರೆಗಳ ತೆಗೆದನು



ಉಗ್ರಕೋಪಗಳಿಂದಲಿ ಆರ್ಭಡಿಸಿ ಸ್ವರ್ಗದವರನೇ ಸವರಲು
ಕಾರ್ಗತ್ತಲೆಯಾಗಿ ಕೋಟ್ಯಾನುಕೋಟಿಗಳು ಮುಗ್ಗಿ ಉರಳಿತು ಧರೆಯೊಳು ॥ ೪೬ ॥

ಲೆಂಡ ದೈತ್ಯರುಗಳೆದ್ದು ಆರ್ಭಡಿಸಿ ಕೆಂಡಗಣ್ಣಿನ ಮುತ್ತಲು
ಖಂಡೆಯಾರ್ಭಟಗಳಲಿ ಕಡಿಕಡಿದು ಸವರತಲಿ ಚಂಡಾಡಿದನು ತಲೆಯ
ಭಂಡ ದೈತ್ಯರು ಬೀಳಲು ಅಗಣಿತ ರುಂಡ ಕಾಣಲು ಸತಿಯರು
ರಂಡೆಯಾದರು ಒಂದು ಕೋಟ್ಯಾನುಕೋಟಿಗಳು ಮುಂಡೆಯರ ಹೇಳಲಳವೆ ॥ ೪೭ ॥

ಮುತ್ತಿಮುಸುಕಿದ ದಂಡನು ಕಡಿಕಡಿದು ಒತ್ತಿ ಧರೆಯೊಳು ಕೆಡಹಲು
ಹತ್ತು ಸಾವಿರ ಆನೆ ಕುದುರೆ ಕಾಲಾಳುಗಳು ನೆತ್ತರೊಳು ತೇಲಾಡುತ
ಸತ್ತಿ ಸತ್ತಿಗೆ ದೊರೆಗಳು ಆರ್ಭಡಿಸಿ ಕುತ್ತಿಕುತ್ತಿಗೆ ಕೊಯ್ಯಲು
ಇತ್ತ ನಾರಾಯಣನು ಎರಳೆ ರೂಪನು ತಾಳಿ ಮತ್ತೆ ಓಡಲು ಕಂಡನು ॥ ೪೮ ॥

ನಳಿನನಾಭನ ಕಾಣುತಾ ಶರಭಯ್ಯ ಮುಳಿದು ಬಾಣದಲೆಚ್ಚಡೆ
ಸುಳಿಯದೆ ಗುಂಡಿಗೆಯ ಹಾಕಿ ಕೆಡಪಿದರಾಗ ಕಳವಳಿಸಿ ಧರೆಗುರುಳಿದ
ಕುಳಿಕುಳಿತು ಅಗ್ನಿಪುರುಷ ತಾ ತನ್ನ ಎಳಗನ ಬಿಟ್ಟೋಡುತ
ತುಳಿದು ಹಿಮ್ಮಡ ಹರಿಯೆ ಹೊಯ್ದು ನಾಲಿಗೆ ಕೊಯ್ದು ತಳಪಾದ ದೊಳೊರಸಿದ ॥ ೪೯ ॥

ವಿಷ್ಣು ಬೀಳಲು ಕಾಣುತ ಬ್ರಹ್ಮನು ಭ್ರಷ್ಟಾಗಿ ಓಡುತಿರಲು
ಪೋಟ್ಟುದಲೆ ಹಾರುವನ ಸಿಟ್ಟಲಾರ್ಭಟಿಸುತಲಿ ತೊಟ್ಟ ಬಾಣದೆಲೆಸೆಯಲು
ಪೆಟ್ಟು ತಾಗಲು ಬ್ರಹ್ಮಗೆ ಹಾಯೆನುತ ಕೆಟ್ಟ ಕೊರಳ್ದಾರ ತೊಡರಿ
ಹೊಟ್ಟೆಯೆದೆಗುಂಡಿಯು ಜುಟ್ಟು ನೆಗೆದಾಡುತಲಿ ಸೃಷ್ಟಿಗುರುಳಿದ ಬ್ರಹ್ಮನು ॥ ೫೦ ॥

ವೀರಶರಭನ ಕಾಣುತ ಕಂಗೆಟ್ಟು ಸೂರ್ಯಚಂದ್ರರು ಓಡಲು
ಮೀರಿ ಹೋಗಲುಗೊಡದೆ ತೂರಿ ಅಪ್ಪಳಿಸುತಲಿ ಧಾರುಣಿಯಲೊರಗಿಸಿದನು
ನಾರಿಯರಿಗಳುಪಿದವರು ಧರೆಯೊಳಗೆ ಘೋರಪಾತಕರೆನುತಲಿ
ಮೋರೆಮೋರೆಯ ಕಡಿದು ರಕ್ತದೊಳಗುರುಳಿಸಿದ ಬೇರುದಂತವ ಕಿತ್ತನು ॥ ೫೧ ॥

ಕಿಂಚಿತ ಜಗಳವಲ್ಲ ಆಕಟಕಟ ವಿರಿಂದಿ ಹುರಿಯಜರಳಿದರು
ಪಂಚಂಗಶಾಸ್ತ್ರಗಳ ಸುಡಹಾಕಿ ಸುರಗುರು ಮುಂಚಾಗಿ ಓಡುತಿರಲು
ವಂಚಿಸುತ ಶುಕ್ರಚಾರ್ಯ ಬ್ರಹಸ್ಪತಿಯು ಅಂಚುಧೋತ್ರವ ಹಿಡಿವುತ
ಪಂಚಮುಖದವನ ದಾಳಿ ಮೇಲುವರಿಯಿತು ಎಂದು ಪಿಂಚುಗುಂಟರು ಓಡಲು ॥ ೫೨ ॥

ಪಕಪಕನೆ ನಗುತಲಾಗ ಶರಭಯ್ಯ ದಿಕ್ಕರಿಗಳಾರ್ಭಟಿಸುತ
ಶಕುನಶಾಸ್ತ್ರವ ಪೇಳ್ವೆ ಕುಕುಟ ನಾಯಿಗಳೆಂದು ಶಿಖಿಯ ಬಾಣದೊಳೆಸೆಯಲು

ಮೊಕಹುಳಿದ ಕಣ್ಣೊಡೆವುತ ಶುಕ್ರನ ತಿಕ ಹರಿದು ಬೀಳುತಿರಲು
ಸುಖತದ ಬ್ರಹಸ್ಪತಿಯ ಶೂಲಬಾಣವು ತಾಗಿ ಲಿಖಿತ ಹರಿದುರುಳಿ ಕೆಡೆದ ॥ ೫೩ ॥

ಕಡಿದ ರಕ್ಕಸರು ಎದ್ದು ಬೊಬ್ಬಿಡುತ ಒಡೆಯ ಶರಭನ ಮುತ್ತಲು
ಮೃಡನ ಬೊಬ್ಬೆಯಾರ್ಭಟ ಕಂಡು ಕಂಗೆಟ್ಟು ಕಡಲು ಬೆದರುತ ಓಡಲು
ಸಿಡಿಲು ಮರಿಧ್ವನಿಗಳಿಂದ ತಾ ತನ್ನ ಕಿಡಿಯ ಉರಿಗಣ್ಣ ತೆಗೆದು
ಘುಡಿಘುಡಿ ಛಿಟಿಛಿಟಿಲು ಭುಗಿಭುಗಿಲು ಧ್ವನಿಗಳಿಗೆ ಮಡಿಮಡಿದು ಸಾವುತಿರಲು ॥ ೫೪ ॥

ಹಗಲುಗತ್ತಲೆ ಕವಿಯಲು ರಣದೊಳಗೆ ಬಗಿಬಗಿದು ಚಂಡಾಡುತ
ತೆಗೆತೆಗೆದು ಕರುಳುಗಳನುಗಿದು ಬಿಸುಟತಲಿ ನಗುನಗುತ ಭೂತಗಣವು
ಒಗುಮಿಗೆಯ ರಕ್ತರಣವ ಸವರುತಲಿ ಮಿಗಿಲು ದೈವದ ಗಂಡನ
ಖಗಮೃಗವು ಮರುಳು ಭೂತಗಳೆಲ್ಲ ಹರಸಿದವು ನೆಗೆನೆಗೆದಚು ಕುಣಿದಾಡುತ ॥ ೫೫ ॥

ಬಲುದುರ್ಗಿ ಚೌಡಮ್ಮನು ತಾ ತನ್ನ ಹಲವು ಭೂತಗಳ ಕೂಡಿ
ಬಲುಕೊಲೆಯ ರಕ್ತ ರಣಮಂಡಲಗಳ ಕಂಡು ನಿಲಗೊಡದೆ ಸವರುತಿಲು
ಚಲುವ ದೇವಂಗಋಷಿಯು ಖೇಚರದಿ ಇಳಿದು ಎರಗುತ
ಕುಲದೈವ ಎನ್ನ ಭಾಗ್ಯದ ಚೌಡಿ ಭಲಭಲರೆ ನೆಲದ ರಕ್ತವ ಬಿಡುಬಿಡು ॥ ೫೬ ॥

ಸನುಮತದ ಮಾತ ಕೇಳಿ ಚೌಡಮ್ಮ ಹನಿಬಿಂದು ರಗುತ ಬಿಡಲು
ಕೊನೆಮೊನೆಯು ಹುಟ್ಟಿ ಮೊಳಗಿನ ಗಿಡಗಳಾಗಿ ಘನತರವು ಇವಗಾಯಿತಿನ್ನು
ಮುನಿಯು ಕಳುಹಿಸಿಕೊಡತಲಿ ಚೌಡಮ್ಮ ರಣರಗುತ ಸಮರುತಿರಲು
ಬಿನುಗು ದೈವದಗಂಡ ವೀರಶರಭನ ಕೂಡೆ ಅನಲಕೊಂಡಕೆ ನಡೆದಳು ॥ ೫೭ ॥

ಚಂಡಿಚಾಮುಂಡಿಯರು ಕೂಡೆ ಚೌಡಮ್ಮ ದಂಡನೆಲ್ಲವ ನುಂಗುತ
ತುಂಡುಮುಂಡಿಲಿ ಬಿದ್ದು ಕಂಡ ರೋಹಿತಗಳನು ಉಂಡು ಡರ್ರನೆ ತೇಗುತ
ಕೊಂಡ ಯಜ್ಞಕ್ಕೆ ನಡೆಯಲು ಕಳವಳಿಸಿ ದಿಂಡುರುಳಿದರು ಹೋಮದಿ
ಚಂಡಿಕೆಯ ಬ್ರಾಹ್ಮಣರು ಕೋಟ್ಯಾನುಕೋಟಿ ಕೊಂಡಾಡಿದರು ಶರಭನ ॥ ೫೮ ॥

**ವಚನ :**

ಶರಣು ಶರಣು ತ್ರಾಹಿ ತ್ರಾಹಿ ಶರಭಯ್ಯ । ನಮ್ಮ
ಹರಣ ಪ್ರಾಣ ನಿಮ್ಮದಯ್ಯ ಶರಭಯ್ಯ
ಶರಣು ರಕ್ಷಾಮಣಿಯೆ ತ್ರಾಹಿ ಶರಭಯ್ಯ । ನಿಮ್ಮ
ಚರಣರಕ್ಷೆ ಹೊರುವೆನಿನ್ನು ಶರಭಯ್ಯ ॥ ೧ ॥



ಅರಿತುದಿಲ್ಲ ನಿಮ್ಮ ಮಹಿಮೆ ಶರಭಯ್ಯ । ಜಗದ
ಕುರಿಯ ಹಿಂಡು ನರಪಶುಗಳು ಶರಭಯ್ಯ
ಹಿರಿಯತನವನ ಮಡೋರಲ್ಲ ಶರಭಯ್ಯ । ನಾವು
ತಿರಿಯ ಬಂದ ಜೋಯಿಸರಯ್ಯ ಶರಭಯ್ಯ ॥ ೨ ॥

ಜೋಡು ಶ್ರೀಪಾದಗಳಿಗೆರಗಿ ಶರಭಯ್ಯ । ನಾವು
ಆಡಬಂದ ವಿಂಧ್ಯದವರು ಶರಭಯ್ಯ
ಕಾಡಿಬೇಡಿ ಒಡಲ ಹೊರೆವರು ಶರಭಯ್ಯ । ಪರ
ನಾಡ ಸೀಮೆ ಪರದೇಶಿಗಳು ಶರಭಯ್ಯ ॥ ೩ ॥

ಕೇಶಂಭಟ್ಟ ತಿರುಕಂಭಟ್ಟ ಶರಭಯ್ಯ । ವೇದ
ವ್ಯಾಸಂಭಟ್ಟ ಕೋನಂಭಟ್ಟ ಶರಭಯ್ಯ
ಲೇಸು ಒಳಿತು ಉಂಡೆವೆಂದು ಶರಭಯ್ಯ । ಬಾಳ
ಆಸೆಮಾಡಿ ಬಂದೆವಿಲ್ಲಿ ಶರಭಯ್ಯ ॥ ೪ ॥

ಲಿಂಗಣಭಟ್ಟ ತಿಮ್ಮಣಭಟ್ಟ ಶರಭಯ್ಯ । ದೋಸಿ
ಯಂಗಣಭಟ್ಟ ರಂಗಣಭಟ್ಟ ಶರಭಯ್ಯ
ತಂಗುಳ ಬಿಸಿಯನುಣ್ಣಲಿಲ್ಲ ಶರಭಯ್ಯ । ದಕ್ಷ
ನಂಗಳ ಕೋಣೆ ಸುಡಲಿನ್ನು ಶರಭಯ್ಯ ॥ ೫ ॥

ಉಣ್ಣಲಿ ಉಡಲಿ ಬಂದುದಿಲ್ಲ ಶರಭಯ್ಯ । ಕೋಡಿ
ಮಣ್ಣ ಹೊಯ್ಕೊ ಬಂದೆವಿಲ್ಲಿ ಶರಭಯ್ಯ
ಹೆಣ್ಣು ಮಕ್ಕಳು ದೋಸಿಕ್ಯಾರು ಶರಭಯ್ಯ । ಮೂರು
ಕಣ್ಣ ಶಿವನೆ ಕಾಯೊ ಕಾಯೊ ಶರಭಯ್ಯ ॥ ೬ ॥

ತೆಗೆದು ತೆಗೆದು ಉಂಡೆವೆಂದು ಶರಭಯ್ಯ । ಕೊಂಡ
ನಗಿದು ಅಗಿದು ಬಳಲಿದೆವೊ ಶರಭಯ್ಯ
ಹಗಲು ಇರುಳು ಉಪವಾಸವಿರ್ದು ಶರಭಯ್ಯ । ಕೆಟ್ಟ
ಹೊಗೆಯನುಣಲಿ ಬಂದೆವಿಲ್ಲಿ ಶರಭಯ್ಯ ॥ ೭ ॥

ಉಂಡುವುಟ್ಟು ಸುಖಿಸೇವೆಂದು ಶರಭಯ್ಯ । ಬಾಳ
ದಂಡಿಸಿದೆವೊ ಶರೀರಗಳನು ಶರಭಯ್ಯ
ಮಂಡಯಜ್ಞ ಸುಡಲಿ ಸುಡಲಿ ಶರಭಯ್ಯ । ಹೊಗೆಯ
ಕೆಂಡಲುಣಲಿ ಬಂದೆವಿಲ್ಲಿ ಶಂಭಯ್ಯ ॥ ೮ ॥

ತಂದೆತಾಯತಿಥಿಗಳೆಂದು ಶರಭಯ್ಯ। ಹರಿಗೋ
ವಿಂದರೆಲ್ಲ ತೆರಳಿ ಬಂದು ಶರಭಯ್ಯ
ಇಂದುಧರನ ಕಥನವೆಂದು ಶರಭಯ್ಯ। ಮನದಿ
ಒಂದಿಷ್ಟನು ಅರಿತುದಿಲ್ಲ ಶರಭಯ್ಯ ॥ ೯ ॥

ಅನ್ನದಾನ ಗೋದಾನಗಳ ಶರಭಯ್ಯ। ನಮಗೆ
ಹೊನ್ನದಾನ ಎರೆದಾನೆಂದು ಶರಭಯ್ಯ
ಮುನ್ನ ಆಸೆಮಾಡಿ ಬಂದೆವಿಲ್ಲಿ ಶರಭಯ್ಯ। ಇಂಥ
ಭಿನ್ನ ಕೃತಿಯ ಕಂಡುದಿಲ್ಲ ಶರಭಯ್ಯ ॥ ೧೦ ॥

ಬಿಡಿಸು ಬಿಡಿಸು ನಿಮ್ಮ ಧರ್ಮ ಶರಭಯ್ಯ। ರುದ್ರ
ಕಡಿದುಹಾಕು ಗರ್ವದವರ ಶರಭಯ್ಯ
ಒಡಲಿನಾಸೆ ವೈದಿಕಾರು ಶರಭಯ್ಯ। ನಮ್ಮ
ಹಡೆದ ತಂದೆ ರಕ್ಷಿಸಿನ್ನು ಶರಭಯ್ಯ ॥ ೧೧ ॥

ಮುಕ್ಕಣ್ಣೀಶ ಶಿವನೆ ಕೇಳು ಶರಭಯ್ಯ। ಜೀವ
ಕಕ್ಕುಲಿಗೆ ಕಳವಳಿಸುತಲಿ ಶರಭಯ್ಯ
ನಕ್ಕುನಕ್ಕು ಸೆರೆಯ ಬಿಟ್ಟು ಶರಭಯ್ಯ। ಮುಂದೆ
ದಕ್ಷನಿದ್ದ ಕಡೆಗೆ ಬಂದು ಶರಭಯ್ಯ ॥ ೧೨ ॥

ಧರ್ಮಸೆರೆಯ ಬಿಡುತಲಾಗ ಶರಭಯ್ಯ। ಯಜ್ಞ
ಕರ್ಮಗಳ ನೋಡಿ ಕಂಡ ಶರಭಯ್ಯ
ಕರ್ಮಯಜ್ಞ ಜಪಿಸುತಿರ್ದ ಗುರುರಾಯ। ದಕ್ಷನ
ಚರ್ಮನುಗಿದ ಕತೆಯ ಕೇಳು ಗುರುರಾಯ ॥ ೧೩ ॥

**ಪದನು :**

ಅತ್ತಿತ್ತ ಏಳಗೊಡದೆ ದಕ್ಷಣನ ಮುತ್ತಿಕೊಂಡನು ಬೇಗದಿ
ಸುತ್ತ ಇಪ್ಪತ್ತೇಳು ಸಾವಿರ ಬ್ರಾಹ್ಮಣರ ನೆತ್ತಿಗಳ ಚಂಡಾಡುತ
ಹತ್ತಿತ್ತು ವೀರಬೊಬ್ಬೆ ಆರ್ಭಟಕೆ ಸುತ್ತ ಕಾವಳ ಕವಿಯಲು
ಎತ್ತೆತ್ತಿ ತಿವಿತಿವಿದು ಒತ್ತೊತ್ತಿ ಒಗೆವುತಲಿ ಮತ್ತೆ ತನ್ನಯ ಕೋಪದಿ ॥ ೧ ॥

ಕೋಯೆಂದು ಕೂಗುತಿರಲು ದಕ್ಷಣನ ಬಾಯಬಾಯನು ಹೊಯ್ಯುತ
ಗಾಯಗಾಯವ ಮಾಡಿ ತುಳಿತುಳಿದು ತಿವಿತಿವಿದು ತಾಯಿತಂದೆಯ ಕೋಪದಿ



ಹಾಯೆಂದು ಬೊಬ್ಬಿಡುತಲಿ ದಕ್ಷಣನ ದೇವ ನರಸಿಂಹನಾಗಿ
ಮಾಯಾವತಾರ ತಾಳಿ ಸಾಯಕೊಲ್ಲುವೆನೆಂದು ಕಾಯುಶಕ್ತಿಲಿ ತೊಡರಿದ ॥ ೨ ॥

ಉಲಿದು ಬೊಬ್ಬೆಗಳಿಕ್ಕು ತಾ ದಕ್ಷಣನು ಹಲವು ಶಸ್ತ್ರಗಳ ಪಿಡಿದು
ಎಲುದೊಗಲು ನರಶಿರ ಹರಿದುಬೀಳೆಂದು ಮಲೆವುತಾರ್ಭಡಿಸಿ ಹೊಯ್ದು
ಕಿಲಕಿಲನೆ ನಗುತಲಾಗ ಶರಭಯ್ಯ ಭಲಭಲರೆ ಎನುತಲಾಗ
ಗೆಲಿಗೆಲಿದು ಪೆಟ್ಟುಗಳ ತೊಲಗನೂಕಲು ದಕ್ಷ ಬಲದ ಸತ್ವದಲಿ ಪಿಡಿದು ॥ ೩ ॥

ಅಬ್ಬರಿಸಿ ಅವಚಿಕೊಂಡು ವೀರಭದ್ರ ತಬ್ಬುಬ್ಬಿ ತಲ್ಲಣಿಸಲು
ಉಬ್ಬಿ ರೋಮಾದಿರೋಮಗಳೆಲ್ಲವೂ ಉಕ್ಕಿ ನಿಬ್ಬರದಲವಚಿಕೊಂಡ
ಬೊಬ್ಬೆಯಬ್ಬರ ಮಾಡಲು ದಕ್ಷಣನ ಗರ್ಭಗರ್ಭವ ಕಡಿಯಲು
ಕೊಬ್ಬು ಕೊಬ್ಬುಗಳಿಂದ ಸುಲಿಸುಲಿದು ಬಿದ್ದಿಹವು ಹೆಬ್ಬೆಟ್ಟ ಪರಿಯಂದದಿ ॥ ೪ ॥

ಮೆಟ್ಟಿ ಎದೆಗುಂಡಿಯನು ತುಳಿತುಳಿದು ನಿಟ್ಟೆಲುವುಗಳ ಮುರಿಯಲು
ಪುಟ್ಟಿದ ಉದ್ಧಟ ಕೋಪದಲಿ ಆರ್ಭಡಿಸಿ ಕುಟ್ಟಿದನು ದಕ್ಷನ ಶಿರವ
ದಿಟ್ಟದಕ್ಷನ ತಲೆಗಳ ಹೊಯ್‌ಹೊಯ್ದು ಬಿಟ್ಟರಗ್ನಗಳ ಒಳಗೆ
ಮೆಟ್ಟಿ ಬ್ರಹ್ಮನ ತಲೆಯ ಕುಟ್ಟಿಹಾಕಿದ ಬೇಗ ಚಿಟಿಲು ಚಿಟಿಲೆಂದೆನುತಲಿ ॥ ೫ ॥

ಪರಿಪರಿಯ ಕೂಳ್ಗಲ್ಲಿ ಗಣಪತಿಯು ಮಿರಮಿರನೆ ಮಿಂಚುತಿರಲು
ಹೆರರ ಒಡಲೊಡೆವುತಾ ಬಿದ್ದ ಪರಿಯನುಣ್ಣೆತುಲಿ ಭರದಿ ಒದೆದಾ ಕುಕ್ಷಿಯ
ಪರಪರನೆ ಒಡೆಲೊಡೆವುತಾ ಗಣಪತಿಯು ಹರಹರಾ ಎಂದೊರಗಲು
ಸುರಿಸುರಿದು ಚಿಗುಳಿ ತಂಬಿಟ್ಟು ಕಬ್ಬು ಕಡಲೆ ಹರಿಹರಿದು ಹೋಗುತಿರಲು ॥ ೬ ॥

ಕೂಡಿರ್ದ ವಾಣಿಪತಿಯು ಇದ ಕಂಡು ಓಡುತಿರಲು ಬೇಗದಿ
ಜಾಡಿಸಿದ ತುದಿಪಾದದಲಿ ಶರಭವತಾರ ಗೂಡುಗೆಡೆದಳು ಧರಣಿಗೆ
ಕಾಡಭೂತಗಳು ಬಂದು ಆರ್ಭಡಿಸಿ ಕೋಡಿ ಸತಿಯಳ ಬೈವುತ
ಮಾಡಿದಳಿವಳು ಕೃತಕದ ಯೋಮಗಳನೆಂದು ತೋಡಿದವು ಮೂಗುಗಳನು ॥ ೭ ॥

ಎಡಬಲದ ಕರ್ಮಿಗಳನು ಕೋಪದಲಿ ಕಡಿಕಡಿದು ಬಿಸುಟುತಿರಲು
ಒಡಲುಗಿವಿಮೂಗುಗಳ ಹರಿಹರಿದು ಬೀಳುತಲಿ ನಡನಡುಗಿ ಸಾವುತಿರಲು
ಒಡೆಯ ಶರಭನ ಕಾಣುತ ಯಜ್ಞದೊಳು ಮಡಿದ ಪಾರ್ವತಿ ಪೊರಡುತ
ಧಡಧಡನೆ ನಡೆದು ಮುಂಡಾಡಿ ತಕ್ಕೈಸುತಲಿ ಹಡೆದ ಮಗನೊಳಗೆರಗಲು ॥ ೮ ॥

ಮತ್ತೆ ಪಾದಗಳ ಪಿಡಿದು ಪಾರ್ವತಿಯು ಎತ್ತಿ ಮುಂಡಾಡಿ ಮಗನ
ಮಿತ್ತು ಮಾರಿಯ ಕೊಂದು ದಕ್ಷಣನ ಮರ್ದಿಸಿದೆ ಕರ್ತು ಶರಭತಾರನೆ

ಹೊತ್ತ ತಂದೆಯು ನನಗವ ಪ್ರಾಣಗಳನಿತ್ತು ರಕ್ಷಿಸು ಎಂದರೆ
ಕುತ್ತಿಗೆಯ ಕೊರೆದು ಕುರಿದಲೆಯನಿತ್ತು ರಕ್ಷಿಸಿದ ಪುತ್ರ ಶರಭವತಾರನು ॥ ೯ ॥

ಸುರರ ರಕ್ಷಸು ಎಂದಡೆ ಶರಭಯ್ಯ ಕರುಣದೃಷ್ಟಿಲಿ ನೋಡಲು
ಕರಿಮುಖನು ಸುರರು ದೇವಾದಿದೇವರ್ಕಳು ಶರಣು ಬೊಬ್ಬೆಗಳಿಕ್ಕುತ
ಎರಳೆರೂಪವ ತಾಳ್ದ ನರಹರಿಯು ಸುರಗಣವ ನೋಡುತ
ಅರರೆ ಭಲಭಲರೆ ಶರಭವತಾರ ಜಯತೆಂದು ಚರಣಪಾದಕೆ ಎರಗಲು ॥ ೧೦ ॥

ತೆಗೆದು ಎರಳೆಯ ಚರ್ಮವ ನರಹರಿಯು ಮಿಗಿಲು ಪಾದಕೆ ಧರಿಸಲು
ಮಗಮಗಿಪ ಸುರರು ಹೂವಿನ ಮಳೆಯ ಕರೆಸುತಲಿ ನೆಗೆನೆಗೆದು ಕೊಂಡಾಡುತ
ಮಗನ ಮುಂಡಾಡಿ ಎತ್ತಿ ಗೌರಮ್ಮ ಪೊಗಲು ಶ್ರೀಕೈಲಾಸವ
ಮಗಳು ಹಿಮಗಿರಿ ರಾಜನಾತ್ಮದಲಿ ಬಹೆನೆಂದು ಅಗಜೆ ವಿಸ್ಮಯ ಹೋದಳು ॥ ೧೧ ॥

ಅತ್ತ ಹಿಮಗಿರಿರಾಜಗೆ ಗೌರಮ್ಮ ಪುತ್ರಿಯವತಾರಿಯಾಗಿ
ಚಿತ್ತವಲ್ಲಭಶಿವನೆ ನಿಮ್ಮ ತಪಸನೆ ಮಾಡಿ ಅರ್ತಿಮದುವೆಗಳಾಗುತ
ಹೆತ್ತವರ ರಕ್ಷಿಸುತಲಿ ಗೌರಮ್ಮ ಇತ್ತ ಕೈಲಾಸಪುರದಿ
ಕರ್ತುಪಲ್ಲಭಶಿವನೆ ನಿಮ್ಮ ತೊಡೆಗಳ ಮೇಲೆ ಇತ್ತ ಸುಖದೊಳಗಿರುತಲಿ ॥ ೧೨ ॥

ಎಡಬಲದಿ ಬೊಬ್ಬಿಡುತಲಿ ಸುರಗಣವು ನಡೆದು ಮುಂದಕೆ ಸಾಗಲು
ಹೊಡೆವ ತಮ್ಮಟ ಭೇರಿ ಕಹಳೆ ಗದ್ದಣೆಯಿಂದ ನಡೆದ ಕೈಲಾಸಪುರಕೆ
ಒಡೆಯ ಪರಶಿವನೆ ನೋಡು ಮಗ ಬರುವ ಸಡಗರದ ಸಂಭ್ರಮಗಳ
ದಡಿಗ ದಾನ್ವರ ಗಂಡನೆಂದೆಂಬ ಕಾಳೆಗಳ ಹಿಡಿದು ಸಾರಿಸಿಕೊಳುತಲಿ ॥ ೧೩ ॥

ಹರಿಹರ ಶಿವನೆ ನೋಡು ಮಗ ಬರುವ ಭೂರಿವಾದ್ಯಗಳಿಂದಲಿ
ಮೀರಿದ ದಕ್ಷನ ಸೆರೆಯ ತರುತಹೆನೆಂದು ದೂರ ಮಾಡುತ ವಿಧಿಗಳು
ಮೂರು ಮೂರ್ತಿಗಳಿಗೆಲ್ಲ ಮುಕ್ತಿಗಳ ತೋರಿ ರಕ್ಷಿಪನೆ ಜಯತು
ವೀರಶರಭವತಾರ ಗದ್ದಲಿಸಿ ನಡೆದಲ್ಲಿ ಆರೆರಡು ಸಂಧಿ ಶರಣು ॥ ೧೪ ॥

ಸಂಧಿ ೮ಕ್ಕಂ ಕಂದ ೧, ವಚನ ೧೩, ಪದನು ೭೨,
ಉಭಯಕ್ಕಂ ೭೮೯ ಕ್ಕಂ ಮಂಗಳ ಮಹಾ ಶ್ರೀ ಶ್ರೀ

* * *



## ಗಂಗಿ ಗೌರೀ ಸಂವಾದ

೯

**ವಚನ :**

ನನ್ನ ಮಗನ ಅರ್ತಿ ಕೇಳು ಗುರುರಾಯ । ದೊಡ್ಡ
ಅನ್ಯ ದೈವ ಕೋಲಾಹಲ ಗುರುರಾಯ
ಬೆನ್ನ ಸೀಳಿ ಕರುಳನುಗಿವ ಗುರುರಾಯ । ಸಂ
ಪನ್ನ ತೆರಳಿ ಬರುತಲವನೆ ಗುರುರಾಯ ॥ ೧ ॥

ಮರುಳುತಂಡ ಕೂಡಿಕೊಂಡು ಗುರುರಾಯ । ದೊಡ್ಡ
ದುರುಳ ರಾಕ್ಷಸರು ಸೀಳಿ ಗುರುರಾಯ
ಮರಳಿ ದಂಡ ಕೂಡಿಕೊಂಡು ಗುರುರಾಯ । ಮುಂದೆ
ಸರಬಾಣಗಳು ಸರ್‍ರನೆ ಜೈಗಳು ಗುರುರಾಯ ॥ ೨ ॥

ಶಾಕಿನಿ ಡಾಕಿನಿಯರು ಗುರುರಾಯ । ಕೂಡಿ
ನೂಕುನುಗ್ಗು ದಂಡು ಬರಲು ಗುರುರಾಯ
ವಾಕುಪತಿಗೆ ಹೇಳಲಳವೆ ಗುರುರಾಯ । ಮಗನ
ಆಕಾರದ ಚೆಲ್ವಿಕೆಗಳು ಗುರುರಾಯ ॥ ೩ ॥

ಗಮನ ಹಾವಿಗೆಯ ಮೆಟ್ಟಿ ಗುರುರಾಯ । ಮೂರು
ಕ್ರಮದಿ ದಂಡು ಕೂಡಬರಲು ಗುರುರಾಯ
ಕ್ರಮಲಜರು ಉಗ್ಗಡಿಸುತಲಿ ಗುರುರಾಯ । ಕಾಲ
ಯಮನ ಎದೆದಲ್ಲಣಾಗೆ ಬಂದ ಗುರುರಾಯ ॥ ೪ ॥

ಬತ್ತೀಸಾಯುಧಗಳ ಕರ್ತ ಗುರುರಾಯ । ಬಹಳ
ಸತ್ತಿಗೆಗಳ ಸಾಲ ನೋಡು ಗುರುರಾಯ
ಮರ್ತ್ಯಲೋಕದೊಳಗೆ ಕೇಳು ಗುರುರಾಯ । ನನ್ನ
ಪುತ್ರಗಿನ್ನು ಸರಿಯುಂಟೆ ಗುರುರಾಯ ॥ ೫ ॥

ದಿಗಿಲುಗುಟ್ಟಿ ನಡೆದುಬರಲು ಗುರುರಾಯ । ದೊಡ್ಡ
ಭುಗಿಲು ಸುರರ ಎದೆಗಳನ್ನು ಗುರುರಾಯ
ಹಗಲು ಪಂಜುವೆಳಗಿನಿಂದ ಗುರುರಾಯ । ನನ್ನ
ಅರ್ತಿಗಳನು ನೋಡು ಗುರುರಾಯ ॥ ೬ ॥

ಹೊಕ್ಕುಬರಲು ಕೈಲಾಸಗಳ ಗುರುರಾಯ । ಸುರರು
ಇಕ್ಕೆಲದಲ್ಲಿ ಉಗ್ಗಡಿಸುತ ಗುರುರಾಯ
ದಕ್ಷನಳಿದು ರಕ್ಷಿಸಿದಿರಿ ಗುರುರಾಯ । ಎಂದು
ದಕ್ಕಣಿಸಿತು ವೇದಶಾಸ್ತ್ರ ಗುರುರಾಯ ॥ ೭ ॥

ಪ್ರಳಯವಾಗಿ ಹೋಗುವಂತೆ ಗುರುರಾಯ । ಪಟ್ಟಣ
ಮಳಿಗೆ ಮಾಳಿಗೆಗಳನೇರಿ ಗುರುರಾಯ
ಉಳುಹಿಕೊಂಡೆ ಕೈಲಾಸವನು ಗುರುರಾಯ । ಕೋಯೆಂದು
ತಿಳಿದು ನೋಡಿದಾರು ಮಗನ ಗುರುರಾಯ ॥ ೮ ॥

ಇಂತ ಮಗನನಾರು ಪಡೆದ ಗುರುರಾಯ । ಎಂದು
ಸಂತೆ ಪೇಟೆ ಬಾಜಾರಗಳು ಗುರುರಾಯ
ಕಾಂತೆ ಕಮಲಲೋಚನೆಯರು ಗುರುರಾಯ । ಮಗನ
ಪಂಥಬಿರುದ ಕೊಂಡಾಡುತಲಿ ಗುರುರಾಯ ॥ ೯ ॥

ವೀರಶರಭ ಸಾರಿಹೋಗಿ ಗುರುರಾಯ । ತನ್ನ
ಭಾರಿ ದಂಡ ಕೂಡಿಬರಲು ಗುರುರಾಯ
ಭೇರಿಶಂಖ ಭೋರುಗಳೆ ಗುರುರಾಯ । ನಿಮ್ಮ
ನಾರಾಯಣರು ಕೈಮುಗಿದವರೆ ಗುರುರಾಯ ॥ ೧೦ ॥

ನಾರಸಿಂಹನೊಡೆಯ ಬಂದ ಗುರುರಾಯ । ದಕ್ಷ
ಧ್ವರ ಕೆಡಿಸಿದಭವ ಬಂದ ಗುರುರಾಯ
ಶಾರದೆಯ ಮೂಗನರಿದ ಗುರುರಾಯ । ಎಂದು
ಚೋರುಗಹಳೆ ಸಾರುತಿವೆ ಗುರುರಾಯ ॥ ೧೦ ॥

ಅಸುರ ಸಂಹಾರಗಳ ಮಾಡಿ ಗುರುರಾಯ । ದೊಡ್ಡ
ಬಿಸಿಯಗಣ್ಣಿನ ಶರಭ ಬಂದ ಗುರುರಾಯ
ದೆಸೆಗೆ ಮಾನ್ಯರೊಡೆಯ ಬಂದ ಗುರುರಾಯ । ನನ್ನ
ಸಿಸುವು ನಡೆದು ಮನೆಗೆ ಬಂದ ಗುರುರಾಯ ॥ ೧೨ ॥

ಬಂದು ನಿಮಮ ಪಾದಕೆರಗಿ ಗುರುರಾಯ । ಬಲದಿ
ನಿಂದು ನೋಡುತಿರಲು ನಿಮ್ಮ ಗುರುರಾಯ
ಹಿಂದೆ ದಡ್ಡನಡ್ಡ ಬಿದ್ದು ಗುರುರಾಯ । ತ್ರಾಹಿ
ಎಂದು ನಿಮ್ಮ ಪಾದಕೆರಗಿ ಗುರುರಾಯ ॥ ೧೩ ॥

**ಸಂಗತ್ಯ :**

ತ್ರಾಹಿ ಶರಣ ರಕ್ಷಮಣಿಯೆ ತ್ರಿಪುರಾಂತಕ
ತ್ರಾಹಿ ಮೂಲಾತ್ಮ ಓಂಕಾರಿ



ತ್ರಾಹಿ ತಾರಕ ಬ್ರಹ್ಮಸ್ವಯಂ ಜ್ಯೋತಿನಾ ಸರ್ವ
ದ್ರೋಹಿಯೆ ಜನ್ಮ ಜನ್ಮದಲಿ ॥ ೧ ॥

ಪಶುಪತಿ ಪರಶಿವ ಎಸೆವ ನಾಟಕಧಾರಿ
ದಶಭವದಲಿ ಬಂದ ಹರಿಯು
ಬಿಸುರುಹ ಚರಣನೆಸೆದು ಕಾಣದೆ ಹೋದ
ಕಸಮಾನವ ನಾನರಿವೆನೆ ॥ ೨ ॥

ಹರಿಯಜರೋದಿಸಿ ನಿಮ್ಮ ಪಾದವ ಕಾಣ್ದ
ನರಗುರಿ ಪಶುಪ್ರಾಣಿ ನಾನು
ಅರಿಯದೆ ಬಲ್ಲೆನೆ ನಿಮ್ಮ ಶ್ರೀಚರಣವ
ದೊರೆರಾಯ ಪ್ರಭುವೆ ಪಾಲಿಪುದು ॥ ೩ ॥

ಚರ್ಮವ ಕಚ್ಚಿದ ದುರ್ಮರಣ ಶುನಿಯಂತೆ
ನಿರ್ಮಳ ಹೃದಯ ರತ್ನವನು
ವರ್ಮನವರಿಯದೆ ಧರ್ಮ ಕಾನನದಲ್ಲಿ
ಕರ್ಮಕೀಡಾದೆ ಧರ್ಮಗುರುವೆ ॥ ೪ ॥

ಮಲದೊಳಗಣ ಹುಳ ಲಲನೆಯಮೃತವುಂಡು
ಮಲಗಬಲ್ಲುದೆ ಶಯನದಲಿ
ಹಲವು ಜನ್ಮದಿ ಬಂದ ಮಲದೇಹಿ ಅರಿವನೆ
ಕಲೆಯ ಬ್ರಹ್ಮದ ನಿಜರೂಪ ॥ ೫ ॥

ನಾಗಶಯನಾರ್ಚಿತ ಪಾದಸೇವೆಯ ಕೊಂಡ
ಭೋಗಿಯೆ ಗಿರಿಜೆವಲ್ಲಭನೆ
ಕೂಗುವ ವೇದಶಾಸ್ತ್ರಕ್ಕೆ ದೂರನೆ ಭವ
ರೋಗ ವೈದ್ಯನೆ ಜಯಜಯತು ॥ ೬ ॥

ಸ್ತುತಿಸಲು ಪರಶಿವ ಅತಿ ನಸುನಗುತಲಿ
ಗತಿಯೇನು ಬೇಡುಬೇಡೆನಲು
ಸತಿಪತಿಗಳು ಬಂದು ಶ್ರುತಿಪಾದಕೆರಗಲು
ಗತಿಯೇನು ಬೇಡುವೆ ಗುರುವೆ ॥ ೭ ॥

ತಾಮಸ ತಲೆಗೇರಿ ಹೋಮವನಿಕ್ಕಿದೆ
ಭೂಮಿಯಾಕಾಶವನಾರ್ಭಡಿಸೆ
ಕಾಮವೈರಿಯೆ ನಿಮ್ಮ ಆ ಮಹಾಪಣಿಯೊಳ್ ನಿ
ಸ್ಸೀಮ ಶರಭವತಾರಾ ॥ ೮ ॥

ಪಟ್ಟಿಯಾರ್ಭಡಿಸುತ ಕುಟ್ಟಿದ ತಲೆಯನು
ಸುಟ್ಟುದನೇನ ಪೇಳುವೆನು
ಮೋಟರುಂಡವ ಕಂಡು ದಿಟ್ಟಿಸಿ ಕುರಿದಲೆ
ಇಟ್ಟು ರಕ್ಷಿಸಿದ ಕೇಳಭವ ॥ ೯ ॥

ಇನ್ನೊಂದು ಗತಿಮತಿ ನನಗುಂಟೆ ಗುರುರಾಯ
ಚೆನ್ನಶರಭನ ಶ್ರೀಚರಣ
ಅನ್ಯೋನ್ಯವಿಲ್ಲದೆ ಪೂಜೆಯುಕ್ತಿಗಳೆಂದು
ಬಿನ್ನೈಸಲು ಪರಶಿವನು ॥ ೧೦ ॥

ಮನದಭಯಕೆ ನಿಂತು ತನುಜನನಪ್ಪಿಕೊಂಡು
ವನಿತೆಯ ಕೈಗಿತ್ತ ಶಿವನು
ಘನ ಭೀಮರತಿ ಗಂಗೆ ಮನದೊಳುತ್ಸವಗೊಂಡು
ತನುಜನ ಬಿಗಿದಪ್ಪಿಕೊಳುತ ॥ ೧೧ ॥

ಕಂದನೆ ಬಾ ನನ್ನ ಮಂದಿರ ಚಂದ್ರನೆ
ಅಂದಳರಸ ಬಾರೆನುತ
ಕುಂದುಳಗೆಲಸದ ಚಂದಾದ ಗಿಳಿ ನನ್ನ
ತಂದೆ ಬಾರೆಂದು ಮುಂಡಾಡೆ ॥ ೧೨ ॥

ಬಾಲಚಂದ್ರನೆ ಬಾರೊ ಮೂಲೋಕದರಸನೆ
ಪಾಲುಸಮುದ್ರದ ತನುಜ
ಲೋಲಚೆನ್ನಿಗ ಬಾರೊ ಅಲಯದರಸೆಂದು
ಲಾಲಿಸಿ ನೋಡಿ ಕೊಂಡಾಡೆ ॥ ೧೩ ॥

ಕರ್ತವಲ್ಲಭ ನನ್ನ ಪುತ್ರನುತ್ಸವಗಳ
ಅರ್ತಿಗಳನು ನೋಡು ಶಿವನೆ
ಮುತ್ತುಮಾಣಿಕ ನವರತ್ನದಾರತಿಗಳ
ಎತ್ತಿ ಬೀರುತ ಸಂವಾದಿಗಳ ॥ ೧೪ ॥

ಜಂಗುಳಿದೈವದ ಗಂಡ ಶಿವನ ಪಾ
ದಾಂಘ್ರಿ ಕಮಲದೊಳಗಿರಿಸಿ
ರಂಗುದುಟಿಯರೆಲ್ಲ ಶೃಂಗರಿಸಿ ಎತ್ತುತ
ಮಂಗಳಾರತಿಗಳ ಕೇಳಭವ ॥ ೧೫ ॥

**ಮಂಗಳಾರತಿ ಪದನು :**

ಮಂಗಳಾರತಿಗಳನೆತ್ತಿರೇ
ಮುಕ್ತಿ ಗಂಗೆ ಪಾರ್ವತಿ ಪುತ್ರನಿಗೆ ॥ ಪಲ್ಲ ॥



ರುದ್ರನ ಉರಿಗಣ್ಣಿನಿಂದ ಹುಟ್ಟಿದ
ವೀರಭದ್ರನು ಶರಭವತಾರನಿಗೆ
ಕ್ಷುದ್ರ ದೈವಗಂಡ ಚಿದ್ರೂಪ ದೇವಗೆ
ಭದ್ರಕಾಳಮ್ಮನರಸನಿಗೆ ॥ ೧ ॥

ಉರಿಗಣ್ಣ ಬೆವರಿಂದ ಪುಟ್ಟಿದ ರುದ್ರಂಗೆ
ನರಹರಿಯನು ಸಂಹರಿಸಿದಂಗೆ
ಮರಳಿ ಪ್ರತಿಷ್ಠೆಯ ಮಾಡಿ ವಂದಿಸಿಕೊಂಬ
ತರುಳೆ ಭಾಗೀರಥಿ ಪುತ್ರನಿಗೆ ॥ ೨ ॥

ಕಾಮನ ವೈರಿಯ ಮಗ ವೀರಭದ್ರಗೆ
ಗ್ರಾಮ ಮೂರನು ಸುಟ್ಟ ಪುತ್ರನಿಗೆ
ಹೇಮದ ಬೊಂಬೆಗಳಾರತಿ ಪಿಡಿಕೊಂಡು
ಭೀಮರತಿ ಶಿವನಪುತ್ರನಿಗೆ ॥ ೩ ॥

ಮಾಣಿಕದಾರತಿಯೆತ್ತಿ ನಿವಾಳಿಸಿ
ಪ್ರಾಣಪದಕ ಬ್ರಹ್ಮನಿಗೆ
ವಾಣಿಯು ಹರಿಕೃಷ್ಣ ವೇಣಿಯರೆಲ್ಲರು
ಜಾಣ ಚೆನ್ನಿಗ ಶರಭಯ್ಯನಿಗೆ ॥ ೪ ॥

ಕದನ ಪ್ರಚಂಡಗೆ ಕಲಿವೀರಭದ್ರಗೆ
ವಿಧಿಯ ಮೃತ್ಯುವಿನೆದೆದಲ್ಲಣಗೆ
ಆದರು ಮಾಣಿಕ ನವರತ್ನಹಾರವನಿತ್ತ
ಚದುರು ಚೆನ್ನಿಗ ಶರಭಯ್ಯನಿಗೆ ॥ ೫ ॥

ಹಿಂಡು ದೈವದ ಗಂಡ ಖಂಡ ಸಾಹಸನಿಗೆ
ಚಂಡಿಭೂತಗಳೆದೆದಲ್ಲಣಗೆ
ಕಂಡಿಸಿ ಯಜಬಾಧೆಯ ಪರಿಹರಿಪಂಗೆ
ದುಂಡುದೋಳಿನ ಜಾಣ ಚದುರೆಯರೆಲ್ಲ ॥ ೬ ॥

ಪರವಾದಿ ದಕ್ಷನ ಶಿರವನರಿದು ಮತ್ತೆ
ಕುರಿದಲೆಯನು ಇತ್ತು ರಕ್ಷಿಪಂಗೆ
ಹರಿಯಜ ಸುರ ಶಿರಮಾಲೆಯ ಧರಿಸಿದ
ಶರಣ ಭರಣ ಕಲ್ಪವೃಕ್ಷನಿಗೆ ॥ ೭ ॥

ಬೆಳಗುತ ಮಗನನು ಒಳಯಕೆ ಕರದೊಯ್ದು
ಸೆಳೆಮಂಚದ ಮೇಲೆ ಕುಳ್ಳಿರಿಸಿ
ದಳದಳನೆ ಹೂವಿನ ಮಳೆಯನು ಸುರಿವುತ
ನಳಿನ ಶ್ರೀಪಾದಕೆರಗುತಲಿ ॥ ೮ ॥

ಮುರವೈರಿ ಪೂಜಿತ ಪರಬ್ರಹ್ಮ ಶಿವ ಕೇಳು
ಶರಭವತಾರನ ಕಥೆಗಳನು
ಹರಹರ ಗುರುಸಂಗಮೇಶ್ವರ ನಿಮ್ಮಯ
ಚರಣಕಮಲ ಪೂಜೆ ಸ್ಥಿರವೆಮಗೆ ॥ ೯ ॥

**ವಚನ :**

ಬಣ್ಣದಾರತಿಗಳನೆತ್ತಿ ಗುರುರಾಯ । ಜಗದ
ಕಣ್ಣದೃಷ್ಟಿ ಮುರಿವೆ ನಾನು ಗುರುರಾಯ
ಹೆಣ್ಣು ಸೊಸೆಯು ಭದ್ರಕಾಳಿ ಗುರುರಾಯ । ನನ್ನ
ಪುಣ್ಯ ಮಗನ ಬಯಕೆ ಬಂತು ಗುರುರಾಯ ॥ ೧ ॥

ಇಂತು ಮಗನ ಸಂಭ್ರಮದಲ್ಲಿ ಗುರುರಾಯ । ನನ್ನ
ಭ್ರಾಂತುಭ್ರಮೆಯು ದಕ್ಕಿತಿನ್ನು ಗುರುರಾಯ
ಚಿಂತಾಯಕನೆ ಜಯತು ಜಯತು ಗುರುರಾಯ । ಜಗದ
ಸಂತೋಷವೆ ಜಯತು ಜಯತು ಗುರುರಾಯ ॥ ೨ ॥

ಚೆನ್ನಬಸವೇಶ್ವರನೆ ಕೇಳು ಗುರುರಾಯ । ಗಂಗೆ
ತನ್ನ ವಶದಿ ನುಡಿದಳಾಗ ಬಸವಯ್ಯ
ಭಿನ್ನಭಾವ ಭ್ರಮೆಯ ಬಿಡಿಸಿ ಬಸವಯ್ಯ । ಏಕ
ವನ್ನು ಮಾಡಿ ಕೂಡಿಸಿದನು ಬಸವಯ್ಯ ॥ ೩ ॥

ರಂಗುರತ್ನ ಕೇಳುಕೇಳು ಎಲೆ ಗಂಗೆ । ನಿನ್ನ
ಹಿಂಗಲರಿಯ ಹೆತ್ತ ಕುಮಾರನೆಲೆ ಗಂಗೆ
ಅಂಗ ಲಿಂಗ ಸಂಗಪ್ರಾಣಿ ಎಲೆ ಗಂಗೆ । ಶಾಂತಿ
ಕಂಗಳಿಂದ ಜನಿಸಿ ಬಂದ ಎಲೆ ಗಂಗೆ ॥ ೪ ॥

ಕೇಳುಕೇಳು ನವಮಾಣಿಕವೆ ಎಲೆ ಗಂಗೆ । ಈ
ರೇಳು ಲೋಕ ನಿನ್ನ ಮಕ್ಕಳೆಲೆ ಗಂಗೆ
ಗಾಳಿಪ್ರಾಣ ಬ್ಯಾರೆ ಇಹುದೇನೆಲೆ ಗಂಗೆ । ನನ್ನ
ಕೋಳುಕೊಂಡಳು ಗಿರಿಜೆದೇವಿ ಎಲೆ ಗಂಗೆ ॥ ೫ ॥

ಚಂದ್ರಕಳೆಗೆ ಭಿನ್ನವುಂಟೆ ಎಲೆ ಗಂಗೆ । ಪೂರ್ವ
ಒಂದೆ ರೂಪವು ಶರೀರ ಬೇರೆ ಎಲೆ ಗಂಗೆ
ಎಂದು ನಿಮಗೆ ಭೇದವಿಲ್ಲ ಎಲೆ ಗಂಗೆ । ನನ್ನ
ಕಂದುಗೊರಳ ಶಿವನ ಮಡದಿ ಎಲೆ ಗಂಗೆ ॥ ೬ ॥

ಪ್ರಕಟು ಪಾರುಪತ್ಯಗಳನು ಎಲೆ ಗಂಗೆ । ನಿನ್ನ
ಮುಖದೊಳಿನ್ನು ನಡೆಸುವೆನು ಎಲೆ ಗಂಗೆ



ಮುಕ್ತಬೀಜ ನಡೆದು ಹೋಗಿ ಎಲೆ ಗಂಗೆ । ನಿನಗೆ
ಸುಕೃತ ಉಂಟು ಗಿರಿಜೆಗೆರಗೆ ಎಲೆ ಗಂಗೆ ॥ ೭ ॥

ನಿನ್ನ ಅರ್ತಿ ಅವಳ ಅರ್ತಿ ಎಲೆ ಗಂಗೆ । ನಮ್ಮ
ಚನ್ನಶರಭ ನಿನ್ನ ಮಗನು ಎಲೆ ಗಂಗೆ
ಕನ್ಯೆಗೌರಿ ಪ್ರಾಣ ನಿನಗೆ ಎಲೆ ಗಂಗೆ । ನನ್ನ
ಹೊನ್ನಪುತ್ಥಳಿಯ ಬೊಂಬೆ ಎಲೆ ಗಂಗೆ ॥ ೮ ॥

ಇಂದುಧರನ ನುಡಿಯ ಕೇಳಿ ಗುರುರಾಯ । ಇಳಿದು
ಬಂದು ಪಾದಕೆರಗಿದಾಳು ಗುರುರಾಯ
ನೊಂದುಬೆಂದು ಜರೆದು ನುಡಿದೆ ಅಕ್ಕಯ್ಯ । ಹೀ
ಗೆಂದು ಪಾದಕೆರಗಿದಳೊ ಗುರುರಾಯ ॥ ೯ ॥

ಬಾಲನುಡಿಯ ಮನದೊಳಿಡದೆ ಅಕ್ಕಯ್ಯ । ನನ್ನ
ಹಾಲ ಸಮುದ್ರದ ಗಿರಿಜೆ ಅಕ್ಕಯ್ಯ
ಶೂಲಧರನ ಶಿವನ ಮಡದಿ ಅಕ್ಕಯ್ಯ । ನನ್ನ
ಪಾಲಿಸಿದಿರಿ ಪರಮೇಶ್ವರಿಯೆ ಅಕ್ಕಯ್ಯ ॥ ೧೦ ॥

ನಾನು ನೀನೇ ನೀನು ನಾನೆ ಅಕ್ಕಯ್ಯ । ಮುಕ್ತಿ
ಜ್ಞಾನಕೊಂದು ದಾರಿನೋಡು ಅಕ್ಕಯ್ಯ
ಹೀನಮಾಡಿ ಬಿನ್ನೈಸುವಿರಿ ಅಕ್ಕಯ್ಯ । ಹಂದಿ
ಶ್ವಾನ ಯೋನಿಜನ್ಮ ನೋಡು ಅಕ್ಕಯ್ಯ ॥ ೧೧ ॥

ಕ್ರಿಯೆಶಕ್ತಿ ನೀನು ಕಾಣೆ ಅಕ್ಕಯ್ಯ । ನಾನು
ಮೈಯೊಳಗಣ ಜ್ಞಾನಶಕ್ತಿ ಅಕ್ಕಯ್ಯ
ಕ್ರಿಯೆಜ್ಞಾನ ಏಕವಿನ್ನು ಅಕ್ಕಯ್ಯ । ಶಿವನ
ಲೀಲೆ ಪದವಿ ಮುಕ್ತಿ ನಮಗೆ ಅಕ್ಕಯ್ಯ ॥ ೧೨ ॥

ಗಿರಿಜೆಗಂಗೆ ಬೇರೆಂಬರಿಗಕ್ಕಯ್ಯ । ಮುಂದೆ
ವರಹಜಲ್ಮ ತಪ್ಪದಿನ್ನು ಅಕ್ಕಯ್ಯ
ಹರನ ಕಪಟ ನಟನಾಟಕಾವೆ ಅಕ್ಕಯ್ಯ । ನಿನ್ನ
ಚರಣದೊಳಗೆ ಬೆರೆಸಿಕೊಳ್ಳ ಅಕ್ಕಯ್ಯ ॥ ೧೩ ॥

ಪಿಡಿದು ಎತ್ತಿ ತಕ್ಕೈಸುತಲಿ ಎಲೆ ತಂಗಿ । ನಮ್ಮ
ಪಡೆದ ತಾಯಿ ಒಬ್ಬಳಿನ್ನು ಎಲೆ ತಂಗಿ
ನಡೆಯು ನುಡಿಯು ಒಂದಾದಂತೆ ಎಲೆ ತಂಗಿ । ನನ್ನ
ಒಡಲು ಭಾಗೀರಥಿಯೆ ನೀನು ಎಲೆ ತಂಗಿ ॥ ೧೪ ॥

ಎತ್ತಿಕೊಂಡು ತಕ್ಕೈಸುತಲಿ ಎಲೆ ತಂಗಿ । ಶಿವನ
ನೆತ್ತಿ ಮಾಣಿಕದ ಬೊಂಬೆ ಎಲೆ ತಂಗಿ
ಹೆತ್ತಮಗನ ತಕ್ಕೊಂಡು ನೀನೆ ಎಲೆ ತಂಗಿ । ದೇವ
ಮರ್ತ್ಯಲೋಕಗಳ ಪಾಲಿಸು ಎಲೆ ತಂಗಿ ॥ ೧೫ ॥

ಅಕ್ಕತಂಗಿಯರೇಕವಾಗಿ ಗುರುರಾಯ । ಜಗದ
ಮುಕ್ಕಣ್ಣೇಶಗೆರಗಿದಾರು ಗುರುರಾಯ
ಸಿಕ್ಕುತೊಡಕು ಭೇದವಿಲ್ಲ ಗುರುರಾಯ । ಶಿವಗೆ
ಸಕ್ಕರೆಯ ಗುಟುಕಾದರಾ ಗುರುರಾಯ ॥ ೧೬ ॥

ಜಗದ ಕಪಟ ನಟನಾಟಕನೆ ಗುರುರಾಯ । ನೋಡಿ
ಮುಗುಳು ನಗೆಯ ನಗುತಲಿದ್ದು ಗುರುರಾಯ
ಜಗದ ಜಗಳ ಕಥನ ತಾಳ್ದಲೆಂದು ಗುರುರಾಯ । ತನ್ನ
ಅಗಜೆಯಪ್ಪಿ ಕೊಂಡಾಡಿದನು ಗುರುರಾಯ ॥ ೧೭ ॥

ಸ್ತುತಿಸಲಳವೆ ನಿಮ್ಮ ಘನವನೆಲೆ ಗೌರಿ । ನನ್ನ
ರತುನ ಮಾಣಿಕದ ಹರಳೆ ಎಲೆ ಗೌರಿ
ಮತಿಗೆ ಮಾತೆ ಮಂತ್ರಜಾತೆ ಎಲೆ ಗೌರಿ । ಚಿಕ್ಕ
ಸತಿಯ ನೀನು ನಡಸಿಕೊಳ್ಳಿ ಎಲೆ ಗೌರಿ ॥ ೧೮ ॥

ಅಪ್ಪಿಕೊಳುತ ಕಳುಹಿಕೊಡಲು ಗುರುರಾಯ । ತನ್ನ
ಕರ್ಪುರದ ಜ್ಯೋತಿ ಮನೆಗೆ ಗುರುರಾಯ
ಪುಷ್ಪ ಮಳೆಯ ಕರಸುತಾಗ ಗುರುರಾಯ । ಮನೆಯೊ
ಳೊಪ್ಪಿ ಸುಖದೊಳಿರ್ದರಾಗ ಗುರುರಾಯ ॥ ೧೯ ॥

ಗಿರಿಜೆಗಂಗೆ ವೀರಗಣಪ ಗುರುರಾಯ । ಮುಕ್ತಿ
ಅರಮನೆಯನು ಹೊಕ್ಕರಾಗ ಗುರುರಾಯ
ಶರಣ ಭಕ್ತಗಣ ತಿಂತಿಣಿಯು ಗುರುರಾಯ । ಅವರ
ಪರಿಣಾಮಕ್ಕೆ ಜಯತು ಜಯತು ಗುರುರಾಯ ॥ ೨೦ ॥

ಜಾಗು ಭಲರೆ ಉಘೆ ಎಂದೆನುತ ಗುರುರಾಯ । ದಿವ್ಯ
ಯೋಗಿ ಮುನಿಗಳೊಡೆಯ ಶಿವನೆ ಗುರುರಾಯ
ಭೋಗಿ ಗಿರಿಜೆ ಗಂಗೆಯರನು ಗುರುರಾಯ । ಮುಕ್ತಿಯೋಗ ಮನೆಯೊಳಿಟ್ಟು
ಮೆರೆದ ಗುರುರಾಯ ॥ ೨೧ ॥

ವರಮಾಣಿಕದ ಸಿಂಹಾಸನದಿ ಗುರುರಾಯ । ನಮ್ಮ
ಗುರುವು ಸಂಗಮೇಶ್ವರನಿರಲು ಗುರುರಾಯ



ನರರು ಸುರರು ಹರಿಯಜರು ಗುರುರಾಯ । ಶಿವಗೆ
ಸುರಿದರಿನ್ನು ಪೂಮಳೆಗಳನು ಗುರುರಾಯ ॥ ೨೨ ॥

ಅಕ್ಷಿ ಮೂರುಳ್ಳ ಭವಭಕ್ತಿ ಗುರುರಾಯ । ಜಗವ
ರಕ್ಷಿಸುತಲಿ ಸುಖದೊಳಿರಲು ಗುರುರಾಯ
ಕುಕ್ಷಿಭರಿತಿ ಜಗದ ಮಂತ್ರಿ ಬಸವಯ್ಯ । ನನ್ನ
ರಕ್ಷಿಸುವ ಧರ್ಮಗುರುವೆ ಗುರುರಾಯ ॥ ೨೩ ॥

ವಚನಪದದಿ ಸಂಗತ್ಯದಲಿ ಬಸವಯ್ಯ । ಗುರುವು
ರಚಿಸಿ ಪೇಳ್ದ ಶ್ರುತಿ ಸಂಗತಿಯ ಬಸವಯ್ಯ
ಶುಚಿಯ ಶರಣ ಭಕ್ತ ಜನಕೆ ಬಸವಯ್ಯ । ನಿಮ್ಮ
ರಚನೆ ಪ್ರಭೆಗೆ ಶರಣು ಜಯತು ಬಸವಯ್ಯ ॥ ೨೪ ॥

ಹರಿವ ಹಳ್ಳ ಕೊಳ್ಳ ನೀರು ಬಸವಯ್ಯ । ದೊಡ್ಡ
ಸರಧಿಯೊಳಗೆ ಬೆರಸಿದಂತೆ ಬಸವಯ್ಯ
ಅರವುಮರವು ಪಾಪಪುಣ್ಯ ಬಸವಯ್ಯ । ನಿಮ್ಮ
ಕರುಣ ಶರಧಿಯೊಳಗೆ ಐಕ್ಯ ಬಸವಯ್ಯ ॥ ೨೫ ॥

ಬಾಲಕೃತಿಗೆ ಬಸವಣ್ಣನು ಗುರುರಾಯ । ಹಣ್ಣು
ಹಾಲು ಮಧುರದಂತೆ ಗುರುರಾಯ
ಅಲ್ಲಿ ಸುಖಿಸಿ ಸತಿಪತಿಗಳು ಗುರುರಾಯ । ಮುಕ್ತಿ
ಆಲಯದೊಳು ಸುಖದೊಳಿರಲು ಗುರುರಾಯ ॥ ೨೬ ॥

ಕೇಳಿ ಹೇಳಿ ನುತಿಸಿದವರ್ಗೆ ಗುರುರಾಯ । ಕರ್ಮ
ಗಾಳಿಗಿಟ್ಟ ಸೊಡರಿನಂತೆ ಗುರುರಾಯ
ಏಳೇಳು ಜಲ್ಮಕರ್ಮಗಳನು ಗುರುರಾಯ । ಕಳೆದು
ಬಾಳಲೋಚನ ರಕ್ಷಿಸುವನು ಗುರುರಾಯ ॥ ೨೭ ॥

ಗಂಗೆಗೌರಿ ರಮಣ ಜಯತು ಗುರುರಾಯ । ನಮ್ಮ
ತುಂಗಭದ್ರಿಯರಸ ಜಯತು ಗುರುರಾಯ
ಅಂಗಜಹರನೆ ಜಯತು ಜಯತು ಗುರುರಾಯ । ಗುರುವೆ
ಸಂಗಮೇಶ ಜಯತು ಜಯತು ಗುರುರಾಯ ॥ ೨೮ ॥

**ಪದನು :**

ಶರಣುಶರಣಾರ್ಥಿ ಗುರುವೆ ನೀನೆನ್ನ ಮರಣವ ಪರಿಹರಿಪನೆ
ಧಾರುಣಿ ಬ್ರಹ್ಮಾಂಡಗಳ ಸೂತ್ರ ಪಿಡಿದಾಡಿಪನೆ ಶರಣಜನ ರಕ್ಷಾಮಣಿಯೆ ॥ ಪಲ್ಲ ॥

ಆಡಬಲ್ಲನೆ ಕಾಷ್ಟದ ಬೊಂಬೆಗಳು ಕಡಿಬೇಡುವ ಗತಿಗಳ
ಹಾಡಿಹರಸುವ ನೋಟಬೇಟಕೂಟಗಳೆಂಬನಾಡದೆ ನೀನೀಗ ವೇಷವ
ಹೂಡಿ ಸೂತ್ರಗಳ ಹಣ್ಣಿ ಬೊಂಬೆಗಳನಾಡಿಸಿದರಾಡುತಿಹೆವು
ರೂಢಿಗೀಶ್ವರ ಗುರುವೆ ನಿಮ್ಮ ಚೈತನ್ಯದಿಂದಾಡಿತಿಹುದಖಿಳ ಲೋಕ ॥ ೧ ॥

ಬಣ್ಣ ಬಣ್ಣದ ಬೊಂಬೆಯಾ ಗುರುರಾಯ ಕಣ್ಣು ಮನಜಿಹ್ವೆಗಳಿಗೆ
ಪುಣ್ಯಪಾಪಗಳೆಂಬ ಬಲೆಯ ಜವೆಗಳ ಹೂಡಿ ಹಣ್ಣಿಸಿದರಾಡುತಿಹೆವು
ಹೆಣ್ಣು ಬಾಲೆಯ ಯೌವನ ಸ್ತ್ರೀಫಲಗಳನುಣ್ಣಿಸುಣ್ಣಿಸಿ ನೋಡುತ
ಕಣ್ಣು ಮೂರುಳ್ಳ ಕರುಣಾಂಬುಧಿಯೆ ಪರಶಿವನೆ ಪುಣ್ಯಪಾಪವು ನಿಮ್ಮವು ॥ ೨ ॥

ಯತಿಮನದ ಹೃತ್ಕಮಲನೆ ದ್ಯುತಿಗಿರಿಜೆ ಸಂವಾದದ
ಕಹನ ಬ್ರಹ್ಮಾಂಡ ಪೌರಾಣದೊಳು ಸಾರಿದವು ಶ್ರುತಿವೇದಶಾಸ್ತ್ರಗಳಲಿ
ಸಿತಕಂಠ ಶಿವಗಂಗೆಯ ಸ್ಥಲದೊಳಗೆ ಯತಿ ಮಹಾಮುನಿರಾಯಗೆ
ಸತಿಯರಿಬ್ಬರ ಜಗಳ ಸಂವಾದಗಳ ಕೇಳಿ ಪೇಳಿದಾರೆನೆ ॥ ೩ ॥

ಧರೆಗೆ ಕೈಲಾಸವೆನಿಪ ಶಿವಗಂಗೆ ನವರತ್ನ ಖಚಿತವಾದ
ಹಿರಿಯ ಸಿಂಹಾಸನದ ಗುರುಸಂಗಮೇಶ್ವರನ ಕರಕಮಲದಲಿ ಜನಿಸಿದ
ಗಿರಿಜೆಗಂಗೆಯ ಜಗಳವ ಕೇಳಲೆಂದೊರೆದೆ ಶಿವಶರಣ ಜನಕೆ
ಗುರುಚರಣಕಮಲ ಸೇವಾನುಸೇವಕನಾದ ತರುಳ ಚರಪತಿ ಪೇಳ್ದನು ॥ ೪ ॥

ಜಯಜಯತು ಗುರುರಾಯ ನೀನೆನ್ನ ಭವಭವ ಪರಿಹರಿಪನೆ
ನಯನ ಪಂಚೇಂದ್ರಿಗಳ ಕರ್ಮಾದಿ ದ್ರೋಹಿಗೆ ಭಯದ ಭೀತಿಯನಳಿಪನೆ
ಸ್ವಯವಾಗಿ ಕರಸ್ಥಲದಲಿ ನಿಲಿಸೆನ್ನ ಮಾಯಪಾಶವ ಖಂಡಿಸಿ
ದಯಕರುಣ ಕೃಪೆಯಿಟ್ಟು ರಕ್ಷಿಸುವ ಗುರುರಾಯ ಜಯಜಯತು ಗುರುವೆ ॥ ೫ ॥

**ಶ್ಲೋಕ :**

ಸರ್ವಕರ್ಮ ವಿನಿರ್ಮುಕ್ತ ಸರ್ವಸಂಗ ವಿವರ್ಜಿತಃ ।
ಸರ್ವದೇವ ದಯಾಶಾಂತ ಪಾಹಿಮಾಂ ಗುರುಪುಂಗವ ॥
ಶುದ್ಧರೂಪಾತ್ಮಕಃ ಪಾಹಿಪಾಹಿ ಪರಮಾತ್ಮರೂಪ ।
ಪಾಹಿಮಾಂ ಪರಮಂ ದೇವಂ ಶ್ರೀಮನ್ಮಾಹೇಶ ಪಾಹಿ ಮಾ ॥

ಸಂಧಿ ೯ಕ್ಕಂ ಶ್ಲೋಕ ೨, ವಚನ ೪೧, ಪದನು ೧೪,
ಸಂಗತ್ಯ ೧೫ ಉಭಯಕ್ಕಂ ೮೬೧ ಕ್ಕಂ ಮಂಗಳ ಮಹಾ ಶ್ರೀ ಶ್ರೀ

* * *



## ೭. ಶಿವ ಯಾರಿಗೆ ಒಳ್ಳೆಯವ

ಸಣ್ಣ ಸಣ್ಣ ಮಲ್ಲಿಗಿ ತಂದು
ಸಣ್ಣ ತುರುಬಿಗೆ ಮುಡಿಸುವೆ ಬಂದು
ಗಂಗಾ ಎನಗೆ ಒಪ್ಯಾಳಣ್ಣ। ಒಂದೆ ಮಾತಿಗೆ।
ಮರುಳಾದೆನಕ್ಕ ಶಿವ ಯಾರಿಗೆ ಒಳ್ಳೆಯವ

ಎಡಗೈಯಲ್ಲಿ ಜೋಳಗಿ ಧರಿಸಿ
ಬಲಗೈಯಲ್ಲಿ ಬೆತ್ತವ ಧರಿಸಿ
ದೂರೆಲ್ಲ ಸೀಮಿ ಜೋಗಿ ಬಂದು
ಬಾಗಿಲದೊಳಗ ನಿಂತಾರಕ್ಕ। ಒಂದೆ ಮಾತಿಗೆ।
ಮರುಳಾದೆನಕ್ಕ ಶಿವ ಯಾರಿಗೆ ಒಳ್ಳೆಯವ

ಮುತ್ತಲ ತುಂಬ ಮುತ್ತ ತುಂಬಿಕೊಂಡೆನು
ನಿಸ್ತ್ರಿ ನಾನು ನೀಡುತಲಾದೆ
ಜೋಳಿಗೆನ್ನ ಗಾಳಿ ಬಂದು
ದೂಳಮಾಡಿ ಒಯ್ದಾರೆನ್ನ। ಒಂದೆ ಮಾತಿಗೆ।
ಮರುಳಾದೆನಕ್ಕ ಶಿವ ಯಾರಿಗೆ ಒಳ್ಳೆವನ

ಎಡಗೈಯಲ್ಲಿ ರುದ್ರಾಕ್ಷಿ ಧರಿಸಿ
ಬಲಗೈಯಲ್ಲಿ ತ್ರಿಶೂಲ ಧರಿಸಿ
ದೂರೆಲ್ಲ ಸೀಮಿ ಜೋಗಿ ಬಂದು
ಬಾಗಿಲದೊಳಗ ನಿಂತಾರಕ್ಕ। ಒಂದೆ ಮಾತಿಗೆ।
ಮರುಳಾದೆನಕ್ಕ ಶಿವ ಯಾರಿಗೆ ಒಳ್ಳೆವನ

ಜಾಲಗಾರನ ಮಗಳವ್ವ ನಾನು
ತುಂಬಿ ತುಳಕಾದಲ್ಲಾಡುತಿದ್ದೆ
ನಂಬಿಗೆ ಮಡಿ ತಂದಾರೆನ್ನ
ಮಂದಿ ಬಳಕ ಕೂಡಿಸಲಿಲ್ಲ। ಒಂದೆ ಮಾತಿಗೆ।
ಮರುಳಾದೆನಕ್ಕ ಶಿವ ಯಾರಿಗೆ ಒಳ್ಳೆವನ

ಜಾಲಗಾರ ಮಗಳವ್ವ ನಾನು
ಜಾಲ ಜಳಕದಲ್ಲಾಡುತ್ತಿದ್ದೆ
ಜಾಲ ಮಡಿ ತಂದಾರೆನ್ನ
ತಂದಿ ತಾಯಿ ಕೂಡಸಲಿಲ್ಲ। ಒಂದೆ ಮಾತಿಗೆ।
ಮರುಳಾದೆನಕ್ಕ ಶಿವ ಯಾರಿಗೆ ಒಳೈವನ

ಕಲ್ಲ ಕಟಿಸಿದ ಬಾವ್ಯಾಗಿರುವೆ
ಬಿಲ್ಲಪತ್ತುರಿ ಪೂಜೀಗೊಳುವೆ
ಅಪ್ಪ ಬಸಮ್ಣ್ಣ ರಾಜಾ ಕೇಳಾ
ಮೆಚ್ಚಿ ಮಾಡಿ ತಂದಾರೆನ್ನ। ಒಂದೆ ಮಾತಿಗೆ।
ಮರುಳಾದೆನಕ್ಕ ಶಿವ ಯಾರಿಗೆ ಒಳೈವನ

* * *



## ೮. ನರಗುಂದದ ಗೌರೀ ಹುಣ್ಣಿಮೆ

**(ಸಾಂಗತ್ಯ)**

ಗೌರೀ ಹುಣ್ಣಿಮೆಯ ಶೃಂಗಾರವ ಹೇಳುವೆ
ಕುಳಿತಿದ್ದ ಜನರೆಲ್ಲಾ ಕೇಳಿರಿನ್ನ।
ಚೆಂದುಳ್ಳ ಚೆಲುವ ವೆಂಕಟಪತಿ ಬರುವಂಥ
ತಾರೀಫ–ಎಷ್ಟೆಂತ ಹೇಳಲಿ ನಾ ॥ ೧ ॥

ಪ್ರಾತಃಕಾಲದಲ್ಲಿ ಅರ್ಥಿಯಿಂದ ಪ್ಯಾಟ
ತಳಿರು ತೋರಣ ಕಟ್ಟಿ ಶೃಂಗರಿಸಿ।
ಗಳಿಗೆ ಹೊತ್ತೇರಲು ಗಡದ ಮೇಲಿನ ತೋಫು
ಢಡಲೆಂದು ಹಾರಿತು ಭೂಮಿಗದ್ದರಿಸಿ ॥ ೨ ॥

ಜರಿಪಟ್ಟದಾನಿ–ಡಂಕೆ ನಿಶಾನೀ–
ಕಾಲಾಳು ಬಂದೂಕ ಕಡೆಯಿಲ್ಲವು।
ಕಡು ಚೆಲ್ವ ಹೊರಟರ ಬೆಳ್ಳಿ ಸುರಾವಳಿ
ಸಬಳಗಟ್ಟಿಗಿ ಮಂದು ಸಾಲಿಟ್ಟು ಬರಲು ॥ ೩ ॥

ಕನಡಿಯ ಉತ್ಸವ ಕಮಲದ ಗದ್ದುಗಿ
ರತ್ನ ಕೆಚ್ಚಿದ ಚೆಂದ ಮೂರ್ತಿಗಳು।
ಛತ್ರ ಚಾಮರದಿಂದ ಅರ್ಥಿಯಲೆ ಬರುವಂಥ
ಮರ್ತ್ಯಲೋಕದಿ ಮಹೀಪತಿಯ ಕಂಡೆ ॥ ೪ ॥

ಕರ್ನಾಟಕ್ ಹಿಂದುಸ್ತಾನೀ ಪಾತರದ ಮೇಳ
ನಗಾರಿ ನೌಬತ್ತು ಕರಡಿ ಕೈತಾಳ।
ಲಕ್ಷಗಟ್ಟಲೆ ಪರಿಸಿ ಕೋಡೇದ ಬಹಳ
ಎಷ್ಟೆಂತ ಹೇಳಲಿ ಗಡೆಕಾರರ ಗೋಳ ॥ ೫ ॥

ಪ್ಯಾಡಿ ಹಿಡಿದು ಮಂದಿ ದಾಟಿ ಹೋಗಿ ಕೆಂ–
ಪಗಸೀ ತೋಟದ ಮಧ್ಯ ಕುಳಿತರಿನ್ನ।
ಕೂಟ ನಡೆಸುವಂಥ ಸರಕಾರೀ ಜನರೆಲ್ಲಾ
ದ್ರಾಕ್ಷದ ನೆರಳಲ್ಲಿ ಕುಳಿತರು ಬೇಗ ॥ ೬ ॥

ಚಂಡು ಹೂವಿನ ಸಾಲು ದುಂಡು ಮಲ್ಲಿಗೆ ಸಾಲು
ಸೂರೇಪಾನದ ಸಾಲು ಸುತ್ತುಗಟ್ಟಿದವೋ।

ಸಿರಿವಾಸವುಳ್ಳ ಸುಗಂಧದ ಗೊನೆಯೋ ....
ಲಾಮಂಚ ಮುಡಿವಾಳ ಪಚ್ಚದ ತೆನೆಯೋ ॥ ೭ ॥

ಅಗರ ಕುಚ್ಚದ ಮ್ಯಾಲೆ ಅಡಕೀ ಹೂನಿನ ಸಾಲು
ಬಾಗಿ ಬಳುಕುವಂಥಾ ಬಾಳೆಯ ಗೊನೆಯೋ ।
ಮಿಗಿಲಾದ ಗಜನಿಂಬಿ ಸಂಪಿಗೆ ತೆನೆಯೋ
ಕೆಂಗಣಿಗಿಲ ದಾಸಾಳದ ಗೊನಿಯೋ ॥ ೮ ॥

ಹಾರುವ ತೋರಣ ತೂರುಗೊಂಬು ಬಾಣ
ಭೋರೆಂಬ ಚಿನಿಕಾಳಿ ಕರ್ಣಿಗಳು ।
ಮೇಲೆ ಮಂಟಪದೊಳು ನೌಬತ್ತು ಖಾನೆ
ಎದುರಿಗೆ ನಿಂತಿರುವ ಶೃಂಗಾರದಾನೆ ॥ ೯ ॥

ಲಕ್ಷ್ಮೀರಮಣಗೆ ಲಕ್ಷ ತುಳಸಿಯ ಏರಿಸಿ
ರಾತ್ರಿಯಲಿ ಹೋಮವ ಮಾಡಿದರು ।
ಲಕ್ಷ್ಮೀರಮಣ ಗೋವಿಂದ ನಮೋ ಎಂದು
ಮೃಷ್ಟಾನ್ನ ನೈವೇದ್ಯ ಮಾಡಿದರು ॥ ೧೦ ॥

ಸುತ್ತಲಿನ ಬ್ರಾಹ್ಮಣರು ನೆರೆದರು ಉತ್ಕೃಷ್ಣ
ಹೆತ್ತುಪ್ಪ ಹೋಳಿಗಿ ಭೋಜನಕೆ ।
ಮುತ್ತಯ್ದೆಯರನು ಚಿಕ್ಕ ಬಾಲಕರನ್ನು
ಒತ್ತಿ ಕರಣಿಯೂದಿ ಕರೆದರು ಬೇಗ ॥ ೧೧ ॥

ಎಡಬಲಕೆ ಹಚ್ಚಿರುವ ಕಾರ್ತಿಕ ಬಹಳ
ಚಂದ್ರಜ್ಯೋತಿಯಂತೆ ಹೊಳೆವುದು ಥಳಥಳ ।
ಬನದೊಳಗೆ ಮದ್ದಿನ ಅರ್ಭಾಟ ಬಹಳ ....
ಮದ್ದಿನ ಹಾರಿಕೆಗೆ ಎದ್ದಿತು ಧೂಳ ॥ ೧೨ ॥

ಸರದಾರ ಶಿಲೆದಾರ ಎಲ್ಲರು ಕೂಡಿ
ಹೆಚ್ಚಿನ ಕಾರಕುನರು ಬೈಠಕು ಮಾಡಿ ।
ತಾಳ ತಂಬೂರಿಯ ಮ್ಯಾಳವ ಮಾಡಿ
ತಿಮ್ಮಪ್ಪ ಗೋಸಾವಿ ಕಥೆಯನ್ನು ಮಾಡಿ* ॥ ೧೩ ॥

---

* ಈ ಪದ್ಯ ಅಪೂರ್ಣವೆಂದು ತೋರುವುದು.



## ೯. ಬೆಳಿಯೋ ಬಿಳಿಜ್ವಾಳ ...

ಬೆಳಿಕಂಡೆ ಬೆಳಿಕಂಡೆ ನಮ್ಮ ಹೊಲಾ ಬೆಳಕಂಡೆ
[1]ಇಬ್ಬಂಗಿ ಕಾಟಽ ಕಡಽಲೀಯ । ಬೆಳಿಯೋ ಬಿಳಿಜ್ವಾಳವ ॥
ಇಬ್ಬಂಗಿ ಕಾಟ ಕಡಲಿ ಗೋದಿಗಳು
ಇಬ್ಬರೊಂದಾಗಿ ಬೆಳೆದಾರ ಬಿಳಿಯೊ ಬಿಳಿಜ್ವಾಳವ ॥ ೧ ॥

ಕಡಲೀಯ ಗಿಡನಾದೆ ಕಡಲೀಯ ಮರನಾದೆ
ಕಡೀಯ ಮಾಳಿಗೆ ತೊಲಿನಾದೆ । ಬೆಳಿಯೊ ॥
ಕಡೀಯ ಮಾಳಿಗೆ ತೊಲಿನಾದೆ [2]ಈಶ್ವರನ
ಮಡದೇರ ಕುಂದ್ರುವ ಮಣಿನಾದೆ । ಬೆಳಿಯೊ ॥ ೨ ॥

ಹೂಗಾರ ಮನೀಗಿ ಹ್ವಾದಾನು ಶೀತಲ
ಹೂವಿನ ಬಾಸಿಂಗ ತಗ ತಂದ । ಬೆಳಿಯೋ ...
ಹೂವಿನ ಬಾಸಿಂಗ ತಗತಂದು ಹೂಡ್ಯಾನ
ಹೂವ ಮ್ಯಾಲೆಂಬ ಎರಡೆತ್ತ॥ ಬಿಳಿಯೊ ... ॥ ೩ ॥

ಕಂಚಗಾರ ಮನಿಗಿ ಹೋದಾನ ಶೀತಲ
ಕಂಚಿನ ಬಾಸಿಂಗ ತಗತಂದ । ಬೆಳಿಯೊ ....
ಕಂಚಿನ ಬಾಸಿಂಗ ತಗತಂದು ಹೂಡ್ಯಾನ
ಕಂಚು ಮಿಂಚೆಂಬ ಎರಡೆತ್ತ॥ ಬೆಳಿಯೊ .... ॥ ೪ ॥

ಜ್ವಾಳಾದ ಎಲಿಯಾಗ ಸೀಳಿಕುಂಕುಮ ತುಂಬಿ
ಜಾಣೇರ ಬರ್‍ರಿ ನಮ್ಮ ಹೊಲಕ । ಬೆಳಿಯೋ ....
ಜಾಣೇರ ಬರ್‍ರಿ ನಮ್ಮ ಹೊಲಕ ಶೀತಲ
ನಾಣ್ಯಾವ ಹಾಸಿ ಶರಣೆಂದ ॥ ಬೆಳಿಯೋ .... ॥ ೫ ॥

ಹತ್ತಿಯ ಎಲೆಯಾಗ ಒತ್ತಿ ಕುಂಕುಮ ತುಂಬಿ
ಮಿತ್ರೇರ ಬರ್‍ರಿ ನಮ್ಮ ಹೊಲಕ । ಬಿಳಿಯೋ ....
ಮಿತ್ರೇರ ಬರ್‍ರಿ ನಮ್ಮ ಹೊಲಕ ಬಮ್ಮಣ್ಣ
[3]ಪಟ್ಟೋಳಿ ಹಾಸಿ ಶರಣೆಂದ ॥ ಬೆಳಿಯೋ ... ॥ ೬ ॥

---

೧ ಇಬ್ಬಂಗಿ > ಇರ್ಬಗೆ – ಎರಡು ಬಗೆ, ಎರಡು ವಿಧದ.
೨. ಈಶ್ವರನ ಮಡದೇರು – ಗಂಗೆ ಗೌರಿ
೩. ಪಟ್ಟೋಳಿ – ಪಟ್ಟಾವಳಿ (ರೇಶಿಮೆಯ ಬಟ್ಟೆಗಳು)

ಎಳ್ಳ ಹೊಲದಾಗ ಹೋಗಿ ನಿಂತಕಿನ್ಯಾರ
ಎಳ್ಳ ಹೂವಿನ ಸೀರಿ [1]ನಿಲಿಭಾಳ। ಬೆಳಿಯೊ ...
ಎಳ್ಳಹೂವಿನ ಸೀರಿ ನಿಲಿಭಾಳ ಶೀತಲವ
ತಾಯಿ ಬಂದಾಳ ಹೊಲ ನೋಡ॥ ಬೆಳಿಯೊ ... ॥ ೭ ॥

ಹತ್ತಿಯ ಹೊಲದಾಗ ಹೋಗಿ ನಿಂತಕಿನ್ಯಾರ
ಹತ್ತೂವಿನ ಸೀರಿ ನಿಲಭಾಳ। ಬೆಳಿಯೊ
ಹತ್ತೂವಿನ ಸೀರಿ ನೀಲಿಭಾಳ ಶೀತಲನ
ಅಕ್ಕ ಬಂದಾಳ ಹೊಲ ನೋಡ॥ ಬೆಳಿಯೊ ... ॥ ೮ ॥

ಹಂಡೆತ್ತ ಬಮ್ಮಣ್ಣ ಷುಂಡೆತ್ತ ಶೀತಲ
ಬಂಡಿಯ ಮೊದಲೆತ್ತ [2]ಸೂರಣ್ಣ। ಬೆಳಿಯೋ ...
ಬಂಡಿಯ ಮೊದಲೆತ್ತ ಸೂರಣ್ಣ ಇವರು ಮೂವರು
ತೊಂಡಲ ಸುಷ್ಮಾನ ಮುಡಿಮ್ಯಾಲ॥ ಬೆಳಿಯೋ ... ॥ ೯ ॥

ಹರದಿ ಬಾಳಮ್ಮ ಹವಳ ಉಡಿಯಲಿ ಕಟ್ಟಿ
ಹರಗಲ್ಲಿ ಹೋಗ್ಯಾರ ನಿಮ್ಮರಸ। ಬೆಳಿಯೊ ...
ಹರಗಲ್ಲಿ ಹೋಗ್ಯಾರ ನಿಮ್ಮರಸ ಸೂರಣ್ಣ
ಹವಳ ಬಿತ್ತಿ ರತ್ನ ಬೆಳೆದಾರ॥ ಬೆಳಿಯೊ ... ॥ ೧೦ ॥

ಮಿತ್ರಿ ಸುಷ್ಮಕ್ಕ ಮುತ್ತ ಉಡಯಲಿಕಟ್ಟಿ
ಬಿತ್ತಲ್ಲಿ ಹೋಗ್ಯಾರ ನಿಮ್ಮರಸ। ಬೆಳಿಯೊ ...
ಬಿತ್ತಲ್ಲಿ ಹೋಗ್ಯಾರ ನಿಮ್ಮರಸ ಬಸುರಾಜ
ಮುತ್ತ ಬಿತ್ತಿ ರತ್ನ ಬೆಳೆದಾರ॥ ಬೆಳಿಯೊ ॥ ೧೧ ॥

ಸೀತನಿ ಸುಲಗಾಯಿ ಮಾತಿನ ಉಮ್ಮಿಗಿ
[3]ಗೋಪ ನಿಮ್ಲೊಲಕ ಮೆಲಿಯ ಬಂದ। ಬೆಳಿಯೊ
ಗೋಪ ನಿಮ್ಲೊಲಕ ಮೆಲಿಯ ಬಂದ ಶೀತಲ
ಭೂಪ [4]ಮೆಂಚಿಗಿ ಇಳದಾನ॥ ಬೆಳಿಯೊ ॥ ೧೨ ॥

೧ ನಿಲಿ – ನಿಲಿಗೆ (ಸೀರೆಯ ನಿರಿಗೆ)
೨. ಸೂರಣ್ಣ – ಶ್ರೀಕಾಂತಮ್ಮನವರ ಎರಡನೆ ಮಗ.
೩. ಗೋಪ – ವೃಷಭ, ನಂದಿ, ದನಗಾಹಿ ಅಥವಾ ಗೊಲ್ಲ. ಗೋವುಗಳ ಒಡೆಯ ಕೃಷ್ಣ.
೪. ಮೆಂಚಿಗಿ – ಹೊಲದಲ್ಲಿ ಹಕ್ಕಿಗಳನ್ನು ಹೊಡೆಯಲು ಕಾವಲು ಕಾಯಲು ಹಾಕಿದ ಎತ್ತರವಾದ ಅಟ್ಟಣಿಗೆ.



## ೧೦. ಹನುಂತನ ಹಾಡು

ಹಾಸಗಲ್ಲಿನ ಮ್ಯಾಲ [1]ಬೆಸಿ ಮಾಡಿ ಕಟದಾರ
ದೇಸ್ಯಾ ಮುದಗಲ್ಲ ಕುಟಗಾರ ಸುಯ್।
ದೇಸ್ಯಾನೆ ಮುದಗಲ್ಲ ಕುಟಗರ ಹಣಮಾ ನಿನಗ
ಮೀಸಿಭಾವಂಕ ಕಟದಾರ ಸುಯ್॥ ॥ ೧ ॥

ದುಂಡಗಲ್ಲಿನ ಮ್ಯಾಲ ಚಂದಮಾಡಿ ಕಟದಾರ
ಚಂದ್ರ ಮುದಗಲ್ಲ ಕುಟಗಾರ ಸುಯ್।
ಚಂದ್ರಾನೆ ಮುದಗಲ್ಲ ಕುಟಗಾರ ಹಣಮಾ ನಿನಗ
ಚಂದಭಾವಂಕ ಕಟದಾರ ಸುಯ್॥ ॥ ೨ ॥

ಅಣ ನಿನ್ನ ಗುಡಿಯಾಗಽ ಸಣ್ಣುಸುಕ ತಿಳಿನೀರ
ಕನ್ಯರ ನಿಲಿಯ ಮಳಲೊತ್ತೆ ಸುಯ್।
ಕನ್ಯರ ನಿಲಿಯ ಮಳಲೊತ್ತಿ ಕೈಯ್ಯಾನ
ಹೊನ್ನಿನ ಕಳಸ ಜತನವ ಸುಯ್॥ ॥ ೩ ॥

ಅಪ್ಪ ನಿನ್ನ ಗುಡಿಯಾಗ ದೊಡ್ಡುಸುಕ ತಿಳಿನೀರ
ಮಿತ್ರೇರ ನಿಲಿಯ ಮಳಲೊತ್ತೆ ಸುಯ್।
ಮಿತ್ರೇರ ನಿಲಿಯ ಮಳಲೊತ್ತಿ ಕೈಯ್ಯಾನ
ಮುತ್ತಿನ ಕಳಸವ ಜತನವ ಸುಯ್॥ ॥ ೪ ॥

ಆರು ಬೆರಳಿಗಾರ ದ್ವಾರೆದುಂಗುರನಿಟ್ಟು
ದೀವಿಗಿಗಿ ಎಣ್ಣೆ ಎರದಾರ ಸುಯ್।
ದೀವಿಗಿಗಿ ಎಣ್ಣೆ ಎರೆವ ಪೂಜಾರಿಗಿ
ಮೂಗಳದ ಭೂಮಿ ಉಣಕೊಡರೆ ಸುಯ್॥ ॥ ೫ ॥

ಹತ್ತು ಬೆರಳಿಗ್ಹತ್ತು ಮುತ್ತಿನುಂಗುರನಿಟ್ಟು
ಬತ್ತೀಗಿ ಎಣ್ಣೆ ಎರದಾರ ಸುಯ್।
ಬತ್ತೀಗಿ ಎಣ್ಣಿ ಎರೆವ ಪೂಜಾರಿಗಿ
ವಕ್ಕಳದ ಮಾನ್ಯ ಉಣಕೊಡರೆ ಸುಯ್॥ ॥ ೬ ॥

೧ ಬೆಸ – ಅಪ್ಪಣೆ, ಆಜ್ಞೆ, ಸೇವೆ, ಕೆಲಸ.

ಅಪ್ಪ ನಿನ್ನ ಗುಡಿಯಾಗ ಕಪ್ಪ ಮೂಗಿನಾಕಿ
ಕಪ್ಪ ತುಂಬ್ಯಾ ಗರಿಗರಿಯ ಸುಯ್ ।
ಕಪ್ಪಾನೆ ತುಂಬ್ಯಾರ ಗರಿಗರಿ ಗೌಡರ ಕೈಯಲಿ
ರೊಕ್ಕ ಬೇಡ್ಯಾರ ಚಕ್ರಕ ಸುಯ್ ॥

ಅಣ್ಣ ನಿನ್ನ ಗುಡಿಯಾಗ ಸಣ್ಣ ಮೂಗಿನಾಕಿ
ಬಣ್ಣ ತುಂಬ್ಯಾರ ಗರಿಗರಿಯ ಸುಯ್ ।
ಬಣ್ಣಾನೆ ತುಂಬ್ಯಾರ ಗರಿಗರಿ ಗೌಡರ ಕೈಯಲಿ
ಹೊನ್ನ ಬೇಡ್ಯಾರ ಕಳಸಕ ಸುಯ್ ॥ ॥ ೮ ॥

ಅಂದುಳ್ಳ ಗುಡಿಯಾಗ ಚಂದ ಮಾಡಿ ಕುಂತಾರ
ಚಂದ್ರಮುಖಿಯೆಂಬ ದೊರಿಕುಂತ ಸುಯ್ ।
ಚಂದ್ರಾಣೇ ಮುಖಿಯೆಂಬ ದೊರಿಕುಂತ ಮಾಡ್ಯಾರ
ಖಂಡಗದ ಕಡಲಿ ಪನಿವಾರ ಸುಯ್ ॥ ॥ ೯ ॥

ಅಕ್ಕ ಗೌರಮ್ಮ ತನ್ನ ನೆತ್ತಿನ ತೆಳಗಿರುವ
ಕಪ್ಪವುಳ್ಳ ಐದು ಮುತ್ತ ತಗದ ॥ ಜಯಮಂಗಲಂ ....
ಮಿತ್ರಿ ಸುಸಮಕ್ಕಾಗ ಬಾಬಾ ಎನುತಲಿ
ಪುತ್ರಾನ ಸಂತಾನ ಕೊಡುತಿಹಳ ॥ ಜಯಮಂಗಲಂ ... ॥ ೧೦ ॥

* * *



## ೧೧. ಲೇವಡಿ ಪದ

ಬಾಗಿಲುಬಿಡೋ ನನ್ನ ಬಾಯ್ಬುದರ ತಳವಾರ
ಬಾಯ್ತುಂಬ ಅಡಕಿ ಬಿಳಿ ಎಲಿಯ । ಪಾರಿಜಾತದ ಹೂವ ನಡಿಮನಿಗೆ ॥ ಪಲ್ಲ ॥

ಅಂಗಡೆಂಗಡಿಗುಂಟ ಅಂಗಾರ್ವೋಳಿಗಿ ಕದ್ದ
ಉಂಗುರ ಕದ್ದ ಬೆರಳಿಗಿ ಪ್ರಶಾಂತ
ಚಂದುಳ್ಳ ಮೂಗ ಕಳಕೊಂಡ ॥ ಪಾರಿಜಾತಾದ್ಹೂವ ... ॥ ೧ ॥

ಬಾಜಾರ್ವಾಬಾರ ಗುಂಟ ಬಾರೀ ಹಣ್ಣಾಕದ್ದ
[1]ಲ್ಯಾವಳ ಕದ್ದ ಬರಳೀಗಿ ॥ ಪಾರಿಜಾತದ್ಹೂವ ... ॥
ಲ್ಯಾವ್ರೂಳಾವ ಕದ್ದ ಬರಳಿಗಿ ಚಂದ್ರಪ್ಪ
ಛಾಯುಳ್ಳ ಮೂಗ ಕಳಕೊಂಡ ॥ ಪಾರಿಜಾತಾದ್ಹೂವ ... ॥ ೨ ॥

ಆಚ್ಯಾಕೀಚಲಮರ ಈಚ್ಯಾಕೀಚಲಮರ
ನಟ್ಟ ನಡುವ ಕುಂತ ಜಪಮಾಡ ॥ ಪಾರಿಜಾತಾದ್ಹೂವ ...
ನಟ್ಟ ನಡುವ ಕುಂತು ಜಪ ಮಾಡ ಮಾವಯ್ಯಾಗ
ಉಪದೇಶ ಕೊಟ್ಟಾವ ಹಳಿನಾಯ ॥ ಪಾರಿಜಾತಾದ್ಹೂವ ... ॥ ೩ ॥

**ಚಪ್ಪಾಳೆಯಿಕ್ಕುತ ಹಾಡುವ ಕೋಲು ಪದ**

ಕೋಲು ಕೊರಳಾದ್ದಕ್ಕಿ ನೀಲವರ್ಣದ ಪಕ್ಷಿ
ಹಾರಿತವ್ವ ಹಕ್ಕಿ ಗಗನಕ ಕೋಲ ॥ ॥ ಪ ॥

ರಾಯ ರಾಯರ ಗೌರಿ ರಾಯಮಾನ್ಯರ ಗೌರಿ
ರಾಯ ಶೀತಲನ ಮನಿಗೌರಿ ಕೋಲ ।
ರಾಯಾನೇ ಶೀತಲನ ಮನಿಗೌರಿ ಹೊಂಟಾಳ
ನಾಲವತ್ತೊಂದತಾಸ ಅರಗಳಿಗೆ ಕೋಲ ॥ ಕೋಲು ... ॥ ೧ ॥

ಶೆಟ್ಟಿ ಶೆಟ್ಟೆರಗೌರಿ ಶೆಟ್ಟಿಮಾನ್ಯರ ಗೌರಿ
ಶೆಟ್ಟಿ ಬಮ್ಮಾನ ಮುನಿಗೌರೆ ಕೋಲ ।
ಶೆಟ್ಟೀನೆ ಬಮ್ಮಾನ ಮನಿಗೌರಿ ಹೊಂಟಾಳ
ಇಪ್ಪತ್ತೊಂದ ತಾಸ ಅರಗಳಿಗೆ ಕೋಲ ॥ ಕೋಲು ... ॥ ೨ ॥

---

೧ ಲ್ಯಾವಳ – ಹವಳ

ನಾಳೆ ಬಂದನು ಜಾಡ ನಾಳೆ ಮಗ್ಗವ ಹೂಡ
ಬಾಳಿಯ ಬನಕಽ [1]ಗಜಗೊಟ್ಟ ಕೋಲ ।
ಬಾಳೀಯಾನೆ ಬನಕ ಗಜಗಟ್ಟಿ ನೆಯ್ದಾನ
ಬಾಲಿ ಗೌರಮ್ಮನ ದಡಿಸೀರೆ ಕೋಲ ॥ ಕೋಲು ... ॥ ೩ ॥

ಇಂದ ಬಂದನು ಜಡ ಇಂದ ಮಗ್ಗವ ಹೂಡ
ನಿಂಬಿಯ ಬನಕ ಗಜಽಗೊಟ್ಟ ಕೋಲ ।
ನಿಂಬಿಯಾನೆ ಬನಕ ಗಜಗಟ್ಟಿ ನೆಯ್ದಾನ
ರಂಬಿ ಗೌರಮ್ಮನ ದಡಿಸೀರೆ ಕೋಲ ॥ ಕೋಲು ॥ ೪ ॥

ಅತ್ತ ನೂರಂಗಡಿ ಇತ್ತ ನೂರಂಗಡಿ
ಎತ್ತ ಹೊಯ್ಯಾಲೇ ಚಿಣಿಕೋಲ ಕೋ ।
ಎತ್ತಾನಿ ಹೊಯ್ಯಾಲಿ ಚಿಣಿಕೋಲ ಹೊಸಗೋಗಿ
ಮುತ್ತಿನ ಬಾಜರಕಽ ಎದುರಾಗೆ ಕೋಲ ॥ ಕೋಲು .... ॥ ೫ ॥

ಹಾಂಗ ನೂರಂಗಡಿ ಹೀಂಗ ನೂರಂಗಡಿ
ಹ್ಯಾಂಗ ಹೊಯ್ಯಾಲೇ ಚಿಣಿಕೋಲ ಕೋಲ ।
ಹ್ಯಾಂಗಾನೆ ಹೊಯ್ಯಾಲಿ ಚಿಣಿಕೋಲ ಹೊಸಗೋಗಿ
ಹವಳದ ಬಾಜಾರಕಽ ಎದುರಾಗೆ ಕೋಲ ॥ ಕೋಲು ... ॥ ೬ ॥

ಮುತ್ತೀನ ಒಳಕ್ವಾಟಿ ಮುತ್ತೀನ ಹೊರಕ್ವಾಟಿ
ಮುತ್ತಽ ತುಂಬ್ಯಾವ ಹೊಸಹೋಗಿ ಕೋಲ ।
ಮುತ್ತಾನೇ ತುಂಬ್ಯಾವ ಹೊಸಗೋಗಿ ಅಗಸ್ಯಾಗ
ಮಿತ್ರೇರು ಕೋಲ ಹೊಯದಾರ ಕೋಲ ॥ ಕೋಲು ... ॥ ೭ ॥

ಕಂಚೀನ ಒಳಕ್ವಾಟಿ ಕಂಚೀನ ಹೊರಕ್ವಾಟಿ
ಕಂಚ ತುಂಬ್ಯಾವ ಹೊಸಗೋಗೆ ಕೋಲ ।
ಕಂಚಾನೇ ತುಂಬ್ಯಾವ ಹೊಸಗೋಗಿ ಅಗಸ್ಯಾಗ
[2]ಕೆಂಚೇರು ಕೋಲ ಹೊಯದಾರ ಕೋಲ ॥ ಕೋಲು ... ॥ ೮ ॥

ಕಳುವಿ ಬಂದೆವು ನಮ್ಮ [3]ಕರುಳುಳ್ಳ ಗೌರೀನ ।
ಗಳಿಗ್ಯಾಗ ನೂರೆಲಿಯ ಮೆಲೆವಳ ಕೋಲ ।
ಗಳಿಗ್ಯಾಗ ನೂರೆಲಿಯ ಮೆಲಿವ ಗೌರಮ್ಮ ನಿನಗ
ಕಳುಹಿ ಬಂದೆವು ಶಿವನ ಅರಮನೆಗೆ ಕೋಲ ॥ ಕೋಲು ... ॥ ೯ ॥

೧ ಗಜಗೊಟ್ಟ > ಗಜಗೂಡ – ಅಳತೆಮಾಡು.
೨. ಕೆಂಚೇರು ಕೆಂಚಿ – ಕೆಂಪಾಗಿರುವವಳು ಚೆಲುವೆ, ಕೆಂಪಾಗಿರುವ ಚೆಲುವೆಯರು.
೩. ಕಳುವುಳ್ಳ ಗೌರೀನ ಎಂದು ಹಾಡುತ್ತಾರೆ.



ಬಿಟ್ಟು ಬಂದೆವು ನಮ್ಮ [1]ಬಟ್ಟುಳ್ಳ ಗೌರೀನ
ಬಟ್ಟಿಲಿ ನೂರೆಲಿಯ ಮೆಲಿವಳ ಕೋಲ ।
[2]ಬಟ್ಟೀಲಿ ನೊರೆಲಿಯ ಮೆಲಿವ ಗೌರಮ್ಮ ನಿನಗ
ಬಿಟ್ಟು ಬಂದೆವು ಶಿವನಽ ಅರಮನೆಗೆ ಕೋಲ ॥ ಕೋಲು ... ॥ ೧೦ ॥

ಹಿತ್ತಲದಾನ ಹೂವ ಮತ್ತ್ಯಾಕ ಅರಳ್ಯಾವ
ಮತ್ತಽ ಮುಡಿವಂತ ಮಗಳ್ಹಾಳ ಕೋಲ ।
ಮತ್ತಾನೆ ಮುಡಿವಂತ ಮಗಳು ಶೀಗಮ್ಮ ನಿನಗ
ಮತ್ತ ಮಾನೌಮಿಗಿ ಕರಸೇವ ಕೋಲ ॥ ಕೋಲು ... ॥ ೧೧ ॥

ಅಂಗಳದಾನ ಹೂವ ಇಂದ್ಯಾಕ ಅರಳ್ಯಾವ
ಇಂದಽ ಮುಡಿವಂತಽ ಮಂಗಳ್ಹಾಳ ಕೋಲ ।
ಇಂದಾನೆ ಮುಡಿವಂತ ಮಗಳು ಗೌರಮ್ಮ ನಿನಗ
ನಳೆ ದೀವಳಗ್ಗೀ ಕರೆಸೇವ ಕೋಲ ॥ ಕೋಲು
ಕೋಲು ಕೊರಳಾದ್ದಕ್ಕಿ ನೀಲವರ್ಣದ ಪಕ್ಷಿ
ಹಾರೀತವ್ವ ಹಕ್ಕಿ ಗಗನಕ ಕೋಲ ॥ ॥ ೧೨ ॥

## ೧೨. ಮಂಗಳಾರತಿ ಹಾಡು

ಹೋಗ ಗೌರಮ್ಮ ನಿನಗ ನಾ ಒಂದ್ಹೋಳಿಗಿ ಮಾಡಿದೆನಽ ।
ಮಾದೇವನ ಹೆಂಡತಿ ಮಡದಿ ಗೌರಮ್ಮಗೊಂದಾರತಿ ಬೆಳಗಿದೇನ ॥ ಪಲ್ಲ ॥

ಅಕ್ಕ ಗೌರಮ್ಮ ನಿನಗಽ ನಾ ಒಂದು [3]ಆಕೃತಿ ಮಾಡಿದೇನ
ಅಡಕಿಯ ಹಣ್ಣ ಉಡಿತುಂಬಿ ಮಂಗಳಾರುತಿ ಬೆಳಗಿದನ ॥
ತಂಗಿ ಗೌರಮ್ಮ ನಿನಗಽ ನಾ ಒಂದು ಚೆಂದವ ಮಾಡಿದೆನ ।
ನಿಂಬಿಯ ಹಣ್ಣು ಉಡಿತುಂಬಿ ಮಂಗಳಾರುತಿ ಬೆಳಗಿದೇನ ॥

ತಾಯಿ ಗೌರಮ್ಮ ನಿನಗಽ ನಾ ಒಂದು ಛಾಯವ ಮಾಡಿದೆನಽ
ಬಾಳಿಯ ಹಣ್ಣು ಉಡಿತುಂಬಿ ಮಂಗಳಾರುತಿ ಬೆಳಗಿದೆನ ॥
ಆರುತಿ ಬೆಳಗಿದೇನಽ ನಾ ಒಂದಾರುತಿ ಬೆಳಗಿದೆನ
ಮಾದೇನ್ಹೆಂಡತಿ ಮಡದಿ ಗೌರಮ್ಮಗೊಂದಾರುತಿ ಬೆಳಗಿದೆನ ॥

* * *

೧ ಬಟ್ಟುಳ್ಳ – ಹಣೆಯ ಮೇಲೆ ಧರಿಸುವ ಸೌಭಾಗ್ಯದ ಸೂಚಕ, ಕಸ್ತೂರಿ ಕುಂಕುಮ.
೨. ಬಟ್ಟಲಿ – ಬೆರಳೀಲೆ.
೩. ಆಕೃತಿ < ಅಕ್ಕರತೆ – ಪ್ರೀತಿ.

# ಎಳ್ಳಮಾಸೀ ಹಾಡು



## ೧. ಎಳ್ಳಮಾಸೀ ಹಾಡು

ವರಸೀಗಿ ಬರುವ್ರೂದು ।
ಸರಸವ್ವ ಎಳ್ಳಾಮಾಸೀ । ಕೋಲಣ್ಣ ಕೋಲ ॥ ೧ ॥

ಏಳ ಮಂದಿ ನೆಗೇಣಿ ಮಕ್ಳು ।
ಬೆಳ್ಳ ಬೆಳಗಾಽನ ಏಳ್ತ್ರೆ । ಕೋ ॥ ೨ ॥

ಬೆಳ್ಳ ಬೆಳಗಾಽನ ಏಳ್ತ್ರೆ ।
ಮುನಿಮಾರ ಸಾರಿಸರೆವ್ವಾ । ಕೋ ॥ ೩ ॥

ಮನಿಮಾರ ಸಾರಿಸರೆವ್ವಾ ।
ತಲಿಯಾರೆ ಎರಕೊರೆವ್ವಾ । ಕೋ ॥ ೪ ॥

ಕಾಯ್‌ಪಲ್ಲ್ಯಾ ಸೋಸರೆವ್ವಾ ।
ಅಡಿಗೆಂಬಲಿ ಮಾಡರೆವ್ವಾ । ಕೋ ॥ ೫ ॥

ಅಡಿಗೆಂಬಲಿ ಮಾಡರೆವ್ವಾ ।
ಹೆಡಗಿ ಬುಟ್ಟಿ ತುಂಬರೆವ್ವಾ । ಕೋ ॥ ೬ ॥

ಸಣ್ಣಕ್ಕಿ ನಾಗುಬಾಯಿ ।
ಮನಿಮಾರ ಜ್ವಾಕಿನವ್ವಾ । ಕೋ ॥ ೭ ॥

ಮನಿಮಾರ ಜ್ವಾಕಿನವ್ವಾ ।
ಕರ ಬಿಟ್ಟು ಕರ ಕಟ್ಟು । ಕೋ ॥ ೮ ॥

ಕರ ಬಿಟ್ಟು ಕರಕಟ್ಟಿಟಿಗೆ ।
ಕರ ಹೋಯ್ತು ರಾಽಜಬೀದಿಗಿ । ಕೋ ॥ ೯ ॥

ಪಟ್ಟನೆ ಸಾಲ್ಯಾಗ ।
ಸೆಟ್ಟಿ ಸಾವುಕಾಽರ ಮಗನ । ಕೋ ॥ ೧೦ ॥

ಸೆಟ್ಟೇನೆ ಸಾವುಕಾರಽನ ।
ಮನಸ ಅಕೀ ಮ್ಯಾಲ । ಕೋ ॥ ೧೧ ॥

ಬಿರಿಬಿರಿ ಹೋಗ್ಯಾನ ।
ಮನಿಯಾಗ ಮನಗ್ಯಾನ । ಕೋ ॥ ೧೨ ॥

ಏನ ಬ್ಯಾನೆಪ್ಪಾ ಮಗನ ।
ಎಂತ ಬ್ಯಾನೆಪ್ಪಾ ಮಗನ । ಕೋ ॥ ೧೩ ॥

ಏನ ಬ್ಯಾನಿಲ್ಲ ತಾಯಿ ।
ಎಂತ ಬ್ಯಾನಿಲ್ಲ ತಾಯಿ । ಕೋ ॥ ೧೪ ॥

ಕಳೆಸೆಟ್ಟ್ಯೆವರ ಸೊಸಿ ಮ್ಯಾಲ ।
ನನ ಮನಸ ಹೋಗ್ಯಾದ ತಾಯಿ । ಕೋ ॥ ೧೫ ॥

* * * *

ಏಳ್ಮಂದಿ ನೆಗೇಣಿ ಮಕ್ಳ್ಯಾ ।
ಮುತ್ತೈದಿತನ ಹೇಳ್ತೆವ್ರಿ । ಕೋ ॥ ೧೬ ॥

ಸಣ್ಣಕ್ಕಿ ನಾಗುಬಾಯಿಗಿ ।
ನಣ ಹೊಡೆದು ಹೆಣಹಾಕಿ । ಕೋ ॥ ೧೭ ॥

ಸಟ್ಟ ಸರವತ್ತನಾಗ ।
ಹಿಂದಕ ಮುಂದಕ । ಕೋ ॥ ೧೮ ॥

ಆರು ಮಂದಿ ನೆಗೇಣಿ ಮಕ್ಳ್ಯಾ ।
ಮುಂಜಾನೆದ್ದು ಬರತಾಳ್ವೋಗ್ರೆ । ಕೋ ॥ ೧೯ ॥

ಸಟ್ಟ ಸರವತನಾಗ ।
ಮ್ಯೆಯ್‌ಮುಟ್ಟಿ ಕೈ ಮುಟ್ಟಿ । ಕೋ ॥ ೨೦ ॥

ಕೊರಳಾನ ಪುತಳಿ ಸರ ।
ಹರದ ದಿನಪಾಲ ಮಾಡಿ । ಕೋ ॥ ೨೧ ॥

ನಮ್ಮತ್ತಿ ಬೈತಾಳ ।
ಪೋಣಿಸಿಕೊಡಿರೀ ನಮಗ । ಕೋ ॥ ೨೨ ॥

ಮುಂದ ಮುಂದ ಪೋಣಸ್ತ ।
ಹಿಂದ ಹಿಂದ ಉಚ್ಚ್ಯಾಳ । ಕೋ ॥ ೨೩ ॥

ಇಟ್ಟನೆ ಆಗಟಿಗೆ ।
ಬೆಳ್ಳ ಬೆಳಗಾನೆ ಆಗಿ । ಕೋ ॥ ೨೪ ॥

* * * *

ಕಾಲಮುಡಿ ಬಂದಿದಾವ ।
ಬಾಗಿಲ ತೆರೀರಿ ನಮಗ । ಕೋ ॥ ೨೫ ॥



ಬರತೇನಿ ಅತ್ತೇಳಿ ।
ಭಾಷ್ಯೇರೆ ಕೊಟ್ಟೋಗ । ಕೋ ॥ ೨೬ ॥

ಎದಿಯ ಮ್ಯಾಲಿನ ಸೆರಗ ।
ಆತನ ಕೈಯಲಿ ಕೊಟ್ಟ । ಕೋ ॥ ೨೭ ॥

ಒಂದ ಪಾಟುಣಗಿಳದಾಳ ।
ಒಂದ ನಿರಗಿ ಉಚ್ಚ್ಯಾಳ । ಕೋ ॥ ೨೮ ॥

ಎಡ್ಡ ಪಾಟುಣಗಳದಾಳ ।
ಎಡ್ಡ ನಿಲಗಿ ಉಚ್ಚ್ಯಾಳ । ಕೋ ॥ ೨೯ ॥

ಮೂರು ಪಾಟುಣಗಿಳದಾಳ ।
ಮೂರ ನಿಲಗಿ ಉಚ್ಚ್ಯಾಳ । ಕೋ ॥ ೩೦ ॥

ನಾಕೆಂಬು ಪಾಟುಣಗಿ ।
ಎಮ್ಮಿ ಖೋಡೀಗಿ ಸಿಗಸಿ । ಕೋ ॥ ೩೧ ॥

* * * *

ಅತ್ತೆವ್ವಾ ಅತ್ತೆವ್ವಾ ।
ಬಾಗೀಲ ತೆರೇರಿ ನಮಗ । ಕೋ ॥ ೩೨ ॥

ಸಟ್ಟ ಸರವತ್ತನಾಗ ।
ದೆವ್ವಿದ್ಯಾ ಭೂತಿದ್ಯಾ । ಕೋ ॥ ೩೩ ॥

ದೆವ್ವಿಲ್ಲ ಭೂತಿಲ್ಲ ।
ಸಣ್ಣಕ್ಕಿ ನಾಗೂಬಾಯಿ । ಕೋ ॥ ೩೪ ॥

* * * *

ಕಳಸೆಟ್ಟೆವರ ಮುನಿಮುಂದ ।
ಜಂಬ ನೀಲದ ಹಣ್ಣ । ಕೋ ॥ ೩೫ ॥

ಕೈಗ್ಯಾದರು ಬಂದವ ।
ಬಾಯಿಗ್ಯಾದರ ಬರಲಿಲ್ಲ । ಕೋ ॥ ೩೬ ॥

* * * *

# ಶಿವರಾತ್ರಿ ಹಾಡು



## ೧. ಶಿವರಾತ್ರಿ ಹಾಡು

ಮುಂದೆ ಬರುವುದು ಮುನ್ನಾದ ಶಿವರಾತ್ರಿ
ಎಂದಿಗೆ ಬಂದೀತೆ ಅಭಿಷೇಕ। ಜೇನುತುಪ್ಪ
ಮಾಲಿಂಗಗೊಸ್ತ್ರ ಧರಿಸೋದು ॥ ೧ ॥

ಗಂಗೆ ಗೌರಿ ಹಬ್ಬ ಮುಂದೆ ದೀವಳಿಗೆ ಹಬ್ಬ
ಎಂದಿಗೆ ಬಂದೀತೆ ಶಿವರಾತ್ರಿ। ಚುಂಚನಗಿರಿಯ
ಮಾಲಿಂಗಗೊಸ್ತ್ರ ಧರಿಸೋದು ॥ ೨ ॥

ವರುಷಕೆ ಬರುದೊಂದು ಹರುಷವ ಶಿವರಾತ್ರಿ
ಅರವತ್ತು ಗಾವುದವ ನಡಕೊಂಡು ಬೈರುವ
ನಿನ್ನ ಗಿರಿಹತ್ತಿ ನಾವು ಬರುವೇವು ॥ ೩ ॥

ಅರವತ್ತು ಗಾವುದು ಕುರುವಿಟ್ಟು ನಾವ್ ಬಂದೊ
ನಿನ್ನ ಜಡೆಗೆ ತಂದೇವು ಜವನವ। ಜಾಜಿಹೂವ
ನಿನ್ನ ಕಿರುಜಡೆಯನೆಲ್ಲಿ ಆವಿಸೀದೆ ॥ ೪ ॥

ಆಲದ ಮರಕೆ ಎರ್‍ರ್ಯಾನೆ ಸರಸರನೆ
ಹತ್ತಿ ನೋಡ್ಯಾನೆ ದಿರುಳಿಯ। ಜೀರಹಳ್ಳಿ
ಸಾಲು ದೀವಟಿಗೆ ಬರುವೋದ ॥ ೫ ॥

ಆಲದ ಮರಕೆ ಏರ್‍ರ್ಯಾನೆ ಸರ್ಪಾನ
ಹತ್ತಿ ನೋಡ್ಯಾನೆ ದಿರುಳಿಯ। ಜೀರಹಳ್ಳಿ
ಹಣ್ಣಿನಗೊಡೆ ಬರುವೋದ ॥ ೬ ॥

* * * *

## ಹೋಳಿಯ ಹಾಡುಗಳು


೧) ಹೋಳೀ ಹುಣ್ಣಿಮೆಯ ಮೂಲಕಥೆ

೨) ರೇವಣ ಸಿದ್ಧೇಶ್ವರ (ಪುರುಷ) ಘನತೆಯ ಪದ

೩) ಮಾಯಾ (ಸ್ತ್ರೀ) ಘನತೆಯ ಪದ

೪) ಕಾಮದಹನ

೫) ಜಲಕ್ರೀಡೆಯ ಹಾಡು

೬) ಕೃಷ್ಣನ ಹೋಳಿಯ ಪದ

೭) ಪಾಂಡವರ ಅಜ್ಞಾತವಾಸ

೮) ದಕ್ಷಬ್ರಹ್ಮನ ಕಥೆ

೯) ಅಭಿಮನ್ಯುವಿನ ಕಥೆ

೧೦) ಇಂದ್ರಜಿತುವಿನ ಪದ

೧೧) ಗಯಾನ ಕಥೆ


ಸಂಗ್ರಹ

**ಡಾ. ಮ.ಗು. ಬಿರಾದಾರ**



# ಹೋಳಿ ಹುಣ್ಣಿಮೆಯ ಮೂಲ ಕಥೆ

ಗುರು ಶರಭನಡಿಗಳಿಗೆರಗಿ ಪೇಳುವೆನೀಗ ॥
ಧರೆಯೊಳೀ ಹೋಳೀ ಪದಗಳನೂ ॥

**ಲಾವಣಿ**

ತಾರಕಾ ಸುರನೆಂಬ ದೈತ್ಯ । ಮಾರಹರನ ಕುರಿತು ತಪವ ।
ವಾರಿಯಾಗದಂತೆ ಮಾಡುತಿರೇ ಘೋರವಾದ ನೈಷ್ಠೆಗಾಗಿ ।

ಸಾರಿ ಶಿವನು ಮೆಚ್ಚುತವನೆ । ಚಾರು ಕಾಮ್ಯವನು ಬೇಡೆಂದನು ।
ಧೀರರಿಂದ ಮಾರಿಯನಗೆ । ಸೇರದಂಥ ವರವ ನೀನು ।

ಭೂರಿ ದಯದಿಂದ ಪಾಲಿಸೆನೆ । ಕಾರಣಿಕ ಮಾತಿಗನಿವನು ।
ಪೂರ ಮನದ ಬಯಕೆಯನ್ನು । ಕ್ರೂರ ದೈತ್ಯರಿಗೆ ಕೊಟ್ಟನೊ ॥

**ಇಳುವು**

ವರವ ಪಡಕೊಳ್ಳುತಲಿ ।
ಸುರರಪುರ ಮುತ್ತುತಲಿ ।
ಭರದಿ ಜನ ಕಡಿಯುತಲಿ ।

**ಏರ**

ತರತರದಿ ಮದಿಸುತಲೀ
ಧರೆಯೊಳೀ ಹೋಳಿ ಪದಗಳನು ಪೇಳುವೆನು । ॥೧॥

ಸುರರೆಲ್ಲ ಕೂಡುತ್ತಲಿರದೆ ವೈಕುಂಠಕ್ಕೆ ।
ಭರದಿ ಬಂದಾಗ ಪೇಳಿದರೂ

**ಲಾವಣಿ**

ಗರುಡ ವಾಹನನು ಕೇಳಿ । ಪರಮಾಲಚನೆಯೊಳೆಂದ ।
ಹರಿಯದಿವನ ಪ್ರಾಣವಾರಿಂದಾ । ಹರನ ತಪವ ಕೆಡಿಸಿ ತರಲು ।
ತರಳನೊಬ್ಬ ಜನಿಪನಾಗ । ಮರಣವಾಗುವದು ಈತಗೆಂದಾ ।
ಸ್ಮರನ ಕರೆದು ಕೇಳಿದನು । ಭರದಿಯೆನ್ನ ಮಗನೆ ಕಾಲ ।

ಹರನಯೋಗ ನೀನು ಕೆಡೆಸಿದರೆ । ಪರರಿಗುಪಕಾರವಾಯ್ತು ।
ಪರಿಹಾರವಾಗುವದು ಬಾಧೆ । ತ್ವರದಿ ನೀನು ಹೋಗಬೇಕಂದಾ

**ಇಳುವು**

ತಂದೆ ತಾಯಿಗೆ ನಾನು ।
ಸಂದೇಹಗೊಳಲೇನು ।

ಎಂದು ಪಯಣಕ್ಕವನು ।
ಅಂದು ಅನುವಾದನೂ

**ಏರ**

ಭರದಿ ಬಂದಾಗ ಪೇಳಿದರು ನರಹರಿಯು ।
ಬರೆದು ಕಳುಹಿದನು ಮನ್ಮಥನಾ ॥೨॥

ಗಿಳಿಯ ರಥವನ್ನೇರಿಗಳಿಲನೆ ತಾ ಬಂದು ।
ಹೊಳೆಯುತಿಹವ್ಯೆದು ಬಾಣಗಳಾ

**ಲಾವಣಿ**

ಜಗ್ಗಿ ಕಿವಿಯ ತನಕ ಹೆದೆಯ । ಬೊಗ್ಗಿನದರ ನಿಟ್ಟು ಸುಖದ ।
ಸುಗ್ಗಿಯೆಂದು ಹೊಡೆದನಾಕ್ಷಣ । ದುರ್ಗಿ ಗಂಡ ಕಂಡು ತನ್ನ ।
ಅಗ್ಗಿಗಣ್ಣ ತೆಗೆಯಲಾಗ । ಮುಗ್ಗಿದನು ಮುಸುಕಿ ಬೆಂಕಿಯೊಳು ।
ಕುಗ್ಗಿತವನ ಬಲವು ಕರುಳ । ಮಗ್ಗಿನಂತೆ ಉರಿದು ಕರಗಿ ।
ಭರ್ಗನಿಂದ ಲಾಯಿತೀಪರಿ । ಎಗ್ಗಿನಿಂದ ನೋಡ್ವಸುರರು ।
ಮೊಗ್ಗೆಯರಳ ಪುಷ್ಪಗಳ । ವೆಗ್ಗಳಾಗಿ ಸುರಿದರುಘೆಯೆಂದೂ

**ಇಳುವು**

ಪತಿ ಸತ್ತುದನು ಕೇಳಿ ।
ರತಿಯು ತಾನಳುವುತಲಿ ।
ಹಿತವರೆನಗಾರಿಂದು ।
ಶಿತಕಂಠ ಶಿವನೆಂದೂ

**ಏರ**

ಹೊಳೆಯುತಿಹವ್ಯೆದು ಬಾಣಗಳ ಹೊಡೆಯಲ್ಕೆ ।
ಅಳಿದನುರಿತೇತ್ರದಿಂದವನೂ ॥೩॥



ರತಿಯು ಪ್ರಳಾಪಿಸಲು ಶಿತಕಂಠನದ ಕೇಳಿ ।
ಗತಿಯನು ಪೇಳ್ದನವಳಿಗೆ

**ಲಾವಣಿ**

ಕಾಮಿನಿ ಕೇಳವ್ವ ನಿನ್ನ ನೇಮವಾದ ವಾಸನೆಯಿಂದ
ಭೂಮಿಯೊಳು ಹುಟ್ಟುವಿರಿ ಹೋಗು ಬ್ರಾಹ್ಮಣ ಜನ್ಮದಿ ನಿನ್ನ
ಸ್ವಾಮಿಯು ಹುಟ್ಟುವನವನು ಕಾಮಿಪನು ಹೊಲೆಯ ವೇಶ್ಯಾಗು

ತಾಮಸ ಗುಣದಲಿಂಥ ನಾಮವಾಯಿತೆನಗೆಂದು
ಭೂಮಿಯು ತಾನು ಮರುಗುತಾ ರಮಣೀಯ ಕರ್ನಾಟಕದ
ಸೀಮೆಯೊಳು ಮುಖ್ಯವಾದ ಗ್ರಾಮದೊಳು ಕೃಷ್ಣ ಭಟ್ಟನೆಂಬಾ

**ಇಳುವು**

ಬ್ರಾಹ್ಮಣನ ಮಗನಾಗಿ
ಜನ್ಮ ತಾಳಿದನು
ಜಾತಕರ್ಮವ ಮಾಡಿ
ಹರುಷದಲಿ ಕೂಡಿ

**ಏರ**

ಗತಿಯನು ಪೇಳ್ದನವಳಿಗೆ ನಿನಗೊಂದು ।
ಪ್ರತಿಜನ್ಮ ವಾಯ್ತು ಹುಟ್ಟಿಂದಾ ॥೪॥

ಭೂಮಿಸುರರ್ಗೊಟ್ಟೆಯಲಿ ಕಾಮಜನಿಸಲಿಕಾಗ ॥
ನಾಮಕರಣವನು ಮಾಡಿದರೂ

**ಲಾವಣಿ**

ಚೆಂದದಿ ಸತಿಪತಿಗಳಿರಲು । ಕಂದು ಕಾಮ ಜನಿಸಿದನು ।
ಸಿಂಧುವಿನಲಿ ಚಂದ್ರನುದಿಸಿದಂತೆ । ಬಂಧುಬಳಗದವರು ಕೂಡಿ
ನಂದನಗೆ ಜಾತಕರ್ಮ । ಒಂದ ನುಳಿಸದಂತೆ ಮಾಡಲೂ ।
ಕಂದನಿತ್ತ ಬೆಳೆಯುತಿರಲಂದುಗೆ ಗೆಜ್ಜೆಯನಿಟ್ಟು
ತಂದೆ–ತಾಯಿಗಳು ಪ್ರೀತಿಯಿಂದಾ । ಮುಂದೆ ಬಾಲಲೀಲೆಯಾಡಿ
ಮಂದಹಾಸ ಚಂಡು ಚಿಣಿಯ ಕುಂದು ಕೊರತೆಯಿಲ್ಲದೀ ಪರಿ॥

**ಇಳುವು**

ಧೂಳಾಟವಾಡಿದನು ।
ಬಾಲರೊಳು ಬಲ್ಲಿದನು ।

ಬೀಳುತೇಳುತಲವನು ।
ಲೋಲದಿಂದೊರ್ತಿಪನೂ

**ಏರ**

ನಾಮಕರಣವನು ಮಾಡಿದರು ದಿನದಿನಕೆ ।
ಪ್ರೇಮದಿಂ ಬೆಳೆದನಾ ಬಾಲಾ ॥೫॥

ಅಲ್ಲಿ ಹೊಲೆಯರ ಕುಲದಿ ಬಲ್ಲಿದನು ಚೆಂದಣ್ಣಾ ।
ಎಲ್ಲರೊಳು ಹಿರಿಯ ತಾನಾಗಿ

**ಲಾವಣಿ**

ಹರನು ಹೇಳಿದಂತೆ ಭರದಿಯವರ ಗರ್ಭದೊಳು ।
ಬರಲು ಜನಿಸಿ ಹೆಣ್ಣು ಮಗಳಾಗಿ ಹರುಷದಿಂದ ಬಂಧು–ಬಳಗ ।
ವೆರೆಸಿ ಹೆಸರನಿಟ್ಟು ತಾವು ಹರಿಸಿದರು ಹೋಳಿಯಿವಳೆಂದು ।
ನರರೂಪವಿಲ್ಲವಿಂಥ । ಪರಿಯ ಚೆಲುವಿಕೆಯನಾ ।
ವರಿಯೆವೆಂದು ಮಾತುಗಳನಾಡು । ತಿರಲು ಕೇರಿಯೊಳು ತಾನು ।
ಹಿರಿದು ಬೆಳಗಿನಿಂದ ನಿತ್ಯ ಮೆರೆಯುತಿರ್ದಳಾ ಕಾಲದೀ ।

**ಇಳುವು**

ತಂದೆ ತಾಯ್ಗಳು ವೇಣಿ ॥
ಯೆಂದಾಗ ನೇಮಿಸಿ ।
ಬಂಧು ಬಳಗವುವೆರಸಿ ।

**ಏರ**

ಎಲ್ಲರೊಳು ಹಿರಿಯ ತಾನಾಗಿಯಿರುತಿರ್ದ ।
ನೊಲ್ಲಭೆಯಳೊಬ್ಬಳೊಡಗೂಡಿ ॥೬॥

ಹನ್ನೆರಡು ವರುಷಗಳನ್ನು ಸಮನಿಸಲಾಗ ।
ಕನ್ನೆಯಳ ರೂಪವೇನೆಂಬೇ

**ಲಾವಣಿ**

ಹುಣ್ಣಿವಿ ಚಂದ್ರನ ಮುಖ । ಕಣ್ಣು ನೈದಿಲೆಗೆ ಸಮ ।
ನುಣ್ಣನ್ನ ಗಲ್ಲವು ಕನ್ನಡಿ । ಮೂಗು ಸಂಪಿಗೆಯ ತೆನಿ
ರಾಗ ದುಟಿಯು ಹವಳದಂತೆ । ಕೋಗಿಲೆಯ ಸ್ವರಕೆ ಮಿಗಿಲಂತೆ
ಕೊರಳು ಶಂಖ ಚಾಪದಂತೆ, ವಿರಳವಾದ ಹುಬ್ಬುಗಳು



ತರಳೆಯ ಕುಚವು ಕಲಶದಂತೆ, ಬಾಳೆದಿಂಡಿನಂತೆ ತೊಡೆಯು
ಬಾಳ ಮಳಲಿನೊಂಡಿನಂತೆ । ಮೇಳವಾದ ಜಘನದವಿಸ್ತಾರಾ

**ಇಳುವು**

ಅಡಿ ತಳಿರಿನಂದದಲಿ ।
ಬಡನಡವು ಬಳಕುತಲಿ ।
ಗಜಗಮನ ದಂದದಲಿ ।
ಮಜ ಭಾಪುವೆನಿಸುತಲೀ

**ಏರ**

ಕನ್ನೆಯಳ ರೂಪವೇನೆಂಬೆ ಚೆಲುವಿಕೆಗೆ ।
ಸನ್ನಿಭವಾದ ಸತಿಯಿಲ್ಲಾ ॥೭॥

ಕಾಮಗೆಟ್ಟವ ಬಂದು ಕಾಮಿಸುತ ವನಿತೆಯರ ।
ಆ ಮಹಾಜಾರನಾಗಿರ್ದ

**ಲಾವಣಿ**

ಒಂದು ದಿನ ಹೋಳಿ ತಾನು । ಬಂದು ಹೊಕ್ಕಳಾಗಲೂರ
ವೃಂದ ಗೂಡಿ ಜನರು ನೋಡ್ದರೂ । ಮಂದಗಮನೆಯ ರೂಪ
ಕಿಂದಿರೆ ಶಚಿಯು ರಂಭೆ । ಇಂದು ಸರಿಗಾಣೆವಿವಳಿಗೆ ।
ನೋಟವೆಂಬ ಬಲೆಯನೊಡ್ಡು ತಾಟವೆಂಬ ಪುರುಷ ಮೃಗವ ।
ಲೂಟಿ ಮಾಡಿಕೊಂಡು ಹೋಹಳು । ಕಣ್ಣು ಇವಳರೂಪಿನೊಳು
ತಣ್ಣಾಗಿ ಹೋದವೀಗ । ದಣ್ಣನೆ ದಣಿಯಲಾರದೆ ।

**ಇಳುವು**

ಮಾರನೀಪರಿ ನೋಡಿ ।
ಸಾರಿ ಹೋದನು ಕೋಡಿ ।
ಘೋರ ಬಿಟ್ಟನು ಮನದಿ ನಾರಿಯಳಬೆನ್ಹಿಂದೇ

**ಏರ**

ಆ ಮಹಾ ಜಾರನಾಗಿರ್ದ ಹೋಳಿಯನು ।
ವಾರಿಯಾಗದೆಲೆ ನೋಡಿದನೂ ॥೮॥

ನದರ ನಿಟ್ಟಾಕ್ಷಣದಿ ಮದನ ಬಾಣದಿ ಹೊರಳಿ ।
ಚದರಿಯ ಬೆನ್ನ ಹತ್ತಿದನು

**ಲಾವಣಿ**

ವಾರಿಗಿ ಗೆಳೆಯರು ಕೂಡಿ । ನಾರಿ ರೂಪವನ್ನು ನೋಡಿ ।
ಮೀರಿದವಳೆಂದು ಮಾತನಾಡಿ । ಮಾರ ತನ್ನ ಗೆಳೆಯರಿಗೆ ।
ಸಾರಿ ಹೇಳಿದನು ನಾನು । ಸೇರುತಿಹೆನವಳ ಮನೆಯನ್ನು ।
ಘೋರಾಟವಿದಾಯಿತೆಂದು । ಚಾರು ಮಿತ್ರರೆಲ್ಲ ಮನೆಯ
ದಾರಿ ಹಿಡಿದು ಹೋದರಾಕ್ಷಣದಿ । ಜಾರ ಬುದ್ಧಿಯಿಂದ ಕಾಮ
ವಾರಿಜಾಕ್ಷಿ ಬೆನ್ನ ಹತ್ತಿ ಕೇರಿಯೊಳು ಹೊಕ್ಕ ಬೇಗದಿ ।

**ಇಳುವು**

ಮನೆಯ ಹೊಗಲಾಕೆಯನು ।
ಅನುವಿನಿಂ ಕೇಳಿದನು ।
ನಿನಗೇನು ವೊತ್ತೆಯನು ।
ಸನುಮತದಿ ಕೊಡುವೆನೂ
ಚದುರೆಯ ಬೆನ್ನ ಹತ್ತಿದನು ಹೋಳಿಯ ।

**ಏರ**

ಚದುರೆಯ ಬೆನ್ನ ಹತ್ತಿದನು ಹೋಳಿಯ ।
ಸದನಕೆ ಸಲುಗೆಯಿಂದವನು ॥೯॥

ನಿತ್ಯ ನೂರ್ವರಹಗಳನು ಇತ್ತರೆ ಬಾರೆನ್ನ ।
ಹತ್ತಿರಕೆಂದು ನುಡಿದಳೂ

**ಲಾವಣಿ**

ಗಣಿಕೆಯ ಮಾತನು ಕೇಳು । ತೆಣಿಕೆಯಿಲ್ಲ ದೋಯಿತೆಲ್ಲ ।
ಅಣಕ ಬೇಡೆನ್ನ ಕೂಡೆಂದ । ಸಟಿಯ ಮಾತನಾಡ್ವಳಲ್ಲ ।
ವಿಟನೆ ಕೇಳು ಎನ್ನ ಮಾತು । ದಿಟವಿದೆಂದಳಂಬುಜಾನನೆ
ಹೇಳಿದ ಮಾತಿಗೆ ಮೆಚ್ಚಿ । ಬಾಳ ಪ್ರೀತಿಯಿಂದಲವನು ।
ನಾಳಿಗೆ ಬರುವೆನೆಂದು ತಿರುಗಿ । ತಂದೆಯರಿಯದಂತೆಯೊಂದು ।
ಬಿಂದಿಗೆಯ ಹೊನ್ನವಾಗ । ತಂದುಕೊಟ್ಟನವಳ ಕೈಗೆ

**ಇಳುವು**

ಹರುಷವಾದಳು ನಾರಿ ।
ಪುರುಷಗಿವಳು ಮಾರಿ ।



ಬೆರಸಿದಳು ಕೂಟವನು ।
ಮರೆಸಿ ಮನೆಮಾಟವನು

**ಏರ**

ಹತ್ತಿರಕೆಂದು ನುಡಿಯಲಾ ಕಾಮಣ್ಣ ।
ನರ್ತಿಯಾಯ್ತೆಂದ ಮನದೊಳಗೇ ॥೧೦॥

ಕೆಲವು ದಿನವೀಪರಿಯು ಲಲನೆಯೊಡನಿರುತಿರಲು ।
ಕುಲದವರೆಲ್ಲ ಕೇಳಲ್ಕೇ

**ಲಾವಣಿ**

ಪಿತಗೆ ಪೇಳಿದರು ನಿನ್ನ । ಸುತನು ಹೊಲೆಯರೊಡನೆ ಕೂಡಿ ।
ಮತಿಯಗೆಟ್ಟನೆಂದು ಸರ್ವಜನಾ । ಕೃತಕದ ಮಾತನು ಕೇಳು
ಅತಿಶಯದ ಕೋಪದಿಂದೆ । ಗತಿಯೆ ನಮಗಿಲ್ಲ ದುಷ್ಟನಿಂದಾ ।
ಇಂದುಯೆನ್ನ ಮಗನು ಸತ್ತ । ನೆಂದು ಕರ್ಮವನ್ನು ಮಾಡಿ ।
ಬಂಧುಗಳವೆಲ್ಲರ ಕೂಡಿ । ತನುಜನನ್ನು ಹೊರಗೆ ಹಾಕಿ
ಮನೆಯ ಬಿಡಿಸಿದನು ಸರ್ವ । ಜನರು ನೋಡುತಿರಲೀ ಪರಿ

**ಇಳುವು**

ವೇಶಿ ಮನೆಗವ ಬಂದು ।
ಲೇಸಿನಿಂ ನಿಲಲಂದು ।

ಸಿಟ್ಟಿನಿಂದಾಗವಳು ।
ಬಿಟ್ಟು ಓಡಿಸಿದಳೂ

**ಏರ**

ಕುಲದವರೆಲ್ಲ ಕೇಳಲ್ಕೆ ಪಿತನಾಗ ।
ಛಲದಿಂದ ಹೊರಗೆ ಹಾಕಿದನೂ ॥೧೧॥

ಅತ್ತಲಿತ್ತಲು ಕೆಟ್ಟು ನಿತ್ಯದೊಳು ತನ್ನಯ ।
ಮಿತ್ರರ ಮನೆಯ ತಿರಿದುಂಡಾ

**ಲಾವಣಿ**

ವಾರನೆಲ್ಲ ತಿರಿದು ಹೊಟ್ಟೆಗೆ । ಆಹಾರ ಮಾಡುತಿರ್ದನವಗೆ
ಘೋರತರದ ರೋಗ ಬಂದಿತು । ಬಸವಂತನ್ಹುಣವಿಯ ದಿನ ।
ವೆಸೆವ ಹುಬ್ಬಿ ತಾರೆಯೊಳಗೆ । ಅಸುವ ಬಿಟ್ಟನವ ರಾತ್ರಿಯಲ್ಲಿ

ಮುದ್ದುಬಾಲರೆಲ್ಲ ಕುರುಳ । ಕದ್ದು ತರುತಲೊಟ್ಟಿದರು ।
ವಾದ್ಯದಿಂದ ಹಲಗಿ ಕಹಳೆಯಾ । ಮೆರಸಿದರು ಕಾಮನನ್ನು ।
ಸರಸವಾಡಿ ಹೊಯ್ಕೊಳ್ಳುತ್ತ । ಕರಸಿದರು ತಮ್ಮ ಮಿತ್ರರಾ

**ಇಳುವು**

ಸುಡಲಿಕ್ಕೆ ಬೆಂಕಿಯನು ।
ಕೊಡುವರಾರಿದಕೆನುತ ।
ನಡೆದರ್‍ವೊಲಗೇರಿಗೆ ।
ಬಿಡದೆ ಬಂದರು ಹೀಗೇ

**ಏರ**

ಮಿತ್ರರ ಮನೆಯ ತಿರಿದುಂಡ ಶಿವನಾಜ್ಞೆ।
ಯರ್ತಿಯಿಂದವನು ವರ್ತಿಸಿದಾ ॥೧೨॥

ಕೇರಿಯೊಳಗಾ ಬೆಂಕಿ ಯಾರ ಮನೆಯೊಳಗಿಲ್ಲ ।
ನಾರಿ ಹೋಳಿಯ ಮನೆಯೊಳಗೇ

**ಲಾವಣಿ**

ಹೊತ್ತಿದ ಕೆಂಡವಕೊಂಡು ಹೊತ್ತರಾಕೆ ಸಹಿತವಾಗ ।
ಮುತ್ತಿದರು ಬಂಧು ಬಳಗದವರು ।

ಸಿಗದಲೋಡಿ ಬಂದು ಬೇಗ । ನೊಗೆದರಾಕೆ ಕಾಮನ ಕೂಡ
ಧಗ ಧಗ ಧಗನೆ ದಹಿಸುತಾ । ಬಾಳ ಕಷ್ಟ ಪಟ್ಟು ಗೆಳೆಯ ।
ಹೋಳಿಯಿಂದ ಸತ್ತನೆಂದು ಹೋಳಿ ಹುಣ್ಣಿಮಿಯೆಂದು ಹೆಸರಿಟ್ಟು ।
ಹಬ್ಬವಾಯಿತಿಂದು ಎಂದು ಸಬ್ಬರೆಲ್ಲ ಕೂಡಿ ತಾವು ।
ಮಬ್ಬು ಹಿಡಿದವರಂದದೀ

**ಇಳುವು**

ಹುಚ್ಚರಂದದೀ ಹಾಡಿ ।
ಎಚ್ಚರಿಲ್ಲದೆ ಮಾಡಿ ।
ಮಧ್ಯಾಹ್ನ ಪರಿಯಂತ್ರಾ ।
ಗದ್ದಲದ ಬಹುಪಾತ್ರಾ

**ಏರ**

ನಾರಿ ಹೋಳಿಯ ಮನೆಯೊಳಗಿನಬೆಂಕಿ ।
ಚೋರತನದಿಂದ ತಂದರೂ ॥೧೩॥



ನದಿಯ ಸ್ನಾನವ ಮಾಡಿ ಮುದದಿ ಮನೆಗೈತಂದು ।
ಸದಮಲದಿ ಶುಚಿಗಳಾಗುತ್ತಾ

**ಲಾವಣಿ**

ಊಟ ಮಾಡಿ ಸಂತಷದ । ಲಾಟವಾಡುವರು ಪ್ರೀತಿ
ನೋಟಕರಿಗರಿವಾಗುವಂತೆ । ಇಂತಪ್ಪ ಕಾಮ ಕಥೆಯ ।
ಸಂತೋಷದಿ ಕೇಳಿದವರು । ಚಿಂತೆಗಳ ನೀಗುತಿರುವರು ।
ಧರೆಯೊಳು ಬನಹಟ್ಟಿಯೆಂಬ । ಪುರದ ಬಾಲರೊಂದು ದಿನ ।
ಗುರುವಿನ ಮಠಕೆ ತಾವು ಹೋಗಿ । ಹೋಳಿ ಹುಣ್ಣಿಮಿಯ ಮೂಲ ।
ಕೇಳಲವರು ಹೇಳಿದರು । ಬಾಳ ಲೋಚನ ನವತಾರಾ

**ಇಳುವು**

ಬರೆದೋದಿ ಕೇಳುವದು ।
ಇರದಲಿಷ್ಟಾರ್ಥ ವದು ।
ಧರೆಯೊಳಾಗುವದೀಗ ।
ಹರನ ಕರುಣದಿ ಬೇಗ

**ಏರ**

ಸದ ಮಲದಿ ಶುಚಿಗಳಾಗುತ್ತಲಾ ಜನರು ।
ಮದುವೆ ಮಾಂಗಲ್ಯದಂತಿಹರೂ ॥೧೪॥

ಇತಿ ಹೋಳಿ ಹುಣ್ಣಿವಿಯ ಮೂಲ ಕಥೆಯ
ಹೋಳಿ ಪದ ಸಂಪೂರ್ಣ

ಮಂಗಲ ಮಸ್ತು

* * *

ಇದರ ಮೂಲಕ್ಕೆ ವಿಜಾಪುರ ಜಿಲ್ಲೆಯ ಬನಹಟ್ಟಿಯ ಉಲ್ಲೇಖವಿದ್ದರೂ,
ಇದು ನನಗೆ ದೊರೆತದ್ದು ಗುಲಬರ್ಗಾದಲ್ಲಿ.

## ೨. ರೇವಣಸಿದ್ದೇಶ್ವರ (ಪುರುಷ) ಘನತೆಯ ಹೋಳಿಯ ಪದ

ವರಗಣ ನಿನ್ನ ಪದ ಸರಸಿಜಕ್ಕೆರೆಗುವೆನು ।
ಪರಮಪಾವನ ಸದ್ಗುರುವೇ

**ಲಾವಣಿ**

ರೂಢಿಯೊಳು ನಿನ್ನ ಪಾದ ಹಾಡಿಹರಸುವೆನು ।
ಮೂಢನೆಂದು ಕರುಣಿಸು ಬೇಗ । ನಾಡ । ಮಾತದೇನೊ ದೇವ
ಬೇಡಿಕೊಂಬುವೆನು ನಿನ್ನ । ಕೂಡಿಸಿಕೊಡೀಗ ಪದಗಳಾ ।
ಜೋಡಿನ ಗೆಳೆಯರು ಕೂಡಿ । ಹಾಡುವೆವು ಹರುಷದಿಂದ
ಕೇಡ ಬಾರದ್ಹಂಗ ರಕ್ಷಿಸೋ

**ಇಳುವು**

ಆನೆಯ ಮುಖದವನೆ ।
ಜ್ಞಾನ ಮೂರುತಿ ನೀನೆ ।
ಮಾನಿನಿಯರ ಸಂಗಾ ।
ತಾನು ಕೂಡದ ಲಿಂಗಾ ।
ಧ್ಯಾನಿಸುವೆನು ನಿನ್ನಾ ।
ಏನುತಿಳಿಯದ ಮುನ್ನಾ

**ಏರ**

ಪರಮ ಪಾವನ ಸದ್ಗುರುವೆ ಮತಿಕೊಟ್ಟು ।
ಸರಸಾಗಿ ಹೋಳಿ ಪದ ನಡಸೊ ॥೧॥

ಹೆಣ್ಣು ಹೆಚ್ಚೆಂದೆಂಬುವಣ್ಣಗಳು ಕೇಳಿರೊ ।
ಮಣ್ಣು ಪಾಲಾದ ಕಥೆಗಳಾ

**ಲಾವಣಿ**

ಕೊಲ್ಹಾಪುರದೊಳಗೊಬ್ಬ । ಬಲ್ಲಿದಳು ಮಾಯೆಯೆಂಬ ।
ಸೊಲ್ಲಿನಿಂದ ಬೆಳೆದಿರಲಾಗ । ಕುಲ್ಲತನದಿಂದಲೀ ತ
ನ್ನೆಲ್ಲ ಸಿದ್ಧರುಗಳ ತಂದು । ನಿಲ್ಲದೆ ಮೂಗಿಗೆ ಕವಡಿಯಾ ।
ಅಲ್ಲಿ ಪೋಣಿಸುತ್ತಲವರ । ಹುಲ್ಲಿಗೆ ಸಮಾನವೆನಿಸಿ
ಮಲ್ಲ ಮಲ್ಲರನ್ನ ಸೋಲಿಸಿ



**ಇಳುವು**

ತಾನೆ ಘನವೆನಿಸೀಗ ।
ಹೀನ ಮಾಯೆಯು ಆಗ ।
ಕೊನೆ ವಿಷಗಳ ಗುಟ್ಟು ।
ಸ್ಥಾನ ಮೊಲೆಯೊಳಗಿಟ್ಟು ।
ನಾನಾ ತೆರದಿಂ ಕಾಡಿ ।
ಮಾನಹೀನರ ಮಾಡೀ

**ಏರ**

ಮಣ್ಣುಪಾಲಾದ ಕಥೆಯ ಸಜ್ಜನರೆಲ್ಲ ।
ಕಣ್ಣು ಮೂರುಳ್ಳ ಶಿವದಯದೀ ॥೨॥

ಕೊಲ್ಹಾಪುರದ ಮಾಯಿ ಬಲ್ಲಿದಳು ವಿಷ ಹಾಕಿ ।
ಕೊಲ್ಲುವಳು ಸಿದ್ಧರೆಂಬವರಾ

**ಲಾವಣಿ**

ಮದ್ದು ಮಂತ್ರ ಯಂತ್ರದಿ ಪ್ರ । ಸಿದ್ಧರಾದ ಋಷಿಗಳ
ನೊದ್ದು ಬಂಧಿಸುತ್ತಲಿರೆ ಮದ್ದಾನೆಯ ಪರಿಯೊಳವಳು
ಸಿದ್ಧರನ್ನು ತುಳಿದಾಡುತ ಗುದ್ದಾಟವಾಯಿತೀಪರಿ ।
ಸುದ್ದಿಯನು ಕೇಳಿ ರೇವಣ । ಸಿದ್ಧನೆಂಬ ಯತಿಯು ಹೊರಟ
ಚಿದ್ಘನ ಮೂರ್ತಿ ಬಹುಬೇಗ

**ಇಳುವು**

ಇಂದು ಜಂಗಮನಾಗಿ ।
ಬಂದನಾ ಶಿವಯೋಗಿ ।
ಇಂದುಧರ ಭಸ್ಮವನು ।
ಚೆಂದ ಹಣೆಗಿಟ್ಟವನು ।
ಅಂದ ರುದ್ರಾಕ್ಷಿ ಸರಾ ।
ಸಂದು ಸಂದಿಗೆ ಹಾರಾ

**ಏರ**

ಕೊಲ್ಲುವಳು ಸಿದ್ಧರೆಂಬುವರನಾ ಸುದ್ದಿ ।
ನಿಲ್ಲದೆ ಕೇಳಿ ರೇವಣನೂ ॥೩॥

ಶಿವನೆಯವತಾರಾಗಿ ಭುವನದೊಳು ಬಂದನು ।
ಅವನಿಯ ಜನರಿಗಿಷ್ಟಾರ್ಥ

**ಲಾವಣಿ**

ಕಾವಿಯ ಲಾಂಛನ ಪೊದ್ದು । ಹಾವಿಗೆ ಪಾದದಿ ಮೆಟ್ಟಿ ।
ಭಾವಿಸಿ ಹಸ್ತದಿ ದಂಡಾಗ್ರ । ಸಾವಿನ ಭಯವ ಮೀರಿ ।
ಜೀವಿಗಳ ರಕ್ಷಿಸುತಲಿ ಅವಿಚಾರಿಗಳ ಶಿಕ್ಷಿಸುತ್ತಾ
ಧಾವಿಸಿ ಕೊಲ್ಹಾಪುರದ । ತಾವಿನೊಳು ಬಂದನಾಗ
ದೇವಿ ಮಾಯೆಯ ಮನೆಗಾಗೀ

**ಇಳುವು**

ಭೋಗಿ ಭೂಷಣನಂದು ।
ಬಾಗಿಲದೊಳು ಬಂದು ।
ಯೋಗಿ ಭಿಕ್ಷಾಯೆಂದು ।
ಕೂಗಿದನು ತಾ ನಿಂದು ।
ರಾಗಿ ಮಾಯೆಯ ಮುಂದು ।
ಜೋಗಿ ಬಂದಿಹೆನೆಂದೂ

**ಏರ**

ಅವನಿಯ ಜನರಿಗಿಷ್ಟಾರ್ಥಗೋಸ್ಕರದೀ ।
ಜವನಹರ ಸಿದ್ಧ ತಾ ಬಂದಾ ॥೪॥

ಸಿದ್ಧಿ ಬಂದಿಹನೆಂಬ ಸುದ್ದಿಯನು ತಾ ಕೇಳಿ ।
ಗರ್ವಿಸಿ ನುಡಿದಲಾಕ್ಷಣದೀ

**ಲಾವಣಿ**

ನೂರು ಸಾವಿರ ಸಿದ್ಧರುಗಳ । ಮೋರೆಯ ಮೇಲೆ ಹೊಡೆದು ಮಹಾ ।
ಚೋರರಂತೆ ಹೆಡಗುಡಿಕಟ್ಟಿ । ಘೋರಬಡಿಸುವೆ ನನ
ಗಾರಿನ್ನೆದುರಿಲ್ಲವೆಂದು । ಚೀರಿವೊದರುತ ಬಂದಳು
ಘೋರತರದ ವಿಷಗಳನು । ಬೀರುತವನ ಹಸ್ತದೊಳು
ಹೀರಿ ಹಿಂಡಿದಳು ಮೊಲೆಗಳಿಂದಾ

**ಇಳುವು**

ಸುರಿಸಿದಳೂ ವಿಷವನ್ನು ।
ಹರುಷದಿಂದಲಿ ತಾನು ।
ಸರಸದಿಂದಲಿ ಕಂಡಾ ।
ಬೆರಸುತಾಗಳೆ ವುಂಡಾ ।
ತರಿಸು ಸಾಕಿಲ್ಲೆನಗ ।
ಧರಿಸುವೆನು ನಾನೀಗ



**ಏಳು**

ಗದ್ರಿಸಿ ನುಡಿದಳಾಕ್ಷಣದಿ ತನ್ನೊಳಗೆ ।
ಇದ್ದಷ್ಟು ವಿಷವ ನೀಡಿದಳೊ ॥೫॥

ಎಷ್ಟು ನೀಡಿದರವನದಷ್ಟೆಲ್ಲವನು ಕುಡಿದು ।
ಭ್ರಷ್ಟೆ ತಾಯೆಂದು ಬೇಡಿದನೂ

**ಲಾವಣಿ**

ಬೇಡುವ ಸಿದ್ಧನ ಕಂಡು । ರೂಢಿಸಿ ವಿಷವ ಕೊಟ್ಟು
ಮೂಢ ಮತಿಯಿಂದ ಕಂಗೆಟ್ಟು । ಕೋಡಿಯಾಯಿತೆನ್ನ ಮಾತು
ಜೋಡಿಸಲಿನ್ನೆಲ್ಲಿ ತಂದು । ರಾಡಿ ಸಹಿತ ಸಾಲದಿವಗೆಂದು
ನಾಡಿನೊಳಗಿವನಂಥ ಕಾಡರಿಲ್ಲವೆಂದು ಮಾಯೆ
ಓಡಿ ಹೋಗುವ ಸಮಯದಿ

**ಇಳುವು**

ಮಾರ ಮರ್ಧನ ಸಿದ್ಧಾ ।
ನಾರಿಯನು ತಾನೊದ್ದಾ ।
ಮಾರಿ ಮಸಣಿಯ ಗೆದ್ದಾ ।
ಧೀರನಿವ ಬಲು ವೃದ್ಧಾ ।
ಸಾರಿ ಮಾಯೆಯ ಮದ್ದಾ ।
ಭೂರಿ ತಾ ಪ್ರಸಿದ್ಧಾ

**ಏರ**

ಭ್ರಷ್ಟೆ ತಾಯೆಂದು ಬೇಡುತಿರಲಾ ಮಾಯೆ ।
ರಾಷ್ಟ್ರವನು ಬಿಟ್ಟು ಓಡಿದಳೂ ॥೬॥

ಹೋಗುತಿಹ ಮಾಯೆಯನು ಬಾಗಿ ಮುಂದಲೆ ಹಿಡಿದು ।
ತೂಗಿ ನೆಲಕಪ್ಪಳಿಸಿ ಬಡಿದನೂ

**ಲಾವಣಿ**

ಮೇದಿನಿಯ ಮೇಲೆ ಕೆಡಹಿ । ಪಾದದಿಂದ ಮೆಟ್ಟಿ ಮೊಲೆಯ
ಛೇದಿಸುತ್ತ ತಲೆಯನೊಂದು ಹರಿದು । ಕಾದ ಬೆನ್ನಿನೆಲುವನಾಗ ।
ಶೋಧಿಸಿ ದಂಡಿಗೆ ಮಾಡಿ । ಭೇಧಿಸಿದ ಮೂರು ಕಾಯಿಗಳಾ ।
ಆಧಾರಾದಿ ಕರುಳ ತೆಗೆದು । ಮೋದದಿ ತಂತಿಯ ಮಾಡಿ ।
ನಾದಗಳನಾಗ ಹುಟ್ಟಿಸೀ

**ಇಳುವು**

ಭಾರಿ ಕಿನ್ನರಿ ಮಾಡಿ ।
ಬಾರಿಸಿದನು ನೋಡಿ ।

ಮಾರಿ ಮಾಯೆಯು ನೋಡಿ ।
ಸೋರಿ ಹೋಯಿತು ಕೋಡಿ ।
ಸೋರಿ ಹೋಯಿತು ಜಾಡಿ ।
ಮಾರಮರ್ಧನ ಸೂಡಿ ।
ಧೀರ ಭಕ್ತರೊಳಾಡೀ

**ಏರ**

ತೂಗಿ ನೆಲಕ್ಕಪ್ಪಳಿಸಿ ಬಡಿದ ರೇವಣಸಿದ್ಧ ।
ಯೋಗಿಗಿನ್ನಾರು ಸರಿಯಿಲ್ಲಾ ॥೭॥

ಇಂತಪ್ಪ ಮಾಯೆಯನು ಕಂಡು ಹರ ಕಡಿದನು ।
ಸಂತರಿದನೊಲಿದು ಕೇಳುವರೂ

**ಲಾವಣಿ**

ನಾರಿಯೆಂಬುವದು ದೊಡ್ಡ । ಮಾರಿ ಕೇಳೀ ಮರ್ತ್ಯರಿಗೆ ।
ಸೂರೆಗೊಂಡು ಬಿಟ್ಟರೆತಿಗಳು । ಚಾರುಭೃಂಗಿಯೆಂಬವನು ।
ಮಾರಹರನಧಿಕನೆಂದು । ಸಾರಿ ಪ್ರತಿಜ್ಞೆಯ ಮಾಡಲು ।
ಧೀರೆ ಪಾರ್ವತಿಯು ಕೇಳಿ । ಶಾರೀರದೊಳಿಹ ತನ್ನ ।
ಪೂರ ರಕ್ತದಂಶವನ್ನು ತೆಗೆಯೇ

**ಇಳುವು**

ಮಾತೆಯಂಶವನೆಲ್ಲ ।
ಆತನೊಗೆದನು ಮಲ್ಲ ।
ಭೂತೇಶ ಮೆಚ್ಚಿದನು ।
ಪ್ರೀತಿಯೊಳು ಹೆಚ್ಚಿದನು ।
ಮತ್ತೊಂದು ಪಾದವನು ।
ಸತ್ಯದಿಂ ಕೊಟ್ಟವನೂ

**ಏರ**

ಸಂತರಿದನೊಲಿದು ಕೇಳುವದು ಭೃಂಗೀಶ ।
ಶಾಂತನ ಕಥೆಯ ದೃಷ್ಟಾಂತಾ ॥೮॥

ಹೆಣ್ಣಿನ ಪದಗಳನು ಬಣ್ಣಿಸಿ ಹಾಡುವರು ।
ಕಣ್ಣುಗೆಟ್ಟವರು ಕಲಿಯುಗದೀ

**ಲಾವಣಿ**

ಯೋಗಿಗಳೆಂಬವರೆಲ್ಲ । ಭೋಗವನ್ನು ಬಿಟ್ಟು ತಮ್ಮ ।
ಯೋಗದೊಳಗೊಪ್ಪಿತವಾಗಿ । ನೀಗಿ ಮಾಯಾ ಮಿಥ್ಯವೆಂದು ।



ಸೋಗೆಗಣ್ಣವರನು ವಿರಾಗದಿಂದ ಭ್ರಾಂತಿಯ ಬಿಟ್ಟೂ
ಹೋಗುವರು ಶಿವ ಸಮ । ವಾಗೀಶನ ಲೋಕಕೆ
ಭೋಗಿಗಳನುಳಿದ ಮಹಾತ್ಮರೂ

**ಇಳುವು**

ಅದರ ಕಾರಣದಿಂದ
ಇದನು ನಂಬರಿ ಚೆಂದ ।
ಮದ ಸೊಕ್ಕಿ ನಾರಿಯರ ।
ಪದವು ಹಿತವೆಂಬವರ ।
ಒದೆಯುವನು ಯಮಧರ್ಮಾ ।
ಒದಗುವದು ಬಹು ಕರ್ಮಾ

**ಏರ**

ಕಣ್ಣು ಗೆಟ್ಟವರು ಕಲಿಯುಗದ ಜನರೆಲ್ಲ ।
ಮಣ್ಣು ಪಾಲಾಗಿ ಹೋಗುವರೂ ॥೯॥

ಹಾಸ್ಯದ ಪದವೆಂದು ದೂಷಿಸಿ ನುಡಿಬೇಡ್ರಿ ।
ಈಶನ ಮಹಿಮೆಯಿದು ಈಗ

**ಲಾವಣಿ**

ಹೋಳಿಯ ಪದವಿದೆಂದು । ಜಾಳ ಮಾಡಿ ನುಡಿಯ ಬೇಡ್ರಿ
ಬಾಳಲೋಚನನ ಸ್ತುತಿಯಿದು । ತಾಳಿ ಶಾಂತಿಯಿಂದಲಿದನು
ಕೇಳಿದರೆ ಸರ್ವಸುಖದಿ । ಬಾಳುವರು ಶಿವದಯದಿಂದಾ
ಏಳು ಜನ್ಮದ ಪಾಪವೆಲ್ಲ ಮೇಳ ಸಹಿತ ಹೊರಟು ಹೋಗು
ತಾಳುವರು ಮುಕ್ತಿ ರಾಜ್ಯವಾ

**ಇಳುವು**

ಗುರುವಿನಲ್ಲಿಗೆ ಹೋಗಿ ।
ಎರಗಿ ನಾವು ಶಿರಬಾಗಿ ।
ವರವ ಬೇಡಲು ಬೇಗ ।
ಪರಮ ಹರುಷದೊಳಾಗ ।
ಕರುಣಿಸಿದ ವಾಕ್ಯವನು ।
ಅರುಪಿದೆವು ನಾವಿದನೂ

**ಏರ**

ಈಶನ ಮಹಿಮೆಯಿದು ಈಗ ಬನಹಟ್ಟಿ ।
ವಾಸ ಸದ್ಗುರುವಿನಪ್ಪಣೆಯೂ ॥೧೦॥

ಇತಿ ರೇವಣ ಸಿದ್ದೇಶ್ವರ (ಪುರುಷ) ಘನತೆಯ ಹೋಳಿಯ ಪದ ಸಂಪೂರ್ಣ

**"ಮಂಗಲ ಮಸ್ತು"**

## ೩. ಮಾಯಾ (ಸ್ತ್ರೀ) ಘನತೆಯ ಹೋಳಿಯ ಪದ

ವರ ಗಿರಿಜ ಪಾರ್ವತಿಯನಿರದೆ ಕೊಂಡಾಡುತ।
ಹರುಷದಿ ಹೋಳಿ ಪದಗಳನೂ

**ಲಾವಣಿ**

ಶರಣರಂಘ್ರಿಗಳ ನೆನೆದು । ಧರಣಿಯೊಳು ಪೇಳುವೆನು
ಮರಣ ರಹಿತ ಮಾಯಾಶಕ್ತಿ ಘನವಾ । ಹೆಣ್ಣಿನ ಧಿಕ್ಕಾರ ಮಾಡು
ವಣ್ಣಗಳು ಕೇಳಿರೆಲ್ಲ। ಕಣ್ಣ ಮೂರುಳ್ಳವನೀಶ್ವರಾ
ತೊಡೆಯ ಕೊಟ್ಟ ಪಾರ್ವತಿಗೆ। ಮುಡಿಯ ಕೊಟ್ಟ ಗಂಗಾಂಬಿಕೆಗೆ
ಬಡಿವಾರದ ಮಾತಿದೇನಲ್ಲಾ

**ಇಳುವು**

ನಾರಿಯೆಂಬುವ ಜಾಲಾ ।
ಮೀರಿದವರಾರಿಲ್ಲ।
ಸಾರುವವು ಶೃತಿಯೆಲ್ಲ।
ಮಾರಹರನೇ ಬಲ್ಲ।
ಧೀರ ಕೇಳೀ ಸೊಲ್ಲಾ।
ಪೋರಾಟವದು ಹೊಲ್ಲಾ

**ಏರ**

ಹರುಷದಿ ಹೋಳಿ ಪದಗಳನು ಪೇಳುವೆನು ।
ಸರಸದ ವಾಕ್ಯ ವಿನಯದಲೀ ॥೧॥

ಬ್ರಹ್ಮ ನಾರಾಯಣರು ಒಮ್ಮೆ ಶಿಕ್ಕರೊ ಬಲೆಗೆ।
ಹಮ್ಮು ಬೇಡೀಗಳೆಲೊ ತಮ್ಮ

**ಲಾವಣಿ**

ಚತುರ ವೇದ ಬ್ರಹ್ಮನಿಂದ। ಕ್ಷಿತಿಯೊಳುದಸಿದವೆಂದು ಹಿತದಿ।
ಪೇಳ್ವರೆಲ್ಲ ನೀವು ಕೇಳಿ। ಮತಿಯು ಸಾಲದವನು ಮನೆಯ।
ಸತಿಯು ಸರಸ್ವತಿಗೆ ವಾಕ್ಯ। ಗತಿಯು ನಾಲಿಗೆಯನವ ಕೊಟ್ಟಾ।
ಚೆಂದದಿ ಕೃಷ್ಣನು ತನ್ನ ಹೊಂದೆದೆಯ ಮೇಲೆ ಸ್ತ್ರೀಯಿಂದ।
ತುಳಿದಾಡಿಸಿಕೊಂಡಾ



**ಇಳುವು**

ನಾರಿಯೆಂಬುವ ಭೂತಾ।
ಸೇರದಾರಿಲ್ಲೊರತಾ।
ಮಾರಿ ಮಸಣಿಗಳಂತೆ।
ದೂರಗೊಳಿಸುವ ಭ್ರಾಂತೆ।
ಯಾರಿಗಾದರಿದೇನು।
ದೂರಾಗದು ತಾನೂ

**ಏರ**

ಹಮ್ಮು ಬೇಡೀಗಳೆಲೊ ತಮ್ಮ ತ್ರಿಮೂರ್ತಿ।
ಗಮ್ಮನೆ ನಾರಿವಶರವರೂ ॥೨॥

ಋಷಿಗಳೆಂಬವರೆಲ್ಲ ಶಶಿವದನೆಯರ ಕೂಡಿ।
ಹಸನಾಗಿ ತಪವ ಮಾಡಿದರೂ

**ಲಾವಣಿ**

ಕುಂಬಿನಿಯೊಳ್ಪರಾಶರನಂಬಿಗಿತ್ತಿಯನ್ನು ಕೂಡೆ
ಸಂಭವಿಸಿದನು ವ್ಯಾಸ ಋಷಿ। ಮುಂದೆ ವ್ಯಾಸ ವಿಧವೆಯರ।
ನಂದು ಕೂಡಲಾಗಳೀರ್ವ। ನಂದನರು ಹುಟ್ಟಿದರು ಕೇಳು
ಅಂಧಕನು ಧೃತರಾಷ್ಟ್ರನು। ಸುಂದರನು ಪಾಂಡು ರಾಜ
ಸಂದೇಹವೇನ್ಹೇಳಿದರೊಳೂ

**ಇಳುವು**

ಮಾಯಿಯೆಂಬುವ ಮಾತಾ।
ಬಾಯಿಯೊಳಾಡಲು ಘಾತಾ।
ಕಾಯ ಧರಿಸಿದರೆಲ್ಲ।
ಸಾಯದುಳಿದವರಿಲ್ಲ।
ಛಾಯಿಯೆಂಬುದೆ ಜಗವಾ।
ಛಾಯ ಮಾಡಿತು ಯುಗವಾ

**ಏರ**

ಹಸನಾಗಿ ತಪವ ಮಾಡಿದರು ಬನಪುರದ।
ಶಶಿಧರನೊಡನೆ ಕೂಡಿದರೂ ॥೩॥

ಸಟೆ ಮಾಯಿಯೆಂಬುವರ ಕಟುವಾಯಿ ಶೀಳುವಳು।
ಹಟವಿದು ನಿನಗೆ ತರವಲ್ಲಾ

### ಲಾವಣಿ

ರಾಮಚಂದ್ರನೆಂಬ ರಾಜ । ಪ್ರೇಮದಿಂದಲಿರಲಲ್ಲಿ ।
ಸ್ವಾಮಿಯ ಶಿಷ್ಯ ಋಷಿ ಬಂದಾ । ಮಾಯಿಯೆಂಬ ರೂಪವದು ।
ಛಾಯ ಸುಳ್ಳೋ ಸತ್ಯವೆಂದು । ರಾಯ ಕೇಳಿದನು ಮುನಿಯನಾಗ
ಮನಸಿನೊಳಗೆ ಪುಸಿಯೆಂದವನು । ನೆನಸಿದಾಕ್ಷಣವೆ ಶಬರಿ ।
ಜನಿಸಿ ಬಂದಳು ಸಭೆಯೊಳೂ

### ಇಳುವು

ದುಡಿಯಲಾರದೆ ಬಂದು ।
ಒಡೆಯನೆಲ್ಲಿಯನೆಂದು ।
ಹಡದ ಮಕ್ಕಳ ಬಿಟ್ಟು ।
ಬಡಿವಾರ ವ್ಯಾಕಿಷ್ಟು ।
ಬಡಮುನಿಯೆ ಬಾರೆಂದು ।
ಜಡಿದು ಜಗ್ಗಿದಳಂದೂ

### ಏರ

ಹಟವಿದು ನಿನಗೆ ತರವಲ್ಲ ಸುಮ್ಮನೆ ।
ವಟವಟವೆಂದರೇನಹುದೊ ॥೪॥

ವೇದಶಾಸ್ತ್ರವನೋದಿ ಹಾದಿ ತಿಳಿಯದೆ ಹೋದಿ ।
ವಾದವ್ಯಾಕೆಲವೊ ಪ್ರತಿವಾದಿ

### ಲಾವಣಿ

ಮಾತನಾಡಿದರೆ ಮಾಯಿ । ಜಾತವಾಯಿತದನು ನೀನು ।
ಯಾತರಿಂದ ನುಡಿದುತೋರುವಿ । ನೀತಿಯವನೀತಿ ಸಪ್ತ
ಧಾತುಗೀತವೆಂಬವೆಲ್ಲ । ವ್ರೋತು ಮಾಯಾ ರೂಪು ಕೇಳವ್ರು ।
ಭೂತಭುವನ ನಾಥರೆಂಬ ಈ ತರದ ಮಾಯಿಗುಣ
ಖ್ಯಾತಿಗೊಂಡಿಹುದು ಪ್ರಸಿದ್ಧಾ

### ಇಳುವು

ನಾ ಮಾಯಿ ನೀ ಮಾಯಿ ।
ತಾ ಮಾಯಿ ತನು ಮಾಯಿ ।
ಜಗ ಮಾಯಿ ಯುಗ ಮಾಯಿ ।
ಮಗ ಮಾಯಿ ಪಿತ ಮಾಯಿ ।
ಅದು ಮಾಯಿ ಇದು ಮಾಯಿ ।
ಸದಮಳದ ಸನ್ಮಾಯೀ



### ಏರ

ವಾದ ವ್ಯಾಕೆಲವೊ ಪ್ರತಿವಾದಿಯೀಪದವ ।
ಭೇದವ ತಿಳಿಯೊ ಸಮ್ಮತದೀ ॥೫॥

ಧರೆಯೊಳಗೆ ಬನಹಟ್ಟಿ ಗುರುವಿನಪ್ಪಣೆಯಿಂದ ।
ಪರಿಪರಿ ಪದವ ಹಾಡುವೆನು ಸಜ್ಜನರು
ಕರುಣದಿಂದೊಲಿದು ಕೇಳುವದೂ

ಇತಿ ಮಾಯಾ (ಸ್ತ್ರೀ) ಘನತೆಯ ಹೋಳಿಯ ಪದ ಸಂಪೂರ್ಣ

॥ ಮಂಗಲ ಮಸ್ತು ॥

## ೪. ಕಾಮದಹನ

ಶ್ರೀಗುರುವೆ ನಿಮಗೆ ಮಾಡುವೆ ಸ್ತುತಿಯ ।
ಅಘಹರ ದಯ ಮಾಡಿ ಕೊಡು ಎನಗೆ ಮತಿಯ ॥
ಸಾಗಿಸು ಅನುವಾಗಿ ತರಳನ ಕೃತಿಯ ।
ಬೇಗನೆ ಕರುಣಿಸು ಗಣ ಪ್ರಾಸ ಯತಿಯ ॥೧॥

ಸುಂದರ ಮೊದಲಿಗೆ ಶ್ರೀ ಗಣನಾಥ ।
ವಂದನೆ ಮಾಡುವೆ ಪಾರ್ವತಿಸುತ ।
ಕುಂದದೆ ಮತಿಕೊಡು ಹೇ ಏಕದಂತ ।
ನಂದದಿ ಪಾಡುವೆ ಲೋಕ ಪ್ರಖ್ಯಾತ ॥೨॥

ಸರಸಿಜೋದ್ಭವನ ಸರಸ್ವತಿ ಹರದಿ ।
ಸರಸದಿ ಸಾಗಿಸು ಕೊಟ್ಟೆನಗೆ ಬುದ್ಧಿ ॥
ಕರ ಮುಗಿದು ಬೇಡುವೆ ಮತಿ ಹರುಷದಿ ।
ಕರುಣಿಸು ಬೇಗನೆ ತಾಯಿ ಶಾರದಿ ॥೩॥

ಹೇಮಕೂಟದಲ್ಲಿ ಸೋಮಶೇಖರನು ।
ಪ್ರೇಮದಿಂದ ತಪ ಕುಳಿತು ಕೊಂಡಿದನು ।
ವ್ಯೋಮಕೇಶವನು ಜಡಿಯ ಗಟ್ಟಿದನು ।
ಸ್ವಾಮಿ ತ್ರಿನೇತ್ರ ಮುಚ್ಚಿ ಕುಳಿತಿದನು ॥೪॥

ತಾರಕಾಸುರ ಬಾಧಿಗೋಸ್ಕರವಾಗಿ ।
ಮಾರನು ಹರನಿಗೆ ಕರೆಯಲ್ಕೆ ಪೋಗಿ ॥
ಸಾರಿದ ಕರ ಮುಗಿದು ಶಿರ ತಾನು ಬಾಗಿ ।
ಬಾರಯ್ಯ ಬೇಗನೆ ಸ್ವಾಮಿ ಶಿವಯೋಗಿ ॥೫॥

ಮಾರಿ ಕೂಗಿದ ಶಬ್ದ ಕೇಳದೆ ಶಿವನು ।
ಮೂರು ನೇತ್ರಗಳ ಮುಚ್ಚಿ ಕುಂತಿದನು ॥
ಧೀರ ಮನ್ಮಥನಿಗೆ ಬಂತು ಕ್ರೋಧವನು ।
ಏರಿಸಿ ಬಿಟ್ಟನು ಪಂಚಬಾಣವನು ॥೬॥

ಸ್ವಾಮಿಗೆ ಬಡದಿತು ಬಾಣಿನ ಪೆಟ್ಟು ।
ತಾಮಸ ಬಂದಾಗ ತೆರೆದನು ನೋಟ ।
ಕಾಮನ ಕಾಣುತ ಬಂದಿತು ಸಿಟ್ಟ ।
ಸೋಮಶೇಖರ ತನ್ನ ಉರಿಗಣ್ಣ ಬಿಟ್ಟ ॥೭॥



ತಡಿಯದೆ ಮನ್ಮಥ ಮಡಿದನು ಎಂದು ।
ಮಡದಿ ರತಿದೇವಿ ಆ ಕ್ಷಣ ಬಂದು ।
ಕಡು ದುಃಖ ಮಾಡುತ ಕರ ಮುಗಿದು ನಿಂದು ।
ಒಡೆಯ ಮುತ್ತೈದಿತನ ಅಳಿದಿ ನೀನೆಂದು ॥೮॥

ಮಾಪುತ್ರ ಮತಿಹೀನ ಮನ್ಮಥ ಬಂದು ।
ತಾಪಸ ಕುಳಿತಾಗ ಬಾಣ ಬಿಟ್ಟೊಂದು ॥
ಕೋಪಾಗಿ ಉರಿಗಣ್ಣ ತೆರದೆನು ನಂದು ।
ಲೋಪಾದ ನಿನ್ನೋಪ ಹೋದನು ಬೆಂದು ॥೯॥

ಶಂಕಿತಿಲ್ಲದೆ ರತಿ ದುಃಖ ಮಾಡುತ ।
ಪಂಕಜ ಶರನಿಗೆ ಮಾಡಿದಿ ಘಾತ ॥
ಕುಂಕುಮ ಫಣಿಯಲ್ಲಿ ಹಚ್ಚಲ್ಹಾಂಗೆನುತ ।
ಶಂಕರ ನಾ ಸುಟ್ಟ ಆ ದೀನ ಸಾರ್ಥ ॥೧೦॥

ಮುಕ್ಕಣ್ಣ ನುಡಿ ಕೇಳಿ ಅಕ್ಕರದಿಂದ ।
ದುಃಖ ಮಾಡಲಿ ಬೇಡ ರತಿದೇವಿಯೆಂದ ॥
ಚಕ್ಕನೆ ಸಾವಿತ್ರಿಯಾಗಿರು ಮುಂದ ।
ಏಕಾಂತ ನಿನ್ನಿನಿಯ ಮುಖ ತೋರುವನೆಂದ ॥೧೧॥

ಮುತ್ತೈದೆ ಆಗೆಂದ ವಾಕ್ಯವು ಕೇಳಿ ।
ಅತಿ ಬೇಗ ಮನದಲ್ಲಿ ಹರುಷವು ತಾಳಿ ।
ಶಿತಕಂಠ ದೇವನ ಪಾದಕ್ಕ ಉರುಳಿ ।
ರತಿದೇವಿ ಪೋದಳು ಮಂದಿರಕೆ ತೆರಳಿ ॥೧೨॥

ಉರಿಗಣ್ಣಿನಿಂದ ಸುಟ್ಟನು ಕಾಮ ।
ಹರುಷದಿ ಮೈಯೆಲ್ಲ ಬೂದಿ ನಿಸ್ಸೀಮ ॥
ಧರಿಸಿದ ಧವಳಂಗ ತಾಳಿದ ಪ್ರೇಮ ।
ಹರನಿಗೆ ಬಂತಾಗ ಮಾರಹರ ನಾಮ ॥೧೩॥

ಅಂದಿಗೆ ಈಶ್ವರ ಆಡಿದ ಕೇಳಿ ।
ಇಂದಿಗೆ ಜನರು ಕೂಡಿ ಕಾಮನ ಹೋಳಿ ॥
ಚಂದಾಗಿ ಒಟ್ಟುವರು ಕುರುಳಿದ ಥಾಳಿ ।
ದುಂದುಭಿ ಹಚ್ಚಿ ಆಡುವರು ಹೋಳಿ ॥೧೪॥

ಸುಟ್ಟರೆ ಬಿಟ್ಟಿಲ್ಲ ಕಾಮ ಜಗದೊಳಗೆ ।
ಕೆಡಸಿದ ಬಹು ಮಂದಿಗಳಿಗೆ ॥
ಶ್ರೇಷ್ಠದೇವೇಂದ್ರನು ಕಾಮ ಕೇಳಿಗೆ
ಕೆಟ್ಟನು ಮೈಯೆಲ್ಲ ಯೋನಿಮಯವಾಗಿ ॥೧೫॥

ಸೆಳದನು ದುಶ್ಯಾಸನ ಸೀರಿಯನು ತಾನು ।
ಕಳಕೊಂಡ ರಾವಣ ಹತ್ತು ತಲೆಗಳನು ॥
ಕಳೆಗುಂದಿ ಕಪ್ಪಾದ ನಡುವೆ ಚಂದ್ರಮನು ।
ಏಳುಗಜ ಕಲ್ಲಾದ ಚಂದ್ರಗುಪ್ತನು ॥೧೬॥

ದುರುಳಾಗಿ ಜೋಕ್ಮಾರ ತಲಿಯನ್ನು ಕೊಟ್ಟ ।
ಮರುಳ ಬುದ್ಧಿಯಿಂದ ಕೀಚಕ ಕೆಟ್ಟ ॥
ಉರಿ ಹಸ್ತ ತನ್ನ ಶಿರದ ಮೇಲಿಟ್ಟ ।
ಮರಣಾದ ಭಸ್ಮಾಸುರನಾಗ ಸುಟ್ಟ ॥೧೭॥

ಕಲ್ಕಿಕಿಯಲಿ ಕಾಮ ಭಟ್ಟನೆಂಬವನು ।
ಹೊಲಿಯರ ಹೆಣ್ಣಿಗಿ ಮೋಹಿಸಿ ತಾನು ॥
ಆ ಒಲುವಿಂದ ಮನಿ ಹೊಕ್ಕು ತಲಿಯ ಕೊಟ್ಟನು ।
ಅಳಲಿಂದ ಜನ ಕೂಡಿ ಹೊಯ್ದು ಬೊಬ್ಬಿಯನು ॥೧೮॥

ಅಂಥವರು ಆಗಲೆ ಆದರು ಹಿಂದ ।
ಇಂಥವರ ಪಾಡೇನು ಕ್ಷಿತಿಯಲ್ಲಿ ಇಂದ ।
ಕಂತುಹರ ಪಾಲಿಸು ನೀ ಮುದದಿಂದ ।
ಸಂತತ ಪಾಡುವೆ ಸಂತೋಷದಿಂದ ॥೧೯॥

ಕರ ಮುಗಿದು ಬೇಡುವೆ ಕವಿಗಳಿಗೆ ಕಂದ ।
ತರಳನ ಮತಿಯದು ಇರುವದು ಮುಂದ ॥
ಅರಿಯದೆ ಪೇಳಿದೆ ಅಜ್ಞಾನದಿಂದ ।
ಹಿರಿಯರು ತಿದ್ದಿ ಪಾಡುವದು ಚೆಂದ ॥೨೦॥

ಧರೆಯೊಳು ಶಿರಸೀಗಿ ಪುರದಲ್ಲಿ ಮೆರಿವ ।
ಹರನ ವಾಹನವಾಗಿರುವಂತ ಬಸವ ।
ಕರುಣಿಸಿ ಕೊಟ್ಟನು ತರಳನಿಗೆ ವರವ ।
ಹರುಷದಿ ಪಾಡಿದೆ ಹೋಳಿಯ ಪದವ ॥೨೧॥

* * *



## ೫. ಜನಕ್ರೀಡೆಯ ಹಾಡು

ಶೃಂಗಾರ ಸಂಗೀತ ಸರಸದಿ ಪೇಳುವೆ ।
ಮಂಗಲಾಂಗಿಯರು ಮಮತೆಯಿಂದ ತನ್ನ ।
ಅಂಗಜನನು ಕೂಡಿ ಪ್ರೀತಿಯಿಂದ ।
ತುಂಗಪುರಕರ ಸೋಮನ ದಯದಿಂದ । ಮನ ।
ಪಿಂಗದೆ ಕೇಳಿರಿ ಬಾಲನ ನುಡಿಯನ್ನು ।
ಸಂಗಜನರು ಅತಿ ಪ್ರೀತಿಲಿಂದ ॥ಪಲ್ಲ॥

ಗರುಡ ವಾಹನನೇರಿ ಹರಿ ತಾನು ಬಂದನು ।
ನೆರೆದು ಗೋಕುಲ ನಾರಿ ಮಣಿಯರನು । ತಮ್ಮ ।
ತರಳ ಬಾಲಕರಗೆ ಜರಿದು ಇನ್ನು ಜಲ ।
ಮರಳ ಆಡುತಿಹರು ಕ್ರೀಡೆಯನ್ನು ।
ಸಮಗಮ ರಂಗನು ಶಾಲಿಯ ಕಳದೊಯ್ದು ।
ಕುಳಿತನು ಮರನೇರಿ ಕುಹಕದಿಂದ ॥೧॥

ಅತ್ತಿತ್ತ ನೋಡುತ ಹೊತ್ತು ಬಾಳಾಯ್ತೆಂದು ।
ಮಿತ್ರೇರು ಮರಳಿ ಬಂದರು ಮೇಲಕ್ಕ ।
ನಮ್ಮ ವತ್ತಿಟ್ಟ ಶಾಲಿಗಳೆಲ್ಲೋಳಕ್ಕ ।
ಘಾತವಾಯ್ತೆಂದು ಮನದಿ ಮಾಡ್ವರು ಶೋಕ । ನಾವು ।
ಬತ್ತಲ್ಯಾಂಗ್ಹೋಗ ಬೇಕೆನುತಲಿ ಸಖಿಯರು ।
ಚಿತ್ತದಿ ನೆನಿಸುತ ನಿಂತಿಹರಲ್ಲಿ ॥೨॥

ಅಲ್ಲಲ್ಲಿ ಹುಡುಕತಲಿ ಎಲ್ಲಿ ಕಾಣದೆ ರಂಗ ।
ಮಲ್ಲಿಗೆ ಮರನೇರಿ ಕುಳಿತಿದ್ದನು ।
ಫುಲ್ಲ ನಯನಳೊಬ್ಬಳು ನೋಡಿ ತಾನು । ರನ್ನ ।
ಗಲ್ಲದ ಮೇಲೆ ಸೊನ್ನಿಯನು । ಮಾಡಿ
ಗೊಲ್ಲ ಶಾಲಿಯ ಪಾಲಿಸೆನುತಲಿ ಕೈ ಮುಗಿದು ।
ನಲ್ಲೆ ಬೇಡಿಕೊಂಬುತಲ್ಲೆ ನಿಂತಿಹಳು ॥೩॥

ಚಕ್ರಧಾರಿಯು ಕೃಷ್ಣ ಅಕ್ಕರದಿ ನುಡಿದನು ।
ಮಿಕ್ಕ ನಾರೇರು ಕೂಡಿ ಬಾರೆನುತ ।
ನಕ್ಕು ಮುಗಳ ನಗುತ ಕೊಳಲನೂದುತ ।
ರಕ್ಕಸರ ಸಂಹರ ರಂಗ ಸುಳಿದಾಡುತ ಅವಳ । ॥೪॥

ಕಕ್ಕಸ ಕುಚಗಳ ವತ್ತಿ ಮುದ್ದಾಡುತ ।
ಗಕ್ಕನೆ ಮರನೇರಿ ಕುಳಿತ ಹೋಗಿ ॥೪॥

ಗಿಲಿಬಿಲಿ ಕೇಳುತ ಮಲ್ಲಿಗಿ ಮುಡಿಯರು ।
ನಲ್ಲ ನಿದ್ದೆಡೆ ಗೋಡಿ ಬಂದರಾಗ ।
ಜಾಲಗಾರ ಗೊಲ್ಲರ್ಹುಡುಗನ ಕಂಡರಾಗ ।
ಮೇಲೇರಿ ಕುಳಿತನು ಕೊಳಲ ಧ್ವನಿಯೊಳಗ । ವಸ್ತ್ರ ।
ನಿಲಿ ಮಾಡಿ ಶಾಖೆಗೆ ಸಿಲ್ಕಿಸಿ ಫಣಿಭೂಷಣ ।
ಒಲಿದಾಡುವ ಬಗಿ ನೋಡಿರೀಗ ॥೫॥

ಸುಂದರ ರಂಗ ಕೇಳಿಂದು ಮಂದಿರದೊಳು ।
ಕಂದನಗಲಿ ಕ್ರೀಡ ಆಡುತಲಿ ।
ದುಂದದಿಂದ ಜಲಗಳು ಚೆಲ್ಲ್ಯಾಡುತಲಿ ।
ನಿಂದ ಮಡುಗಳ ಧಡದಲ್ಲೆ ಎಡವುತಲಿ । ನೀನು ।
ಹಿಂದು ಬಂದೆಮ್ಮಯ ತಂದ ಶಾಲಿಗಳನ್ನು ।
ಇಂದು ಕರುಣಿಸೊ ಗೋಪಿ ಕಂದ ನೀನು ॥೬॥

ಚೆಂದ ಚೆಲಿವ್ಯಾರು ನೀವು ಬಂದಿರ್‍ಯಾತಕೆ ।
ಹಿಂದ ಮುಂದ ಕೈ ಹಚ್ಚಿದ ಪರಿಯು ಏನ । ಅದ ।
ರಂದವು ಪೇಳರಿ ಎನಗಿನ್ನು ।
ಮಿಂದ ಮಡಿಯವು ದಾರಿಗೆ ಕೊಡಲಿಯಿನ್ನು । ನೀವು ।
ಛಂದದಿ ಕರಗಳನೆತ್ತಿ ಬೇಡಿದರೆ ।
ಸತ್ಯದಿ ಕೊಡುವೆನು ಶಾಲಿಯನು ॥೭॥

ಹಾಸ್ಯದ ನುಡಿಗಳ ಲೇಸಾಗಾಡಲಿ ಬೇಡ ।
ಶೇಷಶಯನನೆ ಕೇಳು ಎನ್ನ ಮಾತ ।
ನಿಸ್ಸಾರವಾಗಿ ಬಂದಿಹುದು ಹೊತ್ತು ।
ಪುರುಷ ಕೇಳಲು ಬಿಡುವನು ಅಳದಂತ ಎನ್ನ ।
ಶಿಶುವು ಹಸಿದು ಬಹಳ ವಶವಿಲ್ಲದಳುತಿಹುದು ।
ಭಾಷೆ ಪಾಲಿಪ ಗೊಲ್ಲ ಶಾಲಿ ಕುಡೋ ॥೮॥

ಅಚ್ಚಿನ ಶಾಲ್ಯವು ಬಚ್ಚಿಟ್ಟ ರಂಗನು
ಮೆಚ್ಚಿ ಕೊಟ್ಟನು ಬಾಲಿ ನುಡಿಯ ಕೇಳಿ
ಭಕ್ತವತ್ಸಲನ ಕೂಡ್ಯಾಡಿದರು ಹೋಳಿ
ಅಚ್ಯುತ ರಂಗನ ಕೊರಳಿಗ್ಹಾಕಿ ಮಾಲಿ
ಸಚ್ಚಿದಾನಂದ ಗುರುಬಸವ ಭಜಿಸುತ
ಹೊಕ್ಕರು ಗೋಕುಲ ಪುರಕೆ ಕೇಳಿ ॥೯॥

* * *



## ೬. ಕೃಷ್ಣನ ಹೋಳೀ ಪದ

ವಾಣಿಯ ವರದ ಕಲ್ಯಾಣಿಯ ಘನತರ
ವೇಣಿಯ ಕಡು ಚೆಲ್ವ ಪಾಣಿಯಳ ಸುಖ
ಶ್ರೇಣಿಯ ಸುಖ ಮೃದು ವಾಣೀಯಳ
ಫಣಿವೇಣಿ ಯುಕುತಿಸುಪ್ರಾಣಿಯಳ ಸುಪ್ರ
ವೇಣಿಯ ಭವ್ಯನರಾಣಿಯ ಕಥೆ ವಿದ್ಯಾ
ತ್ರಾಣಿಯ ಬಿಡದಿಂಥಾ ಜಾಣೆಯ ಪೊಗಳ್ವೆ ॥೧॥

ತಾವರಿದಳ ನೇತ್ರೆ ದೇವಕಿ ವರ ವಸು
ದೇವರ ಗರ್ಭದಿ ಜನಿಸುತಲಿ ಸರ್ವ
ದೇವತೆಗಳು ನಲಿದಾಡುತಲಿ ಮೊಲೆ
ಸೇವಿಸಿ ಪೂತನಿ ನೀಗುತಲಿ ಗೋವು
ಕಾವಲನಾಗಿ ಗೋಕುಲ ದೊಳು ನೆರೆ ಗೊಲ್ಲ
ರಾವಳಿಯೋಳು ನಲಿದಾಡಿ ಪಾಡಿದನು ॥೨॥

ಅರಳೆಲಿ ಬಿಂದೂಲಿ ಕೊರಳ ತಾಯಿತ ಗೆಜ್ಜಿ
ಎರಡು ಕಾಲೊಳು ಝಣಝಣರೆನ್ನುತ ರತ್ನ
ಹರಳಿನುಂಗುರ ಬೆರಳೊಳಗಿಡುತ ಚೆಲ್ವ
ಮುರಲಿ ನಾದಿನ ಸ್ವರದೋರುತ ಬಂದು
ಮರುಳು ಗೊಳಿಸಿ ತುರಗವೇರಿ ವೃಕ್ಷದ
ನೆರಳಲ್ಲಿ ಸರಿಗೆಳೆಯರಗೂಡಿ ನಿನ್ನಾಟಾ ॥೩॥

ಬಿಲ್ಲು ಹಬ್ಬಕ್ಕೆ ಹೋಗಿ ಭರದಿಂದ ದೈತ್ಯಾ
ಮಲ್ಲ ಮಲ್ಲರನೆಲ್ಲ ಕೊಲ್ಲುತಲಿ ಅಲ್ಲೆ
ಕುಲ್ಲ ಕಂಸನ ಸಂಹರಿಸುತಲಿ ಮತ್ತೆ
ಗಲ್ಲಿಂದ ಪಟ್ಟುಗಟ್ಟುತಲಿ ಮತ್ತೆ
ಬಲ್ಲಿದ ಶಕಟನ ಮುರಿದು ದನುಜರೆದೆ
ದಲ್ಲಣ ನಿರ್ಜರ ಪತಿ ಗರ್ವ ಹರಣಾ ॥೪॥

ಕಾಳಿಯ ಮಡುವನು ಧುಮುಕುತ ಅಲ್ಲಿರು
ಕಾಳುರುಗನ ಫಣಿ ಮೆಟ್ಟುತಲಿ ಅಲ್ಲೆ
ತಾಳಗತ್ತಿಲೆ ನಾಟ್ಯ ನಾಡುತಲಿ ಮತ್ತೆ

ತೋಳ ದಂಡಿಗೆಯೇರಿ ಮೆರೆಯುತಲಿ ಶಬ
ರಾಳಿಯೊಳತಿ ಚಂಡು ಬುತ್ತಿ ಬೊಗರಿ ಚಿಣ್ಣಿ
ಕೋಲು ವಿಡಿದಾಡ್ವದೇನು ಬಣ್ಣಿಪೆನು ॥೫॥

ಆಲಯದೊಳು ಪೊಕ್ಕು ಕುಲುಕುಲು ನಗುತಲಿ
ಬಾಲಕಿಯರ ಕಣ್ಣ ಮುಚ್ಚುತಲಿ ಸಾಲು
ಸಾಲ ಗೆಲ್ಲವ ಸರಿ ಕಚ್ಚುತಲಿ ಮೀಸ
ಲ್ಹಾಲ ಬೆಣ್ಣೆಗೆ ಕೈ ಹಚ್ಚುತಲಿ ಸವಿ
ದಾಲಸ್ಯ ವಿಲ್ಲ ದೀಪರಿಯಲ್ಲಿ ಮಾಳ್ಪಗೋ
ಪಾಲನ ಲೀಲೆಯಾಲಿಪುದಿನ್ನು ಜನರು ॥೬॥

ಮತ್ತೇಭನಡಿಯರು ಮಧುರೆಗೆ ಹಾಲ್ಮೊಸ ।
ರ್ಹೊತ್ತು ಬರುವ ಸತಿ ಮುತ್ತುಗಳು ಗಳ
ಕತ್ತಿಟ್ಟು ಸರಗಿ ಚಿಂತಾಕುಗಳು ನವ
ರತ್ನ ಖಚಿತ ಮುತ್ತಿನ್ಹಾರಗಳು ಮೆರೆ
ವುತ್ತ ಕಂಗಳ ತಿರವುತ್ತೆಡಬಲ ನಿಟ್ಟಿಸುತಲೆ
ಜತ್ತಲೆ ಬಂದಾರ ಪುರಕ್ಕೆ ॥೭॥

ಬಾಲೇರು ಮದನನ ಕೋಲೇರು ಯವ್ವನ
ಶಾಲೇರು ಕನಕ ಕಪೋಲೆಯರು ನವ
ಶಾಲೇರು ಪಂಚಕ ಮಾಲೆಯರು ಸ್ಮರ
ಲೀಲೇರು ಕಂದರ್ಪನೋಲೆಯರು ರತಿ
ಶಾಲೇರು ಘನತರ ಲೋಲೇರು ಮೋಹನ
ಜಾಲೇರು ಸತಿ ಸಿರಿ ಮಾಲೇರು ಬರಲು ॥೮॥

ಮಜ್ಜಿಗೆ ಮೊಸರು ಪಾಲ್ಬೆಣ್ಣೆ ಪೊತ್ತು ಕಾ
ಲ್ಗೆಜ್ಜೆಯ ಝುಣಝುಣರೆನ್ನುತಲಿ ನಯ
ಕಜ್ಜಳ ಕಣ್ಣಿಗೆ ತೀಡುತಲಿ ಸತ್ಯ
ಸಜ್ಜನ ಮುನಿ ನೋಡುತಲಿ ಸಾಧು
ಸಜ್ಜನರಿದು ಕೊಳ್ಳಿರೆಂದು ಮಥುರಿಪುರ
ಗುಜ್ಜರಿಯೊಳು ಬಂದು ನಿಂತರಾಕ್ಷಣ ॥೯॥

ಮೇಲು ಸ್ವರವೆತ್ತಿ ಕೂಗುವ ಧ್ವನಿಗಳು
ಕೇಳಿ ಕೃಷ್ಣನು ಬಂದ ತಾನಲ್ಲಿಗೆ
ಸಾಲು ಸಾಲು ಕೊಡಗಳೆಷ್ಟು ತೋರಗಣ್ಣಿಗೆ
ಸುಂಕ ಹೇಳಿರೆಂದನು ಹೊತ್ತ ಹಾಲ್ಬೆಣ್ಣೆಗೆ ಇಂದ
ನಾಳಿಗೆಂದರ ಕೇಳಿ ಬಿಟ್ಟವನಲ್ಲಾ ನೀ ।
ಮ್ಮಾಳಷ್ಟು ರೊಕ್ಕವೆ ಹೇಳಿ ನೀವೆನುತಾ ॥೧೦॥



ದುಡುಕು ಮಾತಾಡುವನೀತ ಹುಡುಗನಾರವನಮ್ಮಾ
ತಡವು ಯ್ಯಾತಕೆ ಹೊತ್ತು ಕೊಡಭಾರ ಕೇಡು
ಕೊಡುವವರಾರೊಡದವು ಸೋರಿದವು ಸುಂಕ
ಕೊಡುವವರಲ್ಲವೊ ಬಿಡುದಾರಿಯಾ ಬಿಡು
ಗೊಡವಿಯಾತಕ ಹಾಲು ಕೊಡುವೆನೆಂದರೆ
ಹಿಡಿ ಹಿಡಿಯೆಂದು ಗಲ್ಲವ ಪಿಡಿದು ಮುದ್ದಿಸುತಾ ॥೧೧॥

ಕಣ್ಣು ಸನ್ನೆಯಿಂದ ಕಯ್ಯ ಗಲ್ಲಕ ತಂದು
ಬಣ್ಣಿಸುವುದು ಬಲ್ಲೆ ನಾ ನಿಮ್ಮದು ಉಟ್ಟ
ಸಣ್ಣ ಸೀರೆಯ ನಿರಿ ಚಿಮ್ಮುವದು ಹೋದ
ರೆ ರಂಗಪ್ಪ ನಾಣ್ಯೆತಿ ತಾ ನಮ್ಮದು ಈ ದಿನ
ಕಣ್ಣಿಗೆ ಕಾಣದೆ ಕದ್ದು ಪೋಗುವಿರೆಲ್ಲಿ
ಬಣ್ಣಗಾರಿಕೆ ಬಿಟ್ಟು ಕೊಟ್ಟು ಹೋಗೆಂದಾ ॥೧೨॥

ಮೊಸರು ಹಾಲಿಗೆ ಸುಂಕವ ವಸುಧೆಯೊಳ್ ಕೊಡುವರೆ
ಹೆಸರೇನು ನಿನ್ನದು ಹೇಳೆನುತಾ ಬಾಯ
ಕಿಸದು ಬೇಡುವದ್ಯಾತಕೆ ಹೋಗೆನುತಾ ಗಂಡ
ಅಸವಲ್ಲದವ ಕಂಡ್ಯಾ ಕೇಳೆನುತಾ ಸುಳ್ಳ
ರಸಿಕನ ವ್ಯಾಪಾರ ಸತಿಯರ ತಡವು ತಿದ್ದು
ಹಸನಲ್ಲ ದಾರಿ ಬಿಡು ಎಂದರವರು ॥೧೩॥

ಹಿಂಡ ಗೋಪಿಯರೆಲ್ಲ ಭಂಡಾಗದಿರಿ ಮತ್ತೆ
ಗಂಡ ಲೋಕಕೆ ನಾನು ತಿಳಿಯೆಂದನು ನಿಮ್ಮ
ದುಂಡ ಕುಚವ ಕೈಯೊಳಿಡಿಯೆಂದನು
ಕಂಡ ಕಂಡಾಕ್ಷಣಕ ಮುದ್ದು ತಾರೆಂದನು ಇಳ
ಕೊಂಡ ಮುನಿಯೊಳು ಉಂಡುಟ್ಟು ಶ್ರಮ ಕಳ
ಕೊಂಡು ರಾತ್ರಿಯೊಳಿದ್ದು ಹೋಗಿ ನೀವೆನಲು ॥೧೪॥

ಪೋರಾಟದಲ್ಲಿ ಬಂದು ನಾರಿಯರಿಗೆ ಬಲು
ಭಾರ ಯವ್ವನ ಬಾ ಬಾ ಬಾ ರಂತಿದಿ ಕೈಗೆ
ತೋರ ಕುಚವು ತಾ ತಾ ತಾ ರಂತಿದಿ ಮನೋ
ಹಾರ ರತ್ನದ ಹಾರ ಹಾರುತಿದಿ ಇಂಥಾ
ಜಾರತ್ವನ ಬಿಡು ನೀ ಬಾಜಾರದೊಳು ನೆರೆದ ಹ
ಜಾರ ಮಂದಿಯೊಳು ಬೇಜಾರ ಮಾಡುವೆವು ॥೧೫॥

ಬಾ ಗೊಲ್ಲ ನಾರಿಯರು ಪ್ಯಾಟಿಯೊಳು ಬಂದು
ಸೊಗಸೊಗಸು ಕಣ್ಗೆ ತೋರುವಿರಿ ಮತ್ತೆ

ಬಾಗಿ ಬಳುಕಿ ಬಿಂಕ ಬೀರುವಿರಿ ಮುಂದೆ
ಸಾಗುತಲಡಿಗಡಿಗ್ಹಾರುವಿರಿ ಕಂಡು ಸೈ
ಹ್ಯಾಗೆ ಸೈರಿಸುವರೆ ಕೊಡು ಲೆಕ್ಕ ತೀರಿಸಿ
ಹೋಗಿರೆಂಬುತ ಸೆರಗ್ಹಿಡಿದು ನಿಲ್ಲಿಸಿದ ॥೧೬॥

ವಾಸವುಳ್ಳವನೇನೋ ನೀ ಸೆರಗ್ಹಿಹಿಡಿಯುತ
ಲೀಸುಂಕ ಕೊಂಬುವನೇನೋ ಪೋರಾ ನಿನ
ಗೇಸು ಕಣ್ಣುಗಳಿವೆ ಹೇಳೋ ಚೋರಾ ಸುಳ್ಳೆ
ಗಾಸಿಯಾಗ ಬ್ಯಾಡಾ ತಿಳಿಯೋ ಪೋರಾ ಬಂದು
ಕಾಸು ಕೊಟ್ಟರೆ ಎದಿ ಮ್ಯಾಲೆ ಕುಚ ಹೊತ್ತ
ಈಸು ನೀವುಗಳೆಲ್ಲ ಹೋಗು ಎಂಬುವನು ॥೧೭॥

ಬೆಡಗೀನ ಮಾತೆಷ್ಟು ಬಡಿವಾರ ಬಿಡು ನಿಮ್ಮ
ವಡವಿ ವಸ್ತ್ರಗಳ್ಹಾರ ಹರಿಯುವೆನು ಮುತ್ತು
ಜಡಿದಂಥ ಮುಖಕೆ ಮುರಿಯುವೆನು ಹೊತ್ತ
ಗಡಗಿ ವಡದು ಹಾಲ ಸುರುವುವೆನು ಸೀರಿ
ಸಡಲಿಸಿ ಶೆಳೆಮಂಚಕ್ಕೆಳದೊಯ್ದೆಲ್ಲರ
ಕೆಡಿಸದೆ ಬಿಟ್ಟರೆ ಹುಡುಗನಲ್ಲೆನಲು ॥೧೮॥

ಚಿಕ್ಕ ಹುಡುಗ ನೀನು ತಕ್ಕಷ್ಟು ಇರು ಕಂಡ್ಯಾ
ಅಕ್ಕ ತಂಗೇರ ಬಾಬಾ ಮತ್ತೆನುತಾ ಕೈಗೆ
ಸಿಕ್ಕದ್ಹೋಗುವನ ಕಟ್ಟು ಕಟ್ಟೆ ನುತಾ ಮುಸು
ಕಿಕ್ಕಿ ಸೆಳೆದು ಬಗಲೊಳಗಿಡುತಾ ಇಂಥಾ
ಮಕ್ಕಳಾಟಿಕಿ ಬಿಟ್ಟು ಮನಿಗೆ ಹೋಗೆಂದು ಮುಂ
ದಿಕ್ಕಿ ಹೆಜ್ಜಿಯು ಬಂದು ಮುತ್ತಿಕೊಂಡಿಹರು ॥೧೯॥

ಎತ್ತೆತ್ತ ನೋಡಲು ಮುತ್ತಿನ ಸಖಿಯರ
ಎತ್ತಿ ಸೀರಿಯ ಸೆರಗ್ಹಿಡಿವುತಲಿ ಮುಖ
ವೆತ್ತಿ ಮುಖಕೆ ಮುದ್ದ ನಿಡವುತಲಿ ಘನ
ವೃತ್ತ ಕುಚಗಳೊತ್ತಿ ಹಿಡಿವುತಲಿ ತನ್ನ
ವತ್ತಿ ಸುತ್ತಲಿ ಜತ್ತಿಲೆ ನೆಗೆದಂಜಿಸುತ್ತಲಿ
ಗೊತ್ತಿಲಿ ಅರ್ತಿಯಾಡುವನು ॥೨೦॥

ಆಡ್ವನು ಕೊಳಲೂದಿ ಹಾಡ್ವನು ಸತಿಯರ
ಕಾಡ್ವನು ಕಾಮಿನಿ ನಿಕರದೊಳು ಮುದ್ದು
ಬೇಡ್ವನು ಅತಿ ಚಮತ್ಕಾರದೊಳು ಚಂಡ
ನಾಡ್ವನು ವರಕುಚ ಗಮಕದೊಳು ತಂತ್ರ



ಮಾಡ್ವನು ಮನದಿ ಲೋಲಾಡ್ವನು ಸಿಗದೆದ್ದು
ವೋಡ್ವನು ನಿಂತು ಮಾತಾಡ್ವನು ನಯದಿ ॥೨೧॥

ಜಡಜಾಕ್ಷ ತಾ ನಿಂತು ಮಡದೆಯರೊಳಗೆ ಬಲು
ಬೆಡಗು ತೋರಿಸಿ ಸೀರಿ ಕಳವುತಲಿ ಗಜ
ನಡಿಗೆಯರೆಲ್ಲ ಬತ್ತಲಾಗುತಲಿ ತಮ್ಮ
ತೊಡಿ ತೋಳು ಕುಚ ನೋಡಿ ನಾಚುತಲಿ ಕೃಷ್ಣ
ತಡಿಯದೆ ಮುಗುಳ್ನಗೆಯೊಡ ನೋಡಿ ಬಂದು ತಾ
ಕಡವಾಲ ಮರನೇರಿ ಬಿಡದೆ ನೋಡುವನು ॥೨೨॥

ಬಾಲೆಯರೆಲ್ಲರು ಬತ್ತಲಾಗುತ್ತ ಗಿಡದಡಿಯ
ಮ್ಯಾಲಕ್ಕೆ ಕರವೆತ್ತಿ ಪೊಗಳುವರು ಶ್ರೀಗೋ
ಪಾಲ ನಿಮ್ಮೊರೆ ಹೊಕ್ಕೆವೆಂಬುವರು ಘನ
ನೀಲ ಮೇಘ ಶ್ಯಾಮ ಕರುಣದಲಿ ಹಿಂದೆ
ಪಾಲಿಸಲಿಲ್ಲವೆ ಅಂದಂಬರೀಶನ
ಶಾಲೆಯ ಕೊಟ್ಟಮ್ಮಾ ಕಾಯ್ವುದೆಂದನಲು ॥೨೩॥

ದುರುಳ ದುಃಶಾಸನನು ನೆರದ ಸಭೆಯೊಳಗೆ
ತರುಣಿ ದ್ರೌಪದಿ ಸೀರಿ ಸೆಳುವುತಿರೆ ಕಂಡು
ಪರಿವಾರ ಜನ ಮರುಗುತಿರೆ ಕೃಷ್ಣಾ
ಪೊರಿಯೋ ಪೊರಿಯೋ ಎಂದು ಸ್ಮರಿಸುತಿರೆ ಅಂದು
ಮರಿಯಲಿಲ್ಲದೆ ದೇವಾ ಪರಮ ದಯಾಳು ನೀ
ಕರುಣೇಲಿ ಕಾಯಭಿಮಾನನೆಂಬುವರು ॥೨೪॥

ಮಾರಜನಕ ಮಾಯಕಾರ ಮಹಿಮನೆಂದು
ನಾರೇರು ಸ್ತುತಿವಾಕ್ಯ ಸುರಿವುತಿರೆ ಬಂದು
ಬಾರಿ ಬರಿಗೆ ಬಾಯದೆರೆವುತಿರೆ ಮನ
ಸೂರಾಗದೆಂದಾಲ್ಪ ಪರಿವುತಿರೆ ಮತ್ತೆ
ಧಾರಿಣಿಯೊಳು ಕುಂದಗೋಳಶ್ರೀ
ಗುರು ಸಖ ಭೂರುಹನಿಳಿದು ನಾರಿಯರ ರಕ್ಷಿಸಿದಾ ॥೨೫॥

* * *

## ೭. ಪಾಂಡವರ ಅಜ್ಞಾತವಾಸ

ಪಾಡಿರಿ ಪಾಂಡವರ ನುಡಿ ಪ್ರೇಮದಿಂದೆ । ಪಾಡಿರಿ ಜನ ಕೂಡಿರಿ ॥
ಮೊದಲಿಗೆ ನೆನದೇನು ಗುರುವಿನ ಅಡಿಯ ।
ಮುದದಿಂದ ಮತಿಕೊಟ್ಟು ಸಲಹೆನ್ನ ಒಡೆಯ ॥
ಪದುಳದಿ ಪಾಡುವೆ ಪಾಲಿಪುದು ನುಡಿಯ ।
ಮದನಹರ ಬೆಳಸಯ್ಯ ಕವಿತದ ಕುಡಿಯ ||೧||

ದ್ವಾಪರಯುಗದಲ್ಲಿ ಧರ್ಮರಾಯನು ।
ಭೂಪತಿ ದುರ್ಯೋಧನನ ಕೂಡಿನ್ನು ॥
ವಿಪರೀತ ಕಾಲಕ್ಕೆ ಲೆತ್ತ ನಾಡಿದನು ।
ದ್ರೌಪದಿ ಸಹಜವಾಗಿ ಸೋತು ತೆರಳಿದನು ||೨||

ಹನ್ನೆರಡು ವರುಷ ವನವಾಸಗಳಿದು ।
ಇನ್ನೊಂದು ವರುಷ ಅಜ್ಞಾತವುಳಿದು ॥
ಚನ್ನಾಗಿ ಧೌಮ್ಯ ಋಷಿಯಿಂದ ತಿಳಿದು ।
ಮುನ್ನಿದ್ದ ರೂಪದ ಕುರುಹು ತಾವಳಿದು ||೩||

ಧರ್ಮರಾಯನು ಕಂಕ ಭೀಮ ಬಾಣಸಿಗ ।
ನರ ಬೃಹನ್ನಳೆ ನಕುಲ ಗಾಯ್ಬನು ತುರಗ ॥
ಸುರಭಿ ಪಾಲಕ ಸಹದೇವ ದ್ರೌಪದಿ ಸಹ ।
ಕುರುಹು ತಪ್ಪಿಸಿ ನಿಂತು ಮತ್ಸ್ಯಪುರದೊಳಗೆ ||೪||

ವಿರಾಟ ರಾಜನ ಮಂದಿರದೊಳಗೆ ।
ಇರುವಂಥ ಕೀಚಕ ಸೈರಂಧ್ರಿಯಳಿಗೆ ॥
ವಾರಿನೋಟದಿ ನೋಡಿ ಮನದೊಳಗೆ ।
ಸೈರಿಸದಲೆ ಪೋಗಿ ಸುಧೇಷ್ಣಿ ಬಳಿಗೆ ||೫||

ಅಕ್ಕ ಈ ಸ್ತ್ರೀಯಳು ದಾರೆಂದು ಎನಗೆ ।
ತಕ್ಕವಳಿವಳೆಂದು ಪೇಳುವೆ ನಿನಗೆ ॥
ಅಕ್ಕರದಿ ಅನಕೂಲ ಕೇಳಿ ಅವಳಿಗೆ ।
ಚಕ್ಕನೆ ಕಳಿಸಮ್ಮ ಕಾಮಕೇಳಿಗೆ ||೬||



ತಮ್ಮ ಕೇಳೆಲೊ ನೀನು ಹುಮ್ಮತನ ಬೇಡ ।
ತಮ್ಮ ಹೊತ್ತಿಗಾಗಿ ಬಂದವರ ಕೂಡ ॥
ನಮ್ಮ ಮನ ಬಂದಂತೆ ಆಡುವರೆ ಬ್ಯಾಡ ।
ಸುಮ್ಮನೆ ಪೋಗಿನ್ನು ಇಲ್ಲಿಂದ ಮೂಢ ||೭||

ಮನಸಿಜನ ತಾಪವು ಘನವಾಯಿತೆನಗ ।
ಅನುಮಾನ ಅಣು ಮಾತ್ರ ಬೇಡ ನಿನ್ನೊಳಗ ॥
ಮನಸೋತೆ ಮಾನಿನಿಗೆ ಭ್ರಮೆಗೊಂಡೆನೀಗ ।
ಸನುತದಿ ಕಳಿಸಮ್ಮ ನೀನನ್ನ ಬಳಿಗೆ ||೮||

ಪರನಾರಿಯರ ಸಂಗ ತರಿ ಕೆಂಡದ್ಹಂಗ ।
ಉರಿ ಕೆಣಕಿ ಅರಗು ತಾ ಕರಗಿ ಹೋದ್ಹಂಗ ॥
ಮರುಳ ಬುದ್ಧಿಯಿಂದ ಕೆಡದಿರು ಈಗ ।
ಹುರುಳಿಲ್ಲ ಪರ ನಾರಿಯರ ಸಂಗದೊಳಗ ||೯||

ನೀತಿ ಮಾತುಗಳನ್ನು ಆಡದಿರಕ್ಕ ।
ಸೋತು ಸಾವಿರ ಖರ್ಚು ಮಾಡಲು ರೊಕ್ಕ ॥
ನೂತನಾಂಗಿವಳೆನಗೆ ಇರುವಳು ತಕ್ಕ ।
ಮತ್ತೇಸು ಜನ್ಮವು ಬೇಕು ಸಿಗಲಿಕ್ಕ ||೧೦||

ಕಾಮಿನಿಯರ ಕಂಡು ಮನಸು ಎಳಸುವದು ।
ಪಾಮರನನು ಬಾಧೆ ಗುರಿಯ ಮಾಡುವದು ॥
ತಮ್ಮ ತಿಳಿಯದು ನಿನಗ ಮುಂದೇನಾಗುವದು ।
ಕಾಮನ ಗುಣ ನಿನಗ ಪರಿಣಾಮಗುಡದು ||೧೧||

ತಡೆಯಲಾರೆನು ಕಾಮನ್ಹೊಡತವು ಚೀಳ ।
ಕಡದಂತೆ ಜುಣಕಟದ್ಹಂಗ ತಾಳ ॥
ಇಡುವದು ಮೈಯೆಲ್ಲ ಇರಿತವು ಬಹಳ ।
ಕಡು ಬೇಗ ಕಳಿಸೆನ್ನ ಪ್ರಾಣ ಪಡಕೋಳ ||೧೨||

ಮಂದ ಬುದ್ಧಿಯಲಿಂದ ಮಾತಾಡದಿರು ।
ಮಂದಗಮನಿಗೆ ಐದು ಮಂದಿ ಗಂಡರು ॥
ಬಂದ ಕೇಳಲು ನಿನ್ನ ಕೊಂದು ಹಾಕುವರು ।
ಗಂಧರ್ವ ಪುರುಷರು ಸಮರ್ಥರವರು ||೧೩||

ಗಂಧರ್ವರೆಂಬುವರು ಗಂಭೀರರೇನು ।
ಬಂದ ಮೇಲವರನ್ನ ನೋಡಿಕೊಂಬುವೆನು ॥

ಸುಂದರಾಂಗಿನ ಮುಂದ ಕಳಿಸಮ್ಮ ನೀನು ।
ಕಂದರ್ಪ ಶರಬಾಧಿ ತಾಳಲಾರೆನು ನಾನು ॥೧೪॥

ಎಷ್ಟು ಪೇಳಿದರ ತಿಳಿಯದು ನಿನಗೆ ।
ಘಟ್ಯಾಗಿ ಕಳಿಸುವೆ ನಡೆ ನಿನ್ನ ಮನಿಗೆ ॥
ಕೊಟ್ಟಳು ಬಟ್ಟಲ ಸೈರೆಂಧ್ರಿಯಳಿಗೆ ।
ಥಟ್ಟನೆ ಮಧು ಕೊಡು ಬಾರಮ್ಮ ಈಗೆ ॥೧೫॥

ತರಳಿಯೆ ಮಾತೊಂದು ಲಾಲಿಸಿ ಕೇಳ ।
ಮರುಳ ಕೀಚಕ ಎನ್ನ ಮಾರಿ ಹುಳಹುಳ ॥
ಸರಳವಿಲ್ಲದೆ ಮುಖನೋಡಿದನು ಬಹಳ ।
ತರಲಾರೆ ಕಳಿಸಮ್ಮ ಪರದೂತಿಯಳ ॥೧೬॥

ಊಳಿಗಾದವಳಿಗೆ ಇಷ್ಟ್ಯಾಕ ಬೇಕ ।
ಹೇಳಿದ ಮಾತೊಂದು ಕೇಳುವದೆ ಸಾಕ ॥
ಸುಳ್ಯಾಕ ಸೈರಂಧ್ರಿ ಮಾಡತಿ ಯಾಕ ।
ಒಳ್ಳೆದಾಯಿತು ಮಧುತಾರ ಈ ಕ್ಷಣಕ ॥೧೭॥

ಪರರಲಿದ್ದೇನ ಪ್ರಾಣ ಸಂಕಷ್ಟವೆಂದು ।
ದೊರಿಯಳ ನುಡಿ ಮೀರಬಾರದೆಂದು ॥
ಹರಿದೇವ ಮೊರಿಕಾಯೊ ತ್ವರಿತದಿ ಬಂದು ।
ದುರುಳ ಕೀಚಕನೆಡೆಗೆ ಪೋಗುವೆನೆಂದು ॥೧೮॥

ತರುಣಿ ಮಧು ತರಲಿಕ್ಕೆ ಬರುವದನು ಕಂಡ ।
ಭರದಿ ಕೀಚಕ ಬಂದು ಮುಡಿ ಪಿಡಿದುಕೊಂಡ ॥
ದುರುಳ ಹಿಡಿಯದಿರು ಎನಗ ಮಾಡುವೆನು ಭಂಡ ।
ಕರುಣದಿ ಮೊರಿ ಕಾಯೊ ತೇಜಮಾರ್ತಂಡ ॥೧೯॥

ಅಯ್ಯಯ್ಯೋ ಶಿವಶಿವ ಏನಾಯಿತೆಂದು ।
ಕೈಕಾಲ ಅಪ್ಪಳಿಸಿ ಮನದಲ್ಲಿ ನೊಂದು ।
ಸಾಯಲಾರೆನು ದಿಕ್ಕ ಒಬ್ಬರಿಲ್ಲೆಂದು ।
ಕಾಯಯ್ಯ ಅಭಿಮಾನ ಶ್ರೀಕೃಷ್ಣಬಂದು ॥೨೦॥

ಎಷ್ಟು ಪರಿಯಲಿ ಕೃಷ್ಣ ಧ್ಯಾನಿಸಲಿ ನಿನ್ನ ।
ಅಷ್ಟ ದಿಕ್ಪಾಲಕರೆ ಉಳುವಿನಕೊಳಿರೆನ್ನ ॥
ದುಷ್ಟ ಕೀಚಕ ಕೊಂಬ ಎನ್ನ ಅಭಿಮಾನ
ನಿಷ್ಠೆಯಲಿ ಮಾಡಿದಳು ಸೂರ್ಯನ ಸ್ತವನ ॥೨೧॥



ತರಣನಸ್ತುತಿಸಲು ದ್ರೌಪದಿ ಬಳಿಗಿ ।
ಕರುಣದಿ ಕಳಿಸಿದ ಪುಂಡ ದೈತ್ಯನಿಗಿ ॥
ಕರಪಿಡಿದು ಎಳದೊಯ್ದು ಅಸುರ ಕೀಚಕಗೆ ।
ತರುಣಿ ಬಂದಳು ಕೊಸರಿ ಭೀಮನಿದ್ದೆಡೆಗೆ ॥೨೨॥

ಮರುತ ಸುತನಿಗೆ ನಾರಿ ದ್ರೌಪದಿ ಬಂದು ।
ಕರ ಮುಗಿದು ಶಿರ ಬಾಗಿ ಅಳುತಲಿ ನಿಂದು ॥
ಪುರುಷರಿಲ್ಲದ ಬಾಳ್ವೆ ಆಯಿತು ನಂದು ।
ಮರಿಯಾದಿ ಕೊಳುತಿದ್ದ ಕೀಚಕನೆಂದು ॥೨೩॥

ಪುರುಷ ನಿನಗ ನಾನು ಒಬ್ಬವನೇನ ।
ಇರುವರೈದು ಮಂದಿ ಕೇಳು ಎಲ್ಲರನ ॥
ಧರ್ಮರಾಯನ ಆಜ್ಞೆ ಆದರೆ ಅವನ ।
ಮರಣ ಮಾಡಿ ಸುಡುವೆ ದುರುಳ ಕೀಚಕನ ॥೨೪॥

ಮಂಡಲದೊಳು ಪುಂಡರೆಂದು ಪಾಂಡವರು ।
ಕಂಡ ಜನರು ಬಿರುದು ಹೊರಗ ಸಾರುವರು ॥
ಗಂಡರಿದ್ದೀರಿ ನೀವು ಗಂಡರೈವರು ।
ಭಂಡು ಮಾಡಿಕೊಂಡ ಕೀಚಕ ನನ್ನಬರು ॥೨೫॥

ಭೀಮ ತಾಮಸಗೊಂಡು ಕಾಮಿನಿಯೊಳಗೆ ।
ನೀನು ಹಚ್ಚಿ ಮಾತು ಆಡುವಿ ನಮಗ ॥
ರೋಮಗಳು ಗುಡಿಗಟ್ಟಿ ಸಿಟ್ಟೇರಿ ಆಗ ।
ರಮಣಿಗೆ ಪೇಳಿದ ಯುಕ್ತಿಯನು ಹೀಗ ॥೨೬॥

ಕೀಚಕನ ಕರದಿಷ್ಟು ಏಕಾಂತ ತಿಳಿಸು ।
ಯೋಚನೆ ಬಿಡು ಬರುವೆನೆಂದು ಸಂತೈಸು ॥
ನೀಚ ನಿರ್ಬುದ್ಧಿಯ ಕೀಚಕನ ಅಸು ।
ಕಿಚ್ಚಿನೊಳ್ಪೊಂದಿಸುವೆನೆಂದು ನಿಚ್ಚೈಸು ॥೨೭॥

ಮರುತ ಸಂಭವ ನಾರಿ ವೇಷವ ತೊಟ್ಟು ।
ಗರಡಿ ಮನಿಯಲ್ಲಿ ಮಲಗಿ ಮುಸುಕಿಟ್ಟು ॥
ದುರುಳ ಕೀಚಕ ಭರದಿಂದ ಬಂದನು ಹೊರಟು ।
ತ್ವರಿತದಿ ಬಿಡು ನಾರಿ ಕುಪ್ಪಸದ ಗಂಟು ॥೨೮॥

ಬಿಡುವೆನು ಬಾರೆನ್ನ ಒಡೆಯನೆ ನೀನು ।
ಸಡಗರದಿ ಹಾಸಿಗೆಯ ಮಾಡು ಸಂಗ್ರಾಮ ॥

ಕಡುಬೇಗ ಬಂದಿರುವೆ ನಿನ್ನಡಿಗೆ ನಾನು ।
ಗಡಬಡ ಇಷ್ಟ್ಯಾಕ ಮಾಡುವದು ನೀನು ॥೨೯॥

ನಾರಿಯ ಧ್ವನಿಯಲ್ಲ ದಾರೆಲವೊ ನೀನು ।
ಸಾರಿ ಪೇಳೆಲೊ ಪುರುಷ ಸ್ತ್ರೀಯಳಾದವನು ॥
ಚಾರು ನಾಮವ ಪೇಳಿ ಮಾಡೊ ಯುದ್ಧವನು ।
ಸಾರದಿದ್ದರೆ ನೀ ರಣಹೇಡಿ ಎಂಬುವೆನು ॥೩೦॥

ಪಾಂಡವ ಸುತ ನಾನು ಇದ್ದೇನು ಭೀಮ ।
ರಂಪ ರಣದಲಿ ನಿಂತು ಕೇಳುವರೆ ನಾಮ ॥
ಪುಂಡನಾದರೆ ತೋರೊ ನೀ ಪರಾಕ್ರಮ ।
ಷಂಡನಾದರೆ ಸುಟ್ಟು ಹಾರಿಸುವೆ ಧೂಮ ॥೩೧॥

ಶೂರನಾದವ ಉಟ್ಟು ಬರುವನೆ ಸೀರಿ ।
ನಾರಿಯಂಥವ ಎತ್ತಿ ತೋರೆನಗ ಮಾರಿ ॥
ಮೀರಿ ಹೋದರೆ ಬಿಡೆನು ಬಿಚ್ಚುವೆನು ಸೀರಿ ।
ನೀರನವ ಹರಿಸುವೆನು ರಕ್ತಧಾರಿ ॥೩೨॥

ಮಡದಿ ಅಲ್ಲವೊ ನಿನ್ನ ಇದಿಗಂಡ ನಾಮ ।
ಕಡಿದು ಹಾಕುವೆ ನಿನ್ನ ರುಂಡ ದಂಡವನು ॥
ಹಿಡಿಕಿಯೊಳು ತಲಿಪಿಡಿದು ಚೆಂಡನಾಡುವೆನು ।
ಬಿಡದೆ ಮೃಗ ಪಕ್ಷಿಗೆ ಖಂಡ ಹಂಚುವೆನು ॥೩೩॥

ಕರಿ ಕೇಸರಿಯ ಬಲಕೆ ಸರಿ ಎನಿಸುವದೆ ।
ಗರುಡನ ಆರ್ಭಟಕೆ ಉರಗ ತಾಳುವದೆ ॥
ಹರಿದಾಡೊ ಇಲಿ ಬೆಕ್ಕಿನೆದುದರ ನಿಲ್ಲುವದೆ ।
ಗಿರಿ ವಜ್ರದ್ಹೊಡತಿಗೆ ತಾನು ಬಾಳುವದೆ ॥೩೪॥

ಹಮ್ಮಿನ ಮಾತುಗಳು ಆಡದಿರು ಬಹಳ ।
ಗುಮ್ಮಿದರೆ ಬಿದ್ದಾವು ಹೊಟ್ಯಾನ ಕರುಳ ॥
ಸುಮ್ಮನಿರು ಇಷ್ಟಕ ಹುಮ್ಮತನ ಖೂಳ ।
ಒಮ್ಮೆ ನಿನಗೊದಗಿತ್ತು ಬಂದಿನ್ನು ಕಾಳ ॥೩೫॥

ಘುಡಿಘುಡಿಸಿ ಕೀಚಕನು ಪಟಪಟನೆ ಚೀರಿ ॥
ಕಿಡಿಕಿಡಿಯನುಗುಳುತ್ತ ಕೆಂಡವನು ಕಾರಿ ॥



ಷಡಷಡನೆ ಗದ್ರಿಸುತ ಅಬ್ಬರದಿ ಹಾರಿ ।
ಅಡರೇರಿ ಆರ್ಭಟವು ಮಾಡಿದನು ಭಾರಿ ॥೩೬॥

ಜೊಗ್ಗಿ ಹಗ್ಗದಂತೆ ಹಿಗ್ಗಿಸುವೆ ನಿನ್ನ ।
ನುಗ್ಗು ನುಗ್ಗು ಮಾಡಿ ಕಿತ್ತುವೆನು ಕಣ್ಣ ॥
ಬುಗ್ಗಿಯು ಪುಟದಂತೆ ರಕ್ತ ಮೈ ಹಣ್ಣ ।
ಬಗ್ಗಿಸಿ ಗುದ್ದಿದರೆ ಮುಕ್ಕಿ ಹಿಡಿಮಣ್ಣ ॥೩೭॥

ಸೊಕ್ಕಿದ ರಕ್ಕಸನ ಪೊಲ್ಲ ಕೀಚಕನು ।
ಉಕ್ಕೇರಿ ಕುಕ್ಕಿರಿವೆನೆಂದು ಭೀಮನನು ॥
ತೆಕ್ಕಿಯೊಳ್ತೆಕ್ಕೊಂಡು ತಿಕ್ಕಿ ನೆಲಕವನು ।
ಇಕ್ಕಿಳಿಕಿ ಪರಿಯಂತೆ ಪಿಡದ ಕಾಲವನು ॥೩೮॥

ಸಿಕ್ಕ ಭೀಮನು ಎಂದು ದ್ರೌಪದಿಯು ಬಂದು ।
ಅಕ್ಕರದಿ ಕೀಚಕನ ಎದುರಲ್ಲಿ ನಿಂದು ॥
ಸೊಕ್ಕಿದ ಕೀಚಕನ ಬಲ ಇಳಿದು ಕುಂದು ।
ಚಕ್ಕನೆ ಬಂದಿತು ಮರಣೊದಗಿ ಮುಂದು ॥೩೯॥

ದುರುಳ ಕೀಚಕನ್ಹಿಡಿದ ಬಲಭೀಮ ವೈರಿ ।
ಹರಿನಾದ ಗೈಯುತ್ತ ಖೋ ಎಂದು ಚೀರಿ ॥
ಧರಣಿ ಮೇಲ್ಕೆಡಮೆಟ್ಟಿ ಸೀಳಿದನು ವೈರಿ ।
ಮರಣಾದನಾ ಕ್ಷಣಕ ಹೊಡಿಸಿ ರಣಭೇರಿ ॥೪೦॥

ಶಿರಸಿಗಿ ಪುರದಲ್ಲಿ ಮೆರಿವನು ಬಸವ ।
ದುರುಳ ಕೀಚಕನಿಗೆ ಮಾಡಿಸಿ ವಧವ ॥
ಕುರುಳಿನ ಥಾಳಿ ವಟ್ಟಿಸಿ ಸುಡುವ ।
ನೆರಿದ ಜನರು ಪಾಡಿ ಹೋಳಿಯ ಪದವ ॥೪೧॥

* * *

## ೮. ದಕ್ಷಬ್ರಹ್ಮನ ಕಥೆ

ಏರ

ಸಿಂಧೂರ ಮುಖದವನೇ ದ್ವಂದ್ವ ಕರಗಳನ್ನು ಮುಗಿದು
ವಂದನೆ ಮಾಡಿ ನಮಿಸುವೆನು ।......ಪಲ್ಲ ।

ಚಾಲ

ಸಿದ್ಧಿ ವಿನಾಯಕ ವಿದ್ಯೆ ಸಾಗರಾ
ಶುದ್ಧ ಸಭಾ ಮಂಟಪಾ । ಕೂಡಲೇ ಬುದ್ಧಿ ಕೊಡೋ ಈ ಗಣಪಾ ॥
ಪೃಥ್ವಿ ಪಾಲಿಪ ಗಣಪಾ ಅಕ್ಷರ ತಿದ್ದಿ ಮಾಡೋ ಸಾಹಿತಾ
ಕರುಣಾ ಸಾಗರಾ ಮರಣ ರಹಿತನೇ ರಾಣಿ ತೊಡೆಯ ಮೇಲೆ ಕೃಪಾ
ಜೀರಣ ಮಾಡಿ ಸುತ್ತಿದಿ ಸರಪಾ ।
ಕುಕ್ಷಿಗೆ ಪೂರ್ಣ ಬಿದಗಿ ಚಂದ್ರಗ ಇಟ್ಟಿ ಶಾಪಾ ।
ವಂದನೆ ಮಾಡಿ ನಮಿಸುವೆನು ಇಂಚಲದ ಕಂದನ ಮ್ಯಾಲ
ಕರುಣಾ ಇರಲಿ ॥ಪ॥

ಏರ

ದಕ್ಷಬ್ರಹ್ಮನ ಕಥೆ ಲಕ್ಷಿಟ್ಟು ಲಾಲಿಸಿರಿ
ನಕ್ಷತ್ರ ಪತಿಯ ಧರಿಸುವರು ॥

೧

ಸಣ್ಣ ದೊಡ್ಡ ಜನಾ ಚೆನ್ನಾಗಿ ಕೇಳರಿ
ಉನ್ನತವಾದ ಕಥೆಯ ।

ಚಾಲ

ಹೇಳುವೆನು ಪನ್ನಂಗಧರನ ಸತಿಯ ಬಣ್ಣ ಬಡಿಯುತ
ಗನ್ನ ಘಾತಕನೆಂದು ಹೇಳ್ಯಾಲ ಪಾರ್ವತಿಯೆ ಇದ್ದಮ್ಯಾಲ
ಯಾರಾದರ ಗತಿಯಾ ।
ನಾ ಅಂದ್ರ ನರಕ ಪ್ರಾಪ್ತಿ ಸಾರತಾವ ಸೃತಿಯಾ
ಇನ್ನ ಮುಂದ ಕೇಳರಿ ಕ್ಷೇಮ ।
ದಕ್ಷಬ್ರಹ್ಮ ಮಾಡಿದ ಹೋಮಾ ॥

ಏರ

ನಕ್ಷತ್ರ ಪತಿಯ ಧರಿಸಿದನೋ ಹೋಮವನು
ಆ ಕ್ಷಣ ಮಾಡಿ ಬ್ರತಗೆಟ್ಟಾ ॥

೨

ಗದ್ದರಿಸಿ ಗದ್ದರಿಸಿ ರುದ್ರ ಅವತಾರ ತಾಳಿ
ಭದ್ರ ಹುಟ್ಟಿದನೋ ಅದಕಾಗಿ ।

ಚಾಲ

ಲಾಲಿಸಿ ಕೇಳಿರಿ ಮೇಲಾದ ಕಥಿ ನೀವಾ
ಲೀಲಾ ಹೇಳುವೆ ನಾನು ।
ಬಲ ವೀರಭದ್ರ ಮಾಡಿದ ಕದನ
ತೊದಲ ನುಡಿಯಿಂದಾ ನಾ ಮೊದಲ ಹೇಳತೇನೋ
ಬದಲ ಬಿದ್ರ ಬೆನ್ನಾ
ಹಾಸ್ಯ ಮಾಡಿ ಕದಲಬ್ಯಾಡ್ರಿ ಜನಾ
ಮಂದಮತಿ ನನಗೆ ಬಂದಷ್ಟು ಹೇಳತೇನೋ
ಮುಂದಿನ ಸಂದವನ್ನು ।
ದಕ್ಷಬ್ರಹ್ಮಗ ಬಂತೊ ಗರ್ವ ।
ಅವನ ಮ್ಯಾಲ ಮುನಿದ ಗುರುವಾ ।

ಏರ

ಭದ್ರ ಹುಟ್ಟಿದನೋ ಅದಕ್ಕಾಗಿ ದಕ್ಷನ್ನ
ಚಿದ್ರ ಮಾಡಿ ಬಿಟ್ಟ ಕಥಿ ಕೇಳೋ ।

೩

ಚಂದ್ರಮುಖಿ ಪಾರ್ವತಿಯಮ್ಮಾ
ತಂದಿ ದಕ್ಷಬ್ರಹ್ಮ ಅಂದಾನೋ ತನ್ನ ಮನದೊಳಗ

ಚಾರ

ಭವನ ಕರ್ತಾ ಶಿವಗ ನಾವು ಮಾವನಾಗ ಬೇಕಿನ್ನ
ಯಾವನ ಅಂಜಿಕಿಯೇನ ಇಲ್ಲ ನನಗಿಂದ
ಇಂದುಧರಗ ನನ್ನ ಮಗಳ ಸುಂದ್ರ ಪಾರ್ವತಿನ್ನ ಕೊಟ್ಟ ಮಂದ
ಹಾಸದಿಂದ ನನ್ನ ಉಮ್ಮೇದ ।
ಹರನು ಅಳಿಯ ಆದಮ್ಯಾಲ ಹರಿ ಬ್ರಹ್ಮರಿಬ್ಬರು ನನ್ನ
ಚರಣ ಸೇವಕರು ಸಜ್ಜ ।
ಅದರಂತೆ ಇದರಿಲ್ಲ ನನಗ ಯಾರು ಪ್ರಸಿದ್ಧ

ಸತ್ತವರ ಲೋಕ ವೈಕುಂಠವು ಮತ್ತು ಕೈಲಾಸದಕ್ಕಿಂತ ನನ್ನಕ್ಕಿಂತ ದೊಡ್ಡವರಿಲ್ಲ ।
ನಾನಾ ಭಾಳ ಉದ್ದ ಮೂರಲೋಕ ನೊರಜಿನ ಪರಿ ಹಾರಿದಂಗ ಕಾಣಸ್ತೈತಿ
ಹರಾ ನನಗ ಅಬರು ಕೊಡತಾನ ಎದ್ದು ।
ಇಷ್ಟ ತಿಳಿದ ದಕ್ಷಬ್ರಹ್ಮ ಚಟ್ಟನೆದ್ದ ಕೈಲಾಸಕ್ಕ ಹೊರಟ
ಹೋದ ಹೋದ ಹಮ್ಮಿನಿಂದ ।
ನೆಟ್ಟಗೋಗಿ ಬಾಗಿಲದೊಳು ನಿಂತಿದ್ದ
ನೀಲಕಂಠ ಶಿವ ನನ್ನ ಕಾಲಮ್ಯಾಲ ಬೀಳತಾನ ಮೇಲಾದೆ
ನನ್ನ ಹೊರತ ಯಾರಿಲ್ಲ
ಮಾವನೆಂದು ಕರದು ಸಿಂಹಾಸನ ತಾ ಕೊಟ್ಟ ಸಿಂಹಾಸನದ ಕೆಳಗ
ತಾ ಕೂಡ್ರತಾನ ನಿರ್ವಾ ಇಲ್ಲ ।
ಮನಸಿನೊಳು ದಕ್ಷ ಬ್ರಹ್ಮ ತಾನೇ ತಾನೆ ಗೇನಸ್ತಾನಾ ।
ಅನುಮಾನವಿಲ್ಲ ನನಗಿನ್ನು ಯಾತರದು ।
ಇದರಿಲ್ಲ ನನಗೇನು ಪ್ರಸಿದ್ಧ ।

**ಏರ**

ಅಂದಾನೋ ತನ್ನ  ಮನದೊಳಗ ಕೈಲಾಸವ
ಹೊಂದಿ ಬಾಗಿಲಕ ನಿಂತುಕೊಂಡ

**೪**

ಅರಿಕಿ ಇಲ್ಲದ ಶಿವನು ತಿರಕ ಜಂಗಮ ನನ್ನ
ಕರಕೊಂಡ ಮಾನ ಕೊಡಲಿಲ್ಲ ।

**ಚಾಲ**

ಕೈಗಾಯಿತ ಬನ್ನಿ ಇಷ್ಟ ದಿನಾ ಉದ್ದಾದ ಶಂಕರನ್ನ
ಮಾಡಬೇಕ ಹ್ಯಾಂಗ ॥
ನನ್ನ ಮಾಡಿದಾ ಕಾಲಕಸದಂಗ ।
ಎಷ್ಟ ಸುಮಾರ ಕಂಡೇನ ನಾ ಇವಗ ।
ಮಗಳ ಕೊಡಬಾರದಿತ್ತೋ ಈ ಜಗಳಗಂಟ ಜಂಗಮಗ । ಈ ಜಂಗಮಗ
ಇನ್ನೇನ ಮಾಡಲಿ ಮಸಲತ್ತ ದಕ್ಷಬ್ರಹ್ಮನಿಂತ ।
ತಪ್ಪ ಮಾಡ್ಯಾನೋ ಅಪಮಾನ ಆಗಿ ಹಿಂದಕ ಹೋಗ್ಯಾನೋ
ಸಿಟ್ಟ ಬೆಂಕಿ ಕಿಡಿ ಕಾರ್ಯಾನೋ ಕಾರ್ಯಾನೋ ।

**ಏರ**

ಕರಕೊಂಡ ಮಾನ ಕೊಡಲಿಲ್ಲೊ
ದಕ್ಷಗ ದಾಕ್ಷಿಣ್ಯ ಇಲ್ಲೊ ಯಾರ್‍ಯಾರದು ।



**೫**

ಖೊಟ್ಟಿ ಶಿವನನ್ನು ಕೊಂದ ಕಟ್ಟಬೇಕೋ ಕೈಲಾಸಕ
ಪಟ್ಟವನ್ನು ನಮ್ಮ ಸ್ತ್ರೀಯರಿಗೆ

**ಚಾಲ**

ಲಕ್ಷಾವುದದಾ ಏಳನೂರ ಗಾವುದ ಅಡ್ಡಾಗಲ
ಕುಂಡಾ ತಗಸಿದಾರ ಹೋಮ ಮಾಡೋದಕ
ಗಣತಿ ಇಲ್ಲದ ಎಣ್ಣಿ ಕೊಂಡಾ ಕುಣಕೋತ ಬ್ರಾಹ್ಮಣರ ಬಂದಾರ
ಹಣಿಸಿದಾರೋ ।
ಕುಂಡದೊಳಗ ನಕ್ಕೊಂತ ಒಂದ ಕ್ಷಣದೊಳಗ
ಹೋಗತಾನ ಶಿವಸತ್ತಾ
ಮಲ್ಲಂಭಟ್ಟನು ಬಂದ ಕಲ್ಲಂ ಭಟ್ಟನು ಬಂದಾ
ಎಲ್ಲಂ ಭಟ್ಟರೆಲ್ಲಾ ಕೂಡಿದರು
ತಿಮ್ಮನ ಭಟ್ಟರು ಭಾಳ ಹಮ್ಮಿಂದ ಅಂತಾನ
ಸಮ್ಮಂತ ಆಡಿ ನನಗ ಮಜಕೂರಾ ।
ನೀಲಕಂಠ ಶಿವಗ ಇಂದ ಕಾಲ ಬಂದ ಸಾವತಾನ
ಮೂಲವಾಗಿ ಕುಂತಿದ್ದ ನಮ್ಮ ಜನಕ
ಕೃಷ್ಣಭಟ್ಟ ಅಂತಾನೋ ಹೌದ ಅದಕ

**ಏರ**

ಪಟ್ಟವನ್ನು ನಮ್ಮ ಸ್ತ್ರೀಯರಿಗೆ ಕೊಟ್ಟರ
ನೆಟ್ಟಗಿರುವದು ನಮ್ಮ ದೈವ ।

**೬**

ನೀಚ ಹಾರೋರೆಲ್ಲಾ ವಂಚನೆಯ ಮಾಡಿದಾರೋ
ಪಂಚ ಮುಖದವನ ಕೊಲ್ಲೋದಕ

**ಚಾಲ**

ಗುಂಡ ಭಟ್ಟ ಅಂತಾನೋ ತಕ್ಕೋ
ಮಂಡಿಗಿ ಬರಿ ನಿರ್ಮಳದ್ದಾ
ಸಂಡಿಗಿ ಹಪ್ಪಳ ಭಾಳ ಸಿಸ್ತಾ ॥
ನೀರ ಕುಡಿ ಬ್ಯಾಡರಿ ಹೋಳಿಗಿ ಹೊಡಿರಿ ಮತ್ತೊಂದ ಹತ್ತಾ ॥
ಕ್ಷೀರನ್ನ ಕರಿಗಡಬು ಏರಿಸಿ ಉಣ್ಣಿರಿ ಮತ್ತಾ ।
ಸವಿಸಾರ ಸುರಕೊ ಪಂಚಾಮೃತಾ
ಡೊನ್ನಿ ಡೊನ್ನಿ ತುಪ್ಪ ಯಾರದೇನು ಖಬರ ಇಲ್ಲ ಮತ್ತಾ ।
ಹೊಟ್ಟಿ ಮ್ಯಾಲ ಕೈಯಾಡಿಸಿ ಜುಟ್ಟಲ ಕೂದಲ ಬಡಬಡ ಕೊಂತ

ಊಟಮಾಡತಾರ ನಕ್ಕೋಂತ।
ಈಶ್ವರನ ಸಾವ ಗಟ್ಟಿ ಬಂತ ಇಂದ ಸಿದ್ಧಾಂತ।
ಕರಚಿಕಾಯಿ ತುಪ್ಪ ಉಂಡ ಹರಕಿ ಕೊಟ್ಟ ಹಾರೋರೆಲ್ಲಾ
ದಕ್ಷಿಣ ಕೊಡರೆಂತ ಬೇಡತಾರ
ಇಸಗೊಂಡ ದುರುಳ ದಕ್ಷ ಬ್ರಹ್ಮನ ಕೊಂಡಾಡುತ।

**ಏರ**

ಪಂಚಮುಖದವನ ಕೊಲ್ಲೋದಕ ಹಾರೋರು
ಹಂಚಿಕಿ ಹಾಕಿದರೋ ಹರುಷದಲಿ।

**೭**

ಹಿಂದ ಮುಂದ ನೋಡದಲೆ ಚುಂದನ ಹಾಕ್ಯಾರು ಅಗ್ನಿ
ದುಂದ ಆದೀತೋ ಧುಮಿಕಿಸಿತೋ

**ಚಾಲ**

ಭುಗಿ ಭುಗಿಲ ಹತ್ತಿತ ಉರಿ ಉರಿ ಪುಟ ಪುಟದಾಡಿ
ಜಿಗ ಜಿಗದ ಹತ್ಯಾವ ಕಿಡಿ ಒಂದಕ್ಕೊಂದ।
ನಗ ನಗತ ಉಪಾಧ್ಯಾರ ಬಂದ।
ದಕ್ಷಬ್ರಹ್ಮಗ ಆಗಿ ಆನಂದ।
ಉರಿ ಜ್ವಾಲ ಹೋತಿ ಕೈಲಾಸಪುರಕ ಒಮ್ಮಿಂದ ಪುರಕ।
ಆರ್ಭಟಿಸಿ ಅಗ್ನಿ ನಾಲಿಗಿ ಗಾಳಿ ಧುಸಿಗೆ ಚಾಲವರದಿತು ವರದಿತೊ
ಥಳ್ ಮಳಸಿ ಯೋಗಿ ಶಿವಗಾ ನಾ ಶಿವಗಾ
ಜಳ ತಾಳಲಾರದ ಬೀಳೋನಾ ಬೀಳೋನಾ।

**ಏರ**

ದುಂದ ಆದೀತೋ ದುಮಕಸಿತೊ ಕೈಲಾಸದ
ಮಂದೆಲ್ಲಾ ಅಂಜಿ ಥಳಮಳಸಿ।

**೮**

ಸಿದ್ಧ ಸಿಂಗ ಮುನಿಗಳು ಇದ್ದ ಸಾಧು ಸಂತರೆಲ್ಲಾ
ಎದ್ದ ಬಂದಾರೊ ಥಡಪಡಿಸಿ।

**ಚಾಲ**

ಸಿದ್ಧಯ್ಯ ಆಡಿದ ಮಾತು ಮುದ್ದು ಪಾರ್ವತೆಮ್ಮಾ ಕೇಳಿ
ಎದ್ದ ಬಂದ ನಮಸ್ಕಾರ ಮಾಡಿ
ಸೆರಗೊಡ್ಡುವೆ ಸ್ವಾಮಿ ಬುದ್ಧಿ ಹೀನನನ್ನ ಬಿಡರಿ ದಯಮಾಡಿ
ತರ್ಭಿ ಜಂಗಮ ನುಂಗಿದ ಮ್ಯಾಲ [ತರಬಿಪೆನ ಗೊಳೋ]



ಮೆದ್ದವರ್‍ಯಾರೋ
ತರಬವರ್‍ಯಾರು ಗುರುರಾಯನ ನುಡಿ
ಹಿಂಗೆಂದು ಚಂದ್ರಧರಗ ಪಾರ್ವತೆಮ್ಮ ವಂದನೆಮಾಡಿ
ಮಂದಿ ಮಾತ ಕೇಳಿ ನಮ್ಮ ತಂದಿ ಯಜ್ಞ ಮಾಡಿದಾನ
ನಂದಿಸಿ ಬರುವೆ ಹೋಮಾ ಲಗು ಮಾಡಿ ಕೊಡೋ ಹೋಗೊ
ಅವನ ಕಾಮ ಸಂವಾರ ಮಾಡಿ ಒಡ್ಡುವೆ ಬೇಡಿ

**ಏರ**

ಎದ್ದ ಬಂದಾರೋ ಥಡಪಡಿಸಿ ಅಂತಾರೋ
ಸಿದ್ಧಯ್ಯ ಬೆನ್ನ ಬಿದ್ದೇವ್ರೋ ॥

**೯**

ಏ ಈಶ್ವರ ಆಡಿದ ಮಾತ ಹುಸಿಯಲ್ಲ ನಿಜವೆಂದು
ಶಶಿಮುಖಿ ದೇವಿ ಕೇಳಿದಳು।

**ಚಾಲ**

ಮಾಡಬ್ಯಾಡೋ ಹಿಂತಾ ಯಜ್ಞ ಮಾಡ ಅಂದವರ ಯಾರ ನಿನಗ।
ಕೇಡಬಂತ ತಡವಿಲ್ಲ ಈ ಕ್ಷಣನಿನಗ ಬೇಡಕೋತೇನ ಯಜ್ಞ ಬಿಡರಿನ್ನ
ಶಿವ ಉರದ ಸಾಯತಾನೋ ಎಂದು ಅವಗುಣ ಅಪ್ಪ ನನ್ನ ಮಾತು ಕೇಳೋ
ಜಪ್ಪನೆ ನಂದಿಸೋ ಹೋಮ। ಕಪ್ಪುಗೊರಳವಗ
ಇಂದ ಆಗುವದು ಮರಣ।
ಆತು ತ್ರಿಪುರ ಸಂವಾರ ಪಂಚವದನ
ಇಂದ್ರ ಯುದ್ಧ ಮಾಡಲಾರದ
ಸಂದ್ರಿ ಹಿಡದ ಓಡಿ ಹೋದಾ
ಚುಂದ್ರಾಮಂದ ತಣ್ಣಗಾತು ಎದಿ
ಗದ್ದಲ್ಯಾತಕ ಬೇಕಂತ ಹಿಡದ ಹಾದಿ
ವರುಣಂದು ಏನ ಹೇಳಲಿ ಒಣಗೀತ ತುಟಿ।
ನೇರ ಹತ್ತೈತಿ ಅಂಜಿ ಕಡಿಯತೈತಿ ಹೊಟ್ಟಿ

**ಏರ**

ಶಶಿಮುಖಿ ದೇವಿ ಕೇಳಿದಳೋ ತನ್ನ ಪಿತನ
ದಶಿಲಿಂದ ಅರ್ಜಿ ಮಾಡಿದಳೋ।

**೧೦**

ಅಷ್ಟು ಬಲ ಸಂಹರಿಸಿರಿ ತುಟ್ಟ ತುದಿ ಆಚಿಕಿಂದ
ಬೆಟ್ಟ ಆದೀತೋ ಇಬ್ಬರಿಗಿ

ಚಾಲ

ಹುಚ್ಚನಂತ ವೀರಭದ್ರ ಕಿಚ್ಚಗಣ್ಣಿನ ದೇವನ ಮಗ
ಮುಚ್ಚಿ ನೇಮಾ ಕೊಡೋ ಏ ತಾತಾ
ಬತ್ತೀಸ ಹತಾರ ಬಿಚ್ಚಗತ್ತಿ ಬೆಳಕ ಜಳಿಪಿಸುತ
ಮಾರಹರನ ಮಹಿಮೆ ಮತ್ತ
ಯಾರಿಗೆ ತಿಳಿಯದೋ ಇತ್ತ।
ಮಾರಿ ಹುಟ್ಟಿದಾಳೋ ದುರ್ಗಿ ಸಹಿತಾ।
ಚಾಮುಂಡಿ ಚಂಡಿ ಬನಶಂಕರಿ ಹಿಂತಾಕಿ ನಾಮಾಂಕಿತಾ
ಶರ್ಬಾ ನಿಮ್ಮ ಹಂತೇಲಿ ನಾವು
ಸಿರ್ಬಾಗಿ ಬಂದೇವೋ ಸ್ವಾಮಿ।
ಇರತೇವೋ ನಿಮ್ಮ ಚರಣದಲ್ಲಿ ನಂಬಿ
ನಮ್ಮ ಪ್ರಾಣ ಕಾಯಿರಿ
ಅರಿಯದವರು ಮಾಡಬ್ಯಾಡ್ರಿ ದೊಂಬಿ
ಬೊಬ್ಬಿ ಕೇಳಿ ಹರಿ ಬ್ರಹ್ಮರು ಗರ್ವಬಿಟ್ಟ ಗಾಬರಿಯಾಗಿ
ಒಬ್ಬರಿಗೊಬ್ಬರು ಅಡ್ಯಾಡತಾರ ಎಲ್ಲಾ
ವೀರಭದ್ರದೇವ ಅಬ್ಬರದಿಂದ ಬಂದೋ ಹೋಮದ ಮ್ಯಾಲ।

ಏರ

ಭೆಟ್ಟಿ ಆದೀತೋ ಇಬ್ಬರಿಗೆ ತಾ ಕೇಳಿ
ಅಬ್ಬರಲಿ ಜಿಗಿದು ಬಂದಾನೋ।

೧೧

ದಕ್ಷಬ್ರಹ್ಮನು ಅಂದ ಪಕ್ಷಿವಾಹನನೆ ಕೇಳೋ
ಭಿಕ್ಷಾ ಬೇಡುವ ಶಿವನ ಸೊಕ್ಕೆಷ್ಟು

ಚಾಲ

ನಾರಾಯಣನೆ ನಿನ್ನ ಮಗ ಚಾರು ಮನ್ಮಥನ ಕೊಂದ
ಯಾರಿಗಾದರು ಹಿಂಗಾ ಮಾಡಾವಾ।
ಸುಮ್ಮನಿದ್ದರ ಬ್ರಹ್ಮನ ಶಿರಾ ಹೊಡೆದು ಕೊಟ್ಟ ಶಿವಾ।
ಸುಮ್ಮನಿದ್ದರ ನಮ್ಮ ಮೈಮ್ಯಾಲ ಬರತಾನೋ ಜಂಗಮನು।
ಒಮ್ಮಿಗಿಲೇ ಕೈಯ್ಯ ಹಚ್ಚೋನು ನಾವಾ।
ಅಷ್ಟೋ ತನಕ ನಮ್ಮ ಬಾಳ್ವೆ ಆಗೂದುಲ್ಲೋ ಬಚಾವಾ।
ಅಪ್ಪಾ ಅಪ್ಪಾ ಅಂದಾನ ಮಗ ಕಪ್ಪಾ ಹರದ ಕೊಡಾಕ ಬಂದಾ।
ಮುಪ್ಪುರ ಗಾತಕ ಕೆಟ್ಟ ಭಾವಾ।
ಈ ಮಾತ ಒಪ್ಪೈತಿ ಕೊಂದ ಬಿಡರಿ ಅವನ ಜೀವಾ।



ಏರ

ಭಿಕ್ಷಾ ಬೇಡೋ ಶಿವನ ಸೊಕ್ಕೆಷ್ಟು ಈಶ್ವರಗ
ದಾಕ್ಷಿಣ್ಯ ಇಲ್ಲೊ ಯಾರ್‍ಯಾರದು।

೧೨

ನೀಲಕಂಧನು ತನ್ನ ಓಲಗಕೆ ಹೇಳಿದನು
ಬಾಲರ್‍ಯಾಕ ಚಿಂತಿ ಮಾಡುವರಿ।

ಚಾಲ

ಕೊಬ್ಬಿಲಿಂದ ತಿರಗೋ ಶಿವನ
ಅಬ್ಬರ ಮುರಿಯೋದರ ಕೆಟ್ಟ
ಕಬ್ಬಲಗಿತ್ತಿ ಇಟ್ಟುಕೊಂಡಾವ ನನ್ನ ಕರಿಯಲಿಲ್ಲ।
ದಿಬ್ಬರ ಸುತಲಿದ್ದೊ ಮಹಾದೇವಾ
ಕಂಡು ಕರಿಯಲಿಲ್ಲ ಅವನ ಚಂಡಿಕಿ ಹೊಡದಾಂಗ ಆಯ್ತು
ಕೆಂಡಗಣ್ಣಾವ ಮಾಡಿ ಸುಮಾರ
ದಕ್ಷನ ಎದಿಯ ಗುಂಡಿಗೆ ಒಡದೀತೋ ಹಾಕಿದೋ ಉಸಿರಾ।
ಇತ್ತ ನೋಡಿ ಕೊಂತ ಶಿವನು ಅತ್ತ ಮಾತನಾಡತಿದ್ದ
ನಿಂತ ದಕ್ಷ ಬ್ರಹ್ಮಂದಿಲ್ಲೊ ಖಬರಾ
ಶಂಕರನ ನೋಡಿ ಮತ್ತ ಮಾವನಾದ ಬೆಂಕಿ ಚೂರ।

ಏರ

ಬಾಲರ್‍ಯಾಕ ಚಿಂತಿ ಮಾಡುವಿರಿ ಹೀಂಗೆಂದು
ಮೇಲಗಿರಿ ವಾಸ ನುಡಿದಾರೋ

೧೩

ಚಂಡಿ ಚಾಮುಂಡೇರು ಹಿಂಡ ಶಕ್ತಿಯರೆಲ್ಲಾ
ಹಿಂಡಿ ಹಿಂಡಿ ರಕ್ತ ಕುಡಿದಾರೋ ॥ಪ॥

ಚಾಲ

ನಗಿಮಾರಿ ಪಾರ್ವತಿದೇವಿ ತನ್ನ ಹೊಗಿಯ ನಂದಿಸಿದಂತಾ
ಮಗನ ಬಿಗಿದಾಡಿ ಅಪ್ಪಿಕೊಂಡ ಹೇಳತಾಳೋ।
ಗರ್ವ ಬಂದವರ ಹಲ್ಲ ಮುರದಿ ವರ ವೀರಭದ್ರಾ ಹುಟ್ಟಿ।
ಪರಿಹರಿಸಿದಿ ದುರ್ಘಟ ಅಂತಾಳೋ।
ವಜ್ಜರ ಬಾಣದ ವೀರಭದ್ರಾ ಅಜ್ಜನ ಮ್ಯಾಲ ಹೊಡೆಯ ತಾನ
ಬೆಜ್ಜರ ಹುಟ್ಟಿ ಎದಿಮ್ಯಾಗ ಆದಿ ಕಪ್ಪಾ।
ಕೋಪದಿಂದ ವೀರಭದ್ರಾ ಚಾಪ ತಗದ ಹೊಡಿತಾನಾ

ಲೋಪಮಾಡಿ ಬಿಡತೇನ ಅವನ ಅವನ ಮಗನಾ ।
ಪಾಪಿ ದಕ್ಷ ಬ್ರಹ್ಮನ ವಂಶವನ ॥

ಏರ

ಹಿಂಡಿ ಹಿಂಡಿ ರಕ್ತ ಕುಡಿದಾರೋ ದಕ್ಷನ
ಚೆಂಡಿಕೆ ಎಲ್ಲ ಕೊಯಿಸಿದರು ॥

೧೪

ಬ್ರಹ್ಮದೇವರು ತಾನು ಸ್ವಾಮಿ ಶರ್ಬನ ಕೂಡ
ಒಮ್ಮಿಗಿಲೆ ಯುದ್ಧ ಮಾಡಿದನು ।

ಚಾಲ

ಚ್ಯಾರು ಮುಕ್ಕುಂದ ಬ್ರಹ್ಮ ತಾನು
ಧೀರತನಾ ಮಾಡಿ ಕಾದಿ
ವೀರಭದ್ರನ ಹಿಂಬಾಲಿಸುವನಾಗ ।
ಹಾರಿ ಹೋದೋ ಬ್ರಹ್ಮಾ ಗಾಳಿಗೂಡಾಗಿ ।
ಯಾರೂ ಇದರೀಗೆ ಬಂದರೇನು
ಮಾರಿಮ್ಯಾಲ ಕಡಿಯತಾನೋ
ತೀರವಲ್ಲದ ಅವನ ಸಿಟ್ಟಾ ಭೇರಿ ಕೂಗಿ ।
ವೀರಭದ್ರ ಅಂತಾನೋ ಅವರೀಗೆ ಹೇಡಿ ಉಪಾದ್ಯರು
ಕೂಡಿ ಯಜ್ಞ ಮಾಡಿ ಬೇಡಿಕೊಂತಾರ ಶಿವ ಸಾಯಲೆಂತ ।
ಬಿಟ್ಟ ಬಿಟ್ಟ ಬಾಣಗಳನ್ನು ಕಟ್ಟ ಕಟನೆ ಕಡಿಯತಾನ
ಮೆಟ್ಟಿ ಮೆಟ್ಟಿ ಕುತ್ತಿಗಿ ಕೊಯ್ದ ನಿಂತಾ ।
ತೀರವಲ್ಲದೊ ವೀರಭದ್ರನ ಸಿಟ್ಟಾ ॥

ಏರ

ಒಮ್ಮಿಗಿಲೆ ಯುದ್ಧ ಮಾಡಿದಾನೋ ದಕ್ಷನ
ಹಮ್ಮು ಮುರಿದೀತೋ ಹೈರಾನಾ ॥

೧೫

ಆದಿ ಶಕಿಯು ಶಿವನ ಪಾದ ಹಿಡದ ಅಂತಾಳೋ
ಸಾಧು ಸೆಂತರಿಗೆ ಪರಿಪಾಲಿಸೋ ।

ಚಾಲ

ಅಪ್ಪಯ್ಯ ಶಂಕರ ಕೇಳೋ ಕಪ್ಪು ವರ್ಣದ ದೇವಾನಮ್ಮ
ನಿಪ್ಪತ ಪರಿಹಾರ ಸಂಯಮ ಕೋಶ ।
ಊರಿಗೆ ಒಪ್ಪತ್ತ ಬಂದಿತೊ ಕೇಳೋ ಸರ್ವೇಶ ।
ಉಳಿ ತ್ರಿಪುತ ಸಂಹಾರ ಪಾರ್ವತಿ ಈಶಾ ।
ಅಗಹರನೆ ಕೇಳಯ್ಯ ಇಲ್ಲಿಗೆ ಒದಗಿತೋ ಉರಿಯ ಜ್ವಾಲಾ ।
ತಗಿ ಬಗಿ ಕೊಂಡೇವು ನಾವು ಜಗದೀಶಾ ।



ಕೈ ಮುಗಿದೇವ್ರೋ ಉಳಿಯದು ಕೈಲಾಸ ವಾಸಾ ।
ಹೀನ ದಕ್ಷ ಬ್ರಹ್ಮಾ ದಾನ ಮಾಡಿ ಬಿಡತಾನ
ಇನ್ನೇನ ಹೇಳಲಿ ಸಂತಾಪ ।
ಮನ್ನಿಸಿ ಇಡರಿ ನಿಮ್ಮ ಕೃಪಾ ।
ನಿಮ್ಮ ಹಂತೇಲಿ ಬಂದೇವ ಅಡ್ರಾಸಿ
ನಾವು ದಿಕ್ಕ ಇಲ್ಲದ ಪರದೇಸಿ
ಕರುಣಾ ತೋರಿಸಿ ಪ್ರಾಣ ಉಳಿಸಿ
ಈ ಬೆಂಕಿ ಬ್ಯಾಡ್ರಿ ಬಿಡಿಸಿ ।

ಏರ

ಸಾಧು ಸಂತರಿಗೆ ಪರಿಪಾಲಿಸೋ ಶಂಕರನೇ
ಕಾದ ಸಲವಯ್ಯ ಕಡೆತನಕ ।

೧೬

ದಕ್ಷ ಬ್ರಹ್ಮನು ಅಂದ ಶಕ್ತಿ ಪಾರ್ವತಿಗೆ
ಕಕಲಾತಿ ಇಲ್ಲ ನಿನಗ ।

ಚಾಲ

ದುಷ್ಟ ದಕ್ಷ ಬ್ರಹ್ಮ ಅಂದ ಖೊಟ್ಟಿ ರಂಡೇಗಂಡ ಶಿವಾ ।
ಎಷ್ಟೋ ಮಂದಿಯೊಳಗ ಮಾಡಿದ ಅಪಮಾನ ।
ಮುಂದ ಬಾ ಅಂತ ಕರಿಯಲಿಲ್ಲ ಇದ್ದ ಸುಮ್ಮನ ।
ಕರದ ಅಬರು ಕೊಟ್ಟ ಕುಂಡ್ರಸಿಕೊಳ್ಳಲಿಲ್ಲ ನನ್ನ ।
ನನ್ನ ಕರದಿದ್ರ ಇವನ ನಾಲಿಗಿ ಕಡದ ಬೀಳತಿತ್ತ
ಹೆಣದ ಬೆಣ್ಣಿ ತಿನ್ನುವಂತ ಜಂಗಮನ ।
ಒಂದು ಕ್ಷಣದೊಳಗ ಕೊಲ್ಲುವೆನು ತಡವೇನಾ ।
ಶಂಕರ ಅಂತಾನ ಸಂಕೋಚ ನಿನಗ್ಯಾಕಾ ।
ಬೆಂಕಿ ಕೈಯಾಗ ಗಾಳಿ ಮರಣಾಗುವದು ।
ಹೀನ ದಕ್ಷಬ್ರಹ್ಮಾ ಅನ್ಯಾಯ ಮಾಡಿದ
ಪುಣ್ಯ ಪಾಪಕ ಸರಿ ಆಗುವದಾ ।
ನೀಲಕಂಠ ಶಿವಗ ಅಂದ ಕಾಲಬಂತ ಸಾವತಾನೋ
ಮೂಲವಾಗಿ ಕುಂತಿದ್ದ ನಮ್ಮ ಜನಕ ।
ತಿಮ್ಮನಭಟ್ಟ ಅಂತಾನ ಹೌದದಕ ।

ಏರ

ಕಕಲಾತಿ ಇಲ್ಲ ನನಮ್ಯಾಲ
ಉಪಕಾರ ಏನೂ ಅರಿಯಿರಿ

(ಅಪೂರ್ಣ)

* * *

## ೯. ಅಭಿಮನ್ಯು ಕಥೆ

**ಏರ**

ಸ್ವಾಮಿ ಶಂಕರ ದೇವ ಸ್ವಾಮಲಿಂಗನು ಸೊಗಲ
ಭೂಮಿಯೊಳು ಬಂದು ಇಳದಿರಿ ।

**ಚಾಲ**

ಗಿರಿರಾಜನ ತರಳಿ ಆಗಮಾಡ್ಯಾಳೊ ತಪಶ್ಚರ್ಯ
ವರಪೂಜಿ ಕಲ್ಲಿನ ಮ್ಯಾಲ ನಿಂತ ಬಂದಾರ । ಅಗದಿ ಮೆಚ್ಚಿ ಭಗವಂತಾ
ಮಾದೇವ ಮಾಯ ಮರ್ಧನ ।
ಮದಹರ ಹೋಮ ಪ್ರೀತಿಕರ
ಮದುವ್ಯಾಗಿ ಮಾಡೇರಿ ಪ್ರಖ್ಯಾತ ।
ಮೃತ್ಯುಲೋಕಕ್ಕ ಅದರಿಂದ ಹುಟ್ಟೀತರಿ ಲಗ್ನದ ಬೇತ ।
ಶಕ್ತಿ ಸಹಿತ ಶಂಕರ ಶಿವನೇ ಮುಕ್ತಿ ಕೊಡೋ ಅಧಿಕಾರಾ । ನೀನೇ
ಭಕ್ತಿವಂತರಿಗೆ ಬೇಡಿದಂತಾ ಇಷ್ಟಾರ್ಥ ಕೊಡೋ ।
ಪಕ್ತ ಏನ ಉಳಿಯದಂಗಾ ಸ್ವತಾ ।

**ಏರ**

ಭೂಮಿಯೊಳು ಬಂದು ಇಳಿದರೆ ಶಿವಶಂಭಾ ॥
ಪ್ರೇಮದಿಂದ ಎನಗ ಬೆಸನಾಗೆ

೧

ಧರಣಿ ಮ್ಯಾಲ ಇರುವಂತಹ ಮೆರೆವ ಹಸ್ತಾಪುರ
ದೊರೆಯ ಧರ್ಮರಾಜ ಅನುಜಾನ ।

**ಚಾಲ**

ಬಲರಾಮ ಹೋಗ್ಯಾನೋ ಆಗ ಭೂಮಿಯ ಪ್ರದಕ್ಷಣಕ
ಕುಂತಕೇಳರಿ ಏಕಚಿತ್ತದಿಂದ
ಅಳಿಯಾ ಇದ್ದರ ಉಳಿಯೋದಿಲ್ಲಂತ ಯುಕ್ತಿ ತಗದ
ಸಮಸಪ್ತಕರ ಲಡಾಯಿ ಹೂಡಿ ಅರ್ಜುನಗ ಬಾ ಎಂದು
ನಿಲ್ಲದಲಿ ಓಲೆಯ ಬರೆದ
ವೀರ ಶೂರ ಅರ್ಜುನ ಲಡಾಯಿಗೆ ಪ್ರಸಿದ್ಧ



ಚಕ್ರವ್ಯೂಹದೊಳು ಇತ್ತ
ಹುಟ್ಟಿತೋ ಜಗಳವು ಮತ್ತ ।
ದ್ರೋಣಾಚ್ಯಾರಿ ಪತ್ರ ಬರದ ಎತ್ತ ಹೋಗೋಣ
ಸತ್ಯವಚನ ಹೇಳೋ ಮುಕ್ಕುಂದಾ ॥

**ಏರ**

ದೊರೆಯ ಧರ್ಮರಾಜಗ ಅನುಜ ಅರ್ಜುನ ಭೀಮ
ಪುತ್ರ ಅಭಿಮನ್ಯುನ ಕಾಳಗವೋ ॥ಪ॥

ದ್ರೋಣಾಚಾರಿಯು ಮತ್ತ ಕ್ಷೋಣಿಪತಿ ದುರ್ಯೋಧನನು
ತ್ರಾಣುಳ್ಳ ತಂದಿ ಜಯದ್ರತನು ।

೨

**ಚಾಲ**

ಧರ್ಮ ದುಃಖ ಮಾಡತಾನೋ ತಮ್ಮ ಭೀಮಸೈನ ಕೇಳೋ
ಕುಮ್ಮಕ ಇಲ್ಲದೆ ಹೋದ್ರೋ ಅರ್ಜುನಾ ।
ಮೋಹನನಿಂದ ಗಾಯ ತಿಂದ ಬಂದ ಬಿದ್ಯೋ ನೀನಾ ।
ಇಂದಿನ ಯುದ್ಧವು ನಂದು ।
ಹಿಂದ ಮುಂದ ಆಗೂದೇನೋ ತಂದು ಹೂಡೋ ರಥಾ ಈ ಕ್ಷಣಾ
ಕೊಂದ ಹಾಕುವೆನು ಪತ್ರ ಬರದಾನೊ ದುರ್ಯೋಧನ ।
ಧರ್ಮನ ಆರ್ಭಟ ಕೇಳಿ ಬರತಿತ್ತೊ ಮಾರ್ಬಲ ಎಲ್ಲಾ
ಸಾರಾವಳಿ ಸರ್ಪನ ಬಿಲ್ಲುಬಾಣಾ
ಹತಾರ ಹಿಂದ ಕುಶಿ ಅತಿ ದಂಡಪೂರ ಮನಾ ।

**ಏರ**

ಬಂತೋ ನಿಮಗಿಂದು ಪ್ರಳಯವು ಶ್ರೀ ಕೃಷ್ಣಾ
ಕುಂದ ತಂದಾನೋ ಅರ್ಜುನಗಾ ॥

೩

ಮಾವ ಸೈಂಧವ ನಿನ್ನ ಜೀವ ನನ್ನ ಕೈಯಾಗ
ಯಾಂವ  ಬಂದ ನಿನ್ನ ಉಳಸುವನು ॥

**ಚಾಲ**

ಹಿಂದೂ ದೇಶದ ಸೈಂದವನ ತಂದಿ ಭೀಮಸೈನನ ಬಿಂಕ
ನನ್ನ ಮುಂದ ಹೇಳ ಬ್ಯಾಡೋ ಕೂಳಾ ।
ಒಂದ ಪೆಟ್ಟಿಗೆ ಕೊಂದಹಾಕಿ ಹೊಡದೇನೋ ಸರಳಾ
ಬಿಡ ಬಿಡೋ ಬಾಣವ ಈಗ

ತೊಡ ತೊಡೋ ಕೋಪವ ಇನ್ನ
ಹಿಡಿ ಹಿಡಿ ಬಿಡರ್ತೇನೋ ನಾನು ಸರಳಾ ।
ಸೈಂಧವ ಓಡೋಡಿ ಹೋಗತಾನೋ ಹುಚ್ಚ ಮರಳ ।

**ಏರ**

ಯಾಂವ ಬಂದ ನಿನ್ನ ಉಳಸುವನು ಹಿಂಗೆಂದು
ಹ್ಯಾವದಲಿ ಬಾಣ ಹೊಡದಾನೋ ॥ಪ॥

೪

ದುರ್ಯೋಧನ ರಾಜನು ದ್ರೋಣಾಚ್ಯಾರಿನ ಕರೆದು
ಗುರುವೆ ಇನ್ನೇನ ಗತಿ ಎಮಗ ॥

**ಚಾಲ**

ಕರ್ಣ ದ್ರೋಣಾಚ್ಯಾರಿ ಮುಂದ ದುರ್ಯೋಧನ ಅಳುತಾನೋ
ಪಾರ ಹುಡುಗ ಮಾಡಿದ ನಮ್ಮನ್ನ ಗಾಬರಿ ।
ಯಾವ ರೀತಿಲಿಂದ ಹುಡುಗನ ಹಿಡಿಯಬೇಕೊ ಶೆರಿ ।
ದ್ರೋಣಾಚ್ಯಾರಿ ಮಹಾಶೂರ ಕಲ್ಪನ ತಗದಾನೊ ಕರ್ಣ ।
ಹಿಂದ ನಿಂತ ಶಿರಾ ಹೊಡಿ ತೂರಿ ।
ಮುಂದ ನಿಂತ ನಾನು ಲಢಾಯಿ ಮಾಡತೇನೋ ಅವನ ಸರಿ

**ಏರ**

ಅಂದ ಕರ್ಣನು ದ್ರೋಣನಿಗೆ ತಾ ಕೇಳಿ
ಸಂದ ನೋಡಿ ಹೊಡದಾನೋ ।

೫

ಕಂದನ ಕರಗಳನು ಹಿಂದ ನಿಂತ ಹೊಡಿವರೆ ।
ಅಂದ ಕರ್ಣನು ದ್ರೋಣನಿಗೆ ।

**ಚಾಲ**

ಕುಂದು ಕ್ಷತ್ರಿಧರ್ಮಕ್ಕೆ ಎಂದೆಂದಿಗೂ ಬಿಡಲಿಕ್ಕಿಲ್ಲಾ
ಹಿಂದ ನಿಂತ ಬಂಧಿಸಲಾರೆ ಕೈಯ್ಯಾ ।
ಕರ್ಣ ಹೀಂಗ ಅಂತಾನ ಆಗತೈತಿ ಅನ್ಯಾಯಾ ।
ದೋಷ ಬರೂದಿಲ್ಲೋ ಕರ್ಣ ಸಂಶ ಇಲ್ಲ ಅದರೊಳು
ತಿಳದ ನೋಡಿ ಮೋಸ ಮಾಡಿ ಹೊಡಿ ಬಿಡೋ ಅಭಿಮನ್ಯು

**ಏರ**

ಅಂದ ಕರ್ಣನು ದ್ರೋಣನಿಗೆ ತಾ ಕೇಳಿ
ಸಂದ ನೋಡಿ ಹೊಡದಾನೋ ॥



೬

ಒತ್ತರ ಮಾಡಿ ಕರ್ಣನು ಎತ್ತಿ ಹೊಡದಾನೋ ಶರವು ।
ಕತ್ತರಿಸಿದವು ಎರಡು ಕರಗಳನು ।

**ಚಾಲ**

ಮುಂದಿನ ಯುದ್ಧವು ಬಿಟ್ಟ ಹಿಂದ ನೋಡಿದ ಅಭಿಮನ್ಯು
ಚಂದವಾಗಿ ನಿಂತಿದ್ದೋ ಕರ್ಣ ।
ಮಾರಿ ನೋಡಿ ಅಂದಾನೋ ನೀ ಕುಲಹೀನಾ । ನೀ ಕುಲಹೀನಾ
ಕ್ಷತ್ರ ಧರ್ಮದಲ್ಲಿ ಶಾಸ್ತ್ರ ಯಾತರಾಗ ಹೇಳೇತೊ ಕರ್ಣಾ
ಹಿಂದ ನಿಂತ ಹೊಡಿವುರೇನೊ ನನ್ನ ।
ಮಾತ ಕೇಳಿ ತೆಳಕ ಮಾರಿ ಮಾಡಿದನೋ ಕರ್ಣಾ ।
ಪರಸರಾಮನ ಹಂತೇಲಿ ಹೋಗಿ ಹನ್ನೆರಡ ವರ್ಷ ವಿದ್ಯೆ ಕಲಿತಿ
ಸುಡು ಸುಡೋ ಬುದ್ಧಿಯ ಹುಚ್ಚ ಸ್ವಾನಾ ।
ಥೂ ಭ್ರಷ್ಠಾ ತ್ಯಾಗ ಮಾಡೋ ಕುಲಗೇಡಿ ಕರ್ಣಾ

**ಏರ**

ಕತ್ತರಿಸಿದ ಎರಡು ಕರಗಳನ್ನು ಅಭಿಮನ್ಯು
ಪುತ್ರ ಗಾಯಾಗಿ ನೆಲನಿಂತೋ ॥ಪ॥

೭

ಸೊಕ್ಕಿದ ಕುರಿಯೊಳಗ ಮಿಕ್ಕಿ ತೋಳ ಹೊಕ್ಕಾಂಗ
ಧಿಕ್ಕಗೆಡಿಸಿದನೋ ಎಲ್ಲಾರನು ॥

**ಚಾಲ**

ಮಂಡಗೈಲೆ ಯುದ್ಧವನ್ನು ಮಾಡುವೆನು ನೋಡಬನ್ನಿ
ನಿಮ್ಮ ಕೌರವರ ಬಲವೆಲ್ಲಾ ।
ತಕ್ಕೊಂಡ ರಥದ ಗಾಲಿಗೆ ಮಂಡಗೈಯ್ಯ ಹಾಕಿದ ಬಾಲ
ಸರಸರದ ಹೊಡದಾನೋ ಗುಣುಗಳ ।
ತರತರದ ಬಿದ್ದಾವ್ಹೋ ಹೆಣಗೋಳಾ ।
ಮುರಮುರದ ಹೋತೋ ಕೌರವರ ಬಲವೆಲ್ಲಾ ।
ಲಕ್ಷಣಕುಮಾರ ಸತ್ತು ಹೋದ ಆತಿ ಕೋಲಾಹಲಾ ।
ಕೈಲಿ ಕಾಲಲಿ ಒರಸಿ ವೀರರನೆಲ್ಲಾ ಕೊಂದ ಹಾಕಿದ
ಕಂದ ಅಭಿಮನ್ಯು ಪ್ರಬಲ ।
ಅಷ್ಟರೊಳು ಪ್ರಾಣ ಕೊಟ್ಟ ಧರುಣಿಗೆ ಹೊರಳಿದನಲ್ಲಾ ।

ಏರ

ಧಿಕ್ಕ ಗೆಡಿಸಿದನೋ ಎಲ್ಲರನ್ನು ಅಭಿಮನ್ಯು
ಪುತ್ರ ಗಾಯಾಗಿ ನೆಲನಿಂತೋ ॥

೮

ಕಪಟ ಮಾಡಿ ಕೃಷ್ಣನು ನಡದಾನ ಪಾತಾಳ ಲೋಕಕ್ಕ।
ಗೋಪಾಳ ಕೃಷ್ಣನು ಆಗ ಫಲ್ಗುಣನನ್ನು ಕರಕೊಂಡ ॥

ಚಾಲ

ಬಲಭೀಮ ಧ್ವಜದಲ್ಲಿ ಸಹಿತ ಆಗ ಪಾರ ಮೂರ ಮಂದಿ
ನಡಸ್ಯಾರೋ ರಥಾ
ನಿಷ್ಠಾವಂತ ಪಾರ್ಥ ನಿನ್ನ ಶ್ರೇಷ್ಠತ್ವವು ಎಷ್ಟಂತ ಹೇಳಲಿ।
ಸೃಷ್ಠಿಯೊಳು ನೀನು ಪ್ರಖ್ಯಾತ।
ಸೋಮಶಪ್ತರನ್ನು ಹೊಡೆದು ಬರುವೆನು
ನಡಿಯೋ ಪಾರ್ಥಾ।

ಏರ

ನಡದಾನ ಪಾತಾಳಲೋಕಕ್ಕ ಮುಂದಿನ
ಕೆಡಕ ತಿಳಿದಿಲ್ಲೋ ಅರ್ಜುನಗಾ ॥

೯

ಇತ್ತ ಶಮ ಸಪ್ತಕರ ಮತ್ತು ಕಾಳಗ ಗೆದ್ದ।
ಬರತಿಹರು ಪಾರ್ಥ ಶ್ರೀ ಹರಿಯು ॥

ಚಾಲ

ಹರಿಯು ಕೃಷ್ಣ ಹೇಳತಾನೋ ಬ್ಯಾಸರಿಕಿ ಆದೀತ ಪಾರ್ಥ।
ಸರೋವರ ದೊಳು ಮಾಡೋನು ಸ್ನಾನಾ।
ಈರ್ವರು ಕೂಡಿ ಮುಳಗಿದರ ಮೇಲಕೆದ್ದೋ ಕೃಷ್ಣಾ
ಪಾರ್ಥಾ ಕೇಳೋ ನನ್ನ ಮಾತಾ।
ವ್ಯರ್ಥ ಧಾರಾತೀರ್ಥದೊಳಗ ನಿನ್ನ ಮಗಾ ಅಭಿಮನ್ಯು
ಸತ್ತಾನೋ ಅಂತ, ಕೂ ಅಂತ ಕೂಗಿ।
ನೀರೊಳು ಮುಳಗಿದ ಆ ಕ್ಷಣಾ।
ಅರ್ಜುನನ ಕರ್ಣದೊಳಗ ಅಭಿಮನ್ಯು ಸತ್ತಾನೆಂದು
ಪೂರ್ತಿ ವಾರ್ತೆ ಬಿತ್ತೋ ಚಿನ್ನ ಚಿನ್ನ
ನನ್ನ ಮಗ ಅಭಿಮನ್ಯು ಸತ್ತಂತೋ ಮೈದುನಾ।

ಏರ

ಬರತಿಯರೋ ಪಾರ್ಥ ಶ್ರೀ ಹರಿಯು ಅರ್ಜುನಗ
ದೇಹ ತಮ್ಮದೆಂದು ನುಡಿದಾನೋ

* * *



## ೧೦. ಇಂದ್ರಜಿತುವಿನ ಹೋಳಿಯಪದ

ನೆರೆದಿರುವ ಜನರೆಲ್ಲ ಕರುಣಿಡರಿ ನನ್ನ ಮ್ಯಾಲ
ಕರ ಮುಗಿದು ಬೇಡಿಕೊಳ್ಳುವೆನೊ ॥

ಚಾಲ

ಬಂದ ಈ ಸಭೆಯೊಳು ಆ
ನಂದಾಗಿ ಕುಳಿತವರಿಗೆ।
ವಂದಿಸಿ ಹೇಳುವೆ ಕಥಿ ಸಾರಾ।
ಮಂದಮತಿ ಬಂದಷ್ಟ ಹೇಳುವೆ ಒಂದ ಜರಾ।
ಮುಂದ ಆದ ಕಥಿಯ ನಾನು।
ಛಂದವಾಗಿ ಹೇಳುವೆನು ಸ್ವಲ್ಪ।
ಕುಂದ ಬಂದರ್‍ಕೇಳ್ರಿ ಒಂದ ಜರಾ।
ನಿಮ್ಮ ಕಂದ ಕಲತ ಹಾಡುವೆನೊ ಮುಂದ ಪೂರಾ।
ಯುದ್ಧ ಕಾಂಡದೊಳಗ ಅತಿ ಅದ್ಭುತ ಕಾಳಗ ಮಾಡಿ
ಬದ್ಧ ಆದೊ ಕುಂಭಕರ್ಣ ಶೂರಾ।
ರಾಮ ಬಾಣಕ ಬಂದ ಸಿಕ್ಕ ಆದ ಸುಮಾರಾ।

ಏರ

ಕರ ಮುಗಿದು ಬೇಡಿಕೊಳ್ಳುವೆ ನಾನು
ಶ್ರೀ ರಾಮಾಯಣದ ಕಥೆಗಳ ॥

ಯುದ್ಧಕಾಂಡದ ಕಥೆಯ ತಿದ್ದಿ ಹೇಳುವೆ ನಾನು
ಶುದ್ಧಾಗಿ ಹೋಳಿ ಪದದೊಳಗ ॥

ಚಾಲ

ಹಾಳರಗಳಿ ಓದುದಕಿಂತಾ।
ಹೇಳತೇನ ಕೇಳರಿ ಕುಂತಾ।
ಖೂಳ ಕುಂಭಕರ್ಣ ಮಾಡಿದಾ।
ತಾಳಿ ತಾಳಿ ಸೀತಾಪತಿ ರಾಮ ಹೊಡದ ॥
ಧರೆಯೊಳು ಮೆರೆಯುವ ಲಂಕಾಧೀಶನ।

ಗರ್ವ ಬಹಳೋ ದಶಕಂಠಂದು ।
ಕಂದ ಕುಂಭಕರ್ಣಗ್ಹೇಳಿದಾ ॥
ಭರದಿ ಹೋಗಿ ಹರದ ತಾರೊ ಶಿರವ
ಶ್ರೀ ರಾಮಂದಾ ॥

**ಏರ**

ಶುದ್ಧಾಗಿ ಹೋಳಿ ಪದದೊಳಗ ಇದ ಒಂದ ಸಂದ
ಸಾರುವೆನೊ ಸಭೆಯೊಳಗ ॥

ಹಾರ ಹೀರಾವಳಿಯೊ
ತೋರು ಮುತ್ತಿನ ಸರವೋ
ಬ್ಯಾರಿ ಬಂಗಾರದ ಪದಕಗಳೊ ॥

**ಚಾಲ**

ಒಂಟಿ ಮುತ್ತು ಕಂಟಿ ಸರಾ
ಭಂಟ ಕುಂಭಕರ್ಣಗ ಒಪ್ಪುವ ।
ಕಂಠಮಾಲಿ ಪದಕ ಜೋಮಾಲಿ
ದಶಕಂಠ ತನ್ನ ಕೈ ಮುಟ್ಟ ಇಡಸೀದೊ ಕೊರಳಲ್ಲಿ ।
ಹರಳೀನ ಉಂಗರ ಹತ್ತು ಬೆರಳಿನಲ್ಲಿ ಧರಿಸಿದ ವೀರ ।
ವಿರಳದ ದಾಗೀನ ಮೈಮ್ಯಾಲ ।
ಸರಳವಾದ ಶೂಲಾಯುಧ ಕೊಟ್ಟೊ ಕೈಯಲ್ಲಿ
ಸ್ವಚ್ಛವಾದ ಕಿರೀಟ ಅಂಗ ಮಸ್ತಕಕ್ಕೆ ಒಪ್ಪುವಂಥ ।
ಕಸ್ತೂರಿ ಗಂಧ ಹಚ್ಚಿದ ಹೂಮಾಲಿ
ವಿಸ್ತಾರವಾದ ಕರ್ಣ ಕುಂಡಲ ಹೊಳೆಯುವದೆಷ್ಟೋಳಲಿ ।

**ಏರ**

ಬ್ಯಾರಿ ಬಂಗಾರದ ಪದಕ ಚಂದ್ರದ ಹಾರಾ
ಭಾರ ಮಾಡಿದರೋ ಕೊರಳಲ್ಲಿ ॥

ಇಂದ್ರಚಾಪದಂತೆ ಸುಂದ್ರ ಕುಂಭಕರ್ಣ
ಚಂದ್ರ ಸೂರ್ಯರಿಗೆ ಸರಿಯಾದೊ ।

**ಚಾಲ**

ಸುಂದ್ರ ಕುಂಭಕರ್ಣಾ ಥೇಟ
ಚಂದ್ರ ಸೂರ್ಯರಂತೆ ಒಪ್ಪುವ ।



ಮಂದರ ಪರ್ವತ ದಾಕಾರಾ
ಇವನ ಸರಿ ಇಂದ್ರಲೋಕದಲ್ಲಿ ಇಲ್ಲೊ ಯಾರಾ ॥

ರಣವಾದ್ಯ ರಣಭೇರಿಗಳು
ಗಣಕೆ ಇಲ್ಲದೆ ಇವನ ಸುತ್ತಾ
ಝಣಝಣ ನುಡಿಸ್ಯಾರೊ ಝೇಂಕಾರಾ ।
ಅರಮನಿ ಬಿಟ್ಟ ಹೊರಬಿದ್ದ ನಡದಾನೋ ಮಹಾವೀರಾ
ಉಕ್ಕಿನಚ್ಚು ಲೋಹದ ಗಾಲಿ ।
ಚೊಕ್ಕ ಕಬ್ಬಿಣದ ರಥಕ ತಂದು ।
ಆನಿ ಹೂಡಿದ ಹನ್ನೆರಡು ಸಾವಿರಾ ।

ಇವನ ಸರಿ ಇಂದ್ರ ಲೋಕದಲ್ಲಿ ಇಲ್ಲೊ ಯಾರಾ

**ಏರ**

ಚಂದ್ರ ಸೂರ್ಯರಿಗೆ ಸರಿಯಾಗಿ ತೋರಿದರೋ
ಮಂದ್ರ ಪರ್ವತಕ ಮಿಗಿಲಾದೋ ॥

ಮತ್ತ ಕುಂಭಕರ್ಣ ಒತ್ತಿ ರಥವನು ಹೊಡದೊ
ಕತ್ತಲಗವಿತೊ ಕಪಿಗಳಿಗೆ ॥

**ಚಾಲ**

ಹೊಕ್ಕಾನೋ ರಾಮರ ದಂಡ ।
ಮುಕ್ಯಾನೋ ಮಂಗ್ಯಾರ ಹಿಂಡ ।
ತೆಕ್ಕಿಯೊಳಗ ಹಿಡದಾನ ಹತ್ತು ಕೋಟಿ ॥
ನೆಕ್ಕುದಕ ನಾಲಿಗಿ ಚಾಚಿದೊ ಉಪರಾಟಿ ॥
ಬಾಯಿಲಿಂದ ನುಂಗುದರೊಳಗ ।
ಕಿವಿಯಾಗ ಮೂಗಿನ್ಹೊಳ್ಯಾಗ ಹಾದ ।
ಜೀವದರಸಿಲೆ ಹೋದಾರ ಎಷ್ಟೋ ದಾಟಿ ।
ಯಮನ ಬಲಿಯಾಂದ ಉಳದೇವಂತ
ಜಿಗದಾರ ಅಂತ ದಾಟಿ ।
ನೆಗ್ಗಿತೊ ಅನಿಲಜನ ಬಾಲಾ । ಕುಗ್ಗಿತೊ ಎಲ್ಲರ ಸೊಲ್ಲ ।
ಮುಗ್ಗಿತೊ ನೂರಾಯೆಂಟ ಕೋಟಿ ।
ಸುಗ್ರೀವನ ಸೊಂಡಿ ನಾಲಿಗಿ ಆತೊ ತೀರಾ ಸುಂಟಿ ॥

ಏರ

ಕತ್ತಲಗವಿತ್ತೊ ಕಪಿಗಳಿಗೆ ಎಲ್ಲರಿಗೆ
ಎತ್ತ ಬಂದತ್ತ ಓಡಿದರೊ ॥
ಓಡುವ ಕಪಿಗಳನು ನೋಡಿ ಬ್ರಹ್ಮನ ಸುತನು
ಆಡಿದನೋ ನೀತಿ ನುಡಿಗಳನು ।

ಚಾಲ

ಹಿಂಡವಡದ ಕಪಿಗಳೆಲ್ಲ ॥
ಭಂಡ ತಗದ ಹೋಗುವದು ಕಂಡು ।
ನೋಡಿ ಬ್ರಹ್ಮ ಸುತ ಅಂದ ಜಾಂಬುವಂತಾ ॥
ಕಡು ಹೇಡಿಗಳಿರ್ಯಾ ಹಿಡಿದ ಪಂಥ ಬಿಡವರೆ ಹೆಂಥಾ ಮಾತ ॥
ಕೀರ್ತಿ ಪಡೆಯಬೇಕೊ ಹರಿಭಕ್ತರಾಗಿ ಬಂದ ನಿಮಗ
ಮುಕ್ತಿ ಆಗುವದು ಖಚಿತಾ ।
ಹರಿಯೆ ಮೆಚ್ಚಿ ವರವ ಕೊಡುವನೊ ರಘುನಾಥಾ ।
ಕಾಳಗದಲಿ ಸತ್ತವರಿಗೆ ಮುಕ್ತಿ ಆಗುವದು ಖಚಿತ ।
ಸ್ವಾಮಿಕಾರ್ಯ ನಡಸಬೇಕೋ ಪೂರ್ತ
ಸಾಯುವದ್ಯಾರಿಗೂ ಬಿಟ್ಟಿದ್ದಲ್ಲಾ
ಸಕಲರಿಗಿದ್ದ ಮಾತಾ ।

ಏರ

ಆಡಿದರೋ ನೀತಿ ನುಡಿಗಳನು ಕಪಿ ವೀರರಿಗೆ
ಕಡು ಹೇಡಿತನವು ಬ್ಯಾಡೆಂದು ॥
ಓಡುವ ಕಪಿಗಳು ನೋಡಿ ಜಾಂಬುವಂತನ
ಓಡಿ ಬಂದಾವೊ ಹಿಂತಿರುಗಿ ।

ಚಾಲ

ಜಾಂಬವಂತನ ಮಾತ ಕೇಳಿ ।
ಕಪಿಗಳೆಲ್ಲ ಬಂದಾವ ಓಡಿ ।
ಮನಸಿನಲ್ಲಿ ಮಸಲತ್ತ ಮಾಡುತ್ತ ।
ರಾವಣನ ತಮ್ಮನ ಕುಂಭಕರ್ಣನ ಹೊಡಿ ಬೇಕಂತ ॥
ಕಪಿಗಳಂತಾವ ಕುಂಭಕರ್ಣನ ಈ ಸಾರಿ ಬಿಡಬಾರದೊ ।
ಹೀಂಗ ಹಾಕಿಕೊಂಡಾರ ಎಲ್ಲರ ಶರ್ತ ।
ಲಢಾಯಿ ಮಾಡಾಕ ನಿಂತಾರಾಗ ಎಲ್ಲರು ತುರ್ತಾ ॥



ನಡದಿತೊ ಲಢಾಯಿ ಬಹಳ ।
ಹರಿದಿತೊ ನೆತ್ತರ ಕಾವಲಾ ॥
ರಾಮಬಾಣಕ ಕುಂಭಕರ್ಣ ಸತ್ತಾ ।
ಸುದ್ದಿ ಕೇಳಿ ರಾವ ಅಂತಾನ ಆತಿ ನಂದು ಘಾತಾ ॥

ಏರ

ಓಡಿ ಬಂದಾವೊ ಹಿಂತಿರುಗಿ ಕಪಿಗಳು
ಸೂರಿ ಮಾಡಿದರೊ ಸೈನ್ಯವನು ॥
ನಕ್ಕೊಂತ ಶ್ರೀರಾಮ ದಕ್ಕಾಗಿ ಕೇಳಿದನೊ
ರಕ್ಕಸರೊಳಗ ಇವನ್ಯಾರೊ ॥

ಚಾಲ

ಅಷ್ಟರೊಳು ವಿಭೀಷಣ ।
ಚಟ್ಟನೆದ್ದ ರಾಮನ ಚರಣ ।
ಮುಟ್ಟಿ ಹೇಳಿದಾನೊ ಇವ ನಮ್ಮಣ್ಣಾ ।
ಹುಟ್ಟಿದ ಏಳ ದಿವಸಕ್ಕ ನುಂಗಿದೊ ಸೃಷ್ಟಿನಾ ॥
ಇವನ ಶೂಲದ ತುದಿಯ ಮ್ಯಾಲೊ ।
ಯಮನ ಎದಿಯ ರಕ್ತದಲ್ಲೆ ।
ಕುಬೇರನ ಮಾಂಸದ ಚೂರ್ಣಾ ।
ದಿಕ್ಪಾಲಕರ ತುಪ್ಪದಲ್ಲಿ ಮಾಡಿದೋ ಲೇಪನಾ ॥
ಯುದ್ಧ ಮಾಡಿ ಇವರ ಕೂಡ ।
ಗೆದ್ದ ಬಂದೇವೆಂಬವರನ್ನಾ ।
ಸದ್ದೆ ಕಾಣಲಿಲ್ಲೋ ಯಾರ್‍ಯಾರನ್ನಾ ॥
ಬದ್ಧ ಆಗು ವ್ಯಾಳ್ಯಾ ಬಂತೊ ಇವರ ಕುಂಭಕರ್ಣ ॥

ಏರ

ರಕ್ಕಸರೊಳಗ ಇವನ್ಯಾರಂಬುವ ವಾರ್ತಿ
ಭಕ್ತ ವಿಭೀಷಣನ ಕೇಳಿದನೋ ॥
ವೀರ ಕುಂಭಕರ್ಣನ ಮರಣದ ವಾರ್ತೆಯ ಕೇಳಿ
ಶೂರ ದಶಕಂಠ ಬಂದಾನು ॥

ಚಾಲ

ಸುದ್ದಿಕೇಳಿ ರಾವಣಾಸುರನೇ
ಬದ್ಧ ಆಗಿ ಬಂದಾನ ತಾನು ।

ಮುದ್ದು ತಮ್ಮನ ಮ್ಯಾಲಿನ ಮೋಹದಿಂದ ।
ಅಂದಚಂದ ವರ್ಣಿಸಿ ಅಳತಾನು ದುಃಖದಿಂದಾ ॥೧॥

ತಂದಂಥ ವಸ್ತ್ರ ಪಡವಿಗಳೆಲ್ಲಾ ।
ಒಂದು ದಿನ ಒಂದ ದಿವಸಾ ಇಡಲಿಲ್ಲಾ ।
ಎದ್ದ ಮಾತಾಡೊ ನನ್ನ ಸಂಗಡ ಬಂದ ॥
ಸಿದ್ಧವಾಗಿ ಬಂದಿರುವೆನು ನಾನು ಅಲ್ಲಿಂದ ॥೨॥

ಇಂದ್ರನ ಸಮಾನವಾದ ।
ಚಂದ್ರನ ಹೋಲುವ ಸುಗುಣಾ ।
ಇಂದು ರಥಾ ತಂದೇನ ಎಳೆದಾ ।
ಸರ್ದ ನಿಂತ ಚಿಂತಿ ಮಾಡುತ ಬಿದ್ದಾನ ಮೋಹದಿಂದಾ ॥೩॥

ಏರ

ಬಂದಾನಾಗಲ್ಲಿ ಬೇಗದಲಿ ರಾವಣನು
ಕಂದಿ ಮುಖ ಬಾಡಿ ಮರಗುತಲಿ ॥
ಕಕ್ಕ ಮಡದ ಸುದ್ದಿ ಇಂದ್ರಜಿತು ತಾ ಕೇಳಿ
ದಿಕ್ಕ ತಪ್ಪಿ ರಣಕ ಬಂದಾನು ॥

ಚಾಲ

ಮಡದ ಸುದ್ದಿ ಕೇಳಿ ಕಂದ ।
ಘಡಡಡಾ ಗರ್ಜನಿ ಹೊಡದು ।
ಸಿಡಲ್ ಬಡಿದಂಗಾತ್ರಿ ಆ ಕ್ಷಣಕ ।
ಓಡಿ ಹೋದಾರ ಕಪಿಗಳು ಆಗಿನ ತುರತಕ ॥೧॥

ಖಡ್ಗ ಝಳಪಿಸುತ್ತಾ ತಾನು ।
ಶಡಗರದಿಂದ ಅಂತಾನ ತಂದಿಗೆ ।
ಹೊಡದ ಬರುವೆನು ರಾಮನ ಬಲಕ್ಕ ॥
ಕಡದ ಹಾಕುವೆ ವೀಳ್ಯವ ಕೊಡೋ ತತ್‌ಕಾಲಕ್ಕ ॥೨॥

ಆಡಿದ ಮಾತ ಕೇಳಿ ರಾವಣ ।
ಬಡದ ಹಾಕುವದಕ್ಕ ಅವರನ್ನ
ತಡಮಾಡದೆ ಕಳಿಸೋ ನೀ ದೇವಾಂತಕ ॥
ನಡಿ ಬ್ಯಾಗ ಹೊಡದ ಬರುವೆನು ಬೇಗ ನರಾಂತಕ ॥೩॥



ಏರ

ಬಂದು ಇಂದ್ರಜಿತುವು ತಂದೆಗೆ ಸಮಾಧಾನ ಹೇಳಿ
ಹೊಂದಿ ಬಂದಾನೊ ನಗರಕ ॥
ನಗರಕ್ಕ ಬಂದು ಬ್ಯಾಗ ಸೈನ್ಯಕ್ಹೇಳ್ಯಾರೊ
ಲಗ್ಗ ಹಗೆ ತೀರಿಸಿಕೊಂಡು ಬರ್‍ರಿ ಬ್ಯಾಗ ॥

ಚಾಲ

ಛತ್ರ ಚಾಮರ ಪತಾಕೆಗಳು ।
ಚತುರಂಗ ಮಾರ್ಬಲವೆಲ್ಲಾ ॥
ಖಾತ್ರಿದಿಂದ ಹೊಂಟಿತು ಭರ್ಪೂರಾ ॥
ಸೂತ್ರ ಹಿಡಿದು ಹೊಂಟಿತು ತಿಳದ ಮಜಕೂರ ॥೧॥

ವತ್ತರದಿಂದ ಹೋದಾರವರು ।
ಚತುರವಾದ ರಾಕ್ಷಸರು ।
ರಥವನ್ನು ಹೊಡದಾರೊ ಭರರರಾ ।
ನೆತ್ತಿ ಮ್ಯಾಲೆ ಹೊಡದರ ಅಂಗಾತ ಬಿದ್ದಾನೊ ಸೂರಾ ॥೨॥

ಭರ್ತಿಲೆ ಲಡಾಯಿ ನಡದಾಗ ।
ಸತ್ತಿತೊ ಎರಡು ಬಲದ ಸೈನ್ಯ ।
ಸತ್ತ ಹ್ವಾದೊ ದೇವಾಂತಕ ಶೂರಾ ॥
ಮೃತ್ಯು ಹೊಂದಿದ ಅಂಗದವ ನರಾಂತಕ ವೀರಾ ॥೩॥

ಏರ

ಹಗೆ ತೀರಿಸಿಕೊಂಡು ಬರುವಾಗ
ರಾಕ್ಷಸರಿಗೆ ಹಣಮಂತ ಕೊಂದೊ ಅವರಿಗೆ ॥

ಶೂರರು ಸತ್ತ ಸುದ್ದಿ ವೀರ ಇಂದ್ರಜಿತು ಕೇಳಿ
ಭರದೆ ಬಂದು ಅಂದೊ ತಂದೆಗೆ ॥

ಚಾಲ

ಸಿಟ್ಟಿಗೆದ್ದ ಇಂದ್ರಜಿತುವು ।
ಚಟ್ಟನೆದ್ದ ಹೋದಾನಾಗ
ತಟ್ಟನೆ ತಂದೆಯ ಬಳಿಯಲ್ಲಿ ॥
ಶ್ರೇಷ್ಠ ತಂದೆ ವೀಳ್ಯಾ ಕೊಡೊ ನನ್ನ ಕೈಯಲ್ಲಿ ॥೧॥

ದಿಟ್ಟ ತಂದಿ ಕೇಳೊ ನಿನ್ನ
ಹೊಟ್ಟಿಲೆ ಹುಟ್ಟಿ ಫಲವೇನು ।
ಖೊಟ್ಟಿ ರಾಮನ ಹಿಡು ತರುವೆನು ಇಲ್ಲೆ ।
ಕೊಟ್ಟು ಬಿಡುವೆನು ನಿನ್ನ ಕೈಯಾಗ ಈ ಸಭಾದಲ್ಲೆ ॥೨॥

ಇಷ್ಟ ಮಾತ ಕೇಳಿ ರಾವಣ ।
ಕೊಟ್ಟಾನೋ ವೀಳ್ಯವ ತಾನು ।
ಭಂಟ ರಾಮನ ತಂದು ಕೊಡಬೇಕಿಲ್ಲೆ ॥
ಇಷ್ಟೇ ಎಂದು ಆಶೀರ್ವದಿಸಿ ಕಳುಹಿ ಕೊಟ್ಟಾನಲ್ಲೆ ॥೩॥

**ಏರ**

ಭರದೆ ಬಂದು ಅಂದೊ ತಂದೆಗೆ
ಇಂದ್ರಜಿತವ್ರು ತ್ವರದಿ ವೀಳ್ಯಾ ಪಡಕೊಂಡೊ ।
ವೀಳ್ಯಾಪಡಕೊಂಡೊ ಪ್ರೇಮದಲ್ಲಿ ಇಂದ್ರಜಿತುವ್ರು
ಹೊಳ್ಳಿ ಹೊಂಟೊ ಹೋಮ ಮಾಡುದಕ ॥

**ಚಾಲ**

ರಥವನ್ನೇರಿ ಇಂದ್ರಜಿತುವ್ರು ।
ಒತ್ತರದಿಂದ ಹೊಡದಾನಾಗ ।
ಉತ್ತರದಿಕ್ಕಿನ ಕಡೆಯಲ್ಲಿ ॥
ರಥ ಇಳಿದು ಮಂಡಲ ಕೊರದಾನಾ ಸ್ಥಳದಲ್ಲಿ ॥೧॥

ರಕ್ತದ ವರ್ಣದ ಹೂವ್ರು ।
ರಕ್ತದ ವರ್ಣದ ವಸ್ತ್ರ।
ಒತ್ತರದಿಂದ ಧರಿಸಿ ಕೊಂಡಾನಲ್ಲಿ ॥
ಮತ್ತದಿಂದ ಕುಂತಾನೊ ಅಗ್ನಿಯ ಹೋಮದಲ್ಲಿ ॥೨॥

ಪ್ರತ್ಯಕ್ಷ ಅಗ್ನಿಯು ಬಂದು ।
ತೃಪ್ತನಾಗಿ ಮನಸಿನೊಳು ।
ಶಕ್ತಿ ಸಿಂಧು ಶಕ್ತಿ ಕೊಟ್ಟಾನಲ್ಲಿ ॥
ತೃಪ್ತಿದಿಂದ ಹೋಗೋ ನಿನಗ ಜಯವ್ರು ಕಾಳಗದಲ್ಲಿ ॥೩॥

**ಏರ**

ಹೋಮ ಮಾಡಿದನೊ ತಾನಲ್ಲಿ ಬ್ಯಾಗದಲ್ಲಿ
ಕ್ಷೇಮ ಪಡಕೊಂಡೊ ಅದರಿಂದ ॥



ಅಗ್ನಿ ಕೊಟ್ಟ ಶಕ್ತಿ ಮ್ಯಾಲೆ ಇಂದ್ರಜಿತು ತಾ
ಕೂತು ಗಗನಕ್ಕೆ ಒಯ್ ಅಂತ್ಹೇಳಿದನು ।

**ಚಾಲ**

ಸಾಗ ಮಾಡಿದ ಮ್ಯಾಲೆ ಶಕ್ತಿ ।
ಗಗನಕ ಒಯ್ತು ಅವನ ।
ತಗೊಂಡ ಹೋದಿತು ಆಕಾಶ ಮ್ಯಾಲಾ ॥
ಆಗ ಅವನು ಸಿಂಹನಾದಾ ಮಾಡ್ಯಾನ ತತ್ಕಾಲಾ ॥೧॥

ಬ್ಯಾಗ ಗರ್ಜನಿ ಹೊಡದು ।
ಸಾಗಿದ ವೈರಿಯ ಮ್ಯಾಲಾ ।
ಹೋಗಿ ಬಾಣಾ ಹೊಡದೊ ಮೈ ಮ್ಯಾಲಾ ।
ಆಗಿನ ಕ್ಷಣಕ ಕಪಿಗಳು ಆದಾವ್ರೊ ದಿಕ್ಕಾಪಾಲಾ ॥೨॥

ಬಗೆ ಬಗೆ ಗರ್ಜನಿ ಹೊಡದಾ ।
ತಗದ ತಗದ ನಾನಾ ಥರಾ ।
ಬಗಳಿ ಆಗುವ ಹಾಂಗ ಕಪಿಗಳಿದೆಲ್ಲಾ ।
ಹೊಗಳಿಕೊಂತ ನಡದಾನೊ ರಾಕ್ಷಸಗ ಭಯವಿಲ್ಲಾ ॥೩॥

**ಏರ**

ಗಗನಕ ಒಯ್ ಅಂತ್ಹೇಳಿದನೊ ಇಂದ್ರಜಿತುವ್ರು
ಬಗಳಿ ಮಾಡಿದನೊ ಕಪಿಗಳನು ।
ಬಗಳಿ ಮಾಡಿದ್ದು ನೋಡಿ ಹೊಗಳಿ ಆರ್ಭಟದಿಂದಾ
ಅಗ್ರಜಗ್ಹೇಳಿದೊ ಲಕ್ಷ್ಮಣನು ।

**ಚಾಲ**

ಈಗ ಬಂದು ನಮ್ಮೊಡನೆ ಕಾ ।
ಳಗ ಮಾಡುವಂಥ ರಣ ।
ರಂಗದೊಳಗೆ ಮಾಯಾ ಮಾಡುವನು ॥
ಹೇಗಾದರೂ ಮಾಡಿ ಇವನ ಈಗ ಕೊಲ್ಲುವೆನು ॥೧॥

ಶೀಘ್ರದಿ ಶ್ರೀರಾಮಚಂದ್ರನು ।
ಬೇಗನೆ ತಮ್ಮಗ ಹೇಳತಾನು ।
ಹೋಗಾ ವ್ಯಾಳ್ಯಾ ಅಲ್ಲ ಇದು ಇನ್ನೂ ॥
ಕೊಲ್ಲಗಳು ಹೊಡೆದರೆ ಅಪಾಯವಿಲ್ಲ ಇವಗೇನೇನು ॥೨॥

ಅಗ್ನಿಯ ವರ ಬಲದಿಂದ ಹಿಗ್ಗಿ ಗರ್ವಿಸಿರುವನು ।
ಜಗ್ಗಿ ಹೊಡೆಯುವ ಅಗ್ನಿಯಾಸ್ತ್ರವನು ।
ಹೋಗುವದೋಡಿ ಚೆಲ್ಲ ನೆಲಕ ಶಕ್ತಿ ಇವನನ್ನು ॥೩॥

**ಏರ**

ಅಗ್ರಜಗ ಹೇಳಿದೋ ಲಕ್ಷ್ಮಣನು ಅಧಮನನು
ಶೀಘ್ರ ಶಕ್ತಿ ಚಲ್ಲಿ ಹೋಯ್ತೆಂದು ॥
ಶಕ್ತಿ ಚಲ್ಲಿ ಓಡಿದ್ದು ಯುಕ್ತಿಯಿಂದಲಿ ತಿಳಿದು
ಕ್ಲುಪ್ತನಾಗಿ ಬಂದೊ ಲಂಕೆಯೊಳು ।

**ಚಾಲ**

ಶಕ್ತಿ ಚಲ್ಲಿ ಹೋದದ್ದನ್ನು
ಯುಕ್ತಿಯಿಂದ ತಿಳಿದು ಸಂ ।
ತಪ್ತನಾದ ತಂದೆಗೆ ಹೇಳಿದಾ ॥
ರಕ್ತದ ಕಾವಲಿ ಹರಿಯಿತು ರಣದೊಳಗಿಂದಾ ॥೧॥

ಒತ್ತರ ಮಾಡಿ ರಾಮನ ಯಾ ।
ವತ್ತು ಸೈನ್ಯವೆಲ್ಲವನ್ನು ।
ತತ್ತರಗೊಳ್ಳುವಂತೆ ಮಾಡಿದೆನಂದಾ ॥
ಭಕ್ತಿಯಿಂದ ಹೇಳತಾನೊ ತಂದೆಗೆ ಕೈ ಮುಗದಾ ॥೨॥

ಮಾತು ಕೇಳಿ ಲಂಕಾಧೀಶನು ।
ಸುತನಿಗೆ ತಾ ಹೇಳ ತಾನು ।
ಮತ್ತೊಮ್ಮೆ ಹೋಗಿ ಕೊಂದ ಬಾರೋ ಕಂದಾ ।
ಇಂತು ಮಾತ ಕೇಳಿ ಹೊಡದ ಬಾರೊ ಇನ್ನ ಮುಂದಾ ॥೩॥

**ಏರ**

ಲಂಕೆಯೊಳು ಬಂದ ರಾಕ್ಷಸನ ರಾವಣನು
ಬಿಂಕದಲ್ಲಿ ರಣಕೆ ಕಳಿಸಿದನು ॥
ಬಿಂಕದಲಿ ರಣದೊಳಗೆ ಹಂಕಾರ ಮಾಡುತ ಬಂದು
ಶಂಕೆ ಇಲ್ಲದ್ದೊಂಟೋ ಸೈನ್ಯದಲಿ ॥

**ಚಾಲ**

ಮೂರ್ಖ ಚತುರಂಗವೆಲ್ಲಾ ।
ತೇರ ಗಜ ತುರಗ ಏರಿ ।



ಭರದಿ ಮುತ್ತಿ ಕೊಂಡಿತು ವಾನರನಾ ॥
ಸರಸರ ಬಂದು ಆಂಜನೇಯನು ತರುಬಿದೊ ಇವರನ್ನಾ ॥೧॥

ಮಾರುತಿಯ ಆರ್ಭಟಕ ।
ಚೀರಿ ಚೀರಿ ಒದರ್ಯಾರು ದೈತ್ಯಾರು ।
ಘೋರ್ಯಾಡಿ ಅತ್ತರೋ ಒಂದಸವನ ॥
ವೀರ ಇಂದ್ರಜಿತವು ಹಂಚಿಕಿ ತಗದೊ ಮತ್ತೊಂದು ಕವನಾ ॥೨॥

ತ್ವರಿತದಿಂದ ಮಾಡಿದ ಮಾಯದ ।
ನಾರಿ ಸೀತಿಯನ್ನು ತಾನು ।
ಹಿರದ ಹೊಡದಾನಾಕಿ ರುಂಡವನಾ ॥
ಹೊರಟು ಹೋದೋ ನಿಕುಂಭಿಳಾ ಯಾಗಕ್ಕೆ ತಾನಾ ॥೩॥

**ಏರ**

ಶಂಕೆ ಇಲ್ಲದ್ದೊಂಟೊ ಸೈನ್ಯದಲ್ಲಿ ಇಂದ್ರಜಿತುವು
ಕೊಂಕು ಮಾಡಿ ಹೊಂಟೊ ಬ್ಯಾಗದಲಿ ॥
ಸೀತೆ ಸತ್ತದ್ದು ಕೇಳಿ ಕೋತಿಗಳು ಓಡಿದರೊ
ಘಾತವಾಯ್ತು ಕೇಳ್ರಿ ಸ್ವಾಮಿ ನಮದಾ ॥

**ಚಾಲ**

ಅತ್ತ ಕೋತಿ ಕಪಿಗಳೆಲ್ಲಾ ।
ಒತ್ತರದಿಂದ ಬರತಾರು ।
ಚಿಂತಿ ಮಾಡುತ ಮನಸಿನಲ್ಲಿ ॥
ಸೀತಾದೇವಿಯನ್ನು ಕೊಂದಾನ ಖಳನು ರಣದಲ್ಲಿ ॥೧॥

ಇಂಥಾ ಮಾತ ಕೇಳಿ ಸ್ವಾಮಿ ।
ಭ್ರಾಂತಿ ಬಡದ ನಿಂತಾನು ।
ಪ್ರೀತಿಯ ಜಾನಕಿ ಹೋದಳೆಲ್ಲಿ ॥
ಸತಿಯ ಅಗಲಿದಳೋ ಎನಗ ಇಂದಿನ ದಿನದಲ್ಲಿ ॥೨॥

ಮತ್ತು ಮೂರ್ಛೆ ತಿಳಿದು ಎದ್ದು
ಎತ್ತ ಹೋದರೆ ಬಿಟ್ಟೇನ ಖಳನೀಗಿ
ಮೃತ್ಯು ಲೋಕದೊಳಗ ಇರಲಿ ॥
ಪಾತಾಳ ಲೋಕದೊಳಗ ಹೋದರ ಬಾಣ ಬಿಡುವೆನಲ್ಲಿ ॥ ॥೩॥

**ಏರ**

ಘಾತವಾಯ್ತು ಕೇಳ್ರಿ ಸ್ವಾಮಿ ನಮದ
ಈ ವಿವಸಾ ಚಿತ್ತದೊಳೊಂದೆ ಮನವಿಲ್ಲಾ ॥

ಇಂದು ಕೇಳರಿ ಸ್ವಾಮಿ ಚಂದದಿಂದಲಿ ನೀವು
ಮುಂದೆ ಇದಕೇನು ಹಂಚಿಕೆಯಾ ॥

**ಚಾಲ**

ಇಷ್ಟ ಕೇಳಿ ವಿಭೀಷಣ ।
ಚಟ್ಟನೆದ್ದ ರಾಮನ ಚರಣ ।
ಮುಟ್ಟಿ ಹೇಳತಾನ ಇದಕ್ಯಾಕಿನ್ನ ॥
ಗಟ್ಟಿ ಕೇಳರಿ ಮಾಯದ ಸೀತೆ ಕೊಂದು ಹೋದರಿ ಅವನಾ ॥೧॥

ಶ್ರೇಷ್ಠ ಹೋಮಾ ಮಾಡುವದಕ್ಕೆ ।
ತಟ್ಟನೆ ಮಾಯಮಾಡಿ ಹೋದಾ ।
ಕೆಟ್ಟ ಇಂದ್ರಜಿತವು ಕೇಳ್ರಿನ್ನಾ ।
ಶಿಷ್ಟಾದ ನೇಮದಿಂದ ಮಾಡುವನು ತಾನಾ ॥೨॥

ಭ್ರಷ್ಟ ಇಂದ್ರಜಿತುವಿ ಹೋಮಾ ।
ತಟ್ಟನೆ ಮುಗಿಯುವ ದಿನಾ ।
ಸಟ್ಟನೆ ಕಳಿಸರಿ ಲಕ್ಷ್ಮಣನಾ ॥
ಪಟ್ಟನೆ ಹೋಗಿ ಇಂದ್ರಜಿತುವಿನ ಕೊಂದ ಬರುವನಾ ॥೩॥

**ಏರ**

ಇದಕೇನು ಹಂಚಿಕೆಯು ತಿಳಿತು ಇದರ ಪರಿಯೂ
ಯುದ್ಧಕ್ಕೆ ನಡಿರಿ ಬ್ಯಾಗದಲ್ಲಿ ।
ಬ್ಯಾಗ ಬ್ಯಾಗ ನಡಿರಿ ಸಾಗಿ ಸಾಗಿ ಮುಂದಕ್ಕ ।
ಜಗ್ಗಿ ಜಗ್ಗಿ ಹೊಡಿರಿ ಅರಿಗಳನಾ ॥

**ಚಾಲ**

ಶೂರ ಲಕ್ಷ್ಮಣನು ತಾನು ।
ಅರಿಗಳಿಗೆ ಭೀಕರವಾದ ।
ಸರಳ್ಗಳ ಬಿಟ್ಟಾನೋ ಸರರಾ ।
ವೀರ ರಕ್ಕಸನ ಸೈನ್ಯ ಬಂತೊ ಭರ್ಪೂರಾ
ಅರ್ಧಚಂದ್ರಾಕೃತಿಯಲ್ಲಿ ॥೧॥



ತರದ ತರದ ಬಾಣಗಳಿಂದ ।
ಶೂರರೆಲ್ಲರ ನಡಿಶಾರ ಭಯಂಕರಾ ॥
ಎರಡೂ ದಳದಲ್ಲಿ ಸತ್ತರೊ ಮಾರ್ಬಲ ಜನರಾ ॥೨॥

ಶೂರರ ಕಾಳಗದಲ್ಲಿ । ಹರದಿತ್ತೊ ನೆತ್ತರ ಕಾವಲಿ ।
ವೀರ ಲಕ್ಷ್ಮಣ ಬಹಳ ಶೂರಾ ।
ಕೊಂದ ಹಾಕಿದ ಇಂದ್ರಜಿತುವಿನ ಶಿರಾ ॥೩॥

**ಏರ**

ಜಗ್ಗಿ ಜಗ್ಗಿ ಹೊಡಿರಿ ಅರಿಗಳನು ಎಲ್ಲರನು ।
ಕುಗ್ಗಿ ಇಂದ್ರಜಿತವು ಮಡದಾನು ॥
ಇಂದ್ರಜಿತು ಸತ್ತದ್ದು ಸುಂದ್ರ ರಾಮಚಂದ್ರ ಕೇಳಿ
ಚಂದ್ರನಂತೆ ಶಾಂತ ಆದಾನು ॥

**ಚಾಲ**

ಒಕ್ಕಟ್ಟಾಗಿ ಕಪಿಗಳೆಲ್ಲರು ।
ರಕ್ಕಸರನ್ನೆಲ್ಲ ಕೊಂದು ।
ಒಕ್ಕಲಿಕ್ಕಿ ಹೊಡದಾರ ಎಲ್ಲರನ್ನು ॥
ಠಕ್ಕ ಇಂದ್ರಜಿತುವು ಮಡದ ವಾರ್ತೆ ಕೇಳ್ರಿನ್ನು ॥೧॥

ಸಿಕ್ಕ ಸಿಕ್ಕ ರಕ್ಕಸರನ್ನು ॥
ಅಕ್ಕರದಿಂದ ಎತ್ತಿ ಖಡದಾ ॥
ಶೋಕ ಮಾಡಿ ಹೊಂದ್ಯಾರ ಮರಣವನ್ನು ॥
ಲಕ್ಷ್ಮಣನ ಬಾಣಕ ಇಂದ್ರಜಿತು ಮಡದಾನು ॥೨॥

ರಕ್ಕಸ ಮಡದ ವಾರ್ತೆ ಕೇಳಿ ।
ಕೊಕ್ಕುಟ ಹೊಡದ ನಗತಾರ ಎಲ್ಲಾರು ।
ಮಿಕ್ಕ ರಾಮನು ಅಪ್ಪಿಕೊಂಡು ಲಕ್ಷ್ಮಣನನ್ನು ॥
ತೆಕ್ಕೈಸಿ ಮೈಮ್ಯಾಲೆ ಕೈ ಆಡಿಸಿದನು ॥೩॥

ತಿಕ್ಕಿ ತಿಕ್ಕಿ ಆಡಿಸುವಾಗ ।
ಸಿಕ್ಕ ಸಿಕ್ಕಲ್ಲಿ ಗಾಯಗಳಿರಲು ।
ತರ್ಕದಿಂದ ಕರದಾನು ಸುಕ್ಷೇಣನನ್ನು ।
ತಕ್ಕಂಥ ಔಷಧ ಕೊಟ್ಟ ಗಾಯ ಮಾಸಿದನೊ ॥೪॥

### ಏರ

ಚಂದ್ರನಂತೆ ಶಾಂತ ಆದಾನು ರಾಮಚಂದ್ರ
ಸುಂದ್ರ ತಮ್ಮನ್ನಪ್ಪಿ ದ್ಧರುಷದಲ್ಲಿ ॥

ಸರಸರನೆ ಚಾರಕರು ಭರಭರನೆ ಸಾಗಿದರು
ಕರದ ರಾವಣಗ ಹೇಳಿದರು ॥

### ಚಾಲ

ಕರ ಮುಗಿದು ಹೇಳುವೆವು ಸ್ವಾಮಿ ।
ಶಿರಬಾಗಿ ಚರಣಕ್ಕೆರಗುವೆವು ।
ಭರದೆ ಲಾಲಿಸರಿ ಭಿನ್ನಪ ।
ತ್ವರದಿ ಪೋಗಿ ಸತ್ತಾನ ಕೇಳ್ರಿ ಇಂದ್ರಜಿತು ಭೂಪ ॥೧॥

ಕರ್ಣದಿಂದ ಕೇಳಿದ ರಾವಣ ।
ಶೂರ ಕಂದನ ಮರಣವನ್ನು ।
ಯಾರಲ್ಲಿ ಅಡಗಿಸಲಿ ನನ್ನ ಕೋಪ ।
ಭರವಸ ಮಾಡಿನಿ ಕಂದನ ಮ್ಯಾಲಾ ತಾಳಲೆಷ್ಟ ತಾಪ ॥ ॥೨॥

ಪರಿಪರಿ ಕಷ್ಟ ಭೋಗಿಸಿ ನಾನು ।
ಸ್ಥಿರವಾಗಿ ಇರುವುದು ಬ್ಯಾಡ ।
ಚಾರಕರಿರ್ಯಾ ಕರಿರ್ಯೊ ನಮ ಗುಂಪ ॥
ಬರಮಾಡಿಸೊ ಅವರನ್ನ ಓಲಗದೀ ॥೩॥

### ಏರ

ಕರದ ರಾವಣಗ ಹೇಳಿದರೊ ಚಾರಕರು
ಭರದಿ ಕರಿ ಅಂದೊ ನಮ್ಮ ದಳವಾ ॥
ವೀಳ್ಯ ಕೊಡುವೆನು ಬ್ಯಾಗ
ಪಾಳ್ಯಾಕ ಸಾಗುದಕ ಕಾಳಗ ಮಾಡಿ ಜೈಸುದಕ ॥

### ಚಾಲ

ಚಾರಕನೇ ಕೇಳೆನ್ನ ಮಾತು ।
ಭರದಿ ಪೋಗಿ ಕರಕೊಂಡು ಬಾರೊ ।
ತ್ವರದಿ ಬರಲಿ ನಮ್ಮ ಸೈನ್ಯ ಬ್ಯಾಗ ॥
ಭರದಿ ಪೋಗಿ ಕರಿಯ ಹೋಗೋ ಅವರನ್ನ ಲಗ್ಗ ॥೧॥



ಶಿರ ಬಾಗಿ ಲಾಲಿಸಿ ಮಹನ ।
ಚಾರಕ ಹೋಗಿ ಹೇಳತಾನಾ ।
ತುರದಿ ಬರ್ರಿ ನೀವು ಸಭಾದೊಳಗ ।
ಕರಿಯೆ ಅಂತ ಹೇಳ್ಯಾರ ನಿಮ್ಮನ್ನ ದಶಕಂಠ ಬೇಗ ॥೨॥

ಚಾರಕನ ಮುಖದಿಂದ
ಅರಸು ಕರಿಯೆ ಕಳಿಸಿದ್ದು ನೋಡಿ ।
ಸರಸರನೆ ಬಂದಾರೊ ಓಲಗದೊಳಗ ।
ಕರವ ಜೋಡಿಸಿ ಕೇಳತಾರೋ ಹೇಳ್ರಿ ಅಪ್ಪಣಿ ಬ್ಯಾಗ ॥೩॥

ಕರಕರನೆ ಕಡಿಯುತ್ತ ।
ಶೂರ ದೈತ್ಯರಿಗ್ಹೇಳತಾನ ।
ವೈರಿ ರಾಮನ ಕೊಂದ ಬರ್ಯೊ ಈಗ ।
ಹರಸಿ ಕಳಿಸ್ಯಾನ ವೀಳ್ಯಾ ಕೊಟ್ಟು ಅವರ ಕೈಯಾಗ ॥೪॥

### ಏರ

ಕಾಳಗ ಮಾಡಿ ಜೈಸುದಕ ಹೊಂಟಾರೊ
ಖೂಳ ರಕ್ಕಸರು ಬಲು ಬ್ಯಾಗ ॥
ಬಲು ಬ್ಯಾಗ ಹೊಂಟಾರೊ
ನಲಿ ನಲಿದು ರಕ್ಕಸರು
ಕಲಿಗಳು ನಾವೆ ಎಂದೆನುತ

### ಚಾಲ

ಕ್ರೂರ ರಕ್ಕಸರು ಬ್ಯಾಗ ।
ವೀರ ಗಜ ತುರಗಗಳನ್ನು ।
ಮೀರಿ ಹೊಡದಾರ ರಣರಂಗದ ಮ್ಯಾಲ ।
ತೇರ ಸಿಂಹ ಹುಲಿ ಚತುರಂಗಕ್ಕಳತಿಲ್ಲಾ ॥೧॥

ತರತರದ ರಾಕ್ಷಸರು ಎಲ್ಲಾ ।
ಕರದಲ್ಲಿರುವ ಖಡ್ಗ ಹಿಡದಾರ ಮ್ಯಾಲಾ ॥
ಸರಳ ಚಕ್ರ ಶೂಲಗಳಿಗೆ ಏನೂ ಲೆಕ್ಕವಿಲ್ಲ ॥೨॥

ಶೂರರಾದ ರಕ್ಕಸರೆಲ್ಲಾ ।
ವೀರ ಬೊಬ್ಬಿಯಾರ್ಭಟದಿಂದ ।
ತೂರಿ ಬಂದಾರ ಕಪಿಗಳ ಗುಂಪಿನ ಮ್ಯಾಲ ॥
ಬರುವದ ನೋಡಿ ಕಪಿಗಳು ಆದಾರ ಬೆಂಕಿ ಲಾಲಾ ॥೩॥

ಮರ ಗುಂಡು ಕಲ್ಲುಗಳನ್ನು ।
ಧೀರ ಕಪಿಗಳು ತೆಗೆದುಕೊಂಡು ।
ಸರಸರನೆ ಹಾಕ್ಯಾರೊ ದೈತ್ಯರು ಮ್ಯಾಲಾ ।
ಪರಿಪರಿ ಹೊಡದರ ದೈತ್ಯರ ಧೃತಿಗೆಡಲಿಲ್ಲ ॥೪॥

**ಏರ**

ಕಲಿಗಳು ನಾವೆ ಎಂದೆನುತ ರಕ್ಕಸರು
ನಿಲ್ಲದೆ ಹೊಡದ್ರೊ ವಾನರರು ॥
ವಾನರನ್ಹೊಡದದ್ದು ನೋಡಿ ಮಾನವಂತ
ರಾಮಚಂದ್ರ ಸಾಗಿ ನಿಂತೋ ಕಾಳಗಕ್ಕ ।

**ಚಾಲ**

ಚಂದದಿಂದ ಶ್ರೀರಾಮಚಂದ್ರ ।
ಮುಂದೆ ಬಂದು ನಿಂತಾನ ನೋಡಿ ।
ಸುಂದರ ರಕ್ಕಸರೆಲ್ಲಾರನ್ನು ।
ಇಂದಿನ ದಿವಸಾ ಹೊಡೆಯುವೆನು ಕಾಳಗದಲ್ಲಿ ನಾನು ॥೧॥

ನೊಂದಂಥ ಕಪಿಗಳೇ ಕೇಳ್ರಿ ॥
ಮಂದಮತಿ ರಕ್ಕಸರನ್ನು ।
ಕೊಂದ ಹಾಕುವೆನು ಕೇಳ್ರಿ ನಾನು ।
ಚಂದದಿಂದ ಬಿಟ್ಟೇನ ನೋಡರಿ ಮೋಹನಾಸ್ತ್ರವನ್ನು ॥೨॥

ಸುಂದರ ಅಸ್ತ್ರ ಬಿಟ್ಟ ಕೂಡಲೇ ।
ಬಂಧುರವಾದ ರಕ್ಕಸರು ।
ಕಂದಿ ಬಿದ್ದರು ನೋಡ್ರಿ ನೆಲವನ್ನು ।
ಕೊಂದ ಬಿಡ್ರಿ ಇವರಲ್ಲಿ ಒಬ್ಬನನ್ನು ॥೩॥

ಮಂದವಾದ ರಕ್ಕಸರನ್ನು ।
ಸುಂದರ ರಾಮನ ಆಜ್ಞೆಯಿಂದ
ಬಂದು ಬಿಟ್ಟ ಕೊಂದಾರ ಎಲ್ಲಾರನ್ನೂ ॥
ಆದ ವರ್ತಮಾನಾ ರಾವಣಗ ಹೇಳ ಹೋಗೋ ನೀನು ॥೪॥

**ಏರ**

ತಾನಾಗಿ ನಿಂತೋ ಕಾಳಗಕ್ಕ ರಾಮಚಂದ್ರ
ಚನ್ನಾಗಿ ಕೊಂದು ಅರಿಗಳನಾ ॥



ಅತ್ತಕಡೆ ಚಾರಕನು ವತ್ತರದಿಂದಲಿ ಪೋಗಿ
ಹತ್ತ ತೆಲಿ ರಾವಣಗ್ಹೇಳಿದನು ॥

**ಚಾಲ**

ಶಿರಬಾಗಿ ಕರ ಜೋಡಿಸುವೆನು ॥
ಚರಣಕ್ಕೆರಗಿ ಹೇಳುವೆನು ।

ಮರಗಿ ಕಳವಳಗೊಂಡು ಚಿಂತಿಯಿಂದಾ ।
ವರತಮಾನಾ ಕೇಳ್ರಿ ಇದು ಕಾಗಳದೊಳಗಿಂದಾ ॥೧॥

ವೀರ ರಕ್ಕಸರು ಬ್ಯಾಗ । ತರತರ ಕಾಳಗ ಮಾಡಿದರೆ
ಭರದಿ ಅವರ ಮ್ಯಾಲ ಸಾಂಬ ಮುನಿದ ॥
ನರರಾಮನ ಬಾಣಕ ದೈತ್ಯರೆಲ್ಲರು ಬಿದ್ದಾರೊ ಮೂರ್ಛಿ ಬಂದಾ ॥೨॥

ತ್ವರಿತದಿಂದ ಬಿದ್ದ ಬಳಿಕ । ಮೀರಿದಂಥ ಸೈನ್ಯವನ್ನು ।
ಹೀರಿ ವಗೆದರಿ ಲಕ್ಷ್ಮಣಬಂದಾ ॥
ವೀರ ಕಪಿಗಳು ಹಾಕ್ಯಾರ ಬಾಕಿ ಎಲ್ಲಾರನ್ನು ಕೊಂದಾ ॥೩॥

ಚಾರರ ಮುಖದಿಂದ ರಾಕ್ಷ
ಸರ ಮರಣದ ವಾರ್ತೆ ಕೇಳಿ
ಧೀರ ರಾವಣ ತಡಯಾಕಿನ್ನ ಅಂದಾ ॥
ಕಾಳಿ ಹಿಡಿಸಿ ರಥ ಶ್ರಿಂಗಾರ ಮಾಡ್ಹೋಗೊ ಚಂದದಿಂದ ॥೪॥

**ಏರ**

ಕೇಳಿದನು ರಾವಣನು ಚಾರಕಗ ಹೇಳಿದನು ।
ಕಾಳಿ ಹಿಡಸಿ ರಥವ ಶೃಂಗಾರಿಸೊ ॥

* * *

## ೧೧. ಗಯಾನ ಕಥೆ

### ಗಣಪತಿಯ ಸ್ತೋತ್ರ

ಏರ

ಅಷ್ಟಗಂಧ ಪರಿಮಳ ಅಷ್ಟು ಪುಷ್ಪಗಳೆಲ್ಲ
ನಿಷ್ಠೆಯಿಂದ ಗಣಪ ಧರಿಸುವೆನೋ ॥ಪ॥

ಕರಿಯ ಮುಖ ನಿನ್ನ ಸ್ಮರಿಸುವೆ ಗೌರಿ ।
ವರ ಕುಮಾರ ಕರಿಮುಖಾ ।

ಮುರಹರ ಪುರಾಣ ಆರು ಶಾಸ್ತ್ರಕ
ಮಾರಹರ ಪರಮೇಶ್ವರನ ಬಾಲಕಾ ॥೧॥

ಚಾರುಮೂರ್ತಿ ನಿನ್ನ ಚರಣಕ್ಕೆ ಎರಗುವೆ
ವರ ಕೊಡೋ ನಿನ್ನ ಸೇವಕ ।
ಚಂದ್ರನ ವೈರಿ ವಂದಿರುವಾಹನ
ಬಂದ್ರ ನನಗ ಬಹು ಸುಖಾ ।
ಸರ್ವ ಏಕಾದ್ರ್ಯ ವಿದ್ಯಾದಾಯಕ ।
ಸುರಾಮರಿಂದ್ರ ಸಹಿತ ಜನಲೋಕಾ ।
ನಿಂದ್ರದೆ ವಂದಿಸುವೆ ಪಕ್ಕಾ ।
ಬಂದು ಒದಗೋ ಸುಂದ್ರವಾದ ಗಣನಾಯಕ । ಅಷ್ಟ...... ॥೨॥

ನಿಷ್ಠೆಯಿಂದ ಗಣಪ ಧರಿಸಿ ನಾ ಪೊಗಳುವೆನೂ
ಕೃಷ್ಣಾರ್ಜುನರ ಕಾಳಗವೂ ।
ಲೋಕನಾಥನು ಆದ ಪರೀಕ್ಷಿತ ರಾಜಾನು
ಬೇಕೆಂದು ಸುಖಮುನಿಗೆ ಎರಗಿದನು ॥ಪ॥

ತಂದೆ ಸುಖಮುನಿಯಿನ್ನ ಮುಂದಿನ ಕತಿಯು ನನಗ
ಚಂದದಿಂದ ಹೇಳಿರಂದಾನೋ
ನಮಸ್ಕರಿಸಿ ದುಂದುಬಿ ಚರಣ ಪಿಡಿದ ಕೇಳ್ಯಾನೋ ॥
ಮುತ್ಯಾ ನಮ್ಮ ಪಾರ್ಥವೀರಗ ಮತ್ತು ಕೃಷ್ಣನಿಗೆ ಕಲಹ
ಯಾತರ ಸಲುವಾಗಿ ಬಂತು ಹೇಳಿರಿನ್ನು ।



ಸಾರಥಿ ಕೃಷ್ಣನಿಗೆ ಹಿತವಾದಂತ ಬೀಗ ಪಾರ್ಥನು ॥
ಅವರಿವರೊಳು ಕದನವ್ಯಾಕೋ ಸಂವರಿಸಿ ಹೇಳಯ್ಯಾ
ಮುನಿ ಅವನಿಪತಿ ಹೀಗೆಂದನೋ ।
ಪ್ರೀತಿ ಇಟ್ಟ ಶಿವ ಬಂಕನಾಥನಿಗೆ ನಮಸ್ಕರಿಸ್ಯಾನೋ ।
ಬೇಕೆಂದು ಸುಖಮುನಿಗೆ ಎರಗಿದನೋ ಹರಿ ಪಾರ್ಥಗ
ವಾದ್ಯಾಕ ಬಂತಯ್ಯಾ ॥
ಮತಿವಂತ ಪರೀಕ್ಷತ ಕಥನ ಹೇಳುವೆ ನಾನು
ಕ್ಷಿತಿಪತಿಯೆ ಕುಂತ ಕೇಳಿನ್ನ ॥ಪ॥

ಪುತ್ರಾ ಜನ್ಮ ಜಯ ನಿಮ್ಮ ಮುತ್ಯಾನಾದ ಪಾರ್ಥವೀರ
ಸತ್ಯದಿಂದ ಇದ್ದೋ ಮಹಾ ಪ್ರಬಲಾ ।
ಮುಂದಿನ ಕಥಿ ಚಿತ್ತಿಟ್ಟ ನೀ ಕೇಳೋ ಗುಣಶೀಲಾ ॥

೧

ಶ್ರೀ ಸಂಪತ ದುರ್ಯೋಧನಗ ದೊರಿಯ ಧರ್ಮರಾಜಾ ಸೋತ
ಅರಣ್ಯವಶವಾಗಿ ಕೋಲಾಹಲ ।
ಕುಟುಂಬ ಸಹಿತ ಶ್ರೀಹರಿ ನೆನೆವುತ ಮ್ಯಾಲ ಮ್ಯಾಲ
ಕಾಮೇಕ ವನದೊಳು ಇದ್ರೂ ಶ್ಯಾಮಲವರ್ಣ ಬಲದಿಂದ
ಭೂಮಿಪಾಲಕ ಪಾಂಡವರೆಲ್ಲಾ ।
ನಿಜ ಮನಸಿನಿಂದ ರಾಮ ರಾಮ ಸ್ಮರಿಸುತ ಸಲ್ಲಾ ॥

೨

ಕ್ಷಿತಿಪತಿಯೆ ಕುರಿತ ಕೇಳಿನ್ನು ಜನ್ಮಜಯನೇ
ವತನದಾರ ಮಗನ ವಾರ್ತೆಯನು
ದ್ವಾರಕಿಯ ನಗರದಲ್ಲಿ ಮಹಾಧೀರ ಕೃಷ್ಣನು
ಮೀರಿ ಸೌಖ್ಯದಲ್ಲಿ ಇರುವವನು

ದ್ವಾರಕಿ ನಗರದಲ್ಲಿ ವಾರಿಜಾಂಬರೆಯರು ಹದಿನಾರ ಸಾವಿರಾ ಮಂದಿ
ಗೊಲ್ಲ ಸ್ತ್ರೀಯರಲ್ಲಿ ।
ಕ್ಷೀರಸಾಗರ ವಾಸ್ಯಾ ಹರಿ ಏರಿದನಲೋ
ಮಾರನಾಟದಿಂದ ಸುಖ ಆಗ ಸುರಿಸುತಲಿ ॥

೩

ಒಂದ ದಿವಸ ಬಲರಾಮನ ಮುಂದ ಹೇಳತಾನೋ
ಆನಂದದಿಂದ ಹೋಗಿಯವನು ತೀವ್ರದಲಿ ।
ಅಂದ ಅರ್ಗ್ಯ ಬಿಡುವನು ನಡಿ ತೀವ್ರದಲಿ ।
ಅಣ್ಣ ಬಲರಾಮನೆ ಪುಣ್ಯ ಕಾಳ ವಸಿದಿತು
ಸಣ್ಣಾಗಿ ಅದ್ಯ ಆಗುವಂತೆ ।

ಕಮಲಮಿತ್ರ ಅನುಕ್ರಮದಿಂದ ಅರ್ಗ್ಯವಾ
ಪ್ರೇಮದಿಂದ ಬಿಡುವೆನು ನಡಿರಿ ಮತ್ತೆ ॥

೪

ಗಮನದಿ ಬಲರಾಮ ಕೃಷ್ಣಾಲಯವನು ತೀವ್ರದಲಿ
ಹೋಗಿ ಆಗಗಮನ ಮಾಡಿದಾರೋ ಅರ್ಗ್ಯ ಬಿಡುವತಲಿ ।
ಎಂಜಲವೆಂದು ಕ್ರೋಧವನು ಆಗ ತಾಳುತಲಿ ।
ಮೀರಿ ಸೌಖ್ಯದಲಿ ಇರುವುತಲಿ ।
ಈ ಕಥಿಯ ಧಾರುಣಿಪತಿ ಕೇಳೋ ಹರುಷದಲಿ ।

ಹರಿಯು ಬಲರಾಮ ಆಗ ಹರುಷದಲಿ ಅರ್ಗ್ಯವನು
ಸೂರ್‍ಯಾಗ ಸುಖದಲಿ ಬಿಡುವುತಲಿ ॥ಪ॥

೫

ಉತ್ತಮ ತೇಜಿಯನೇರಿ ವತ್ತರ ಮಾಡಿ ಪುತ್ರನಾದ
ಗಯಾ ಅಂತರ ಮಾರ್ಗದಲಿ ।

ಏರಿ ಸತ್ತರ ಲೋಕಕೆ ಹೋಗು ತಿದ್ದೊ ಅವಸರದಲಿ
ಆ ಸಮಯದಲಿ ವಿಪರೀತ ಆದೀತಲ್ಲಿ ॥
ಗಂಧರ್ವನ ವಾಜಿ ಜೊಲ್ಲ ಬಂದ ಗಾಳಿಯಿಂದ
ಮುಕ್ಕುಂದ ಹಸ್ತದಲಿ ಬೀಳುತಲಿ ।
ಎಂಜಲೆಂದು ಕ್ರೋಧವನು ಆಗ ತಾಳುತಲಿ ।
ಸಿಟ್ಟಿನಿಂದ ಬಲರಾಮನ ಮುಂದ ಹೇಳಿದೋ ಗೋವಿಂದ
ಗೋಪಾಲ ಶ್ರೀಹರಿ
ಚಾಪ ಹಿಡದ ನಿಂತೋ ಕೋಪ ಏರಿ ।
ಒಡ್ಡೀನಿ ಎನ್ನ ಕರಕಮಲ ಬಿದ್ದೀತ ಯಾವ ಎಂಜಲ
ಅವನ ಕೊಲ್ಲೋದು ಎಂದು ಬಿಡುವದಿಲ್ಲ ।
ಶಪಥ ಮಾಡಿದೊ ಕೃಷ್ಣಗೋಪಾಲ
ಸೂರ್‍ಯಗ ಮುಕದಿ ಬಿಡುವುತಲಿ ವಾಜಿಯ
ಬುರುಗ ಬಿದ್ದಿತೋ ಹಸ್ತದಲಿ

೬

ಬರಿ ಕೋಪ ಹರಿಗೇರಿ ಧರಿಯ ನಡಗುವಂತೆ
ಆರ್ಭಟ ಮಾಡಿ ಚೀರುತಲಿ ।
ದೇವರೊಳು ದಾನವರೊಳು ಯಾವನಾದರು ಆಗಲಿ ।
ವಸುದೇವನಾಣೆ ಎಂಟ ದಿವಸದಲಿ
ಅವನ ಜೀವ ಕೊಂದು ಬಿಡುವೆನೆಂದು ಪಂಥದಲಿ ।
ಉಳಿದರೊಂದು ವ್ಯಾಳೆದಲಿ ।



ಗಳಿಗಿ ತಡವಿಲ್ಲದ ಅಗ್ನಿಯೊಳಗ ಬೀಳುವೆ
ಪ್ರಾಣ ನಂದು ಖಾಲಿ ।
ಹೀಗೆಂದು ಕೃಷ್ಣನಳಿನಾಕ್ಷ ಮುಳುಗಿದ ಪಂಥದಲಿ ।
ಗುಢ ಗುಢನೆ ಸಿಟ್ಟಲಿ ಹಲ್ಲ ಕಡಿಯುತ ಯಾವರಿಗೆ
ತಡವಿಲ್ಲದಪ್ಪಣೆ ಕೊಟ್ಟರಲ್ಲೊ ।
ಬೆಂಕಿ ಬಾಣ ಬಿಡಲು ಸೈನ್ಯ ನಿಂತು ಕೋಪದಲ್ಲೆ ॥

ಆರ್ಭಟ ಮಾಡಿ ಚೀರುತಲಿ ಬಲರಾಮಗ ಗರ್ಜಿಸಿ
ಅಣ್ಣ ನಡಿಯೆಂದ ॥

೭

ಲೋಕನಾಥನೆ ಕೇಳೋ ವಾಕ್ಯಮಾಡೋದರೊಳಗ
ಆಕಾಶವಾಣಿ ಆದೀತೋ ॥ಪ॥

ಮಂದಮತಿ ಗಯನೆಂದು ಕೊಂದ ಹಾಕುವೆನೆಂದು
ಅಂದಾನೊ ಮುಕ್ಕುಂದ ।
ಬಂದೀತೊ ಕಾಲನಿಂದ ।
ಇನ್ನ ಉಳಿಯುವದಿಲ್ಲಯ್ಯಾ ಗಯಾನೇ ನಳಿನಾಕ್ಷ ಪಂಥದಲೀ
ಕಳಕಳಿಯನಾಗಿ ಮಾಡಿ ।
ನಿನಗ ತಿಳದಲ್ಲಿ ಹೋಗೋ ನೋಡಿ ॥
ಕೇಳೆಂಟ ದಿವಸದಲಿ ಉಳಿದರೊಂದು ವ್ಯಾಳೆದಲಿ ।
ಈ ಗಳಿಗಿ ತಡವಿಲ್ಲದಲಿ ಬೀಳುವನು ಅಗ್ನಿಯಲಿ ।
ನಿನಗ ಅಳಿವ ಬಂದಿತೋ ಗಯಾನೇ ಉಳಿವ ಯತ್ನ ಮಾಡೋ
ತಿಳಿಸೇನೊ ಪಾಪ ಅಂತ ।
ಜೀವ ಕಳಕೊಂಡಿ ನೋಡೋ ಮತ್ತ ॥
ಇಟ್ಟ ತಂದಿಯ ಆಣಿ ತೊಟ್ಟ ಕೋಪದ ವಾಣಿ
ಬಿಟ್ಟ ಜೀವ ದಯಸ ।
ತಪ್ಪಿತೋ ನಿನಗಾ ।
ಹೀಂಗ ಕೃಷ್ಣ ಮಾಡಿದ ಪಂಥ ಹೆಂಗ ಉಳದಿಯೋ ನೀನು
ಕಂಗೆಟ್ಟು ನಿಂತೆ ನಾನು ।
ಬದುಕು ಹಾಂಗ ನೋಡಿಕೊಳ್ಳು ನೀನು ।
ಆಕಾಶವಾಣಿ ಆದೀತೋ ಗಯಾ ಕೇಳಿ ಶೋಕದಲಿ
ಮುಳುಗಿ ಹೊರಳಿದನೋ ॥

೮

ಪೃಥ್ವಿಪತಿ ಜನ್ಮ ಜಯನೇ ಚಿತ್ತಿಟ್ಟ ಕೇಳಯ್ಯ
ಸತ್ತೆನೆಂದು ಗಯನು ಅಳುವುದನೇ ॥ಪ॥

ಶಿವ ಶಿವ ಹೆಂತಾ ದುರ್ಗಟಾ ಬಂತೊ ವ್ಯಾಳೆ ಕೆಟ್ಟಾ
ಆದೆನೋ ಹೆಂಗ ಪಾರಾ ॥

ಶ್ರೀ ಕೃಷ್ಣ ಪ್ರತ್ಯಕ್ಷ ದೇವರಾ ।
ಬಿಡುದಿಲ್ಲ ಹೊಡುವತಾನ ಟಾರಾ ।
ಯಾರಿಗೆ ಹೇಳಲಯ್ಯಾ ಏನ ಸಂತಾಪ ಸಂಕಟ ಗೋರಾ ।
ಸಂಕಟಗೋರಾ ।
ತ್ರಿಭುವನದೊಳಗ ಉಳಸವರು ಕಾಣವಲ್ಲರ‍್ಯಾರು ॥
ಅಯ್ಯೋ ಹರಹರಾ ।
ಅಪರಾಧ ಇಲ್ಲ ನನ್ನ ಕಡೆ । ಕೃಷ್ಣ ಪಂಥ ಮಾಡೆ ।
ಹೊಡಿಯೋದು ಕರಾರ ಕರಾರ ।
ದೊಡ್ಡ ಮರ ಏರಿ ಬೀಳಲ್ಯಾ ಬೀಳಲ್ಯಾ ।
ಉರುವಂತ ಕಿಚ್ಚ ಧುಮಕಲ್ಯಾ ಧುಮಕಲ್ಯಾ ।
ಅಯ್ಯೋ ನನ್ನ ದೈವ ಏನ ಬೇಡಿ ಬಂದೆನಿಂತಹ ಸಾವಾ ।
ಶ್ರೀ ಕೃಷ್ಣ ಮಾಡಿದಾನ ಹ್ಯಾಂವಾ ।
ಹರಣ ನೀಗುವೆನೆಂದು ಹರಿಯಾಕ ಮಾಡಿದಾರ ಡಾವಾ ।
ಮಾಡಿದಾರ ಡಾವ ॥
ಸತ್ತನೆಂದು ಗಯಾನು ಅಳುವುವನು ಲೋಕದಲ್ಲಿ
ಮತ್ತ ನನಗ್ಯಾರ ಗತಿ ಇಲ್ಲ ॥

೬

ಕಿಚ್ಚ ಹೊಟ್ಯಾಗ ಬಿದ್ದ ಹುಚ್ಚನಂಗ ನಿಂತಾನೋ
ಅಚ್ಯುತ ಏನ ಮಾಡಿದನು ॥ಪ॥

ಕುದರಿ ಜೊಲ್ಲಾ ಕರದೊಳಗ ಬಿತ್ತ ಚದುರಕೃಷ್ಣ ಮಾಡಿದ ಪಂಥಾ
ಅದರಿಂದ ಹಾಕಿದೋ ಹಿಂತಾ ವಾಣಿ ।
ನಾ ಅರಿಯನಯ್ಯಾ ಒಮ್ಮಿಂದೊಮ್ಮೆ ಆದಿತ ಆಕಾಶವಾಣಿ ।
ಹಲ್ಲ ಕಡದ ಹರಿಯಾಗ ತಲ್ಲಣಿಸಿ ಮಾಡಿದೋ ಪಂಥಾ
ಕೊಲ್ಲದಿದ್ದರ ನಮ್ಮ ತಂದಿ ಆಣಿ ।
ನಾ ಅರಿಯೆನಯ್ಯ ಆದೀತಯ್ಯಾ ಆಕಾಶವಾಣಿ ॥
ಕೇಳಿನ್ನ ಕಳವಳಗೊಂಡು ಹೇಳತಾನ ಇಂದ್ರಾಗ ಹೋಗಿ
ತಾಳಲಾರೆನಯ್ಯ ಕೃಷ್ಣನಗಿನ್ನ ದುಃಖ ಮಾಡುತ ಹೊಡಮರಳಿ
ಶ್ರೀ ಬ್ರಹ್ಮನಂತೇಕ ಬನ್ನಿ ॥

ಅಚ್ಯುತ ಏನ ಮಾಡಿದನೋ ನನ್ನ ಮ್ಯಾಲೆ
ಇಂಚಲ ಬಂಕನಾಥ ಮುನಿದಾನೋ ॥ಪ॥



೮

ಸೃಷ್ಟಿಕರ್ತನೆ ಇನ್ನ ಅಷ್ಟಾಂಗ ಸಹಿತಾಗಿ ಮುಟ್ಟಿ ಚರಣಕ್ಕೆ
ಎರಗುವೆನೂ ॥ಪ॥

ಶರಧಿಶಯನನ ಪುತ್ರ ಶ್ಯಾರದೀ ಅರಸನೆ
ಶ್ಯಾರದೀ ಅರಸನೇ
ವರದಿ ಕರುಣಾ ನಿಧಿ ನೀನೇ
ನರುವರ ಪಿತನೆ ಕೇಳೋ ನೀನೇ
ಬಾಯ ತೆರದ ಕೈ ಮುಗದ ನಾ ಭಯದಿಂದ ಹೇಳುವೆನೋ ।
ನ್ಯಾಯ ಬಂದಿತೋ ನ್ಯಾಯ ಬಂದಿತೋ ।
ನ್ಯಾಯ ಬಂದಿತು ಕಾಯೊ ನನ್ನ ಸೃಷ್ಟಿಕರ್ತ ನೀನೇ ।
ಆದಿ ಬ್ರಹ್ಮನೆ ಕೇಳೋ ವೇದಮುಖದ ಒಡಿಯನೇ ।
ಪಾದ ಹಿಡಿಯುವೆನೋ ಅಧಿಕಾರಾ ।
ಸಾಧಿಸಿ ಬಂದೆನಾ ನಿನ್ನ ಹತ್ತರ ॥
ಮುಟ್ಟಿ ಚರಣಕ್ಕೆ ಎರಗುವೆನೋ ಈ ಮಾತಾ ಗಟ್ಯಾಗಿ
ವಚನ ಕೊಡೋ ನನಗ ॥ಪ॥

೯

ಅಂಜಿ ಸುರಪತಿ ಅಂದ ಕಂಜನಾಭನ ಹೊಡೆತಕ್ಕ ರುಂಜಿ
ದಾಟುವರು ಯಾರಿಲ್ಲ ।
ಮಾರವೈರಿಯಾ ಮಾರಿಯ ನೋಡಿ ಈಗ ಚ್ಯಾರಚರಣ ಹಿಡಿದೆನೋ ।
ಮೀರಿ ಗೋರ ದುಃಖದಿ ಗರಗರದೆನೊ ।
ಯಾರ ಮುಂದ ಹೋಗಿ ಹೇಳಲಿನ್ನು ತಾಯಿ ಪಾರ್ವತೆಮ್ಮ
ಕೊಟ್ಟಳೋ ನನಗ ಧೈರ್ಯವನ್ನು ॥
ಮುನಿಯ ಕೇಳೋ ಎನ್ನ ಜನನಿ ಪಾರ್ವತಿ ನಿನ್ನ
ಮುಂದ ಹೋಗಿ ಹೇಳಂತಾನು
ಕಳಿವ್ಯಾನೋ ನನ್ನ ಮುನಿ ನಾ ಸಾವತೇನೋ ।
ನಿನ್ನ ಕಡೆ ವಿನಂತಿ ಬೇಡಿಕೊಳ್ಳತೇನೋ ।
ಏನ ಹೇಳಿರಯ್ಯಾ ಇದಕ ಯುಕ್ತಿಯನ್ನು
ಕಾಣ ಕಾಣ ದಿನಮಾನ ಸನೇಕ ಬಂತ ಇನ್ನು ॥

ರುಂಜಿ ದಾಟುವರು ಯಾರಿಲ್ಲ ನನ ಮ್ಯಾಲ
ಕುಂಜರ ವೈರಿ ಮುನಿದಾನೋ ॥

೭

ಆಗುದಿಲ್ಲ ನನ್ನಿಂದ ಹೋಗ ಅಂದಾನೋ ಬ್ರಹ್ಮ ಸಾಗಿದನು
ಆಗ ಕೈಲಾಸಕ ॥ಪ॥

ಆಗ ದಯ್ಯಾ ಗಯಾನೇ ಹೋಗ ಬೇಕಾದಲ್ಲೆ ನೀ
ಸಾಗಿ ನಡದ ಆಗ ಇಂದ್ರ ಒಳಿಯಕ್ಕ।
ಬ್ಯಾಗದಿಂದ ಬಾಗಿಲ ಕದಾ ಮಾಡಿದಾನ ರಿಕ್ಕ।
ಗಯಾ ಅಂತಾನೋ ಹೋಗಲೆಲ್ಲಿ ತಪ್ಪೇತಿ ದಿಕ್ಕ।
ಅಷ್ಟದಿಕ್ಪಾಲಕರ ಹಂತೇಲಿ ಹೋಗಿ ಕೇಳತಾನ ಭಾಳ ಭಾಳ
ಮಾಡಿ ದುಃಖ।
ಅಷ್ಟದಿಕ್ಪಾಲಕರೆಲ್ಲಾ ಬಿಟ್ಟ ಓಡಿ ಹೋದರೆಲ್ಲಾ ಕೃಷ್ಣ ಅಂದ ಕ್ಷಣಕ್ಕ।
ಗಯಾ ನೋಡಿ ಕೆಟ್ಟೆನೆಂದು ಮಾಡತಾನ ಶೋಕ।
ಅಕಟಕಟ ಏನ ಗತಿ ಬಂತೋ ನನ್ನ ಜೀವಕ್ಕ
ಯಾರು ಈ ಯಾಳೇಕ ಧೀರ ಮಾಡಿ ಬಂದೆ ಬ್ರಹ್ಮ ದೇವರ್ಹಂತೇಕ।
ಸಾಗಿದನೋ ಆಗ ಕೈಲಾಸಕ ಕೇಳಲಿಲ್ಲಾ
ನಾಗಶಯನನು ಹೀಗಂದಾ ॥

೧೨

ಇಷ್ಟ್ಯಾಕ ಸಂತಾಪ ಕೊಟ್ಟನೋ ಗಯಾ ನಿನಗ
ಅಷ್ಟ ಐಶ್ವರ್ಯ ಬೇಕೇನೋ ॥ಪ॥

ನೀ ಏನ ಬೇಡತಿ ಬೇಡ ನೀ ಏನ ಬೇಡತಿ ಬೇಡ
ಕೊಡತೇನ ಅಳಬ್ಯಾಡ ಗಯಾ ಕೇಳೋ ಬಾಲಕಾ।
ಕೊಡವುದಕ ನಾನು ಮಾಲೀಕ।
ನೀ ಬೇಡಿದಷ್ಟ ರೂಪಾಯಿ ರೊಕ್ಕ
ಶ್ರೀ ಸಂಪತ್ತ ಕೊಡುವೆನು ಅದಕ ಬಂದೆ ನನ ತನಕಾ।
ಬಂದೆ ನನ ತನಕಾ।
ಯಾಕ ಮಾರಿ ಮಾಡಿದಿ ಸಣ್ಣಾ ಅತ್ತಿತ್ತ ನಿನ್ನ ಕಣ್ಣಾ
ಬಳಲಿದಾವ ಸುತ ಕೇಳೊ ಸುತಾ।
ಬಾಳ ಸೋಸಿ ಬಂದಿ ಬಡತನಾ ಅದಕ ನಾ ನಿನ್ನ ಮಾಡುವೆನೋ
ಹಿತ ಕೇಳೋ ಹಿತಾ।
ಬಿಟ್ಟ ಬಿಡೋ ನಿನ್ನ ಸಂಶಾ ಹೊತ್ತುಕೊಂಡ ದ್ರವ್ಯವಾ ದ್ರವ್ಯವಾ ॥
ಆನಿ ಕುದರಿ ದಂಡ ಮಾರ್ಬಲಾ ಕರಕೊಂಡ ಹಿಂಬಾಲಾ।
ಆಗ ತಡವಿಲ್ಲ ಸಂತೋಷಾಗಿ ಹೋಗೋ ಇನ್ನ ಮ್ಯಾಲಾ।
ನಿನ್ನ ಭಾವಕ ಮೆಚ್ಚಿದೇನೋ ಬಾಲಾ।
ಹೀಂಗಂದ ಬ್ರಹ್ಮ ದೇವರಿಗೆ ಗಯಾ ಮಾತನಾಡುವಲ್ಲೋ
ಮಾತನಾಡವಲ್ಲೋ ॥
ಅಷ್ಟು ಐಶ್ವರ್ಯ ಬೇಕೇನೋ ನನ ಮುಂದ
ತಟ್ಟನೇ ಒಡೆದ ಹೇಳೋ ಕಂದಾ ॥



೧೩

ನಾ ಒಂದ ಹೇಳಿದರ ನೀ ಒಂದ ಹೇಳುವಿರಿ
ಒಂದಕ್ಕ ಒಂದ ಸರಿಯಿಲ್ಲ ॥ಪ॥

'ತಾ ಬದುಕಿದರ ಒಂದ ಬದಕ' ಶಾಸ್ತ್ರ ಅದಕ ಮಾಡಿ
ಇಟ್ಟಾರೋ ಸುಡ ನಿನ್ನ ನಿನ್ನ ಸಂಪತ್ತ ಸಡಗರ ॥
ಸತ್ತಮ್ಯಾಲ ಏನ ನೋಡುವರ।
ಮುಪ್ಪಿನ ಹಣ್ಣ ಹಾಗಲ ಹಣ್ಣ ಆದವಗ ಹೆಣ್ಣ
ಮರಸೋದು ಭಾಳ ಗೋರಾ ಭಾಳ ಗೋರಾ ॥
ಬೆಳಿ ಒಳಗಿ ಹೋದ ಮ್ಯಾಲ ಮಳಿ ಆದರೇನು ತಿಳಿ।
ಸುಳ್ಳ ಫಲವಿಲ್ಲಾ ಫಲವಿಲ್ಲಾ ॥
ಕುರುಡನ ಕೈಯಾಗ ಕನ್ನಡಿ ಕೊಟ್ಟಾಂಗ ನಿಮ್ಮ ನುಡಿ ಆಡತೇರಿ
ಅಲ್ಲಾ ಕೇಳದಲ್ಲಾ ॥
ನಮ ನಿಮಗ ಆಗತೇತಿ ಪೇರಾ। ಕೇಳೋ ಪೇರಾ
ಜೀವ ಕಾಯೋ ಬ್ರಹ್ಮ ದೇವರಾ। ದೇವರಾ।
ನಾ ಕುದುರಿ ಏರಿ ಹೋಗುವಾಗ ಕೃಷ್ಣನ ಕೈಯಾಗ
ಬಿತ್ತ ಎಂಜಲಾ।
ಶಪ್ತ ಮಾಡಿದ ಕೃಷ್ಣ ಗೋಪಾಲಾ।
ಎಂಟ ದಿವಸ ದೊಳಗ ನನ್ನ ಪ್ರಾಣ ಹೋಗೋದು ಕರಾರಾ।
ಹೋಗೋದು ಕರಾರಾ ॥
ಒಂದಕ್ಕ ಒಂದ ಸರಿಯಿಲ್ಲೇ ಬ್ರಹ್ಮದೇವರ।
ತಂದಿಯನ್ನ ಪ್ರಾಣ ಉಳುವಯ್ಯಾ ॥

೧೪

ಚತುರಮುಖ ತಾ ಕೇಳಿ ಅತಿ ಬ್ಯಾಗ ಅಂತಾನೋ
ಪಿತನಿಗೆ ನನಗ ಕದನವೋ ॥ಪ॥

ಆಡ್ಲಿಯಂತೆ ಕುದ್ದಕೊಂತ ಕೊಡ್ಲಿಯೊಳಗ ಕಟಿಗಿ ಹೊಕ್ಕ
ಸಡ್ಲ ಬಿದ್ದಂಗ ಆತಿ ಅದರ ರೀತಿ।
ಮಾಡಂತಿಯೋ ತಂದಿ ಕೂಡ ಕದನ ಬೆಳೆಸೋ ರೀತಿ।
ಹೋಗ ಗಯಾ ಆಗದಯ್ಯಾ ಕೇಳೋ ಮಂದಮತಿ।
ಸುಳ್ಳ ಬಂದ ಇಲ್ಲೆ ಯಾಕ ನೀ ನಿಂತಿ।
ಹೋಗೋ ಹೋಗೋ ಯಾರ ಕೈಯಿಂದ ಏನ ಆಗೋದೈತಿ।
ಮಂಕ ಹತ್ತೇತೇನೋ ಪಂಕ ಹಾರಿ ತಿರಗತಿ।
ಬಂಕಾನಾಥಗ ಹೋಗಿ ಕೇಳೋ ಈ ಕತಿ।
ಜಲ್ದಿ ಮಾಡೋ ಶಂಕರ ಶಿವ ಶಿವ ಸ್ತುತಿ।

ನನ್ನ ಮಾತ ಸಂಕವಿಲ್ಲದಂಗಾತಿ ।
ನುಗಿಸಿ ಕೊಟ್ಟ ಬ್ರಹ್ಮದೇವರಿಗೆ ಚಿಂತಿ ।
ಹವ್ವಾರಿ ಹೋದಾನೋ ಕೈಲಾಸಕ ಹತ್ತಿ ॥
ಪಿತನಿಗೆ ನನಗ ಕದನ ಬೆಳೆಸೋದಕಾಗಿ
ಮತಿಗೇಡಿ ಬಂದಿ ಎಲ್ಲಿಂದಾ ॥

೬

ಕಷ್ಟ ಬಂದಿತಾ ಇಂದ್ರಾ ಎಷ್ಟ ಹೇಳಲಿ ನಿನಗ ।
ಕೊಟ್ಟ ಎನ್ನ ಪ್ರಾಣ ರಕ್ಷಿಸರಿ ॥
ಉಳಸಯ್ಯಾ ಪ್ರಾಣವು ಬಂದು ಗಳಸಯ್ಯ ಪುಣ್ಯವು ಮುಂದ
ಅಳತಾನ ಭೂಮಿಗೆ ಬಿದ್ದು ಗಯನು ।
ಇದರ ಹೊರ್ತ ನನಗ ಹಳಹಳಿ ಏನು ಇಲ್ಲ ಅಂತಾನು ॥
ಹಲ್ಲ ಕಡಿದ ಆಗ ಹರಿಯು ತಲ್ಲಣಿಸಿ ಮಾಡಿದ ಪಂಥ
ಕೊಲ್ಲದಿದ್ದರ ನಮ್ಮ ತಂದಿ ಆಣಿ ।
ಎಂಟ ದಿವಸ ಮೀರಿದರ ಹೋಗಿ ಬೀಳುವೆನು ಅಗ್ನಿ ।
ಕೇಳಿನ್ನ ಕಳವಳಗೊಂಡು ಹೇಳತಾನ ಇಂದ್ರಗ ಹೋಗಿ ।
ತಾಳಲಾರೆನಯ್ಯಾ ಶ್ರೀ ಕೃಷ್ಣನಗಿನ್ನ ।
ದುಃಖ ಮಾಡುತ ಹೊಡಮರಳಿ ಶ್ರೀ ಬ್ರಹ್ಮನ ಹಂತೇಕ ಬನ್ನಿ ॥
ಕೊಟ್ಟವನಾ ಪ್ರಾಣ ಉಳಸಯ್ಯಾ ಶ್ರೀ ಹರಿಯು
ಆಟ ದಿವಸದಲಿ ಹೊಡಿಯುವವನು

೭

ಆದಿ ಶಕ್ತಿಯು ಶಿವನ ಪಾದ ಹಿಡದ ಅಂತಾಳೋ
ಸಾಧು ಸಂತರಿಗೆ ಆಗಿ ಪರಿಪಾಲಾ ॥ಪ॥

ಮಾಯಾದ ಪರಮೇಶ್ವರಾ ಬಾಯಾರಿ ನಿಂತಾನೊ ಗಯಾ
ತಾಯಿ ಪಾರ್ವತೆಮ್ಮಾ ಕೊಟ್ಟಳೋ ನನಗ ಧೈರ್ಯವನ್ನು ।
ನನ್ನ ಕಾಯಲಿಲ್ಲ ಜಗತ್ ಕರ್ತ ಪರಶಿವನು ।
ಕೇಳ ಸಾಯದ ವ್ಯಕ್ತಿ ಒಂದ ಹೇಳುವೆನು
ನಾರದಲ್ಲಿಗಿ ಹೋಗಿ ಸಾರಯ್ಯ ದುಃಖವ ಆತ
ತೋರಿ ಶ್ಯಾನೋ ಏನಾದರೂ ಯುಕ್ತಿಯನ್ನು ।
ಸುಳ್ಳ ಮಾರಿ ನೋಡಕೊಂತ ನಿಂತರೇನು ತ್ರಿಲೋಕ
ಸಂಚಾರಿ ತ್ರಿಭುವನದೊಳಗ ನಾರದರ ಯುಕ್ತಿವಾನ ॥
ನೀ ಹೋಗಿ ಬೀಳೋ ಅವನ ಬೆನ್ನಾ ।
ಹೋಗೋ ಲಗು ಋಷಿನ್ನ ಹುಡಕ್ಯಾಡಿ ।
ತಡ ಆಗತೈತಿ ನಡಿ ನಡಿ । ಭಾಳ ಹೇಳೋ ದುಃಖ ಮಾಡಿ ಮಾಡಿ ।



ದಾಕ್ಷಾಯಿಣಿ ಪಾದಕ ಬಿದ್ದ ಆ ಕ್ಷಣಾ ಕೈಲಾಸ ಇಳದ
ತಕ್ಷಕಭರಣ ಕೈ ಬಿಟ್ಟಾನೋ ।
ಆ ಪಕ್ಷಿ ವಾಹನಾ ನನ್ನ ಹೊಡಿಯುವನೋ
ಈ ಕ್ಷಣ ನಾರದ ನನಗ ದೊರದಾನೋ ॥
ಸಾಧು ಸಂತರಿಗೆ ಪರಿಪಾಲಿಸೋ ಶಂಕರನೇ
ಕಾದು ಸಲುವೈ ಕಡಿತನಕಾ ॥

೮

ದುಷ್ಟ ಪಾರ್ವತಿ ಎಷ್ಟ ಹೇಳಲಿ ನಿನಗ ।
ಬಿಟ್ಟವನಲ್ಲಾ ಶ್ರೀ ಕೃಷ್ಣ ಕೇಳಲೇ ಪಾರ್ವತಿ ನಿನಗ ॥

ತಿಳಿಯಾದ ಮುಂದಿನ ಮಾತ ಇಳೆ ಭಾರ ಕೃಷ್ಣ ಇಳುವವನು ।
ಕಲಹ ನಾವು ತಿಳಿಯದೆ ಅವನ ।
ಅವನ ಕೂಡ ವರ್ಮವೇನು ।
ಅಂಬಿ ಕೇಳ ಎನ್ನ ಮಾತಾ ಗಂಭೀರ ಕೃಷ್ಣನ ಕೂಡ
ಹುಂಬತನದ ಲಡಾಯಿ ಮಾಡುವರೇನ ।
ಹೀಂಗಂತ ಶಿವನು ಶಂಭೋವಿಗೆ ಉತ್ತರ ಕೊಟ್ಟಾನ ತಾನು ।
ರಕ್ಷಣಿಕೆ ಅಧಿಕಾರ ಪಕ್ಷಿವಾಹನ ಶ್ರೀಹರಿ
ಕುಷಿಯೊಳು ತ್ರಿಜಗವನು ಇಟ್ಟಕೊಂಡು
ಸಾಕ್ಷಾತ್ ಸಾಕಿ ಸಲಹುವನು ।
ಬಿಟ್ಟವನಲ್ಲ ಶ್ರೀ ಕೃಷ್ಣ ಹೀಂಗೆಂದು ।
ಸೃಷ್ಟಿ ಬಸವೇಶನ್ನ ನೆನೆದಾನೋ ॥

೯

ಪಾಪ ನನ ಕಡೆ ಇಲ್ಲ ತಪ್ಪ ನಂದಾಗಿಲ್ಲ
ಗೋಪಿ ಕೃಷ್ಣ ಮುನಿದಾನೋ ।
ಪನ್ನಗಾಸಿ ನಾ ಇನ್ನೂ ತಿಳಿಯುತ
ಶ್ರೀಹರಿ ಹರಿಯಾ ಅನ್ನದಲಿ ಶಪ್ತ ಮಾಡಿದನೋ
ನನ್ನ ಮ್ಯಾಲ ಶ್ರೀಹರಿ ಹರಿಯೇ ಯಾರಿಗೆ ಹೇಳಿದರೇನು ।
ಹರಣ ಕಾಯ್ದರಯ್ಯಾ ಶ್ರೀ ಹರಿ ಶ್ರೀ ಹರಿಯಾ ॥
ಮೀರಿ ಬಂತೆನ್ನ ಉಳವಯ್ಯಾ ಶ್ರೀ ಹರಿ ಶ್ರೀ ಹರಿಯಾ
ಧರಿ ಭಾರ ಇಳಿಸುವ ಹರಿಗೇ ನಾ ಈಡಲ್ಲೇ ಶ್ರೀ ಹರಿ ಹರಿಗೆ ।
ಚಾರು ಬಂಕನಾಥ ಮುನಿದಾನೋ ಶ್ರೀ ಹರಿ ಶ್ರೀ ಹರಿರಾಯಾ ॥
ಗೋಪಾಲಕೃಷ್ಣ ಮುನಿದಾನೋ ನನ್ನ ಪ್ರಾಣ
ಕೋಪದಲಿ ಕೊಂದಬಿಡತಾನೋ

## ೨೦

ತುಟ್ಟ ತುದಿಯಿಂದ ಕೈಯ ಬಿಟ್ಟಂಗ ಮಾಡಿದನೋ
ಗಟ್ಟಿ ಮಾತ ಆಗೋದಿಲ್ಲ ಅಂದ ॥ಪ॥

ಹರ ಶರ ಶಂಕರ ಪಾಪ ಪರಿಹಾರಾ ಮಾಡಾವ ದೂರ ಶಿವ
ಹರಶೂರ ಉಳಿಸಿದಿ ಜಲ್ಮಾ ॥
ಮಾರ ಸಂಹರ ಸೂರ್ಯನ ಧರಿಸಿ ಸೋಮಾ ॥
ಸಾವಿರ ಹೆಡಿ ಸರ್ಪಿಗೆ ನಿಲಕಲಿಲ್ಲ ನಿಮ್ಮ ನಾಮ
ಶಾಂಭವಿಕಾಂತನೇ ನಿನ್ನ ನಂಬಿದೇನ ಕಾಯ ಕಾಯೋ ।
ಹಂಬಲಿಟ್ಟ ಬಂದೇವ ಮಾಡೋ ಕ್ಷಮಾ ॥
ನನಗ ಇಂಬ ಕೊಡಬೇಕ್ರಿ ಸ್ವಾಮಿ ಪರಮಾತ್ಮಾ
ವನಗೌರಿ ರಮಣ ಮುರಗೇ ನಾಮ ।
ತ್ವರದಿಂದ ಎನಗ ಪ್ರಾಣ ದಾನ ಕೊಡು ಕೇಳ
ಉರಗಭೂಷಣ ನನ್ನ ಕೇಡು ।
ಧನ್ಯ ಧನ್ಯ ಶ್ರೀ ಪಾರ್ವತಿಪತಿ ಆಗಿದಿ
ಅನ್ಯ ಇಲ್ಲ ನನ್ನ ಹಂತೆ ।
ಹೊಟ್ಟಿಯೊಳಗಿನ ಕೂಸಿಗೆ ಆಹಾರ
ಕೊಟ್ಟ ಸಂರಕ್ಷಣ ಮಾಡೋ ।
ಕೃಷ್ಣ ಶಂಕರ ಕೇಳೋ ನನ್ನ ಹೊಡೊ ನೇಮಾ ।
ಎಂಟ ದಿವಸದೊಳಗ ಮಾಡಿದಾನೋ ಶಾಮಾ ।
ನನ್ನ ಸಂಕಟ ಪರಿಹರಿಸಯ್ಯಾ ರಾಮರಾಮಾ ॥
ಗಟ್ಟಿ ಮಾತ ಆಗೂದುಲ್ಲಂತ ಗಯಾ ಕೇಳಿ ।
ಸೃಷ್ಟಿಗೆ ಹೊರಳಿ ಅಳತಾನಾ ॥

## ೨೧

ಋಷಿಯ ನಾರದ ನನಗ ವಶವಾಗೋದು ಹೆಂಗ ಇನ್ನ
ರಸಕಸಿಯಲ್ಲಿದ್ದಾನು ॥ಪ॥

ಎಲ್ಲಿ ಇದ್ದಾನು ಬಲ್ಲ ನಾರದರಲ್ಲಿ ಹೋಗಿ ಸಂಕಷ್ಟಾ ।
ನಾ ಹೇಳಬೇಕ ದುರ್ಘಟಾ ।
ಇಳಿದಾನೋ ಕೈಲಾಸ ಪೂರಾ ಬಿಟ್ಟಾ ।
ಹಕ್ಕಿ ಹಲಬಿದಂತಾ ಆ ಭಾಳ ಸಂಕಷ್ಟಾ ।
ತಿರುಗುತ್ತ ದೇಶ ಮರಗುತ್ತ ಬಂದಾನಾ
ವರಮುನಿ ನಾರದ ಬಹಳ ಪೈಟಾ ।
ಬಂದ ಸ್ವರ್ಗದ ಬಾಗಿಲ ಮುಕ್ಕಟ್ಟಾ ।
ಗಯಾಮುನಿ ನೋಡಿ ಚಿಂತಿ ಬಿಟ್ಟಾ ।



ಬಡವಗ ಭಾಗ್ಯದ ಕೊಡವು ದೊರೆದಂತೆ
ಕುರುಡಗ ನೇತ್ರ ಬಂದಂಗಾತಿ ಸಂತುಷ್ಟಾ ।
ಹುಡುಕು ಔಷದ ಕಾಲತೊಡರಿದಂತೆ ।
ನೋಡಿ ಗಯಾಗೆ ಆದೀತ ಶಾಂತಿ ।
ತೇಜಿ ನಡಿಯದವಗ ದೊರೆದಂತೆ ।
ಬಂಜಿ ಅವಳಿ ಜವಳಿ ಹಡೆದಂತೆ ।
ಹಂಬಲ ಇಟ್ಟಾಂಗ ತುಂಬಿದ ನಾರದ ।
ತಂಬೂರಿ ಹಿಡಕೊಂಡ ವಾರಿ ನೋಟ ನೋಡಿ
ಸಂಭ್ರಮದಿ ನಗತಾನೋ ಕದನದಾಟಾ ಬೆಳೆಸೋ
ನೆಂಬುತ ಮನದೊಳು ಹಾಕಿ ಗಂಟಾ ।
ದಿಕ್ಕ ತಪ್ಪಿ ದುಃಖ ಮಾಡುತ ಹಕ್ಕಿ ಹಲಬಿದಂತ ಆಟಾ ।
ಭಾಳ ಸಂಕಷ್ಟಾ ।
ರಸಕಸಿಯಲ್ಲಿಂದ ಆ ಗಯನು ಬರುವಾಗ
ಹಸುವಾಗಿ ಭೇಟಿ ಆದಿತೋ ॥

## ೨೨

ಹತ್ತು ಅವತಾರ ಹರಿಯು ಉತ್ಕೃಷ್ಟ ತಾಳಿದಾನೋ
ಪೃಥ್ವಿಯ ಭಾರ ಇಳಿಸಿದನು ॥ಪ॥

ಹೆಂತ ಹೆಂತ ದೈತ್ಯರನ್ನೆಲ್ಲಾ ಕಂತುಪಿತಾ ಸಂಹರಿಸಿದಾ
ಪಂಥ ಮಾಡಿದ ಮ್ಯಾಲ ಬಿಡಾವಲ್ಲಾ ।
ಕೇಳ ಗಯಾ ಸ್ವಂತ ನನ್ನ ಕಡಿಲಿಂದ ಆಗೋದಿಲ್ಲಾ ॥
ಆಪತ್ತ ಬಂದಾಗ ನಮಗ ಗೋಪಾಲನು ಕುಮ್ಮಕ್ಕತಿ
ತ್ರಿಪುರ ಸಂಹಾರ ಪ್ರಭು ಅಲ್ಲಾ ।
ವಕ್ಕಟ್ಟ ಬಿಟ್ಟು ವಿಪರೀತ ಆದೀತ ಬಂತೊ ಕಾಲಾ ॥
ಸಾವಕಾಶದಿಂದಲಿ ರಾಜ ಲೋಪವಾಗಿ ಅಡವಿ ಸೇರಿ
ಶ್ರೀಪತಿ ಕಾಯಲಿಲ್ಲಾ ।
ವಿಧಿ ಉಳಿದ ಹರಹರಾ ವಿಧಿಗಿ ಈ ಪರಿ ಮಾಡಿದೋ ಶಿವಶಿವ ಅಂದು ॥
ಪೃಥ್ವಿಯ ಭಾರ ಇಳವಿದನೋ ಏನೋ ಗಯನೆ
ಕುತ್ತಿಗೆ ಬಂತ ಗತಿಯೇನು ।

## ೨೩

ಅಂಜಿ ಸುರಪತಿ ಅಂದಾ ಕಂಜನಾಭವ ಹೊಡೆತಕ್ಕ
ರುಂಜಿ ದಾಟುವರು ಯಾರಿಲ್ಲಾ ।ಪ॥

ಯಾರಿಗೆ ಹೇಳಲಿ ಗೋರ ಪರಿಹಾರ ಮಾಡುವವರು ಇಲ್ಲ ಇನ್ನೂ ।
ಮರಿ ಮರಿಗೆ ಅಲ್ಲೇ ಹೊರಳ್ಯಾನೋ ।

ಗಯಾ ಕರಗಿ ನೀರ ಸುರಿಸ್ಯಾನೋ ।
ಬಂದ ಇಂದ್ರಗೆ ವಂದನೆ ಮಾಡಿದ ।
ತಂದಿ ಸುರಪತಿ ಕೇಳಿನ್ನು ಬಹಳ ನೊಂದೇನೋ
ಸುರರು ಅಸುರರು ಮುರಾರಿಗೀಡಲ್ಲೋ
ಮುರಾರಿ ನನಗ ಒಲಿದಾನೊ ಯಾರ ಮಾಡುದೇನೋ ॥
ಅಮರಾವತಿಗೆ ಗಮನ ಮಾಡಿದ
ಸಮರ ಮಾಡುವೆನೆಲ್ಲೋ ನಾನು ।
ಅಗದಿ ಸುಮಾರ ಕಂಡೇನ ಗತಿ ಏನು
ನನ್ನ ದುಮಾರ ಮಾಡಿ ಬಿಡುತಾನೋ
ಬಂದ ಇಂದ್ರಗ ವಂದನೆ ಮಾಡಿದ
ತಂದೆ ಸುರಪತಿ ಕೇಳಿನ್ನ ಭಾಳ ನೊಂದೇನೋ ॥
ಸಭಾ ಮಿಕ್ಕಿದ ಇಂದ್ರನೇ ನೋಡೋ ।
ನನ್ನ ದುಃಖದ ಪರಿಹಾರ ಮಾಡೋ
ತೆಕ್ಕಿ ಹಾದಾನೋ ರಿಕ್ಕಾಗಿ ದವಡು ।
ಕಂಟಕ ಬಂದಿತ ಮುಖ್ಯ ಅವಗಾಡೋ ।
ಸುರಪುರದೊಡೆಯಗೆ ಉರಪ ಬಿದ್ದೇತ
ತಾರೀಪ ಆದಿತು ಹೇಳಲಿನ್ನಾ ।
ಅವನ ದರ್ಪಿಗ್ಯಾರ ಎದರಿನ್ನೂ
ಪಂಥ ಸೈರಿಸಿ ಎನ್ನ ಮಾಡ್ಯಾನೋ ।
ಸುರರು ಅಸುರರು ಮುರಾರಿಗೀಡಲ್ಲಾ
ಮುರಾರಿ ಮುನಿದಾನೋ ಯಾರ ಮಾಡುವದೇನೋ ॥
ರುಂಜಿ ದಾಟವರ ಯಾರಿಲ್ಲ ನನ ಮ್ಯಾಲ
ಕುಂಜರವೈರಿ ಮುನಿದಾನೋ ॥

೪

ಧಿಟ್ಟ ನಾರದನನ್ನು ನೆಟ್ಟಾಗ ನೋಡಿದನೋ
ತಟ್ಟನೇ ಪಾದಕೆರಗಿದನೋ ।
ಬ್ರಹ್ಮಿ ಬಡದೀತಯ್ಯಾ ನನಗ ಬ್ರಹ್ಮಪುತ್ರ ಕೇಳೋ ಇದ ।
ಒಮ್ಮೆ ಉಳವಿಕೊಳ್ಳೋ ದಯಮಾಡಿ ।
ಶ್ರೀ ಕೃಷ್ಣ ದೇವರ ಹಮ್ಮ ಮುರಿಯವರಿಲ್ಲ ಯಾವ ಕಡಿ ।
ಉತ್ತಮ ತೇಜವನೇರಿ ಸತ್ತರ ಲೋಕಕ್ಕ ನಾನು
ಮತ್ತ ಹೋಗತಿನ್ನೆ ಎತ್ತಾರ ಮಾಡಿ।
ನನ್ನ ಕುದರಿ ಬಾಯಾನ ಹತ್ತರ ಜೊಲ್ಲಾ ಬಿದ್ದಿತ ಕೃಷ್ಣನ ಕಡೆ ॥
ಜೊಲ್ಲ ಸಲ್ಲಿಸಿದವನ ಈಗ ನಿಲ್ಲದೆ ಕೊಲ್ಲುವೆನೆಂದು



ಬಲ್ಲಂಗ ಮಾಡಿದೋ ಶಪ್ತವನ್ನು ॥
ಅವನ ಶಪ್ತಕ ತಲ್ಲಣಿಸುವೆನಯ್ಯ ದೇವಾ ನಾನು ॥

ತಟ್ಟನೇ ಪಾದಕ್ಕೆರಗಿದನೋ ಬಾಗೋಡಿ ಶ್ರೇಷ್ಠ
ಬಸವೇಶಾ ಮುನಿದಾನೋ ॥

೫

ಮುನಿನಾಥಾ ಕೇಳಯ್ಯಾ ಹನಿ ಜೊಲ್ಲ ಬಿದ್ದುದಕ
ಘನಕೋಪಾ ತಾಳಿ ಶ್ರೀ ಕೃಷ್ಣ ॥ಪ॥
ಕುದರಿ ಜೊಲ್ಲಾ ಕರದೊಳು ಬಿತ್ತು ಚದುರ ಕೃಷ್ಣ ಮಾಡಿದ ಪಂಥಾ
ಅದರಿಂದ ಹಾಕಿದೊ ಹಿಂತಾವಾಣಿ
ನಾ ಅರಿಯನಯ್ಯಾ ಒಮ್ಮಿಂದೊಮ್ಮೆಲೆ ಆದೀತ ಆಕಾಶವಾಣಿ ॥
ಹಲ್ಲ ಕಡಿದ ಹರಿ ಆಗ ತಲ್ಲಣಿಸಿ ಮಾಡಿದೋ ಪಂಥಾ
ಕೊಲ್ಲದಿದ್ದರ ನಮ್ಮ ತಂದಿ ಆಣಿ ।
ಎಂಟ ದಿವಸ ಮೀರಿದರ ಹೋಗಿ ಬೀಳುವನು ಅಗ್ನಿ ॥
ಕೇಳಿನ್ನ ಕಳವಳಗೊಂಡು ಹೇಳತಾನ ಇಂದ್ರಗ ಹೋಗಿ
ತಾಳಲಾರೆನಯ್ಯ ಕೃಷ್ಣನಗಿನ್ನ
ದುಃಖ ಮಾಡುತ ಹೊಡಮರಳಿ ಬ್ರಹ್ಮನಂತೇಕ ಬನ್ನಿ ॥
ಘನಕೋಪ ತಾಳಿ ಶ್ರೀಕೃಷ್ಣ ಕೊಲ್ಲುವನು
ವನದೇಶ ಬಂತೋ ವರಮುನಿಯೇ ॥

೬

ಆಗುದಿಲ್ಲ ನನ್ನಿಂದ ಹೋಗೋ ಅಂದಾನೋ ಬ್ರಹ್ಮ
ಸಾಗಿದನೋ ಆಗ ಕೈಲಾಸಕ ॥ಪ॥

ಮಾರವೈರಿಯಾ ಮಾರಿ ನೋಡಿ ಈಗ ಚಾರು ಚರಣ ಹಿಡಿದೆನು ।
ಮೀರಿ ಗೋರ ದುಃಖದಿ ಗರಗರದೆನೋ ।
ವರ ಪರಮೇಶ್ವರ ಹೊರಗ್ಹಾಕ್ಯಾನೋ ಯಾರ ಮುಂದ ಹೋಗಿ
ಹೇಳಲಿನ್ನೂ ॥
ತಾಯಿ ಪಾರ್ವತೆಮ್ಮ ಕೊಟ್ಲು ನನಗ ಧೈರ್ಯವನ್ನು ॥
ಮುನಿಯ ಕೇಳೋ ಎನ್ನ ಜನನಿ ಪಾರ್ವತಿ
ನಿನ್ನ ಮುಂದ ಹೋಗಿ ಹೇಳಂತ ತಾನು ।
ಕಳಿವ್ಯಾಳೋ ಘನಮುನಿ ನಾ ಸಾವತೇನೋ ।
ನಿನ್ನ ಕಡಿ ವಿನಂತಿ ಬೇಡಿಕೋತೇನು ।
ಏನ ಹೇಳಂತ ಯುಕ್ತಿಯನ್ನು ಕಾಣ ಕಾಣ ದಿನಮಾನ
ಸನೇಕ ಬಂತಿನ್ನು ॥

ಸಾಗಿದನೋ ಆಗ ಕೈಲಾಸಕ ಕೇಳಲಿಲ್ಲಾ
ನಾಗಶ್ಯೆನನು ನುಗಿಸಿದನೋ ॥ಪ॥

೭

ಕೊಟ್ಟ ವಚನಕ ಗಟ್ಟಿ ಶಕ್ತಿ ಅವರಲ್ಲಿ ಉಂಟು
ಯುಕ್ತಿ ನಾ ನಿನಗ ಹೇಳುವೆನು ।
ದುರ್ಯೋಧನನ ಕೂಡ ಆಡಿ ಸರ್ವ ಐಶ್ವರ್ಯೆಲ್ಲಾ ಸೋತ
ಪೂರ ಬಿಟ್ಟ ವನದೇಶಾಗಿ ।
ಅವರೀಗ ಇರುವದು ಕಾಮಿಕವನದೊಳು ಹೋಗಿ ॥
ಸರಿಯಾರಿಲ್ಲ ಭೀಮ ಪಾರ್ಥಗ ಧರಿಮ್ಯಾಲ ವಚನಕ ಗಟ್ಟಿ
ಸಾರತಾವ್ರೋ ಶೃತಿ ಪ್ರಸಿದ್ಧಾಗಿ ।
ಅರ್ಜುನನ ಹೊರತ ಇದರ ಆದವರಿಲ್ಲ ಭಾಳವಾಗಿ ॥
ಸ್ವಂತ ಯುದ್ಧ ಮಾಡತಾರೋ ಕುಂತೀಪುತ್ರರೈವರು
ಅವರಂತವರ್ಯಾರಿಲ್ಲೊ ಯುದ್ಧದ ಬಗಿ ।
ತಿಳದಾವ ಪಾರ್ಥ ಪಂಥಾ ಬಿಡಾವಲ್ಲೊ ಎಂದೆಂದಿಗೂ ।
ಯುಕ್ತಿ ನಾ ನಿನಗ ಹೇಳುವೆನು ಅವರವರ
ರಕ್ತ ಅಲ್ಲಲ್ಲಿ ತೋರುವದು ॥

೮

ಒಡದ ಹೇಳಲಿ ಬ್ಯಾಡ ಕೊಡುವ ತನಕ ವಚನವನು
ಪೊಡವಿ ಪತಿ ನರನು ಕ್ರಿಯೆ ।

ಯುದ್ಧ ಮಾಡಿ ಈಶ್ವರನ ಗೆದ್ದ ಬಾಣ ಪಡದಾನಾಗಾ
ಸದ್ಯ ಯಾರೂ ಇಲ್ಲ ಅರ್ಜುನಗ ಇದರ ।
ಹಿಂಗಂತ ಜಿದ್ದ ಮಾಡಿ ಬಿರ್ದಾವನ್ನು ಸಾರುವದಾ ॥
ಬಿದ್ದವನನ್ನು ಕೊಡುವದಿಲ್ಲ ಅವರು ।
ಅರ್ಜುನನ ಹೊರ್ತು ಯುದ್ಧ ಮಾಡುವರಿಲ್ಲ ಯಾರ್‍ಯಾರು ।
ಹೋದ ಕ್ಷಣಕ ಅರ್ಜುನನ ಪಾದ ಹಿಡಿ ಪ್ರಾಣ ದಾನ
ಕಾಯ್ದು ರಕ್ಷಿಸಂತ ನೀ ಕೂಡ್ರೋ ।
ಒಳಗಾ ಆದಂತಾ ಹೇಳದೆ ಸುಮ್ಮನಿರು ॥

ಪೊಡವಿಪತಿ ನರನು ಕ್ರಿಯೆ ಕೊಟ್ಟಮ್ಯಾಲ
ಒಡದ ಹೇಳ ನಿನ್ನ ವೃತ್ತಾಂತ ॥

ಯಾಕ ಅಳತೀಯೋ ಮಗನೆ ಲೋಕದೊಳಗ ಅವರಂತ
ಜ್ವಾಕಿ ಮಾಡವರು ಯಾರಿಲ್ಲಾ ॥ಪ॥



೯

ಧರ್ಮರಾಜನ ಆಣಿ ಕೊಟ್ಟ ಕರಣದಿ ಹೇಳಿದ ಮ್ಯಾಲ
ಸರ್ವ ವಿಸ್ತಾರವೆಲ್ಲಾ ನೀ ಉಸುರು ।
ಹೋಗೋ ಹೋಗೋ ಗಯಾ ಹರುಷದಿಂದ ಪ್ರಾಣ ಕಾಯುವರು ।
ಹರಿಯ ಆಣೆ ಕೊಟ್ಟ ಮ್ಯಾಲ
ಒರಿಯೋ ನಿನ್ನ ದುಃಖವೆಲ್ಲಾ ।
ಭರದಿಂದ ಹೋಗಿನ್ನ ಇಲ್ಲೆ ಇದ್ದಾರೋ ಕಾಮಿಕ ಬನದೊಳು ।
ಐವರು ಪಾಂಡವರ ಹೊಕ್ಕಿದಾರೋ ಪುತ್ರ ಗಯಾ ನೀ ಕೇಳೋ ।
ನೇತ್ರದಿ ನೀರ ಯಾಕ ತಂದಿ
ಒತ್ತರ ಮಾಡಿ ಹೋಗೋ ಐವರು ।
ಸತ್ಯದಿಂದ ಪೃಥ್ವಿಮ್ಯಾಲ ಇಲ್ಲ ಯಾರ್‍ಯಾರು ॥
ಜ್ವಾಕಿ ಮಾಡವರು ಯಾರಿಲ್ಲಾ ನಾ ನಿನಗ
ಬೇಕಂತ ಅಲ್ಲೇ ಕಳಹುವೆನು ॥ಪ॥

೧೦

ಮುನಿಯ ಪಾದಕೆರಗಿ ಘನ ಹರುಷದಿಂದಲೇ
ವನಕೆ ಹೊಂಟಾನು ಆ ಗಯನು ।

ರಾಮರಾಮರು ಋಷಿಯ ನಾರದಾ ಗತಿಯ
ನಿಮ್ಮ ಪಾದದಂತೆ ಕರುಣವಿರಲಿ ।
ಬಿದ್ದಾನ ಎತ್ತಿ ಚರಣದಲ್ಲಿ ।
ಎದ್ದ ನಡದೋ ಭಾಳ ಅವಸರದಲ್ಲಿ ಹುಡುಕುತ
ಕಾಮಿಕ ವನ ಒಡಿಯ ಅರ್ಜುನ ಇದ್ದ ಅಲ್ಲಿ ।
ಅರ್ಜುನ ಇದ್ದ ಅಲ್ಲಿ ।
ಯೋಗಿ ನಾರದ ಧ್ಯಾನ ಮಾಡುತ ಬಂದ ಹುಡುಕುತ
ಕಾಮಿಕವನವನ್ನು ।
ಸುತ್ತವರದ ಹುಡುಕತಾನೋ ಗಯಾ ಸ್ವಾಮಿ ನಿರ್ಭಯಾ ।
ನನಗ ಮಾಡ್ಯಾನೋ ನನಗ ಮಾಡ್ಯಾನೋ ।
ಸನೇ ಬಂದಿತ ಕಾಮಿಕವನವಿನ್ನು ವನವಿನ್ನು ।
ಸಂತೋಷ ಆದಾನ ಕಂಡ ಕ್ಷಣ ಕೇಳೋ ಕ್ಷಣ ।
ಎಲ್ಲಿ ಇದ್ದಾನಯ್ಯ ಪಾರ್ಥಾ ಮರ್ತ ವಿಪರೀತಾ
ಯಾವಾಗ ಹೇಳೇನು ।
ಎಂದ ವಚನ ನನಗ ಕೊಟ್ಟಾನೋ ।
ಹಿಂಗಂತ ಗೇನಸತಾನೋ ಹಂಬಲಿಸುತ ಹೋಗಿ ಅರ್ಜುನನ
ಹೊಕ್ಕ ಕಾಮಿಕ ವನವ ದುಃಖದಲಿ ಆ ಗಯನು
ಸಿಕ್ಕನು ಪಾರ್ಥ ಹರುಷಾದ ॥ಪ॥

೩೧

ನಡದಾನ ಕಾಮಿಕ ವನ ಹುಡುಕುತ ಅರ್ಜುನನ ಕಂಡ
ಹಿಡದಾನೋ ಪಾದವ ಮಾಡಿ ಅವಸರಾ ॥
ಗಯಾ ನುಡಿದಾನ ಹಿಂಗ ದುಃಖ ಮಾಡೋ ನಂದು ದೂರ
ಕಾಯೋ ನುಡಿದಾನ ಹಿಂಗ ದುಃಖ ಮಾಡೋ ನಂದು ದೂರ
ಕಾಯೋ ಪೊಡವಿಪತಿ ನನಗ ಬಂದಿತೋ ಗೋರ
ಹೊರಳಾಡಿ ಅಳತಾನ ಗಯಾ ।
ಉರಳಾಡಿ ಸಂತಾಪದಿಂದ ಇರುಳು ಹಗಲ
ನಿದ್ರೆಯಿಲ್ಲ ನೀರಾರ ।
ನಿಮ್ಮನ್ನ ಹುಡುಕುತ ಬಂದೇವ ಮಹಾ ಸತ್ಯಕ ।
ಪಾಂಡವರೊಳಗೆ ಪರಾಕ್ರಮಿ ಪುಂಡ ಅರ್ಜುನ ನಿನ್ನ ನಾಮಾವಳಿ ।
ಹಿಂಗ ಹೊಗಳತಾನ ಹಗಲಿ ಇರಳಿ
ಮಧ್ಯೆ ಪಾಂಡವ ನಿನ್ನ ಬಿರದಾ ।
ಮೂರು ಲೋಕದೊಳಗ ಸಾರುವದಾ ॥
ಬೇಡಿಕೊಂತೇನ ಕೈಮುಗದ ನನ್ನ ಪ್ರಾಣದಾನ ಕೊಡರೆಂತ ।
ಸ್ವರ್ಗ ಮರ್ತ್ಯ ಪಾತಾಳೆಲ್ಲ ತಿರಗೀನಯ್ಯಾ ನಿಮ್ಮ ಭೇಟಿ ।
ನಿಮಗ ನಮೋ ನಮೋ ಅಂತೇನ ತೀವ್ರ ।
ನನ್ನ ಮರಗ ಕೇಳರಿ ನೀವು ದೊಡ್ಡವರು ।
ಅಂತ ತಿಳಿವಳ್ಕಿ ಮಾಡುವೆನು ನಮಸ್ಕಾರಾ ॥

ಸಿಕ್ಕನು ಪಾರ್ಥ ಹರುಷಾದ ನನ್ನ ಪ್ರಾಣ
ದಕ್ಕಿತಂತ ಧೈರ್ಯ ಮಾಡಿದನು ॥ಪ॥

೩೨

ಇಂದ್ರನಂದನನು ಕಂದ ಗಯನೇ ಕೇಳೋ
ಬಂದ ಸಂಕಟವು ನನ್ಗೇಳೋ ॥ಪ॥

ನೋಡಿದ ಅರ್ಜುನ ಮುಖವು ಬಾಡಿತ್ಯಾಕ ಗಯಾ ನಿಂದು
ಓಡಿ ಬಂದ ಬಗಿಯಾ ಇಷ್ಟ ದೂರಾ ।
ಕಾಡಡವಿಯೊಳಗ ನಾವು ಇದ್ದವರು ।
ಆಡಿದ ವಚನಕ್ಕ ಕೇಡ ಮಾಡವರಲ್ಲಾ
ಬೇಡಿದ ಬೇಡಿಕಿ ಕೊಡಾವಾ ।
ಬಿಡ ನಿನ ಚಿಂತಿ ದೂರ ಮಾಡಾವಾ ॥
ಬಿಗಿದಪ್ಪಿ ಏ ಮಗನೇ ನಗಿ ಮುಖವು ಬಳಿ ಆದವು
ನಗದವರ ಕೃಪಾಬಲ ಪೂರಣಾ ।
ನಮ ನಮಗ ಇರಲಿ ಆಸರಾ ॥



ಬಂದ ಸಂಕಟವು ನನ್ಗೇಳೊ ಇಂಚಲದ ತಂದೆ
ಬಂಕನಾಥನ ದಯದಿಂದ ॥ಪ॥

೩೩

ಪಾಂಡುಪುತ್ರನೇ ಕೇಳೋ ಮಂಡಲದೊಳು ನನ್ನಕಿಂತ
ಚಂಡಾಲಿಗೋಳ್ಯಾರಿಲ್ಲಾ ।
ಬಂತೆನ್ನ ವಧ ವನಕೆ ಸ್ವಂತ ನಾ ಹುಡುಕೀನಿ
ಅರ್ಜುನ ಅರ್ಜುನನೇ ।
ಕಾಂತಾರದೊಳು ಕಡಿಯಾಲಿಸೋ ಅರ್ಜುನ ಅರ್ಜುನನೆ ।
ಏನ ಹೇಳಲಿ ನಾನು ಪ್ರಾಣ ದಾನ ಬೇಡುವೆ ಅರ್ಜುನ ಅರ್ಜುನನೇ ।
ಕಾಂತಾರದೊಳಗ ಕಡಿಯಾಲಿಸೊ ಅರ್ಜುನ ಅರ್ಜುನನೇ ।
ನಿನ್ನ ಹೊರತ ನನಗ ಇನ್ನ್ಯಾರು ಗತಿಯಿಲ್ಲಾ ಅರ್ಜುನ ಅರ್ಜುನನೇ ।
ಬೆನ್ನ ಬಿದ್ದೆನೊ ಮನ್ನಿಸೋ ಅರ್ಜುನ ಅರ್ಜುನನೇ ।
ಮೂರಲೋಕದ ಗಂಡ ಸಾರುವದಾ ನಿನ್ನ ಬಿರ್ದಾ ಅರ್ಜುನಾ
ಹರನ ಗೆದ್ದಂತ ನರ ಅರ್ಜುನ ಅರ್ಜುನನೇ ।
ಪಾಂಚಾಲ ರಾಜನ್ನ ಮುಂಚೆ ಹಿಡಿದಂತಾ ಅರ್ಜುನ ಅರ್ಜುನನೇ
ವಂಚನೆಯ ಮಾಡಿದರೂ ನನ್ನ ಮ್ಯಾಲೆ ಅರ್ಜುನ ಅರ್ಜುನನೇ ॥

ಚಂಡಾಳಿಗಳೋ ಯಾರಿಲ್ಲಾ ನನ್ನ ಪ್ರಾಣ ನಿನ್ನ
ಕಂಡಕ್ಷಣ ಕಾಣೋ ದೂರಾಯ್ತು ॥ಪ॥

೩೪

ಗಯನೇ ಕೇಳೆನ್ನ ಮಾತಾ ಭಯವು ಪಡಿಯಲಿ ಬ್ಯಾಡಾ ।
ಅಭಯ ಇಟ್ಟಾನೋ ಅರ್ಜುನನು ॥ಪ॥

ನಿನ್ನ ದುಃಖ ಪರಿಹರಿಸುವೆ ಅಣ್ಣ ಧರ್ಮರಾಜನ ಆಣೆ
ಪನ್ನಂಗಶಯನಾಣೆ ಇಂದಿಗೆ ।
ನನ್ನ ವಚನ ಹಾನಿ ಅಲ್ಲೋ ಎಂದೆಂದಿಗೆ ॥
ಚಂದ್ರ ಸೂರ್ಯರೆಮ್ಮ ತಮ್ಮ ಇಂದ್ರ ದಿಕ್ಕವು ಬಿಟ್ಟ
ಬಂದ ಮೂಡ್ಯಾರ ಪಶ್ಚಿಮ ದಿಕ್ಕಿಗೆ ।
ಎಂದೆಂದಿಗೂ ಕುಂದ ಬರಲಿಕ್ಕಿಲ್ಲ ನಮ್ಮ ಪಾಲಿಗೆ ॥
ಅಂಜದೆ ಹೇಳ್ಯಾನೋ ಗಯಾ ಕೇಳೋ ಕೇಳೋ ಧನಂಜಯಾ
ಕಾಳಿಮರ್ಧ ಯಮುನಾ ನದಿಗೆ ಹೋಗಿ
ಬಲರಾಮ ಕೃಷ್ಣ ಕಾಳವೈರಿಗೆ ಅರ್ಗ್ಯ ಬಿಡುವಾಗ್ಗೆ ॥

ಅಭಯ ಇಟ್ಟಾನೋ ಅರ್ಜುನನು ಹೀಂಗೆಂದು
ಉಭಯತರ ಮಾತಾನು ಆಡಿದನೋ ।

೩೫

ಮೂರು ಲೋಕದ ಗಂಡ ವೀರ ಅರ್ಜುನ ಕೇಳೋ
ಮೀರಿ ಬಂತೆನ್ನ ಉಳವಯ್ಯ ॥

ರಾಜಾ ಕೇಳೋ ಎನ್ನ ಮಾತಾ ಸಚ್‌ಸತ್ತರ ಲೋಕಕ್ಕೆ
ಮೋಜದಿಂದ ಹೋಗತಿದ್ದೆ ನಾನಾ ।
ಕೃಷ್ಣನ ಕೈಯಾಗ ವಾಜಿ ಜೊಲ್ಲ ಬಿತ್ತರಿ ತಿಳಿಯಿನ್ನ ॥
ಜೊಲ್ಲಚೆಲ್ಲಿದವನ ನಾನು ನಿಲ್ಲದೆ ಕೊಲ್ಲುವೆನೆಂದು
ಬಲ್ಲಂಗ ಮಾಡಿದೋ ಶಪ್ತವನ್ನು ।
ಅವನ ಶಪ್ತಕ್ಕ ತಲ್ಲಣಿಸುವೆನಯ್ಯ ಪಾರ್ಥಾ ॥

ಉಳಸಯ್ಯಾ ಪ್ರಾಣವು ನಂದು ಗಳಸಯ್ಯ ಪುಣ್ಯವು ಮುಂದ
ಅಳತಾನ ಭೂಮಿಗೆ ಗಯಾನು ಬಿದ್ದ ।
ಇದರ ಹೊರ್ತ ಹಳದಳ ಏನೂ ಇಲ್ಲ ಅಂತಾನೋ ॥
ಮಾರಿ ಬಂತೆನ್ನ ಉಳವಯ್ಯಾ ನನ್ನ ಪ್ರಾಣಾ ।
ವಾರಿಜ್ಯಾಂಬಗು ನೀಗುವದು ॥

೩೬

ಚಂದ್ರ ಸೂರ‍್ಯ ಗ್ರಹವು ಬಂದ ತೊಡರಿದಂತೆ
ಇಂದ್ರ ಬಿದ್ದು ಹೊರಳಿದನೋ ॥ಪ॥

ದೇಶ ಕೋಶ ಹೆಣ ತಾ ಸಹಿತವಾದೀತರ‍್ಣ್ಯಾ
ಶ್ರೀ ಹರಿ ಶ್ರೀ ಹರಿಯೇ ।
ಮೋಸವಾದೀತ ನಮಗತಿಯ ಶ್ರೀಹರಿ ಶ್ರೀ ಹರಿಯೇ ।
ಧ್ಯಾನಿಸಿ ಅರ್ಜುನ ಏನ ಬಂದೀತಯ್ಯ ಶ್ರೀ ಹರಿ ಶ್ರೀ ಹರಿಯೇ
ಹಾನಿಯಾದೀತ್ಯೋ ಶಿವ ಶಿವಾ ಶ್ರೀ ಹರಿಯೆ ॥
ಬೀಗ ನಿಮ ಬಲ್ಲಿ ಯುದ್ಧ ಹ್ಯಾಂಗ ಮಾಡಲಿ ನಾನು ಶ್ರೀ ಹರಿ ಶ್ರೀ ಹರಿಯೇ
ನಾಗಶೈಯನನ ಸಾರಥಿಯ ಶ್ರೀ ಹರಿ ಶ್ರೀ ಹರಿಯೇ
ದುಷ್ಠ ಗಯಾನ ನೋಡಿನಾ ಕಟ್ಟಾಗಿ ಹೋಗಲಿಕೆ
ಕೆಟ್ಟ ಹೋದೀತ ನಮ ಬಾಳ್ವೆ ಶ್ರೀಹರಿ ಶ್ರೀಹರಿಯೇ ।
ಕೊಟ್ಟ ವಚನ ನಾನು ತಪ್ಪುವವನಲ್ಲ ನಾನು ಶ್ರೀ ಹರಿಯೇ ಶ್ರೀ ಹರಿಯೇ
ಭ್ರಷ್ಟತ್ವ ಬಂದಿತೋ ನಮ ಪಾಲಿಗೆ ಶ್ರೀ ಹರಿ ಶ್ರೀ ಹರಿಯೇ ।
ಇಂದ್ರಜಾ ಬಿದ್ದ ಹೊರಳಿದನೋ ಹೊತ್ಯಾಗ ।
ನೊಂದಕೊಂಡ ದುಃಖ ಮಾಡಿದನೋ ॥

೩೭

ತಮ್ಮನ ದುಃಖವ ಕೇಳಿ ಯಮನಂದನನಾಗ
ಗಮನ ಮಾಡಿದನೋ ನರನ್ಹಂತೆ ॥ಪ॥



ಚಿಟ್ಟನೇ ದುಃಖವ ಕೇಳಿ ಯಮನಂದನನಾಗ
ಶ್ರೇಷ್ಠ ಧರ್ಮರಾಜಾ ಕೇಳ್ಯಾನ ಬಂದಾ ।
ಅರ್ಜುನ ಹೇಳಿದ ದುಷ್ಟ ಗಯಾಗ ಭಾಷಿ ಕೊಟ್ಟೀನಂದಾ ॥
ಪಾಪಿ ಕೌರವನಿಂದ ರಾಜ್ಯ ಲೋಪವಾಗಿ ಅಡವಿ ಸೇರಿ
ಶ್ರೀಪತಿ ಕಾಯಲಿಲ್ಲ ಇದಿವಳಿದಾ ॥
ಹರಹರಾ ವಿಧಿಗೆ ಈ ಪರಿಯಾದೀತೋ ಶಿವಶಿವಾ ಎಂದಾ ॥
ಹುಲಿಗೆ ಅಂಜಿ ನಾವು ಹೋಗಿ ನೆಲದೊಳಗೆ ಸೇರಿದರಿನ್ನು
ಒಳಗಿನ ಸರ್ಪ ಕಡದಂಗಾಯಿತೋ ಬಂದಾ ।
ಹೆಂಗ ಮಾಡೋಣ ಜಲಜಾಕ್ಷನ ಕೂಡ ಯುದ್ಧಾ ।
ಗಮನ ಮಾಡಿದನೋ ನರನ್ಹಂತೆ ತಾ ಕೇಳಿ
ಶಮನ ಬಿಟ್ಟದೆಲ್ಲ ಸರಿಯೇನು ।

೩೮

ಗಾಯದೊಳಗ ಕೋಲ ಹಾಕಿದಂಗಾಯಿತು
ಬಾಯ ಬಿಡತಾನ ವರಧರ್ಮ ॥
ತರಳೆ ದ್ರೌಪದಿ ಹಿಡಿದು ದುರುಳ ಸೀರಿ ಸೆಳೆವಾಗಾ
ಮುರಹರ ಬಂದ ಮಾನ ಕಾಯ್ದ ।
ಹೆಂತ ಘಾತವಾದಿತೋ ಶಿವಶಿವಾ ॥

ಕಷ್ಟ ಬಂದಾಕ್ಷಣಕ ಕೃಷ್ಣ ಉಳವಿಕೊಳ್ಳಾವಾ ।
ಕೊಟ್ಟೇವ ಭಾಷಿ ತಿಳಿಯದ ನಾವಾ ।
ಭ್ರಷ್ಟತ್ವ ಬಂದಿತ ಶಿವ ಶಿವಾ ॥
ಅಳವಳ ಕಳವಳಿಸಿ ಇಳಿಗೆ ಹೊರಳಿದೋ ಧರ್ಮ
ನಳಿನಾಕ್ಷ ನಮಗ ನಳಿನಾಕ್ಷ ನಮಗ
ಭಾಳ ಪ್ರೇಮ ಉಳಿಯಲಿಲ್ಲೋ ಉಪಕಾರ ಕಳದೀ ತಮ್ಮ ॥

ಬಾಯ ಬಿಡತಾನೋ ವರಧರ್ಮ ಕೃಷ್ಣಗ
ದೇಹ ತಮ್ಮದೆಂದು ಹೇಳಿದನು ।

೩೯

ಆಗ ಭೀಮನು ಕೇಳಿ ಹೀಗೆ ಧರ್ಮಗ ಅಂದಾ
ಆಗದಾಗೋತಿ ಚಿಂತ್ಯಾಕಾ ।
ಮುಂದಕಿಟ್ಟ ಹೆಜ್ಜೆ ಕಿತ್ತಿ ಹಿಂದಕೆಂದು ಇಡುವರಲ್ಲ
ಕುಂದ ತಂದ ಕೊಟ್ಟೋ ವಚನಕ್ಕ ।
ಮೆಚ್ಚಿ ಕಿಲ್ಲೋ ಇಂದ್ರ ಚಂದ್ರ ಸೂರ‍್ಯ ಲೋಕಕ ॥
ಬರಲಿ ಇಂದ ಕೃಷ್ಣ ಯುದ್ಧಕ್ಕ ।
ಚಂಡ ರುಂಡ ಕಡದ ಹಾಕುವೆನು ತುರ್ತಕ್ಕ ॥
ಅಬ್ಬರ ಭೀಮನ ಮಾತ ಕೇಳಿ ಉಬ್ಬಿ ಅರ್ಜುನ ವೀರ

ಬೊಬ್ಬಿ ಹೊಡದ ನಡಗಿತ್ತೋ ತ್ರಿಲೋಕ।
ಭೀಮ ಅರ್ಜುನ ಇಬ್ಬರ ಕೂಡಿ ಏರಿ ಬಂದಿತು ಉಕ್ಕ॥

ಆಗೋದಾಗಲಿ ಅಣ್ಣ ಚಿಂತ್ಯಾಕ ಇನ್ನ ಮ್ಯಾಲ
ನಾಗಶಯನಗ ದರ್ಜೀನ।

**೪೦**

ದಿಟ್ಟ ಅರ್ಜುನನು ತೊಟ್ಟಾನೋ ಕೋಪವನು
ಶ್ರೇಷ್ಠ ಧರ್ಮನಿಗೆ ಹೇಳಿದನೋ।

ಶೌರ್ಯ ಅಂಜಿಕೆ ಯಾರಿಗೆ ಅನ್ನುತ ಎರಗಿ ಅಣ್ಣನ ಚರಣಕ
ಕಾಲ ಭೈರವನಂದದಿ ಆರ್ಭಾಟಕ।
ಮುರಾರಿ ಬರಲಿ ಯುದ್ಧಕ ಬಾರೋ ಗಂಧರ್ವಜಾ
ಇರ ಇರೋ ಹರುಷಾಗಿ।
ಪೂರ ವಚನ ಕೊಟ್ಟ ಈ ಕ್ಷಣಕ ಬಿಡ ನಿನ್ನ ದುಃಖಾ
ಚಿಂತಿ ಬಿಟ್ಟ ಸಂತೋಷವಾಗಿರು।
ಕಂತುಪಿತ ಬರಲ್ಯಾಕ ನಿನ್ನ ಭ್ರಾಂತಿ ಬಿಡೋ ಸುಮ್ಮಕ।
ಅವನ ಪಂತ ಯಾರ ಕೇಳಬೇಕ।
ಒಪ್ಪಿಸಿದ ವಚನ ತಪ್ಪಿಸುವರಲ್ಲಾ ಬಿಟ್ಟಾರ ಅಂತಾರ ಅದಕ
ಕುಡಿ ಉದಕ।
ಅನ್ನ ಉದಕ ತಕ್ಕೋಳ್ದಂಗ ಇನ್ನೇನೈತಿ ಬಿಡ ಭಯಾ।
ನೀನು ಹಗಲೆಲ್ಲಾ ಮುಗೀ ಬ್ಯಾಡೋ ಕೈಯ್ಯಾ।
ನಾನು ನಿನ್ನ ಮ್ಯಾಲಿಲ್ಲೋ ನಿರ್ದಯಾ।
ಹಿಂದ ಪುಣ್ಯ ಮಾಡಿ ಬಂದಿ ಇಂದ ನಿನಗ ಬಹು ಸುಖಾ
ತಾ ಬಂದ ವದಗಿತ ಪ್ರತ್ಯೇಕ।

ಆ ಸಿಂಧು ಶೈನಂದು ಬಿಡೋ ಟಕ್ಕಾ ಬಾರೋ ಗಂಧರ್ವಜಾ
ಇರೋ ಇರೋ ಹರುಷಾಗಿ।
ಪೂರ ವಚನ ಕೊಟ್ಟ ನೀಕ್ಷಣ ಬಿಡ ನಿನ್ನ ದುಃಖ॥

**೪೧**

ಶ್ರೇಷ್ಠ ಧರ್ಮನು ಹೇಳಿದನು ಅರ್ಜುನಗೆ
ಕೆಟ್ಟಿತ್ತೋ ಬಾಕಿ ಉಳಿಲಿಲ್ಲಾ॥

**ಏರ**

ಭೂನಾಥ ಕೇಳಯ್ಯ ನಾನಾ ದೇಶದೊಳಗ ಕಾಣಲಿಲ್ಲ
ಗಯಾನ ಹುಡಕಿದರ ॥ಪ॥



ತ್ರಿಲೋಕ ಸಂಚಾರಿ ನಾರದ ದ್ವಾರಕಕ ಬಂದಾ ಋಷಿವರ ಯೋಗಿ।
ಕೃಷ್ಣ ಕಾಣೂತ ಬಂದಾನ ಇದರೀಗಿ।

ಶಿವ ಪೀಠ ಹಾಕಿ ಗದ್ದೀಗಿ ದೂಪದೀಪ ಗಂಧಾಕ್ಷತಿ ಧರಿಸಿ
ಮುನಿಚರ ರಾಯರಿಗಿ।

**ಚಾಲ**

ನಾರದರು ಅಂತಾರ ಕೃಷ್ಣಗ ಮಾರೀ ಮ್ಯಲ ರಂಗಾ
ಕಾಣುದಿಲ್ಲ ಶ್ರೀ ಹರಿ ಶ್ರೀ ಹರಿ।
ನಿನ್ನ ಚಂದ್ರಣಂತ ಮುಖ ಭಾಳ ಕಳಾ ಕುಂದಿದಾವ ಭಾಳಾ।
ಚಿನ್ನ ಎಲ್ಲಾ ಹಾರಿ ನಿನಗೇನ ಬಂತೋ ಸಂಕಟಾ।
ಕರೆ ಹೇಳೋ ನನ ಮುಂದ ಸ್ವಚ್ಛಾ॥

**ಏರ**

ಶ್ರೀ ಲಕ್ಷ್ಮೀಕಾಂತ ನಿನ್ನ ಮುಖಾ
ಕಾಣುದಿಲ್ಲ ಠೀಕಾ ಠೀಕಾ॥
ಚಿನ್ನ ಎಲ್ಲಾ ಹಾರಿ ಕೇಳ ಹಾರಿ ಇದು ಏನ ಭಾಳ ಆಶ್ಚರ್ಯ ಆಶ್ಚರ್ಯ
ಅಚ್ಚುತ ಕರೆ ಹೇಳಿರಿ ಹೇಳರಿ।
ಹೇಳರಿ ದಂಡ ಮಾರ್ಬಲಾ ತಯಾರಾದ ಕಾರಣ
ಹೇಳ ದೊರಿಯೇ ಹೇಳ ದೊರಿಯೇ॥
ಕಾಣಲಿಲ್ಲ ಗಯಾನ ಹುಡುಕಿದರು ಯಾದವರು
ದ್ವಾರಕಕ್ಕೆ ಮಾಡಿದರೋ॥

**೪೨**

ಯತಿ ಮುನಿಯೇ ಕೇಳಯ್ಯಾ ಕ್ಷಿತಿ ಮ್ಯಾಲ ಹುಡುಕಿದೆವು
ಶತಮೂರ್ಖ ಗಯನು ಸಿಗಲಿಲ್ಲಾ ॥ಪ॥

ಗಂಧರ್ವನ ವಾಜಿ ಜೊಲ್ಲಾ ಬಂದ ನನ್ನ ಕರದಲ್ಲಿ
ಅಂದ ಬಿದ್ದೀತಯ್ಯಾ ಮುನಿವರಾ।
ಮಾಡೇನ ಪಂಥಾ ಎಂಟ ದಿವಸಾದೊಳಗ ಕೊಲ್ಲು ಕರಾರಾ॥
ಉಳಿದರೊಂದು ವ್ಯಾಳೆದಲಿ ಬೀಳುವೆನು ಅಗ್ನಿಯೊಳಗ
ಭಾಳಾಕ್ಷನ ಸಾಕ್ಷಿಯಿಂದ ತ್ವರಾ।
ಸಿಗವಲ್ಲೋ ಗಯಾ ಹೇಳ ಮುನಿ ಇದರ ವಿಚಾರಾ॥
ಸುತ್ತರಗಿ ಈರೇಳು ಲೋಕ ಮತ್ತು ಪೇರಿ ತಿರಗುವರು
ಒತ್ತರಲೆ ಹೇಳಲಿ ವಾರ್ತಿ ಮಜಕೂರ।
ಗಯಾ ಸಿಗದೀರ ನಾಳೆ ಅಗ್ನಿ ಬೀಳೋ ಕರಾರಾ॥

೪೩

ಶತಮೂರ್ಖ ಗಯನು ಸಿಗದಿದ್ರ ನನ್ನ ಪ್ರಾಣಾ
ಹತವಾಗೋದು ಬಂತೋ ಮುನಿನಾಥಾ ॥ಪ॥

ಏರ

ಗೋಪಾಲ ಕೇಳಯ್ಯಾ ಆಪತ್ತ ಒದಗಿತು
ಭೂಪಾಲಗಳು ಕೆಡಸಿದರು ॥
ಹೇಳಲಾರೆನಯ್ಯಾ ಕೃಷ್ಣ ಹೇಳದೆ ಉಳದರ ಮನಾ
ತಾಳಲಾರದ ಏನ ಮಾಡಲಿ ಈ ಹೊತ್ತಿಗಿ ।
ಕಂಡದ್ದೇಳಲು ಜಗಳವ್ರು ಬಂತು ನಮ್ಮ ಪಾಲೀಗಿ ।
ಹೇಳದಿದ್ರ ಖೊಟ್ಟಿ ಅನ್ನತೀರಿ ಈ ಗಳಗಿ
ಅನ್ನುವರನ್ನಲಿ ಹೇಳುವೆನು ನಿನ್ನೆ ಗಯಾ ಪಾಂಡವರ ಬೆನ್ನ ಬಿದ್ದ
ಕಾಮಿಕವನಕ್ಕೆ ಹೋಗಿ ।
ವಚನಕೊಟ್ಟ ಅರ್ಜುನ ಹಾಕಿಕೊಂಡ ತನ್ನ ಬೆನ್ನೀಗಿ ।

ಚಾಲ

ಹೀಂಗ ಹೇಳಿ ತೆರಳಿದಾನೋ ಮುನಿ
ಕೃಷ್ಣಾರ್ಜುನಗ ಹತ್ತಿದಂಗ ಆಯ್ತು ಅಗ್ನಿ ।
ಅಣ್ಣಾ ಬಲರಾಮ ಕೇಳೋ ಈ ವಾರ್ತಿ ।
ಹೆಂತಾ ಚಂಡಿ ನೋಡೋ ಪಾಂಡವರಾ ।
ಉಂಡಮನಿ ಗಳಾ ಎಣಿಸವರಾ ।
ಪುಂಡರಾಗಿದಾರೋ ಈಗವರಾ ।
ಭಂಡತನದಿ ಬೆಳದಾರವರಾ ।
ನೋಡಯ್ಯಾ ಬಲರಾಮ ನಮ್ಮ ಕೂಡ ಪಾಂಡವರ ವರ್ಮ
ಮಾಡಿಕೊಂಡ ತಮಗ ಈಗ ಬೇಕಾಗಿ ।
ಎಂಥಾ ಗೋಳ ತಂದಿ ಶಂಕರಾ ಶಿವ ಶಿವಯೋಗಿ ।
ಶಂಭೋ ಬಂಕೇಶಾ ಬಂತೇನೊ ನಿನ್ನ ಮನಸೀಗಿ ॥

ಏರ

ಭೂಪಾಲಗಳು ಕೆಡಿಸಿದರು ಪಾಂಡವರು
ಈ ಪರಿ ಮಾಡಬೇಕೇನೋ ॥

೪೪

ಏರ

ಅಣ್ಣ ಬಲರಾಮ ಅಂದ ತಣ್ಣಗಾತೇನೋ ನಿನಗ
ಹಣ್ಣ ಹಾಲಿನಂಗ ಕೂಡಿದ್ರ ॥



ಚಾಲ

ನುಡಿದ ಬಲರಾಮನು ತಂಗಿ ಕೊಡಬ್ಯಾಡಂತ ಹೇಳಿದರ
ಬಿಡೆ ಹಿರೆತನಾ ಮಾಡಿದ್ಯಲ್ಲೊ ಮಸ್ತಾ ॥
ಕೃಷ್ಣ ಸುಡಸುಡೋ ನಿನ್ನ ಬೀಗತನಾ ಬಹಳ ಹಿತಾ ॥
ಯತ್ನ ಮಾಡೋ ಮಾಡೋ ಕಾಲ ಒದಗಿತಾ ಪಾರ್ಥಾ
ಉಪಕಾರ ಮಾಡವರ ಮ್ಯಾಲ ಅಪಕಾರ ಮಾಡಾಕ ನಿಂತರೋ ।
ಅಪಕಾರ ಮಾಡೋದು ಅವರ ಮಸಲತ್ತಾ ।
ನಡಿ ಗೋಪಾಲ ಹೋಗೋನ ಯುದ್ಧಕ ತುರತ ।
ಆಗ ಸುಭದ್ರಿ ಕರೆದ ಕೃಷ್ಣನು ತಂಗಿ ಮುಂದಕ ಬಾರವ್ವ ಹೇಳುವೆನು ।
ನೇಮ ಕೆಡಿಸಿದನು ನಿನ್ನ ಗಂಡನು
ಹೇಳಿ ಗಯಾನ ಹೊರಗ ಹಾಕಿ ಬಾ ನೀನು ।
ಅಣ್ಣ ಕೃಷ್ಣ ಕೇಳೋ ಹಿಂತಾ ಸಣ್ಣ ಮಾತಿಗಿ ಸಿಟ್ಟ ಯಾಕೋ ।
ಕುನ್ನಿ ಗಯಾನ ಹೊರಗ ಹಾಕಿ ಬರುವದು ಖಚಿತಾ ।
ನನ್ನ ವರ್ಣದ ದಾರಿ ಕಾಯೊ ಕಾಯೋ ಗೋಪಿನಾಥಾ
ಅಂತಾ ಕಣ್ಣೀರ ಸುರಿಸುತ ಸುಭದ್ರ ನಿಂತಾ ॥

ಏರ

ಹಣ್ಣು ಹಾಲಿನಂಗ ಕೂಡಿದ್ರ ಪಾಂಡವರು ।
ಅನ್ಯ ಮಾಡಿದರು ನಮ್ಮ ಮ್ಯಾಲ ॥

೪೫

ಏರ

ಕಂದ ಅಭಿಮನ್ನನ ಹಿಂದಿಂದ ಕರಕೊಂಡು
ಬಂದಾಳೋ ಆಗ ಸುಭದ್ರ ॥

ಚಾಲ

ಬಂದಾಳೋ ಕಾಮಿಕ ವನದೊಳು ಯಮನಂದನ ಅರ್ಜುನನ ಪಾದಕ
ವಂದಿಸಿ ಮಾಡ್ಯಾಳೋ ಅನಿವಾರ ದುಃಖಾ ।
ಸುಭದ್ರಿ ಅಂತಾಳೋ ಹೆಂಗ ಈ ಯಾಳೇಕ ।
ಕೇಳಯ್ಯ ರಮಣಾ ನೀ ಹೆಂತಾ ಕಾಳಯಾಳೇದಾಗ ಈ
ಖೂಳ ಗಯಾನ ಇಟಕೊಂಡ ಬಳಿಕ ।
ನಿಮಗ ನಾನು ಹೇಳುವೆನು ಈ ಕ್ಷಣಕ ॥
ನಾಳಿ ಇವನ ಹೊಡಿಯದಿದ್ರ ಬೀಳುವನು ಅಣ್ಣ ಅಗ್ನಿಯೊಳಗ

ಉಳಿಯುದಿಲ್ಲ ತಿಳಿಯೊ ಮನಕಾ ।
ನಾವು ನೀವು ಉಳಿಯಾಕಿಲ್ಲಾ ಕೃಷ್ಣ ಸತ್ತ ಬಳಿಕಾ ॥

**ಏರ**

ಬಂದಾಳೋ ಆಗ ಸುಭದ್ರಿ ಅರ್ಜುನನ
ದ್ವಂದ್ವ ಚರಣಕ್ಕೆ ಎರಗಿದಳೋ ॥

**೪೬**

**ಏರ**

ಕಮಲಮುಖಿ ಸುಭದ್ರ ರಮಿಸಿ ತಾ ಹೇಳಿದಳು
ರಮಣ ಕೇಳೆನ್ನ ಮಾತು ॥

**ಚಾಲ**

ಅಡಿಗೆರಗಿ ದೃಢದಿಂದ ಹೇಳುವೆನು ಎನ್ನ ಒಡೆಯ ಪ್ರಾಣನಾಥ
ಕೇಳೋ ಅರ್ಜುನನೆ ।
ಬಿಡುಬಿಡು ಮಾಡಬ್ಯಾಡ ಪಂಥವನ್ನು ।
ಆ ಕಡಲ ಶಯನ ತಡವಿಲ್ಲದೆ ಹೊಡೆಯುವನೋ
ಕೈ ಮುಗಿದ ಭಯದಿಂದ ಹೇಳುವೆನು ।
ಪ್ರಿಯಾ ದಯಮಾಡಿ ಎನ್ನ ಮಾತ ಕೇಳೋ ನೀನು ।
ನ್ಯಾಯ ಬ್ಯಾಡ ಇದ ನಿಮಗ ಒಳಿತೇನು ।
ನಿನ್ನ ಮಾಯದಿಂದ ಹೊಡದಾನೋ ಗೋಪಾಲಾ ।
ಅರಗಿನ ಮನಿಯೊಳು ಹರಣ ಕಾಯ್ದಂತಾ
ಹರಿ ಪರಮೂರ್ತಿ ಮ್ಯಾಲ ನಿಮ್ಮ ಸಿಟ್ಟೇನೋ
ಪಾರ್ಥಾ ಕೇಳೆನ್ನ ಮಾತ ವ್ಯರ್ಥ ಕೆಡುವುದು ಬ್ಯಾಡಾ
ನಿನ್ನ ಸಾರಥಿಯಾಗಿ ರಥ ನಡಿಸುವುದು ।
ಬಿಡು ಅವರವರ ಧರ್ಮ ಕರ್ಮಕ್ಕೆ ಯಾಕ ಗುರಿಯಾಗುವಿರಿ ।
ತಿಳಿ ಮರ್ಮ ಧರ್ಮ ಶರ್ಮವ ಬಿಟ್ಟು ನೀವು ನಿಂತೀರಿ ॥

**ಏರ**

ಶೌರಿ ಕೂಡ ಜಗಳ ಯಾಕ ಐವರು ನಿಮ್ಮ
ಚರಗಳಿಗೆ ಎರಗಿ ಮಾಡುವೆನು ನಮಸ್ಕಾರಾ ॥
ಪಾರ ಗಯಾನ ಬಿಟ್ಟ ಬಿಡರಿ ಬಲ್ಲವರು ನಾ
ಸಾರಿ ಹೇಳತೀನ ಬೀಳತಾದ ಪೇರು ॥

ರಮಣಾ ಕೇಳೆನ್ನ ಗುಣ ರಮಣಾ
ಕಮಲನಾಭ ನಿನಗ ಸರಿಯೇನು ॥ಪ॥



**೪೭**

**ಏರ**

ನಾರಿಯಾಡಿದ ಮಾತು ಧೀರರೈವರು ಕೇಳಿ
ಘೋರ ಚಿಂತಿಯಲಿ ಕುಳಿತಿಹರು ॥ಪ॥

**ಚಾಲ**

ಶೂರ ಅಭಿಮನ್ಯು ಯುದ್ಧವೀರ ಬೊಬ್ಬಿ ಹೊಡದಾನೋ
ಭೋರಗರದ ಜಗದ ಬಣ್ಣ ಟಣಣಣಾ ।
ತಂದಿಗಳಿರ್‍ಯಾ ಮಾರಿ ತಗಿಯುವರೇನು ಮಾಡಿ ಪಣ್ಣ ಪಣಣಣಾ ।
ಮಾತುಳ್ಳ ಕೃಷ್ಣನ್ನ ನಾನು ಯಾತಕ್ಕ ಕೇಳೆನು ನಾನು
ಕೂತಕೊಂಡ ನೋಡ್ರಿ ಖಣ್ಣ ಖಣಣಣಾ ।
ಹೊಡೆಯುವೆನು ಜಾತಿ ಕ್ಷತ್ರಿಪುತ್ರ ನಾನು ಜನ್ಮ ಜನನನಾ ।
ತಾತಾ ಬಿಡುವರೇನು ಹಿಂತಾ ಮಾತ ಮ್ಯಾಲ ಮಣಾ
ಸತ್ತ ಹೋದರ ಹೋಗಲಿ ಹೊಡೆಯುವೆನು ಖಣ್ಣ ಖಣಣಣಾ
ಪೃಥ್ವಿ ಮ್ಯಾಲ ಹೊತ್ತೇರಿ ಬಂತು ಅಪಕೀರ್ತಿ ಜನ್ನ ಜನನನಾ ॥

**ಏರ**

ಘೋರ ಚಿಂತಿಯಲಿ ಕುಳಿತಿಹರು
ಅಭಿಮನ್ಯು ಹಾರಿದನು ಅಂತ್ರ ತಂತ್ರದಲಿ ॥

**೪೮**

**ಏರ**

ಭೂಪಾಲ ಕೇಳಯ್ಯ ಗೋಪಾಲನ ಕೂಡ
ಈ ಪರಿ ಯುದ್ಧ ಮಾಡುವೆನೋ ॥ಪ॥

**ಚಾಲ**

ತಾಯಿಯಾದ ಸುಭದ್ರಿಯು ಮಾಯ ಇಟ್ಟ ಅಣ್ಣನ ಮ್ಯಾಲ
ಅನ್ಯದಿಂದ ಆಡುವಳು ಮಾತಾ ।
ತನ್ನ ಬೆನ್ನ ಬಿದ್ದವರನ್ನ ಕೊಡುವರೇನೋ ಪಿತಾ ।
ಕಿತ್ತಿ ದ್ವಾರಕಾಪತಿಯನ್ನು ಒತ್ತುವೆನು ಶರಧಿಯೊಳಗಾ ।
ಅತ್ತರ ನಡಸುವೆ ಈ ಹೊತ್ತು
ಅಲಲಲಾ ಹರಿ ಈ ಹೊತ್ತು ಕುತ್ತಿಗೆ ಕೊಯ್ಯುವದೋ
ಚೋರ ಕೃಷ್ಣ ಬರಲಿ ತೂರಿ ಬಿಡುವೆನು ಅವನ ತಲಿ ।
ಯಾರ ಕೇಳಬೇಕು ಚಕ್ರದ ಹೊಡತಾ ।
ಗರ್ಜನಿ ಹೊಡದ ವೀರ ಅಭಿಮನ್ಯು ಪಂಡಿತಾ ॥

**೬೯**

**ಏರ**

ಈ ಪರಿ ಯುದ್ಧ ಮಾಡುವೆನು ಹೀಗೆಂದು
ವಿಪರೀತ ಕೂಗ ಹೊಡದಾನು ॥ಪ॥

**ಏರ**

ಮಗನ ಮಾತ ಕೇಳಿ ಪಾರ್ಥಾ ಬಿಗಿದಪ್ಪಿ ಮುದ್ದಾಡಿ
ಜಿಗದಾನೋ ಉಬ್ಬಿ ಗಗನಕ್ಕೆ।

**ಚಾಲ**

ಮಗನ ಮಾತ ಕೇಳಿದ ಅರ್ಜುನಾ
ಉಬ್ಬಿ ಮುಂಡಿ ಬಡದಾ।
ಮೂರ ಲೋಕದೊಳಗ ಪ್ರಸಿದ್ಧಾ।
ಹೌದ ಹೌದ ಅಂತಾರ ನನ್ನ ಜಿದ್ದಾ।
ಕೊಟ್ಟ ವಚನ ತಪ್ಪಿಸಿದರ ಹರಿಯ ನರಕಕ್ಕ ಗುರಿ ಅಂದಾ।
ಅರ್ಜುನ ಕರದ ತನ್ನ ಸತಿ ಬಾರ ಮಂದಮತಿ
ಮಡದಿ ಸುಭದ್ರಾ ಸುಭದ್ರಾ।
ಗಯಾನ್ನ ಬಿಡುವದಿಲ್ಲ ಆಗೋದ ಆಗಲಿ ಆಗಲಿ
ನಿಮ್ಮ ಅಣ್ಣ ಬಂದ ಮಾಡಲಿ ಮಾಡೋದ ಮಾಡೋದ।
ಹಾಂಗಂದ ಸತಿಯ ಬೈದನೋ।
ಹರಿಯ ಪರ ನೀನು ಲಗು ಕಳಸೋಗ।
ಯುದ್ಧ ನಡೀಲಿ ಅವರಿಗಿ ನಮಗ ಯಾರ ಅಂಜಬೇಕ ಕೃಷ್ಣಗ
ಅವನ ಛಲಾ ಛಲಾ
ಹದಿನಾರ ಸಾವೀರ ಹೆಂಡರೊಳಗ, ಸಾವಿರ ಹೆಂಡರೊಳಗ।

**ಏರ**

ಜಿಗದಾನೋ ಉಬ್ಬಿ ಗಗನಕ್ಕ ಶ್ರೀ ಹರಿಯು
ಸಿಗಬಾರದ ಸಿಕ್ಕ ನೆರಳುವನು ॥

**೭೦**

**ಏರ**

ಪತಿಯ ಆಡಿದ ಮಾತು ಸತಿಯು ಸೌಭದ್ರಿ ಕೇಳಿ
ಮಿತಿಮೀರಿ ದುಃಖ ಮಾಡಿದಳು ॥

**ಚಾಲ**

ಕಾಂತ ಆಡಿದ ಮಾತುಗಳನ್ನು ಕೇಳಿ
ನಿಂತ ಸುಭದ್ರಾ ಕೇಳಿ



ಹೆಂತ ಹೊತ್ತ ಬಂತೋ ಇಂದೀಗೆ
ಸುಭದ್ರ ಹಿಂಗೆ ಅಂತಾ ಹೊರಳಿ ಹೋದಳೋ ದ್ವಾರಕಾವತಿಗೆ
ಅಣ್ಣಾ ಕೇಳರಿ ಅವರು ಮನ್ನಿಸಲಿಲ್ಲೊ ನನ್ನ ಮಾತಾ
ಬಣ್ಣ ಗುಂದಿ ಬಂದೆ ನಾ ಇಲ್ಲಿಗೆ।
ಸುಭದ್ರಾ ಅಂತಾಳೋ ಅನ್ಯ ಬಂತೊ ಅವರ ಪಾಲಿಗಿ।
ಕೇಳಿದ ಕೃಷ್ಣನು ಕೋಪ ತಾಳಿದ ಹರಹರಾ ಹಿಂತಾ
ಗೋಳ ತಂದೊ ಶಂಕರ ಶಿವ ಶಿವಯೋಗಿ।
ಬೀಗ ಬೀಗರ ಯುದ್ಧ ಮಾಡೋದು ಬಾಳ ಬಿಗಿ।

**ಏರ**

ಮಿತಿ ಮೀರಿದ ದುಃಖ ಮಾಡುವಳು ಶ್ರೀ ಕೃಷ್ಣಗ
ಅತಿ ಬ್ಯಾಗ ಕರದ ತಿಳಿಸಿದಳೋ ॥ಪ॥

**೭೧**

**ಏರ**

ಹರಿಯ ಕೂಗ ಹೊಡದಾನೋ ಸ್ವರ್ಗ ಪಾತಾಳಲೋಕ
ಧರಿಯ ನಡಗೀತ ಗದಗುಟ್ಟಿ॥

**ಚಾಲ**

ಬಲರಾಮನ ಆಜ್ಞೇಳಿ ಬಲು ಕೋಪ ತಾಳಿದ ಆಗ
ಬಲರಾಮ ಅಂತಾನ ಬಹು ಶೀಘ್ರದಲಿ।
ಐವತ್ತಕೋಟಿ ಯಾದವರನ್ನು ಆಗ ನೆರವುತಲಿ
ರಾಜಾ ಆಗ ಏರಿ ಹೊಂಟಾನ ಆಗ ಧೀರ ಗರ್ಜನೆಯಲಿ।
ನಡದೀತ ಕೃಷ್ಣನ ದಂಡಾ ಪೊಡವಿಯೊಳಗ ಹಿಡಿಸಲಾರದ
ಗುಡಗುಟ್ಟಿ ಸುರಲೋಕ ಎಲ್ಲಾ ನಡಗುತಲಿ।
ಧೂಳ ಅಡಗಿತು ಗಗನಕ್ಕೆ ತಾರೆ ಮುಚ್ಚುತಲಿ।
ಹೊಕ್ಕರು ಕಾಮಿಕವನಾ ಸೊಕ್ಕಿನ ಪಾಂಡವರನ್ನೆಲ್ಲಾ
ಧಿಕ್ಕು ಪಾಲು ಮಾಡಿ ಬಿಡುವೆವಾ।
ಹರಿ ಚಕ್ರ ಹಿಡಿದ ಹೊಡಿವವಾ।
ಮುಕ್ಕಟ ಬಲರಾಮ ಮುಗ್ಗಿದಾ।
ತಕ್ಕೋ ತಕ್ಕೋ ಅಂದು ಮುಕ್ಕುಂದಾ ದಂಡ ತಯಾರಿಸಿ
ಬರುವದ ಕಂಡ। ಪಾಂಡವರು ನಿಂತಾರೋ ಎದ್ದಾ।
ದಂಡ ಬಂದದ್ದ ನೋಡಿ ಷಂಡ ಪಾರ್ಥ ಭೀಮ
ಪ್ರಚಂಡಾಗಿ ನಕುಲ ಸಹದೇವರೆಲ್ಲಾ।

ಬಾಣ ಹಿಡಕೊಂಡ ನಿಂತಾರೋ ಮಹಾಕೋಪದಲ್ಲಿ ।
ಇದನ ಕಂಡ ಕೃಷ್ಣ ಸುದರ್ಶನ ಚಕ್ರ ಬಿಡವೃತಲಿ ॥

೫೨

ಏರ

ಧರಿಯು ನಡಗಿತೋ ಗದಗುಟ್ಟಿ
ಪಾಂಡವರನ್ನು ಕಟ್ಟಿಹಿಡಕೊಂಡು ಬರುವೆವು ॥

ಏರ

ನರನು ಈ ಸಹಿತನಾಗಿ ಧುರಕ ಬರಬೇಕೆಂದು
ಕುರುಪತಿಗೆ ಪತ್ರ ಬರೆದಿದನೊ ।
ಪಾರ್ಥನ ಕುಮುಕಿಲಿಂದ ತುರ್ತಕರಿ ಕಳಿಸಿದರು
ಪತ್ರ ಬರದ ದುರ್ಯೋಧನಗ ಅವಸರಲಿ ।
ವೀರ ದ್ರೌಪದಾಗೆ ಬರದ್ರ ಹಾಗ ಅವರಸದಲಿ ।
ಬಂದಾರು ಕೌರವರು ಆಗ ಅಂದಾಗ ಕೃಷ್ಣಗ ನಾವು
ಇಂದ್ಯಾರ ಕೊಲಬೇಕ ಪಾರ್ಥನ ಕುಮುಕಿನಲಿ ।
ಪಾರ್ಥನ ಸಾರಥಿ ಇಲ್ಲದಂಗಾದ ಮುಂದ ರಣದಲ್ಲಿ ।

ಚಾಲ

ದ್ರೋಣಾಚ್ಯಾರಿ ಭೀಷ್ಮಾಚ್ಯಾರಿ ಅಶ್ವತ್ಥಾಮ ಭುಜಬಡಿದು
ಮೀಸಿ ತಿರವಿ ಹುರಿ ಮಾಡಿ ।
ಶ್ರೀ ಕೃಷ್ಣನ ಮ್ಯಾಲ ಶರಾ ತೂರಿ ಬಿಡತಾರ ಬಾಣ ।
ಗಡಾ ಗಡಾ ಓಡತಾರ ಜನಾ
ಧಡಾ ಧಡಾ ಬೀಳತಾವ ಹೆಣಾ
ಛಡಾ ಛಡಾ ಹಾರತಾವ ಗೋಣಾ ।
ಒಬ್ಬರಿಗೊಬ್ಬರು ಪಂಥಾ ಮಾಡಿ ಉಬ್ಬಿ ಉಬ್ಬಿ ಜಿಕ್ಕೊಂತ ವೀರ
ಬೊಬ್ಬಿ ಹೊಡದ ತೂರಿಕೋತ ಕೋಪದಲಿ ।
ಯುದ್ಧ ಆರ್ಭಟಗನಡದೀತ ಶರ ಕಾಳಿ ಅಬ್ಬರದಿಂದ ಕೆಡವ್ಯಾರ ರಣದಲ್ಲಿ ॥
ಕೆಡವಾರ ರಣದಲ್ಲಿ ॥

ಏರ

ಕುರುಪತಿಗೆ ಪತ್ರ ಬರೆದಿದರೋ ದುರ್ಯೋಧನ
ತ್ವರದಿಂದ ಬಂದ ಒದಗಿದನೋ ॥ಪ॥



೫೩

ಏರ

ಮುಗಲೀಗೆ ಹಾರುವಂತೆ ಆಗ ಬಲರಾಮನಿದ್ದ
ನೇಗಿಲ ಹಿಡಕೊಂಡ ಅಡ್ರಾಸಿ ।

ಚಾಲ

ಬಂದ ಬಂದ ವೀರರನ್ನ ಕೊಂದ ಹಾಕುತ
ಮುಂದ ಮುಂದ ಕಡಕೊಂತ ನಡದ ತಲಿ ।
ಹೆಣಾ ಹಿಂದ ಹಿಂದ ಹಾರ್ಯಾವು ರಣದಲಿ ।
ಚಂಡ ಜಿಗದಾವೋ ಒಂದೊಂದ ಮ್ಯಾಲ ಮ್ಯಾಲ

ಭಲೇ ಬಲೇ ಬಲರಾಮ ಬಲವಂತ ನೀ ಕರೇ
ಹಲಧರನಾದರ ಹಾಕಿದೆ ಪಂಥಾ ಮಲ್ಲಿಗೆ ದುಂಡು ಮಲ್ಲಿಗೆ ।
ನೋಡಿ ಘಟದ್ಧ್ವಜ ಮಾಡಿದ ಮಂತ್ರವು
ಕೂಡಿದ ಆಡಿದ ಬಲರಾಮನ್ನ ।
ಹಿಂದಕ್ಕೋಡಿದ ನೋಡಿದ ಘಟದ್ಧ್ವಜ ।
ಯುದ್ಧ ಮಾಡಿದ ಆಡಿದ ಮಾತವನ್ನು ।
ಭಪ್ಪರೆ ಬಲರಾಂ ತಪ್ಪಿಸಿ ಹೊಡಯುವೆನು
ಗುಪ್ತ ಬಂದೀತು ನೆಂಪ ಹಿಡಿದೇನೋ ಮಲ್ಲೀಗೆ ದುಂಡು ಮಲ್ಲೀಗೆ ।
ಕೆಟ್ಟ ಘಟದ್ಧ್ವಜ ನಿನ್ನ ನೆಟ್ಟಾಗಿ ಹೊಡೆಯುವೆ
ಬಿಟ್ಟ ಬಾಣವು ಸೊಟ್ಟ ಮಾಡಿದೆಲೋ ।
ನಿನ್ನ ಗಟ್ಟೀತನಾ ಎಷ್ಟ ನೋಡವೆನಲ್ಲೋ ।
ಸಿಟ್ಟ ಎಷ್ಟು ತನಕ ಇಡತಿ ಹೊಟ್ಟಿ ಮ್ಯಾಲ
ನಿನ್ನ ಕುಟ್ಟಿ ಹಿಟ್ಟ ಮಾಡುವೆ ಸಿಟ್ಟಾಗಿ ಬಾ ಎಂದು
ಬಿಟ್ಟೇನೊ ಬಾಣಾ ।
ನೆಟ್ಟಾವೋ ನಿನಗ ಮಲ್ಲಿಗೆ ದುಂಡುಮಲ್ಲಿಗೆ ।

ಏರ

ನೇಗಿಲ ಹಿಡಕೊಂಡ ಅಡ್ರಾಸಿ ಎದ್ದಾನೋ
ಹೋಗಿ ಭೀಮಸೈನಗ ದುಡಕಿದನೋ ॥

೫೪

ಏರ

ಎದ್ದ ಭೀಮಸೈನನು ಗದಿಯ ಹೊಡದಾನೋ
ಗದ್ಧರಿಸಿತಾಗ ತ್ರಿಲೋಕವು ।

**ಚಾರ**

ಬಂದ ಬಲರಾಮ ಆಗ ಸುಂದ ಆಗಿಯೇನೋ
ನೊಂದಿತೇನೋ ನಿನ್ನ ದೇಹ ।
ಭೀಮ ಹಿಂಗಂತ ಹೊಡದ ಗದಿಯಾ ।
ಸಾವಿರಾರು ಮಂದಿ ಬಿತ್ತ ಪ್ರಳಯ
ಇಬ್ಬರ ಲಡಾಯಿ ಹುಯ್ಯ ಹುಯ್ಯ
ನಡದೀತ ಜಬ್ರದಸ್ತ ಧರ್ಮರಾಯಾ ।
ದ್ರೋಣಾಚಾರಿ ಭೀಷ್ಮ ತ್ರಾಣವುಳ್ಳವರು ।
ಬಾಣ ಬಿಡತಾರು ತನ್‌ತನನಾ ।
ಜಿಗದ ಗೋಣ ಕೊಯ್ಯತಾರೋ ಚರ್‌ಚರರರಾ ।
ಅಶ್ವತ್ಥಾಮ ಜೈದ್ರಥನ ಫಣಾ ।
ಕೃಷ್ಣನ ಹೊಡಿಬೇಕಂತ ಮಾಡಿದರು ಪಣಾ ।

**ಏರ**

ಗದ್ಧರಿಸಿತಾಗ ತ್ರಿಲೋಕ ರಣದಲಿ
ಎದ್ದ ಬಿದ್ದವರು ತಿಳಿಲಿಲ್ಲಾ ।

**೩೪**

**ಏರ**

ಅಚ್ಯುತ ಅಂತಾನು ಮುಚ್ಚುವೆ ಬಾಣದಲಿ
ಹೆಚ್ಚಾತಿ ಅವರ ಕಸ್ತಿಯದು

**ಚಾಲ**

ಕೃಷ್ಣ ತಿರವತಾನ ಗರಗರರಾ ಚಕ್ರ ತಿರವಕೌರವ ಮ್ಯಾಲ ಬಾಣ ಸುರವಿದ ।
ದ್ರೋಣಾಚ್ಯಾರಿ ಜಿಗದಾನಾ ಟನ್ ಟನ್ ಟಣಣಣಾ ।
ಜಿಗದ ಕೃಷ್ಣನ ಮ್ಯಾಗ ಬಾಣ ಬಗೆವುದ ಬಾಣ
ಕಡಕಡದ ಕೆಡವುತ ಹೊಡದ ಹೊಡದ ।
ಈ ಪೊಡವಿಯೊಳಗ ಕಡ್ ಕಡಡಡಾ ।
ಕೃಷ್ಣ ದ್ರೋಣಾಚ್ಯಾರಿಗೆ ಬಡದ ।

**ಏರ**

ಹೆಚ್ಚಾತಿ ಇವರ ಕಸ್ತಿಯದು ಪಾಂಡವರನ್ನ
ತಾಶ್ಚ್ಯಾರ ಮಾಡಿ ನುಡದಾರೋ ॥



**೩೫**

**ಚಾಲ**

ದ್ರೋಣಾಚ್ಯಾರಿ ಅಶ್ವತ್ಥಾಮ ಕರ್ಣ ವೀರ ಜಯದ್ರಥಾ ।
ಬಾಣ ಬಡದ ಕಸವಿಸಿ ।
ವೀರ ದ್ರೌಪದಾಕಿ ಕಂಡ್ರ ಬಂದ್ರ ಕಳವಳಿಸಿ ಆಗ ದುರ್ಯೋಧನ ಅಂದ
ಬಾಣ ಹೆದಿ ಇಳಿಸಿ ।
ಕೃಷ್ಣ ಸತ್ತರ ಒಳ್ಳೆಯದಾಯಿತಾ ಅರ್ಜುನ ಸತ್ತರ
ಪೀಡಾ ಹೊಯ್ತಾ
ಇಬ್ರೂ ಸತ್ತರ ನನ್ನ ಜೀವಕ ಭಾಳ ಖುಸಿ ।
ನಮ್ಮ ಜೀವ ಉಳದರ ಸಾಕಂತ ಓಡ್ಯಾರ ಧಾವಿಸಿ ।
ಶ್ರೀ ಕೃಷ್ಣ ಹಲ್ಲ ಕರಕರರರರ ತಿಂದ ಗರಗರರರಾ ತಿರವತಾನ ಚಕ್ರ
ಬಲರಾಮ ಬಿಡತಾನ ಟೋಕರಾ ।
ಇದರಾದ್ರ ನಕುಲಸಹದೇವರ ಬಾಕಿ ಜನರದು ಹಾರಿತು ದೇಹಾ
ನಗತಾರ ನೋಡಿ ಕೌರವ ಶ್ರೀ ಕೃಷ್ಣ ತಿಳಿದನು ಭಾವಾ ।

**ಏರ**

ಮುತ್ಯಾ ಭೀಷ್ಮನು ಅಂದು ಎತ್ತ ಹೋಗಲಿ ನಾನು
ಹತ್ತಿದವರೆಲ್ಲಾ ನನ್ನ ಕರುಳು
ಕೋಟ್ಯಾವಧಿ ಬಾಣಗಳು ನಾಟಿಶ್ಯಾನ ಶ್ರೀ ಕೃಷ್ಣ
ಆಟ ಸಾಗಲಿಲ್ಲ ದುರ್ಯೋಧನ ಸೋಸಿ ।
ತಿಳದ ನೋಡಿ ಓಡಿದಾನ ಜಗಳ ತಪ್ಪಿಸಿ ।
ಮುರದ ಹೋದಿ ಪಾಂಡವರ ದಂಡ ಚಡಪಡಿಸಿ ।
ಹತ್ತಿದವರೆಲ್ಲ ನನ ಕರುಳು ಹಾಗೆಂದು
ಉತ್ತಮ ಭೀಷ್ಮ ನುಡಿದಾನೆ ॥ಪ॥

**೩೬**

**ಏರ**

ಶರ್ತ ಕೃಷ್ಣಂದ ನೋಡಿ ವ್ಯರ್ಥ ಸಾಯೋದಕಿಂತ
ಪಾರ್ಥ ಬಂದಾನೋ ರಥವೇರಿ ॥

**ಚಾಲ**

ಆಗ ಧನಂಜಯ ನೋಡಿ ವಿಜಯರಥವನ್ನು ಹೊಡಿ ।
ಭುಜ ಬಡದ ಮೀಸಿ ಹುರಿ ಮಾಡಿ ।
ಸಾವಿರ ಬಾಣ ನಿಜವಾಗಿ ಕೃಷ್ಣನ ಮ್ಯಾಲ ತೂರಿ
ಪುಂಡ ಕೃಷ್ಣನು ಅಂದ ಆಗ ಪಾಂಡವರು ನೀವು ಭಂಡರಯ್ಯ
ಲೋಕದೊಳು ಸರಿ ।

ಪಾಂಡವರು ನೀವು ಉಂಡ ಮನೆ ಗಳ ಎಣಿಸುವರು ಖರೆ ಖರೆ ।
ಬಿಡುಬಿಡು ಕೃಷ್ಣ ಹಿಂತ ಬಡಿವಾರದ ಮಾತು ಕರೆ

ತುಡಗ ಮಾಡಿದ್ದೆಲ್ಲೋ ಹಾಲ ಸ್ವಾರೀ
ಗೊಲತಿಯರೆಲ್ಲಾ ಕಡಗೋಲಿಂದ ಬಡದಾರ ಮೈಮುರಿ ।

**ಏರ**

ಪಾರ್ಥ ಬಂದಾನೋ ರಥವೇರಿ ಕೃಷ್ಣಗ
ಸರ್ಥ ನೋಡಿ ಬಾಣ ಎಸದಾನೋ ॥ಪ॥

**೫೮**

**ಏರ**

ಬಡದಿತ ಅರ್ಜುನನ ಬಾಣ ಕಡಲ ಶಯನನು ಆಗ
ಪೊಡವಿ ಮ್ಯಾಲ ಬಿದ್ದ ಕಳವಳಿಸಿ ।

**ಚಾಲ**

ಬಿದ್ದ ಬೀಗನ ನೋಡಿದ ಅರ್ಜುನ ಅಯ್ಯೊ ಶ್ರೀ ಕೃಷ್ಣಾ
ನನ್ನ ಬಿಟ್ಟ ಮಡಿದ್ಯಾ ।
ವೈಕುಂಠ ಪುರಕ ನೀ ನಡದ್ಯಾ ।
ಬೀಗ ನನ್ನ ಮ್ಯಾಗ ಬಾಣ ಹಿಡದ್ಯಾ । ನಿನ್ನ ಹ್ಯಾಂಗ ಮರೀಲಿ
ಅರಗಿಳಿ ಸುಭದ್ರ ಕಳವಿದ್ಯಾ ।
ಈ ಭೂಮಿ ಮ್ಯಾಲ ಬಾಳಲಾರೆ, ಬಾಳಲಾರೆ
ದುಃಖ ತಾಳಲಾರೆ ಕೋಪದಿಂದ ಮಡದ್ಯಾ ।
ಗಯಾನ ಸಲುವಾಗಿ ನನ್ನ ಅಗಲೀದ್ಯಾ ।
ನನ್ನ ಸಾರಥಿ ಇಲ್ಲದಾದ್ಯಾ ।
ಸುದ್ದಿ ಏನ ಹೇಳಲಿ ಗೋಪೆರಿಗೆ ಪ್ರಾಣ ಹೋಗಿ ಬಿದ್ಯಾ ।
ಕೃಷ್ಣನ ಮುಖಕ ಮುಖ ಇಟ್ಟಮ್ಯಾಲ ಅರ್ಜುನ ಗೋಳಿಟ್ಟ
ಮಾಡತಾನ ಶೋಕ ಕೇಳ ಶೋಕ ।
ಅಮೃತದ ಗಟ್ಟಿ ನೀ ಹೋದ್ಯಾ
ಇರೋದು ನಿನ್ನಿಂದ ನನ್ನ ಬೆಳಕಾ ನನ್ನ ಬೆಳಕಾ
ಎತ್ತ ಹೋದ್ಯೋ ನನ್ನ ಭಾವೋಜಿ ಭಾವೋಜಿ
ನಾವಿಬ್ಬರು ಆಗಿ ಇರುವೆನು ರಾಜಿ ಕೇಳ ರಾಜಿ ।
ಸುಭದ್ರಾಗೆ ಏನಂತ ಹೇಳಲಿ ಮಾರಿ ತೋರಲಿ ಎದ್ದ ಬಾ ಬಾರೋ ।
ಕೈಯಾಗ ಕೈಯ ತಾ ತಾರೋ ।
ಬಾಯಾಗ ಬಾಯಿ ಮುಖದೋರೋ ।



ನಿನ್ನಗಲಿ ಜೀವಿಸಲಾರೆ ದುರ್ಘಟ ಮಾಡುವ ದೂರ
ಮಾಡುವ ದೂರಾ ॥

**ಏರ**

ಪೊಡವಿ ಮ್ಯಾಲ ಬಿದ್ದ ಕಳವಳಿಸಿ ಇಂಚಲದ
ಒಡಿಯ ಬಂಕನಾಥನ ದಯದಿಂದ ॥ಪ॥

**೫೯**

**ಏರ**

ಬಂದಾನೋ ಬಯಲಾಗಿ ಸಿಂಧು ಶಯನನು ಆಗ
ಸಂದ ನೋಡಿ ಚಕ್ರ ಹೊಡಿದಾನೋ ॥ಪ॥

**ಚಾಲ**

ಹೊಡದಾನಾಗ ಸುದರ್ಶನ ನಡಗೀತಲ್ಲ ತ್ರಿಭುವನ
ಬಡದೀತ ಹೋಗಿ ಅರ್ಜುನಗ ಚಕ್ರ ।
ಕಳವಳಗೊಂಡು ಪೊಡವಿಮ್ಯಾಲ ಬಿದ್ದಾನಾಗಾ ನರಾ ।
ಬಿದ್ದ ಬೀಗನ ನೋಡಿ ಆಗ ಎದ್ದ ಬಂದೊ ಶ್ರೀ ಕೃಷ್ಣ
ಮುದ್ದಿ ಬಂಗಾರದಂಥ ಪಾರ್ಥವೀರಾ ।
ಮ್ಯಾಲ ಬಿದ್ದ ಹೊರಳಾಡ್ಯಾನೋ ಶ್ರೀ ಕೃಷ್ಣ ದೇವರಾ ।
ಎನ್ನ ಸಂಜೀವಾನೆ ಎನ್ನ ಪ್ರಾಣದ ಅರಗಿಳಿ ಅಗಲಿ
ಅಳಿಯುವರೇನಾ ಯುದ್ಧದಲಿ ಶೂರಾ ।
ನಿನ್ನ ಬಿಟ್ಟು ಅರಗಳಿಗೆ ಇರಲಾರೆನು ಬಾರೋ ಧೀರಾ
ಕುಂತಿ ದೇವಿಗೆ ಸುದ್ದಿ ಏನಂತ ಹೇಳಲಿ
ಮೈದುನ ಪ್ರಾಂತವಲಿ ನಿನ್ನ ಹೆಸರಾ ।
ಈಶ್ವರನ್ನ ಗೆದ್ದಾ ಪಾಶುಪತಾಸ್ತ್ರ ತಂದಂತಾ ವೀರಾ ।

**ಏರ**

ಸಂದ ನೋಡಿ ಬಾಣ ಹೊಡದಾನೋ ಇಂಚಲದ
ತಂದಿ ಬಂಕನಾಥನ ದಯದಿಂದ ॥

**೬೦**

**ಏರ**

ತಂಗಿ ಸುಭದ್ರಿಗೆ ಹೆಂಗ ತೋರಲಿ ಮಾರಿ
ಬಂಗಾರದಂತಾ ಬೀಗನೆ ॥ಪ॥

**ಚಾಲ**

ಎದ್ದ ಪಾರ್ಥ ಮೂರ್ಛೆ ತಿಳಿದ ಅದ್ಭುತ ಗರ್ಜನೆ ಮಾಡಿದ
ಬಿದ್ದ ತಾರಕ್ಕಿಗಳ ಕೂರ್ಮ ನಡಗಿದವು ।
ಎದಿಯೊಡದ ಯಾದವರಂಜಿ ಆಗ ಬಲರಾಮನು ।

ಯುದ್ಧ ಸಮತೂಕ ನಡದೀತ ಇನ್ನ ಹೇಳಲೇನು ।
ಭಗ್ಗ ಭಗ್ಗ ಉರಿದಾಗ ಜ್ವಾಲಾ ತಗಿಬಗಿ ಆದೀತೆ ಜಾಗಾ ।
ಲಗುಬಗಿ ಇಬ್ಬರ ದರ್ಪಿಗೆ ಭೀಮನ ನಡಗಿ ದಿಗ್ಗಜಗಳಿಗೆ
ಪ್ರಳಯವನು ।
ಎಂಟ ದಿವಸ ಮೀರುವದೆಂದು ಪಂಟ ಶ್ರೀ ಕೃಷ್ಣಾ
ನೀಟ ಬಿಟ್ಟ ಸುದರ್ಶನ ಮೋಸದಿಂದಾ
ಗಯಾನ ಚಂಡ ಕತ್ತರಿಸಿ ಚಕ್ರ ಬಂದ ।
ಪುಂಡ ಪಾರ್ಥ ಹಿಂದಕ ಹೊರಳಿ ನೋಡಿದ ।
ಚಂಡ ಇಲ್ಲ ರುಂಡ ಒಂದ ಕಂಡಾ ।
ಬೆನ್ನ ಬಿದ್ದವನ್ನ ಕಾಯಲಿಲ್ಲ ನಾನಾ ।
ಅಗ್ನಿಯೊಳಗ ಬಿದ್ದು ಕೊಡುವೆನು ಪ್ರಾಣವನ್ನ
ಪಂಥ ಮಾಡಿ ಅರ್ಜುನಾಗ ನಿಂತ ಅಗ್ನಿ ಹಾರಲಿಕ್ಕೆ
ಕಂತುಹರ ತಿಳಿದ ಅವನ ವಾರ್ತಿ
ಪಾರ್ಥೇಶ ಅರ್ಜುನನ ಭಾವವನು ಕಂಡ ।
ನಂದಿವಾಹನ ಸಹಿತ ಬಂದಾ ಒದಗಿದ ।

**ಏರ**

ಬಂಗಾರದಂತಾ ಬೀಗನ ನಾನೀಗ ಕೊಂದ
ಮಂಗನಾಗಿ ನಿಂತೇನ ಮನದೊಳಗ ।

**೬೧**

**ಏರ**

ದಿಟ್ಟ ಅರ್ಜುನ ನೀನ ಕೊಟ್ಟ ವಚನಕ ಗಟ್ಟಿ
ಸೃಷ್ಟಿಮ್ಯಾಲ ನಿನ್ನ ಸರಿ ಇಲ್ಲ ಯಾರೂ ॥ಪಲ್ಲ॥

**ಚಾಲ**

ಏನ ಬೇಡತಿ ಬೇಡೋ ಅರ್ಜುನ
ಕಂಡೆ ನಿನ್ನ ಗುಣ ಬಹಳ ಹೆಚ್ಚಿನದ
ಭಕ್ತಿ ಶುದ್ಧ ಇರುವುದು ನಿನ್ನ ಭಾವಾ
ನಿನ್ನ ಸಮಾನ ಇಲ್ಲೊ ಯಾಂವ್ಯಾವಾ ।
ಹಿಡಿ ಬೇಡಿದ್ದ ಕೊಡತೇನ ಕಳಕೋಬ್ಯಾಡ ನಿನ್ನ ಜೀವಾ ಕೇಳು ನಿನ್ನ ಜೀವಾ ।
ನನಗೇನ ಬ್ಯಾಡೋ ಈಶ್ವರನೆ ಗಯಾನ ಪ್ರಾಣವನು ಪಡಿಯ ಅಂತಾನೋ ।
ಬೆನ್ನ ಬಿದ್ದ ಅಂಜಿ ಬಂದ ಗಯಾ ಆಯ್ತ ಅನ್ಯಾಯಾ
ಪ್ರಾಣ ಹೊಡಿಸೇನೋ । ಹೊಡಿಸೇನೋ ।
ಪಾರ್ಥೇಶ ಅರ್ಜುನನ ಭಾವ ಕಂಡ ಗಯಾನ ಪ್ರಾಣ ಪಡೆದ
ಹಚ್ಚಿದಾನ ಚಂಡ ಕೇಳ ಚಂಡ ।
ಕೃಷ್ಣ ಅರ್ಜುನಗ ಆದಿತ ಹಿತಾ



ಸ್ವಾಮಿ ಬಂಕನಾಥ ಕೂಡಿದಾಗ ಆಗ ।
ಸೌಖ್ಯದಲಿ ಮುಂಚೆ ಇದ್ದಾಂಗ ।
ಪಾರ್ಥಗ ಸಾರ್ತಿ ಹಾಲು ಹಣ್ಣಿನಂಗ
ತೇಜ ಮುಂಚೆನಕಿಂತ ಹೆಚ್ಚಾತಿ ಕೃಷ್ಣ ಅರ್ಜುನಗ ।
ಕೃಷ್ಣ ಅರ್ಜುನಗ ॥

**ಏರ**

ಸೃಷ್ಟಿಮ್ಯಾಲ ನಿನ್ನ ಸರಿ ಇಲ್ಲೋ ಅವನ ಪ್ರಾಣಾ
ಕೊಟ್ಟನೇ ನೋಡು ಅರ್ಜುನನೆ ।

**೬೨**

**ಏರ**

ಪಾರ್ಥ ಕೃಷ್ಣನ ಕಥಿಯ ಅರ್ಥಿಲಿಂದ ಮುಗಿಸಿದೆವ್ರು
ಮರತದೊಂದು ತಪ್ಪ ತಗಿಬ್ಯಾಡರಿ ।

**ಚಾಲ**

ಸರ್ವಜನರ ಪಾದದೊಳು । ನಾನು ನೆಲಸಲಿ
ಇನ್ನ ಏನೂ ಅರಿಯೆನು
ತಿಳಿದಷ್ಟು ಮಾಡಿ ಕವಿತವನು ।
ಚೂಕ ಆದ್ರ ಕ್ಷಮಿಸಿರಿ ಇನ್ನೂ ।
ಹೋಲಿ ಪದಾ ಹೇಳಿದ ಕೆಂಚನಾಯ್ಕ ಮಾಡಿ ಕವಿತವನು ॥
ಸುತ್ತಾ ರಾಜ್ಯದೊಳಗ ಬಾಗೇವಾಡಿ ಬಸವೇಶನ ಪಡಿ
ದೇವರ ದಯದಿಂದಾ । ದಯದಿಂದಾ ।
ಮಲ್ಲ ಬಸವಣ್ಣಿ ಹಾಡುವಲಿ ಸಿಸ್ತಾ, ಬಸಲಿಂಗ ಬಸವಂತ
ಆಧಾರ ಪ್ರಸಿದ್ಧಾ । ಪ್ರಸಿದ್ಧಾ ।
ಪ್ರಾಸಯುಕ್ತಿ ಮುಕ್ತಿ ಮಾಣಿಕರಂಗಾ । ಕೇಳೋರಂಗಾ ॥
ಶುದ್ಧ ಕಲಿಸುವ ಸಿದ್ಧಲಿಂಗಾ, ಕೇಳೋ ಲಿಂಗಾ ।
ನಮೋ ನಮೋ ದೈವಕ ನಮಸ್ಕಾರ ಸ್ವಾಮಿ ಬಸವೇಶ್ವರಾ ॥
ಕರುಣಾಸಾಗರ ಭಕ್ತರಿಗೆ ನಿಮ್ಮ ಪ್ರಿಯಕರಾ ।
ನಡಸಿಕೊಡು ಹಾಡೋದು ಸೌಖ್ಯ ಸಾಗರಾ ।
ಸ್ವಾಮಿ ಇಂಚಲ ಬಂಕನಾಥಗ ನೇಮಮಾಡುವೆ ನಮಸ್ಕಾರಾ । ನಮಸ್ಕಾರ ।

**ಏರ**

ಮರ್ತರೊಂದು ತಪ್ಪ ತಗಿಬ್ಯಾಡ್ರಿ ದೈವಕ್ಕ
ಅರ್ತಿಯಿಂದ ಬೇಡಿಕೊಳ್ಳುವೆನು ॥

* * *

# ಜೀವನ ಜೋಕಾಲಿ

## ಹೋಲೀ ಹಾಡು


೧೨. ಕಾಮಿನೀ ಶೃಂಗಾರ

೧೩. ಬಾಣಾಸುರ

೧೪. ಕೃಷ್ಣಾರ್ಜುನರ ಕಾಳಗ

೧೫. ಧೀರ ಕುಮಾರ ರಾಮ

೧೬. ಮಲುಹಣ


**ಸಂಪಾದಕರು**
**ಡಾ.ಎಂ.ಎಸ್ ಸುಂಕಾಪುರ**



## ೧೨. ಕಾಮಿನೀ ಶೃಂಗಾರ

ಶ್ರೀ ಗುರು ವರವಿರೂಪಾಕ್ಷನ ಪಾದವ
ನೀಗಲೆ ಕರದಿಂದ ಪಿಡಿವುತಲಿ । ಶಿರ
ಬಾಗಿ ಹರುಷದಿಂದ ನಮಿಸುತಲಿ । ಒಳ್ಳೆ
ಯೋಗಿಹೃದಯವಾಸನೆಂಬುತಲಿ । ಬಿಡ
ದೀಗಲೆ ಸ್ತುತಿಸುವೆ ಬೇಗನೆ ಬಂದೆನ್ನ ಜಿ
ವ್ಹಾಗ್ರದೊಳ್ ನಿಂತು ಸಾಗಿಸೀ ಕೃತಿಯ ॥೧॥

ಮುಂದಾಗಿ ಶ್ರೀಗಣಪತಿಪಾದ ಬಲಗೊಂಡು
ಚೆಂದದಿ ಪೇಳುವೆ ಜಗದೊಳಗೆ । ಇದ
ರ್‍ಹೊಂದಿಕಿ ತಿಳಿವುದು ಮನದೊಳಗೆ । ಬಾಳ
ಸಂದೇಹ ಬಾರದಂತೆ ಜನದೊಳಗೆ । ಮುದ
ದಿಂದಲಿ ಚಂದ್ರನ ಸುತೆಯಂತಪೂರ್ವಳ
ಅಂದವ ಪೇಳ್ವೆ ಮತಿಗೆ ತಿಳಿದಂತೆ ॥೨॥

ಭೂಮಿಯೊಳಗೆ ಸ್ಮರರಾಣಿಯಂತಿರುವ
ಕಾಮಿನೀ ಶೃಂಗಾರ ಏನು ಪೇಳಲಿ । ಬಾಳ
ಪ್ರೇಮದಿ ಪೇಳುವೆ ನಯದಿಂದಲಿ । ನೀವು
ತಾಮಸಗುಣಗಳ ಅಳಿವುತಲಿ । ಪರಿ
ಣಾಮದಿ ಕೇಳ್ವುದು ಭಾಮಿನಿ ಮುಖಪದ್ಮ
ಸೋಮನಂದದಿ ಕಣ್ಗೆಸೆದು ರಾಜಿಪುದು ॥೩॥

ಎಷ್ಟೆಂತ ಹೇಳಲಿ ಪಟ್ಟ ಪಟ್ಟಾವಳಿ
ಉಟ್ಟಾಳು ಚಂದ್ರಕಾಳಿ ಸೀರಿಯ । ಆಗ
ತೊಟ್ಟಾಳು ಕುಪ್ಪಸ ಜರತಾರಿಯ । ಫಣಿ
ಗಿಟ್ಟಾಳು ಕುಂಕುಮದ ರೇಖೆಯ । ಮತ್ತೆ
ಕಟ್ಟಾಣಿ ಕರಿಮಣಿ ಮುತ್ತಿನ ಸರಗಿಯ
ಒಟ್ಟಾಗಿ ಕೊರಳೊಳಗಿಟ್ಟಾಳ ಭರತಿ ॥೪॥

ವಾರಿಜಮುಖಿಯಳು ಇಟ್ಟಂಥ ವಸ್ತ
ತೋರ ಕಂಕಣ ಕೈಯ ಕಟ್ಟುಗು । ನಾರಿ
ಗೀರ ಬಂಗಾರ ಬಳಿ ಇಟ್ಟಿಹಳು । ಮತ್ತೆ
ಮೀರಿ ಮೇಲೆಸೆವಂಥ ಕಡಗಗಳು । ಇಂಥ
ನಾರಿಯ ವರ್ಣಿಸಲಾರದೆ ಕವಿ ತಾನು
ನೀರಜೋದ್ಭವಶಿರಕರ ಪಾಲಿಸೆಂದ ॥೫॥

ಬುಗುಡಿ ಬಾವಲಿ ಗಿಳಿಗಳ ಹಚ್ಚಿದಲ್ಲಿ
ಮಿಗಿಲಾಗಿ ಇಟ್ಟಿಹ ಜಮಿಕಿಗಳು । ಮತ್ತೆ
ಬಿಗಿಸೀದ ಸುತ್ತಲಿನ ಮುತ್ತುಗಳು । ಕಡು
ಅಗಲದಂತಿಟ್ಟಿಹ ವಸ್ತುಗಳು । ಬಾಳ
ಬಗಿಬಗಿಯಿಂದಲಿ ಸುಗುಣಿ ತಾ ಬರುವಂಥ
ಸೊಗಸನು ಎನ್ನಿಂದ ಹೊಗಳಲಿಕ್ಕಳವೆ ॥೬॥

ಗೊತ್ತಿನಿಂದ್ಹೇಳುವೆ ಮತ್ತೆ ಕೇಳರಿ ನೀವು
ನಿತ್ತಿಯೊಳಗಿಟ್ಟಂಥ ವಸ್ತವನು । ಬಿಡ
ದೆತ್ತಿ ಹೇಳುವೆ ಸೂರ್ಯಪಾನವನು । ಅದ
ರೊತ್ತಿಲಿಟ್ಟ ಹೂವ ತಿರುಪವನು । ಕಂಡು
ಮತ್ತೆ ಸಂತೋಷದಿ ಕ್ಯಾದಿಗಿಗಳನಿಟ್ಟು
ಚಿತ್ತಜ ಪಿಡಿದಿಹ ಕತ್ತಿಯಂತಿಹಳೂ ॥೭॥

ಕಾಲ ಕಡಗ ರುಳಿ ಗೆಜ್ಜೆ ಪೈಜಣ ಲುಲ್ಲು
ಮೇಲಾದ ಪಾಡಗವಿಟ್ಟಿಹಳು । ನಾರಿ
ಕಾಲುಂಗ್ರ ಒಲಿದಿಟ್ಟ ಪಿಲ್ಲಿಗಳು । ಮೇಲೆ
ಪೊಲ ಮೆಂಟಕಿ ಮಿಂಚು ಮೀನಗಳು । ಬಾಲೆ
ಎಲ್ಲ ವಸ್ತುವ ತಾ ಮೆಲ್ಲಡಿಯೊಳಗಿಟ್ಟು
ನಿಲ್ಲದೆ ಬರುತಿರೆ ನಲ್ಲೆ ತಾ ಮುದದಿ ॥೮॥

ಸತ್ಯಭಾಮೆಯಂತೆ ಮತ್ತೆ ಮೂಗಿನೊಳಿಹ
ಮುತ್ತಿನ ಮುಕುರದ ಭರ್ತಿಯಲಿ । ಕೊಳ್ಗೆ
ಮತ್ತೆ ಕಟ್ಟಿಹ ಗುದಾಳಿಯಲಿ । ಅದ
ರೊತ್ತಿಲಿರುವ ಗೆಜ್ಜಿ ಟಕ್ಕಿಯಲಿ । ಬಿಡ
ದೆತ್ತಲಿ ಗೊತ್ತಲಿ ಸುತ್ತಲಿ ಗೆಳತೇರ
ಮೊತ್ತದಿ ಜೆತ್ತಿಲಿ ಬಂದಾಳ್ಬಜಾರಕೆ ॥೯॥

ಮಡಿದಿಯು ತಾ ಬಲು ಬಡಿವಾರದಲಿ ಒಳ್ಳೆ
ನಡುವಿಗೆ ಡಾಬವನಿಟ್ಟಿಹಳು । ಮತ್ತೆ
ಬಿಡದೆ ಹೇಳುವೆ ಕೇಳು ಬೆರಳಿನೊಳು । ಹರ
ಳ್ಜಡಿತವಾಗಿರುವಂಥ ಉಂಗ್ರಗಳು । ಇಂಥ
ಸೆಡಗರದಿಂ ಪ್ಯಾಟಿ ನಡುಮಧ್ಯದೊಳು ನಾರಿ
ಒಡನೆ ತಾ ಬರುವಂಥ ಖಡಕೇಟು ಪೇಳ್ವೆ ॥೧೦॥

ಸೊಕ್ಕಿದಾನೆಯ ಪರಿಯಂದದಿ ಸುದತಿಯು
ಗಕ್ಕನೆ ಓಣಿಯೋಳ್ಬರುತಿರಲು । ಜನ
ಕಕ್ಕುಲತೆಯಲಿ ಬೆನ್ಹತ್ತಿರಲು । ತಮ್ಮ



ರೊಕ್ಕದ ಪರವೆಯ ಮರೆತಿರಲು । ನಾರಿ
ಕಕ್ಕಸ ಕುಚವನು ಚಕ್ರವಕ್ಕಿಯು ಕಂಡು
ಧಿಕ್ಕಾರವಾಗುತ ಹೊಕ್ಕವಾ ಕೊಳವ ॥೧೧॥

ನುಡಿಗೇಳಿ ಗಿಳಿಗಳು ಗಿಡಗಳ ಸೇರ್ಯಾವು
ಕುಡಿಹುಬ್ಬು ಕಾಣುತ ಮನ್ಮಥನು । ಕೈಯೊ
ಳ್ಪಿಡಿದದನು ಬೆನ್ನೋಳಿರಿಸಿದನು । ಆಕಿ
ಅಡಿಗಾವಿ ನಾಚಿ ಹರಿತು ಮಡನ । ಬಲು
ಬಡನಡುವನು ಕಂಡು ನಾಚುತ ಸಿಂಹವು
ಬಿಡದಿರಲಾರದೆ ಅಡವಿಯ ಸೇರಿತು ॥೧೨॥

ಉಡುರಾಜಮುಖಿಯಳ ಧ್ವನಿಗೇಳಿ ಕೋಗಿಲೆ
ಬಿಡದೆ ಹಾರಿದುದು ವನಂತರಕೆ । ಸಖಿ
ಮುಡಿ ಕಂಡು ನವಿಲು ಕಾನಾಂತರಕೆ । ಬಾಲೆ
ಜಡಿಗೆ ನಾಚುತಲಿ ಸರ್ಪನು ಹುತ್ತಕೆ । ಇಂಥ
ಕಡು ಚೆಲ್ವಮಡದಿಯ ತೊಡಿತೋಳ ಕಾಣುತ
ಬಿಡದೆ ಬಾಡುತ ಬಾಳಿವನ ಶಿರಬಾಗೆ ॥೧೩॥

ದಂತವ ಕಂಡು ದಾಳಿಂಬರ ನಾಚುತ
ಚಿಂತೆಯಿಂದಲಿ ಬಾಯ ಬಿಟ್ಟಿಹುದು । ಮುಖ
ಕಾಂತಿಗೆ ಚಂದ್ರ ಕಪ್ಪಾಗಿಹುದು । ಭೃಂಗ
ಕುಂತಳ ಕಂಡು  ಕಮಲದೊಳಿಹುದು । ಇಂಥ
ಪಂಥದ ನಾರಿಯ ಪ್ರಾಂತದೊಳಗೆ ಕಾಣೆ
ನೆಂತೆನುತಲಿ ಕುಕ್ಕುಟನು ಬೇಗ ಕೂಗೆ ॥೧೪॥

ವಲ್ಲಭೆ ನೋಟಕ್ಕೆ ಹುಲ್ಲೆಯು ನಾಚುತ
ನಿಲ್ಲದೆ ಸೇರೀತಡವಿಯೊಳು । ಜಾಜಿ
ಮಲ್ಲಿಗಿ ಮುಡಿಯೊಳಗಿಟ್ಟಿಹಳು । ಕೊಳ್ಗೆ
ನಿಲ್ಲದೆ ಶಂಖ ಸಮುದ್ರದೊಳು । ಬಿದ್ದು
ನಲ್ಲೆಯ ಗಲ್ಲಕ್ಕೆ ನಾಚುತ ಕನ್ನಡಿ
ನಿಲ್ಲದೆ ಹೋಗಿ ತಾ ಮರದೊಳು ಸೇರೆ ॥೧೫॥

ರಾಜವದನೆ ಬಲು ಮೋಜಿನಿಂದಲಿ ಪ್ಯಾಟಿ
ಬಾಜಾರದೊಳು ತಾನು ಬರುತಿರಲು । ಒಳ್ಳೆ
ಮೋಜುಗಾರರು ಬೆರಗಾಗಿರಲು । ಮಣಿ
ಸೂಜಿ ಮಾರುವರು ಕನ್ನಡಿ ತೋರಲು । ಇಂಥ
ಸೋಜಿಗವಾದಂಥ ಸುಗುಣಿಯ ಕಾಣುತ
ಈ ಜಗದೊಳಗೆಲ್ಲ ವಿಪರೀತವೆನುತ ॥೧೬॥

ಜಡಜಲೋಚನೆ ಬಲು ಸಡಗರದಿ ಪ್ಯಾಟಿ
ನಡುಮಧ್ಯದಲಿ ಬರುತಿರಲು ಕಂಡು । ಬೇಗ
ಕಡುಜಾಣರುಗಳ ಬಾಯಿ ತವಡುಗೊಂಡು । ಈಕಿ
ಬೆಡಗ ಕಾಣುತ ಬಾಯ ತೆರೆದುಕೊಂಡು । ಇಂಥ
ಕಡುಜವ್ವನಿಯಳ ಕಾಣುತ ಕಂಚಗಾರ
ತಡೆಯದೆ ಭಾಂಡೇದ ಗೊಡವಿಲೆ ಪೋದ ॥೧೭॥

ಪತ್ತಾರ ತಂದು ಮುತ್ತಿನ ವಸ್ತಗಳ
ಒತ್ತಿಯನಿಟ್ಟನು ಧನಿಕರಲಿ । ಅಯ್ಯ
ತತ್ತರಿಸುತ ತನ್ನ ಮನಸಿನಲಿ । ಬೆನ್ನ
ಹತ್ತಿಹ ಗೌಡ ತಾ ಪ್ರೀತಿಯಲಿ । ಅಯ್ಯೊ
ಮತ್ತೆಲ್ಲಿ ಕಾಣೆನೆನುತಲಿ ಬಣಜೀಗ
ಎತ್ತ ಹೇರುದ ಬಿಟ್ಟು ಮತ್ತೋಡಿ ಬಂದ ॥೧೮॥

ಅಷ್ಟರೊಳಗೆ ಮತ್ತೆ ಹೊಟ್ಟೆಯ ಚೀಲವ
ಕಟ್ಟದ ಬಂದನು ಚಿನಿವಾರನು । ಕೈಯ
ಬಿಟ್ಟು ಬಂದನು ಆಗ ಬಳಿಗಾರನು । ಬೇಗ
ತಟ್ಟನೆದ್ದೋಡಿದ ಎಲಿಗಾರನು । ನಾಯಿ
ನ್ಹೆಷ್ಟೂಂತ ಹೇಳಲಿ ಸೆಟ್ಟಿಸಾವ್ಕಾರರು
ಇಟ್ಟ ಲೆಕ್ಕದ ಪೋಹಿ ಬಿಟ್ಟೋಡಿ ಬರಲು ॥೧೯॥

ಬಾಜಾರವಿಡಿದು ಆ ರಾಜವದನೆ ಬಲು
ಮೋಜಿನಿಂದಲಿ ಆಕಿ ಬರುವದನು । ಕಂಡು
ಮೋಜುಗಾರನು ಒಬ್ಬ ತರುಬಿದನು । ನಿಲ್ಲೆ
ಏ ಜಾಣಿ ಎಲ್ಲಿ ಹೋಗುತಿ ಎಂದನು । ನಿನ್ನ
ಮೋಜಿಗೆ ಸಮನಿನ್ನು ಈ ಜಗದೊಳು ಕಾಣೆ
ಸೋಜಿಗವಾದೀತು ಸುಗುಣಿ ಕೇಳೆಂದ ॥೨೦॥

ನಿನ್ನ ನಡಿಗಿ ಮದದಾನೆಯ ಮರಿಯಂತೆ
ನಿನ್ನ ತೋಳು ತಾವರೆಯ ನಾಳದಂತೆ । ನಾರಿ
ನಿನ್ನಧರವು ತೊಂಡಿ ಹಣ್ಣಿನಂತೆ । ಸಖಿ
ನಿನ್ನ ನಾಭಿ ಬಾಳಿಸುಳಿಗಳಂತೆ । ಕೇಳು
ನಿನ್ನ ನಾಸಿಕವು ಸಂಪಿಗಿಯ ಪೋಲ್ವುದು ಆಹ
ಕನ್ನೆ ಶಿರೋಮಣಿ ಎನ್ನುತ ನುಡಿದಾ ॥೨೧॥

ಹುಡುಗತನದ ಬುದ್ಧಿ ಪರಮಡದೇರ
ನಡು ಪ್ಯಾಟಿಯೊಳು ಬಂದು ತರುಬುವರೆ । ಇಂಥ
ಬೆಡಗಿನ ಬುದ್ಧಿಯ ಕಲಿಯುವರೆ । ಎನ್ನ



ಒಡಹುಟ್ಟಿದಣ್ಣಗಳ್ ಕೇಳಿದರೆ । ನಿನ್ನ
ಕಡಿದು ಹಾಕುವರೆನ್ನ ಗೊಡವೆಯ ಬಿಡು ನಿನ್ನ
ಮಡದಿಯೊಳಗೆ ಸುಖಬಡು ಹೋಗೊ ಮೂಢಾ ॥೨೨॥

ಒಡಹುಟ್ಟಿದಣ್ಣನ ಗೊಡವಿಯ ಬಿಡು ನಿನ್ನ
ಬೆಡಗಿಗೆ ನಾ ಮರುಳಾದೆನಲ್ಲೆ । ನನ್ನ
ಮಡದಿಯ ಸಾಕ್ಷಿಯ ಹೇಳೋದಲ್ಲೆ । ಮತ್ತೆ
ಕೊಡುವೆನು ನೀನು ಬೇಡಿದ್ದ ನಲ್ಲೆ । ಇಂಥ
ಸೆಡವಿನ ಮಾತನು ಆಡಿದಾಕ್ಷಣ ನಿನ್ನ
ಕಡೆಗಿನ್ನು ಬಿಟ್ಟರೆ ಹುಡುಗ ನಾನಲ್ಲಾ ॥೨೩॥

ದುಷ್ಟತನದಿ ಬಂದು ಎಟ್ಟಿ ಮಾತುಗಳ ನೀ
ಇಷ್ಟು ಪರಿಯಲಿಂದ ಆಡುವರೆ । ನಿನ್ನ
ಗೆಷ್ಟು ಹೇಳಲಿ ಎನ್ನ ಪತಿ ಕಂಡರೆ । ನಿನ್ನ
ರಟ್ಟೆಯೆರಡ ಮರಕೇರ‍್ಗಟ್ಟರೆ । ಮತ್ತೆ
ಪಟ್ಟು ಗುಡುಮ ನಿನ್ನ ಹೊಟ್ಟೆ ಹೊರೆವುದ
ಬಿಟ್ಟು ಬರುವರೇನೊ ಭ್ರಷ್ಟ ಮನುಜನೆ ॥೨೪॥

ಪುರುಷನಂಜಿಕಿಯ ಯಾರಿಗ್ಹೇಳುತಿ ನಿನ್ನ
ಸ್ಥಿರ ಮನಸಿನ ಬಿಂಕ ಬಿಡಬಾರದೆ । ಬೇಗ
ಹುರಪದಿಂದ್ಹೆಗಲೊಳ್ಕೈಯ ಇಡಬಾರದೆ । ಈಗ
ಸರಸದಿ ಚುಂಬನ ಕೊಡಬಾರದೆ । ಎಂದು
ಪರಿಪರಿಯಿಂದಲಿ ಸುಗುಣ ತಾ ಪೇಳಲು
ಪರಮ ಸಂತೋಷದಿ ಹೇಳಿದಳು ಕಥೆಯ ॥೨೫॥

ಸರಸದಿಂ ರಾಮನ ಚಿರಂಜೀವಿ ಲಕ್ಷ್ಮಣ
ವರ ಸೀತೆ ಸಹಿತದಿಂದ ವನದೊಳಗೆ । ಇರು
ತಿರಲು ರಾವಣ ಬಂದು ರಥದೊಳಗೆ । ಸೀತೆ
ಪುರಕೆ ಕೊಂಡೊಯಿದಾನು ಹಿತದೊಳಗೆ । ಅತಿ
ಭರದಿಂದೆ ರಾಮನು ರಾವಣನ ಕೊಂದ
ಪರಿಯನು ಅರಿಯೇನೊ ಮರಳ ಮಾನವನೆ ॥೨೬॥

ಈ ಕ್ಷಿತಿಯೊಳು ಇಂಥ ವಿಪರೀತ ಕಥೆಯ
ಸಾಕ್ಷಿಯ ನೀನು ಯಾರಿಗೆ ಹೇಳುವೆ । ಧರೆ
ರಕ್ಷಿಪ ಕೃಷ್ಣನು ಸುಖದೊಳಿಲ್ಲವೆ । ಇಂಥ
ಮೋಕ್ಷದ ಹಾದಿಯ ಬಿಡು ನಿನ್ನ ಹವಣೆಯ
ನೀಕ್ಷಿಸುವೆನು ಕಮಲಾಕ್ಷಿ ಕೇಳೆಂದನು ॥೨೭॥

ಕನ್ನೆಯಳಾದಂಥ ಚನ್ನೆ ದ್ರೌಪದಿಯನು
ಮುನ್ನ ಕೀಚಕ ಹಿಡಿದೆಳೆಯಲಾಗಿ । ಆಕೆ
ಸೊನ್ನಿಯಿಂ ಭೀಮನೊಳ್ ಪೇಳಲಾಗಿ । ಅವ
ಉನ್ನತ್ತ ಕೋಪವ ತಾಳಲಾಗಿ । ಬೇಗ
ಅನ್ಯೋನ್ಯದಿಂ ಪೋಗಿ ಕೀಚಕನನು ಕೊಂದ
ಇನ್ನಾರು ಅರಿಯರೊ ಕುನ್ನಿ ಮನುಜನೆ ॥೨೮॥

ಯಾರ್ಗೊಡವೆ ಯಾತಕೆ ಮಾರ್ಗೊಡುವೆನು ಮನ
ಸೂರ್ಗೊಡು ಬೇಗ ನೀ ಪ್ರೀತಿಯಲಿ । ದ್ರವ್ಯ
ತೋರ್ಗೊಡುವೆನು ನಿನಗೆ ಹರುಷದಲಿ । ನಿನ್ನ
ಜಾರ್ಗುಣವನು ಕಂಡು ಮರುಳಿನಲಿ । ಬಂದು
ಕೂರ್ಗೊಡೆ ಎನ್ನಂಥ ವಾಗಿಯ ಪುರುಷನ
ದೋರ್ಗಣ್ಣಿಲಿ ನೋಡ್ವರೆ ನಿರ್ಗುಣಮಣಿಯೆ ॥೨೯॥

ಮೂಳ್ಮನುಜನೆ ಕೇಳು ಜಾಳ್ಮಾತಿನವರನು
ಬಾಳ್ಮಂದಿ ಬಲ್ಲೆ ನಿನ್ನಂಥವರ । ಬಾಳ
ಸುಳ್ಮಾತ ಹೇಳುವಂಥವರ । ದ್ರವ್ಯ
ಹಾಳ್ಮಾಡಿ ಸನ್ಯಾಸ್ಯಾಗುವಂಥವರ । ಇಂಥ
ಪೊಳ್ಮಾತು ನಮ್ಮಲ್ಲಿ ಎಳ್ಮಾತ್ರ ತರವಲ್ಲ
ಸುಳ್ಮಾತ ಬಿಡು ಎಂದು ಗೀಳ್ಮಾಡಿ ನುಡಿಯೆ ॥೩೦॥

ಇಂತು ಪರಿಯಲಿಂದೆ ಕಾಂತೆ ನುಡಿವರೇನೆ
ಭ್ರಾಂತಿ ಎನಗೆ ಹತ್ತಿ ನಿಂತಿಹೆನೆ । ನಿನ್ನ
ತಂತ್ರಕ್ಕೆ ನಾ ಮರುಳಾಗಿಹೆನೆ । ಅತಿ
ಚಿಂತೆ ಮಾಡ್ವದು ಕರುಣಿಲ್ಲವೇನೆ । ಗುಣ
ವಂತೆ ಬಾರೆಲೆ ರತ್ನದ್ವಾರ ಕೊಡುವೆಯೆಂದು
ಕಾಂತೆಗೆ ಸ್ಮರರೂಪನುಸುರಲಾಕ್ಷಣಕೆ ॥೩೧॥

ನಲ್ಲನಾಡಿದ ನುಡಿ ಕೇಳುತ್ತ ಸಖಿಯಳು
ನಿಲ್ಲದೆ ತಾ ಮುಗುಳ್ನಗೆಯಿಂದಲಿ । ಆಗ
ಚೆಲ್ವಾಲಿಂಗನ ಮಾಡುತಲಿ । ಬಾಳ
ಉಲ್ಹಾಸದಿಂದೆ ಕೈ ಹಿಡಿವುತಲಿ । ಮತ್ತೆ
ಸೊಲ್ಲಿನಿಂದಲಿ ತಾನು ಪುರುಷನ ಕರಕೊಂಡು
ವಲ್ಲಭೆ ಬಂದಾಳು ಮಲ್ಲಿಗಿಗಂಧೀ ॥೩೨॥

ಮನಸಿಜ ರೂಪನ ಮನಸಿಗೆ ಕರೆದು ತಂದು
ವಿನಯದಿ ಗಂಧೆಣ್ಣೆ ಪೂಸಿದಳು । ಮತ್ತೆ



ಮನದಣಿವಂತೆ ನೀರ್ಜಳಿಸಿದಳು । ಅಲ್ಲಿಂ–
ದನುನಯದಿಂದಲಿ ಇಳಿಸಿದಳು । ಅತಿ
ಉನ್ನತವಾದಂಥ ರನ್ನದ ಮಣಿಯೊಳು
ಚೆನ್ನಿಗ ಪುರುಷನು ಚೆನ್ನಾಗಿ ಕುಳಿತ ॥೩೩॥

ಕೆನೆವಾಲು ಸಕ್ಕರೆ ಘೃತಗಳು ಇನಿತೆಲ್ಲ
ಘನ ಹರಿವಾಣದೊಳಿರಿಸಿದಳು । ಮೇಲೆ
ಗೊನೆಯ ಬಾಳಿಯ ಹಣ್ಣ ತಿನಿಸಿದಳು । ಬಾಳ
ಮನ ಹರುಷದಲಿ ಉಪಚರಿಸಿದಳು । ಬೇಗ
ಇನಿಯಗೆ ಕರ್ಪುರ ವಿಳ್ಯೆವ ಕೊಟ್ಟಂತೆ
ಮನುಮಥನಾಟಕ್ಕೆ ಅನುವಿನಿಂ ನಡೆಯೆ ॥೩೪॥

ಕೋಲ್ಮಿಂಚಿನಂತೆ ಕಣ್ತಿರುವುವ ಸುದತೆಯು
ಬಲ್ಮುಗುಳ್ನಗೆಗಳ ನಗುವುತಲಿ । ಮತ್ತೆ
ಮೇಲ್ಮಂದಿರಕೆ ತಾ ನಡೆವುತಲಿ । ಸುವಿ–
ಶಾಲ್ಮಂಚದಲ್ಲಿ ಕುಳ್ಳಿರಿಸುತಲಿ । ಬೇಗ
ಸೋಲ್ಮುಡಿ ಸಖಿ ಬಾಳ ಜಾಲ್ಮಾತುಗಳನಾಡಿ
ಲೋಲ್ಮಾರನಾಟ ಕುಶಾಲ್ಮಾಡುವದಕೆ ॥೩೫॥

ಸ್ಮರರೂಪ ಪುರುಷಗೆ ಇರದೆ ಮನ್ಮಥನಾಗ
ಗುರಿ ಮಾಡಿ ಬಾಣದಿಂದ್ಹೊಡಿಯಲಾಗ । ಚಮ
ತ್ಕರದಿ ಕುಚಗಳನ್ನು ಪಿಡಿಯಲಾಗ । ಬಾಳ
ಭರದಿ ಚೆಂದುಟಿಯನ್ನು ಕಡಿಯಲಾಗ । ಮತ್ತೆ
ಪರಿಪರಿ ಬಂಧದಿಂ ಉಪರತಿ ಸಮರತಿ
ಸುರಿಕವೆಂಬುವ ಶರಧಿಯೊಳ್ಮುಳುಗಿರಲು ॥೩೬॥

ಹರುಷದಿ ಕೇಳಿರಿ ಸ್ಮರಶರವದನೆಯು
ಪುರುಷನ ಮನೆಗತ್ತ ಕಳುಹಿದಳು । ಮೇಲೆ
ಗುರುಪಯೋಧರಿಯು ಮಾಡಿದ ಕಥೆಗಳ । ಒಳ್ಳೆ
ಧರೆಯೊಳಗಧಿಕ ಉಜ್ಜಯನಿ ಪುರದೊಳು । ಅಲ್ಲಿ
ಮೆರೆವ ಮರುಳಸಿದ್ಧೇಶನ ವರದಿ ಪೇಳ್ದೆನು
ಹರುಷದಿ ಪುರುಷರು ಹರಸಿ ಮಾಡುವದು. ॥೩೭॥

* * *

## ೧೩. ಬಾಣಾಸುರ

ದೇವರ ದೇವನೆ ದೇವ ಮಹೇಶನೆ
ಪಾವನರೂಪನೆ ಪುರಹರನೆ । ರತಿ
ದೇವಿಯ ಭಾವನ ಶಿರಧರನೆ । ಗಿರಿ
ದೇವನ ಸುತೆಯ ಮೋಹದ ವರನೆ । ದೃಢ
ಭಾವದಿ ಭಜಿಸುವ ಭಕ್ತರಿಚ್ಚಿತ ಫಲ
ಮೀವನ ಶ್ರೀಗುರು ದೇವನ ಭಜಿಪೆ ॥೧॥

ಜಾಣರು ಲಾಲಿಸಿ ಜಗದೊಳು ಜಲಜಾಕ್ಷ
ಬಾಣಸುರನಿಗಾದ ಸಂಗತಿಯ । ನಾನು
ಕ್ಷೋಣಿಯೊಳುಸುರುವೆನೀ ಕಥೆಯ । ಫಣಿ
ವೇಣಿವಾಣಿಯೆ ಕೊಡು ಸುಮತಿಯ । ವಿದ್ಯೆ
ಶ್ರೇಣಿಗಳರಸ ವಿಘ್ನೇಶನ ಬಲಗೊಂಡು
ಮಾಣದೆ ಪೇಳುವೆ ಮಾತಿಗೆ ತಕ್ಕನಿತ ॥೨॥

ಧರೆಯೊಳು ಶ್ರೋಣಿತಪುರವೆಂಬು ಪಟ್ಟಣ
ದರಸು ಬಾಣಾಸುರನೆಂಬವನು । ಎಲ್ಲ
ದೊರೆಗಳೊಳವನತಿ ಬಲ್ಲಿದನು । ಪುರ
ಹರನ ಪೂಜೆಯ ನಿತ್ಯ ಮಾಡುವನು । ಹೀಂಗ
ಇರುತಿರಲೊಂದಿನ ಹರನಿಗೆರಗಿ ದೇವ
ಕರುಣಿಸು ವೈರಿಯಿಂದೆಂದನಾ ಬಾಣ ॥೩॥

ಈಶನು ಕೇಳಿ ನಗುತ ಬಣಾಸುರನಿಗೆ
ಲೇಸು ಲೇಸೈಯೆನುತಲಿ ಕೊಟ್ಟನು । ರಕ್ಕ
ಸೇಶನ ಮಾತಿಗೊಡಂಬಟ್ಟನು । ಗರ್ವ
ನಾಶ ಮಾಡ್ವುದು ಮನದೊಳಗಿಟ್ಟನು । ಮುಂದೆ
ಭೂಸುರಪಾತಾಳ ಲೋಕದೊಳರಸಿಟ್ಟು
ಉಸುರಿದ ಕೃಷ್ಣನೆಂದು ಸದಾಶಿವನು ॥೪॥

ಈ ಪರಿ ಯತನದೊಳಿರುತಿರೆ ಹರ ಬಾಣ
ನಾ ಪುತ್ರಿ ಉಷೆಯೆಂದೆಂಬುವಳು । ಪ್ರಾಯ
ರೂಪು ಗುಣದಿ ಭರಿತಳಾಗಿಹಳು । ತಕ್ಕ
ಪ್ರಿಯನಿಲ್ಲದೆ ಬಾಳ ಬಯಸುವಳು । ಇಂಥ



ಆಪತ್ತಿನಿಂದ ಚಿತ್ರರೇಖೆಯ ಕರೆಯುತ
ಪೋಪುವ ನಡೆ ಗೌರಿ ಶ್ರೀಪಾದದೆಡೆಗೆ ॥೫॥

ಎಂದು ಈರ್ವರು ಪ್ರೀತಿಲಿಂದ ವನಕೆ ಪೋಗಿ
ಚಂದದಿ ಗೌರಿಯ ಬಲಗೊಂಡರು । ದೃಢ
ದಿಂದಲಿ ಕೈಯ ಮುಗಿದು ನಿಂದರು । ಗಿರಿ
ನಂದನೆ ವರವ ಪಾಲಿಸುಯೆಂದರು । ಕೇಳಿ
ಮಂದಹಾಸದಿ ದೇವಿ ಮೆಚ್ಚಿ ಮಗಳ ಮನ
ದಂದವನರಿದೆನೇಳೆಂದಳಾ ಗೌರಿ ॥೬॥

ತರುಳೆ ಫಾಲ್ಗುಣ ಶುದ್ಧ ವರ ದಶಮಿಯ ದಿನ
ಸುರರಾತ್ರಿಯೊಳು ನಿನ್ನ ಕನಸಿನಲಿ । ಬಂದು
ನೆರೆವನಾ ಪುರುಷನ ಗುರುತಿರಲಿ । ಇನ್ನು
ಇರು ಚಿಂತೆ ಬೇಡ ನೀ ಹರುಷದಲಿ । ಎಂದು
ವರವಿತ್ತು ಕಳುಹಲು ಉಷೆಯು ಸಂತೋಷದಿ
ಸ್ಮರಿಸುತ್ತ ದಿನವನ್ನು ಎಣಿಸುತ್ತಲಿರಲು ॥೭॥

ಸಂದಿ ಹೋಯಿತು ನವ ಮುಂದೆ ದಶಮಿಯ ದಿನ
ಬಂದು ಲೆಕ್ಕವನು ತಾ ನೋಡಿದಳು । ಮುದ
ದಿಂದ ಗೆಳತಿಯೊಳಗಾಡಿದಳು । ಬೇರೆ
ವೊಂದು ಮಂಚದಿ ನಿದ್ರೆ ಮಾಡಿದಳು । ಹೀಂಗ
ಇಂದುವದನೆ ಸ್ವಲ್ಪ ನಿದ್ರೆಯೊಳಿರೆ ಬಂದು
ಕಂದರ್ಪನಂದನ ಚಂದದಿ ಮೆರೆದಾ ॥೮॥

ಸ್ಮರಕಂದ ಸ್ವಪ್ನದಿ ನೆರೆದು ಪೋಗಲ್ಕಿತ್ತ
ತರುಳೆ ಉಷೆಗೆ ಎಚ್ಚರವಾಯಿತು । ಆಕಿ
ವಿರಹಸಂತಾಪ ತೀರದೆ ಹೋಯಿತು । ಕಣ್ಣು
ತೆರೆದು ನೋಡಿದರೆ ಕಾಣಿಸದಾಯಿತು । ಬಹು
ಮರುಗಿ ಬೆರಳನೊಡಮುರಿದು ಮುಂಗಾಣದೆ
ಕರೆದು ಕರೆದು ಕಾಂತನೆಂದಳಲಿದಳು ।೯॥

ಪ್ರದ್ಯುಮ್ನನಂದನ ಇದ್ದಿಲ್ಲದಿರೆ ಕಾಣು
ತೆದ್ದು ಕುಳಿತಳಾಗ ಮಂಚದಲಿ । ಬದಿ
ಲಿದ್ದ ಕಂಬವನು ತಕ್ಕೈಸುತಲಿ । ನಲ್ಲ
ಎದ್ದಿಲ್ಲಿಗ್ಯಾಕ ಬಂದೆಂಬುತಲಿ । ಹುಚ್ಚ
ಬುದ್ಧಿಲಿ ಬಯಲ ಚುಂಬಿಸಿ ಮೋಹಿಸಲು ಉಷೆ
ಬಿದ್ದಳು ಬೇಗೈದ ಬಳ್ಳಿಯಂದದಲಿ ॥೧೦॥

ನಲ್ಲನೆ ನಾ ನಿನ್ನಗಲಿ ಜೀವಿಸಲಾರೆ
ತಲ್ಲಣಗೊಂಬುತೆ ತಾಪದೊಳು । ಕ್ಷಣ
ನಿಲ್ಲದೆ ಬರುವರೆ ಕೋಪದೊಳು । ಭೂಮಿ
ಯಲ್ಲೆ ನಾ ಕಾಣೆನು ರೂಪದೊಳು । ಕುಂದ
ಮಲ್ಲಿಗೆ ಗಂಧೆಯು ಸ್ವಲ್ಪು ಸುಳುವ ಕಂಡು
ಮೆಲ್ಲನೆ ಬಂದಳು ಇಲ್ಲಿಹನೆನುತ ॥೧೧॥

ಮಂದಗಮನೆ ಚಿತ್ರರೇಖೆಯು ಮುಸಕಿಕ್ಕಿ
ಚಂದದಿ ನಿದ್ರೆಯೊಳಿರುತಿಹಳು । ಉಷೆ
ಬಂದು ಮಂಚವ ಹೊಂದಿ ನಿಂದಿಹಳು । ಎನ್ನ
ಸುಂದರನಿವನೆಂದು ಅರಿದವಳು । ಭರ
ದಿಂದಲಿ ಬಿಗಿದಪ್ಪಿ ಮುದ್ದಿಸು ವ್ಯಾಳ್ಯೆದಿ
ಮಂದಗಮನೆಗೆ ಎಚ್ಚರಿಕಾದಿತಾಗ ॥೧೨॥

ಎಚ್ಚತ್ತು ಕುಳಿತು ಈಕೆಯ ನೋಡಿ ಮನದೊಳು
ಅಚ್ಚರಿಯ ಭಾವವ ತಾಳಿದಳು । ಇಂಥ
ಹುಚ್ಚಾಟವ್ಯಾಕೆಂದು ಕೇಳಿದಳು । ಎಲ್ಲ
ಬಿಚ್ಚಿ ನಾಚದೆ ಉಷೆ ಹೇಳಿದಳು । ಬಲು
ಮೆಚ್ಚುದೋರುತ ನಲ್ಲ ಮಾಡದ ಬಗೆಯನು
ಮೆಚ್ಚಗಂಗಳೆಯೊಳು ಉಚ್ಚರಿಸಿದಳು ॥೧೩॥

ಎರಳೆಗಂಗಳೆ ಎನ್ನ ತುರುಬ ಹಿಡಿದು ಮುದ್ದು
ಸುರಿಸುತ ಮಾಲೆಯೊಳು ಉಗರೂರಿದ । ಚಾಪ
ವರೆ ಚೆಂದುಟಿಯ ರಸವ ಪೀರಿದ । ಕೇಳು
ಸುರತದಿ ಸುಗುಣ ಸೊಗಸುದೋರಿದ । ಇಂಥ
ಪುರುಷನ ಮರೆದು ನಾ ಅರಗಳಿಗಿರಲಾರೆ
ಕರೆದು ತಾರೆಂಬುತಲೆರಗಿದಳವಳು ॥೧೪॥

ತಲೆಹಿಡಿದೆತ್ತುತ ತಂದು ಕೊಡುವೆನೆಂದು
ಬಲು ನಂಬುಗೆಯನಿತ್ತು ಅಳಿಯೊಳು । ಅವ್ನ
ನೆಲೆಯಾತಕೆಂದು ಹೇಳಿದಳು । ಉಷೆ
ತಿಳಿಯಲಿಲ್ಲವ್ರು ಹೊತ್ತುಯೆಂದು ಹೇಳಿದಳು । ಮತ್ತೆ
ಲಲನೆ ಧೈರ್ಯದಿ ಸರ್ವಲೋಕದ ಪುರುಷರ
ಚೆಲ್ವಿಕೆಯನು ಚಿತ್ರದಲ್ಲಿ ಬರೆದಳು ॥೧೫॥

ಬರೆದ ಪಟವ ತಂದು ತ್ವರಿತದಿ ಅದರೊಳ
ಗಿರುವವರೆಲ್ಲರನು ತಾ ಸಾರಿದಳು । ಕಾಮ
ತರುಳನ ಗುರುತವ ತೋರಿದಳು । ಕಂಡು



ಹರುಷದಿ ಉಷೆ ಕಳೆಯೇರಿದಳು । ಕರದು
ತರುವಡೆ ಕಳೆರೂಪ ಬರಕೊಂಡು ದ್ವಾರಕೀ
ಪುರಕೆ ಬರಲು ಇತ್ತ ಹರಿಯ ಮೊಮ್ಮಗನು ॥೧೬॥

ಅನಿರುದ್ಧ ನಿನ್ನಿನ ದಿನ ರಾತ್ರಿಯೊಳು ತನ್ನ
ಕನಸಿನೋಳ್ಕೂಡಿದ ಕಾಂತೆಯಳಾ । ನೆನ
ನೆನಸಿ ಚಿಂತಿಸಿ ಬಲು ಭ್ರಾಂತಿಯಳಾ । ಗಿರು
ವನಿತರೊಳ್ಕಂಡನು ನಿಂತವಳಾ । ಯಾರು
ಎನುತ ಕೇಳಲು ಚಿತ್ರರೇಖೆ ಉಷೆಯ ರೂಪ
ವನು ತೋರಲಾಕ್ಷಣ ಮನ್ಮಥಸುತಗೆ ॥೧೭॥

ತರುಣಿರೂಪದ ಪಟ ಕರದೊಳು ಹಿಡಕೊಂಡು
ಹರುಷದಿಂದನಿರುದ್ಧ ನೋಡಿದನು । ಪರಿ
ಪರಿಯ ಮೋಹವನು ತಾ ಮಾಡಿದನು । ಬಲು
ಸರಸದಿಂದವಳ ಕೊಂಡಾಡಿದನು । ಇನ್ನು
ಬರುವೆನು ಕರೆದೊಯ್ಯೊ ಎನಲ್ಚಿತ್ರರೇಖೆಯು
ಭರದಿ ಹೆಗಲೊಳೊ ಹೊತ್ತು ತೆರಳಿದಳವಳು ॥೧೮॥

ಬಂದು ಬೇಗದಿ ಬಾಣನಾತ್ಮಜೆ ಇರುತಿಹ
ಮಂದಿರವನು ಪೊಕ್ಕು ಮಂಚದಲಿ । ಕರ
ತಂದನಿರುದ್ಧನ ಇಳಿಸುತಲಿ । ಇಕೊ
ಬಂದಿಹ ನೋಡು ನೋಡೆಂಬುತಲಿ ಪೇಳಿ
ಮಂದಗಮನೆ ಮಂತ್ರಿಸುತ ಮರೆಯಾಗಲು
ಕಂದರ್ಪ ಕೇಳಿಗ ಒಂದುಗೂಡಿದರು ॥೧೯॥

ಕಾಂತೆಯ ಕೂಡಿನ್ನು ರಮಿಸುತ ಕೆಲದಿನ
ಕಂತುವಿನಾತ್ಮಜನಿರುತಿರಲು । ಪೇಳ್ವೆ
ನಂತ ನಾರದ ಋಷಿ ಬರುತಿರಲು । ಬಲು
ಭ್ರಾಂತಿಯಿಂದವಳಿಗೆ ಮೆಚ್ಚಿರಲು । ಕೇಳಿ
ಸಂತೋಷದಿಂದಲಿ ಬಾಣನು ಇದಿರ್ಗೊಂಡು
ಸಂತುಷ್ಟಿಪಡಿಸಲು ಇಂತೆಂದ ಋಷಿಪ ॥೨೦॥

ಬಾಣನೆ ಕೇಳ್ನಿನ್ನ ಭಾಗ್ಯಕ್ಕೆ ಸರಿಸಮ
ಗಾಣೆನು ನಾನಿನ್ನು ಭೂಮಿಯೊಳು । ಭುಜ
ತ್ರಾಣನಹುದು ಧರೆ ಮೂರರೊಳು । ಒಂದು
ಊಣೆಯ ಮಾತುಂಟು ಕೇಳ್ನಿನ್ನೊಳು । ಫಣಿ

ವೇಣಿ ನಿನ್ನಣುಗೆಯು ಒಬ್ಬ ವಿಟನ ತಂದು
ಜಾಣತನದಿ ಕೂಡಿ ಇರುತಿಹಳೆಂದ ॥೨೧॥

ಎಂದ ಮಾತನು ಕೇಳಿ ಬಾಣನು ಕೋಪದಿ
ಚಂದದಿ ಮಂತ್ರಿಯ ಕರಿಸಿದನು । ಸೋವಿ
ಗೆಂದವನಲ್ಲಿಗೆ ಚರಿಸಿದನು । ನೋಡಿ
ಬಂದು ರೋಷದಿ ಉಚ್ಚರಿಸಿದನು । ಕೇಳಿ
ಮುಂದಿರ್ದ ಮನುಜರಿಗಾಗ ನೇಮಿಸಿ ಬಾಣ
ನಂದನೆ ಮಂದಿರಕಾಗ ಮುತ್ತಿದರು ॥೨೨॥

ದಂಡಿನ ನಾಯಕರಾಗ ಒಳಗೆ ಹೋಗಿ
ಪುಂಡರೀಕಾಕ್ಷಿ ಉಷೆಯ ಕಾಣುತ । ಇಂಥ
ಭಂಡಾಟ ಮಾಡುವರೇ ಎನುತ । ನಿನ್ನ
ಮಿಂಡನ್ಯಾವಲ್ಲಿಹ ತೋರೆನುತ । ಆಗ
ಕಂಡರನಿರುದ್ಧನ ಕೈಯ ಬಿಗಿದು ಕರ
ಕೊಂಡು ಬಂದರು ಕದ್ದ ಕಳ್ಳನ ತೆರದಿ ॥೨೩॥

ಉರಿಯನು ಉಗುಳುತ ಉಗ್ರದಿ ಬಾಣನು
ಸ್ಮರಕಂದನಿಗೆ ಬಾಳ ಕೋಪಿಸಿದ । ಮಂತ್ರಿ
ಶಿರ ಹೊಡಿಸೆಂದು ನಿರೂಪಿಸಿದ । ಆಗ
ಪರಮ ನಾರದ ಕಂಡು ತಾಪಿಸಿದ । ನಿನ್ನ
ತರುಳೆಯ ವರನೀತನಿರಿಸಿ ಕಾರ್ಯವ ಮಾಡು
ಹರಿಯು ಕೇಳಿದರೆ ಹಾವಳಿ ಬಂದಿತೆಂದ ॥೨೪॥

ಬಂದು ನಾರದ ಋಷಿ ಬಾಣನ ಇದಿರೊಳು
ನಿಂದು ಹೇಳಿದ ಹರಿಯ ಪದನು । ಚಲ
ದಿಂದಲಿ ಫಲವಿಲ್ಲ ಬಿಡುಯೆಂದನು । ನಿನ್ನ
ನಂದನೆ ಅವನಿಗೆ ಕೊಡುಯೆಂದನು । ಕೋಪ
ದಿಂದಲಿ ಕರಕರ ಹಲ್ಲು ಕಡಿದು ಬಾಣ
ಎಂದಿಗಾಗುವದಯ್ಯ ಈ ಮಾತು ಮುನಿಪ ॥೨೫॥

ತಿರಿಗಿ ನಾರದ ಹೋಗಿ ಹರಿಗೆಯೆರಗಿ ಬಾಣ
ಸುರನೆಂದ ಮಾತನು ಹೇಳಲಾಗ । ಕೇಳಿ
ನರಹರಿ ಬರೆದ ತನ್ನವರಿಗಾಗ । ಸುಮ್ನ
ಸೆರೆಸೂರಿ ಮಾಡಿರಿ ಪುರವ ಬೇಗ । ಖಂಡ
ಧುರ ಹರಿಸದೆ ಬಾಣಸುರನೊಡಗೂಡಿ ತಾ
ಭರದಿ ಯುದ್ಧವ ಮಾಡುತಿರುವದೇನೆಂಬೆ ॥೨೬॥



ಕಾಣುತ ಶ್ರೀಹರಿ ಕರದಿ ಚಕ್ರವನೆತ್ತಿ
ಬಾಣಸುರನ ಮೇಲೆ ಹೊಯ್ಯಲಾಗ । ಭುಜ
ಶ್ರೇಣಿಯುದುರಿಯೆರಡುಳಿಯೆ ಬೇಗ । ಕಂಡು
ಜಾಣ ನಾರದ ಕೈಯ ಹಿಡಿದನಾಗ । ಬಿಡು
ಕೇಣವ ಬಾಣಗ ಬೀಗತನದ ಮಾಳ್ಪೆ
ಆಣೆ ತಪ್ಪಿರೆ ಈಶನ ಪಾದದಾಣೆಂದ ॥೨೭॥

ನಾರದನಾಡಿದ ಮಾತನಾಲಿಸಿ ಬಾಣ
ಸುರನ ಕರವಾಗ ಮನ್ನಿಸಲು । ತಂದು
ಧೀರ ಮೊಮ್ಮಗನ ಕೈಯಲಿ ಕೊಡಲು । ಬೇಗ
ನೀರಜಾಕ್ಷಿಣಿಯ ಲಗ್ನವ ಮಾಡಲು । ಕೃಷ್ಣ
ದ್ವಾರಕೀಪುರಕ್ಕೈದು ಸಾರ ಸಂತೋಷದಿ
ನಾರಿಯರೊಡಗೂಡಿ ಇರುತಿ......ಕೇಳಿ ॥೨೮॥

ಬಂದದ್ದು ನೋಡುವೆನೆನುತಾಗ ಕಾಮನ
ಕಂದನ ಸೆರೆಯೊಳಗಿರಿಸಿದನು । ತನ್ನ
ಮಂದಿ ಮಕ್ಕಳಿಗೆ ಉಚ್ಚರಿಸಿದನು । ಪೋಪೆ
ನೆಂದು ನಾರದ ಋಷಿ ಚರಿಸಿದನು । ಬೇಗ
ಬಂದು ಶ್ರೀ ಕೃಷ್ಣನ ಮುಂದೆ ಕರವ ಮುಗಿ
ದೆಂದನು ಕೇಳು ಗೋವಿಂದ ಬಿನ್ನಪವ ॥೨೯॥

ಬಲು ದ್ರವ್ಯಮದದಿಂದ ಮಲೆತಿಹ ಬಾಣನ
ನೆಲೆಯನಿನ್ನೇನ ಪೇಳಲಿ ಅವನ । ಸುತೆ
ಗೊಲಿದು ಸಿಕ್ಕಿಹನನಿರುದ್ಧನನ । ಕಟ್ಟಿ
ಕೊಲೆಗೆಳಿಸಿದ ಬಗೆ ಪೇಳಲೇನ । ನಿನ್ನ
ಚಲುವ ಮೊಮ್ಮಗನೆಂದು ಒಲಿದುಸುರುವೆನು
ಚಲದಿದ ಸೆರೆಯೊಳಗಿರಿಸಿಹನೆಂದ ॥೩೦॥

ಎಂದ ಮಾತನು ಕೇಳಿಯೆದ್ದು ಗರ್ಜಿಸಿ ಎನ್ನ
ಕಂದನ ನಂದನನೆಂದರಿದು । ಮುದ
ದಿಂದಲಿ ನಿನ್ನ ಮಾತನು ಜರಿದು । ಕೊಲ್ವೆ
ನೆಂದು ಸೆರೆಯೊಳು ಮುದ್ರೆಯ ಸರಿದು । ಭರ
ದಿಂದಲಿ ಸೆರೆಯೊಳು ಬಂಧಿಸಿದಸುರನ
ಇಂದು ತೋಳಿಳುಹುವೆನೆಂದ ಮುಕ್ಕುಂದ ॥೩೧॥

ಕಾಳಿಯ ಹಿಡಿಸುತ ಕಡು ತವಕದಿ ಬರ
ಹೇಳಿದ ತನ್ನಯ ಚತುರಂಗಕೆ । ಆಗ
ಗೋಳಿಡುತಲಿ ಬಂತು ಸಂಗರಕೆ । ಬಲು
ದಾಳಿ ಮಾಡಿದರು ಬಾಣನ ಪುರಕೆ । ಸಿಕ್ಕ
ಕೋಳನ ಕೊಡದಿರೆ ತೋಳ ಸವರುವೆನೆಂದು
ಹೇಳಿ ತಾ ಕಳುಹಿದ ನಾರದನೊಡನೆ ॥೩೨॥

ಹೋಳಿಯ ಪದದಿಂದೆ
ಹೇಳಿದ ಉಜ್ಜಯನಿ ಪಟ್ಟಣವನು । ಬಿಡ
ದಾಳುವ ಮರುಳಸಿದ್ಧೇಶ್ವರನು । ಪದ
ಬಾಲಕ ಹೇಳಿದ ಕವಿತೆಯನು । ಕೇಳಿ
ಸಂತೋಷದಿಂದಲಿ ವರ್ಣಿಸಿ ಪೇಳಲು
ವ್ಯಾಳಕಂಕಣಧರ ಒಲಿವನು ನಿಮಗೆ ॥೩೩॥

* * *



## ೧೪. ಕೃಷ್ಣಾರ್ಜುನರ ಕಾಳಗ

ಪರಮ ಶ್ರೀ ಗುರುವಿನ ಹರಸಿ ಸ್ಮರಸಿ ಮುಂದೆ
ಸರಸದಿ ಶ್ರೀ ಗಣನಾಥನನ । ವಿಘ್ನ
ಹರಣದಿ ನುತಜನಪ್ರೀಯನನ । ಸರ್ಪ
ಭರಣ ಶೋಭಿತನುಮೆಜಾತನನ । ಇಂದು
ಚರಣಕ್ಕೆರಗಿ ನಮಸ್ಕರಿಸಿ ಬೇಡುವೆ ಮತಿ
ಕರುಣದಿ ಪಾಲಿಪುದೆನಗೆ ಸಂತಸದಿ ॥೧॥

ಭೂರಮ್ಯವಾದಂಥ ಭೂರಲತಪುರ ಸ್ಥಿರ
ಗಾರ ಪುಣ್ಯಸ್ಥರೆಂದೆನಿಸುವರು । ಮಾಕು
ಮಾರನ ಚೆಲ್ವಿಕೆ ಮರೆಸುವರು । ಮತ್ತೆ
ಚಾರಿಸಲ್ ಕುಶಲರಿರುತಿಹರು । ನಾಮ
ಚಾರು ಕೆಂಚೇಂದ್ರನನುಜ ಸ್ಥಿರಸೌಖ್ಯ ಸಂ
ಪೂರದಿಂದಿರುವರು ಮನವಪೇಕ್ಷಿಸಲು ॥೨॥

ನೆರೆದ ಸಭೆಯೊಳಗೆ ಬರೆದಾರು ಕೃಷ್ಣಾರ್ಜು–
ನರ ಕಾಳಗವನಾಗ ಬೇಕೆನುತ । ಮನೋ–
ಹರವಾದ ಕಥೆಯಿದುಯೆಂದೆನುತ । ತಾನು
ಪರಮ ವಿಲಾಸದಿ ಸೂಚಿಸುತ । ಕೇಳಿ
ವಿರಚಿಸಿದೆನು ಘನ ಹರುಷದಿ ಸಾರವ
ಸರಸದಿ ಕವಿಗಾರರೊಲಿದು ಕೇಳುವದು ॥೩॥

ಕ್ಷಿತಿಪತಿ ವರ ಪರೀಕ್ಷಿತನೊಂದು ದಿವಸದೊ
ಳ್ಯತಿಪತಿ ಶುಕಮುನಿಗತಿಶಯದಿ । ಪೂಜಿ
ಸುತಲಿ ವೇದೋಕ್ತದಿಂದತಿನಯದಿ । ನಮಿ
ಸುತಲಿ ಕೇಳಿದ ಭಕ್ತಿಯಿಂ ಭಯದಿ । ಮುಂದೆ
ಕಥೆಯು ಕೃಷ್ಣಾರ್ಜುನರೊಳು ಕಾಳಗ ವಿಪ
ರೀತ ಕಾಂಬುದೆನುತ ಬಿನ್ನೈಸಲಾಕ್ಷಣದಿ ॥೪॥

ಧಾರುಣೀಪತಿ ಪರಿಪಾಲ ಪರೀಕ್ಷಿತ
ಪೂರ ಸಂತಸದಿಂದ ಕೇಳಿದನು । ಪುರ
ದ್ವಾರಕಿಯಲಿ ವಾರಿಜಾಂಬಕನು । ಹದಿ

ನಾರು ಸಾವಿರ ಮಂದಿ ಸ್ತ್ರೀಯರನು । ನಿತ್ಯ
ಮಾರನಾಟದಿ ಸುಖ ಸೂರೆಗೊಡುತ ಕೃಷ್ಣ
ಮೀರಿದುಲ್ಲಾಸದಿಂದಿರಲೊಂದು ದಿವಸ ॥೫॥

ಯಮುನಾತೀರಕೆ ಬಂದು ಯಾದವಪತಿ ಕೃಷ್ಣ
ಗಮಕದಿ ಬಲರಾಮ ಸಹಿತದಲು । ವಿಧಿ
ಕ್ರಮದಿಂದಲಿ ಸ್ನಾನವನು ಗೆಯ್ಯಲು । ನಿಂದು
ಕಮಲಮಿತ್ರನಿಗರ್ಘ್ಯ ಕೊಡುತಿರಲು । ಮತ್ತಾ
ಸಮಯದೊಳೇನೆಂಬೆ ಗಯ ಸತ್ಯಲೋಕಕ್ಕೆ
ಗಮಿಸುತಿರ್ದನು ತೇಜಿಯನೇರಿ ಭರದಿ ॥೬॥

ಗಂಧರ್ವನಾದ ಗಯನ ವಾಜಿ ಜೊಲ್ಲು ಮು–
ಕ್ಕುಂದನ ಹಸ್ತದಿ ಬೀಳುತಿರೆ । ತನ್ನ
ದ್ವಂದ್ವ ಕಮಲಕರ ನೋಡುತಿರೆ । ಎಂಜ–
ಲಂದದಿ ಕೋಪವ ತಾಳುತಿರೆ । ಆಗ
ಮಂದರಧರ ಕೃಷ್ಣಮುನಿದು ಮಾಡಿದ ಭರ–
ದಿಂದಲಿ ಪಂಥವನೇನ ಪೇಳುವೆನು ॥೭॥

ದೇವರೊಳೀ ದಾನವರೊಳು ಮಾನವರು ಮತ್ತಿ–
ನ್ನಾವನೆಂಜಲವಾಗಲೆಂಬುತಲಿ । ವಸು
ದೇವನಾಣೆಂದೆಂಟು ದಿವಸದಲಿ । ಕೊಲ್ವೆ
ಹ್ಯಾವದಿಂದುಳಿದರೆ ಭೂಮಿಯಲಿ । ಮತ್ತೆ
ಭಾವಜರಿಯ ಸಾಕ್ಷಿಯಗ್ನಿ ಕುಂಡದಿ ಬಿದ್ದು
ಜೀವವನಿಡೆನೆಂದ ಜಿದ್ದು ಮಾಡಿದನು ॥೮॥

ಹಲಧರನೆದುರೀಲಿ ಹಾಕಿದ ಪಂಥವ
ಬಲ ಸಹ ಪುರಕಾಗಿ ತಿರುಗುತಲಿ । ಅಷ್ಟ
ರಲಿ ಮತ್ತಂಬರವಾಣಿ ಮರುಗುತಲಿ । ಬಂದು
ಜಲಜಾಕ್ಷನಿಗೆ ಸುದ್ದಿಯರುಹುತಲಿ । ಇಂಥ
ಛಲದಿಂದ ಹೂಣಿಕೆಯನಾಡ್ವರ ಗಯ ಅಂತ್ರ
ದಲಿ ಹಯವೇರಿ ಪೋಗಲು ಬ್ರಹ್ಮನಡಿಗೆ ॥೯॥

ಆ ಸಮಯದಲಿ ವಾಜಿಯ ಜೊಲ್ಲು ಭರದಿಂದ
ಸೂಸಿ ಕರದಿ ಬಂದು ಬಿದ್ದಿತಲ್ಲಾ । ತೊಟ್ಟ
ಭಾಷೆಯ ಬಿಡು ದಯಮಾಡಿದೆಲ್ಲಾ । ಮತ್ತಿ
ನ್ನೇಸು ಪಾಲಿಗೆ ಇದು ನ್ಯಾಯವಲ್ಲಾ । ಎಂದಾ
ಕಾಶವಾಣಿಯ ಮಾತನ್ನಾಲಿಸಿ ಮಾಧವ
ಲೇಸಾದಿತೆಂದು ಮಹರ್ಘಟಕೆ ನೇಮಿಸಿದ ॥೧೦॥



ತಡಿಯದೆ ಯಾದವರೊಡನೆ ಪೇಳಿದ ಗಯ
ನಡಗಿರಲಿನ್ನಾವ ಲೋಕದಲಿ । ಬಿಡ
ದ್ದುಡುಕಿ ತಹುದು ನೀವಿನ್ನೆಂಬುತಲಿ । ಪೇಳಿ
ನಡೆದು ಪೊಕ್ಕನು ಪುರ ತೀವ್ರದಲಿ । ಗದ
ಬಡಸಿಯಂಬರವಾಣಿ ಬಂದು ಗಂಧರ್ವಗೆ
ಬಿಡದೆ ಪೇಳಿದ್ದರಿಯೆಂದ ಪಂಥವನು ॥೧೧॥

ಇತ್ತಲಾಕಾಶವಾಣಿಯ ಮಾತ ಕೇಳುತ
ಮತ್ತೆ ಕುಬೇರಜ ಮನದೊಳಗೆ । ಮರು
ಗುತ್ತ ಬಿದ್ದನು ಆಗ ಧರೆಯೊಳಗೆ । ಹೊರ
ಳುತ್ತ ದುಃಖಿಸುತಲಿ ಹುಡಿಯೊಳಗೆ । ತನು
ಬಿತ್ತಿತು ಭಯದಿ ಗಾಬರಿಗೊಂಡು ಬದಕುವ
ದೆತ್ತಣ ಗತಿಯೆಂದು ಗಯನು ಚಿಂತಿಸಿದ ॥೧೨॥

ಪಾಪವೆಳ್ಳನಿತಿಲ್ಲ ಶಿವಶಿವ ಎನ್ನೊಳು
ಶ್ರೀಪತಿ ವಿವರಿಸಿ ನೋಡದಲಿ । ಅನ್ಯ
ಸ್ಥಾಪಿಸುವರೆ ತನ್ನ ಮನಸಿನಲಿ । ಪಂಥ
ಕೋಪದಿಂದೆಸಗುರೆ ಛಲದಿಂದಲಿ । ಇಂದು
ನಾ ಪರಿಣಾಮಗಾಣುವದಿಲ್ಲೆಂದು ಪ್ರ
ಳಾಪದಿಂ ಲೋಕವ ತಿರುಗಿಂದ್ರನಡಿಗೆ ॥೧೩॥

ಕ್ಷಮಿಸಲಾರದೆ ದುಃಖ ಶ್ರಮಬಡುತಲಿ ಬಂದು
ಅಮರೇಂದ್ರ ಕೇಳೆನ್ನ ಕಷ್ಟವನು । ಮತ್ತೆ
ಯಮುನಾತೀರಕೆ ಬಂದು ಕೃಷ್ಣನನು । ನಿಂದು
ಕಮಲ ಸನ್ಮಿತ್ರನಿಗರ್ಘ್ಯವನು । ಈವ
ಸಮಯ ಕಾಲದಿ ನಾನಂತ್ರಮಾರ್ಗದೊಳಗೆ ಸಂ
ಭ್ರಮದಿಂದೆ ಹಯವೇರಿ ಪೋಗಲೇನೆಂಬೆ ॥೧೪॥

ಆ ಸಮಯದಿಯೆನ್ನ ಲಲಿತ ವಾಜಿಯ ಜೊಲ್ಲು
ಸೂಸಿ ಕೃಷ್ಣನ ಕೈಯೊಳ್ಬಿದ್ದಿತಂತೆ । ಮಹಾ
ರೋಷದಿಂ ಪಂಥದಿ ಕೊಲ್ವನಂತೆ । ಅಗ್ನಿ
ವಾಸವಾಗುವ ದಿನ ಮಿಕ್ಕದಂತೆ । ಎನ್ನ
ಗಾಸರವಿಲ್ಲೆನ್ನ ಪ್ರಾಣ ಕಾಯುವದೆಂದು
ವಾಸವನಡಿಗಳಿಗೆರಗಿ ಪೇಳಿದನು ॥೧೫॥

ಆ ಗಯನಾಡಿದ ನುಡಿಗೇಳಿ ಸುರಪತಿ
ಯಾಗದೆಂದನು ಅಗ್ನಿ ಯಮರಾಜನು । ಮೌನ
ವಾಗಿರೆ ನೈರುತಿ ವರುಣನನು । ಎದ್ದು

ಹೋಗಲು ವಾಯು ಕುಬೇರನನು । ಮುಂದೆ
ಸಾಗೆನ್ನಲೀಶಾನ್ಯನಡಿಯೊಳು ಬಿಟ್ಟು ಗದ್ದ–
ಲಾಗಿರಲಲ್ಲಿಂದ ಬಂದಜನಡಿಗೆ ॥೧೬॥

ತ್ವರಿತದಿಂ ಪೇಳಲು ಬ್ರಹ್ಮನಾಡಿದ ಮುಂದೆ
ಪರಮೇಶನಿಪ್ಪ ಕೈಲಾಸದಲಿ । ಪೋಗೆಂ
ದೊರೆಯಲು ಬಂದನು ಶೀಘ್ರದಲಿ । ಪುರ
ಹರನಿಗೊಂದಿಸಿ ಬಿದ್ದ ಚರಣದಲಿ । ಎನ್ನ
ಪೊರೆಯಯ್ಯ ಜೀವದಾನವ ಕೊಟ್ಟು
ಮುರಹರ ಭರದಿ ಕೊಲ್ಲುವನೆಂದು ಮರಮರುಗಿದನು ॥೧೭॥

ತುಟ್ಟತುದಿಯ ಮರನೇರಿ ವಾನರ ಕೈಯ
ಬಿಟ್ಟಂತೆ ಮಾಡಿದ ಪರಶಿವನು । ಆಗ
ತಟ್ಟಸ್ಯಾಡಲು ಗಯ ನಡುಗಿದನು । ನಾನು
ಕೆಟ್ಟೆನೆನ್ನುತಲಾಗ ಬೆದರಿದನು । ದಯ
ಹುಟ್ಟಿತು ಪಾರ್ವತಿ ನೋಡಿಯಾತಗಭಯ
ಕೊಟ್ಟು ಮನ್ನಿಸಿ ಮತ್ತೆ ನುಡಿದಾಳಾ ಹರಗೆ ॥೧೮॥

ಮಾರಸಂಹರ ಕೇಳು ನಿನ್ನ ಹೊರತು ಸಧ್ಯ
ಮೂರು ಜಗದೊಳಿಲ್ಲ ನೋಡಿದನು । ಗಯ
ಈರೇಳು ಲೋಕವ ತಿರುಗಿದನು । ಮತ್ತಿ
ನ್ನಾರಾರ ಕಾಣನು ಕಾವವರನು । ಸರ್ವ
ಕಾರಣ ಮೂರುತಿ ಕಾವುದೈ ಧನಪಕು
ಮಾರನ ಪ್ರಾಣವನೆಂದಳಾ ಗೌರಿ ॥೧೯॥

ತಿಳಿಯದು ಪಾರ್ವತಿ ನಿನಗೆ ಮುಂದಿನ ಮಾತು
ಇಳೆಯ ಜಾರ ಕೃಷ್ಣನಿಳುಹುವನು । ಮತ್ತೆ
ಬಳರ ಸಂದಣಿಯ ಸಂಹರಿಸುವನು । ಆತ
ನೊಳು ಸಲ್ಲ ಮಾಳ್ಪರೆ ಕಲಹವನು । ಇಂಥ
ಛಲವಿದ್ಯಾತಕೆ ಸುಳ್ಳು ಮಾತಿಗೆ ನೀ ಮನ
ತಿಳಿದಂತೆ ಮಾಡೆಂದು ಶಿವ ಮಾಯವಾದ ॥೨೦॥

ಬಾರೊ ಗಂಧರ್ವಜ ಗಯನೆ ನಿನ್ನಯ ಮಾತು
ಮಾರಾರಿ ಮನಸಿಗೆ ತಾರದಾದ । ಸುಕು
ಮಾರ ನಿನಗೆ ನಿಜದೋರದಾದ । ಸುವಿ
ಚಾರದಿಂದುಕ್ತಿಯ ಸಾರದಾದ । ಶತ
ನೂರು ಪಾಲಿಗೆ ಕಷ್ಟ ಬಂದುದು ಕೇಳ್ಮುಂದೆ
ನಾರದನಲ್ಲಿಗೆ ಪೋಗೆಂದಳುಮೆಯು ॥೨೧॥



ತನಯನೆ ಕೇಳು ನಿನ್ನುಳಿವುದಪಾಯವು
ಅನುವ ಪೇಳುವ ಪೋಗಿನ್ನೆಂಬುತಲಿ । ಗೌರಿ
ಯೆನಲಾಗ ಚರಣಕ್ಕ ನಮಿಸುತಲಿ । ಆಗ
ವಿನಯದಿಂದಪ್ಪಣೆಗೊಳ್ಳುತಲಿ । ಹೊರ
ಟನು ಗಯ ಹಿಮಚಲವನು ಬಿಟ್ಟು ಮಾರ್ಗದಿ
ಮುನಿವರ ನಾರದನರಸುತ ನಡೆದ ॥೨೨॥

ಕಂಬನಿಗರೆವುತ ಕಳವಳಗೊಳ್ಳುತ ।
ಮುಂಬರಿದಳಲುತ ಮನಸಿನೊಳು । ಬಲು
ಹಂಬಲಿಸುತ ಜೀವದಾಸೆಯೊಳು । ಮತ್ತಿ
ನ್ನಂಬರವನು ಬಿಟ್ಟು ಭೂಮಿಯೊಳು । ಗಯ
ನಂಬರ ಸಕಲದೇಶವನೆಲ್ಲ ಹುಡುಕುತ
ಸಂಭ್ರಮದಲಿ ಮುನಿ ಬರ್ಪನೇನೆಂಬೆ ॥೨೩॥

ಸುರಮುನಿ ನಾರದ ಸರಿದನಂಬರದಿಂದೆ
ಕೊರಳೊಳು ತುಳಸಿಯ ಮಾಲೆಯಿಂದ । ಕರ
ಬೆರಳೊಳು ಜಪಮಣಿ ಸರಗಳಿಂದ । ತನು
ಧರಿಸಿಹ ಭಸ್ಮಲೇಪನಗಳಿಂದ । ಹರಿ
ಸ್ಮರಣಹೃದಯನಾಗಿ ಪರಮ ವಿಲಾಸದಿ
ಬರುವಂಥ ಸಮಯದಿ ಕಂಡನಾ ಗಯನು ॥೨೪॥

ಇಂತಪ್ಪ ನಾರದನನು ಕಂಡು ಗಯ ಪದ
ಕ್ರಾಂತನಾಗಲು ಮುನಿ ನೋಡುತಲಿ । ಕರ
ವಾಂತು ಮಸ್ತಕಕಾ ಗಯ ಬೀಸುತಲಿ । ಮುಖ
ಕಾಂತಿಗುಂದಿರಲಾಗ ಕೇಳುತಲಿ । ನಿನ್ನ
ಚಿಂತೆ ಯಾವುದು ಬಹಳ ಬಳಲಿದಿ ಮಗನೆ ನಿ
ನ್ನಂತರಂಗದ ತಾಪ ತಿಳಿಸೆನಗೆಂದ ॥೨೫॥

ತಂದೆ ಚಿತ್ತೈಸು ಮುಕ್ಕುಂದ ಯಮುನೆಜಲ
ಮಿಂದಾಗ ಸೂರ್ಯನಿಗರ್ಘ್ಯವನು । ಕೊಡ
ಲಂದು ಬ್ರಹ್ಮನ ವರ ಸಖಿಗೆ ನಾನು । ನಲು–
ವಿಂದ ವಾಜಿಯನೇರಿ ಪೋಗುವನು । ಕರ
ದ್ವಂದ್ವದಿ ಕುದುರೆಯ ಜೊಲ್ಲು ಬೀಳಲು ಕಡು
ನೊಂದು ನಂದನನಂದ ಶಪಥ ಮಾಡಿದನು ॥೨೬॥

ಅತ್ಯಂತ ಕೋಪದಿಂದೆಂಟು ದಿವಸದೊಳು
ಕುತ್ತಿಗೆ ಕೊಯ್ವೆನೆಂದಾಡಿದನು । ದಿನ
ಮತ್ತೆ ಮೀರಲು ಅಗ್ನಿ ಬೀಳುವನು । ಛಲ

ವೆತ್ತಿದ ಸುದ್ದಿಯ ಕೇಳಿದೆನು । ಭಯ
ಹತ್ತಿ ನಾ ಸುತ್ತ ಲೋಕವನೆಲ್ಲ ಸುತ್ತಿ ಬ್ಯಾ–
ಸತ್ತು ಬಳಲಿ ಬಂದೆನಿದ್ರಾನಿದ್ದೆಡೆಗೆ । ॥೨೭॥

ಅಷ್ಟದಿಕ್ಪಾಲಕರು ಕೃಷ್ಣನೆನ್ನಲು ಗದ
ಗುಟ್ಟಿ ನಡುಗಿದರು ಕೇಳಿದನು । ಪರ
ಮೇಷ್ಟಿ ಶಿವನ ಮುಂದೆ ದೂರೆಂದನು । ಕೈಯ
ಬಿಟ್ಟು ಪೋದನು ಅಂಥಾ ಪರಶಿವನು । ದಯ
ಹುಟ್ಟಿ ಪಾರ್ವತಿ ದೇವಿ ಕರುಣದಿಂದಲಿ ನಿನ್ನ
ಬಟ್ಟೆದೋರಿದರೀಗ ಬಂದೆ ನಾನನಲು ॥೨೮॥

ಅಕ್ಕಟ ಮುನಿರಾಯ ದಿಕ್ಕಿಲ್ಲಯೆನಗತಿ
ದುಕ್ಕದಿ ಮುಂದಿನ ಯುಕ್ತಿಯನು । ಎನ್ನ
ಮಿಕ್ಕಿತೆನ್ನಲು ಮುನಿ ಪೇಳಿದನು । ಮೊರೆ
ಹೊಕ್ಕರೆ ಕಾಯ್ವನು ಫಲ್ಗುಣನು । ಮತ್ತೆ
ಹೆಕ್ಕಳವರಾರಿಲ್ಲ ಧರೆಯೊಳು ತಿಳಿ ನಿನ್ನ
ರಕ್ಷಿಪನೆಂದು ಪೋಗೆನ್ನಲಾ ಗಯನು ॥೨೯॥

ಪಾರ್ಥನೆಂಬವನಾರು ತಿಳಿಯದಿನ್ನಾತನ
ವಾರ್ತೆಯ ಪೇಳು ನೀನೆಂದೆನುತ । ಪುರು
ಷಾರ್ಥಮಾಗಲಿ ನಿನ್ನ ನುಡಿಯೆಂಬುತ । ಎನ್ನ
ವ್ಯರ್ಥದಿ ನೀ ಕೊಲ್ಲಬ್ಯಾಡೆನುತ । ಎಲೋ
ಸ್ವಾರ್ಥದ ಮಾತಲ್ಲ ಸಂದೇಹವ್ಯಾತಕೆ ನಿ–
ರರ್ಥ ಮಾಡುವದಿಲ್ಲ ಕೇಳೆಂದ ಮುನಿಪ ॥೩೦॥

ಕುರುಪತಿಯೊಡನೊಂದು ಜೂಜಾಡಿ ಪಾಂಡವ
ರಿರದೆ ಸೋಲಲು ಕುಂಭಜಾದಿಗಳು । ಅಂಗ
ಪುರವರನು ಬಿಡಿಸಿ ಕಾಂತಾರದೊಳು । ಮ
ತ್ತೊರುಷ ಹನ್ನೆರಡೊನವಾಸದೊಳು । ತಂದು
ತರುಣಿ ಸಹಿತಲೊಂದು ಅಜ್ಞಾತವಾಸದಿಂ
ದಿರುವರು ಕಾಮ್ಯಕಾವನದಿ ಕೇಳೆಂದ ॥೩೧॥

ಬಂದು ಪಾಂಡುವರಲ್ಲಡವಿಯೊಳ್ ಮತ್ತೂ
ನ್ನೊಂದು ವತ್ಸರವಾಯ್ತು ಪೋಗೆಂದನು । ಪಾರ್ಥ
ಇಂದುಧರನ ಕೂಡ ಯುದ್ಧವನು । ಮಾಡಿ
ಒಂದು ಬಾಣವನಂದು ಪಡೆದಿಹನು । ಕೇಳು
ಇಂದಿಗೆ ಇದರಿಲ್ಲ ಈರೇಳು ಲೋಕದೊಳಿಂದು ಇ
ನ್ನೊಂದು ಯುಕ್ತಿಯ ಪೇಳ್ವೆನೆಂದ ॥೩೨॥



ಪೋದಾಕ್ಷಣವೆ ಪಾರ್ಥನಡಿಯ ಪಿಡಿದು ಮುನ್ನ
ನೀ ದುಃಖದಲಿ ಪ್ರಾಣ ದಾನವನು । ಬೇಡು–
ತಾ ದಯದಿಂದಲಿ ಹೇಳುವನು । ಕೇಳಿ
ದಾದರೆ ನೀ ಸುಮ್ಮನಿರುಯೆಂದನು । ಧರ್ಮ
ಭೂಧವನಡಿಯಾಣೆಯಿತ್ತಡೆ ಮಾತಾಡು
ಆದ ವೃತ್ತಾಂತವ ಮೇಲೆ ಪೇಳೆಂದ ॥೩೩॥

ಮುನಿವರನಡಿಗಳಿಗೆರಗಿ ಗಯನು ಮತ್ತೆ
ವಿನಯದಿಂದಪ್ಪಣೆಗೊಳ್ಳುತಲಿ । ನಡೆ
ದನು ಕಾಮ್ಯಕವನ ಹುಡುಕುತಲಿ । ಪಾರ್ಥ
ನನು ಕಂಡು ಪಾದವ ಪಿಡಿಯುತಲಿ । ತನ್ನ
ತನುವನೀಡಾಡಿ ತಾತನೆಯೆನಗೊದಗಿದ
ಘನ ಭಯವನು ಪರಿಹರಿಸು ನೀನೆನಲು ॥೩೪॥

ನೋಡಿದನರ್ಜುನನೀ ಗಯನಿರವನು
ಕಾಡಿನೊಳಗೆ ಬಂದದ್ದೇನೆನುತ । ಮುಖ
ಬಾಡಿ ಬಳಲಿ ದೇಹ ಬೆಂಡಾಗುತ । ಮತ್ತೆ
ಕೋಡಿವರಿದು ಜಲ ಕಣ್ಣಿಲೆ ತಾ । ಮಾತ
ನಾಡು ಮಗನೆ ಮನ ಕರಗಿ ಮುರುಗಿತೆನ್ನ
ಕೂಡ ಸಂದೇಹವು ಬ್ಯಾಡ ನೀಯೆನಲು ॥೩೫॥

ಏನು ಪೇಳಲಿ ಜೀಯ ದೇಹಿಯೆಂಬುತ
ಪ್ರಾಣದಾನ ಬೇಡುವೆ ಈಯಬೇಕೆನುತ । ಸಾವ
ಧಾನದಿ ನರನ ಕೀರ್ತನೆಗೈಯುತಾ । ಸಣ್ಣ
ಸೂನುಯೆಂಬುತ ಕರುಣದಿ ನೋಡುತ । ನಿನ್ನ
ಹಾನಿಯಾವುದು ಪರಿಹರಿಸುವೆ ಧರ್ಮಜ
ಭೂನಾಥನಾಣೆಂದು ಸಟೆಯಲ್ಲವೆನುತ ॥೩೬॥

ಮೇರು ಮಸ್ತಕದೊಳು ಬೀಳಲಿ ವಾರಿಧಿ
ಮೇರೆದಪ್ಪಲು ಒಮ್ಮೆ ಸುರರೊಳಗೆ । ಎನ್ನ
ಮೀರುವರಾರುಂಟು ರಣದೊಳಗೆ । ಚಂದ್ರ
ಮಾ ರವಿ ಪಶ್ಚಿಮದಿಸೆಯೊಳಗೆ । ಮೂಡಿ
ತೋರುವರೊಮ್ಮೆಂದ ಭಾಷೆಗೆ ಕುಂದಿಲ್ಲ
ಮಾರಾರಿ ಪದದಾಣೆ ಸತ್ಯ ಹೇಳೆಂದ ॥೩೭॥

ಅಂಜದೆ ಪೇಳ್ವೆ ಧನಂಜಯ ಕೇಳು ಆ
ಕಂಜಲೋಚನನರ್ಘ್ಯಕಾಲದಲಿ । ಅಜ
ರಂಜಿಪ ಸಭೆಗೆ ನಾ ತವಕದಲಿ । ಪೋಪೆ

ಮಂಜುಳವಾ ಜೊಲ್ಲು ಬೀಳುತಲಿ । ನೋಡಿ
ಯೆಂಜಲೆನ್ನುತ ಕೋಪ ತಾಳಿ ಶ್ರೀ ಕೃಷ್ಣನು
ಅಂಜಿಸಿ ಪಂಥವ ಮಾಡ್ದನೇನೆಂಬೆ ॥೩೮॥

ಕಂಜಾಕ್ಷ ದಿನ ಎಂಟರೊಳು ಕೊಲ್ಲದಿರಲು ಧ
ನಂಜಯವಾಸ ನಿಶ್ಚೈಸಿದನು । ಗುಲ
ಗಂಜಿಯಷ್ಟಿಲ್ಲೆನ್ನ ಪಾಪವನು । ಗಿಳಿ
ಪಂಜರ ಮುರಿದಂತೆ ಮಾಡಿದನು । ಸವಿ
ಪಂಜರ ನೀಯೆನ್ನ ರಕ್ಷಿಪುದೆನುತ ಧ–
ನಂಜಯನಿಗೆ ಮಗುಳೆರಗಿದ ಗಯನು ॥೩೯॥

ಧ್ಯಾನಿಸಿ ಕೇಳ್ವಾಕ್ಷಣವೆ ಪಾರ್ಥ ಶಿವಶಿವ
ಸೂನುವಿಗೆ ಮನ ಕರಗಿತಲ್ಲಾ । ಅಯ್ಯೊ
ನಾನಿತ್ತೆ ಮುಂದಾಗಿ ಭಾಷೆಯಲ್ಲಾ । ಸದ್ಯ
ಹಾನಿ ತಂದನು ಮೋಸವಾಯಿತಲ್ಲಾ । ಇದು
ಏನಾಯಿತಕ್ಕಟ ಈ ಪಾಪಿ ಗಂಧರ್ವಜ
ತಾನೆತ್ತಲಿಂ ಬಂದನೆಂದರ್ಜುನನು ॥೪೦॥

ದುಷ್ಟ ಗಯನ ಕಂಡು ದೂರಾಗಲಿಲ್ಲವು
ಕೃಷ್ಣನೊಡನೆ ಯುದ್ಧವೆಸಗಿದರೆ । ಕಾರ್ಯ
ಕೆಟ್ಟು ಪೋಪುದು ಮುಂದೆ ನೋಡಿದರೆ । ಈಗ
ಕೊಟ್ಟ ಭಾಷೆಗೆ ನಾನು ತಪ್ಪಿದರೆ । ಇದು
ಸೃಷ್ಟಿಯೊಳಗೆ ಬಲು ಭ್ರಷ್ಟತ್ವ ಬಂದುದು
ದೃಷ್ಟವೇನಾಗುವದೆಂದಳಲಿದನು ॥೪೧॥

ಈ ಪರಿ ಚಿಂತೆಯೊಳಿರೆ ಪಾರ್ಥ ಧರ್ಮಜ
ಭೂಪ ತಾನಿನಿತೆಲ್ಲ ನೋಡಿದನು । ಗಯ
ನಾ ಪೂರ್ವ ವೃತ್ತಾಂತ ಕೇಳಿದನು । ಅಯ್ಯೊ
ಪಾಪಿ ಕೌರವನಿಂದ ಅಡವಿಯನು । ಸೇರಿ
ಶ್ರೀಪತಿ ಪುಣ್ಯದಿಂದಿರ್ದೆವೆಂದರೆ ವಿಧಿ
ಈ ಪರಿ ಮಾಡಿತೇ ಶಿವ ಶಿವಾಯೆಂದ ॥೪೨॥

ಹುಲಿಗಂಜಿ ಹೋಗಿ ತಾ ಹುತ್ತವ ಹೊಕ್ಕರೆ
ಒಳಗಿನ ಸರ್ಪಗಾಹುತಿಯಂದದಿ । ಘೃತ
ಕೊಳುತಿರೆ ದೇಹವ ಸುಡುವಂದದಿ । ಮತ್ತೆ
ಜಲ ತಂದು ಜೇನಿನೊಳ್ ಬಿಟ್ಟಂದದಿ । ಇಂದು
ಜಲಜಾಕ್ಷನೊಳು ಛಲ ಹಿಡಿದು ಕಾದಲು ಸರ್ವ
ಕೆಲಸ ಕಾರ್ಯ ಕೆಟ್ಟಿತೆಂದ ಧರ್ಮಜನು ॥೪೩॥



ಘಾತವಾಯಿತು ತಮ್ಮ ಈ ತರುಳಗೆ ಮುನ್ನ
ಮಾತು ಕೊಟ್ಟುದದು ಬ್ಯಾಗಡಿಯ ತಂದು । ಸ್ವರ್ಣ
ನೂತನದಸ್ತ್ರವಾಗದು ಇಂದು । ಎಂಬ
ರೀತಿಯಾಯಿತು ಹಿಂದೆ ಸಭೆಯೊಳೊಂದು । ದ್ರೌಪ
ದಾ ತರುಳೆಯ ಮಾನ ಪೋಗಲಾ ಸಮಯದಿ
ತಾ ತವಕದಿ ಕಾದನೊಡನೆ ಕಾಳಗವೆ ॥೪೪॥

ತಾಸು ಹನ್ನೊಂದು ಆಗಿರಲಾಗ ಬಂದು ದು
ರ್ವಾಸ ಭಿಕ್ಷವ ಬೇಡೆ ತವಕದಲಿ । ಇದು
ಮೋಸವಾದುದು ಎಂದಾ ಸಮಯದಲಿ । ಬಂದು
ಗ್ರಾಸವ ಸಲಹಿದ ಮಮತೆಯಲಿ । ಇಂಥ
ವಾಸುದೇವನ ಕೂಡ ಒಲುಮೆಯ ಪಂಥವು
ಲೇಸವೇಯೆಂದೆಮಜಾತ ಚಿಂತಿಸಿದ ॥೪೫॥

ಎಂದಿಗಾದರು ಕುಂದು ಕೊರತೆ ನೋವುಗಳನು
ಬಂದರೆ ತಾ ನೊಂದುಕೊಂಬುವನು । ದಯ
ದಿಂದೆಮ್ಮನೆಲ್ಲರ ಸಲಹುವನು । ತಮ್ಮ
ತಂದಿ ಈ ಗತಿ ಕನಿಷ್ಠನು । ಅಯ್ಯೊ
ನಿಂದಕ ಗಯನಿಂದೆ ಬಂದುದೆಂಬುತ ಯಮ
ನಂದನ ಮೂರ್ಛೆಯಿಂ ಬಿದ್ದುರುಳಿದನು ॥೪೬॥

ತೆರೆಯದೆ ಕಣ್ಣು ಸೂರ್ಗರೆವುತ ಸುಣ್ಣದ
ಗಿರಿಯಾಬ್ಧಿಯೊಳಗಿಟ್ಟ ಪರಿಯಂದದಿ । ಚಿಂತಾ
ತುರನಾಗಿ ರಾಜ ಮೈಮರೆವುತಲಿ ಇಂಥ
ಪರಿಯ ಕಾಣುತ ಭೀಮ ತ್ವರಿತದಲಿ । ಬಂದು
ಅರಸನ ಪಿಡಿದೆತ್ತಿ ಬಂದ ವಿಪತ್ತಿಗೆ
ಇರಬೇಕು ಧೈರ್ಯವೆಂದ ಮರುತಜನು ॥೪೭॥

ಆಗಲಾ ಧರ್ಮರಾಯಗೆ ಉಪಚರಿಸಲು
ತಾಗಣ್ಣು ತೆರೆದಾಗ ನೋಡಿದನು । ಭೀಮ
ಆಗೆಂದ ಪಾರ್ಥನ ಪಂಥವನು । ಕೆಟ್ಟು
ಹೋಹದು ಬೀಗನಾ ಭಿಡೆಯವನು । ನೋಡ
ದಾಗದಾಗಲಿ ಅಪಕೀರ್ತಿ ಬಾಹದು ಮುಂದಿ
ನ್ನೀ ಗಯನಂ ಬಿಡಲಾಗದಿನ್ನೆಂದ ॥೪೮॥

ಭೂನಾಥ ಕೇಳಯ್ಯಾ ಭೀಮನಾಡಲು ಮತ್ತೆ
ತಾನೆದ್ದು ತವಕದಿ ಫಲ್ಗುಣನು । ಇದ
ಕೇನ ಪೇಳಿದಡೇನು ಮುಂದಿದನು । ದೈವ

ಧೀನ ಬಂದುದಕೆ ಉಪಾಯವೇನು । ದೊಡ್ಡ
ಕಾನನಕೆ ಗಯನೆಬ ಮಾರಿಯು ಬಂದು
ದೇನಾದರಾಗಲಿಯೆಂದನರ್ಜುನನು ॥೪೯॥

ಆರು ಅರಿಯದಂತೆ ಘೋರಕಾಂತಾರದಿ
ಮೂರು ಸಂಜಿಲೆ ಜೀವದಾನವನು । ಬೇಡಿ
ಪಾರಾಗಿ ಗೆದ್ದ ಗಂಧರ್ವಜನು । ಬಂದ
ಮಾರಿಗೆ ಕುರಿಯಾಹಾರವನು । ಕೊಟ್ಟ
ಈ ರೀತಿ ಇಂದೀಗ ಗುರಿಯಾದೆ ಬರ್ಪುದು
ಬಾರದೆ ಬಿಡುವದೆಯೆದ ಫಲ್ಗುಣನು ॥೫೦॥

ಮುರಹರನಂಜಿಕೆ ಯಾರಿಗೆನುತ ಬಿಡೆಂ
ದುರವಣಿಸುತ ಕಾಲಭೈರವನು । ಬಂದ
ಪರಿಯಂತರ್ಭಟಿಸಿ ಧನಂಜಯನು । ಕೃಷ್ಣ
ಬರಲು ಸಮ್ಮುಖಕೊಮ್ಮೆ ನೋಡುವೆನು । ಎಂದು
ತರುಳ ಗಂಧರ್ವಜಗಭಯ ಪಾಲಿಸಿ ತನ್ನೊ
ಳಿರಿಸಿಕೊಳ್ಳಲು ಇತ್ತಲಾದುದೇನೆಂಬೆ ॥೫೧॥

ಪೊಡವಿಪ ಕೇಳ್ಳೆ ಯಾದವ ಸೇನೆಯಿ
ನ್ನಡವಿಯಂ ದಶದೇಶ ದೇಶಗಳ । ಗುಂಪು
ಗಿಡದ ಮರೆಯು ಹಳ್ಳಕೊಳ್ಳಗಳ । ಮತ್ತೆ
ಪೊಡೆಯುತ ಕೆರೆ ಹಾಳುಭಾವಿಗಳ । ಎಲ್ಲ
ಹುಡುಕಲು ಗಯನೆಲ್ಲಿ ಕಾಣದಳಲಿ ದೇಹ
ಬಡವಾಗಿ ಬಂದುದು ಬಲವನೇನೆಂಬೆ ॥೫೨॥

ಯತಿಪತಿ ನಾರದನಿತರೊಳು ದ್ವಾರಕ
ವತಿಗೆ ಬರಲು ಕೃಷ್ಣ ಕಾಣುತಲಿ । ಆಗ
ಅತಿಶಯದಿಂದಿದಿರ್ಗೊಂಬುತಲಿ । ನವ
ರತುನಪೀಠದಿ ಮೂರ್ತಗೊಳಿಸುತಲಿ । ಗಂಧ
ಕ್ಷತೆ ಪುಷ್ಪಜಲ ಬಹುವಿಧದಿ ಮುದದಿ ಧೂಪಾ
ರತಿಯಿಂದೆ ಪೂಜಿಸಿಯೆರಗಿದ ಹರಿಯು ॥೫೩॥

ವಂದನೆಗೈದರವಿಂದನಾಭನ ಮುಖ
ದಂದವ ನೋಡಿದ ನಾರದನು । ಕೃಷ್ಣ
ಯೆಂದಿನಂತಿಲ್ಲೊದನಾಬ್ಜವನು । ಬಾಡಿ
ಕಂದಿಹುದ್ಯಾಕೆನೆ ಪೇಳೆಂದನು । ಮುನಿ
ಯೆಂದ ಮಾತಿಗೆ ಇಂದಿರೇಶ ಪೇಳಿದನಾಗ
ಗಂಧರ್ವ ಗಯನ ವೃತ್ತಾಂತವೆಲ್ಲವನು ॥೫೪॥



ಖೂಳ ಗಯನನಪರಾಧಕ್ಕೆ ನಿಲ್ಲದೀ ।
ರೇಳು ಲೋಕವನೆಲ್ಲ ನೋಡಿದೆವು । ದೇಶ
ದಾಳಿವರಿದು ಬಿಡದ್ದುಡುಕಿದೆವು । ಇಲ್ಲೆ
ಭಾಳಾಕ್ಷ ಬಂದಂತೆ ಆಯ್ತು ತಾವು । ನೀವು
ಬಾಳ ಸಂಚಾರಿಕರಿರುವ ಠಾವಿಗೆ ಮತ್ತೆ
ಹೇಳಿಕೊಟ್ಟರೆ ಲೇಸುವಾಗುದಿನ್ನೆಂದ ॥೫೫॥

ಉಳಿದರೆ ಉಳಿಸು ನೀನುಳಿಸದಿರ್ದಡೆ ಎನ್ನ
ನಳಿಸು ಇರ್ದಡೆ ನಿನ್ನ ಮನಸೆನುತ । ಮತ್ತೆ
ಬಳಸಿ ತಾವರಿಯರಿಂದುವರೆನುತ । ಸರ್ವ
ತಿಳಿದಾತನಿಗೆ ಪೇಳ್ವುದೇನೆನುತ ಒಡ
ಲೊಳಗೆ ದಾವಾಗ್ನಿ ಹತ್ತಿದೆ ನಾಳಿನ್ನೊಂದಿನ
ದೊಳು ಸರಿ ಮೀರಲುಪಾಯವೇನೆಂದ ॥೫೬॥

ಹೇಳಲಾರೆನು ಹೇಳದುಳಿದೆನಾದರೆ ಮನ
ತಾಳದು ತವಕದಿ ಮಾಡಲೇನು । ಕಂಡು
ಹೇಳದಿರ್ದಡೆ ಮೋಸವೆಂಬೆ ನೀನು । ಕಂಡ
ದ್ಧೇಳಲು ಕೊಂಡೆಂಬೆ ಜಗಳವನು । ಈಗ
ಹೇಳಿದರೀ ಗಯನೆಂಬವಗಸುವನು
ನಾಳಿಗುಳಿವದೆಂತೊ ಎಂದ ನಾರದನು ॥೫೭॥

ಹಸಿವಿಗೆಂಬುತ ಹಣ್ಣತರಲು ಪೋಗಿರ್ದನಾ
ಯಶವಂತ ವನದೊಳಾ ಸಮಯದಲಿ । ಬಂದು
ಒಸುರುವ ಕಣ್ಣೀರ ಸುರಿಸುತಲಿ । ತನ್ನ
ಪೆಸರು ಪೇಳಿದ ಗಯನೆಂಬುತಲಿ । ಸಣ್ಣ
ಹಸುಳ ಕೇಳಿದ ನೋಡು ಪಾಂಡವನೊಳು ಪಾರ್ಥ
ಅಸಮಯ ಕಲಿಯಿರ್ಪ ವನವಾವುದೆಂದ ॥೫೮॥

ಅವರಿರ್ಪ ಕಾಮ್ಯಕ ವನವನು ಕೇಳುತ
ತವಕದಿಂ ಕಂಡಾಗಲರ್ಜುನನು । ಕೀರ್ತ
ನವ ಮಾಡೆ ಭಾಷೆಯ ಕೊಟ್ಟವನು । ಬಂದ
ಬವರ ನೋಡುವೆನೆಂಬುತಾ ಗಯನು । ಬಿಡ
ದವನ ತನ್ನಲ್ಲಿಟ್ಟುಕೊಂಡಿ ದಿಟ ಕಾಣಿ
ಸುವದೆಂದು ಮುನಿವರ ಕೇಳವನಿಪನೆ ॥೫೯॥

ಉರಿವ ಕಿಚ್ಚಿಗೆ ಘೃತವೆರೆದಂತೆ ಮುನಿವರ
ವೊರೆಯಲಾಕ್ಷಣ ಕೇಳಿ ಮುರಹರನು । ನಿಲ್ಲ
ದುರಿದೆದ್ದು ತಾ ಕಾಲಭೈರವನು । ಅವ

ತರಸಿದನೆಂಬಂತೆ ತೋರಿದನು । ಕಿಡಿ
ಗರೆದು ಪಾಂಡವರೆಮ್ಮ ಮ್ಯಾಲೆ ವೈರತ್ವವ
ಧರಿಸಿದರೈ ಬಲರಾಮ ನೋಡೆಂದ ॥೬೦॥

ಜಡಜಾಕ್ಷಿ ಕೇಳಯ್ಯ ಕೌರವೇಶಗೆ ಮುನ್ನ
ಕೊಡಿಸೆಂದು ಪೇಳ್ದ ಸೌಭದ್ರಿಯನು । ಕುಲ
ಗೇಡಕ ಕುಹಕ ನೀಚ ಪಾರ್ಥನನು । ಕೇಡು
ಕೊಡುವನೆಂಬುದ ನಾನು ತಿಳಿದಿದ್ದೆನು । ಸುಡು
ಸುಡು ಇಂಥ ಬೀಗತನವನೆಂದು ಬಲರಾಮ
ನುಡಿದು ಜರಿದನಾಗ ಮುರಹರನೊಡನೆ ॥೬೧॥

ಕಡುವೈರಿ ಮುಂದೆಡಹಿದ ತೆರನಾಯಿತು
ಹಿಡಿದ ಕೋಪವನಾಗ ಸೈರಿಸುತ । ಎನ್ನ
ಒಡಹುಟ್ಟಿದಾಕೆಯ ಕಳಹಿಸುತ । ಅವ
ರೊಡಲನ್ನಗುಣ ತಿಳುಹುವೆನೆನುತ । ಆಗ
ಕಡು ತವಕದಿ ತಂಗಿ ಕರೆದು ಸೌಭದ್ರಿಗೆ
ಬಿಡದೆ ಹೇಳಿದನಾಗ ಕೃಷ್ಣರಾಯನು ॥೬೨॥

ತಂಗಿ ಬಾರವ್ವ ಎನ್ನಯ ನೇಮವ್ರತಗಳ
ಭಂಗ ಮಾಡಿದ ಗಯ ನೀಚನನ । ಅದ
ರಿಂಗಿತ ತಿಳಿಯದೆಯಭವನ । ಕೊಟ್ಟು
ಬೆಂಗಡ ಕೊಳ್ಳುರೆ ತಾನವನ । ಇಂಥ
ಸಂಗತಿ ಬ್ಯಾಡೆಂದು ಗಂಡಗೆ ಬುದ್ಧಿ ಪ್ರ
ಸಂಗಿಸಿ ಬಾರೆಂದು ಪೇಳ್ದ ಶ್ರೀಕೃಷ್ಣ ॥೬೩॥

ಅಣ್ಣನ ಮಾತಿಗೆ ಅತಿ ಬೇಗ ಸೌಭದ್ರಿ
ಹಣ್ಣಿಸದಿರು ಛಲ ನೀನೆನುತ। ಇಂಥ
ಸಣ್ಣ ಮಾತಿಗೆ ಫಲವೇನೆನುತ । ಎನ್ನ
ಬಣ್ಣದೋಲೆಯ ಕಾಯಬೇಕೆನುತ । ಮೃಗ
ಗಣ್ಣಳಗ್ರಜಗೂಡುತಿರಲು ಆ ಸಮಯದಿ
ಕಣ್ಣಾರೆ ಕಂಡು ಕೇಳಿದಳು ರುಕ್ಮಿಣಿಯು ॥೬೪॥

ಕೇಳಿದಾಗಲು ಮತ್ತೆ ರುಕ್ಮಿಣಿಯಳು ಕೋಪ
ತಾಳದಾಡಿದಳಾಗ ಸೌಭದ್ರಿಗೆ । ಕೆಟ್ಟ
ಖೂಳ ನಿಂದಕನ ಗಯನ ಮಾತಿಗೆ । ಛಲ
ತಾಳಬಹುದೇ ನಿಮ್ಮ ಬಾಳುವೆಗೆ । ಬಿಡ
ದಾಳಾಗಿ ಕಾಯ್ದಂಥ ಉಪಕಾರ ತೀರಿತಿ–
ನ್ನೇಳು ನೀನಿರ ಸಲ್ಲವೆಂದಳತ್ತಿಗಿಗೆ ॥೬೫॥



ರೋಷದಿ ರುಕ್ಮಿಣಿಯೆಂದಳು ಹದಿನಾರು
ಸಾಸಿರ ಸ್ತ್ರೀಯರ ವಾಲಿಯನು । ಸರ್ವ
ಭೂಷಣ ಹೋದರೆ ನಿನಗಿದನು । ಬಹಳ
ಲೇಸವಾಗುವದ್ಯಾಕೆ ಹೇಳೆಂದನು । ಅಗ್ನಿ
ವಾಸವಾಗುವ ನಮ್ಮ ಗಂಡನೆಂಬುವ ಚಿಂತೆ
ಕಾಸಿನಷ್ಟಿಲ್ಲವು ಕಂಡೆ ಕಾಮಿನಿಯೇ ॥೬೬॥

ವನವಾಸ ವಲ್ಲಭರಿಗೆ ಬಂತು ನೀ ನಮ್ಮ
ಮನೆಯೊಳು ಚೊಕ್ಕ ಭೋಜನವನುಂಡು । ನೀನು
ನೆನಿಯದಾದಿಯಲ್ಲ ಮರೆತುಕೊಂಡು । ದಿಟ್ಟ
ತನದಿಂದೆ ಹೊಟ್ಟೆಯ ಹೊರೆದುಕೊಂಡು । ಪೋಪ
ವನಿತಿಗಿನ್ಯಾಕಿಷ್ಟು ಮಾತೆಂದು ಸೌಭದ್ರಿ
ಯನು ಜರಿಯುತ್ತಲಾಡಿದಳು ರುಕ್ಮಿಣಿಯು ॥೬೭॥

ದಿಟ್ಟ ರುಕ್ಮಿಣಿ ನಿನ್ನ ಹುಟ್ಟುಬಲ್ಲೆನು ಒಡ
ಹುಟ್ಟಿದಣ್ಣನ ಕೈಯ ಕಟ್ಟಲಿಲ್ಲೆ । ಆಗೊ
ತ್ತಟ್ಟೆಯ ಮೀಸೆಯ ತೆಗೆಸಲಿಲ್ಲೆ । ನಿನ
ಗೆಷ್ಟು ಮಾನವು ಬಂತು ನೋಡಲಿಲ್ಲೆ । ಅಣ್ಣ
ಕೃಷ್ಣರಾಯಗೆ ನಾನು ತಂದಿದ್ದೇನೆನುತ ಘೋ
ಳಿಟ್ಟಳುತಿರಲು ಸೌಭದ್ರಿಯಾಕ್ಷಣದಿ ॥೬೮॥

ತರುಣಿ ರುಕ್ಮಿಣಿಗಾಗ ಹರಿಯು ಕೋಪಿಸಿ ತಂಗಿ
ಕರೆದು ಮನ್ನಿಸಿ ಮತ್ತೆ ಪೇಳಿದನು । ನಿನ್ನ
ಪುರುಷನಲ್ಲಿಹ ಖೂಳ ಗಂಧರ್ವನು । ಬಿಟ್ಟು
ಹೊರಡಿಸುವಂಥ ಉಪಾಯವನು । ಮಾಡೆಂ
ದೊರೆದು ಸೌಭದ್ರಿಯ ಕಳುಹಲಾಕ್ಷಣ ತನ್ನ
ತರುಳನ ಒಡಗೂಡಿ ತೆರಳಿದಳ್ವನಕೆ ॥೬೯॥

ಕಂದಭಿಮನ್ಯುವಿನೊಡಗೂಡಿ ಸೌಭದ್ರಿ
ಬಂದಳು ಕಾಮ್ಯಕವನದೊಳಗೆ । ಮುದ
ದಿಂದಲಿ ದ್ರೌಪದಿ ಮನದೊಳಗೆ । ನಯ
ದಿಂದ ಪಿಡಿದುದಾಲಿಂಗನದೊಳಗೆ । ಕರ
ತಂದು ಕೂಡ್ರಿಸಿ ಉಪಚರಿಸಲಾ ಸಮಯದಿ
ಬಂದರು ಭೀಮ ಧರ್ಮಜ ಪಾರ್ಥರಿವರು ॥೭೦॥

ತರುಳಸಹಿತ ಬಂದ ಪರಿಯೇನೆನುತ ಕೇಳ
ಲಿರುವ ಗಯನ ಮುಖ ನೋಡಿದಳು । ದುಃಖಾ
ತುರದಿಂದ ವೃತ್ತಾಂತ ಪೇಳಿದಳು । ಸುಳ್ಳೆ

ಪುರುಷಾರ್ಥವಿಲ್ಲ ಈ ಭೂಮಿಯೊಳು । ನಮ್ಮ
ಪೊರೆವ ಶ್ರೀಕೃಷ್ಣನಿವನ ಕೊಲ್ಲದಿರೆ ನಾಳೆ
ಉರಿವ ಕಿಚ್ಚಿಗೆ ದೇಹ ಕೊಡುವೆ ನೋಡೆನಲು ॥೭೧॥

ಹೇ ರಮಣನೆ ಎನ್ನ ಮಾತನಾಲಿಸಿ ಕೇಳು
ಮಾರಮಣನೆಮ್ಮಯ ಕಡೆಗೆ ಸಾರ್ಥ । ಪ್ರತಿ
ಪೂರವಾಗಿರ್ದುದು ಪುಸಿಯೆ ಪಾರ್ಥ । ಈ ಕು
ಬೇರನ ಕುವರನ ಹಿಡಿದು ವ್ಯರ್ಥ । ಕಾಂತ
ಈ ರೀತಿ ಇರಲಿದರೊಳು ವೈರ ಬ್ಯಾಡೆಂದು
ಪೋರ ಗಯನ ಬಿಟ್ಟು ಕಳುಹು ನೀನೆನಲು ॥೭೨॥

ನಾರಿಯಳಾಡಿದ ಮಾಡಿಗೆ ಧರ್ಮಜ
ಘೋರ ಚಿಂತಿಯನಾಗ ತಾಳಿದನು । ಈ ಕು
ಮಾರಗೆ ಕೊಟ್ಟಂಥ ಭಾಷೆಯನು । ಮತ್ತೆ
ಮೀರುವದಾಯ್ತು ಇಂದಿಗೆಯೆಂದನು । ಪಾರ್ಥ
ಮಾರುತಿ ಸಹದೇವ ದ್ರೌಪತಿ ಹಲವು ಪ್ರ
ಕಾರದಿಂದ್ಯೋಚಿಸುತಿರಲಭಿಮನ್ಯು ॥೭೩॥

ತಾತ ಬಿಡುವರೇನೋ ಹಿಡಿದ ಪಂಥವ ಮುನ್ನ
ಮಾತು ಸತ್ಯದಿ ನೀನು ಕೊಟ್ಟ ಮೇಲೆ । ಲೋಕ
ಖ್ಯಾತಪಕೀರ್ತಿಯು ಬಿಟ್ಟ ಮೇಲೆ । ಬಿಡು
ಈ ತಾಯಿ ಮಾತೇನಗ್ರಜನ ಮೇಲೆ । ಮಾಯೆ
ಪ್ರೀತಿಯಿಂದಾಡ್ವಳು ಆಗುದಾಗಲಿಯೆಂದು
ಮಾತುಳ ಕೃಷ್ಣನ್ನ ನೋಳ್ಪೆ ನಾನೆಂದ ॥೭೪॥

ಕಿತ್ತು ದ್ವಾರಾವತೀಪುರ ಶರಧಿಯೊಳಿಂದು
ಒತ್ತಿಡುವೆನು ಒಂದು ನಿಮಿಷದಲಿ । ಸರ್ವ
ಅತ್ತೇರನೆಲ್ಲ ಘೋಳಿಡಿಸುತಲಿ । ಪುರು
ಷೋತ್ತಮನಿರವನು ಕೆಡಿಸದಲಿ । ಬಿಡೆ
ಕೃತ್ತಿವಾಸನ ಕಡೆಗಾಲದಂದದಿ ಘರ್ಜಿ
ಸುತ್ತಲಿ ರೌದ್ರದಿ ನುಡಿದನಭಿಮನ್ಯು ॥೭೫॥

ಸುತನೆಂದ ಮಾತ ಕೇಳುತ ಪಾರ್ಥ ತನ್ನಯ
ಸತಿಗೆ ಪೇಳಿದ ಮಗನ್ವಚನವನು । ರಾಮ
ಪತಿ ಬಲಗೂಡಿ ಬರಲು ಗಯನ । ಕೊಡ
ದತಿ ಯುದ್ಧಮಾಡುವೆ ಕೇಳಿದನ । ಹೋಗಿ
ಹಿತದಿ ನಿಮ್ಮಣ್ಣಗೆ ಪೇಳು ಹೋಗೆನಲಾಗ
ಅತಿ ನೊಂದು ಮನದೊಳು ತಿರುಗಿ ಸೌಭದ್ರೆ ॥೭೬॥



ಇಂದಿಗೆ ಕಾರ್ಯ ಕೆಟ್ಟಿತು ಎಂದು ಸೌಭದ್ರೆ
ಬಂದಳು ದ್ವಾರಕಾನಗರದೊಳು । ಅರ
ವಿಂದನಾಭನಿಗೆ ವೃತ್ತಂತಗಳು । ನಯ
ದಿಂದಲಿ ಅಣ್ಣಗೆ ಪೇಳಿದಳು । ದಯ
ದಿಂದ ಛಲವ ಬಿಟ್ಟು ಪಾಂಡವರನು ಸಲ
ಹೆಂದು ಪೇಳಲು ಖತಿಗೊಂಡನಾ ಕೃಷ್ಣ ॥೭೭॥

ಭರದಿಂದ ವಾಲಿಯೆ ಬರೆದಾಗ ಕಳುಹಿದ
ಚರನ ಪಾಂಡವರಿರುಸನ್ನಿಧಿಗೆ । ತಾವೊ
ತ್ತರದಿಂದ ಪತ್ರವ ಧರ್ಮಜಗೆ । ಕೊಟ್ಟು
ತ್ವರಿತದಿಂದುತ್ತರವೇನೆಮಗೆ । ನೀವು
ದುರುಳರು ದುಷ್ಟರು ಸ್ವಾಮಿದ್ರೋಹಿಗಳು ನೀ
ಚರು ಕುಂತಿ ಕುವರರು ಎಂದನಾ ದೂತ ॥೭೮॥

ಕಳುಹಿರಿ ಗಯನಟ್ಟಿ ಒಳಿತಾಯಿತು ಮುಂದೆ
ಇಳೆಯೊಳು ಕೆಡುವಿರಿನ್ನೆಂಬುತಲಿ । ಕೇಳಿ
ಫಲ್ಗುಣ ಕೋಪದಿಂದೇಳುತಲಿ । ಆಗ
ಕಲಿ ಭೀಮ ಗದೆಯ ತಕ್ಕೊಳ್ಳುತಲಿ । ಬಹಳ
ಸಲಿಗಿಯೆಂತುಂಟೊ ಕಳ್ಳದೂತನಾಡುವನೆಷ್ಟು
ಕೊಲುವೆವಿವನ ಎಂದರಾ ಕ್ಷಣದಿ ॥೭೯॥

ಆಗ ಧರ್ಮಜನು ಸಂಧಾನದ ದಾರುಕ
ನೀಗ ಇವನ ಗೊಡವೇನೆನುತ । ತಂದ
ಕಾಗದ ಕೊರಳಿಗೆ ಕಟ್ಟಿಸುತ । ಮತ್ತೆ
ಮೂಗಿಗೆ ಸುಣ್ಣವ ಹಚ್ಚಿಸುತ । ಎಲೊ
ಈ ಗಯನಿಂದಿಗೆ ಬಿಡುವವರಲ್ಲ ನೀ
ಹೋಗೆಂದು ದೂಡಲು ಬಂದ ದ್ವಾರಕಕೆ ॥೮೦॥

ಏ ಕಮಲಾಕ್ಷನೆ ಏನು ಪೇಳಲಿ ಜೀಯ
ನೀ ಕೊಟ್ಟ ಪತ್ರವ ಕೊರಳಿನಲಿ । ಬಿಡ
ದೇ ಕಟ್ಟಿ ಕರಗಳ ಬಿಗಿಯುತಲಿ । ನೋಡಿ
ತಾ ಕಳುಹುವರೆ ಸುಣ್ಣ ಹಚ್ಚುತಲಿ । ಸಾಕು
ಸಾಕಯ್ಯ ನಿನ್ನ ಸೇವೆಯನೆಂದು ದಾರು
ಶೋಕದಿಂ ಪೇಳಲು ಕೇಳ್ದ ಶ್ರೀಕೃಷ್ಣ ॥೮೧॥

ಬಲರಾಮನನುಜನು ಬಲು ಕೋಪ ತಾಳುತ
ಬಲ ಸಹಿತೆದ್ದರು ಶೀಘ್ರದಲಿ । ಮುಂಬಿ
ನಲಿ ಬರ್ಪ ಮದಕರಿ ಕುದುರೆಯಲಿ । ರಥ

ಕಲಿ ಸುಭಟರು ವೀರ ಬೊಬ್ಬೆಯಲಿ । ಚತು
ರ್ಬಲ ವಾದ್ಯ ಗಡಣ ನಿಲ್ಲದಲಿ ಕಾಮ್ಯಕವನ
ದಲಿ ಬಂತು ಕೃಷ್ಣನ ಸೇನೆ ಅಬ್ಬರದಿ ॥೮೨॥

ಹರಿಸೇನೆ ಬಂದಂಥಬ್ಬರವ ಕಾಣುತ ಪಾಂಡ
ವರು ಪತ್ರ ಬರೆದರು ಕುರುಪತಿಗೆ । ಮತ್ತೆ
ತ್ವರಿತದಿಂದುತ್ರ ಘಟೋದ್ಗಜಗೆ । ವಾಲಿ
ಇರದಟ್ಟಿದರು ದ್ರುಪದರಸನಿಗೆ । ಬಲ
ನೆರಸಿದರಾಗುರವಣಿಸಿಯಾರ್ಭಟದಿ
ಧುರಕನುವಾದಂಥ ಪರಿಯನೇನೆಂಬೆ ॥೮೩॥

ಇತ್ತ ದ್ವಾರಕಿಯೊಳಗಭಿಮನ್ಯು ಮರುದಿವ
ಸತ್ತೇರ ಮನಿಯೊಳು ನೋಡಿದನು । ತನ್ನ
ಹೆತ್ತ ತಾಯಿಯ ಕಂಡು ಅಳುವುದನ್ನು । ದಳ
ವೆತ್ತಿ ಪೋಗಿಹ ಮಾವನೆಂಬುದನು । ಕೇಳಿ
ಅತ್ಯುಗ್ರದಿಂದಲಾರ್ಭಟಿಸಿ ಕರ್ಪುರ ಮಳೆ
ಮತ್ತೆ ಕಿಚ್ಚಿಗೆ ಬಿದ್ದಂತುರಿದ ಕೋಪದಲಿ ॥೮೪॥

ಪ್ರಳಯ ಕಾಲದ ರುದ್ರನಂತೆ ಘರ್ಜಿಸುತಲಿ
ಪೊಳೆವ ಕಾರ್ಮುಕವೆತ್ತಿ ನಿಂತಿಹನು । ತನ್ನ
ಸ್ಥಳವ ಬಿಟ್ಟೋಡಿದನಿಂದ್ರನನು । ಸುರ
ರುಳಿಯದೆ ನಡೆ ತಾರಾ ನಿಚಯವನು । ಸಲ್ಲ
ದಿಳೆಗೆ ಬಿದ್ದವು ಶಿವ ಬೆರಳೆ ಮೂಗಿನಲಿಟ್ಟು
ಕುಳಿತನು ಮೌನದಿ ಮಗುವಿನರ್ಭಟಕೆ ॥೮೫॥

ಮತ್ತೆ ನಾರದ ಬಂದು ಮಗುವಭಿಮನ್ಯುವಿ
ಗುತ್ತರ ಪೇಳ್ದ ನಿನ್ನೆತ್ತವನು । ಹಿಂದೆ
ಕೃತ್ತಿವಾಸನ ಕೂಡ ಯುದ್ಧವನು । ಮಾಡಿ
ಪೃಥ್ವಿಯೊಳ್ ಗೆದ್ದಂಥ ವೀರನನು । ಜಯ
ವಿತ್ತು ಪಾರ್ಥನ ಗೆಲಿಸುವೆ ಚಿಂತೆ ಬೇಡೆ
ಸುತ್ತ ನಂಬಿಸಿ ಸುರಮುನಿ ಪೋಗಲಿತ್ತ ॥೮೬॥

ಪೃಥ್ವಿಪ ಕೇಳಯ್ಯ ಕಾಮ್ಯಕ ವನದೊಳು
ಇತ್ತಂಡ ಬಲ ಬಲವೊತ್ತರಲಿ । ಕಲ
ಕಿತ್ತು ವಾದ್ಯದ ಘೋಷಚೂಣಿಯಲಿ । ಮದ
ಮತ್ತೇಭರಥ ಭಟರೋಜೆಯಲಿ । ಗದೆ
ಕತ್ತಿ ಸಬಳ ಗಣಿಯೆತ್ತೆತ್ತಿ ಹೊಯ್ದು ಕಾ–
ದಿತ್ತದು ಬೊಬ್ಬೆಯಾರ್ಭಟವೇನೆಂಬೆ ॥೮೭॥



ಕರುಳಖಂಡವು ನೆಣ ಮಿದುಳ ರಕ್ತದ ಕೋಡಿ
ಹರಿದಿತು ಒಂದರಕ್ಷಣದೊಳಗೆ । ತಾವ
ಬ್ಬರದಿ ವಾದ್ಯಗಳೇಳೆ ಬಲದೊಳಗೆ । ಮತ್ತೆ
ಉರವಣಿಸುತಲೇಳ್ವರದರೊಳಗೆ । ಇಂಥ
ಪರಿಯಿಂದಬ್ಬರಿಸಿ ಹೊಯ್ದಾಡಲೊಂದೆಸೆಯೊಳು
ಬರೆವುತೆದ್ದರು ಕಲಿಭೀಷ್ಮಲಧರರು ॥೮೮॥

ಉಗ್ರದಿಂ ತುಡುಕುತ ಮುಷ್ಟಿಮುದ್ಗರದಿಂದ
ಶೀಘ್ರದಿಂದಬ್ಬರಿಸೈವರು । ತಮ್ಮ
ತ್ಯುಗ್ರದಿಂ ಮದದಾನೆಯಂಥವರು । ತಾ ಸ
ಮಗ್ರ ಆಯುಧದಿಂದ ಕಾದುವರು । ಇಂಥ
ಅಗ್ರಗಣ್ಯರು ರಣದೊಳು ಹೆಣಗಿದರಾಗ
ಸ್ವರ್ಗದ ಸುರರು ಆಶ್ಚರ್ಯವಾದಂತೆ ॥೮೯॥

ಒಬ್ಬರೊಬ್ಬರು ಪಂಥ ಹಾಕಿಕೊಳ್ಳುತಲಿ ಮೈ
ಯುಬ್ಬಿ ರೋಮಾಂಚನವೇಳುತಲಿ । ವೀರ
ಬೊಬ್ಬಿಟ್ಟು ಹೊಡೆವರಾರ್ಭಟದಲಿ । ಧರೆ
ಇಬ್ಭಾಗಿಸುತ್ತಿದೆ ರೌದ್ರದಲಿ । ಮತ್ತೆ
ಹೆಬ್ಬುಲಿಯಂತೆ ಇಬ್ಬರ ಕಾಳಗವು ಕಣ್ಗೆ
ಹಬ್ಬ ಮಾಡಿದ್ದಾಂಗ ಭೀಷ್ಮಲಧರರು ॥೯೦॥

ಅತ್ಯುಗ್ರದಲಿ ಹೆಣಗುತ ಬಂದು ಹೊಕ್ಕರು
ಒತ್ತಿ ಕೌರವ ಪತಿ ಸೇನೆಯನು । ಆಗ
ತತ್ತರಿಸುತ ಬಲ ನಿಚಯವನು । ಸರಿ
ದೆತ್ತ ಪೋದನೊ ಕುರುನಾಥನನು । ಹರಿ
ಸತ್ತರೊಳಿತು ಪಾರ್ಥಮಡಿದರೆ ಪೀಡೆ ಹೋ
ಯಿತ್ತು ಎಂಬುತ ಜುಣಗಲು ದೆಸೆದೆಸೆಗೆ ॥೯೧॥

ಅರಸಿ ಕೇಳದರೊಳು ಭೀಷ್ಮಕೃಷ್ಣರ ಯುದ್ಧ
ಪರಿಯನೇನೆಂಬೆ ನಾ ಸಮರದಲಿ । ನದಿ
ತರುಳ ಸರಳ ಮಳೆಗರೆವುತಲಿ । ಮುರ
ಹರನಾಗ ಶರಗಳ ಸವರುತಲಿ । ಎಲೊ
ತರುಳ ಪಾರ್ಥನ ಮಾತ ಕೇಳಿ ಬರ್ಪರೆ ಮುಪ್ಪಾ
ವರಿಸಿದಾತನು ಬಿಟ್ಟು ತೆರಳು ನೀನೆನುತ ॥೯೨॥

ವರ ಭೀಷ್ಮನುರಿದೆದ್ದು ಭರದಿ ಮುಖದಿ ಕೋಪ
ವರಿಸಿ ಹರಿಗೆ ಮೂರು ಬಾಣವನು । ಮತ್ತೆ
ಗರುಡಗೆರಡು ರಥಕಾರಂಬನು । ಸುತ

ಗೆರಡಾರು ಸಿಂಧುವಿಗೊಂದೊಂದನು । ಗಣೆ
ಪರಿವಾಕ್ಕಗಣಿತವಾದ  ಕೂರ್ಗಣೆಗಳ
ಸುರಿದು ಬೊಬ್ಬಿರಿದ ಮೋಹರದೊಳೇನೆಂಬೆ ॥೯೩॥

ಭೂರಿ ಶಕ್ತಿಯ ತೆರದಿ ಭೀಷ್ಮ ಕೊಂದನು ಎರ
ಡಾರು ಸಾವಿರ ಮತ್ತತುರಗವನು । ಆಗ
ನೂರೆಂಟು ಸಾವಿರ ಆನೆಯನು । ಬಿಡ
ದಾರಾರು ಸಹಸ್ರ ವರೂಥವನು । ಪರಿ
ವಾರದೊಳಗಣಿತ ನೆರೆಗೊಂಬುತಲಾಗ
ಚೀರಿ ಬೊಬ್ಬಿರಿದನದ್ಭುತವೇನೆಂಬೆ ॥೯೪॥

ಪೂತು ಭೀಷ್ಮ ಪರಮ ಶೌರ್ಯ ಮೋಹರ
ವ್ರಾತದೊಳ್ ಕಾಣೆನೆಂಬುತ ಕೃಷ್ಣನು । ಅತಿ
ಭೀತಿಯಿಂ ಪೇರ್ಗಿಡಿಕಾರಿದನು । ಮಹಾ
ನೂತನಾಸ್ತ್ರದ ಮಳೆ ತೂರಿದನು । ಗಣ
ಜಾತ ಘಾಯದಿನೊಂದು ಮೈ ಮರೆವುತಲಿ ವ
ರೂಥದಿ ಮಲಗಿದ ರಣದ ಮಂಡಲಲಿ । ॥೯೫॥

ಧುರದೊಳಬ್ಬರಿಸುತ ಬಲರಾಮ ಭೀಮಗೆ
ದುರುಳ ಗಯನ ಕೊಟ್ಟು ತೆರಳುವದು । ಬಹಳ
ಪರಿಣಾಮವದೆ ನೋಡು ನೀ ತಿಳಿದು । ನಿನ್ನ
ಕರುಳುನಗಿವೆ ತಳ್ಳಿ ಯಾಕೆಮ್ಮದು । ನಿನ್ನ
ಕರುಳನುಗಿವೆ ತಳ್ಳಿ ಯಾಕೆಮ್ಮದು । ನಿನ್ನ
ಕೊರಳನುಳುಹಿಕೊಂಡು ಹೋಗೆಂದು ಹೊಯ್ದನು
ಭರದಿಂದ ಮಾರುತಿ ಮ್ಯಾಲದೇನೆಂಬೆ ॥೯೬॥

ಬಿದ್ದ ಪೆಟ್ಟಿಗೆ ಬೆದರದೆ ಭೀಮ ನುಡಿದನು
ಯುದ್ಧವ್ಯಾತಕೆ ಪೋಗು ನೀನೆನುತ । ಇಲ್ಲೆ
ಗದ್ದೆ ಹೊಲಗಳಿಲ್ಲ ನೋಡೆನುತ । ನೀನು
ಬಿದ್ದ ಭೂಮಿಗೆ ಹೋಗಿ ಹೂಡೆನುತ । ನಮ್ಮ
ಸುದ್ದಿ ಯಾತಕೆಯೆಂದು ಉದ್ರೇಕದಿಂದಲಿ
ಗುದ್ದಿದನಾಗ್ಲಲಧರ ನಾನೇನೆಂಬೆ ॥೯೭॥

ಹಿಡಿದಂಥ ವನಕಿಗೆ ರಾಶಿ ಭತ್ತಗಳಿಲ್ಲ
ಹೊಡೆವಿ ಯಾರಿಗೆ ನೀನು ಕಡುಮೂರ್ಖನು । ಬಹಳ
ಕೆಡರೆಂಬುತಲಾಗ ಕೌರವನು । ಕಾಡ
ಅಡವಿ ಸೇರಿಸಿಬಿಟ್ಟ ತಿಳಿ ನಿಮ್ಮನು । ಒಬ್ಬ
ಮಡದಿಗೈವರು ಗಂಡರೆನಲು ಲೋಕದಿ ಕೈಯ
ಹೊಡೆದು ನಗುವರೆಂದು ಹೋದನಾ ರಾಮ ॥೯೮॥



ಉದ್ಧತ ವೀರಭೀಮನು ಬಂದು ರಾಮನ
ಗುದ್ದಲು ಲಕ್ಷ್ಮೀಶನಗ್ರಜನು । ಮರ
ಳೆದ್ದು ಹೊಯ್ಯಲು ಆಗ ಮರುತಜನು । ಕೆಳಗೆ
ಬಿದ್ದು ಧರೆಯೊಳು ಮೂರ್ಛಿತನಾದನು । ಕಂಡು
ಯುದ್ಧವಾಗಲಿ ಘಟೋದ್ಗಜ ರಭಸದಿ ಧರೆ
ಗದ್ದಲಿಸಿತು ಆಗದೇನ ಪೇಳುವೆನು ॥೯೯॥

ತಂದೆಯೊಡನೆ ಕಾದಿ ಗೆಲಿದಂಥ ಗರ್ವವ
ಒಂದರೆಕ್ಷಣದಲಿ ನಿಲಿಸುವೆನು । ನೋಡು
ಎಂದು ಬೊಬ್ಬಿಲೆ ಮಹಶರಗಳನು । ರೌದ್ರ
ದಿಂದೆದ್ದೆಚ್ಚಡಾಗರಾ ರಾಮನನು । ಬಲ
ಗುಂದಿ ಬೆದರಿ ಧೈರ್ಯಗೆಡೆ ನಕುಲ್ ಸಹದೇವ
ರಂದು ರಥವನೇ ಹೆಣಗಲೊಂದಿಗಿಗೆ ॥೧೦೦॥

ಎಣಿಕೆಯಿಲ್ಲದೆ ಸಹದೇವ ನಕುಲರಾಗ
ರಣದೊಳು ಗಣೆಗಳ ತೂರುತಲಿ । ಇರೆ
ಕ್ಷಣವೊಂದರೊಳು ರಾಮನೇಳುತಲಿ । ಯಮ
ನಣುಗನಾಕ್ಷಣ ಪಿಡಿದೆಳೆವುತಲಿ । ಭೀಮ
ನನುಜರು ಹೆಣಗಿ ಶೌರ್ಯದಿ ಬಂದು ಬಿಡಿಸಿದರೆ
ದಣಿಯೆ ಸೆರೆಯ ಶ್ರಮವಡೆದರೇನೆಂಬೆ ॥೧೦೧॥

ಭರದಿ ಸಾತ್ಯಕಿ ಬಂದು ದ್ರುಪದರಾಯನ ತೆಕ್ಕಿ
ವರಿದಾಗ ಪಿಡಿದತಿ ನೋಯಿಸಿದನು । ಆಗ
ಉರವಣಿಸುತ ಬಂದು ರಾಮನನು । ವಾಯು
ತರಳನನುಜರ ಕೈಸೆರೆಗೊಂಡನು । ಮತ್ತೆ
ಕೊರಳ ಕೊರೆವುತಿರಲಾಗ ಕಾಣುತ ಕೃಷ್ಣ
ಹರಿತಂದು ಬಿಡಿಸಿದ ಧುರದ ಮಂಡಲಲಿ ॥೧೦೨॥

ಮೀರಿದ ಕೋಪದಿಂದಡಹಾಯ್ದು ಭೀಮನು
ವಾರಿಜಾಂಬಕ ನಿನ್ನ ಬಗೆ ಬಲ್ಲೆನು । ಚೆಲ್ವ
ನಾರಿಯರೊಳು ಒಡನಾಡಿದನು । ಹೋಗಿ
ಬೋರತನದಿ ಬೆಣ್ಣೆ ತಿಂಬುವನು । ನಿನ
ಗೀ ರಣವ್ಯಾಕೆಂದು ಹೊಡೆಯಲಾಕ್ಷಣ ಕೃಷ್ಣ
ಭೂರಿ ನೋಯಲು ರಾಮ ಬಂದು ಕೂಡಿದನು ॥೧೦೩॥

ರಾಮಕೃಷ್ಣರ ಕೂಡ ಕಾದಿ ಧುರದಿ ಕಲಿ
ಭೀಮ ಧಾರುಣಿಯೊಳು ಉರುಳಿದನು । ತಾನು
ದ್ಧಾಮ ವಿಕ್ರಮ ಕಲಿ ಪಾರ್ಥನನು । ಕಾಣ

ಲಾ ಮಹಾರಥವೇರಿ ನೋಡಿದನು । ಆಗ
ತಾ ಮೂರ್ಛೆ ತಿಳಿದೆದ್ದು ಭರದಿ ಮಾರುತಿ ಬಂದು
ರಾಮನೊಡನೆ ಯುದ್ಧವೆಸಗಿದ ಮರಳಿ ॥೧೦೪॥

ಇಳೆಪತಿ ಕೇಳು ದ್ರುಪದ ಘಟೋದ್ಗಜನ
ಕುಲವಳಿದರು ಮತ್ತಿದ್ದ ಮೋಹರವ । ಒಬ್ಬ
ರುಳಿಯದೆ ಕೊಂದ ರಾಮನ ಬಲವ । ಮತ್ತೆ
ನಳಿನಾಕ್ಷನೊಳಗಿದ್ದ ಮಹಾರ್ಬಲವ । ಕೃಷ್ಣ
ನುಳಿಸಿ ಯಾದವರ ಪಡೆಯನೆಲ್ಲ ತಡೆಯದಿ
ನ್ನಳಿಸಿದ ಭೀಮನದೇನ ಪೇಳುವೆನು ॥೧೦೫॥

ಪರಿವಾರವೆಲ್ಲವು ಒರಸಿ ನುಗ್ಗಾಗಲು ನರ
ಹರಿಯರೆದ್ದರದೇನೆಂಬೆನು । ಕೃಷ್ಣ
ಪರಮ ವರೂಥವನೇರಿದನು । ಮ್ಯಾಲೆ
ಹರಿ ಪಥದೊಳು ಸುತ್ತಿ ಸುಳಿಸಿದನು । ಕಂಡು
ವರದಿವ್ಯ ರಥಕಡರುತ ಭಾನುಮಂಡಲ
ಸರಿಯೊಳು ಸುಳಿಸಿ ತೋರಿದ ಧನಂಜಯನು ॥೧೦೬॥

ಒಂದು ಕಡೆಗೆ ಹನುಮನು ಚೀರ್ವಘೋಷ ಮ
ತ್ತೊಂದು ಕಡೆಯೊಳ್ವಾದ್ಯ ರಭಸಗಳು । ಬಿಡ
ದೊಂದು ಕಡೆಗೆ ವೀರಬೊಬ್ಬೆಗಳು । ಆಗ
ಲೊಂದು ಕಡೆಗೆ ದಿವ್ಯನಾದಗಳು । ಭರ
ದಿಂದೆಂಟು ದಿಕ್ಕುಗಳ್ ತುಂಬಿ ಸಂದಣಿಸಿತು
ಒಂದರೆಕ್ಷಣದೊಳದ್ಭುತವೇನೆಂಬೆ ॥೧೦೭॥

ಹರಿ ತನ್ನ ಚಕ್ರವ ತಿರುವಲಾಕ್ಷಣ ಮಹ
ಶರಧಿ ಕುದಿದು ನಿಲ್ಲದುಕ್ಕಿತದು । ಅಷ್ಟ
ಗಿರಿ ಕುಲವೆಲ್ಲಾಗ ಬೆದರಿತದು । ಮತ್ತೆ
ಧರೆಯ ಮಂಡಲವಲ್ಲಾಡಿತದು । ತೋರ್ಪ
ಸುರಿವ ಕೆಂಗಿಡಿ ತನಿಗೆಂಡ ಚೂಣಿಯೊಳಾಗ
ಇರದೆಂಟು ದಿಕ್ಕಿನೊಳ್ ಹರಿದವೇನೆಂಬೆ ॥೧೦೮॥

ಕಡು ರೋಷದಿಂದ ಕೆಂಪಡರಿ ಕಣ್ಣಾಲಿಗಳ್
ಕಿಡಿಯಿಡೆ ಮುಖದಿಂದ ಫಲ್ಗುಣನು । ಧನು
ವಿಡಿದಾಗ ಪಾಶುಪತಾಸ್ತ್ರವನು । ಹೂಡಿ
ಸಿಡಿಲಂತರ್ಭಡಿಸಿ ಧನಂಜಯನು । ರಥ
ನಡಸೂತ ಜನಜಾಕ್ಷನಿದುರಿಗೆ ಬಾಣವ
ಹೊಡೆದನಾಕ್ಷಣ ಧರೆ ನಡುಗಿತೇನೆಂಬೆ ॥೧೦೯॥



ಪಾಂಡುಸುತರು ಸತ್ಯವಂತರೆಂಬುತ ಜನ
ಕೊಂಡಾಡುತಿಹರೈ ತಿಳಿಯದಲಿ । ನೀವು
ಉಂಡ ಮನೆಗೆ ಎರಡೆಣಿಸುತಲಿ । ಇಂಥ
ಭಂಡರೆಂಬುದ ಬಲ್ಲೆ ಲೋಕದಲಿ । ಇಟ್ಟು
ಕೊಂಡಂಥ ಗಯನಟ್ಟಿ ಕಳುಹೆಂದ ರೋಷ ಕೈ
ಕೊಂಡೆತ್ತಿ ಹೊಡೆದನು ಪುಂಡರೀಕಾಕ್ಷಣದಿ ॥೧೧೦॥

ಬಿಡ ಬಿಡದೀರ್ವರು ವಾದದಿಂದಿರೆ ನರ
ಹಿಡಿ ಹಿಡಿಯೆಂದ ಕೈಯೊಳು ಬಿಲ್ಲನು । ಮತ್ತೆ
ತೊಡು ತೊಡುಯೆಂದ ಶರಂಗಳನು । ಸಧ್ಯ
ಕೊಡು ಕೊಡುಬಾಣ ಸಂಧಾನವನು । ಎಂದು
ಘುಡಿ ಘುಡಿಸುತಲಿಂದ್ರ ತನುಜನರ್ಭಾಟದಿ
ಹೊಡೆ ಹೊಡೆದನು ಗಣೆ ತಡೆಯೆಂದ ಹರಿಗೆ ೧೧೧

ಸರಸಿಜಾಂಬಕನಗ್ನಿ ಶರವನಾತನು ಮತ್ತೆ ನರ
ವರುಣಾಸ್ತ್ರವ ಧರಿಸಿದನು । ಮುರ
ಹರ ತೊಟ್ಟ ಫಣಿಪತಿ ಬಾಣವನು । ಪಾರ್ಥ
ಗರುಡ ಗಣೆಯನಾಗ ಕೈಕೊಂಡನು । ಹರಿ
ಗಿರಿಯೆಂಬ ಫಲ್ಗುಣ ವಜ್ರಾಯುಧದಿಯವ
ರಿರದೆಯೆಚ್ಚಾಡಿದರ್ ಧುರದೊಳೇನೆಂಬೆ ॥೧೧೨॥

ವಸುಧಿಪ ಕೇಳಯ್ಯ ಎಸುಗೆಯಂತುಂಟೊ ನರ
ನಸಮಯವಾದ ತಾಮಾಸ್ತ್ರವನು । ಹೂಡಿ
ಎಸೆದಾಗ ಕತ್ತಲೆಗವಿಸಿದನು । ರವಿ
ಶಶಿಗತಿಯೆತ್ತಲೆಂದೆನಿಸಿದನು । ಕಂಡು
ಬಿಸಜಾತಯಿನನಂಬ ತೊಟ್ಟತಿಶೌರ್ಯದಿ
ಪಸರಿಸಿದನು ಪ್ರಭೆ ಬಲದೊಳಾಕ್ಷಣದಿ ॥೧೧೩॥

ಶಿತಕಂಠನಿತ್ತಂಥ ಪಾಶುಪತಾಸ್ತ್ರವ
ಶಿತದಾಹ ಹೂಡಿದ ಕಿವಿವರೆಗೆ । ಮಹಾ
ಖತಿಯಿಂದಲೆಚ್ಚನು ಶ್ರೀಹರಿಗೆ । ಮೂರ್ಛೆ
ಯುತನಾಗಿ ಬಿದ್ದನು ಧಾರುಣಿಗೆ । ರಣ
ಕ್ಷಿತಿಯೊಳು ಕಂಡು ಧನಂಜಯನತಿ ಚಿಂತಿ
ಸುತ ಕರೆದನು ಬಾಣವ್ರೊಗೆದನು ಧರೆಗೆ ॥೧೧೪॥

ಆಗಿಂದ್ರತನಯನಿಲ್ಲದೆ ಪೋಗಿ ಶ್ರೀಹರಿ
ಮ್ಯಾಗ ಬಿದ್ದುರುಳಿದ ಶೋಕದಲಿ । ಅಯ್ಯೊ
ಈ ಗಯ ಖೂಳನ ದೆಸೆಯಿಂದಲಿ । ಇಂದು

ನಾ ಗಣೆಯಿಟ್ಟೆನು ಕೋಪದಲಿ । ಸ್ವಾಮಿ
ನಾಗಶಯನನಸುವಳಿದನಕಟ ಮುಂದೆ
ನೀ ಗತಿ ಶಿವಶಿವಯೆಂದನರ್ಜುನನು ॥೧೧೫॥

ಕುಂತಿದೇವಿಯು ಕೊಂದ ಸುದ್ದಿಯ ಕೇಳಲು
ಚಿಂತಿಯಿಂದೆಷ್ಟೊಂದು ನೋಯುವಳು । ದುಃಖ
ಸಂತಾಪದಿಂ ಮುಳಿಗೇಳುವಳು । ಪ್ರಾಣ
ವಂತಕವೆಂದು ನಿಶ್ಚೈಸುವಳು । ಅಯ್ಯೊ
ಕಂತುಜನಕ ನಿನ್ನ ಕೈಯೊರೆ ಕೊಂದೆ ನಾ
ನಂತ ಶೋಕದಿ ಮಿಡುಮಿಡುಕಿದ ನರನು ॥೧೧೬॥

ದೇವ ಕೃಷ್ಣ ನಿನ್ನ ಆಲಯದೊಳು ವಸು
ದೇವ ದೇವಕಿನ್ನಿರುವವರು । ಸತ್ಯ
ಭಾಮೆಯು ರುಕ್ಮಿಣಿದೇವಿಯರು । ಸೋಳ
ಸಾವಿರ ನೆರೆದ ಗೋಪಾಲಿಯರು । ಸಧ್ಯ
ಸಾವರು ಕೇಳದಾಕ್ಷಣ ಶಿವಶಿವ ಮುದ್ದು
ಭಾವಯ್ಯ ಮಾತಾಡು ಎಂದನರ್ಜುನನು ॥೧೧೭॥

ಬಾಳಲಾರೆನು ಭೂಮಿಯೊಳು ನಿನ್ನನಗಲಿ ನಾ
ತಾಳಲಾರೆನು ದುಃಖ ಭಾವನನೆ । ಬಿಟ್ಟು
ಏಳಲಾರೆನು ಎನ್ನ ಜೀವನನೆ । ತೋರಿ
ಹೇಳಲಾರೆನು ಸುದ್ದಿ ದೇವನನೆ । ಇಂದು
ಬೀಳಲಾರೆನು ಸ್ವಾಮಿದ್ರೋಹದೊಳಗೆ ಚಿಂತಿ
ಕೀಳಲಾರೆನು ಎಂದು ಕರಗಿ ಫಲ್ಗುಣನು ॥೧೧೮॥

ಹ್ಯಾವ ಸುಡಲಿ  ನನ್ನದೆಂದು ಗಯನು ಬಂದು
ಜೀವದಾನವ ಬೇಡೆ ಭಾಷೆಯನು । ಕೊಟ್ಟೆ
ಅವುದು ಗತಿಯಯ್ಯಾ ನಮಗೆಂದನು । ಬಂದ
ನೋವು ವಿಪತ್ತಿ ಕಾಲವನು । ಸಧ್ಯ
ಕಾವವರಾರಯ್ಯ ಕರುಣನಿಧಿಯೆ ಪ್ರಾಣ
ವೀವುದೆ ಸಾಕ್ಷಿ ನಿನ್ನೊಡನೆ ನೋಡೆಂದ ॥೧೧೯॥

ಕೃಷ್ಣನ ಮೊಗದೊಳು ಮೊಗವಿಟ್ಟು ಪಾರ್ಥ ತಾ–
ನೆಷ್ಟು ದುಃಖದಿ ಮುದ್ದನಿಡುತಿರಲು । ಮತ್ತೆ
ಅಷ್ಟರೊಳಗೆ ಮೂರ್ಛೆ ತಿಳಿದೇಳಲು । ಕಲಿ
ಧಿಟ್ಟ ಕಿರೀಟಿ ಸಿಡಿದು ನಿಲ್ಲಲು । ಮಹಾ
ಸಿಟ್ಟಿಲಿ ಶ್ರೀಹರಿ ನಿಂತ ಕಾಳಗಕಾಗ
ಸೃಷ್ಟೀಶ ಕೇಳವರೀರ್ವರ ಧುರವ ॥೧೨೦॥



ಜಲಜಾಕ್ಷಪಾರ್ಥರು ಮರಳಿ ಮುನ್ನಿನಕಿಂತ
ಬಲು ಸತ್ವದಲಿ ಹೆಣಗಾಡುತಲಿ । ಕೃಷ್ಣ
ಚಲಬಾಣ ಹೂಡೆಚ್ಚ ಶೀಘ್ರದಲಿ । ನರ
ಕುಲಿ ಶಸ್ತ್ರದಿಂದಲಿ ಕಡಿವುತಲಿ । ಹರಿ
ಛಲದಿಂದಗ್ನಿಯ ಶರಹೂಡಿ ಹೊಡೆಯಲಾಗ
ಫಲ್ಗುಣ ವಾರುಣಂಬಿನಲಿ ನಂದಿಸಿದ ॥೧೨೧॥

ಒಬ್ಬರೊಬ್ಬರು ಧನುಶರಗಳಿಂ ಹೆಣಗಿ ಮ
ತ್ತಿಬ್ಬರು ದಣಿಯದಿರಲು ನರನು । ಆಗ
ಲಬ್ಬರಿಸುತ ಕೊಂಡ ಗಧೆಯವನು । ರಣ
ಬೊಬ್ಬೆಗರೆದು ಸಿಂಹನಾದವನು । ಮಾಡ
ಲರ್ಭಡಿಸುತಲಬ್ಜಲೋಚನ ಕೂಗಿ ಮೈ
ಯುಬ್ಬು ಪಿಡಿದ ತಾನಂಥ ವರ ಗಧೆಯ ॥೧೨೨॥

ನೋಡುವರೊಮ್ಮೆ ಛಪ್ಪರಿಸಿ ಮುಂಡೆಯ ಮೀಸಿ
ತೀಡುವರೊಮ್ಮೆಗೆ ಶೌರ್ಯದಲಿ । ಹೊಯಿ
ದಾಡುವರೊಮ್ಮೆ ತಾ ವೀರ್ಯದಲಿ । ಮಾ
ತಾಡುವರೊಮ್ಮತಿ ಧೈರ್ಯದಲಿ । ಹೆಣ
ಗಾಡುವರಗಲಿ ತಾ ಕೂಡುವರ್ಕಲಿಗಳು
ಮಾಡುವರ್ಯುದ್ಧವನೇನ ಬಣ್ಣಿಪೆನು ॥೧೨೩॥

ಇದರಿಂದ ಹೆಣಗಿ ಹೊಯ್ದಾಡಿ ತೀರದೆ ಮತ್ತೆ
ಗದೆಯ ಚೆಲ್ಲಿದನಾಗ ಕೃಷ್ಣನನು । ರಣ
ಚದುರ ಹಿಡದ ನೋಡು ಖಡ್ಗವನು । ಪಾರ್ಥ
ನದ ಕಂಡು ತಾ ಧನುಬಾಣವನು । ಕೊಂಡು
ವೊದಗಿಯೆಚ್ಚಾಡಿದರ್ ಗದಗದಿಸಿತು ಭೂಮಿ
ಹುದಗಿದ ಶೇಷ ಕುಲಾದ್ರಿಗಳ್ ನಡುಗೆ ॥೧೨೪॥

ಶಂಕೆಯಿಲ್ಲದೆ ಸಮರದಿ ಕಾದಲೀರ್ವರು
ಪಂಕಜನಾಭತಿ ಕೋಪಿಸುತ । ಎನ
ಗಂ ಕರವಶನಾಗನಲ್ಲೆನುತ । ಮುನ್ನ
ಶಂಕರ ಕೊಟ್ಟಂಥ ಚಕ್ರವ ತಾ । ಬಿರು
ದಂಕ ಫಲ್ಗುಣನಿಗೆ ಹೊಡೆಯಲಾಕ್ಷಣ ಮೂರ್ಛೆ
ಯಿಂ ಕಣ್ಣು ಮುಚ್ಚುತ ಬಿದ್ದನಾ ಧಾರುಣಿಗೆ ॥೧೨೫॥

ಕಂಡೋಡಿ ಬಂದು ಶ್ರೀಕೃಷ್ಣ ತಾ ಗಾಬರಿ
ಗೊಂಡು ಪಾರ್ಥನ ಮೇಲೆ ಹೊರಳಿದನು । ಅಯ್ಯೊ
ಭಂಡ ಗಯನನಿಂದ ಕೋಪವನು । ಕೈ

ಕೊಂಡು ಹೊಡಿದೆನಲ್ಲೊ ಚಕ್ರವನು । ಹಿಮ
ಮಂಡಲದೊಳು ಮಹಾಪಾಪಿ ನಾನೆಂಬುತ
ಪುಂಡರೀಕಾಕ್ಷನ ದುಃಖವೇನೆಂಬೆ ॥೧೨೬॥

ಎನ್ನ ಸಂಜೀವನೆ ಎನ್ನ ಪ್ರಾಣದ ಗುಟ್ಟೆ
ಎನ್ನ ಮೈದುನ ಚೆಲ್ವ ಗುಣಮಣಿಯೆ । ಹಾ ಹಾ
ಎನ್ನ ಮೋಹದ ಪುರುಷದಖಣಿಯೆ । ಕಲಿ
ಎನ್ನುವರಿಗೆ ನೀ ಶಿಖಾಮಣಿಯೆ । ಅಯ್ಯಾ
ಎನ್ನ ಪ್ರೀತ್ಯಾಸ್ಪದ ಕಣ್ತೆರೆದು ನೋಡಿರಿ
ದೆನ್ನುತ ಶೋಕದಿಂದಳಲಿದ ಹರಿಯು ॥೧೨೭॥

ಹರಹರ ಏನಾಯಿತು ಅಕಟ ಸಮರದಿ
ನರ ನಿನ್ನ ಕೊಂದೆಂತು ಜೀವಿಸಲಿ । ಎನ್ನ
ನೆರೆ ತಂಗಿಗೇನು ಉತ್ತರಕೊಡಲಿ ।
ಧರೆ ಪೊರೆವದಿನ್ನಾರಿಗಿಂದಿದು ಸುಡಲಿ । ಮುನ್ನ
ಪರಮ ಪಂಥವನ್ಯಾಕೆ ಮಾಡಿದೆನಯ್ಯಯ್ಯೊ
ದುರುಳ ಗಯನ ದೆಸೆಯಿಂದೆಂದ ಕೃಷ್ಣ ॥೧೨೮॥

ದ್ರೌಪತಿ ಕುಂತ ಸಹದೇವ ನಕುಲ ಧರ್ಮ
ಭೂಪತಿಯಾ ಭೀಮಸೇನನು । ರಣ
ದೀ ಪಾರ್ಥ ಮಡಿದಂಥ ಸುದ್ದಿಯನು । ಕೇಳಿ
ಆ ಪರಿಯಳಲ್ವರೊ ಪೇಳಲೇನು । ಸ್ಮರ
ರೂಪನೆ ಜಗಿದ ಪ್ರಖ್ಯಾತನೆಂಬುತಲಿ ಪ್ರ–
ಳಾಪದಿಂದೊರಗಿದನಂತ ಶೋಕದಲಿ ॥೧೨೯॥

ನಳಿನಾಕ್ಷ ತಾನಿಂತು ಅಳಲುತಿರಲು ಮನ
ದೊಳಗಾಗದೇನೆಂಬೆ ಫಲ್ಗುಣನು । ಮೂರ್ಛೆ
ತಿಳಿದೆದ್ದು ಹಿಡಿದ ಬಿಲ್ಬಾಣವನು । ಕೊಳ
ಗುಳಕೆ ತಾನನುವಾಗಿ ನಿಂತಿಹನು । ಮತ್ತೆ
ತಿಳಿದ ನಿನ್ನೊಂದು ಯೋಚನೆ ಕೃಷ್ಣಕಾಪಟ್ಯ
ವೊಳಿತಲ್ಲ ಕಡೆಗೆ ಗಯನ ಬಿಟ್ಟೆರೆಂದ ॥೧೩೦॥

ಭರವಸೆ ಸಾಲದಿನ್ನೆನುತಲಿ ಕೂರ್ಮನು
ಗಿರಿಯೆತ್ತಿ ಧರಿಸಿದ ಪರಿಯಿಂದಲಿ । ಪಾರ್ಥ
ತರುಳ ಗಯನ ಕಟ್ಟಿ ಬೆನ್ನಿನಲಿ । ಮತ್ತೆ
ಉರವಣಿಸುತಲಿದಿರಾಗುತಲಿ । ಇದ
ರಿರವ ತಿಳಿದು ಕೃಷ್ಣ ಮನದೊಳು ಯುದ್ಧವ
ನೆರೆ ನಾನು ಯೆಸಗಲು ದಿನ ಮೀರ್ವುದೆಂದ ॥೧೩೧॥



ಧುರದೊಳಗೀರ್ವರು ಕಾದುತಿರಲು ಆರು
ಅರಿಯಂದಲಿ ಶ್ರೀಕೃಷ್ಣನವ । ಮುನ್ನ
ಪರಮೇಶ ಕೊಟ್ಟ ಸುದರ್ಶನವ । ಕೊಂಡು
ಪರಮ ಕಾಪಟ್ಯದಿ ಪೇಳ್ದನವ । ಪಾರ್ಥ
ಧರಿಸಿಹ ಬೆನ್ನಲಿ ದುರುಳ ಗಯನ ಶಿರ
ಹರಿದು ತಾಯೆಂದು ಚಕ್ರವ ಬಿಟ್ಟನಾಗ ॥೧೩೨॥

ಭೂಪತಿಯಾದ ಪರೀಕ್ಷಿತ ಕೇಳಯ್ಯ
ಮಾಪತಿ ಯಾರಿಗೆ ಸಿಲ್ಕುವನು । ಕೃಷ್ಣ
ಕಾಪಟ್ಯದಲಿ ಬಿಟ್ಟ ಚಕ್ರವನು । ಬಿಡದೆ
ಪೋಪ ಗಯನ ಶಿರಸವನು । ಹರಿ
ಆ ಪರಿಯಾಗಿ ತಿಳಿದಿರಲು ಹರಿ
ಏ ಪಾರ್ಥ ಸಾಕು ಸಂಗರ ತಿರುಗೆಂದ ॥೧೩೩॥

ನಾಗಶಯನ ಮುಗುಳ್ನಗೆಯೊಳಾಡಿದ ಮತ್ತಿ
ನ್ನಾಗದೈ ಫಲ್ಗುಣ ಸಮರವನು । ಇನ್ನು
ಪೋಗಯ್ಯ ಸಾಕೆಂದ ಕೃಷ್ಣನನು । ದಿನ
ಹೋಗಿದೆ ಬೀಳು ನೀನಗ್ನಿಯನು । ಎನ
ಲಾಗ ಪಾರ್ಥನಿಗೆಂದನಚ್ಚುತ ಎನ್ನ ಕೈ
ಸಾಗಿತು ತಿರುಗಿ ನೋಡೆಂದನರ್ಜುನಗೆ ॥೧೩೪॥

ನರನಾಗಿ ತಿರುಗಿ ನೋಡಲು ಗಯನೊರ
ಸಿರ ಹರಿದಿರಲಾಗಳಲಿದ ಮನದಿ । ಸೈಸೈ
ಮುರಹರ ನೀ ಗುಣ ತೋರಿಸಿದಿ । ಜಗ
ವರಿವಂತೆ ಸಾಯೆಂದು ಭಾವಿಸಿದಿ । ಮುನ್ನ
ಹರಹರ ತರುಳಗಾಣಿಯ ಕೊಟ್ಟು ಕೊಲ್ಲಿಸಿ
ಇರುವದುಚಿತವಲ್ಲವೆಂದು ನೇಮಿಸಿದ ॥೧೩೫॥

ಮುರಾರಿ ಸ್ತುತಿಸುತಲಾಗಗ್ನಿ ಕೊಂಡವ
ಸಾರಿ ಬೀಳುದಕನುವಾಗಿರಲು । ದಿವ್ಯ
ಮೂರುತಿ ಗೌರಿಯರ್ನಿಜದೋರಲು । ಪಾರ್ಥ
ಪೂರ ನಿನ್ನಿಚ್ಛೆಯ ಬೇಡೆನಲು । ಈ ಕು
ಮಾರನ ಪ್ರಾಣವನೀವುದೈ ಎನಲಾಗ
ತೋರಿದ ಶಿವಮಹಿಮೆ ಗಯನಸುವಿತ್ತು ॥೧೩೬॥

ಅವರವರ್ಯೋಚನವ ಸಲ್ಲಿಸಭಯವಿತ್ತು
ಶಿವನು ಕೈಲಾಸಕ್ಕ ತಿರುಗಿದನು । ದ್ವಾರ
ಕವ ಪೊಕ್ಕನಾಗಲೆ ಮುರಹರನು । ಪಾರ್ಥ

ತವಕದಿಂದಾಶ್ರಮ ಸೇರಿದನು । ಮುನಿ
ಅವನಿಪಗೊರೆದಂತೆ ವರ ಕುಂದಗೋಳದ
ತವೆ ಗುರುಕರುಣದಿಂದುಸುರ್ದೆ ಸಾರವನು ॥೧೩೭॥

ಮೇಲ್ಕಾತಿದೊಂದ ಕೇಳಿರಿ ಸುತ್ತ ದೇಶಕ್ಕೆ
ಮೇಲ್ಮತ್ತ ಹುಬ್ಬಳ್ಳಿ ಶ್ಯಾರದಲಿ । ತೋರ್ಪ
ಮಾಲ್ಮನೆಯದರೊಳ್ ಶೃಂಗಾರದಲಿ । ಸಾಲು
ಸಾಲ್ಮಳಿಗೆಗಳು ವಿಸ್ತಾರದಲಿ । ಚೆಲ್ವ
ಲೋಲ್ಮಾರನರ ಮನೆಯ ಶೋಭಿಸುವ ವಿ
ಶಾಲ್ಮನೆ ಮಾಲ್ಗತ್ತಿಯವರದೇನೆಂಬೆ ॥೧೩೮॥

ಇಂತು ಮಾಲ್ಮನೆಯೊಳಗೊಪ್ಪುವ ನೀ ಗುಣ
ವಂತ ಪುಣ್ಯಾತ್ಮ ತಿಮ್ಮೇಂದ್ರನ । ಘನ
ಶಾಂತಿ ಸೈರಣೆಗುಣ ಸಾಂದ್ರನ । ಮುಖ
ಕಾಂತಿ ಪೊಳೆವ ಪೂರ್ಣಚಂದ್ರನ । ಮನ
ಸಂತಸವೀವ ಸದ್ಭಾವದಿಂದಿರುವಂಥ
ಕಾಂತೆಯಂ ಮಾಜವ್ವ ಯೆಸೆದಳಾತನಿಗೆ ॥೧೩೯॥

ವಸುಧೆಯೊಳಗೆ ರವಿಶಶಿಗಳು ಮಾಜವ್ವ
ನೆಸೆವ ಗರ್ಭಾಬ್ಧಿಯೊಳ್ ಜನಿಸಿದರು । ಪ್ರಭೆ
ಪಸರಿಸಿ ಜಗದೊಳು ತೋರಿದರು । ತಮ್ಮ
ಕುಶಲ ಗುಣಾಢ್ಯವ ಬೀರಿದರು । ದಿಟ
ರಸಿಕ ಕೆಂಚೇಂದ್ರ ಶಿರ ಸಮಾಂಕರೀರ್ವರು
ಜಸವಡೆದರು ಲೋಕದೊಳಗದೇನೆಂಬೆ ॥೧೪೦॥

* * *



## ೧೫. ಧೀರ ಕುಮಾರ ರಾಮ

ಶಿರವ ಕಾಣಿಕೆಯಿಟ್ಟು ಗುರು ನಿನ್ನ ಚರಣಕೆ
ಹರ ಪಾರ್ವತಿಯ ಕೊಂಡಾಡುವೆನು । ಮತ್ತೆ
ಕರಿಮುಖ ಗುಹವೀರ ಸ್ಮರಿಸುವೆನು । ಮಹಾ
ಶರಣರ ಪಾದವ ಬಲಗೊಂಬುವೆನು । ಇಂತಿ
ವರ ಭಕ್ತಿಯಿಂದಲಿ ಎರಗಿ ಹೃದಯದೊಳು ಶ್ರೀ ಗುರುವೆ
ಬರುವಂತೆ ನುಡಿಯುವೆ ಧರೆಯೊಳಿಂದಿದನು ॥೧॥

ಕರಚೆಲುವಿ ಪದ್ಮಿನಿಯು ಇರುವ ಬಾಣತಿ ಮುಂದೆ
ವರ ಕೊಮರಾಮನ ಚರಿತೆಯನು । ಬದಿಗೆ
ಇರುವ ದೂತಿಯರು ಪೇಳ್ವ ಪರಿಯನು । ನಿನ್ನ
ಪುರುಷನು ತಾನಳಿದನೆಂಬುದನು । ಕೇಳಿ
ಪರಮ ದುಃಖ ಆ ನಾರಿಗಾದುದನು ಅದರ
ಇರುವನೆಲ್ಲವ ಮುಂದೊರೆವೆ ಈ ಕೃತಿಯಲಿ ॥೨॥

ಧರೆಯೊಳು ಕುಮ್ಮಟ ನಗರ ಪಾಲಿಸುವಂಥ
ಅರಸು ಕಂಪಿಲರಾಯನೆಂಬುವನು । ಆತನ
ಅರಸಿ ಹರಿಯಾಲಮ್ಮ ಇರುವಳಿನ್ನು । ಇಷ್ಟು
ಕರಚೆಲುವಿ ರತ್ನಿ ಬೇರೆ ಮಾಲಿನೊಳು । ಮತ್ತೆ
ವರಮಂತ್ರಿ ಬೈಚಪ್ಪ ದೊರೆಯು ಮಾರ್ಬಲದಂಡು ಕೇಳು
ಪರಮಾನಂದದೊಳಿರೆ ಪುರದ ವಿಸ್ತಾರವನ್ನು ॥೩॥

ಕೋಟೆಗಳು ಸುತ್ತಲೆ ಮಾಟ ಬುರುಜು ತೆನೆಯು
ನೀಟಗಸಿ ಪಾರಾಕಾರಗಳೆಷ್ಟು । ಪುರದ
ತೋಟಗಳು ಪುಷ್ಪದ ಘಮಾಟವೆಷ್ಟು । ಒಳ್ಳೆ
ಪ್ಯಾಟಿಗಳಲ್ಲಲ್ಲಿಗೆ ಕಟ್ಟೆಗಳೆಷ್ಟು । ಮೇಲೆ
ಅಟ್ಟಗಳು ಸಾಲ್ಮನಿ ಚಿತ್ರನೊಟಗಳು ರಾಜ್ವಾಡೆ
ಆಟಗಳ ವಿಚಿತ್ರ ಥಾಟ್ಕಾಂಬುತಿಹುದು ॥೪॥

ಹೊಂಡದ ಸುತ್ತಲೆ ಮದ್ದಿನುಂಡಿಗಳು ಕಿಲೇದ
ಗುಂಡಗಳಸಿನ ತೋಪು ಜಂಡೆಗಳೆಷ್ಟು । ಆನಿ
ಹಿಂಡುಗಳುರಗವೊಂಟಿ ತಂಡಗಳೆಷ್ಟು । ಪುರದ

ತಂಡು ತಂಡುಗಳು ಕಾಲ್ಬಲ ದಂಡುಗಳೆಷ್ಟು । ಒಳ್ಳೆ
ಗೊಂಡೆಗಳರ್ಚಿಸಿ ಕರಿ ತುಂಡುಗಳೆಷ್ಟು ಬೇರಿನ್ನು
ಪಂಡಗಳು ಜಾತಿಯ ರಥದೊಳು ಪ್ರಚಂಡವೆಂಬೆ ॥೫॥

ಘಮುಘಮು ನುಡಿಯುವ ನಗಾರಿ ಚೌಗಡ ಡಂಕೆ
ಘಮು ಘಮುತೆಂಬ ಮದ್ದಲಿ ಸರವು । ಒಳ್ಳೆ
ಘಮ ಘಮ ಬರುವ ಗಂಧದ ವಾಸನೆ । ಮತ್ತೆ
ಚಿಮುಚಿಮುತಿರೆ ಕಾರಂಜಿ ನೀರು । ಇಂತು
ಋಮುಋಮಿಸುವ ಪುರವ ರವಿಯು ನೋಡುದಕೆ
ಚುಮುಚುಮು ಬೆಳಗಾಗಿ ಬರುವನೇನೆಂಬೆ ॥೬॥

ಎತ್ತ ನೋಡಲು ಜನವು ಮತ್ತಿ ಡಾಲ್ವಾಟಗಳು
ಜತ್ತಾಗಿ ಅಲ್ಲಲ್ಲಿ ಸಿಸ್ತುಗಳು । ಸಭೆಯ
ನಿತ್ಯಕಪ್ಪುರ ಗುಗ್ಗುಳ ಬತ್ತಿಗಳು । ಪಾತ್ರ
ನೃತ್ಯ – ಸುಸ್ವರ ಅಭಿನಾರ್ಥಗಳು । ಮೇಲೆ
ಎತ್ತಿದ ಸುತ್ತಲೆ ಛತ್ರ ಚಾಮರ ಹೊಳೆಯುವ
ರತ್ನದ ಪೀಠದೊಳಿರುತಿರೆ ಪೊಡವಿಪನು ॥೭॥

ಬಳಿಯಲ್ಲಿ ಎಡಬಲಕ ಪೊಳೆವ ಮಿಸುನಿ ಬೆತ್ತ
ಒಳೆ ಹಿಡಿದು ಹೊಗಳುವ ಭಟ್ಟಂಗಿಗಳು । ಮತ್ತೆ
ಕಾಳಿನ ಪೂರಿ ಕೀಸರ್ಧಿಡಿಸುವರು । ಪುರವ
ಮೊಳಗಿಸಿ ನಾದಮಯ ಹಾಡುವರು । ಇಂತು
ಥಳಥಳಿಸಿ ಮುತ್ತು ರತ್ನದ ವಸ್ತ ಸಡಗರದಿ
ಇಳೆಯಾಣ್ಮ ನಿತ್ಯ ವೈಭವದಿಂದಿರುತಿರಲು ॥೮॥

ಇನಿತು ಸಂಭ್ರಮದೊಳು ಅನುದಿನವಿರುತಿರಲರಸ
ತನುಜರಿಲ್ಲೆಂಬ ಒಣ ಚಿಂತೆಯಲಿ । ಆಗ
ಮುನಿಪುಂಗ ಜಂಗಮ ಮಾವಿನ್ಹಣ್ಣೀಯುತಲಿ । ಇದನ
ತಿನಿಸು ಮಡದಿಗೆಂದು ಹೇಳುತಲಿ । ಮುಂದೆ
ಘನವೀರ ಕುವರನು ಪುಟ್ಟುವನು ನಿಮಗೆಂದು
ಮುನಿರಾಯ ಅರಸನಿಗೆ ವರಕೊಟ್ಟು ನಡೆದನು ॥೯॥

ಯತಿರಾಯ ಕೊಟ್ಟಣ್ಣು ಅತಿ ಹರುಷದಲಿಯರಸ
ಸತಿ ಹರಿಯಾಲಿಗೆ ಕೊಡುವತಲಿ । ಆ ಸು
ಮತಿ ತಿಂದು ತ್ವಾಟಿ ಬೀಜೊಗೆಯುತಲಿ । ತೊತ್ತು
ಹಿತದಿಂದ ತ್ವಾಟಿಯ ತಿನ್ನುತಲಿ । ಮಂದ
ಮತಿ ಕತ್ತೆ ಬೀಜ ತಿನ್ನುತ ಕುಕ್ಷಿ ತಾ ಬೆಳೆದು
ಮತಿವಂತ ಪುತ್ರರ ಪಡೆದರು  ಗೃಹದಿ ॥೧೦॥



ಸುಂದರಿ ಹರಿಯಾಲಿ ತಿಂದ ಸುರಸಗಳಿಗೆ
ಅಂದು ಕೊಮರಾಮ ಪುಟ್ಟಿದನು । ತ್ವಾಟಿ
ಯಿಂದ ಹುಟ್ಟಿದ ಹೋಲ್ಕಿರಾಮನು । ಬೀಜ
ದಿಂದ ಹುಟ್ಟಿತು ಬೊಲ್ಲೆಂಬ ಕುದುರೆಯು । ಇಂತು
ಒಂದೆ ಘಲದಿ ಜೀವ ಭೂಮಿಗೆ ಬರಲು ದಿನದಿನಕ
ಚೆಂದಾಗಿ ತಮ್ಮನೆಯಾಗ ಬೆಳೆಯುತಿರಲು ॥೧೧॥

ಪರಮ ಉಲ್ಲಾಸದಿ ದೊರೆಯು ಸಕ್ಕರಿ ಫೇಡೆ
ಪುರದೊಳಗಲ್ಲಲ್ಲಿ ಹಂಚುತಿರೆ । ಇರಲು
ಹರುಷದಿ ಚಣಚಣಕ ಕೂಸು ಬೆಳೆಯುತಿರೆ । ಮತ್ತೆ
ಮೆರೆಯುತೆ ಬಾಲಲೀಲೆಯಾಡುತಿರೆ । ಇಂತು
ಬರುತಿರೆ ಎಳೆಹರೆಯು ಒತ್ತೊಡೆದು ಮಕಮೀಸೆ
ಪರಮ ಸುಂದರ ಮುಖ ಮಿರಗುತಲಿಹುದು ॥೧೨॥

ಬೊಲ್ಲನೆಂಬು ಕುದುರೆ ಅಲ್ಲಿ ಬೆಳೆಯುತ್ತಿರಲು
ನಿಲ್ಲದೆ ಅಂತರಲೆ ಹಾರುವದು । ದೊಡ್ಡ
ಕಿಲ್ಲೆ ಅಲಕ್ಕನೆ ಜಿಗಿಯುವದು । ಒಳ್ಳೆ
ಬಲ್ಲಿದ ಹೊಳಿ ಮೀರಿ ಹಾರುವದು । ಮತ್ತೆ
ಬಲ್ಲಿದ ಸರದಿಂದ ಕಲಕಲೋಡುವದು ಯಾರಿಗು
ಎಲ್ಲೆಲ್ಲಿ ಕೈಸಿಗದೆ ಓಡಿಹೋಗುವದು ॥೧೩॥

ಕುದುರೆಯ ಆರ್ಭಾಟ ಚದುರ ಬಣ್ಣಿಸಲಾರೆ
ಒದರಿ ನೆಲಕ ಕಾಲ್ಬಡಿಯುವದು । ನೆಲವು
ಅದರಿ ಖರಪುಟಕೆ ಕೆಂಧೂಳೇಳುವುದು । ತನ್ನ
ಎದುರಿಗೆ ಆರಾರನು ಸುಳಿಯಗೊಡದು ಆ ಕುದುರೆ
ಚದುರ ರಾಮನ ಕಂಡು ಸ್ವಾಧೀನವಹುದು ॥೧೪॥

ಹರಿಯಾಲದೇವಿಯ ಹಿರಿಯಣ್ಣ ಬೈಚಪ್ಪ
ವರಮಂತ್ರಿ ಕಂಪಿಲರಾಯನಿಗೆ । ತನ್ನ
ತರುಳೆ ರಾಮಲದೇವಿ ಇರುವಳಿನ್ನು । ಕೊಟ್ಟು
ವರ ಕೊಮರಾಮಗ ಮದುವೆ ಮಾಡಿಯಿನ್ನು । ಬ್ಯಾರೆ
ವರ ಹೋಲ್ಕಿರಾಮಗ ಪದ್ಮಿನಿಯ ತಂದು ಎಲ್ಲರು
ಪರಮಾನಂದದಿ ಮದುವೆಯ ಮಾಡಿದರಂದು ॥೧೫॥

ಎಲ್ಲ ವಿದ್ಯೆಯೊಳಗ ಬಲ್ಲಿದನೆನಿಸಿದ
ಬಿಲ್ಲು ದಾಂಡೆ ಪಟಗಳ ತಿರುವುವನು । ಒಳ್ಳೆ
ಬಲ್ಲಿದ ಮಲ್ಲಯುದ್ಧ ಮಾಡುವನು । ಗರಡಿ
ಯಲ್ಲಿ ಜೋರು ನಿತ್ಯ ತೆಗೆಯುವನು । ತನ್ನ

ಬಲ್ಲಿದ ಎಪ್ಪತ್ತೇಳು ಮಾನ್ಯರ ಕೂಡುತ
ನಿಲ್ಲದೆ ಎಲ್ಲಿ ಬೇಕಾದಲ್ಲುಡಾವನು ॥೧೬॥

ಪರಿಪರಿ ರತ್ನಮಾಲೆ ಕೊರಳೊಳು ಹಾಕುತಲಿ
ತರತರ ಪೋಷಾಕ ಧರಿಸುತಲಿ । ಮತ್ತೆ
ಜರತರದ ಮುಂಡಾಸ ಸುತ್ತುತಲಿ । ವಜ್ರ
ಹರಳಿನ ಸಿರಪೇಚ ಮೇಲಿಡುವುತಲಿ । ತನ್ನ
ಬೆರಳೊಳು ರನ್ನದ ಹರಳಿನುಂಗುರ ಇಟಗೊಂಡು
ಹೊರಸೂಸಿ ಚಿಮ್ಮುತ ಬೆಳಕು ಹರಿವುತಲಿ ॥೧೭॥

ಧೀರ ಸುಂದರ ಮಹಾವೀರ ಪರಾಕ್ರಮನು
ಏರಿ ಹಯವನು ಒಯ್ಯುತಿರೆ । ಹೊರಗ
ನಾರಿ ಹೋದರ ನೆನೆಸುತಿರೆ । ಹೊಳೆಯ
ನೀರಿನೊಳು ನೀರಾಟವಾಡುತಿರೆ । ಇತ್ತ
ಚಾರು ಚೆನ್ನಿಗ ಹೋಲ್ಕಿ ರಾಮನು ಮಡದಿ
ನಾರಿ ಪದ್ಮಿನಿ ಮನೆಯೊಳು ಹಡೆದಿರಲು ॥೧೮॥

ನಾರಿ ಪದ್ಮಿನಿಯೆಂಬ ವಾರಿಜನೇತ್ರಿಯು
ಮೀರಿದ ಮಗನೊಂದ ಪಡೆಯುತಲಿ । ಆಕೆ
ಮೂರುತಿಂಗಳ ಬಾಣತಿ ಇರುವುತಲಿ । ಮನೋ
ಹಾರಿ ಹೊರಸಿನಲ್ಲಿ ಮಲಗುತಲಿ । ಮೊಲೆಯ
ಧಾರೆ ಕೂಸಿಗೆ ಕೊಟ್ಟು ಮಾರಿ ನೋಡುತಲಿ ಮನದೊಳು
ಮೀರಿದ ಹರುಷದಿಂದಿರುವಳಾ ಚದುರಿ ॥೧೯॥

ಮಡದೇರಿಬ್ಬರು ಬಂದು ಹಡೆದ ಬಾಣತಿತಲೆಯ
ಮುಡಿಬಿಚ್ಚಿ ಎಣ್ಣೆ ಹಚ್ಚೆರೆವುತಲಿ । ಬೆನ್ನು
ಹೆಡಕುಗಳೊರಸಿ ತಪ್ಪಡಿಸುತಲಿ । ಮೇಲೆ
ಸುಡುಸುಡು ನೀರು ತಂದೆರೆವುತಲಿ । ಕೈಯ
ಹಿಡಿದು ಹೊರಸಿನ ಮ್ಯಾಲೆ ಮಲಗಿಸಿ ಮಡದಿಗೆ
ಕಿಡಿಗಿಚ್ಚು ಅಗ್ಗಿಟಿಯ ಬುಡಕಿಟ್ಟ ರಾಗ ॥೨೦॥

ಕುಳ್ಳುಬೆಂಕಿಯ ಮ್ಯಾಗ ಬಳ್ಳೊಳ್ಳಿ ಸೆದೆಹಾಕಿ
ಒಳ್ಳೆ ಸರ್ವಾಂಗದ ಕಾಸುವರು । ಹಸಿದ
ವೇಳೆಗೆ ಬಿಸಿಬೋನ ಉಣಿಸುವರು । ಕಣ್ಣಿ
ಗೊಳ್ಳೆ ಕಾಡಿಗಿ ಕಪ್ಪು ಒರಸುವರು । ಮತ್ತೆ
ಸೊಲ್ಲುಸೊಲ್ಲಿಗೆ ಬಂದು ಬಾಣತಿಯ ಒಡನುಡಿಸಿ
ಎಲ್ಲ ಮಾತನು ಕೇಳಿ ಮುದದಿಂದಿರುವರು ॥೨೧॥



ಪರಿಪರಿ ನಾರೇರ ತರತರ ಸೇವೆಗೆ
ಹರುಷವಾಗುತ ತನ್ನ ಮನದೊಳಗೆ । ನಾರಿ
ಸರಸ ಮಗನ ಕಂಡು ಕರದೊಳಗೆ । ಕೂಸ
ಅರಳೆಲೆ ಇಡಿಸೂತ ಶಿರದೊಳಗೆ । ಹೇಮ
ಕೊರಳೊಳು ಅಸಲಿ ತಾಯಿತ ಮುತ್ತು ರನ್ನದ
ಕರದೊಳು ಬಿಂದುಲಿ ಪರಿಗಳೇನೆಂಬೆ ॥೨೨॥

ನಡುವಿನೊಳು ಬಂಗಾರ ಉಡುದಾರವಿಡಿಸುತಲಿ
ಕಡಗ ಕಾಲೊಳು ಗೆಜ್ಜೆಯಿಡಿಸುತಲಿ । ಒಂದು
ಬಿಡದೆ ಜರದುಂಗಿ ತೊಡಿಸುತಲಿ ಹಸಿದ
ಹುಡುಗನೆಂದು ಮೊಲೆ ಕುಡಿಸುತಲಿ । ಇಂಥ
ಕಡು ಪ್ರೀತಿಯಿಂದಲಿ ಕೂಸಿನ ನುಡಿಸುತ
ಸಡಗರಾನಂದ ಬಡುವಳೇನೆಂಬೆ ॥೨೩॥

ಕುಂಚಿಗಿ ಜರದ್ಹೊಚ್ಚಿ ಅಂಚಿದುಪ್ಪಳ ಹಾಸಿ
ಮಂಚದ ಮೇಲೆ ಮಲಗಿಸುತಲಿ । ಮುತ್ತು
ಗೊಂಚಲದ್ವಾರವ ಇಡಿಸುತಲಿ । ತಾನು
ವಂಚನೆಯಿಲ್ಲದೆ ಪ್ರೀತಿವೆರಸುತಲಿ । ಇಂಥ
ಮಿಂಚುವ ಮಗನನ್ನು ಪಂಚಮುಖನೆ ಕೊಟ್ಟೆಂದು ॥೨೪॥

ಚಿಟಚಿಟನೆ ಚೀರ್‍ಯಳುವ ಮಂಚದೊಳಗಿನ ಕೂಸು
ಪುಟಿಪುಟಿದು ಬೀಳುವದ ಕಂಡು । ತಾಯಿ
ಲೊಟಲೊಟನೆ ಮುದ್ದಿಟ್ಟು ಮುದಿಸುತಲಿ । ಬೆರಳು
ಚಿಟಿಚಿಟಿ ಮುರಿದಪ್ಪಿಕೊಳ್ಳುತಲಿ । ಕೂಸು
ಬಿಟಬಿಟ್ಟೆರಡು ಮೊಲೆ ಗುಟುಗುಟು ಕುಡಿಯಲು
ಚಟಚಟ ದಿಟ್ಟಿಯ ಮುರಿವಳೇನೆಂಬೆ ॥೨೫॥

ಬಾಲನ ಮೇಲೆ ನಿವಾಳಿಸಿ ದಿಟ್ಟಿಯ
ಆಲಯದ್ಹೊರಗೆ ಒಗೆಯುತಲಿ । ಮೇಲೆ
ಆಲಿಸಿ ಮಗನ ಮುಖ ನೋಡುತಲಿ । ಬಹಳ
ಲೀಲೆಯಿಂದಲಿ ತಾನು ಇರುವುತಲಿ । ಮಹಾ
ಮೇಲಾದ ಪುತ್ರೋತ್ಸವದೊಳಿರುವ ನಾರಿಗೆ
ಬಾಲಿಯರಾಗ ವೃತ್ತಾಂತ ಪೇಳುತಲಿ ॥೨೬॥

ನಾರಿ ಪದ್ಮಿನಿ ಕೇಳ ವಾರಿಜನೇತ್ರಿಯೆ
ವೀರ ಕೊಮರಾಮನೆಂಬುವನು । ನದಿಯ
ತೀರದೊಳು ಚೆಂದ ನಲಿದಾಡುವನು । ಅಣ್ಣ
ಬಾರೊ ಕಾಟಣ್ಣ ಬಾರೆಂದು ಕರೆಯುವನು । ಬಾರಿ

ಮೀರಿ ಉಳದೀತೆಂದು ತೋರಮುತ್ತಿನ ಚೆಂಡ ನೀ
ತಾರೊ ಆಡುನು ಮನಪೂರೆಂಬುವನು ॥೨೭॥

ತರವಲ್ಲ ತಮ್ಮನೆ ಹಿರಿಯರಾಡುತ ಕೆಟ್ಟು
ಸರಿದರು ಬೇಡೆಂದು ಪೇಳಿದನು । ಅಣ್ಣ
ತರಹರಿಸುವದು ಮನವೆಂದನು । ತಮ್ಮ
ಸರಿ ಬಾರದೆನ್ನ ಚಿತ್ತದೊಳೆಂದನು । ರಾಮ
ಇರದೆ ಮನಿಗೆ ಬಂದು ಹರಿಯಾಲಿ ದೇವಿಯ
ಚರಣಕೆರಗಿ ಚೆಂಡ ಕೊಡವ್ವೆಂದನು ॥೨೮॥

ಮಗನೆ ಬೇಡದು ಎಂದು ಬಿಗಿದಪ್ಪಿ ಮುದ್ದಾಡಿ
ಬಗೆ ಬಗೆ ರೀತಿಲಿ ಗ್ನ್ಯಾನೇಳುವಳು । ಆಟ
ಸೊಗಸಲ್ಲವೆಂಬೂತ ಸಿರದೂಗುವಳು । ಕರವ
ಮುಗಿವೆ ಮಗನೆ ಆಡಬೇಡೆಂಬುವಳು । ಇದುವೆ
ಜಗಲಿಗಿಟ್ಟು ಪೂಜೆಯಾಗುವ ಚೆಂಡು ಮಗರಾಮ
ತಗಿಬೇಡ ಇದರ ಹಾದಿ ನಗ್ಗೇಡೆಂಬುವಳು ॥೨೯॥

ಹಡದವ್ವ ಈ ಚೆಂಡು ಹಿಡಿಗೆ ಅಮರುವದಿಲ್ಲ
ಕೊಡು ಎಲ್ಲಿ ಕಳೆಯುವದಿಲ್ಲೆಂಬುವನು । ತಾಯಿ
ಕೊಡು ತಡಮಾಡಬೇಡೆಂಬುವನು । ಆಡಿ
ಇಡುವೆನು ತಂದು ಇದ್ದಾಗೆಂಬುವನು । ಮುತ್ತು
ಒಡಿದಾವು ಬೇಡೆಂದು ಕೊಡುವಲ್ಲಿ ಏನವ್ವ
ಬಿಡಲಾರೆ ಆಡುವೆ ಕೊಡು ಕೊಡೆಂಬುವನು ॥೩೦॥

ಮುತ್ತಿನ ಕಂದುಕ ಮುತ್ಯಾ ಮುಮ್ಮಡಿಸಿಂಗ
ಸತ್ತರಿದಕಾಗಿ ಬೇಡ ಮಗನೆಂದಳು । ಇದುವೆ
ಸತ್ಯ ಕೇಡು ತಪ್ಪದು ನಮಗಿನ್ನೆಂದಳು । ಎನ್ನ
ಕುತ್ತಿಗೆ ಕೊಯ್ದಿಂದ ಇದನೊಯ್ಯೆಂದಳು । ನಾರಿ
ಚಿತ್ತ ಪಲ್ಲಟವಾಗಿ ಮತ್ತೆ ಭ್ರಮಿಸುವಳು ಇದಕೇಳು
ಗೊತ್ತು ಮುಟ್ಟದು ಬೇಡೆಂದತ್ತು ಹೇಳಿದಳು ॥೩೧॥

ಪರನಾರಿಗೆನ್ನಯ ಕರಗದು ಮನವೆಂದು
ಹರುಷದಿಂದಲಿ ಚೆಂಡು ಕೊಡ ಕೇಳಿದನು । ತಾಯಿ
ಹರನಾಣೆ ಕೊಡುವೆ ಕೊಡು ಎಂಬುವನು । ನೀನು
ಹರನಾಣೆ ಕೊಟ್ಟರೆ ಮಗನೆ ಹರ ಗತಿ । ನಮಗೆ
ಮರಗುತ ಹಡೆದವ್ವ ಜೋಕೆಂದು ಚೆಂಡ ಕೊಡಲಾಗ
ಕರದೊಳು ಹಿಡಕೊಂಡು ಹೊರಗೆ ಬಂದಾನವನು ॥೩೨॥



ಹರುಷದಿಂದಲಿ ರಾಮ ಪರಮ ಸಿಂಗರದಿಂದ
ನೆರೆಗೂಡಿ ಗೆಳೆಯರಿಗೆ ಹೇಳಿದನಂದು । ಒಳ್ಳೆ
ಪುರಮಾಸಿ ಚೆಂಡಾಟ ಆಡೋಣವೆಂದು । ಸಿಸ್ತು
ಇರುವದು ತಾಣವು ಗೊತ್ತೆ ನಿಮಗೆಂದು । ರತ್ನಾಜಿ
ಅರಮನೆಯಂಗಳವು ಆಡುದಕೆ ಬಲು ಇಂಬು
ನೆರೆದ ಗೆಳೆಯರೆಲ್ಲವ್ರೊರೆದು ಪೇಳಿದರು ॥೩೩॥

ನುಡಿಯ ಕೇಳುತ ರಾಮ ತಡೆಯದೆ ಚಣದೊಳು
ಪಿಡದೇರಿ ತೇಜಿಯ ನಡೆದನಾಗ । ಕಾಳಿ
ಹಿಡಿದು ನಾದಗಳೆಲ್ಲ ನುಡಿದವಾಗ । ಗೆಳೆಯ
ರೊಡಗೂಡಿದಾ ಚಣಕ ನಡೆದರಾಗ । ಒಳ್ಳೆ
ಸಡಗರದಿಂದಲಿ ನಡೆದಾವು ದಂಡಲ್ಲಿ ಕುದುರೆಯ
ಬಿಡವ್ರುತ ಹೋಗಿ ನುಡಿದಾಡುತಿಹರು ॥೩೪॥

ಕೂಡುವರು ಎಲ್ಲರು ಆಡುವರು ನುಡಿದಾಡಿ
ಮಾಡುವರು ಮಸಲತ್ತ ನೋಡುವರು । ಸಿಸ್ತ
ತೋಡಿ ಪಣವ ಕಟ್ಟಿ ಹೂಡುವರು ಲೆಗ್ಗಿ । ಚೆಂಡ
ಬೇಡುವರು ಆಡುತ ನೋಡುತಲಿ । ಮತ್ತೆ
ಆಡುವರು ಒಗೆಯುತ ಓಡುವರು ಚೆನ್ನಾಟ
ಆಡುವರೆಲ್ಲರನು ನೋಡುವಳು ರತ್ನಾಜಿ ॥೩೫॥

ವಾರಿಜನೇತ್ರಿ ನೀ ಬಾರಿತ್ತ ಸಂಗಾಯಿ
ಯಾರೆ ಈತೆಂದು ಕೇಳುವಳು । ಇವನು
ಯಾರು ಹೇಳ ಹೆಸರು ಸೆಲ್ಲೆದಾತ । ಈತ
ಯಾರ ರತ್ನದ ಹರಡವ ಹಾಕ್ಯಾನ । ಇವನು
ಯಾರ ಕೆಂಪನು ಇವನ್ಯಾರ ಕಪ್ಪನು ಮತ್ತಿವನು
ಯಾರ ಸುಂದರ ಇವನ್ಯಾರೆಂಬುತಿಹನು ॥೩೬॥

ಶಶಿಮುಖಿ ರತ್ನಾಜಿ ಹೆಸರು ಹೇಳುವೆ ಕೇಳ
ಹಸಮುಖದೀತ ಕೊಮರಾಮನ । ಬಲಕ
ನಸುಗೆಂಪು ಮೈಕಟ್ಟು ರುದ್ರನ । ಈತ
ದಶದಿಕ್ಕು ಇಮ್ಮಡಿ ಜಟ್ಟಿಂಗನ । ಮತ್ತ
ರಸಿಕ ಸೋಯಣ್ಣ ಕಾಟಣ್ಣ ಸಹಿತ ಲಿಂಗಣ್ಣ
ಕುಸಿಯಿಂದಲಾಡುವನು ಹೋಲ್ಕಿಯ ರಾಮ ॥೩೭॥

ತಾರೆಯ ನಡುನಡುವೆ ತೋರುವ ಚಂದ್ರಾಮ
ತೂರಿ ಚೆಂಡನಾಡುವನಿವನ್ಯಾರ । ತಾಯಿ
ಸಾರುವೆ ಮಗನವ್ವ ಕೊಮರಾಮ । ಸಂಗಿ

ತೋರ ಈತನ ತಂದು ಕೇಳ । ಯಾಕೆ
ಹಾರೈಸುವದು ರತ್ನಾಲಿ ಕೇಳ ಅರಿತಿರಲಿ
ನಾರಿ ಹರಿಯಾಲೆಮ್ಮನ ಮಗನಿವನವ್ವ ॥೩೮॥

ಹರಿಯಾಲಿ ಮಗನೇನ ಸರಿಸವತಿ ನನಗಾಕಿ
ಕರತಂದು ತೋರ ನನಗೇನ । ತಾಯಿ
ತರವಲ್ಲ ರತ್ನಾಲಿ ಪಾಪವಲ್ಲೇನ । ನಾಯಿ
ಹರಿಯದೆ ಮಾಡುವ ಕೂಪೇನ । ಸಂಗಿ
ಥರಥರ ನಡಗುತ ಬರುವೆಯೇನ ಹ್ಯಾಂಗಾರ
ಬರಲಿ ಚೆಂಡೆಂದು ದೇವರಿಗೆ ಬೇಡುವೆನ ॥೩೯॥

ಚೆಂಡಾಟ ನೆವದಿಂದ ಕಂಡೆನೆನ್ನುತ ರತ್ನಿ
ಹಿಂಡದೇವರನು ಭಜಿಸಿದಳು । ಅಮರ
ಗುಂಡ ಮಲ್ಲೇಶನಿಗೆ ಒದಗೆಂದಳು । ದೇವ
ಕೆಂಡಗಣ್ಣಿನ ಹಂಪಿ ವಿರೂಪಾಕ್ಷ। ಈಗ
ಚೆಂಡು ನಮ್ಮನೆಯೊಳು ಕಂಡದ್ದು ಆದರೆ
ದಿಂಡರಕಿ ಹಾಕಿ ಕೈಮುಗಿವೆ ನಾನು ॥೪೦॥

ವರಯುಕ್ತಿಯಿಂದ ದೇವರಿಗೆ ಬೇಡುತ ರತ್ನಿ
ಜರದಂಬರವನುಟ್ಟುಕೊಂಡು । ನಿಂದು
ಕರಿಗೀರ ಹಸರು ಕುಪ್ಪಸ ತೊಟಗೊಂಡು । ವಂಕಿ
ಸರ ಮುತ್ತು ಚಿಂತಾಕ ಬಾಜುಬಂದು । ಒಳ್ಳೆ
ಚರರುವ ರಾಗುಟಿ ಬಂಗಾರ ಮುರಡಿಯ ಸಿಂಗರದಿ
ಕಿರಿಬೆರಳ ಕದಪಿಟ್ಟು ಹೊರಗ ನೋಡುವಳು ॥೪೧॥

ಚೀರುವರು ಅತ್ತಿತ್ತ ಹಾರುವರು ಮ್ಯಾಲಕ
ಹಾರುವರು ಮಂಡೆಗಾಲೂರುವರು । ಪುಟಿದು
ತೋರುವರು ಜಿಗಿಜಿಗಿದ್ಹಾರುವರು । ಮೇಲೆ
ಹಾರುತ ಅಂತರ ತೋರುವರು । ಮನಸು
ಹಾರುವದು ಆಟವು ಸುರುವಾಗಲು ಅದ ನೋಡಿ
ಏರುವದು ರತ್ನಿಗೆ ಪೂರ್ವವಿರಹವು ॥೪೨॥

ಕಡುಚೆಲುವೆ ನಾರಿಯು ಮಿಡಕುತ ಮನದೊಳು
ಕೊಡುಕೊಡು ದೇವ ಕಂದುಕವೆಂದು । ಇಂಥ
ಕಡುಚೆಲುವ ಎನಗೇಕಿಲ್ಲೆದು । ಇತ್ತ
ಹೊಡೆದಾಡು ವೀರರೊಳು ರಾಮ ಹೊಡೆಯಲು । ರತ್ನಿ
ಕಡೆ ಬಾಗಿಲಕ ತಾಕಿ ಚೆಂಡು ಹಾರಿ ಪುಟಿಪುಟಿದು
ನಡುಮನೆಯೊಳು ಬಿದ್ದು ಸಿಡಿದಾಡುತಿರಲು ॥೪೩॥



ಗೆಳೆಯರೆಲ್ಲರು ಮಾರಿ ಹುಳುಹುಳು ನೋಡುತ
ತಿಳಿಯೊ ಕಾಟಣ್ಣ ಚೆಂಡ್ಹೋತು । ರತ್ನಿ
ಬಳಿಗೆ ಹೋಗಿ ಚೆಂಡು ತಾಯೆನುತ । ರತ್ನಿ
ಇಳಿದು ಉಪ್ಪರಗಿಯ ಚೆಂಡುಕೊಂಡು । ನಿಂದು
ಇಳಿಮಾಗೆದ ಕಾಟಣ್ಣ ಸಾಗಿ ಬಳಲುತ ಉಪ್ಪರಿಗಿ
ಯೊಳಗ ಹೋಗಿ ಚೆಂಡು ಕೊಡೆಂದೆರಗಿದನು ॥೪೪॥

ಬರಬಾರದ್ಯಾತಜ ವರರಾಮನಿಲ್ಲಿಗೆ
ತಿರಿಗ್ಹೋಗಿ ಕಳಹು ಅವನಿತ್ತ। ಇಂಥ
ಸರಸ ನಾಜೂಕ ಚೆಂಡಿದೆಂದು । ನಿನ್ನ
ಕರದೊಳು ಕೊಡಲಾರೆ ಹೋಗೆಂದು । ಅಯ್ಯೋ
ಪರಿಪರಿ ಚಾಲೊರೆದ ಎಷ್ಟು ಕೊಡದಾಕಿ ಕಾಟಣ್ಣ
ತಿರುಗಿ ಬಂದೊರೆದ ಕರೆವಳೆನ್ನುತ ॥೪೫॥

ಇಂದು ಘಾತಾದಿತು ಎಂದು ನುಡಿದನು ಕಾಟ
ಬಂತು ವಿಧಿ ಕಾಟವೆನ್ನುತಲಿ । ಕೇಳು
ಮುಂದಾಗಿ ಚೆಂಡಿನಾಟವ ಬೇಡೆಂದೆ । ಮನವ
ಕುಂದಿಸಿ ತಾಯಿಗೆ ಚೆಂಡ ನೀ ತಂದೆ । ರಾಮ
ಬಂದಿತು ನಮಗಿಂದು ವಿಪರೀತವು ರತ್ನಿಗೆ
ವಂದಿಸಿ ಬೇಗನೆ ಚೆಂಡು ತಾರೆಂದ ॥೪೬॥

ನುಡಿಯ ಕೇಳುತ ರಾಮ ತಡಿಯದಲ್ಲಿಗೆ ಹೋಗಿ
ಕೊಡು ತಾಯಿ ಕದುಂಕವೆಂದು । ರತ್ನಿ
ಕಡು ಮೋಹದಿಂದ ಮೊಗ ನೋಡುತಲಿ । ಕಾಮ
ತಡೆಯಲಾರದೆ ಮೋಹಿಸುತ ಕೂಡ ಬಾ
ಪಿಡಿದು ಕರವ ಎಳಿದು ಕೈಗಳ ಚಾಚಿ ॥೪೭॥

ಎರಡು ಕಣ್ಗಳ ಮುಚ್ಚಿ ಹರಹರೆನ್ನುತ ರಾಮ
ಥರಥರನೆ ನಡುಗಿ ಬಿದ್ದನು । ತಾಯಿ
ತರುಳನ ಮೇಲೆ ಇದೇಕೆಂದನು । ಕಾಮ
ತರಂತುರಿ ಮಾಡುವ ರೀತೇನೆಂದನು । ಯಮನ
ಪುರದೊಳು ಕಾಯ ಕರಕರನೆ ಕೊರೆವರು ಕೇಳಮ್ಮ
ದುರುಳ ಬುದ್ಧಿಯೇಟು ತರವಲ್ಲೆಂದನು ॥೪೮॥

ಪಿತ ಸುತ ಹಿತ ಬಂಧು ಯತಿ ಗುರುಗಳು ಬೇರೆ
ಅತಿವೀರ ರಣಕೆ ನೋಡುವನೆ । ಕೊಲೆಯು
ಹಿತವಲ್ಲ ಪಾಪವೆಂಬುವನೆ । ಬಂಟ

ಹತಿಸದೆ ಜೀವಂತ ಬಿಡುವನೆ । ನೋಡು
ರತಿಪತಿ ಸಮರಕೆ ಸತಿಯರಾರೇನು ಕೊಮರಾಮ
ರತಿಭೋಗ ಸಮರದ ಇರಿತವೆಂಬುವಳೂ ॥೪೯॥

ಪರನಾರಿ ಸಂಗದಿ ಸುರರೊಡೆಯ ತಾ ಕೆಟ್ಟು
ತಿರುಗಿದನು ಹರಿ ದಶಭವದೊಳಗೆ । ಮತ್ತೆ
ದುರುಳ ರಾವಣ ಮರುಣಾದನಲ್ಲ । ಪಾಂಡ
ವರ ಸತಿಗೆ ಕೀಚಕ ಅಳಿದನಲ್ಲ । ಇಂಥ
ವರದೀ ಪಾಡು ಪರದಾರ ಸೋಬತಿಗೆ ಬುದ್ಧೆಲ್ಲಿ
ನರಕ ತಪ್ಪದು ತಾಯಿ ಕರಮುಗಿವೆನೆಂದ ॥೫೦॥

ಧಿಟ್ಕೊಮರಾಮ ನಿನ್ನ ಆಟ್ಕಂಡು ಮನಸೋತು
ತಿಟ್ಕುಪ್ಪಸ ನಾ ತೊಟ್ಕೊಂಡೆನು । ಮಾಟ
ಬಟ್ಕುಚಗಳ ಮೇಲೆ ವಸ್ತಿಟ್ಕೊಂಡೆನು । ಮುಡಿಯ
ಬಿಟ್ಕಟ್ಟಿ ಹೂವೇರಿಸಿಟ್ಕೊಂಡೆನು । ಒಳ್ಳೆ
ಘಾಟ್ಕಾಂಬು ನಾರಿಗೆ ಬೇಟ್ಕೊಟ ಕೂಡದಲೆ ಕಾಮನ
ಆಟ್ಕಂಜಿ ಪೋದರೆ ನೇಟ್ಕಾಣೆ ರಾಮ ॥೫೧॥

ಇಳೆಯೊಳು ತಾಯೆಂದು ತಿಳಿತಿಳಿದು ಕೂಡಿದರೆ
ಬಳಲಿಸಿ ಯಮದೂತರೆಳೆಯುವರು । ಒಯ್ದು
ಖಳಖಳ ಕುದಿವೆಣ್ಣ್ಯಾಗ ಚೆಲ್ಲವರು ಬಹಳ
ಹುಳುವಿನ ಕೊಂಡಕ ತುಳಿಯುವರು । ಒಳ್ಳೆ
ಮಳಿಗಳ ಬಲುಕಾಸಿ ಕಣ್ಗೆ ಚುಚ್ಚುವರು ಬಳಲಿಸಿ
ತುಳಿಯುವರು ನರಕಕ ತಿಳಿಯೆನ್ನ ತಾಯಿ ॥೫೨॥

ಅಂಗಜನ ಮೊನೆಬಾಣ ನುಂಗಿ ನನ್ನ ಮನವ
ಅಂಗ ಸಂಗ ಸುಖವ ಬಿಡಲಾರೆ । ರಾಮ
ಭಂಗ ಮಾಡಲು ಬ್ಯಾಡ ನುಂಗಲಾರೆ । ಕಾಮ
ದಿಂಗ ಬಡಿಸಲು ಬ್ಯಾಡ ಚೆನ್ನಿಗನೆ । ಬಾರೊ
ಜಂಗಿ ಕಾಮೂಟಕ ಹಾರಿ ಚೆಂಗನೆ ಕೈಕೊಟ್ಟು
ಅಂಗವಾಲಿಂಗಿಸಿ ಹಿಂಗಿಸು ಕಾಮತಾಪ ॥೫೩॥

ಹೆರವರ ಹೆಣ್ಣಿಗೆ ಹರಿದು ಆಲಿಂಗಿಸಲು
ನರಕ ಹುಳುವಾಗಿ ಹುಟ್ಟುವನು । ಮತ್ತೆ
ಕುರುಡಾಗಿ ಕೂಳಿಗಿ ತಿರುಗುವನು । ಸಿಗದೆ
ಎರಡು ಕೈಲೆ ಹೊಟ್ಟೆ ಬಡೆಯುವನು । ತಾಯಿ
ಕೊರಗಿ ಮರಗಿ ಹದ್ದ ಪಾಲಾಗುವನು ಜೀವಂತ
ಇರುತಿರಲು ಗಿನ್ನಿ ತನ್ನಿ ಹತ್ತಿ ಸೋರುವನು ॥೫೪॥



ಕುಸುಮಶರಕೆ ಬಾಳ ಕಸವಿಸಿ ಬಿಡುತಿಹೆನು
ಹಸಿದವರಿಗನ್ನ ಉಣಬಡಿಸು । ಬಾಳ
ತೃಷೆಯುಳ್ಳವರಿಗೆ ನೀರ ನೀಡಿಸು । ರಾಮ
ವಶವಾದ ಅಂಗನೆಯ ಭೋಗಿಸು । ಎಂದು
ಶಶಿಮುಖಿ ರಾಮಗ ಬಿಗಿದಪ್ಪು ಸಮಯದಿ
ಕೊಸರಿ ಕೈಚೆಂಡ ಕಸಗೊಂಡ ನೋಡಿ ॥೫೫॥

ಭರರರರ ಪ್ರಾಣ ಪಕ್ಷಿ ಹಾರಿತೊ ರಾಮ
ಭರರರ ಓಡಿ ಹೋಗುತಲಿ । ಕಂಡು
ಸರರರರ ವಿರಹ ಹಾರುತಲಿ । ತಲೆಯು
ಗಿರಿರಿರಿರಿ ತಿರುಗಿ ಬೀಳುತಲಿ । ರತ್ನಿ
ಧರರರರ ಹಿಡಿದೆಳೆದು ರಾಮನಹ ಕರೆತರಸಿ
ಖರರರರ ಕೊರೆಸುವೆ ಜೀವಂತ ಸಿರವ ॥೫೬॥

ಛಲದಿ ರಾಮನ ಕೊಲಿಸಿ ಎಳಿಸಿ ಗೋರಿಗೆ ಹಾಕಿ
ಗೆಲಿಸಿ ಕೊಂಬುವೆ ಬತವನು । ಕೋಪ
ಬಲಿದು ರತ್ನಿ ಯುಗತಿ ತಗೆಯುತಲಿ । ಮೈಯ
ಮಾಲೆ ಸಹಿತ ಉಗರಿಲೆ ಚೂರುತಲಿ । ತನ್ನ
ಬಲಗೈಯ ಬಳೆಗಳ ಒಡೆಯುತಲಿ ಸಿಡಿಮಿಡಿ
ತಲೆ ಕಟ್ಟಿ ನೆಲಕ್ಹಾಸಿ ಕೆದರಿ ಮಲಗುತಲಿ ॥೫೭॥

ಚೆನ್ನಿಗ ಕೊಮರಾಮ ಕೆನ್ನಿಗೆ ಕಣ್ಣೀರು
ಬನ್ನ ಬಡೆವುತ ಬಂದ ಅಂಗಳಕ । ಸಾಕು
ನನ್ನೀ ತಾಯಿಯ ಮಾತ ಕೇಳದೆ ತಂದೆ । ಚೆಂಡ
ಸೊನ್ನಿಲಾಡದೆ ಲೆಗ್ಗಿ ಏರಾಡಿದೆ । ಅಯ್ಯೊ
ಅಣ್ಣ ಕಾಟಣ್ಣಗ ಇದುರಾಡಿದೆ ಈ ಪಾಟ
ಬೆನ್ನ ಸೀಳ್ವುದು ಕಾಯೊ ಎನ್ನ ಜಟ್ಟಿಂಗ ದೊರೆಯೆ ॥೫೮॥

ಕಂಪಿಲರಾಯನ ಬೇಟಿ ಸಂಪಿನಿಂದಲಿ ಆಡಿ
ಕಂಪ ಕತ್ತುರಿ ಹೊತ್ತುಂದಿದ್ದ । ರತ್ನಿ
ಚಿಂಪು ಚಿಪ್ಪುಡಿಯಾಗಿದ್ದು ಕಂಡ । ಕೋಪ
ಕೆಂಪೇರಿ ಕಿಡಿಕಿಡಿ ಕಾರಿದ । ಮಡದಿ
ನೆಂಪ ಮಾಡಿ ಹೇಳ ಜುಲುಮೆ ಮಾಡಿದವನ
ಹೆಂಪೇರಿ ಕೊಯ್ದಂಗ ಈಗ ಕೊಯ್ಸುವೆ ॥೫೯॥

ಏನು ಹೇಳಲಿ ನಾಥ ಮಾನಹಾನಿಯ ನಾನು
ತಾನು ಮೈಮೇಲಿ ಏರಿ ಬಂದ । ರಾಮ
ಗ್ಯಾನವೇಟಿಲ್ಲದ ಕಾಮಕಂದ । ಎಳೆದ

ಸ್ವಾನ ಒಲ್ಲೆ ನಾನೆನಲು ಮೈಚೂರಿದ । ನಾಥ
ತಾನೆ ಚೆಲುವನೆಂದ ಮೇಲೆ ಬಂದ ನೀರೆ ಬಾ
ನೀನೆ ಕಾಮಾಟ ಕೊನೆಯೂಟಕೆಂದ ॥೬೦॥

ಪೊಡವಿಪತಿಯೆ ಕೇಳು ಆಡುತಾಡುತ ಚೆಂಡು
ಸಿಡಿದು ಮನಿಯಾಗ ಬೀಳುತಲಿ । ಚೆಂಡು
ಕೊಡುಯೆಂದು ಬಂದೆನ್ನ ನೋಡುತಲಿ । ಎನ್ನ
ಕಡುಚೆಲ್ವ ರೂಪಕ ಭ್ರಮಿಸುತಲಿ । ಎನ್ನ
ಕೆಡಿಸಿದ ಪರಿಯನು ನಾನೇನು ಹೇಳಲಿ ರಾಮನ
ಹೊಡಿಸಿ ರುಂಡರಕ್ತ ಹಣಿಗಿಟ್ಟು ನುಡಿಯೊ ॥೬೧॥

ಸತಿಮಾತ ಕೇಳುತಲಿ ಅತಿಕೋಪ ಭೂಪತಿ
ಮತಿವಂತ ಬೈಚಪ್ಪಗ್ಹೇಳಿದನು । ಮಂತ್ರಿ
ಸುತನ ಹೊಡೆದು ತಲೆ ತೋರೆಂದನು । ಕೇಳಿ
ಮತಿವಂತ ಮರುಗುತ ಕೊರಗಿದನು । ದೊರೆಯ
ಸತಿಯರ ಕೃತಕವ ಅರಿಯದಲೆ ಒಮ್ಮೆಲೆ
ಮತಿಗೆಟ್ಟು ಸುತನ ತಲಿ ಹೊಡಿಸಬಹುದೆ ॥೬೨॥

ತಿಳಿಯೆಲೆ ಮಂತ್ರೀಶ ಅಳಿಯನೆಂಬುತ ಪ್ರಾಣ
ತುಳಿಸದಿರೀ ಚಣಕ ಕೇಳ್ಯಾನು । ಕೊನೆಗೆ
ಎಳಿಸಿ ನಿನ್ನಯ ತಲೆಯ ಹೊಡಿಸುವೆನು । ಹೊಡಿರಿ
ಅಳುಕದೆ  ಮರು ಅಪ್ಪಣೆಯೆಂದನು । ಮಾತು
ಒಳಗ್ನುದುಗಿ ಅಡಗುತ ಕೇಳಿ ಮೈನಡಗುತ
ತಳಮಳಿಸಿ ನೊಂದು ನುಡಿಯದಾದನು ॥೬೩॥

ಚಣದೊಳು ಬೈಚಪ್ಪ ಎಣಿಸದೆ ರಾಮನ
ತಣಿಸಲು ಕಂಪಿಲರಾಯನಿಗೆ । ಹಿಡಿಸಿ
ಜನ ಕೊಟ್ಟು ಕರೆಸಿದ ಛೀ ಹಾಕಿ । ರಾಮ
ನಿನಗೆ ತಿಳಿಲಿಲ್ಲವಪರಾಧ ಮಾಡುದಕೆ । ತಾಯಿ
ಮನ ನೋಯ್ಸಿ ವ್ಯಭಿಚಾರ ಕೇಳುದಕೆ ಪಾಪಕೆ
ಕೊನೆ ಬಂತು ಜನುಮ ಉಳಿಸುವರಾರು ॥೬೪॥

ಪುರದೊಳು ರಾಮನ ಸಿರವ ಹೊಡಿಯುವರೆಂದು
ಹರಿದ ಸುದ್ದಿ ತಾಯಿ ಕೇಳಿದಳು । ಮರುಗಿ
ಮರಮರನೆ ಧರೆಯ ಮೇಲುರುಳಿದಳು । ಎದ್ದು
ತರುಳನ ಬಳಿಗೆ ಹೋಗುತಲಿ । ಎನ್ನ
ಕೊರಳ ಹರಿದು ಹೋಗೆನ್ನುತಲಿ ಮಗ ರಾಮ
ಮರೆದು ಜೀವಿಸಲ್ಯಾಂಗ ಹೇಳೆಂದಳೂ ॥೬೫॥



ಹರಿಯಾಲಿ ಹಡೆದ್ಹೊಟ್ಟೆ ಕರೆದು ಬೈಚಪ್ಪನಿಗೆ
ತರುಳನ ತುಳಿಸನ್ನು ದುರುಳೆ । ಆರೊ
ಹರನೆ ರಾಮಲಿಂಗನೆ ನೀ ಕಾಯೊ । ನಿನ್ನ
ಹೊರತು ನಮಗ್ಯಾರಿಲ್ಲ ಶಿವಶಿವನೆ । ಎಂಥ
ಹರಲಿಯ ಮಾತಿದು ಲಾಲಿಸ ತಂಗಿ ರತ್ನಾಲಿ
ಸರಿಯಲ್ಲ ದುರುಮರಣ ರಾಮಗ ತಾಯಿ ॥೬೬॥

ಮಡದಿ ರಾಮಲದೇವಿ ತಡೆಯದಲ್ಲಿಗೆ ಬಂದು
ಕಡು ಚೆಲ್ವ ಕಾಂತನ ನೋಡುತಲಿ । ದುಃಖ
ಅಡರಿ ಎದೆಯೆದೆ ಹೊಡೆಕೊಳ್ಳುತಲಿ । ಎನ್ನ
ಗುಣ ರನ್ನನೆ । ಮೋಹನನೆ । ಸಂಪನ್ನನೆ
ಹೊಡೆದು ಮುಂದಕಡಿ ಇಡೆಂದಳು । ಜಲ್ಮ
ಸುಡುಸುಡು ಬಾಳೇಕೆಂದಳು । ಎಂದು
ಹೊಡಮರಳಿ ನೆಲಕ ಬೀಳುತಲಿ ಬಡಿಯಲು
ಒಡೆದು ಹಣಿನೆತ್ತರ ಸೋರುದೇನೆಂಬೆ ॥೬೭॥

ಮನ್ಯ ಮನ್ಯರು ಬಂದು ಮನ್ನುಣಿಯಿಂದಲಿ
ಚೆನ್ನಿಗ ರಾಮನಪ್ಪುತಲಿ । ತುಂಬ
ಕಣ್ಣೀರು ಸುರಸಿ ಚೀರಿ ಅಳ್ವುತಲಿ । ರಾಮ
ನಿನ್ನ ಮರೆವುದ್ಯಾಂಗನ್ನುತಲಿ । ಕೇಳು
ವೀರನೆ । ರಣಶೂರನೆ । ಬಹುಧೀರನೆ
ಇನ್ನು ಛಪ್ಪನ್ನ ದೇಶಕಿಲ್ಲೆಂಬುವರು । ಶಿವನೆ
ಚೆನ್ನಿಗ ರಾಮನ ಸಲಹೆಂಬುವರು । ನಾವು
ಮುನ್ನೂರು ಸಾವಿರ ಗಣಗಳೂಟಕ ತಪ್ಪದಲೆ
ಸಣ್ಣಕ್ಕ ಹೋಳಿಗೆ ಚೆನ್ನಿಸಕ್ಕರಿತುಪ್ಪ ಹಾಕುವೆವು ॥೬೮॥

ಚೆಂದುಳ್ಳ ರಾಮನು ಇಂದು ನಮ್ಮಗಲುವನು
ನೊಂದು ಗೆಳೆಯರೆಲ್ಲ ದುಃಖಿಸಿ । ನೇತ್ರ
ದಿಂದಲಿ ಕಣ್ಣೀರು ಹರಿಯುತ । ಇದಿಯು
ಬಂದು ರಾಜ್ಯ ನುಂಗಿತೆನ್ನುತ । ಅಯ್ಯೋ
ವಿಧಿ ಬಂದಿತೆ । ಮುಂದೆ ನಿಂತಿತೆ । ಕೇಡ ತಂದಿತೆ
ಇಂದಿಗೆ ಋಣ ತೀರಿತೆನ್ನುತಲಿ । ಶಿವನೆ
ಮುಂದೇನು ಗತಿಯೆಂದು ಗೋಳಿಡುತಲಿ । ಕೂಡಿ
ಮಂದಿ ಎದೆ ಬಡಕೊಂಡು ಜಟ್ಟಿಂಗ ರಾಮಲಿಂಗ
ವಂದಿಸಿ ಬೇಡುವೆವು ಸಲಹು ನೀನೀಗ ॥೬೯।

ನೆರೆದ ಜನರಿಗೆಲ್ಲ ಕರಮುಗಿದು ಕೊಮರಾಮ
ಶಿರವಾಗಿ ಕೈಮುಗಿದು ನುಡಿದು । ಬ್ರಹ್ಮ
ಬರೆದಂತಾಗಲಿ ಚಿಂತಿಸಿ ಫಲವೇನು । ಪಾಪ
ವಿರದೆ ಶಿರವು ಪೋಗುವದೇನು । ಕೇಳಿ
ಹೀಗೆ ಆಡಿದ । ಧೈರ್‍ಯ ತಾಳಿದ । ಜನ ಕೇಳಿದ
ಬರುವೆನು ಕೃಪೆಯಿರಲಿ ನಮಿಸಿದ । ರಾಮ
ತೆರಳಿದ ಮತ್ತೊಂದು ಬಗೆಯದೆ । ಜನರು
ಮರುಗುತ ಹರಹರನೆ ಉಳಿಸೆಂದರು ಮರಳಿತು
ಸುರಿಸುತ ಕಣ್ಣೀರು ಬರುತ್ತಿದ್ದ ರಾಮ ॥೭೦॥

ಪಿಡಿದೋದು ರಾಮನ ಅಡವಿಯಾರಣದಾಗ
ನುಡಿಸಿ ಮಂತ್ರೀಶ ಕೇಳಿದನು । ಇಂಥ
ಹುಡುಗ ಬುದ್ಧಿ ಮಾಡಿದ್ಯಾಕೆಂದನು । ಶಿರವ
ಹೊಡೆವೆನು ಖಡ್ಗ ತಾರೆಂದನು । ಅಯ್ಯೊ
ಮಾಡಿದಿ ಚ್ಯಾಷ್ಟಿ ನೀ । ಬಹುದುಷ್ಟ ನೀ । ಕೆಟ್ಟ ಭ್ರಷ್ಟ ನೀ ।
ಹಡೆದವ್ನ ವಚನ ಮೀರಿದೆಂದನು । ಕೇಡು
ತಡೆಯದೀ ಚಣ ಬಂತೆಂದನು । ತಪ್ಪು
ತಡೆಯಲಾರೆನು ರಾಮ ನಾ ನಿನ್ನ ಶಿರವಿಲ್ಲೆ
ಕಡಿವೆನು ಖಡ್ಗಕೊಡು ಬೇಗೆಂದನು ॥೭೧॥

ನುಡಿಯಲಾಗ ಎದಿಗೆ ಹೊಡೆದಂತೆ ಮೊನೆಬಾಣ
ಬಿಡು ಕೇಡ ನುಡಿಯನಾಡುದನು । ದುಃಖ
ಅಡರುತ ಪಾಪಿ ನಾನಲ್ಲೆಂದನು । ಮತ್ತೆ
ಕೆಡಕು ಗುಣಗಳಿದ್ದರೆ ಹೊಡಿಯೆಂದನು । ಇದಿಯು
ಮುಂದ ತಿಳದೀತು । ಮಾತು ಹೊಳದೀತು । ಮನವಿಳಿದೀತು
ಬಿಡದೆ ಇದಿ ಕಾಡುತಿರ್ಪುದೆಂದನು । ನಾನು
ನುಡಿದರೆ ಹುಸಿ ಮಾತಾಗುವದೆಂದನು । ಮಾವ
ಹಿಡಿ ಖಡ್ಗ ಝಳಪಿಸಿ ಕರದೊಳೆಂದನು ತಡವೇಕೆ
ಹೊಡಿಯೆನ್ನ ಶಿರವನ್ನು ಕೊಡುತಿರ್ದನವನು ॥೭೨॥

ಫುಲ್ಲಲೋಚನ ನಿನ್ನ ಎಲ್ಲ ಹೋಲಿಕಿರಾಮ
ನಿಲ್ಲದಲೆ ಓಡಿ ತಾ ಬಂದನು । ಅಣ್ಣಾ
ಇಲ್ಲಿಗೇತಕೆ ಬಂದೆ ನೀನೆಂದನು । ಬಂಧ
ದಲ್ಲಿ ಇರುವ ಕಾರಣೇನೆಂದನು । ಅಯ್ಯೊ



ಇಂಥಾದಾತೇನು । ನಿನ್ನ ಚಿತ್ತೇನು । ಈ ಸುದ್ದೇನು
ಅಲ್ಲಿ ರಾಮನ ಪಾದಕ್ಕೆರಗಿದನು । ಮತ್ತೆ
ಸೊಲ್ಲು ಸೊಲ್ಲಿಗೆ ದುಃಖ ತೋಡಿದನು । ಜೀವ
ನಿಲ್ಲದು ಬೇಗನೆ ಪೇಳೆನಲು ಕೊಮರಾಮ
ಎಲ್ಲ ತನಗಾದುದ ನಿಲ್ಲದೆ ಹೇಳಿದನು ॥೭೩॥

ಹಿರಿಯಣ್ಣ ನಿನಗಿಂಥ ಹರಲಿಯ ಪರಿಯೇನು
ಮರುಗಿ ಧರೆಮ್ಯಾಲೆ ಉರುಳಿದನು । ಎನ್ನ
ಶಿರವ ಕೊಡುವೆ ಕೊರೆ ಎಂದನು । ಚಿಂತಿ
ಮರೆತು ಸುಖದಲ್ಲಿರು ಎಂದನು । ನಿನ್ನ
ಬಂಧಿ ಕಡಿಸುವೆ । ನಿನ್ನ ಬಿಡಿಸುವೆ । ಗುಪ್ತ ಇಡಿಸುವೆ
ಇರುವದು ಹೋಲಿಕಿ ನಿನ್ನಂತೆ ನನ್ನದು । ರತ್ನಿ
ಅರಿಯಲು ಬದಲು ಇದೆಂಬುದನು । ನಿನ್ನ
ಮರೆದು ಇರುವುದ್ಹ್ಯಾಂಗೆಂದು ಹೊಲ್ಕಿರಾಮ
ಶಿರ ಬೇಗ ಹೊಡೆಯೆನುತಿರ್ದನಗ್ರಜಗೆ ॥೭೪॥

ನಿನ್ನಂಥ ತಮ್ಮನ ಇನ್ನೆಲ್ಲಿ ಕಾಣೆನಯ್ಯ
ಎನ್ನೂತ ದುಃಖದಿಂದಪ್ಪಿದನು । ತನ್ನ
ಕಣ್ಣೀರಿಂದಲಿ ಮೈದೊಳೆದನು । ಮತ್ತೆ
ಮನ್ನಿಸಿ ಹಿತಮಿತ ಹೇಳಿದನು । ಬೇಗ
ಕೇಳು ತಮ್ಮನೆ । ನೀನು ಸುಮ್ಮನೆ । ಪೋಗು ಘಮ್ಮನೆ
ತನ್ನ ಪುಣ್ಯ ಪಾಪ ತನಗೆಂದನು । ಇದಿಯು
ಬೆನ್ನ ಬಿಡದೆ ಉಣಿಸುವದೆಂದನು । ಕೇಳು
ಅಣ್ಣ ಇಂಥ ಅನ್ಯಾಯ ತರವಲ್ಲ ಎಂದೆನುತ
ನಿನ್ನ ಕೊಲ್ಲಿಸು ಕೆಲಸ ಹೀನೆಂದನು ॥೭೫॥

ಕತೆಯ ಪೇಳುವೆನಣ್ಣ ಹಿತದಿಂದ ಲಾಲಿಸು
ಮತಿವಂತ ಪುತ್ಥಳಿ ಮೂವತ್ತೆರಡು । ಪರರ
ಹಿತಕಾಗಿ ವಿಕ್ರಮರಾಜನು । ಪ್ರಾಣ
ಹತವಾದ ವಿಧಿ ಮಾಡುವದೇನು । ಶಿವನೆ
ಇಂಥ ನೀತಿಯು । ಕೇಳುಪ್ರೀತಿಯು । ಮಾಡುಜಾತಿಯು
ಬತಗೆಟ್ಟು ಮಾಡಿದ ಮಾತಿನ ಮರ್ಮವು । ಕೇಳು
ಮತಿವಂತ ಮಂತ್ರಿಗೆ ಅರಿಕೆಯು ಅಣ್ಣಯ್ಯ
ಅತಿ ಬೇಗ ಹೇಳು ಹತಿಸಬೇಡೆಂದ ॥೭೬॥

ತರವಲ್ಲ ತಮ್ಮನೆ ಮರೆಯಲಾರದು ವಿಧಿಯು
ಹರ ಹರಿ ನರರನುಭವಿಸಲಿಲ್ಲೆ। ಪಾಂಡ
ವರು ಮನಿಮನಿ ತಿರಿದುಣ್ಣಲಿಲ್ಲೆ। ವನಕ
ಚರಿಸಿ ರಾಮ ಶೋಕಿಸಲಿಲ್ಲೆ। ಕೇಳು
ರಾಮಸೀತೆಯು । ಧರ್ಮದ್ರೌಪತಿಯು । ವೀರರತಿಪತಿಯು
ಹರಿಚಂದ ಹೊಲೆಯಾಳಾಗಲಿಲ್ಲೆ। ನಳನು
ಧರೆಯೊಳು ದೇಶ ಬಿಡಲಿಲ್ಲೆ। ಇಂತೀ
ದೊರೆಗಳು ದುಃಖ ಪರಿಭವಿಸಿದಾಗ ಹೇಳಯ್ಯ
ಪರರ ಹಿತಕರು ಯಾರು ಬಿಡಿಸಿದರೇನಲು ॥೭೭॥

ಕತೆ ಕೇಳು ಅಣ್ಣಯ್ಯ ಸತ್ಯೇಂದ್ರ ಚೋಳನ ಮಗ
ಮತಿವಂತ ರಾಜಶೇಖರನೆಂಬವನು । ಮೈತ್ರ
ಹಿತವಾದ ಮಂತ್ರಲಕ್ಷನೆಂಬವನು । ಇರುತ
ಅತಿ ಪೇರಿಯೊಳು ರಾಜಶೇಖರನು । ಮಗನ
ಹಯ ಒದ್ದೀತು । ಕೂಸು ಬಿದ್ದೀತು । ಜೀವ ಹೋದೀತು
ಸತ್ಯೇಂದ್ರ ರಾಜನಿಗೆ ತಾಯಿ ದೂರಿದಳು । ಸುತನ
ಅತಿ ಕೋಪದಿ ಮಂತ್ರಿ ಹೊಡಿಯೆಂದನು । ಶಿರವ
ಹತಿಸುವ ವ್ಯಾಳ್ಯೇಕ ಮಿತ್ರ ಮಂತ್ರ ಲಕ್ಷ ಬಂದು
ಗತಿಯಾದೆನೆಂದು ಕುತ್ತಿಗೆ ಕೊಟ್ಟನು ॥೭೮॥

ಬಿಡು ತಮ್ಮ ಮಾತ್ಯಾಕ ಜಡಜಬಾಣನ ಸಾಂಬ
ಸುಡುವಾಗ ಹರಿಬಂದು ಬಿಡಿಸಿದನೆ । ಪೆರೆಯ
ಹಿಡಿವ ರಾಹುಬಂದು ಬಿಡಿಸಿತೇನು । ಕೃಷ್ಣ
ಮಡಿವಾಗ ಪಾಂಡವರು ಪಿಡಿದರೇನು । ಮತ್ತೆ
ಕೇಳು ಚಂದ್ರನು । ದೇವೇಂದ್ರನು । ಈ ಕುಬೇರಿಂದ್ರನು
ಒಡಗೂಡಿ ದೇವರ ಸಮೂಹವು । ಶಿವನು
ಸುಡುವಾಗ ದಕ್ಷನ ಬಿಡಿಸಿದರೇನು । ಜೀವ
ಬಿಡುವ ಸಮಯದಿ ತಾಯ್ತಂದೆ ಬಳಗೆಲ್ಲ
ಒಡಹುಟ್ಟಿದವರು ಬಿಡಿಸುವರೇನು ॥೭೯॥

ಬಿಡು ಮಾತು ಅಣ್ಣನೆ ಒಡಲುರಿ ತಾಳದು
ಕೊಡುವೆನು ಎನ್ನ ಪ್ರಾಣವನು । ತಮ್ಮ
ಬಿಡು ಧರ್ಮವೇ ನೀ ನಡೆಯೆಂದನು । ಅಣ್ಣ
ಕೊಡುವೆನು ಭಿಡೆಯಿಲ್ಲ ಪ್ರಾಣವನು । ಅಯ್ಯೊ
ಮನ ನೊಂದುತ । ದೇಹ ಕುಂದುತ । ಮುಖ ಕಂದುತ



ಬಿಡು ಹಟ ಬೇಡೆಂದು ಮಿಡುಕಿದನು । ತಮ್ಮ
ತಡೆಯದಪ್ಪಣೆ ಕೊಡಣ್ಣ ಎಂದನು । ಪಿಡಿದು
ಒಡಗೂಡಿ ಶೋಕದಿ ಬಿಗಿದಪ್ಪುತ ಮಂತ್ರೀಶ
ತಡವಾದೀತೆಂದು ರಾಮನ ಹಿಡಿದೆಳೆದನು ॥೮೦॥

ಪಿಡಿಯಲಾಕ್ಷಣ ಮಂತ್ರಿ ಕಡುಕೋಪದಿ ಪೋಲ್ಕಿರಾಮ
ಬಿಡು ನನ್ನಣ್ಣನೆಂಬುವನು । ಮತ್ತೆ
ಬಿಡದಿರೆ ಜಡಿಯುವೆ ಕಡಿಯುವೆನು । ಶಿರವ
ಎಡೆಮಾಡಿ ಕೈಮುಗಿವೆ ಶಿವನಿಗೆ । ಅಯ್ಯೊ
ಇಂಥ ಕರ್ಮೇನು । ಮಾಡು ಧರ್ಮೇನು । ನಿನ್ನ ವರ್ಮೇನು
ಮಡಿಯುವೆ ಅಣ್ಣನ ಕಾಲಾಗ ನಾನು । ಎಂದು
ಕೊಡುದಿಲ್ಲ ಅಣ್ಣನ ಮಂತ್ರೀಶ ನಾನು । ಕೇಳು
ಕೊಡುವೆನು ಶಿರವನು ಕಡಿ ನೀನು ತಡಬೇಡ
ಹೊಡಿಯದಿದ್ದರೆ ರಾಮಲಿಂಗನಾಣೆಂದನು ॥೮೧॥

ಆಲಿಸು ಪದ್ಮಿನಿ ಹೋಲಿಕಿ ರಾಮಯ್ಯ
ಮೇಲಾದ ನಿನ್ನ ಪುರುಷತ್ವ। ಹೋದ
ಕಾಲವು ಬಂದಲ್ಲಿ ಒದಗಿತವ್ವ। ಮತ್ತೆ
ಶೂಲಧರನೀಗ ಮುನಿದನವ್ವ। ನಾರಿ
ಕೇಳು ಆತನ ತೆಲಿಯ ಮಂತ್ರಿ ಹೊಡೆಯಲು
ಆಲಸವಿಲ್ಲದೆ ಮಡಿದನಾಗವ್ವ ॥೮೨॥

ಕೇಳಕೇಳುತ ಎದಿಯ ಕಾಳಜ ತಾ ಒಡಿದು
ಕಾಳಗವಿದು ಕಣ್ಣು ಕಾಣದಲಿ । ಒಳ್ಳೆ
ಗೋಳಿಟ್ಟು ಬೋರಾಡಿ ಚೀರುತಲಿ । ದುಃಖ
ತಾಳದೆ ಒಡಲುರಿ ಏಳುತಲಿ । ತಿರುಗಿ
ಬೀಳುತಲಿ ತಲೆಯೊಡೆದು ಚೀರುತಲಿ ಅಂಜುತಲಿ
ಕೇಳುತ ನಾರೇರು ಗದಗುಟ್ಟಿ ನಡಗುತಲಿ ॥೮೩॥

ಪರಿಪರಿ ದುಃಖದಿ ಉರುಳಿ ಭೂಮಿಯ ಮ್ಯಾಗ
ಕರಕರ ಕಂದಿ ಕರಗುತಿರ್ದಲು । ಅಯ್ಯೊ
ಮರಮರನೆ ಮನದೊಳು ಮರಗುವಳು । ಒಮ್ಮೆ
ಚಿರಿಚಿರಿ ಬಳಲುತ ಉರುಳುವಳು ಪದ್ಮಿನಿ
ಹರಹರ ಸ್ಮರಿಸುತ ನಮಿಸುವಳು ॥೮೪॥

ಒಡಲುರಿ ತಾಳದೆ ಹೊಡಮರಳಿ ಬೀಳುತ
ಸಿಡಿದು ಗುಡುಗುಡು ಉರುಳುತಲಿ । ಸಣ್ಣ

ಮಿಡಿಮೀನ ಪರಿಯಂತೆ ಮಿಡುಕುತಲಿ। ಹಣೆಯ
ಬಡಿದು ನೆಲಕ ಧೂಳಡರುತಲಿ। ಮಾರಿ
ಒಡೆದು ನೆತ್ತರ ಸೋರಿ ಹರಿಯುತಲಿ ಆ ನಾರಿ
ಸುಡು ಜಲ್ಮವೆನ್ನತ  ಬಡಕೊಂಡಳಯ್ಯೋ ॥೮೫॥

ಏಳಲು ಚೇತರಿಸಿ ಮೇಲೆದ್ದು ನಿಲ್ಲಲು
ತಾಳದೆ ಭೂಮಿಗೆ ಬೀಳುವಳು। ಅಯ್ಯೊ
ಬಾಳಲೋದನೆ ಮುನಿದನೆಂಬುವಳು। ಎನ್ನ
ಅಳುವ ದೊರೆಯು ಮುಡಿದನೆಂಬುವಳು। ಏನು
ಹೇಳದೆ ಹೋದನು ಬಾಳಲಿನ್ನೇನು ರಾಮಲಿಂಗ
ಬೀಳುವೆ ಬೆಂಕ್ಯಾಗ ಬೂದ್ಯಾಗಲಯ್ಯೋ ॥೮೬॥

ಮೈಯಾಗ ಅರುವಿಲ್ಲ ಕಾಯ ಕಾಂತನ ಬಯಸಿ
ಬಾಯೆಂದು ಬಯಲಪ್ಪಿಗೊಂಬುವಳು। ಗೋಡೆ
ಹಾಯುತ ಧಡಧಡ ಬೀಳುವಳು। ಒಮ್ಮೆ
ಮಾಯಾಮೋಹವೆ ಬಾ ಕೈಚಾಚುವಳು। ಚೀರಿ
ಬಾಯೆದ ಬಡಕೊಂಡು ಘಾಯಾಗುತಲಿ ತುಟಿಜೇನ
ಮಾಯಾದಿ ಎನ್ನ ಜೀವದ ಬೆಳಕ ॥೮೭॥

ಮುತ್ತಿನ ಮೂಗುತಿ ಎತ್ತ ಒಗಿಯಲೆವ್ವ
ಸತ್ತ ಗಂಡಗ ಮೂಲವ್ವ। ಹಣಿಗೆ
ಕತ್ತುರಿ ಕುಂಕುಮ ಎರವಾತ। ಎನ್ನ
ಮುತ್ತೋದಿತನವಿಂದಿಗ್ಹಾಳಾತ। ಮಾರಿ
ಎತ್ತಿ ತಿರುಗಿ ಗರತೆರೋಳಿರಲಾರೆ ಅನುತ
ಕುತ್ತಿಗಿ ಶಿರಬಿಗಿದು ದುಃಖಿಸಿ ಬಿಕ್ಕುವಳು ॥೮೮॥

ಮಂಡಲದೊಳು ನಾನು ರಂಡಿಯಾದ ಮೇಲೆ
ದಂಡಿಮುತ್ತಿನ ಕೊಟ್ಟು ಕೊಂಡೇನೆಂದ। ಹಣಿಯ
ಮಂಡಲೊಳು ಕುಂಕುಮಿಟ್ಟೇನೆಂದ। ಕರೆದು
ಕೊಂಡು ಮುತ್ತೋದಿಗಳುಂಡೇನೆಂದ। ಎನ್ನ
ಗಂಡನ ಕೊಲ್ಲಿಸುತ ಕೆಂಡಗಣ್ಣಿನ ಶಿವ ತನ್ನ
ರುಂಡಮಾಲಿಗೆ ಶಿರವ ಕೊಂಡನೆನಲು ॥೮೯॥

ಕಡುಚಲುವ ಕಾಂತನು ಅಡಗಿದ ಚಣದೊಳು
ನಡುನೀರಾಗ ಕೈ ಬಿಟ್ಟಂಗವ್ವ। ಘೋರ
ಅಡವಿಯ ಹೊಗಿಸಿ ಮರೆತಂಗಾತವ್ವ। ಈಗ



ಪೊಡವಿಯೊಳಿಂಥ ಕಡುಪಾಪಿಲ್ಲವ್ವ। ಎಂದು
ಅಡರಿ ನೆಲಕ ಬಡಿದು ಅಳುತಿರಲು ತುಂಬಿದ
ಹಡಗ ನಡುಗಡಲಾಗೊಡೆದಂಗಾತವ್ವ ॥೯೦॥

ವಡವಾಗ್ನಿ ಉರಿಯೆದ್ದು ಸುಡುವದು ಮೈಯೆಲ್ಲ
ಕೊಡ ನೀರು ಗುಟುಗುಟು ಕುಡಿಯಲೇನ। ಒಳ್ಳೆ
ಮಡುವಿರ್ದ ನೀರೊಳು ಧುಮುಕಲೇನೆ। ತಾಪ
ತಡೆಯದೆ ಅಲ್ಲಿಗೆ ಪೋಗಲೇನೆ। ದೀಪ
ಹಿಡಿದ ಹುಳದಡಿಗಳ ಪರಿಯಂತೆ ಪದ್ಮಿನಿ
ಅಡಿಗಳ ಹೊಸೆದಾಡಿ ಸಿಡಿದುರುಳುತಿರಲು ॥೯೧॥

ಮರೆಯಲಾರೆನು ಎನ್ನ ಅರಸನಿಲ್ಲದೆ ಈಗ
ಗಿರಿಯ ಮೇಲೇರಿ ಕೆಳಗ್ಹಾರಲ್ಯಾ। ದೊಡ್ಡ
ಶರಧಿಯೊಳು ಬಿದ್ದು ಮುಳುಗ್ಹೋಗಲ್ಯಾ। ಘೋರ
ಧರಣಿಯ ಬಗದಾಳ ಸೇರಲ್ಯಾ। ತಾಪ
ತರಹರಿಸಿ ಚಿರಶಾಂತಿ ಕೊಡುವಂಥ ವಿಷವರೆದು
ಹರಹರನೆ ಕುಡಿವೆನೆಂದು ಹೊರಳುತಲಿಹಳು ॥೯೨॥

ಹಿಂದಿನ ಜಲ್ಮದಿ ಮಂದಿಯ ಗಂಡರನ
ಕೊಂದ ಪಾಪ ಬಂದು ತಟ್ಟಿತೇನು। ಉಣ್ಣು
ಮುಂದಿನೆಡೆಯ ಕಸಿದಿಟ್ಟೆ ತಟ್ಟಿತೇನು। ಮನವ
ನೊಂದಿಸಿ ವಿಷವ ಕೊಟ್ಟೇನು। ಪಾಪ
ಬಂದಿಂದು ನರಕಕ ಎಳೆದವೇನು ಅದು
ಇಂದಿಗೆ ಬಿಡದೆನಗೆಂದು ಚಿಂತಿಪಳು ॥೯೩॥

ತರುಳ ಹುಟ್ಟಿ ಮೂರುವರೆ ತಿಂಗಳಿಗೆ ನಿನ್ನ
ಮರಣವಾಗಲೆಂದು ಹಣೆಗೆ। ಪಾಪ
ಬರೆದಳು ಸೆಟವಿ ಅರಣ್ಯದೊಳು ನಿನಗೆ। ಆರು
ಅರಿಯದಲೆ ಮಂತ್ರಿಯ ಕರದೊಳಗೆ। ಖೊಟ್ಟಿ
ಬರೆಸಿದ ಬ್ರಹ್ಮನ ಕರವ ಖಂಡಿಸಿದೆ ನೀ ಬಂದು
ಸಿರವ ತಗಿದ್ಯಾಕೆ ಹರನೆಂಬುವಳು ॥೯೪॥

ಪುಟ್ಟಿಸು ಬ್ರಹ್ಮನು ಕೊಟ್ಟವನಿವನೆಂದು
ಕೊಟ್ಟಿದ್ದ ಶಿವ ಪುಟ್ಟಿಸದಿರಲಿ। ಒಡಲ
ಹುಟ್ಟಿದವನೊಬ್ಬ ಹರಿದು ಹೋಗಲಿ। ಅವನ
ಹೊಟ್ಟಿಲಿರುವ ಮಗ ತಿರಿದುಣ್ಣಲಿ। ತನ್ನ

ಪಟ್ಟದರಸಿ ಮಗ ಕಟ್ಟು ಹೋಗಲಿ ಎಂದಾಕಿ
ಕುಟ್ಟಿತರುತ ಮಣ್ಣ ಬಟ್ಟು ಮುರಿಯುವಳು ॥೯೫॥

ಸುಂದರ ಪುರುಷನ ಎಂದು ನೋಡುವೆ ಮುಖವ
ಹೊಂದಿ ಪೂರ್ಣಿಮಿ ಚಂದ್ರನೇನ । ಭೋಗ
ದಿಂದಲಿ ರಾಜಿಸು ದೇವೇಂದ್ರನೇನ । ದ್ರವ್ಯ
ದಿಂದಲಿರುವ ಕುಬೇಂದ್ರನೇನ । ಕೇಳು
ಮಂದಗಮನಿಗೀಗ ಬೇರೊಂದು ನೆನಪಾಗಿ
ನೊಂದು ಕಣ್ಣಿಗೆ ನೀರ ತಂದು ಅಳುವಳು ॥೯೬॥

ಕೇಳದು ಕಣ್ಣೀರು ಏಳ್ವುದು ಸಂತಾಪ
ತಾಳದು ಮನವು ಶಿವಶಿವನೆ । ಎನ್ನ
ಆಳರಸರಿಲ್ಲದ ಬಾಳು ಯಾತರದಯ್ಯೋ । ಸಾರಿ
ಬೀಳುತೇಳುತ ಬಲು ಮಿಡಕುವಳು । ಅಯ್ಯೋ
ಹಾಳು ಮನೆಯ ನೋಡಿ ಗೋಳೆಂಬುವಳು ಜನದಾಗ
ಹೇಳಿ ಕೇಳಿ ಬಾಳ್ವುದು ತರವೇನಯ್ಯೋ ॥೯೭॥

ನಿನ್ನಿನ ಇರುಳಿನೊಳು ಎನ್ನ ಕನಸಿನೊಳಗ
ರನ್ನ ತಾಳಿಯು ಮಾಯವಾಗಿತ್ತವ್ವ । ಕೇಳ
ಮುನ್ನ ಗಾಬರಿಯಾಗಿ ಹುಡುಕುತಲಿದ್ದೆ । ನೋಡ
ಮಣ್ಣಾಗ ಮಿಂಚೂತ ಕಣ್ಮರೆಯಾತ । ಮೋಡ
ಕಾಣ್ವೊಡೆ ಮಿಂಚಾಗಿ ಅರಸರ ಮೇಲೆ ಭೋರೆಂದು
ಮಣ್ಮಳಿ ಬಿದ್ದೆನಗ ಎಚ್ಚರಾತವ್ವ ॥೯೮॥

ಹರಿಯಾಗ ಏಳುತಲಿ ಮಾರಿ ಮೈಯನು ತೊಳೆದೆ
ಅರಸರ ಚಿಂತ್ಯಾಗ ಇರುತಿರಲು । ಕೇಳ
ಇರುಳ ಕನಸು ಸತ್ಯ ತೋರಿತಲ್ಲ । ಎನ್ನ
ಹರಣನ ಮರಣ ಸುದ್ದಿ ಹರಿವಿತಲ್ಲ । ಅಯ್ಯಾ
ಹರ ಮುನಿದ ಮ್ಯಾಲಿನ್ನು ಉಳಿಸುವರ‍್ಯಾರು ಗೋಳೆಂದು
ಕೊರಗಿ ಚದುರಿ ಬಲು ಬಿಕ್ಕಿ ಅಳುವಳೂ ॥೯೯॥

ಹರುಷದಿಂದಲಿ ಕಾಂತ ಹೊರಗೆ ಹೋಗುವಾಗ
ಬೆರಳೆಡವಿ ನೆತ್ರ ಸುರದೀತವ್ವ । ನೋಡಿ
ತರಹರಿಸಿ ಚಾಲೊರೆದ ಹೋಗಬ್ಯಾಡೆಂದು । ದೊಡ್ಡ
ತುರಗ ತಾ ಮುಂದಕ ಸಾಗಾತವ್ವ । ಮುಂದೆ
ಹೊರಡಲು ಬೆಕ್ಕು ಅಡ್ಡಗಟ್ಟಿತವ್ವ ಬೇಡಂದೆ
ತಿರುಗದೆ ಮುಂದೆ ಸಾಗಿದರವ್ವ ॥೧೦೦॥



ಕನ್ನೆಮಣಿಯೆ ಕೇಳ ಎನ್ನ ಮೋಹಿಸುವಾಗ
ಚೆನ್ನಿಗ ಮುಖವನು ನೋಡಲಿಲ್ಲ । ಬೇಡ
ಮುನ್ನೆನ್ನಲು ನುಡಿಯ ಕೇಳಲಿಲ್ಲ । ಮನದ
ಎನ್ನ ಬೆಂಕಿ ಬಯಕೆಲ್ಲ ತೀರಲಿಲ್ಲ । ಗುಣವೆ
ರನ್ನ ಸಂಪನ್ನ ಮೋಹನ್ನ ಸೂಸನ್ನ ಜೀವನ್ನ
ರನ್ನ ಎದಿಮ್ಯಾಗಿನ ಹಾರೆಂಬುವಳು ॥೧೦೧॥

ಸರಳ್ಗೆಗಿದ ಬೈತಲೆಗೆ ಹೊರಳು ರಾಗುಟಿ ಚೌರಿ
ಅರಳ ಮಲ್ಲಿಗೆ ಹಾರ ಸುರುಳೊಲ್ಲದು । ಮುತ್ತಿ
ನ್ಹರಳಾಭರಣ ಕೊರಳೊಲ್ಲದು । ರತ್ನ
ಹರಳಿನುಂಗುರ ಬೆರಳೊಲ್ಲದು । ಎಂದು
ಉರುಳಿ ಹೊರಳಿ ನರಳುವಳು ತೆರಳುವಳು
ಎರಳಿ ಸುರಳಿ ಕೊರಗಿ ಮರುಗುವಳು ॥೧೦೨॥

ಗುಣರೂಪ ಯೌವನ ವರಣಿಸಲಿಂತೆನ್ನ
ಚಣಕೊಮ್ಮೆ ಬಂದೆನ್ನ ನೋಡುವನು । ಒಂದು
ಚಣವಗಲೆನ್ನ ಬಿಟ್ಟಿರಲಾರನು । ರತ್ನ
ಮಣಿಹಾರಗಳಿಟ್ಟು ನೋಡುವನು । ಅಯ್ಯೋ
ರುಣವು ತೀರಿತು ಎನ್ನ ಗುಣಮಣಿ ಅಗಲಿದ
ಹಣೆಬರಹ ನಂದೆಂದು ಮಣಿದುರುಳುತಿರಲು ॥೧೦೩॥

ಹೊಗರು ತಿದ್ದಿದ ಮೀಸಿ ನಿಗರಿ ಗಡ್ಡದ ಭಾವ
ನಗಿಮುಖವೊಮ್ಮೆರ ತೋರೆನ್ನುವಳು । ನಿನ್ನ
ಅಗಲಿ ಜೀವಿಸುದ್ಹ್ಯಾಂಗೆನ್ನುವಳು । ಬಂದು
ಸೊಗಸು ಮಾತೆನ್ನೊಡನಾಡೆನುವಳು । ನೆಲವ
ಬಗಿದು ಸುಗುಣನೆಂದು ಗಗನಕ್ಕೆ ಬಾಯೊಡ್ಡಿ
ನಗೀಗೇಡಾದಿತೆಂದು ಹೌಹಾರುವಳು ॥೧೦೪॥

ಬಗಿಬಗಿಯಿಂದಲಿ ಸೊಗಸುವ ಸುಂದರ
ಬಿಗಿದಪ್ಪಿ ಬಾ ಬಾ ಬಾರೆನ್ನುವಳು । ಎನ್ನ
ಬಗರಿಕುಚ ಕೋ ಕೋ ಕೋಯೆನ್ನುವಳು । ನಿನ್ನ
ಹಗೆಯಾಳಾದೆನೆನೆ ಎನ್ನುವಳು । ಅಯ್ಯೋ
ಅಗಹರನೆ ಹೋ ಹೋ ಹೋಯೆಂದು ವಿಧಿ ಬಂದು
ನೆಗೆವಾಗ ಹಾ ಹಾ ಹಾಯೆನ್ನುತಿಹಳೂ ॥೧೦೫॥

ಅರಳ ಮಲ್ಲಿಗೆ ಹಾಸಿ ಇರುಳ ದೀವಿಗೆ ತುಂಬಿ
ಸರಳ ಮಂಚದೊಳೆನ್ನ ಹೊರಳಿ ಮಲಗಿಸಿ । ಒಳ್ಳೆ

ಮರುಳ ಮಾಡುತ ಎನ್ನ ಕೈ ಹಿಡಿವಾ । ಎನ್ನ
ಹೊರಳ ಮುಡಿ ಬೈತಲಿ ಸರಳ ಮಾಡುವಾ । ಮತ್ತ
ಕೊರಳಮಾಲೆ ತೊಡಕ ವಿರಳ ಮಾಡುವಾ ಕೇಳವ್ವ
ಕರುಳು ಮಿಡುಕದೆ ಪತಿಯ ಕೊಂದರೆನ್ನುವಳು ॥೧೦೬॥

ಗುಣಗಾನ ಕೇಳುತ ಮಣಿದು ಮೋಹಿಸಿ ಚಣಕ
ಚಣಕೊಮ್ಮೆ ಮುಖವ ನೋಡುವನು । ಎನ್ನ
ಗುಣಮಣಿ ಹಾರೆಂದು ನುಡಿಸುವನು । ಮನವು
ದಣಿವಂತೆನ್ನ ಚುಂಬನ ಕೊಡುವನು । ರನ್ನ
ಮಣಿಯೆಂದು ಬಂಗಾರ ಖಣಿಯೆಂದು ಕೂಸಿಗೆ
ಹಣಿಯಾಗ್ಗಣಿಯಿಟ್ಟು ಮಣಿದಾಡುತಿಹನು ॥೧೦೭॥

ಕೂಸಿನ ಮ್ಯಾಲತಿ ಏಸೊಂದು ಮಮತೆಯು
ಗಾಸಿ ಮಾಡದೆ ಕೂಸ ನಗಿಸುವನು । ಮನೆಯ
ಹಾಸುಗಲ್ಲಿನ ಮ್ಯಾಲೆ ನಡೆಸುವನು । ಹೂವಿ
ನ್ಹಾಸಿಗಿ ಮ್ಯಾಲೆ  ಮಲಗಿಸುವನು । ಎನ್ನ
ವಾಸಗಾರನು ಇಂಥ ಕೂಸ ಬಿಟ್ಟಗಲಿದ ಭೂಮ್ಯಾಗ
ಕಾಸಿಗಿ ಕಡಿಯಾಗೆನ್ನ ಜೀವಾತ ಸಖಿಯೆ ॥೧೦೮॥

ತರುಳ ಹುಟ್ಟಲಾಗ ಹರುಷದಿಂದಲಿ ಕಾಂತ
ಕರೆಸಿ ಜಂಗಮರ ಕೇಳಿದನು । ಸ್ವಾಮಿ
ಸರಸ ಮೂರ್ತವು ಶುಭವ ಹೇಳಿದನು । ಮತ್ತ
ವರ ಚೌಸಟ್ಟಿವಿದ್ಯೆ ಕಲಿಯುವನು । ಕೇಳಿ
ಹರಷದಿಂದಲಿ ಕರಿಸಿ ಜಂಗಮರನ್ನು
ನೆರಸಿ ಜೋಳಿಗೆ ಹಿಡಿಹೊನ್ನ ತುಂಬಿದನು ॥೧೦೯॥

ಖೊಟ್ಟಿ ವ್ಯಾಳ್ಯೆದಿ ಕೂಸು ಹುಟ್ಟಿತೇನಯ್ಯಾ
ಹೊಟ್ಟಿಗಯ್ಯನು ಬಚ್ಚಿಟ್ಟನೇನು । ಒಳ್ಳೆ
ಕೆಟ್ಟ ಮೂರ್ತವು ಬಂದು ತಟ್ಟಿತೇನು । ಕೂಸು
ಹುಟ್ಟಿದ ನೆವ ಕಾಂತ ಬಿಟ್ಟನೇನು । ಎಂದು
ಹೊಟ್ಟಿಕಿಚ್ಚಿಗೆ ಕೂಸ ಕಟ್ಟಿಯ ಕೆಳಗ ಇಕ್ಕರಿಸಿ
ಒಟ್ಟರಿಸಿ ತುಂಬಿ ದುಃಖೇನ್ಹೇಳಲಿ ॥೧೧೦॥

ಚಿಟಚಿಟನೆ ಚೀರಿತು ಚುಟಪುಟ ಉಸಲ್ಹಿಡಿದು
ಲಟಪಟ ಒದ್ದಾಡಿ ಸೆಟೆಯುತಲಿ । ಈಕಿ
ಸೆಟಸೆಟದ್ಹಿಂದಕ ಬೀಳುತಲಿ । ಅವರು



ಪುಟನೆದ್ದು ಕೂಸನ್ಹಿಡಿಯುತಲಿ । ನೀರ
ಪಟಪಟ ನೆತ್ತಿಗೆ ಬಡಿಯುತಲಿ । ದುಃಖದಿ
ತಟತಟ ಕಣ್ಣೀರು ಗೊತ್ತಿಲ್ಲದುದುರುತಲಿ ॥೧೧೧॥

ನಾರೇರೆಲ್ಲರು ಕೂಡಿ ಘೋರ ವೇದನೆಯೆಂದು
ಬೋರಾಡಿ ದುಃಖವ ಮಾಡುವರು । ಒಳ್ಳೆ
ಸೂರೆದ್ದು ಕಣ್ಣೀರ ಸುರಿಸುವರು । ಕೂಸು
ಮಾರಿ ನೋಡಲು ಧೈರ್ಯತಾಳುವರು । ಮತ್ತೆ
ಸಾರಿ ಒಂದೆಡೆ ದುಃಖ ಸೂಸುವರು ಸೂರ್ಯನು
ಸೇರಿ ಪಡುವಲಕ ಮರೆಯಾದನೇನೆಂಬೆ ॥೧೧೨॥

ತರವಲ್ಲ ಪದ್ಮಿನಿ ಮರುಗ ಬೇಡ ನೀನು
ಪುರದೊಳಗಾರಾರು ಇಲ್ಲವೇನ । ನಿನ್ನ
ತುರಳನ್ನ ಕೆಳಗ್ಹಿಂಗ ಒಗೆಯುವರೇನ । ಕೂಸು
ಮರಣವಾದರೆ ಹೇಳ ನಿನಗ ಒಳಿತೇನ । ಇನ್ನು
ಮರೆ ನಿನ್ನ ಪುರುಷನ ದುಃಖವನು ಸಲುಹು ನೀ
ತರುಳನು ಮನ ಚಿಂತೆ ಮರೆಸುವನವನು ॥೧೧೩॥

ಪತಿಯಿಂದ ಸಿಂಗಾರ ಪತಿಯಿಂದ ಸೌಭಾಗ್ಯ
ಪತಿಯಿಂದ ಸಕಲ ಜೀವನವು । ಮತ್ತೆ
ಪತಿಯಿಂದ ತನು ಸುಮತಿಯೆಲ್ಲವು । ಕೇಳು
ಪತಿಯಿಂದ ಲೋಕಕ್ಕೆ ಹಿತಮಿತವು । ಮತ್ತೆ
ಪತಿಯಗಲಿ ಸೀತೆಗೆ ದುಃಖ ಘನವಾಯಿತು ಅಯ್ಯಯ್ಯೋ
ಪತಿ ಮಡಿದ ಮ್ಯಾಗ ಗತಿಯುಂಟೆ ಶಿವನೆ ॥೧೧೪॥

ಚೆನ್ನ ಪುರುಷನಿಲ್ಲ ಇನ್ಯಾಕ ಬೇಕವ್ವ
ರನ್ನ ತಾಳಿಯು ಎನಗ ಹರಿಯುತಲಿ । ಕೊರಳ
ಚೆನ್ನ ಮಲ್ಲಿಗಿ ಹಾರ ತೆಗೆಯುತಲಿ । ಮುಡಿಯ
ಮುನ್ನ ಬಿಚ್ಚುತ ಹೆರಳ ಹರಡುತಲಿ । ಅಯ್ಯೊ
ಇನ್ನೆಂದು ಕಾಣುವೆ ಪುರುಷನ ಶಿವನೆ ಬೋರಾಡಿ
ಖಿನ್ನಾಗಿ ಬಿಕಿ ಬಿಕ್ಕಿ ಅಳುತಿಹಳಯ್ಯೋ ॥೧೧೫॥

ಕಳಿಸಲ್ಯಾ ದೂತಿಗೆ ತಿಳಿಸಲ್ಯಾ ರಾಜನಿಗೆ
ಹಳಿಸಲ್ಯಾ ಮಂತ್ರಿ ಘೋಳಿಸಲೇನು । ಅಂತು
ಅಳಿಸಲ್ಯಾ ದಂತ ಕೀಳಸಲೇನು । ಕೋಲ್ಗೆ
ಎಳಿಸಲ್ಯಾ ಕುತ್ತಿಗೆ ಕೊಯ್ಸಲೇನು । ಮೈಯ

ಥಳಿಸಿ ಚರ್ಮ ಸುಲಿಸಲೇನು ಮಣ್ಣೊಳು
ಎಳೆಸುತ ಮಾನ್ಗೇಡಿ ಹುಗಿಸಲೇನು ॥೧೧೬॥

ಎಲ್ಲಿ ಇರುವನವ್ವ ನಿಲ್ಲಲಾರದು ಮನವು
ಖುಲ್ಲ ಮಂತ್ರಿಯನೀಗ ತೋರುವನನೆ । ಎನ್ನ
ವಲ್ಲಭನ ಕೊಂದೆಲ್ಲಿ ಉಳಿಯುವನೆ । ಎಂದು
ಹೊಲ್ಲ ನುಡಿಯುತ ಕೂಸ ಬಗಲಿಗೆನೆ । ಎತ್ತಿ
ಫುಲ್ಲಲೋಚನೆಯರು ಎಲ್ಲಾರು ನಡಿರೆಂದು
ಚೆಲ್ಲುತ ಕಣ್ಣೀರ ನಲ್ಲೇರು ನಡೆದಿಹರು ॥೧೧೭॥

ಅರಿದು ನೋಡಿ ಮಂತ್ರಿ ಗಹ್ವರದೊಳು
ವರ ಕೊಮರಾಮನಲ್ಲಿಡುವುತಲಿ । ಹತ್ತು
ವರುಷರ ಹಾರ ಮಾಡಿ ಇಡುವುತಲಿ । ಯಾರು
ಅರಿದಂಗ ಗುಪ್ತ ಮಾಡಿಡುವುತಲಿ । ಹೊಡೆದ
ಶಿರವನೊಯ್ದು ಕರೆದು ರತ್ನಿಗೆ ಕೊಟ್ಟು ಬೈಚಪ್ಪ
ಒರಗಿ ಮನಿಯಾಗ ಇರಲತ್ತಲವರು ॥೧೧೮॥

ನಾರೆರೇರು ಭರರರು ಮರಗಾಳಿ ಪದರ ಮೋಡ
ಹಾರುವ ತೆರೆಯ ತಿಕ್ಕಾಟೊ । ಒಳ್ಳೆ
ಬೋರಾಡಳುವ ಗುಡುಗು ದನಿಯೊ । ಕಣ್ಣೀರು
ಸೋರಿ ಬೀಳುವ ಮಳೆಯ ತೂರ ಹನಿಯೊ । ಅಂತು
ತೋರುವದೀ ಪರಿ ಅರೆದೊಂದು ಜನರಿಗೆ
ದೂರಿಂದ ಮಂತ್ರಿಯ ಕಾಣುತೋಡಿದಳು ॥೧೨೯॥

ದುಡುದುಡೋಡೋಡಿ ಮಂತ್ರಿಯಡಿಯಲ್ಲಿ ಪದ್ಮಿನಿ
ಘಡಘಡಾ ನೆಲಕ್ಹಣಿ ಬಡಸೂತಲಿ । ಕೂಸ
ಹಿಡಿದಿರೆಂದು ಮುಂದ್ಹೋಗುತಲಿ । ಎದ್ದು
ಧಡಧಡಾ ಹಿಂದಕ ಬೀಳುತಲಿ । ಮತ್ತ
ಗುಡುಗುಡುಳ್ಳುತ ಮಾತ ನುಡಿಯುತಲಿ ಮಂತ್ರಿಗೆ
ಥಡಥಡಾಡಿದಳೇನೆಂಬೆನಯ್ಯೋ ॥೧೨೦॥

ಧರ್ಮವೇನಿದು ಮಂತ್ರಿ ನಿರ್ಮಲ ಅಳಿಯಾನ
ಪದ್ಮಿನಿ ಕಾಂತನ ಠಾರ್ಮಾಡಿದಿ । ಒಳ್ಳೆ
ಘೋರ್ಮಾಡಿ ಭೂಮಿಗೆ ಹಾರ್ಮಾಡಿದಿ । ದುಃಖ
ಪೂರ್ಮಾಡಿ ನೀ ಮನ ಘಾರ್ಮಾಡಿದಿ । ನಿಮ್ಮ
ಕರ್ಮವಿಲ್ಲದಲೆ ವಿಚಾರ ಮಾಡದಲೆ ಕೊಂದಂಥ
ಮರ್ಮವೇನೆಂಬುತ ಮಣ್ಣು ಸೂರ್ಮಾಡುತಿಹಳು ॥೧೨೧॥



ಹೇಸ್ಮನಸಿನ ಮಂತ್ರಿ ಆಸ್ಮಾಡಿ ಅಳಿಯಾಗ
ಮೋಸ್ಮಾಡಿ ಅನ್ಯಾಯ ಖಾಸ್ಮಾಡಿದಿ । ನೀನು
ಕೂಸ್ಮಡದಿಗೆ ನಾಸ್ಮಾಡಿದಿ । ಮನಕ
ಸೂಸ್ಮಿಡುಕದೆ ಕೊಂದು ನಿನ್‌ಬತವ । ಅಯ್ಯೊ
ಮೋಸ್ಮಾಡಿ ಎನ್ನೊಳು ದೋಸ್ಮಾಡಿದಿ ಶಿವಶಿವನೆ
ಘಾಸ್ಮಾಡಿ ಕೊಂದೆಲ್ಲೊ ನನ್ಮೋಜಿನ್ಕಣಿಯ ॥೧೨೨॥

ಆರು ಇಲ್ಲದ ಅಡವಿ ನೀರು ಇಲ್ಲದ ತಾಣ
ಏರು ಕಿಚ್ಚಿನ ಕುಡಿಗೆ ದೇಹ ತುರುಕಿ । ಬೆಂಕಿ
ಕಾರಿತು ಕಿಡಿಯ ಕಿಚ್ಚು ನುಂಗಿತು । ಕಾಯ
ಹಾರಿ ಹೋಯಿತು ಜೀವ ಬೆಂದು । ಅಯ್ಯೊ
ಯಾರಿಗ್ಹೇಳಲಿ ಶಿವನೆ ನಾರಿಗಾದ ತಾಪ ಗೋಳೆಂದು
ಚೀರಿ ಅತ್ತು ಹೊರಳಿ ಬೀಳುವಳು ॥೧೨೩॥

ಧೀರ ದುಂದುಭಿ ವೀರ ಮೀರಿದ ವರಶೂರ
ನೂರು ಸಾವಿರದೊಳು ಗೆದೆವನು । ರಣಕ
ಸೂರಿ ಮಾಡುವ ಸಮರಂಗವನು । ಮಹಾ
ವೀರ ಪರಾಕ್ರಮ ಪಾರ್ಥನು । ಇಂಥ
ಧೀರನ ಯಾವ ಪರಿಯಲಿ ಕೊಂದಿ ಎನ್ನುತ
ಮೋರಿ ತೋರೆಂದು ನಾರಿ ಕೇಳಿದಳು ॥೧೨೪॥

ಬಿಡು ತಂಗಿ ಶೋಕವ ಪೊಡವಿಯೊಳು ರಾಮನ
ಹೊಡೆವ ಸಮಯಕ ನಿನ್ನ ವಲ್ಲಭನು । ಬಂದು
ಹಿಡಿದನು ಎನ್ನ ಮುಂಗೈಗಳನು । ಅಣ್ಣ
ನುಡಿಬ್ಯಾಡ ನೀನೆಂದು ಆಡಿದನು । ಎನ್ನ
ಹೊಡಿಯೆಂಬು ಮಾತಿಗೆ ಬಿಡದೆ ಹೇಳಿದೆನು ತಂಗೆವ್ವ
ಮೃಡನಾಣಿ ಹಾಕಲು ಹೊಡಿಸಿದೆನವ್ವಾ ॥೧೨೫॥

ಒಡೆಯ ರಾಮನ ಕೂಡ ಬಿಡದೆ ತಲೆಯನು ಕೊಟ್ಟ
ಕಡುಧೀರ ನಿನ ಗಂಡ ಅವನ ಸಾಟಿ । ಭೂಮಿ
ಹುಡುಕಲು ವಿರಳ ಬಂಡನವನೊಬ್ಬ । ಸಾರಿ
ಬಡಿಸುವೆ ಸುತ್ತ ಹೊತ್ತು ಡಂಗುರವ । ತಂಗಿ
ಒಡಲ ದುಃಖದ ಉರಿಯು ಹಿಂಗಲಿ ಅನ್ನುದಕ
ಉಡಿಯ ಕೂಸನು ನಾರಿ ಅತ್ತು ಕೊಂಡಾಡಿ ॥೧೨೬॥

ಲೇಸು ಮಾಡಿದಿ ಮಂತ್ರಿ ಈಶನು ಒಲಿಯುವನು
ಕೂಸು ಎನ್ನನು ಈಗ ಹತಿಸೆಂದಳು । ಇರುವ
ಆಸೆ ನಮಗಿನ್ನು ಸಾಕೆಂದಳು । ಎನ್ನ
ವಾಸಗಾರನು ಹೋದಿನ್ನೇಕೆಂದಳು । ಮನವು
ಹೇಸದೆ ಕೊಲಲುಂಟೆ ಘಾಸಿ ಮಾಡುತ ಈ ಜೀವ
ಏಸು ಜಲುಮದ ಪಾಪ ಒದಗಿ ಬಂತು ಶಿವನೆ ॥೧೨೭॥

ಕಾದ ಹಂಚಿನ ಮಾಲ್ಯೆ ಹೋದ ದೋಸಿಯ ಪರಿಯು
ಆದೀತು ಎನ್ನ ಆತ್ಮಕೆಂದನು । ನೀನು
ಸಾಧಿಸಿ ನುಡಿವುದು ಆಗಲೆಂದನು । ಭಿನ್ನ
ಭೇದ ಎನ್ನೊಳಗೇನೇನಿಲ್ಲವೆಂದನು । ನಿನ್ನ
ಸೋದರನಂತೆ ನಾ ಬಿಡದೆ ನೋಡುವೆನು ಏ ತಂಗಿ
ಆದ ಮಾತಿಗೆ ಅತ್ತು ಖೇದ ಮಾಡುದು ಬೇಡ ॥೧೨೮॥

ಚೆಲುವ ಚೆನ್ನಿಗ ನಿನ್ನ ನಲ್ಲನಗಲಿಸಿದೆಯಾ
ಮೊಲೆಯುಣ್ಣು ಶಿಶುವ ಬಿಡಿಸಿದಂತೆ । ಈದು
ಮಲಗಿದ ಹುಲಿಯನು ಕೆಣಕಿದಂತೆ । ಮತ್ತ
ತಳಕು ಬಿದ್ದ ಸರ್ಪ ತಡವಿದಂತೆ । ರತಿಯ
ಕಲಹದೊಳಿದ್ದ ನಾರಿನೆಬ್ಬಿಸಿದಂತೆ ಪದ್ಮಿನಿ
ಫಲವೇನಗಾಯಿತು ಮಂತ್ರೀಶನೆಂದ ॥೧೨೯॥

ಪರಿಪರಿ ರೀತಿಯಲಿ ನಾರಿಗ್ಹೇಳುತ ಮಂತ್ರಿ
ಪರಮ ವಚನ ಕೊಟ್ಟು ಬೇಡಿದನು । ತಂಗಿ
ಹರುಷದಿಂದಲಿ ನಿನ್ನ ಕಾಣುವೆನು । ಕೇಳು
ಹರನಾಣೆ ಬೈಚಪ್ಪ ನುಡಿಯುತಲಿ । ಎನ್ನ
ಸರುಭಾಗ್ಯ ಸಂಪತ್ತು ನಿಮ್ಮದೆನ್ನುತಲಿ ಸಂತೈಸಿ
ಮರೆಸುತ ದುಃಖವ ಮನ್ನಿಸಿದ ॥೧೩೦॥

.ಯೊಳು ಗೋಕಾವಿ ಪುರದೊಳಗಿರುವನು
ಗುರುವರ ಸಿದ್ಧ ಸೇವಕನು । ಅಂದು
ಬರುತಿರೆ ಮಾಲಿಂಗಪುರದೊಳವನು । ವಸ್ತಿ
ಇರುತಿರಲು ರಾಮನಾಟ ನೋಡಿದನು । ಇದರ
ಚರಿತವ ನೋಡಿ ಕವಿತೆ ಬರೆದನು ರಸಿಕರು
ಅರತುಳ್ಳ ಸುಜನರು ಕೇಳಿರಿ ಲಾಲಿಸಿದನು ॥೧೩೧॥

* * *



## ೧೯. ಮಲುಹಣ

ಪರಮ ಶ್ರೀಗುರು ನಿಮ್ಮ ಚರಣಸರೋಜದಿ
ಕರವ ನೇಮಿಸಿ ನಮಸ್ಕರಿಸು । ವೆನು
ಪರಿಪರಿ ವಿಧದಲಿ ನಿತ್ಯ ಸ್ಮರಿಸುವೆನು । ಘನ
ತರವಾದ ಸ್ತುತಿಯಿಂದ ಹರಸುವೆನು । ಅತಿ
ಸರಸದಿ । ಬಹುವಿರಸದಿ । ಕಡುಹರು । ಷದಿ
ಹರಭಕ್ತ ಮಲುಹಣ ಚರಿತೆಯ ನಯದಿಂದ
ವಿರಚಿಸುವೆನು ಬೇಗ ಕರುಣಿಸು ಮತಿಯ ॥೧॥

ಧಾತೆ ತ್ರಿಭುವನ ವಿಖ್ಯಾತೆ ಸರ್ವಾಗಮ
ತೀತೆ ಸಕಲಗುಣಯುತೆಯನು । ಗಿರಿ
ಜಾತೆ ಅನಾಥರ ನಾಥೆಯನು । ಪೂರ್ಣ
ವ್ರಾತೆ ಶಶಿಧರ ಸಮ್ಮುಕ್ತೆಯನು । ಮಹ
ಭೂರ್ತೆಯ । ಸ್ವಯಂಜ್ಯೋತಿಯ । ಪುಣ್ಯ ಪೂ । ತೆಯ
ಭೀತೆ ದುರ್ಗತಿಗೆ ಸುನೀತೆ ಶಂಕರಗೆ ಸಂ
ಪ್ರೀತೆ ನಿರ್ಮಲ ಜಗನ್ಮಾತೆಯ ಭಜಿಪೆ ॥೨॥

ಮದನಹರನ ಪುತ್ರ ಚೆದುರ ವಿಘ್ನೇಶನೆ
ಉದಿಸೆನ್ನ ಹೃದಯೊಬ್ಜ ಸದನದೊಳು । ಚಿತ್ತ
ಹುದುಗಿಸುವದು ಗುಪಿತತನದೊಳು । ಬಹು
ಮೃದು ನುಡಿ ನುಡಿಸೆನ್ನ ವದನದೊಳು । ಬಾಳ
ವಿಧದಿಂದ । ಹೋಳಿಪದದಿಂದ । ಪೇಳು ಮುದ । ದಿಂದ
ಸದುಗುಣ ಮಲುಹಣ ಸದಮಲ ಚರಿತೆಯ
ಒದಗಿಸುವದು ಗುಣನಿಧಿಯ ಗಣಪತಿಯೆ ॥೩॥

ವಾಣಿಯ ಜಗಕತಿ ಜಾಣೆಯ ಬ್ರಹ್ಮನ
ರಾಣಿಯ ವಿದ್ಯಕೆ ಚೂಣಿಯನು । ಬಹು
ತ್ರಾಣಿಯ ಲಲಿತ ಸುಪ್ಪಾಣಿಯನು । ಗುಣ
ಶ್ರೇಣಿಯ ಅಧಿಕ ಪ್ರವೀಣೆಯನು । ಸರ್ಪ
ವೇಣಿಯ । ವೀಣಾಪಾಣಿಯ । ಗೀರ್ವಾಣಿ । ಯ ಶ

ವರ್ಾಣಿಯ ಮಾಣದೆ ನೆನೆವೆ ನಿ
ವರ್ಾಣಿಯ ವಿಮಲಕಟ್ಯಾಣಿಯ ಬೇಗ ॥೪॥

ಮಲುಹಣೆಂಬುವ ವಿಪ್ರಕುಲವಾರ್ಧಿಚಂದ್ರನು
ಬಲು ಭಾಗ್ಯದಲಿ ನಲಿನಲಿಯುತಲಿ । ಓರ್ವ
ಮಲುಹಣಿಯೆಂಬಳಿಗೊಲಿಯುತಲಿ । ಚಿಕ್ಕ
ಲಲನೆಯೊಡನೆ ಮೋಹ ಬಲಿಯುತಲಿ । ಬಲ್
ಮೊಲೆಯಿಂದ । ಸರ್ವಕಲೆಯಿಂದ । ಅವಳ್ನೆಲೆ । ಯಿಂದ
ಸಲೆ ಸುಖದಿಂದಿರ್ದು ಮಲಹರನೊಲಿಸಿ ಶ್ರೀ
ಚಲಕೈದ ಕಥೆಯನು ಒಲಿದು ಕೇಳುವದು ॥೫॥

ಧರಣಿಗಧಿಕವಾಗಿ ಮೆರೆವ ಭಾರತಿಯೆಂಬ
ಪುರವ ವರ್ಣಿಸುವರಿಗರಿದೆನಿಸಿ । ಬೇರೆ
ಸರಿಯಪ್ಪುದೆಲ್ಲೆಲ್ಲಿ ಇರದೆನಿಸಿ । ಚೆಲ್ವ
ಸುರ ನಗರಕೆ ಇದು ಪಿರಿದೆನಿಸಿ । ಒಪ್ಪು
ತಿರುವದು । ಸುಖ ಸುರಿವದು । ಪ್ರೀತಿಗರೆ । ವದು
ಪರಮಾನುರಾಗದೊಳಿರುವ ಪಟ್ಟಣದಿ ಸು
ವರ್ಣಸೆಟ್ಟಿ ಎಂಬ ಹರದನೊಪ್ಪಿದನು ॥೬॥

ಧನದಲಾಭರಣಾದಿ ಕನಕ ಸೊತ್ತಾಗೆ ನೂ
ತನವಾದ ವಸ್ತ್ರವಾಹನದಿಂದಲಿ । ಸುಸ
ಧ್ವನವಪ್ಪ ಪವಳ ರತುನದಿಂದಲಿ । ಮತ್ತೆ
ಮಿನುಗುವ ಮೌಕ್ತಿಕಾಸನದಿಂದಲಿ । ಜಾಣ
ತನದಲ್ಲಿ । ಒಂದೆ ಮನದಲ್ಲಿ । ಧರ್ಮಗುಣ । ದಲ್ಲಿ
ತನಗೆ ಇಮ್ಮಿಗಿಲಾದ ಜನರಿಲ್ಲ ಲೋಕದೊ
ಳೆನುತ ಸುವರ್ಣಸೆಟ್ಟಿಯು ಸುಖಮಿರ್ದ ॥೭॥

ಆತನಾತ್ಮಜನಾದ ಮಲುಹಣನೆಂಬ ಸು
ಜಾತನೊಪ್ಪಿದ ಮುತ್ತಿನಂದದಲಿ । ಮೀನ
ಕೇತನಗಿಂದತಿ ಚೆಂದದಲಿ । ಪ್ರ
ಖ್ಯಾತನು ಗೀತಪ್ರಬಂಧದಲಿ । ಸರ್ವ
ಮಾತಿಲಿ । ತತ್ವನೀತಿಲಿ । ವಿಪ್ರಜಾ । ತಿಲಿ
ಭೂತಳದೊಳಗತಿ ಜಾಣಪ್ರವೀಣ ಇ
ನ್ನೀತಗೆ ಸಮನಾದ ಪುರುಷರಿನ್ನುಂಟೆ ॥೮॥



ವಾರವೊಂದಕ್ಕೆ ಸಾಸಿರದಂತೆ ವರುಷವು
ನೂರಕ್ಕೆ ಸಲುವಷ್ಟು ಹೊನ್ನುಗಳ । ಮುತ್ತ
ಹಾರ ಮಾಣಿಕ ಹೊಸ ರತ್ನಗಳ । ಉಡು
ದಾರ ಉಂಗುರ ಬೆಳ್ಳಿ ಚಿನ್ನಗಳ । ಜರ
ತಾರವು । ಕೇಯೂರವು । ವೈಢೂರ್ಯ । ವು
ಮೂರು ಕೋಟಿ ಅರುವತ್ತಾರು ಲಕ್ಷಹೊನ್ನ
ತೋರಿಸಿದನು ತನ್ನ ಕುವರಗೆ ಪಿತನು ॥೯॥

ಆ ಕುವರಗೆ ಕೊಟ್ಟು ಉಳಿದಂಥ ಧನವನು
ನಾಲ್ಕೆರಡರಿಗೆ ನಮಸ್ಕರಿಸಿ । ಮುಂದೆ
ಬೇಕು ಬೇಡೆಂಬುದು ನಿಷ್ಕರಿಸಿ । ನಾನಾ
ತಾಪತ್ರಯಂಗಳ ಬಹಿಷ್ಕರಿಸಿ । ಆಸೆ
ಯಾಕೆಂದು । ಲೋಕ ಸಾಕೆಂದು । ಸೊರಗಬೇ । ಕೆಂದು
ಶ್ರೀಕಂಠನಂಘ್ರಿಯಪ್ಪಣೆಯಿಂದ ಕಾಯವ
ನಿಕ್ಕರಿಸುತ ನಾಕಲೋಕಸ್ಥನಾದ ॥೧೦॥

ತರುಳನು ದಿನಚರಿಯಲಿ ವಿಜಯೇಶನ
ಚರಣಕ್ಕೆ ಅಭಿಷೇಕ ಮಾಡುವನು । ನಾನಾ
ಪರಿಯ ಪನ್ನೀರ್ಗಳ ನೀಡುವನು । ಪೂವಿ
ನರಳ ಸಮರ್ಪಿಸಿ ನೋಡುವನು । ಗಂಧ
ಇರಿಸುವ । ಭಸ್ಮಧರಿಸುವ । ನಮಸ್ಕರಿ । ಸುವ
ಚಿರಕಾಲ ಲಿಂಗಧ್ಯಾನದೊಳು ತದ್ಗತನಾಗಿ
ಪರಮಾನುರಾಗದೊಳಿರುತಿರ್ದನಾಗ ॥೧೧॥

ಇತ್ತಲಾ ಸೂಳಿಗೇರ್ಯೊಳಗೆ ಒಪ್ಪುವ ಪೊಸ
ಮುತ್ತಿಗಿಮ್ಮಿಗಿಲಾದ ವೇಸಿಯರು । ಮತ್ತೆ
ಚಿತ್ತಜ ಹಾವಕೆ ವಿಲಾಸಿಯರು । ಮಹ
ದುತ್ತಮ ವಿಟಕುಲ ನಾರಿಯರು । ಪರ
ರರ್ಥವ । ಕೊಂಡನರ್ಥವ । ಮಾಡಿ ವ್ಯರ್ಥ । ವ
ಅತ್ತಿತ್ತ ಪುರುಷನ ಬಿಡದೆ ಕಾಮನ ಕೈಯ
ಕತ್ತಿಯಂತೊಪ್ಪುವ ಬೆಲೆವೆಣ್ಗಳೆಸೆಯೆ ॥೧೨॥

ಕಡೆಗಣ್ಣ ನೋಟಕ್ಕೆ ಕಡುಜಾಣ ವಿಟರೆದೆ
ಒಡೆದು ಮುಂದಕೆ ತಮ್ಮ ಅಡಿಗಳನು । ಇಟ್ಟು

ನಡೆಯಲಾರದೆ ತೋಳು ತೊಡೆಗಳನು । ಮುಂದೆ
ನಡುಗಿಸುತಲಿ ತೊದಲ್ನುಡಿಗಳನು । ಈಗ
ನುಡಿವುತ । ಎದೆ ಬಡಿವುತ । ಉಗಳ್ನುಡಿ । ವುತ
ಕಡುಗಂಗಳೆಯರ ಬೆಡಗು ಬಿಂಕಕೆ ಕಾಮ
ಸಡಲಿಸುತ ಕಂಗೆಡುತಿದ್ದರವರು ॥೧೩॥

ಸೊಕ್ಕುಜವ್ವನೆ ಇವ ತಕ್ಕವ ನನಗೆಂದು
ಕಕ್ಕಸ ಕುಚಕೆ ಕೈಯಿಕ್ಕೆಂದಳು । ಮುಂದೆ
ಮಿಕ್ಕಿದ ಸುರತದೊಳುಕ್ಕೆಂದಳು । ನಿನ್ನ
ತೆಕ್ಕೆಯೊಳಗೆ ಮರೆಹೊಕ್ಕೆಂದಳು । ಅವ
ನಕ್ಕಾನು । ಬಹು ಪಕ್ಕಾನು । ಮಹವೆಕ್ಕಾ । ನು
ಸಿಕ್ಕದೋಡಲು ಕಂಡು ಮಕ್ಕಳಾಟಿಕೆ ಆಯಿ
ತಕ್ಕಟಕ್ಕಟ ಎಂದು ದುಃಖಿಸುತಿಹಳು ॥೧೪॥

ಮುಗ್ಧೆಯೋರ್ವಳು ಭಿತ್ತಿಯೊಳಗೆ ಚಿತ್ರದಿ ಬರೆ
ದಿರ್ದ ನಲ್ಲನ ರೂಪ ಕಾಣುತಲಿ । ಬೆರ
ಳ್ಮುದ್ರೆಯುಂಗುರ ಹಿಡಿಯೆಂಬುತಲಿ । ತಾನು
ಮುದ್ದಿಸಿ ಬಿಗಿದಪ್ಪಿಕೊಂಬುತಲಿ । ನೋಡು
ತಿದ್ದಳು । ಅಲ್ಲೆ ಬಿದ್ದಳು । ತಿಳಿದೆದ್ದ । ಳು
ಹೊದ್ದಿನೋಡುತ ನಲ್ಲನಲ್ಲೆಂದು ಮನದೊಳು
ಕದ್ದ ಕಳ್ಳಿಯರಂತೆ ಇದ್ದಳಾ ವನಿತೆ ॥೧೫॥

ಬಾಲೇರು ವಿಟರೆದೆ ಶೂಲೇರು ವಿರಹಕ್ಕೆ
ಲೋಲೇರು ಪರಮ ವಿಶಾಲೆಯರು । ಮುಂದೆ
ಮೇಲಾದ ರತಿಗನುಕೂಲೆಯರು । ಪುಷ್ಪ
ಗೋಲನ ಸುಖಕೆ ಕುಶಾಲೆಯರು । ಬಹು
ಜಾಲೇರು । ಕಾಮಜ್ವಾಲೇರು । ಕೃಷ್ಣಲೋ । ಲೇರು
ಸೋಲನರಿದು ಜಯಶೀಲರ್ಸಹಿತ ಭೂಮಿ
ಪಾಲ ಕಾಲಸಂಕೋಲೆಯಂತಿಹರು ॥೧೬॥

ಮುದಿ ಸೂಳೆಯೋರ್ವಳು ಹಾದಿಯೊಳಗೆ ಒಬ್ಬ
ಚೆದುರ ಜಾಣನ ಕಂಡು ನಿಲ್ಲೆಂದಳು । ಎನ್ನ
ಅಧರಾಮೃತವನೇಕೆ ಒಲ್ಲೆಂದಳು । ನಾನು
ಬೆದಿ ಮಾಡಿ ಕಲಿಸೂದ ಬಲ್ಲೆಂದಳು । ಬಾಬಾ



ಸದನಕ್ಕೆ । ಕೂಡು ಕದನಕ್ಕೆ । ಮುದ್ದುವದ । ನಕ್ಕೆ
ನೆದರಿಟ್ಟು ನೋಡಿನ್ನು ಹದಗಾಯಿ ರುಚಿಯುಂಟೆ
ಮೃದುವಣ್ಣು ಸವಿಯುಂಟು – ಎಂದಳಾ ವನಿತೆ ॥೧೭॥

ನಾಡಾಡಿ ಸೂಳೆಯೋರ್ವಳು ವಿಟಗಾರನ
ನೋಡುತ್ತ ಚಂದ್ರನ ಕಿರಣದೊಳು । ತನ್ನ
ಜೋಡು ಕುಚವ ಬಿಟ್ಟು ಹರಣದೊಳು । ಚಿಂತಿ
ಗೂಡಿತು ಕಾಮನ ಸ್ಮರಣೆಯೊಳು । ಮುಖ
ಬಾಡಲು । ಕಣ್ಣೀರಾಡಲು । ದುಃಖ ಮಾ । ಡಲು
ಮೂಡಿದ ಮೊಲೆಯ ಕಾಣುತಲೊಬ್ಬ ವಿಟನು । ಹಾಳ
ಗೋಡೆಯ ಒಳಿಯಕ್ಕ ಎಳದೊಯಿದನವಳ ॥೧೮॥

ಇಂತಪ್ಪ ಸೂಳೆರೋಳಧಿಕವಾಗಿರುವ ಸ್ತ್ರೀ
ಮಂತಮಣಿಯು ಸಾರ ಸದ್ಗುಣಿಯು । ಚಂದ್ರ
ಕಾಂತಿಯಂತೊಪ್ಪುವ ಮಲುಹಣಿಯು । ಕಾಮ
ತಂತ್ರಕ್ಕೆ ನವಮೋಹನದ ಖಣಿಯು । ಅಜ
ಯಂತಿಯೊ । ದಮಯಂತಿಯೊ । ಕೀರ್ತಿವಂತಿ । ಯೊ
ಕಂತುವಿನರಸಿಗಿಮ್ಮಡಿ ರೂಪಿನವಳ ನಾ
ನೆಂತು ಬಣ್ಣಿಸುವೆನು ಕೋಮಲಾಂಗಿಯಳ ॥೧೯॥

ಕಳಸ ಕುಚವು ಚೆಲ್ವ ಗಳರವ ಕೋಗಿಲಿ
ನಳನಳಿಸುವ ತೋಳು ತಳಿರಡಿಯು । ವಾರಿ
ಸುಳಿಯಂತೆ ನಾಭಿಯು ಗಿಳಿನುಡಿಯು । ಥಳ
ಥಳಿಪ ರಂಭೆಯ ಪೋಲ್ವ ಒಳದೊಡೆಯು । ಚಿಕ್ಕ
ಅಳಿಮುಡಿ । ಕಿಸಕುಳ ನುಡಿ । ಕರ್ಣಗಳು । ಹೆಡಿ
ತಿಳಪು ಗಲ್ಲಗಳಿಂದ ಪೊಳೆವ ಸುವರ್ಣ ಪು
ತ್ಥಳಿಯಂತೆ ಎಸೆವಳು ನಳಿನ ಸುಗಂಧಿ ॥೨೦॥

ಕೆಂಬಲ್ಲಧರ ತೊಡೆ ರೂಪು ಕೊರಳ್ಗೊಂಡು
ಮುಂಬಿರಿದಿರ್ದ ದಾಳಿಂಬಗಳು । ಸವು
ರಂಬದಿಂದೊಪ್ಪುವ ಬಿಂಬಗಳು । ಸೊಬ
ಗಂ ಬೀರುತಿಹ ಬಾಳಿಕಂಬಗಳು । ಮದ
ಕುಂಭಿಯು । ಹೊಸ ನಿಂಬಿಯು । ಮರಿದುಂಬಿಯು । ಮಹ
ರಂಭೆಯೊಳೆಸೆವ ರೂಪಕೆ ನಾವು ಸರಿಯಲ್ಲ
ವೆಂಬುತ ಬಿಟ್ಟಡವಿಯನು ಸೇರಿದವು ॥೨೧॥

ಕಾಲುಂಗರ ಪಿಲ್ಲಿ ಸರಪಳೀ ವಂಕಿ
ಮೇಲಾದ ಹಣೆಯ ಬಟ್ಟಿನ ಶೃಂಗಾರ । ರತ್ನ
ಕೀಲಿಸಿದಂತೆ ಹೇಳಲು ಬಂಗಾರ । ಮುತ್ತು
ನೀಲ ವೈಡೂರ್ಯ ವಜ್ರದ ಉಂಗುರ । ಕೊಟ್ಟು
ವಾಲಿಂದ । ಮೋಹನ್ಮಾಲಿಂದ । ಎಣ್ಣೆ ನೂ । ಲಿಂದ
ಕೀಲಗಂಕಣ ಹಸ್ತ ಕಡಗ ಒಡ್ಯಾಣದಿ
ಬಾಲೆ ಒಪ್ಪಿದಳು ಚಿತ್ರದ ಬೊಂಬೆಯಂತೆ ॥೨೨॥

ಕಡು ಚೆಲ್ವ ಮಗಳಿಗೆ ಹಡೆದ ಪದ್ಮಾವತಿ
ಸಡಗರದಲಿ ಪೂವ ಮುಡಿಸುವಳು । ನಿರಿ
ವಿಡಿದು ಪೀತಾಂಬರಿ ಉಡಿಸುವಳು । ಬಹು
ಬೆಡಗಿನಿಂ ಕಂಚುಕ ತೊಡಿಸುವಳು । ಮುದ್ದು
ಕೊಡುವಳು । ಗಂಧ ತೊಡುವಳು । ತಿಲ್ಕ ಇಡು । ವಳು
ಕಡು ತವಕದಿ ಗಲ್ಲವಿಡಿದು ನಿವಾಳಿಯ
ಕಡೆಗಿಟ್ಟು ನಿಟ್ಟಿಸುವಳ್ಕುಡುತೆಗಂಗಳೆಯ ॥೨೩॥

ತಾಳ ಮೃದಂಗ ತಿತ್ತಿಯು ರುದ್ರವೀಣೆಯ
ಬಾಲ ಪ್ರಾಯದ ಮುದ್ದು ನಾರಿಯರು । ವಿದ್ಯೆ
ಕೊಳುಗೊಡುವ ತಾಳಧಾರಿಯರು । ರಾಗ
ಹೇಳುವ ಗಾಯನಕಾರಿಯರು । ಮುಂದೆ
ಆಳೇರು । ಚೌರ ಡಾಳೇರು । ಸರ್ವ ಸೂ । ಳೇರು
ಮ್ಯಾಳ ಸಹಿತ ವಿಜಯೇಶ್ವರಲಿಂಗನ
ಆಲಯ ಪೊಕ್ಕಳು ಲೋಲ ಲೋಚನೆಯು ॥೨೪॥

ಸಿತಕಂಠನಿಗೆ ಕೈಯ ಮುಗಿದು ಮದ್ದಳೆ ತಾಳ
ಗತಿಗಭೀನದ್ವಯ ಕರಗಳಿದ । ಬಹು
ಹಿತವಾದ ಕೋಕಿಲ ಸ್ವರಗಳಿಂದ । ರಾಗ
ಗತಿಗೂಡಿಸುತ ತರತರಗಳಿಂದ । ಪುಣ್ಯ
ಸತಿಯರು । ರೂಪವತಿಯರು । ಸುಸಂಗತಿ । ಯರು
ವ್ರತಿಗಳ ಎದೆ ಕುಲಕುವಪೊಲು ಬತ್ತೀಸ
ಅತುಳ ರಾಗದಿ ನಲಿಯುತಿರ್ದರಾಗ ॥೨೫॥

ಸುಗತಿಮಣಿಯು ಕಿರಿಗೆಜ್ಜೆ ಹೆಜ್ಜೆಗಳಿಂದ
ಝುಗಝುಗಿಸುತ ಥೈಥೈ ತೋಂಕಿಟಿತ । ದಿಪ್ತ
ತಗಡ್ದತ್ತ ತಗಡ್ದತ್ತ ಹುಂಕಿಟಿತ । ಎಂದು



ಹುಗಗಿರೆ ಕರಡ್ವಂಕ ಝುಂಕಟಿತ । ಇಂತು
ಬಗೆ ಆಡಿ । ಆಟ ಮಿಗಿಲಾಡಿ । ಮುಗುಳ್ನಗೆ । ಗೂಡಿ
ಸೊಗಸಿಂದ ನರ್ತನವಾಡುತಿರುವದ ಕಂಡು
ಬೆಗಡುಗೊಂಡನು ಮಲುಹಣ ಮಲುಹಣಿಗ ॥೨೬॥

ಮರಿದುಂಬಿ ಸರಗೈದು ವರ ಇಕ್ಷುದಂಡಕೆ
ತಿರುಹನೇರಿಸಿ ಪಂಚಸ್ವರಗಳಿಂದ ಕರ್ಣ
ಪರಿಯಂ ಬಿಗಿದು ಝಣತ್ಕರಗಳಿಂದ । ನೋಡಿ
ಸ್ಮರರಾಯನೆಚ್ಚನಬ್ಬರಗಳಿಂದ । ಎದೆ
ಕರಗುತ । ಕಂಡು ಸೊರಗುತ । ಮನ ಮರು । ಗುತ
ತರಹರಿಸದೆ ಕಾತರ ಹೆಚ್ಚಿ ಮಲುಹಣ
ಬೆರಗುವಟ್ಟನು ಮುದ್ದು ತರಳೆ ರನ್ನಳಿಗೆ ॥೨೭॥

ಚದುರ ಸುಜಾಣನ ಸುದತಿ ಕಂಡಾಕ್ಷಣ
ಮದನ ಕೋದಂಡಕ್ಕೆ ಹೆದೆಗಳನು । ಜೋಡಿ
ಸಿದ ಕಾಣುತ ಒಳ್ಪೆದೆಂಬದಿಗಳನು । ಮುಂದೆ
ಹದವಿಕ್ಕಿದಂಬಿನ ತುದಿಗಳನು । ತೀಡಿ
ಚೆದುರಲಿ । ಅವಳಿದಿರಿಲಿ । ನೋಡಿ ನೆದ । ರಿಲಿ
ಒದಗಿದ ಕುಚದ ಮದ್ಯದಿಂ ಬಿಗಿದೆಸೆಯಲು
ಮುದದಿ ಮೈಮರೆದಳು ಮದಗಜಗಮನೆ ॥೨೮॥

ಮಾರನಾಲಿಯ ತಾಳಲಾರದವನ ಕೈಯ
ವಾರಿಜ ಪಿಡಿದು ಹಸ್ತಾಂತ್ರದಲಿ । ಅತ್ತ
ಸಾರಿದಳಾಗ ಸ್ವತಂತ್ರದಲಿ । ಹರ್ಮ್ಯ
ಸೇರಿದರವರು ಗುಪ್ತಾಂತ್ರದಲಿ । ಪುಣ್ಯ
ನಾರಿಯು । ಹೊಂತಕಾರಿಯು । ಸೂಶರೀ । ರಿಯು
ಆ ರಮಣನ ತೆಕ್ಕೆಯೊಳಗಾಂತು ಶಕುನಿಯ
ಪರ್ಯಂಕದೊಳು ಬಹು ಉಪಚರಿಸಿದಳು ॥೨೯॥

ಪುರುಷನ ಕಾಲ್ಗೆ ಆ ತರುಣಿ ಅಳಿಯರಿಂದ
ತರಿಸಿ ಪನ್ನೀರ್ಗಳ ಬೆರಸುತಲಿ । ಸೀರಿ
ಸೆರಗಿಂದ ಚರಣವನೊರಸುತಲಿ । ದಿವ್ಯ
ಪರಿಮಳಕ್ಕತೆ ಗಂಧ ಧರಿಸುತಲಿ । ಮಹಾ
ಧೈರ್ಯದಿ । ಕಾಮ ಕಾರ್ಯದಿ । ಬಹುವೀ । ರ್ಯದಿ

ಸರಸ ಮಾತುಗಳಾಡಿ ಸುರತಕ್ಕೆ ಬಹು ಚಮ
ತ್ಕರದಿಂದ ಕೂಡಿ ಅಕ್ಕರದೊಳಗಿರುತ ॥೩೦॥

ತೆಕ್ಕೆ ಹನ್ನೆರಡು ಷೋದಶ ಕಲೆ ನವಮೋಹ
ಉಕ್ಕುತ ಬತ್ತೀಸ ಕೂಟದಿಂದ । ಮುಖ
ವಿಕ್ಕಿ ಮುದ್ದಿಸಿ ಅರೆನೋಟದಿಂದ । ಬಹು
ಅಕ್ಕರಾಗುವ ಮಾರನಾಟದಿಂದ । ಬೆವ
ರಿಕ್ಕುತ । ಮೈಯ ತಿಕ್ಕುತ । ಉಸುರಿ । ಕ್ಕುತ
ಸುಕ್ಕಿ ಸುರ್‍ರನೆ ಶ್ರಮಗಳೆದು ಪರ್ಯಂಕವ
ಗಕ್ಕನಿಳಿದರೀರ್ವರಗಲದಂದದಲಿ ॥೩೧॥

ಸಲೆ ಹರುಷದಿ ಆ ಲಲನೆ ಸಹಿತ ತಪ್ತ
ಜಲದಿಂದ ಕಾಲ್ಮೊಗ ತಲೆಗಳನು । ಬಹು
ಗೆಲವಿನಿಂದಲಿ ಸರ್ವ ಕಲೆಗಳನು । ಕಡು
ಚೆಲುವ ಕಾಮನ ಪ್ರೀತಿ ನೆಲೆ । ಗಳನು
ಎಲ್ಲ ತೊಳೆವುತ । ಮೂರ್ಛೆ ತಿಳಿವುತ । ಚೆಂತಿ ಅಳಿ । ವುತ
ಸುಲಲಿತವಾದಂಥ ಹಲವು ವಸ್ತ್ರವನುಟ್ಟು
ಬಲು ತವಕದಲಿ ಸುಸ್ಥಲಕೈದಲವರು ॥೩೨॥

ಲೆತ್ತ ಪಗಡಿ ಚದುರಂಗ ಹಾಸಂಗಿಯ
ನೆತ್ತಿ ಚದುರಂಗವನಾಡಿದರು । ಮೇಲೆ
ಬತ್ತೀಸ ರಾಗವ ಪಾಡಿದರು । ಅದ
ರೊತ್ತಿಲಿಬ್ಬರು ಕೂಡಿ ಹಾಡಿದರು । ಅವ
ರರ್ತಿಲಿ । ಸುಸಂಪತ್ತಿಲಿ । ಬಂದೋಬ । ಸ್ತಿಲಿ
ಅತ್ತಿತ್ತ ಅಗಲದಂದಲಿರುವರು ಅಚ್ಚ
ನೊತ್ತಿದ ಬಣ್ಣದ ಪ್ರತಿಮೆಯಂದದಲಿ ॥೩೩॥

ಜನಕ ಕಳಿಸಿಕೊಟ್ಟ ಧನವನೆಲ್ಲವ ತಂದು
ವನಿತೆಯ ಕೈವಶ ಮಾಡಿದನು । ರತ್ನ
ಕನಕ ವಸ್ತುಗಳೆಲ್ಲ ನೀಡಿದನು । ತಮ್ಮ
ಮನಿಮಾರ ಬಿಟ್ಟವಳ್ಕೊಡಿದನು । ತನ್ನ
ತನುವನು । ಚೆಲ್ವ ಮನವನು । ಶುದ್ಧ ಧನ । ಮನು
ಅನುಮಾನಿಸದೆ ನೂತನವಾದ ವಸ್ತು ವಾ
ಹನವನೆಲ್ಲವನಿತ್ತ ಘನತಕದಲಿ ॥೩೪॥



ಸಮರೂಪು ಸಮಪ್ರಾಯ ಸಮಜಾಣ್ಮೆ ಸಮಚಿತ್ತ
ಸಮವಾದ ಸದ್ಗುಣ ಸಮತೆಯಿಂದ । ಸ್ನೇಹ
ಸಮವರ್ಗ ಸಮಭಾವ ಮಮತೆಯಿಂದ । ಮೋಹ
ಸಮಯಾಂತಿ ಸಮದಾಂತಿ ಸಮತೆಯಿಂದ । ಶಮೆ
ದಮೆಯಿಂದ । ಕ್ರಿಯಗಮೆಯಿಂದ । ಶ್ರೀಲಕ್ಷ್ಮಿ । ಯಿಂದ
ಸಮಸುಖ ಸಮರತಿ ಸಮವಾಗಿ ಅನುದಿನ
ಸಮರಸದಲಿ ತಾವು ಸಮನಾಗಿರುತ ॥೩೫॥

ಗಳಿಲನೆ ತಾನೊಂದು ದಿನದಿ ಯೋಚಿಸಿದಳು
ನಳಿನ ಮುಖಿಯು ತನ್ನ ಮನದೊಳಗೆ । ಬ್ಯಾಗ
ಸುಳಿದಾಡಬೇಕು ಆ ವನದೊಳಗೆ । ನೀರ
ತಳಿರ ಕ್ರೀಡಿಸಬೇಕು ಕೊಳನೊಳಗೆ । ತನ್ನ
ಗೆಳೆಯಗೆ । ಚಂದ್ರಕಳೆಯಗೆ । ವಿದ್ಯಪ್ರಳ । ಯಗೆ
ಕಳುಪಿ ಲಾವಣ್ಯ ವಸ್ತ್ರವನುಟ್ಟು ತನ್ನಯ
ಕೆಳದರ್ಸಹಿತವಾಗಿ ನಡೆದಳಾ ವನಕೆ ॥೩೬॥

ಶಿವನಂತೆ ಶಿವನ ವಾಹನದಂತೆ ಋಷಿಯಂತೆ
ಯುವತೇರ ಮಂಗಲ ಸೂತ್ರದಂತೆ । ಗೌರೀ
ಧವನ ಕೈಲೊಪ್ಪುವ ಪಾತ್ರದಂತೆ । ವಾ
ಸವ ಖಡ್ಗದಿ ಪೊಯ್ದ ಗೋತ್ರದಂತೆ । ಇಂದು
ರವಿಯಂತೆ । ರುಕ್ಷಹವಿಯಂತೆ । ಶ್ರೀ ಶಾಂಭವಿ । ಯಂತೆ
ತವೆ ಕರ್ಣನಂತೆ ಕಾರ್ಮುಕದಂತೆ ಹಯದಂತೆ
ವಿವರಿಸಿ ಕರೆವಂತೆ ಬನವೊಪ್ಪುತಿಹುದು ॥೩೭॥

ನಳಿನ ಶೃಂಗಾರದ ಛತ್ರ ಚೌರ ಕೋಗಿಲಿ
ಗಿಳಿ ಮುಂದೆ ಹೊಗಳುವಂಥ ಪಾಠಕರು । ಸೋಗೆ
ಗಳು ನಲಿದಾಡುವ ನಾಟಕರು । ಕೋಕ
ಕೊಳರ್ವಕ್ಕಿ ಮೃಗಪಕ್ಷಿ ನೋಟಕರು । ಪರಿ
ಮಳದಿಂದ । ಸೂಸಿ ತಳದಿಂದ । ಸರ್ವಫಳ । ದಿಂದ
ಅಳಿನಾದ ಭೇರಿಯು ವನಲಕ್ಷ್ಮಿ ಇವರಿದಿ
ರ್ಗೊಳಬಂದಳೆಂಬಂತೆ ವನವೆಸೆದಿಹುದು ॥೩೮॥

ಮೇಲಾದ ವನ ಇರುತಿರಲದರೊಳು ಚಂದ್ರ
ಸಾಲೆ ಒಪ್ಪಿತು ಹೊನ್ನ ಕುಟ್ರಿಯಿಂದ । ಪಚ್ಚ

ಶೈಲಗಟ್ಟಿಹ ನೆಲಗಟ್ಟಿಯಿಂದ । ರತ್ನ
ಕೀಲಿಸಿ ವಜ್ರದ ಕಟ್ಟಿಯಿಂದ । ಬೊಂಬೆ
ಸಾಲ್ಗಳು । ಮುತ್ತು ನೀರ್ಗಳು । ಸುತ್ತ ಜಾ । ಲ್ಗಳು
ಜಾಳಂದ್ರದತೆ ಶೋಭಿಸುವ ಮಂಟಪದಲ್ಲಿ
ಬಾಳ ಸಂತೋಷದಿ ಇರುತಿರ್ದರವರು ॥೯॥

ತಿಳಿನೀರು ಕೊಣದ ಸುತ್ತಿನೊಳು ದೂತೇರ ಕೈಯ
ತಳಯ ಬಂದೀ ಎಡಬಲದೊಳಗೆ । ಅಲ್ಲಿ
ಸೆಳೆಮಂಚ ಇರಿಸುತ ಜಲದೊಳಗೆ । ಬಂದು
ಕುಳಿತರು ತಂಪಿನ ಸ್ಥಲದೊಳಗೆ । ಮಂಚ
ಕ್ಕೆಳೆವುತ । ಸೀರಿ ಸೆಳೆವುತ । ನೀರ ತಳಿ । ವುತ
ನಳಿನದಿಂದೆಸೆದಾಡಿ ದಣಿದು । ಈರ್ವರು ತಮ್ಮ
ನಿಳಯಕ್ಕೆ ನಡೆದಾರು ಘನ ತವಕದಲಿ ॥೧೦॥

ನಡೆಯಲ್ಲಿ ನುಡಿಯಲ್ಲಿ ಒಡೆಯಾನು ತಾನಾಗಿ
ದೃಢದಿಂದ ಗೃಹಕೃತ್ಯ ನಡಸುವನು । ಮತ್ತೆ
ಹಿಡದದ ಇಡುವಲ್ಲಿ ಇಡಿಸುವನು । ವಸ್ತ
ಒಡವಿಯ ಕೊಡುವಲ್ಲಿ ಕೊಡಿಸುವ । ಅಟ್ಟ
ಅಡಿಗೀಲಿ । ತೊಟ್ಟ ತೊಡಿಗೀಲಿ । ಉಟ್ಟ ಉಡಿ । ಗೀಲಿ
ಎಡದೆರಪಿಲ್ಲದೆ ಮಡದಿಯೋಳ್ಸುರತದಿ
ಒಡಗೂಡುತಲಿ ಸುಖಬಡುತಿರ್ದನಾಗ ॥೧೧॥

ಇರಲೊಂದು ದಿನ ಕೆಟ್ಟ ದುರುಳೆ ಪದ್ಮಾವತಿ
ತರುಳೆಯ ಮುಂದಕ್ಕೆ ಕರೆವುತಲಿ । ಈಗ
ಸರಿಬಾರದುದನೊಂದು ಒರೆವುತಲಿ । ತಾನು
ಬರಿಯ ಬಣ್ಣದ ಮಾತ ಸುರಿಸುತಲಿ । ಇದು
ಸರಿಯೇನೆ । ಬುದ್ಧಿ ಅರಿಯೇನೆ । ನಿನ್ನ ಪರಿ । ಯೇನೆ
ಮರುಳೆ ಕೇಳೆಲೆ ಸರಿಗರತೇರಂತಿಬೇಕು
ತರವಲ್ಲ ಅವನೊಡನಿರುವದು ಮಗಳೆ ॥೧೨॥

ಒತ್ತೆಗೊಟ್ಟವನ ಚಾಳಿಸಿ ಬಿಟ್ಟು ಹೊರಡಿಸಿ
ಒತ್ತಿ ಕವಾಟವ ಬಲಿಯಬೇಕು । ನೋಡಿ
ಮತ್ತೊಬ್ಬ ಧನಿಕನಿಗೆ ಒಲಿಯಬೇಕು । ಕೈಯ
ಅರ್ಥ ಒಡವಿ ವಸ್ತು ಸುಲಿಯಬೇಕು । ಒಂದು
ತುತ್ತಿಗೆ । ಇಲ್ಲೊಪ್ಪತ್ತಿಗೆ । ತೈಲ ನೆ । ತ್ತಿಗೆ



ಮತ್ತಿಲ್ಲದಂತೆ ಮಾಡುತ ವಿಟ ಪುರುಷರ
ಕುತ್ತಿಗೆ ಹಿಡಿದು ದಬ್ಬಲಿಬೇಕು ಮಗಳೆ ॥೧೩॥

ಎಷ್ಟು ಹೇಳಲಿ ಇಂಥ ಮಟ್ಟಿ ಹಾರುವನ ನೀ
ಬಿಟ್ಟು ಮತ್ತೊಬ್ಬನ ಇಟ್ಟುಕೊಳ್ಳೆ । ಅವ
ಕೊಟ್ಟ ದ್ರವ್ಯವ ಗಂಟು ಕಟ್ಟಿಕೊಳ್ಳೆ । ಪಟ್ಟ
ಪಟ್ಟಾವಳಿಯ ಸೀರಿ ಉಟ್ಟುಕೊಳ್ಳೆ । ಉಟ್ಟ
ಬಟ್ಟೆಗೆ । ನಮ್ಮ ಹೊಟ್ಟೆಗೆ । ತುತ್ತು ರೊ । ಟ್ಟಿಗೆ
ಹಿಟ್ಟಿಲ್ಲದಾಯ್ತು ಈ ಪಟ್ಟುಗುಡುಮನಿಂದ
ಸಿಟ್ಟಿನಿಂದ ಬಂದು ಕುಟ್ಟಿದಳ್ ಮಗಳ ॥೧೪॥

ಮಲುಹಣನೆನ್ನ ವಲ್ಲಭ ಮುದ್ದು ಚೆನ್ನಿಗ
ಚೆಲುವ ಸುಜಾಣನ ಬಿಡಬಲ್ಲೆನೆ । ಮತ್ತೆ
ಹುಲುಮನುಜರಿಗೆ ಚಿತ್ತವಿಡಬಲ್ಲೆನೆ । ಇಂಥ
ಕೆಲಬರ್ಗೆ ಸುರತವ ಕೊಡಬಲ್ಲೆನೆ । ಮುಂದೆ
ಫಲವೇನೆ । ಇದು ಗೆಲವೇನೆ । ನಿನ್ನ ಛಲ । ವೇನೆ
ಸುಲಲಿತಾಂಗನ ತೆಕ್ಕೆಯೊಳಗಿರ್ದು ಬಳಿಕ ಈ
ಹಲವು ಜಾತಿಗೆ ನಾನು ಒಲಿದು ಪೋಗುವೆನೆ ॥೧೫॥

ಮಗಳ ಕೈ ಹಿಡಿದೆಳದೊಯಿದೊಂದು ಕೋಣೆಯ
ಹೊಗಸಿ ಹಲ್ಲಿನೊಳವ್ಡ ಕಚ್ಚುತಲಿ । ಕೋಪ
ಮಿಗಿಲಾಗಿ ದ್ವಾರವ ಮುಚ್ಚುತಲಿ । ಚಿಲ್ಕ
ಸಿಗಿಸಿ ಕೀಲಿಗಿ ಮುದ್ರಿ ಹಚ್ಚುತಲಿ । ಪರ್ಣ
ಜಗಿಯೂತ । ಉಗಳುಗಿವೂತ । ತಾಂಬುಲೊಗೆ । ವೂತ
ಟಗರ್ದಲೆಯಿಂದ ಬಾಗಿಲ ಮುಂದೆ ಕುಳಿತು
ಆಗ ಪುರುಷನ ಕಂಡು ನೀ ಬರಬೇಡೆನಲು ॥೧೬॥

ಸರಿಗರತೇರ ವಿಟಪುರುಷರ ಕೈಯಿಂದ
ಪರಿಪರಿ ಭರಣಾವ ತರಿಸಿಕೊಂಡು । ತರ
ತರದಿಂದ ಮೈತುಂಬ ಧರಿಸಿಕೊಂಡು । ಮುಂದೆ
ಮೆರೆವ ಹೊನ್ನಿನ ರಾಸಿ ಸುರಿಸಿಕೊಂಡು । ತಾವು
ಇರುವರು । ಮತ್ತೆ ಮೆರೆವರು । ಪ್ರೀತಿಗರೆ । ವರು
ಅರಿಯದ ಹುಡಿಗಿಯ ಮರುಳ್ಮಾಡಿ ನೀನಿನ್ನು
ನೆರೆದು ಪೋಗುವದಿದು ತರವಲ್ಲವೆನಲು ॥೧೭॥

ನಿನ್ನ ಚೆಲ್ವಿಕೆಯನ್ನು ತೊಳೆದು ನಿಟ್ಟಿಸಬೇಕೆ
ನನ್ನ ವಿದ್ಯೆಯು ಹೊಟ್ಟೆಗನ್ನಗಳೆ । ಮುಂದೆ
ನಿನ್ನ ಪ್ರಾಯವು ಹೊನ್ನು ಚಿನ್ನಗಳೆ । ಹೀಗೆ
ನಿನ್ನ ಜಾಣ್ಮೆಕೆ ಮುತ್ತು ರನ್ನಗಳೆ । ಚಿಕ್ಕ
ಕನ್ನೇರು । ಮುದ್ದು ಚೆನ್ನೇರು । ಮೋಹ ರನ್ನೇರು
ಇನ್ನೆಲ್ಲಿ ನಿನಗಿನ್ನು ದೊರಕದಿಹರೆಯೆಂದು
ಮುನ್ನ ಕೋಪದಿ ಕತ್ತ ಹಿಡಿದು ನೂಕಿದಳು ॥೪೮॥

ಕಡು ಚಿಂತೆಯೊಳು ಕಳವಳಿಸಿ ಅವ್ವಳಿಸುತ
ನಡೆತಂದು ಕುಳಿತು ಆ ವನದೊಳಗೆ । ನಾರಿ
ಅಡಗಿದಳಿಂದಿನ ದಿನದೊಳಗೆ । ಎದೆ
ಯೊಡೆದು ಯೋಚಿಸಿದನು ಮನದೊಳಗೆ । ನನ್ನ
ಮಡದಿಯೆ । ಯಾಕೆ ತಡದಿಯೆ । ಮತ್ತೆ ನಡ । ದಿಯೆ
ಬಿಡದಿವಳ್ನೆನಸಿಕೊಳ್ಳುತಲೊಂದು ಭೂರುಹದ
ಅಡಿಯಲ್ಲಿ ಕುಳಿತು ಬಾಯ್ಬಿಡುತಿರ್ದನವನು ॥೪೯॥

ನಾರಿಯು ಕಣ್ಮುಂದೆ ಸುಳಿದಂತಾಗಲು ಬಾ ಬಾ
ನೀರೆ ಎನ್ನಲು ಬಯಲಪ್ಪುವನು । ಸನ್ನಿ
ಏರಿದ ಮಾನ್ವರಂತೊಪ್ಪುವನು । ಚಿಂತೆ
ದೋರುತ ಭವಣೆಯೊಳಿಪ್ಪವರು । ಅರ್ಧ
ಧೈರ್ಯದೊಳ್ । ಬಾಳವೀರ್ಯದೊಳ್ । ಕಾಮತೂರ್ಯ । ದೊಳ್
ಈ ರೀತಿ ವಿರಹದೊಳಿರಲಾಗ ರವಿ ತಾನು
ಭೋರನೆ ಪಡುವಣ ದೆಸೆಗೆ ಸೇರಿದನು ॥೫೦॥

ಪರಮೇಶ್ವರಗೆ ಈತನಿರವ ಪೇಳುತ ಚಿಂತೆ
ಪರಿಹರಿಸುವೆನೆಂಬ ತೆರದಿಂದಲಿ । ತಾನು
ತ್ವರಿತದಿ ನಡೆದನಕ್ಕರದಿಂದಲಿ । ಕ್ಷೀರ
ಶರಧಿಯ ಪೊಕ್ಕನಬ್ಬರದಿಂದಲಿ । ಕೆಂಪು
ಹರದೀತು । ಕಾವಳ್ಗರದೀತು । ನೈದಲ್ತೆರ । ದೀತು
ಸೊರಗೀತು ಚಕ್ರ ಬಲ್ಮರುಗೀತು ಚಕ್ರ
ತೆರಪಿಲ್ಲದುಡುಗಣವು ಭರದೊಳಗೆಸೆಯೆ ॥೫೧॥

ಬಿಡದಿವನಿರವ ನೋಡಲಿಕೆ ತಾಂ ಬರ್ಪಂತೆ
ಉಡುರಾಜ ಪೂರ್ವದಿಕ್ಕಿಗೇರಿದನು । ಅಲ್ಲಿ



ತಡೆಯದೆ ಮುಖಪದ್ಮದೋರಿದನು । ತಾನು
ಕಡು ಬೇಗ ಕಿರಣವ ಬೀರಿದನು । ಚಕೋ
ರಡಗಲು । ಚೋರರ್ ನಡೆಯಲು । ಜಾರರ್ ತಡೆ । ಯಲು
ಒಡಲೊಳಗುದಿಸಿದಾತನು ಬಂದನೆಂದು ಪಾಲ್
ಗಡಲು ಹಿಗ್ಗುತ ಮೇರೆವರಿದುದು ಭರದೀ ॥೫೨॥

ಇಂತಪ್ಪ ಚಂದ್ರನ ಪ್ರಭೆಯೊಳಗಾದ ಬಹು
ಸಂತಪಗೊಳುತೆ ತನ್ನಂಗದಲಿ । ಬಾಳ
ಭ್ರಾಂತಿ ಹತ್ತಿತು ಅಂತರಂಗದಲಿ । ಕುವ
ನಾಂತ್ರದೊಳಿಹನತಿ ಭಂಗದಲಿ । ಅತ್ತ
ಕಾಂತೆಯು । ನಿಂತಿವಂತೆಯು । ಸರ್ವಶಾಂ । ತೆಯು
ಕಾಂತನ ಕಾಣದೆ ಕಳವಳಿಸುತಲಾಗ
ದಂತಿಗಮನೆ ಬಾಳ ಚಿಂತಿಸುತಿಹಳು ॥೫೩॥

ಹರಣದೊಲ್ಲಭನಿಗೆ ತ್ವರಿತದಿ ನಡೆತಂದು
ಹೊರಬಾಗಿಲೊಳು ನಿಂದು ಕರೆದನೇನೊ । ದ್ವಾರ
ತೆರಿಯಲಿಲ್ಲೆನುತಲಿ ಮುನಿದನೇನೊ । ಇವ
ಳ್ಬರಲಿಲ್ಲವೆನುತೆನ್ನ ತೊರೆದನೇನೊ । ಕೂಗಿ
ಕರೆವುತ । ಬಾಯಿದೆರೆವುತ । ಕಣ್ಣೀರ್ಗರೆ । ವುತ
ಪುರುಷನಿಲ್ಲದೆ ಸರ್ವಾಭರಣವೇತಕೆಯೆಂದು
ಹರಿದು ಬಿದ್ದು ನೆಲಕ್ಹೊರಳಿದಳವಳು ॥೫೪॥

ಕಡುಪಾಪಿ ಬ್ರಹ್ಮ ನೀ ಪಡೆದೆ ಯಾತಕೆ ನಲ್ಲ
ನೊಡನೆ ಕೂಡಿಸಿ ಮತ್ತೆ ಕೆಡಿಸುವರೆ । ಆತ
ಹಿಡಿದಿರ್ದ ಕೈಯ ನೀ ಬಿಡಿಸುವರೆ । ಪಾಪ
ಕೆಡಿಸಿ ಈ ಕಾಯವ ಸುಡಿಸುವರೆ । ಮುಂದೆ
ಅಡವಿಗೆ । ದೊಡ್ಡ ಮಡುವಿಗೆ । ಇಂಥ ಪೊಡ । ವಿಗೆ
ಬಿಡದೆ ಸೋಬತಿ ನೀ ನಡೆವಂಥ ಸಮಯಕೆ
ನಡುದಾರಿಯನು ಬೇಗ ಕಡಿದಾನು ಶಿವನು ॥೫೫॥

ಮುಕ್ಕಣ್ಣ ಮೊರೆಯೊ ಈಶ್ವರನೆ ಪೊರೆಯೊ ಎಂದು
ದಿಕ್ಕಾರು ಮುಂದಿನ್ನು ಹೇಳೆನಗೆ । ಎನ್ನ
ಅಕ್ಕರ ಪುರುಷನ ತೋರೆನಗೆ । ಈಗ
ಗಕ್ಕನೆ ಕರೆತಂದು ತೋರೆನಗೆ । ಬಾಳ

ಬಿಕ್ಕುತ । ಕಾಯ ಸುಕ್ಕುತ । ಕಣ್ಣೀರು । ಕ್ಕುತ
ಅಕ್ಕಟಕ್ಕಟ ಆತನೆಲ್ಲಿ ಕಾಂಬೆನುಯೆಂದು
ಸೊಕ್ಕು ಜವ್ವನೆ ತಾನು ದುಃಖಿಸುತಿಹಳು ॥೫೬॥

ಪ್ರಾಣದೊಲ್ಲಭನ ಕಾಣದಲೆದ್ದು ಹುಡಿಮಣ್ಣು
ಜಾಣೆ ತನ್ನೈಗೆ ಲೇಪಿಸುತಿರಲು । ಸರ್ಪ
ವೇಣಿ ಮನ್ಮಥನ ಶಾಪಿಸುತಿರಲು । ಮತ್ತೆ
ಮಾಣದೆ ವಿಧಿಗೆ ಕೋಪಿಸುತಿರಲು । ಆಗ
ಜಾಣನು । ಪಂಚಬಾಣನು । ಮಹಾತ್ರಾ । ಣನು
ಸಾಣೆಗಿಕ್ಕಿದ ಪೊಸ ಕಣೆಗಳಿಂದೆಸೆಯಲು
ರಾಣಿ ಮೈಮರೆದು ಮಂಚದೊಳೊರಗಿದಳು ॥೫೭॥

ದೂತಿಯರ್ಕಂಡು ತಮ್ಮೆದೆಯ ಘಟ್ಟಿಸಿಕೊಂಡು
ತಾವ್ವವಕದಿ ಬಂದು ಮುತ್ತಿದರು । ಕೈಯೊ
ಳಾಂತು ತೆಕ್ಕಿಸಿ ಮ್ಯಾಲಕೆತ್ತಿದರು । ಬಾಳ
ಸೀತದಗ್ಗಣಿ ತಲೆಗೊತ್ತಿದರು । ನಮ್ಮ
ದಾತೆಯೆ । ಏಳೆ ಮಾತೆಯೆ । ಯಾತರ್ಭೀ । ತಿಯೆ
ಜಾತಿ ನಾಯಕಿಯೆ ಕಾಣ್ದೆರೆದು ನಮ್ಮೊಡನೊಂದು
ಮಾತನಾಡು ಎಂದು ಬಳಲಿದರವರು ॥೫೮॥

ನಳಿನಲೋಚನೆ ಸಾಕಿ ಸಲಹಿದ ಪಕ್ಷಿಗಳು
ಒಳಪೊಕ್ಕು ಒಡತಿಯ ನೋಡಿದವು । ಅಂಚೆ
ಗಿಳಿನವಿಲ್ಗಳು ದುಃಖ ಮಾಡಿದವು । ಹರ್ಮ್ಯ
ದೊಳಗೆ ಓಡ್ಯಾಡುತ ಚೀರಿದವು । ಯಾಕೆ
ಕೆಳದಿಯೆ । ಏನ ತಿಳದಿಯೆ । ಪ್ರಾಣ ಕಳೆ । ದಿಯೆ
ಸೆಳಮಂಚದಿಂದೆದ್ದು ಪಾಲ್ಗಳ ಕುಡಿಸೆಂದು
ಗಿಳಿಗಳು ನವಿಲ್ವಿಂಡು ಬಳಲಿದನಾಗ ॥೫೯॥

ಪನ್ನೀರು ಎದೆಗ್ಹಚ್ಚಿ ಕನ್ನೇರು ಬೂದಿಯ
ಉನ್ನತ ಅಂಗಾಲಿಗೊರಸಿದರು । ಮತ್ತೆ
ಸನ್ನುತ ತಂಗಾಳಿ ಬೀಸಿದರು । ದೂತೆ
ವೆಣ್ಗಳು ಮೆಲ್ಲನೆಚ್ಚರಿಸಿದರು । ಏನೆ
ರನ್ನೆಯೆ । ಮುದ್ದು ಚೆನ್ನೆಯೆ । ಸಂಪ । ನ್ನೆಯೆ



ನಿನ್ನೊಳಗಿರುವಂಥ ದುಗುಡ ಪೇಳೆಂದು
ಚೆನ್ನಾಗಿ ಕೇಳಿದರು ಅಳಿಯರಾಗ ॥೬೦॥

ಚಿತ್ತದೊಲ್ಲಭ ಬರದಿರ್ದರೆನ್ನಯ ಪ್ರಾಣ
ವ್ಯರ್ಥವಾಗುವದೆಂದು ಪೇಳಿದಳು । ಆಗ
ಇತ್ತ ಪದ್ಮಾವತಿ ಕೇಳಿದಳು । ತಾನು
ಅತ್ಯಂತ ಕೋಪವ ತಾಳಿದಳು । ಆಕಿ
ಒತ್ತಿಲಿ । ಕುಂತು ಜತ್ತಿಲಿ । ಬೇಗ ಅ । ತ್ತಲಿ
ಮತ್ತೊಬ್ಬ ಪುರುಷನ ಕರೆದು ಪೊಗ್ಗಳಕೊಂಡು
ಪುತ್ರಿಯ ಕೈವಾಸ ಇತ್ತಳಾ ವನಿತೆ ॥೬೧॥

ಸಟೆಚಿತ್ತ ತನ್ನೊಳು ಸಟೆನೋಟ ಅವನೊಳು
ಸಟೆ ಬಂದು ಉಪಚಾರ ಮಾಡುವಳು । ಬಾಳ
ಸಟೆ ಮಾತನೊಂದೊಂದನಾಡುವಳು । ಆಗ
ದಿಟದಿ ಪ್ರಿಯನ ದಾರಿ ನೋಡುವಳು । ಅಂಥ
ವಿಟನೊಳು । ಬಹುಸಂಕಟದೊಳು । ಆ ಗುಮ್ಮಟ । ದೊಳು
ಕುಟಿಲದಿಂದವನೊಡನಿರಲಿತ್ತ ಮಲುಹಣ
ಪಟುತರವಾದ ಚಿಂತೆಯೊಳ್ಬರುತಿರ್ದ ॥೬೨॥

ಆ ವ್ಯಾಳ್ಳೆದೊಳು ಮಲುಹಣನೆಂಬ ಪುರುಷನ
ಕಾವಪ್ಪ ಗೋಲಿಂಗ ಕೊಲ್ಲಲಾಗ । ಪ್ರೀತಿ
ಗೈವ ದ್ವಾರದ ಮುಂದೆ ನಿಲ್ಲಲಾಗ । ಚಲ್ವೆ
ಭಾವೆ ತಂದುದಕವ ಚೆಲ್ಲಲಾಗ । ಮಹಾ
ದೇವನೆ । ಏ ಸಂಜೀವನೆ । ಎನ್ನ ಕಾ । ಯ್ವನೆ
ಭಾವಜಹರನೆ ಹಾ ಹಾ ಎನಲಾಕ್ಷಣ
ಆ ವನಿತೆಯು ಕೇಳಿ ಹರುಷ ತಾಳಿದಳು ॥೬೩॥

ತರಳಾಕ್ಷಿ ಪುರುಷನ ಕರೆದೊಯ್ದು ಸುರತವ
ಬೆರಸಲು ಮರುಳಾಗದಿರು ಎಂದನು । ಹೊನ್ನ
ಸುರುವಿದ ಹರದನೊಳು ಎಂದನು । ಚಮ
ತ್ಕರದಿಂದ ಪೊರೆವ ಶ್ರೀಗುರು ಎಂದನು । ಮಬ್ಬು
ಹರದೀತು । ಕಾಮ ಸರದೀತು । ಜ್ಞಾನ ಸುರ । ದೀತು
ತರಳೆ ಆ ನರನು ಇರ್ವರು ವಿಜಯರಸನೊ
ಪ್ಪಿರುವ ಮಂದಿರಕೆ ಅಕ್ಕರದಿಂದ ಬರಲು ॥೬೪॥

ಮಕರಾಂಕ ರೂಪ ಸತ್ಕುಲದೀಪ ಕೇಳ್ । ಪಂಚ
ಮುಖನ ಶ್ರೀಚರಣವ ನೋಡೆಂದಳು । ಸರ್ವ
ಮುಕ್ತಿದಾಯಕನ ಕೊಂಡಾಡೆಂದಳು । ಬೇಗ
ನಕ್ಕರ ವರವ ನೀ ಬೇಡೆಂದಳು । ಕೇಳು
ಸಖಿಯಳೆ । ಚಂದ್ರಮುಖಿಯಳೆ । ಮೀನಾಂಬಕಿ । ಯಳೆ
ಅಕಳಂಕನಭವನ ಸ್ತುತಿಯ ಮಾಳ್ಪರೆ ನಿನ್ನ
ಮುಖವ ನೋಡುತ ನಾನು ಭಜಿಸುವೆನೆಂದ ॥೬೫॥

ಚೆಂದುಳ್ಳ ಚೆಲುವ ಹೀಗೆಂದ ಮಾತಿಗೆ ಆ
ಚಂದನಗಂಧಿ ಆನಂದದಲಿ । ಬಂದು
ಕಂದುಕಂಧರನಿಗೆ ನಮಿಸುತಲಿ । ಬೆನ್ನ
ಹಿಂದೆ ಕುಳಿತಳು ಮೈಯ ಹೊಂದುತಲಿ । ಜ್ಞಾನ
ಸಂಧಿಸಿ । ಚಿತ್ತ ಬಂಧಿಸಿ । ದೃಷ್ಟಿ ಹೊಂದಿಸಿ । ಚಂದ
ದಿಂದಾತನು ಕಾಂಚ ಕಚ ಪ್ರಕೆಯೆಂ
ದೆಂಬ ಭಕ್ತೀಸ ಕಂದದಿ ನುತಿಸುತಿರಲು ॥೬೬॥

ಸತಿಯಳ ಮೊಗವ ನೋಡುತ ಮಲುಹಣ ಮಾಳ್ಪ
ಸ್ತುತಿಯನಾಲಿಸಿದ ರಕ್ಕಸಶಿಕ್ಷನು । ತಾನು
ಅತಿ ಬೇಗ ಒಲಿದಾನು ಅಸಮಾಕ್ಷನು । ಬಾಳ
ಹಿತದಿ ಮೆಚ್ಚಿದನಾಗ ವಿಷಭಕ್ಷನು । ದೇವ
ತತಿಯರು । ಮಹಾವ್ರತಿಯರು । ಸಪ್ತಜತಿ । ಯರು
ಚತುರಾಸ್ಯ ಹರಿ ಇಂದ್ರ ವೀರೇಶ ಗುಹ ಶ್ರೀಪಾ
ರ್ವತಿಗೂಡಿ ಬಂದು ಮೈದೋರಿದ ಶಿವನು ॥೬೭॥

ಜೋಡಿ ನಿಂದವರಿಗಿ ರೂಢಿಗೀಶ್ವರ ಮೆಚ್ಚಿ
ಗಾಡದಿಂದೊರವ ನೀವು ಬೇಡೆಂದನು । ಸ್ತೋತ್ರ
ಮಾಡುತ ಪ್ರಮಥರೊಳ್ ಕೂಡೆಂದನು । ಇಂಥ
ರೂಢಿಯ ಅತಿಯಸೆ ಬೇಡೆಂದನು । ಚಂದ್ರ
ಚೂಡನೆ । ನಂದಿರೂಢನೆ । ಮಹಾಪ್ರಭು । ತಾನೆ
ಮೂಢ ಮಾನ್ವನು ನಾನು ಆಡುವೆ ನಿಮಗೊಂದ
ಗೂಢಕಾಲನ ಕೈಯೊಳ್ನೂಡಿದ ದೇವ ॥೬೮॥

ಮಾರಾರಿ ಕೇಳಯ್ಯ ಶತ ಸಂವತ್ಸರ ನನ್ನ
ನಾರಿಗೂಡಿರುವ ಸನ್ಮತದಿಂದಲಿ । ಇಂಥ



ಧಾರುಣಿಯೊಳು ನಿತ್ಯವ್ರತದಿಂದಲಿ । ಪ್ರೀತಿ
ತೀರುವನ್ನೆಗ ನಮ್ಮ ಹಿತದಿಂದಲಿ । ಈಗ
ಸೈರಿಸು । ಮುಂದೆ ತೋರಿಸು । ಸ್ವರ್ಗ ಸೇ । ರಿಸು
ಈ ರೀತಿ ನುಡಿದ ಮಾತನು ಕೇಳಿ ಶಿವನು ಕೈ
ವಾರಿಸಿ ಬೇಗನೆ ಪ್ರಮಥರ ಕಳುಹಿದ ॥೬೯॥

ಭವದೂರ ವಿಜಯೇಶ್ವರನೊಳೊಡವೆರೆದು ಇ
ನ್ನಿವರ ಭಾವವ ನಿತ್ಯ ನೋಡುವನು । ಒಂದು
ದಿವಸ ಮೀರದೆ ಪ್ರೀತಿ ಮಾಡುವನು । ನಿತ್ಯ
ಭವರಹಿತನು ಅವರಂತೆ ಇರುತಿಹನು । ತಮ್ಮ
ಭವನದೊಳ್ । ಹೋಮಹವನದೊಳ್ । ನಿತ್ಯಕವನ । ದೊಳ್
ಭವನದೋಳ್ತನಗಾರು ಸಮನಿಲ್ಲವೆನಿಸಿ ಆ
ಯುವತಿಯೋಳ್ಮಲುಹಣ ಸುಖ ಬಾಳು ತಿರ್ದ ॥೭೦॥

ಧರಣಿಯೋಳ್ಮಲುಹಣ ಎಂದೆನಿಸುವ ಶಿವ
ಶರಣರ ಚರಿತೆಯಾನಂದದಲಿ । ಈಗ
ವಿರಚಿಸಿದೆನು ನಿರ್ಭಯದಿಂದಲಿ । ಪೇಳ್ದೆ
ತುರುವಿ ಗಿರೀಶನ ದಯದಿಂದಲಿ । ಕಾಯೊ
ಪರಮೇಶ । ಪಾಹಿ ಗಿರಿಜೇಶ । ಮುಕ್ತಿ ವರ । ಧೀಶ
ಉರಗೇಶ ಕರಭೂಷ ಪರಮ ಭಕ್ತರ ಪೋಷ
ತುರುವಿ ಗಿರೀಶನೆ ಪೊರೆಯೊ ನೀ ಮುದದಿ ॥೭೧॥

**ಕಂದ**

ಗುರು ಲಘು ಗಣ ನೇಮಂಗಳ್
ವರ ಪ್ರಾಸ ಲಕ್ಷಣ ಅಡಿಗಳ್ತಪ್ಪಾಗಿರಲ್
ನೆರೆ ಜಾಣರು ತಿದ್ದೆ ನಿಮಗೆ ।
ಸುರಲೋಕದ ಪದವಿಯನೀವ ತುರುವಿ ಗಿರೀಶಂ ॥೭೨॥

**ಸಂಪೂರ್ಣ**

# ಆ. ಸಾಮಾಜಿಕ ಹಾಡುಗಳು*

೧) ಸವಾಲ ಪದ

೨) ಹೆಣ್ಣು–ಗಂಡಿನ ವಾದ

೩) ಹೆಣ್ಣು – ಗಂಡಿನ ಹೋಳೀಪದ (೧)

೪) ಹೆಣ್ಣು–ಗಂಡಿನ ಹೋಳೀಪದ (೨)

೫) ಕಾಮಣ್ಣ ದೇವರ ದುಮ್ಮಸಾಲಿಪದ

೬) ಮುಚ ಕಂಡಿಯ ದುಂದುಮೆಯ ಪದ

೭) ಹುಬ್ಬಳ್ಳಿಯ ಹಾಡು

೮) ಹೆಂಗ ಮಾಡಲೆವ್ವ ತಂಗಿ

೯) ಹಸಗೇಡಿ ಹೆಣ್ಣು

೧೦) ಹೆಂಡಾ ಕುಡಿಯುವ ಗಂಡನ ಸಂಸಾರ

೧೧) ದೇವದಾಸಿ ಪದ

೧೨) ಬೆಕ್ಕಿನ ಬೈಬ್ಯಾಡ

೧೩) ಮೋಸ ಮಾಡಿದ ಹೆಣ್ಣು

೧೪) ಬಾಳೇವಂತ ಬೋಳಿಮಗಾ ಖಾಸ ಶರಣ

**ಸಂಪಾದಕರು**

*ಡಾ. ಮ.ಗು. ಬಿರಾದಾರ



## ೧. ಸವಾಲ ಪದ

೧

ಏರ ॥ ತಿರಗಿ ತಿರಗಿ ಹಾಡಿದರ ಪರಿಗಿ ಕಬ್ಬಿಣದಂಗ
ಉರಿಗೆ ಉತ್ತಿಯ ಕೊಟ್ಟಂಗ ॥

ಚಾಲ॥ ಭಾಳ ದಿವಸ ಮಾಡಿದ ಸಾಸಾ ಕಲತ ಈ ವರ್ಷ ಬಂದಿ
ಹಾಡೋದಕ ।
ಅಂಜಬ್ಯಾಡೋ ಬಾರೋ ಮುಂದಕ ।
ಕೇಳ ಕಲಿಸಿದವನ ಹಂತೇಕ
ಅಂಜಿ ಗಾಬರ್‍ಯಾಗಿ ಎದಿ ಹಾರತೈತೊ ನಿಂದ ಟುಕ ಟುಕ್ ।
ನಿಂದು ಟುಕಟುಕ್ ।
ನಿನ್ನ ಮ್ಯಾಲ ಒಂದು ಸವಾಲು ಹಾಕುವಿನೋ ಬಲ್ಲ ಶಾಣ್ಯಾಗ ।
ಇದರ ಶಿಲ್ಕ ।
ತಗದ ಹೇಳೋ ತಡಾ ಇನ್ಯಾಕ ।
ಹತ್ತ ಕಾಲ ಹನ್ನೊಂದು ಕೈಯ್ಯ ನಡಬರಕೈತಿ ಒಂದು ಮಕಾ ।
ಒಂದ ಮಕಾ ।

ಬಾಯಿ ಎರಡ ಒಂದ ತಲೀ ಇರುವದು ಅಂತ್ರಲೀ
ಕೇಳೋ ಸೂಕ್ಷ್ಮ ಸೂಕ್ಷ್ಮ ।
ಆ ಪಕ್ಷದಿಂದ ಅಭಿಮಾನ ತುಂಬಬೇಡಿ ತ್ರಿಭುವನ ಹರಹರಿ
ಬ್ರಹ್ಮ ಕೇಳೋ ಬ್ರಹ್ಮ ॥
ಹಿಂತಾ ಹಾಡ ಕೇಳಿ ನನ್ನ ಹೊಟ್ಟಿ ಕಡಿಯತೈತಿ ಬಿಟ್ಟಾಧ್ಯಾದಿ
ಜಗಾಸರದ ।

ನಿಮ್ಮವರನ್ನ ಕೇಳತೀ ಕದ್ದ ಕದ್ದ ಹೆಂಗ ಹಾಡಂತಿ ಅವರ ಮುಂದ
ಅಳಬ್ಯಾಡ ಸುಮ್ಮನ ಮನಿಗಿ ಹೋಗೋ ಜಲ್ದ ಕೇಳೋ ಜಲ್ದ

೨

ಏರ ॥ ಅಂಗಿ ಮ್ಯಾಲ ಅಂಗಿ ಶ್ರೀಂಗಾರಕ ಕಚತೊಟ್ಟ
ರಂಗಾಗಿಬಂದ್ಯೋ ಹಾಡೋದಕ ।

**ಚಾಲ** ॥ ಹಾಡ ಹಿಂತ ಹಾಡ ಮುತ್ತ ಸುರದಾಂಗ
ಜನಾ ಪಾಡ ಅನ್ನ ಬೇಕೋ ಮತ್ತು ತಾಳದೊಳಗ।
ಈಡು ಮಾಡಿ ಕಲತೀಯೋ ಬಲ್ಲಾಂಗ ನೀ ದೀಡ ದಮಡಿ
ಹಾಡತಾರೋ ರಾಜದಾಗಾ।
ಇಟ ಇಟ ಹಾಡ ಹಾಡಿ ಹಲ್ಲ ಪಲ್ಲ ನೀ ಬುಟುಬುಟು
ಓಡತೀಯೋ ಹತ್ತಿ ಜೂಲ್ಲ।

ಕುಟಪಟ ಮಾಡಿನೀ ಕಲಿತಿಲ್ಲಾ।
ಜೀವ ಚುಟು ಚುಟು ಅಂತತೇನೋ ಹಗಲೆಲ್ಲಾ।
ಕೇಳ ಮಗಾ ನೀ ಕೆಂಗೆಟ್ಟ ಶೃಂಗಾರದ ನಿಶ್ಯಾನಿ ಕಳಕೊಂಡಿ।
ಸುಳ್ಳ ಕುಣದಾಡಿ ಮಣದಾಡಿ ಹೆಣಗ್ಯಾಡಿ ಹಾಡಬ್ಯಾಡ
ಕಾಣಬರೋ ಮಾತ ನೀ ಲಗುಲಗೂ।

ಪಾಡ ಹಾಡತಾನಂತ ನೋಡಿನಿ, ನೀ
ಪಾಡದಂಗ ಮಾಡತೀಯೋ ಒಡದ ಧನಿ।

ಒಡೆಯ ಬಂಕೇಶನ ಅಡಿಗೆ ಶರಣ ಅನ್ನಿ ನಾ
ಕಡೆಗೆ ಹಾಡೋದು ಹುಡಿ ಹೊಡದಂಗ ನಿನ್ನ।

**ಏರ** ॥ ರಂಗಾಗಿ ಬಂದೋ ಹಾಡೋದಕ ನಾ ನಿನ್ನ
ಬಿಂಗ ಬಿಡಿಸೇನೋ ಬಿಡೋ ಇನ್ನಾ ॥ಪ॥

೨

**ಏರ** ॥ ಹಿರ್ದ ಹಾಡವನಂಗ ಜರ್ದ ರುಮಾಲ ಸುತ್ತಿ
ತ್ವರದಿಂದ ಬಂದ್ಯೋ ಮಜಲಾಗ।

**ಚಾಲ** ॥ ಹಾಡ ನಮ್ಮ ಹಾಡಿನಂಗ ಹೇಡಿ ಹಿಂದಕ ಸರಿಬ್ಯಾಡ
ತೋಡಿ ಕೊಡೋ ಹೋಗಬ್ಯಾಡ ನಿಲ್ಲ ನಿಲ್ಲ॥
ನಮ್ಮ ಪದಾ ರತ್ನದ ಖಣಿ ಊಚ ವಜ್ರ ಕಲ್ಲ ಕಲ್ಲ
ಬಾಯಾರಿ ಕೈ ಸೋತ ನಿಂತಿ ನ್ಯಾಯಕ ನೀನು ತಾಳಾಂವಲ್ಲಾ।
ಧೈರ್ಯಾ ಅಂಜಿ ಎದ್ಯಾಗ ಹುಟ್ಟಿತ ಜಲ್ಲ ಜಲ್ಲ।
ಕಬರ ಇಲ್ಲೊ ನಿನಗ ಬಾಯಿ ಕಿಸದಿ ಸೋರತೈತಿ ಜೊಲ್ಲಜೊಲ್ಲ।
ಕಲಸಿದವನ ಕಡೆ ಮೋತಿ ಮಾಡಿ ನಿಲಸಿ ನಿಲಸಿ ಕೇಳತೀಯೊ
ಹೊಲಸಿ ಕಲಸಿದ್ದಷ್ಟ ಅಂವೇನ ಬಲ್ಲ ಬಲ್ಲ॥
ನಿನಕಿಂತ ಮುಂಚೆ ಅವನ ಉಚ್ಚಿ ಹೋಗತಾವ್ರೋ ಬಲ್ಲ ಬಲ್ಲ॥

**ಏರ** ॥ ತ್ವರದಿಂದ ಬಂದೊ ಮಜಲಾಗ ದುಡ್ಡ ಕೊಟ್ಟ
ಕರತಂದವರ ಅಬರು ಕಳದೆಲ್ಲೊ ॥ಪ॥



೪

**ಏರ** ॥ ಹಸನ ಹಾಡವನಂಗ ಇಸಕೊಂಡಿ ನಿಶ್ಯಾನಿ
ಇಸಮತನಾಗಿ ನೀನಿಂತ್ಯೋ ॥

**ಚಾಲ** ॥ ನಿಶ್ಯಾನಿ ಹಿಡಕೊಂಡ ಲೇಸಾಗ ಬೇಕಂತ ಆಸೇಕ ಬಂದ್ಯೊ।
ಮಜಲಿಗೆ ಜನಾ ಹಾಸ್ಯ ಮಾಡತೈತಿ ಅಲ್ಲತಗಿ।
ನೀ ಮೀಸಿ ಇಡಬಾರದ ಸುಮಾರಾಗಿ।
ಮಂದ್ಯಾಗ ಹಾಡೋದ ಬಿಗಿ।
ಇಂದೇನ ಬಗಿ ಬಂದಿ ಸಂದಿಯೊಳಗ ನಿನ್ನ ನಗಿ।
ಬಂತೋ ನಿನಗ ಡಾಣಿ।
ಕಮ್ಮಾನ ಪದಗೋಳ ಒಮ್ಮೆರ ಹಾಡೋ ಸುಮ್ಮಕ ಜನರ ತಲೆದೂಗಿ।
ನಿನಗೊಮ್ಮೆರ ಅನಬೇಕೋ ಹರುಷಾಗಿ।
ಬಿಡೋ ಕೆಮ್ಮೊದು ಅಂಜಿದಿ ದನಿ ಹೋಗಿ।
ವಜ್ರದಂಥಾ ಪದ ಗಜ್ಜರಿ ಮಳಿ ಹೊಡದಂಗ।
ಬೆಜ್ಜರ ಬಿಡತಿತೊ ಎದಿಗೆ ಯಾಕಾದ್ಯೊ ಪೈಂಗಿ।
ನೋಡ ಬಡದಂಗ ಅಡ್ಡಡ್ಡ ಮಳಿ
ನೀನು ಓಡೋಡಿ ತಗದಿ ದಿವಾಳಿ
ನೀನು ಹತ್ತೆಂಟು ಹಾಡಿದರ ಕೇಳಿ।
ನಮ್ಮ ಹಾಡಿನ ಮ್ಯಾಲ ನಿವಾಳಿ।
ಗೊಂಚಲ ಮುತ್ತಿನ ಬಾಗೋಡಿಯವರು, ಕೆಂಚನಾಯ್ಕನ ಕವಿ ಮಾಡಿ
ನಿನ್ನ ಅಂಜ್ಕಿ ಹರದೀತೋ ಮುನ್ನೋಡಿ।
ಸಣ್ಣ ಪಂಚೇತಿ ಮಾಡಬ್ಯಾಡೋ ತಲೆದೂಗಿ।
ಹಾಡೋದ ಬಿಟ್ಟ ಬಿಟ್ಟ ಮೂಡಲ ನೋಡತಿ।
ಈಡಲ್ಲ ನೀನ ಪದ ಎಲ್ಲಾ ಆಗಿ ಕೇಳತಿ ಕಲಸವನ ಹೋಗಿ॥

**ಏರ** ॥ ಇಸಮಿತವಾಗಿ ನಿಲನಿಂತೋ ನಮ್ಮ ಹಾಡ
ಕಸಮೂಲ ಪಲ್ಲೆ ಕಲಕೊಳ್ಳೋ ॥

೫

**ಏರ** ॥ ಒಂದ ಅಕ್ಷರ ಕಡಿಗೆ ಹೊಂದಿಸಿ ತಗದಾರೋ
ಸುಂದ್ಯಾಕ ಆದಿ ಸವಿಗೇಡಿ ॥

**ಚಾಲ** ॥ ಹೊಸತರದ ದಾಟಿ ಕಸರಿಲ್ಲ
ಸಂಸಾರ ಮಾಡಿ ಮಿಗಿಲ ಹಾಡಬೇಕೋ ಹಿಂಗ।
ಬ್ಯಾಸರಾಗೇತೋ ನಿನ್ನ ಮನದಾಗ ಉಸರ ಹಾಕಬೇಡೋ ಮಜಲಾಗ।

ಕತ್ತಿ ಹಾಂಗ ನಿಂತ ಬೇಗಳ ಹಾಡ ಹಾಡಿದರೇನೋ ಮೂರ್ಖಾ
ಹಾಡಿದರೇನೋ ಮೂರ್ಖಾ ॥
ನನ್ನ ಸರಿ ಯಾರೂ ಇಲ್ಲ ಅಂದಿ
ಪರೀಕ್ಷೆ ಮಾಡಿ ಮಂದಿ ।
ಮಾಡತಾರೋ ತಾವ, ಕೇಳೋ ತಾಂವಾ ।
ನಿನ್ನ ಒಳಗೆಲ್ಲೋ ಹಾಡಿನ ಜೀವಾ, ಕೇಳೋ ಜೀವಾ ।
ಈ ಪರಿ ನಮ್ಮು ಹಾಡ ನೀನು ಬರಬ್ಯಾಡೋ ಈ ಮಜಲಾಗಾ ।
ನಿಮ್ಮ ಗುರುವನ್ನು ಕೇಳೋ ಕದ್ದ ಕದ್ದ ।
ಹೆಂಗ ಹಾಡಲಂತಿ ಅವರ ಮುಂದ ।
ಅಳಬ್ಯಾಡ ಧೈರ್ಯ ಮಾಡಿ ಸುಮ್ಮನ ಮನಿಗೆ ಹೋಗೋ ಜಲ್ದಾ ಹೋಗೋಜಲ್ದಾ ॥

**ಏರ** ॥ ಸುಂದ್ಯಾಕ ಆದಿ ಸವಿಗೇಡಿ ತುಟಿಗೆ ತುಟಿಯು
ಹೊಂದದಾಂಗ ಹಾಡೋ ಹಿಂತಾವು ॥

೬

**ಏರ** ॥ ಹಾಡಿನ ನೆವದಿಂದ ಬಾಡೀಗಿ ಕಡೆ ತೋಡೆ ನೀ ಇಟ್ಟಿ
ಡವಲ ನನ ಮುಂದೆ ॥

**ಚಾಲ** ॥ ದುಗ್ಗಾಣಿ ಕೊಟ್ಟ ನೀವೊಂದ ಅಗ್ಗದ ಸದಾ ಅಕಲ ತಂದ ।
ಹಿಗ್ಗಿ ಹಿಗ್ಗಿ ಮಜಲಾಗ ಹಾಡಬ್ಯಾಡ ।
ಸಿಗ್ಗ ಇಲ್ಲೋ ಹಡಸಿತಮ್ಮಾ ಮಗ್ಗಲಮುರಿ ಬಡಸಿಕೊಂಡಿ ।
ಕಗ್ಗಲ್ಲಿನಂಗ ಬಂದ ನಿಲ್ಲಬೇಡಾ ।
ಜಗ್ಗಿ ಕೇಳತೇನಿ ತಗಿ ಹಿಂತಾ ಹಾಡಾ ।
ಕಂಗ್ರಾ ಮಾಡಿದರೇನೋ ಹಾಡಿನ ಸಂಗ್ರಾಮ ಇಲ್ಲೊ ನಿನ್ನ ಬದಿ
ಬಂಗಾರದಂಥ ಪದ ನಮ್ಮವು ಭಾಳ ನಿವಳಾ ॥
ಅಂತಿ ತೊಟ್ಟ ಶೃಂಗಾರಾಗಿ ಅಂಗಳದಾಗ ಬಂದ ನಿಂತಿ ।
ತಿಂಗಳ ದಿನಾ ಆತಿ ಗಂಟ ಬಿದ್ದಿ ನೋಡಾ ।
ನುಣ್ಣಗ ತೀರಿ ಹೋದುವಪ್ಪಾ ನಿನ್ನ ಹಾಡಾ ॥
ಆನಗೇಡಿ ಸ್ವರಾ ತಗದ ದನಿ ಬಿದ್ದ ನಿಂತೀಯೋ
ಮನಿಗೆ ಹೋಗೋ ಮುಂದೇನು ಬರುದಿಲ್ಲ ॥
ಕುನ್ನಿ ಹಾಂಗ ಕುಂಯ್ಯ ಕುಂಯ್ಯಾಡಿಸಿ ಬಣ್ಣ ಗುಂದಿ
ಸಣ್ಣ ಆದಿ
ತಣ್ಣಗ ಹೋಗೋ ಇನ್ನ ಆಗುದಿಲ್ಲ ಪಾಡಾ
ನುಣ್ಣಗ ತೀರಿ ಹೋದೂವಪ್ಪಾ ನಿನ್ನ ಹಾಡಾ ॥



**ಏರ** ॥ ನೀ ಇಟ್ಟ ಡೌಲ ನನ ಮುಂದ ನೀ ಬಂದ
ಸೆಟದ್ಯಾಡ ಬ್ಯಾಡೋ ನನ ಮುಂದ ॥

೭

**ಏರ** ॥ ಕೆರಿಯು ಸಮುದ್ರದ ಕೂಡ ಪರದಾಡಿದ ಪರಿಯಂತೆ
ಕರಿಯಬ್ಯಾಡ ನನ್ನ ಹಾಡೋದಕ ।

**ಚಾಲ** ॥ ತೆರದ ತೋರಸಿ ಬಿಟ್ಟೇನ ನಿನ್ನ
ತೆರವಾಯತನ ಬಿಡವಲ್ಲಿ
ಸರವಿನಂತಾವ ಹೊಳಿಯಂಗ ಬೆಳಸಿ ನೀ ಹೇಳತೀಯೋ
ಬುರಡಿ ಕೊರವಿಯಂತೆ ಧರವೇಸಿ
ಅಪ್ಪಂದ ತುಳು ಎರಡೂ ಹಾಡಾ
ಒಪ್ಪಿಟ್ಟಾರೋ ಜನರೆಲ್ಲಾ ತಿಪ್ಪಿಮ್ಯಾಲ ಬಿದ್ದ ಹಾಡ ಒರಸಿ ।
ನೀ ಕಲ ಕೊಂಡೀಯೋ ತುಪ್ಪದಂತಾವಂತ ಪುರಮಾಸಿ
ಅವಲ್ ಅವಲ್ ಪದಗೋಳ ತಗಿಯೋ
ಸವಾಲ ಜವಾಬ ಕೇವಲ ಅಲ್ಲಾ ।
ಕಾವಲ ಇಟ್ಟ ಕದ್ದ ಕುಂತಿ ನೀನು ಸುಳ್ಳೆ ವಣಾ
ಡವಲ ಮಾಡಿದರ ಏನೋ ಹೈವಾನಾ ।
ಡಾಮಾ ಡೋಲಾ ಆಗಬೇಡಾ ।
ನಮ್ಮದು ನಿಮ್ಮದು ತೀರಲಿ ಇಂದಾ
ಕಾಮಕಾಮ ಬಂದ ಒಂದಿನ ಇಷ್ಟ ಹಾಡಂತ ನೇಮಿಲ್ಲ
ನಮಗ ಕಡಿಮೇನ ॥

**ಏರ** ॥ ಕರಿಯ ಬ್ಯಾಡೋ ನನ್ನ ಹಾಡೋದಕ ನಿನ್ನಂತ
ತೆರವಾಯಿ ನನ್ನ ಸರಿಯೇನೋ ॥

೮

**ಏರ** ॥ ಧರಿಮ್ಯಾಲ ನಿನ್ನಂತೆ ಸುರದೈತಿ ಹಾಡುವ ಜನಾ
ಬರೇ ಮಾತ ಆಡಿ ಬರಗೆಟ್ಟೋ ॥

**ಚಾಲ** ॥ ಜರ್ಕಾಟಿ ರುಮಾಲ ಸುತ್ತಿ ಮುರಕಾ ಮಾಡಿ ಹಾಡಾಕ ಬಂದಿ
ತರಕಿನ ಪದಾ ಆಗೂದಿಲ್ಲಾ ವೈನಾ ।
ಬಿಡಾ ನಿನ್ನಾ ಹಾಳಿ ಹರಕೈತಿ ಒದರುವೆ ಒಂದ ಸವನಾ ।
ತ್ವಾಡೆ ಹಾಡವರೆಲ್ಲಾ ಬಂದ ನೋಡತಾರೋ ಅಜಮಾಸಾ ।
ಬಿಡತಾರೋ ಆಗೂದಿಲ್ಲ ಗಟ್ಟಿ ಮುಟ್ಟಾ ।
ನಿನ್ನಂಥವರು ಹನ್ನೆರಡು ಮಂದಿ ನಮ್ಮ ಕೂಡ ಹಾಡಾಕ
ಬರದ ಒಲ್ಲೇವಂತ ಕಬುಲಾತಿ ಬರಕೊಟ್ರು ।
ನೀ ಏನ ಆದೀ ಹೋಗೋ ಕಡಿಗೆ ಹುಚ್ಚಾಟ ।

**ಏರ ॥** ಬರೇ ಮಾತನಾಡಿ ಬರಗೆಟ್ಟೋ ನಿನ್ನ ಹಾಡ
ಕುರಿಗೆ ಕೊಳಮಲಿ ಇದ್ದಂಗ ॥

೬

**ಏರ ॥** ಯಾಕ ಮಜಲಿಗೆ ಬಂದೊ ತೂಕ ತಿಳಿಯದ ಪ್ರಾಣಿ
ಹಾಕಿತ ಬಾಯಿ ಹಾರಿತು ಹಸವು

**ಚಾಲ ॥** ನೀರ ಬೇಡುವೆ ಗಾಬರಿಯಾಗಿ ನಿನ್ಯಾರ
ಕರದಾರೋ ಮಜಲಿಗೆ ॥
ಸುಳ್ಳ ಪಂಚೇತಿ ಮಾಡಬ್ಯಾಡೋ ತಲೆದೂಗಿ ।
ಗದ್ದಲದೊಳು ಸಿಕ್ಕ ।
ಹುದಲ ಬಿದ್ದಿತೊ ತೊದಲ ಹಾಯತೈತಿ ನಾಲಿಗೆ ।
ಹಾಡಕಿ ಬದಲ ಅಕ್ಷರ ಗಾಬರಿಯಾಗಿ
ನೀ ಬೆಳತನಕ ಇನ್ನೇನ ಹಾಡತಿ, ತಳಾ ಬಳದೇತಿ
ತೊಳಿಯಾಕ ಕಲತಿ ।

**ಏರ ॥** ಬೇಕಾಗತೇನೋ ಬೇಖರು ನಿನ್ನಂತ
ಧರವೇಸಿ ನನ್ನಂತ ಸರಿಯೇನು ॥ಪ॥

೭

**ಏರ ॥** ಕಂಡ ಬಂದೇನ ನಾನು ಮಡಿಯಿಲ್ಲದ ಪಕ್ಷಿ
ಹುಂಡರಂತೇಕ ಇರತೈತಿ ।

**ಚಾಲ ॥** ಕಾಲಿಲ್ಲ ಪಕ್ಷಿಗೆ ತಮ್ಮಾ ಬಾಲಿಲ್ಲ ತಿಳಕೊಂಡ ನೋಡೋ
ಮ್ಯಾಲ ಮುಕಳಿ ಎಲ್ಲ ಗಿಡಕೈತಿ ।
ಬಾಯಿ ಉಂಟ ಸಾಲಹಿಡದ ಲೀಲಾ ಮಾಡತೈತಿ ।
ಕೂಡಲಿಲ್ಲಾ ಕುರಪಿಯಿಲ್ಲಾ ಕುಶಿ ಬಂದಾಗ ಕೂಡತೈತಿ ।
ಅದರಿಂದ ಬದುಕುವದು ಪ್ರಾಣಾ
ಸದನದೊಳು ಇರುವುದನ್ನು ಕದನ ಹ್ಯೂಡಬ್ಯಾಡೋ
ಬಿದ್ದಾವಲತ್ತಿ ॥
ಇದರ ಹೇಳದಿದ್ದರ ವದನಾ ನನಗ ಹೆಂಗ ತೋರಸ್ತಿ

**ಏರ ॥** ಹುಂಡರಂತೇಕ ಇರತೈತಿ ಇಂಚಲದ
ಪುಂಡ ಕವಿಗಳಿಗೆ ಗೊತ್ತೈತಿ ॥

೮

**ಏರ ॥** ಒಡದ ಹೇಳಿ ಹಾಡೋ ಮುಂದ
ಬಿಡದಿಲ್ಲ ತರುಬುವೆನ ಜಡಮತಿಯೇ ನಿನ್ನ ದರ್ಜೇನು ।



**ಚಾಲ ॥** ಭಾಳ ಮಾತನಾಡಬೇಡಾ ಕೇಳ ಒಡದ ಹೇಳತೇನೋ
ಏಳು ಕಾಲಿಂದ ಮೃಗ ಐತಿ ।
ಮಾಡಿದ ಬದಕ ಹಾಳ ಮಾಡಿ ಗ್ವಾಡಿ ಸೇರತೈತಿ
ಕುಂತ ಇದರ ಕೂನಾ ಕೇಳೋ ಕುಮಕ ಅದರ ಬದಕತೈತಿ
ಕುತ್ತಿಗೆ ಬಂದಾಗ ತೊಡತೈತಿ ।
ಕುಲಾಬಿ ಮಾಡಿ ಕೂಲಿ ಮಾಡವನ ಬೆನ್ನ ಹತೈತಿ ।

**ಏರ ॥** ಜಡಮತಿಯೇ ನಿನ್ನ ದರ್ಜೇನು, ಇಂಚಲದ
ಒಡಿಯ ಬಂಕನಾಥನ ದಯದಿಂದ ।

೯

**ಏರ ॥** ತರಬಿ ಕೇಳವರ್ಯಾರು ಸರ್ಬಿ ಹಾಕೇವು ನಾವು
ಬರುದಿನ ಕಾಳಿ ಹಿಡಿಸೇವೋ ।

**ಚಾಲ ॥** ಲಕ್ಷಕ್ಕ ಒಬ್ಬರು ಲಕ್ಷಿಟ್ಟ ಕೇಳುವರು ।
ಕುಕ್ಷಿಯೊಳು ತಿಳಿಯುವರು ।
ಕಾಸ ಇಟ್ಟ ಹೇಳುವರು ।
ತಗಿಯೋ ಅಕ್ಷರು ನನ್ನಂಗ ಮುಕ್ತಿದಾಯಿಕ
ಶಿವನು ಸಾಕ್ಷಾತ್ ಶಂಭಾ ಒಲಿದಾ ।
ತಂಪಾ ನಕ್ಷತ್ರಪತಿಯ ಚೆಲುವಾ ।
ನಟನದೇ ಹಲವರದ ಪಟುತರದ ಸ್ವರ ತಗದ ।
ಹಾಡೋ ಸಟಿ ಇಲ್ಲ ಈ ಮಾತ ಹಟವು ಹಿಡದರ ನಿನ್ನ
ಕಟಕಟನೇ ಕಡದ ಗೋಣಾ ।
ವೀರಭಟರು ಮಾಡ್ಯಾರೋ ಗರ್ಜನಾ ।
ಸತ್ರ ಪಂದ್ರವ ತಗದ ।
ಅತ್ತರ ಏನೂ ಆಗವದು ನೇತ್ರಕ್ಕ ನೀರ ತಂದ ।
ಉತ್ತರ ಕೊಡೋ ಒಂದೊಂದ ।
ಬಂದ ಕತ್ತರಿಯೊಳು ಸಿಲ್ಕಿದೆಯೋ ಯಾತರ
ಬಿಡೆಯೋ ನಿಂದು ।
ಧಾತ್ರದೊಳಗ ಇಂಚಲ ಗುರುಸ್ತೋತ್ರದ
ಮಾಡ್ಯಾರೋ ಹಗಲೆಲ್ಲ ।

**ಏರ ॥** ಬಿರ್ದಿನ ಕಾಳಿ ಹಿಡಿಸೇವೋ ಇಂಚಲದ
ವರ ಬಂಕನಾಥ ಮುನಿದಾನೋ ॥

* * *

## ೨. ಹೆಣ್ಣು ಗಂಡಿನ ವಾದ

೧

ಏರ ॥ ಕಣ್ಣ ಕಿಸದೇನಂತೆ ಸಣ್ಣ ಮಾರಿ ಮಾಡಿ
ತಣ್ಣಗಾತೇನ ಎದಿಯಾಗ ॥

ಚಾಲ॥ ಸೂಳೇರಂತ ತಿಳದ ನಿಮ್ಮನ್ನ
ಗೋಳ ನಾವು ಮಾಡುದಿಲ್ಲ
ಬಾಳೇದಾರ ಮಂದಿ ಶಾಣೇರಾ
ಶಿವ ಮಾಡಿ ಕಳಿಸ್ಯಾನ ನಮ್ಮ ಹಂತೇಲಿ ಏನಿಲ್ಲ ಕಸರಾ ।

ಸಾವಕಾಶ ಹಾಡಿರಿ ನೀವು ಚುಕಾಸಿ ನಡದೈತಿ ಇಲ್ಲಿ
ಅವಕಾಶ ಆದೀತ ಭಾಳ ಗೋರಾ ।
ಜಾಯಿರ ಇಂಚಲದ ಕೆಂಚನಾಯಕ ಹೇಳಿದ
ಜಗಳಲ್ಲ ತರಾ ।
ಬುದ್ದೀಲೆ ಹಾಡರಿ ನೀವು ಗುದ್ದ್ಯಾಡೂದು ಏನು ಚಲೋ
ಮದ್ದಾನಿ ನಾದ ತಗದಂಗ ಸ್ವರಾ ।
ಗದ್ಗಮಸ ಬೇಡ ಹೌದ ಹೌದ ಅನ್ನೂವಂಗ ಜನರೆಲ್ಲಾ ।

ಏರ ॥ ತಣ್ಣಗಾತೇನ ಎದಿಯಾಗ ಹಾಡಿನ
ಬಣ್ಣ ತಿಳದೋತ ಇದರಾಗಾ ॥

೨

ಏರ ॥ ಬಂಗಾರ ಬಳಿನಿಟ್ಟು ಅಂಗಡಿಗೆ ಹೋಗುವಳಾ
ಮುಂಗುರುಳ ತೀಡಿ ವನಪೀಲೆ ॥ಪ॥

ಚಾಲ ॥ ಹಸರ ಕೆಂಪ ವಗರ ಬಣ್ಣ ಕಸರ ಇಲ್ಲದಂತ ಹೆಣ್ಣ
ಮೀಸಲಾದ ಖಣಿ ಹೆಣ್ಣಿನೊಳಗ ಚೊಕ್ಕ ।
ನಾರಿ ನೀನು ಇದ್ದಂಗ ಪ್ರತ್ಯಕ್ಷ ರಾಕ್ಷಸಾ ।
ಗುಹ್ಯ ಸ್ಥಾನದೊಳು ಕೂದಲ ಮಯವಾಗಿ ಬಾಯಿಬಡಿಕಿ
ನ್ಯಾಯ ಮಾಡುವಕಿ ಬಹಳ ಪಕ್ಕಾ ।
ಆಕಿ ಕಾಮ ಬೆಳಗಿಂದ ಹಿಡದ ಮೂರತಾಸಿನ ತನಕಾ ।
ತಂಗಾಳಿ ಬೆಳಗಿಂದ ಬಿಟ್ಟರ ಅಂಗಜಾನ ಬಾಣ ತಾಕಿ



ಸಂಗಾ ಮಾಡುವಲ್ಲಿ ಬಹಳ ಪಕ್ಕಾ
ಆಕಿ ಕಾಮ ನೆಲಕ ಹರಿಯುವದು ಭಾಳ ।

ಏರ ॥ ಮುಂಗುರುಳು ತಿದ್ದಿ ವನಪೀಲೆ ಹೋಗುದ ಕಂಡ
ಹಂಬಲಾದವ ನಿನ ಮ್ಯಾಲ

೩

ಏರ ॥ ಕಿಚ್ಚ ಬೆಂಕಿಯ ಹಂತಾ ಹಚ್ಚಿಕೊಂಡಿನ ಬಾಲಿ
ಹೆಚ್ಚಿನ ಒಂಕಿ ಕೊಡತೇನ ।

ಚಾಲ ॥ ಸುರಳಿಗೂದಲ ಸುಗಣಿ ನೀನು ಹೊರಳಿ ಬಂದೇ ಸ್ವಪ್ನದಲ್ಲೇ
ಹವಳ ರತ್ನ ಬಂಗಾರದ ಬಾಕಾ
ಹೆಂತಾ ಕರಳ ಹೊರಳಿ ನೋಡವಲ್ಲೇ ಹಿಂದಕ್ಕ
ಕಂಚಿಕಾಯಿಯಂತಾಮಲಿ ಮುಂಚು ತೋಳಿನಲ್ಲಿ ಇಟ್ಟ
ಅಂಚಿದಡಿ ಗಚ್ಚಿನ ಕುಬಸ ಜುಳಕಾ ।
ಅಂಜಿಕಿಲ್ಲದ ಮಂಚಾನೇರಿ ಮಾಡ ಕಾಮನಾಟಾ
ಮುಂಚೆ ಮನಸ ಇಲ್ಲಾ ನಾನು ಪಂಚಮಿಗೆ ವರುಷಾಗತೈತಿ ।
ಹಂಚಿ ಬಟ್ಟಿನ ಗಲ್ಲಾ ಕಚ್ಚುದಕ
ಪಂಚನಾಮಾ ಆದರೂ ಚಿಂತಿಲ್ಲ ಇನ್ಯಾಕ

ಏರ ॥ ಹೆಚ್ಚಿನ ವಂಕಿ ಕೊಡತೇನ ಇಂಚಲದ
ಬಂಕನಾಥನ ಆಣಿ ಬಿಡುದುಲ್ಲ ॥

೪

ಏರ ॥ ಮದ ಬಂದ ತಿರಗುವ ಸುದತಿ ನಿನ್ನ
ಮದುವಿ ಗಂಡನ್ನ ಮರಸುವೆನ ।

ಚಾಲ ॥ ಸುಂದರಿಯ ನಿನ್ನ ರೂಪ ಚಂದ್ರನ ಮುಖ ಸಾಕ
ಚಂದ್ರ ಬೈತಲಿ ಕಪ್ಪಾ ।
ಇಂದ್ರನಳಿಯನ ಚ್ಯಾಪ ।
ನಿನ್ನ ಮ್ಯಾಲ ಆಗೈತಿ ಮನಸಾ ಮ್ಯಾಗ ಬಾರಲೇ
ಶೃಂಗಾರಿ ಕೂಡಿ ಭೋಗ ಮಾಡೋನ ಬಂಗಾರಿ ।
ಪಂದ್ರಾ ದಿವಸಾತಿ ನಾರಿ ಬಂದ್ರ ನೋಡವಲ್ಲೆ ಮಾರಿ
ಇಂದ್ರ ಲೋಕದ ಸುಂದರಿ
ಚಂದ್ರಾವಿಯ ಸೀರಿ ಉಟ್ಟ ತೊಟ್ಟ ಕುಬ್ಬಸ ಜರ್ದ
ಹಿರ್ದ ಕಾಣೋದ ತರ್ದಾ

ಮೈ ನೆರದ ಆತ ತಿಂಗಳ
ಮುಖವ್ರ ಹಿರ್ದಾ ಶ್ರೀ ಬೆಳದಿಂಗಳಾ
ನಾಗವೇಣಿಯ ನಿನ್ನ ಮೂಗಸಂಪಿಗೆ ತೆನಿಯ
ರಾಗಕೋಗಿಲೆ ಧ್ವನಿಯೇ ಭೋಗ ಅಮೃತದ ಖನಿಯೆ
ಬ್ಯಾಗ ಬಾರೆಲೆ ಶೃಂಗಾರಿ
ಕೂಡಿ ಬೇಗ ಮಾಡೋಣ ಬಂಗಾರಿ

**ಏರ ॥** ಮದವಿ ಗಂಡನ್ನ ಮರಿಸುವೆ ನಾ ನಿನ್ನ
ಹದ ನೋಡಿ ಬೀಜ ಬಿತ್ತುವೆನು ।

೫

**ಏರ ॥** ಕೆಂಬಲ್ಲ ನೋಡಿದರ ದಾಳಿಂಬರಿ ನಾಚಿತೋ
ತಾಂಬೂಲ ತಿಂದ ಬೀದಿಯಲಿ ।

**ಚಾಲ ॥** ತಿದ್ದಿಮಾಡಿದಾನ ಬ್ರಹ್ಮನ ಬುದ್ಧಿಗೇನು ಕಡಿಮಿ ಇಲ್ಲಾ
ಮದ್ದಾನಿ ನಡದಂಗ ಹೆಜ್ಜಿ ಚಲ್ಲಿ
ಸುರ್ತಿ ನಿನ್ನ ಮದವಿ ಗಂಡಗ ದೈವಕಿಲ್ಲ ನೆಲಿ
ಬಾಪೂರೇ ತೋಳಾಗ ಇಟ್ಟು ವ್ಯಾಪಾರ ಮಾಡುತ ಕುಂತಿ
ಭಪ್ಪರೆ ತೆಪ್ಪಿ ಹುಟ್ಟೇದಿ ಎಲ್ಲೆ ।
ನಿನ್ನಂತ ಬಾಲಿನ್ನ ಅಪ್ಪಿತಪ್ಪಿ ಕಂಡೇನ ಎಲ್ಲೆಲ್ಲೆ ।
ಉಬ್ಬೀದ ಮಲಿಗಳು ಎರಡಾ ಕೊಬ್ಬರಿ ಬಟ್ಟಲದಂಗಾ
ತೆಪ್ಪಿ ಹಾಕಿದ ಕುಪ್ಪಸ ರೇಶ್ಮೆಯಲ್ಲೆ
ಹುಬ್ಬ ನೋಡಿ ನಾಚುತ ಪದ್ಮನ ಶಿರಕಾಳಿ ।

**ಏರ ॥** ತಾಂಬೂಲ ತಿಂದ ಬೀದೀಲೆ ಹೋಗೂದ ಕಂಡ
ಹಂಬಲ ಆದೀತ ನಿನ್ನ ಮ್ಯಾಲೆ

೬

**ಏರ ॥** ಪುಥಳಿ ಬಣ್ಣದ ಸೀರಿ ರತ್ನದ ಹರಳ ಕೊರಳಾಗ
ಮತಿವಂತಿ ಹೇಳ ನೀ ಯಾರಾ ।

**ಚಾಲ ॥** ಗಲ್ಲ ಕನ್ನಡಿ ತೇಜ ಹಲ್ಲ ದಾಳಿಂಬರಿ ಬೀಜ
ಎಲ್ಲಿ ಹೊಂಟಿ ಸಜ್ಜಾ
ನಿಲ್ಲ ಮಾತಾಡ ಮೋಬಾ ನಾವ್ರ ಕೂಡಿ ಮಾಡೋಣ ಬಾರ
ರೂಢಿಯೊಳು ನಿನ್ನಂಥ ಪ್ರೌಢನಾರಿ ಯಾರನ್ನೂ ಕಾಣೆ ।
ನನ್ನ ಜೋಡ ದೊರದೀಯ ಮಣೀ ನೀ



ಎಳಿಯ ಪ್ರಾಯಣ ಹೆಣ್ಣಾ ತೊಳದ ಮುತ್ತಿನ ಬಣ್ಣ
ಹದಿ ಕಮಲದ ವರ್ಣ
ನಳಿನಾಕ್ಷಿ ಬಾ ನಿನ್ನ ಅಂಗ ಜಾಯಕ್ಕೆ ಕಂಗೆಟ್ಟ ನಿಂತಿದೇನ
ಭೃಂಗ ಕುಂತಳಿ ಮಾತಾಡ ಕೂಡಿ ಸಂಗ ಮಾಡೋಣ
ಒಡಗೂಡ ।
ಅಕ್ಕರತೆ ಬರಬರುತ್ತಾ ನಕ್ರ ಸುರದಂಗ ಪೂರ ಮುತ್ತಾ
ಸಕ್ರಿಕಿಂತ ಸವಿಮಾತ
ಸಿಕ್ಕರೆ ಮಾಡುವೆ ಶಾಂತ ನಿನ್ನ ಬಟ್ಟ ಕುಚಕ
ಮಧ್ಯದಲಿ ನೆಟ್ಟಾವ ನನ್ನ ನೆದರಾ
ಪಟ್ಟಮಂಚಕ ಬಾ ಬಾರೆ ಬೆಟ್ಟ ಆದಿ ಬಾಲಿ ಮುಖ ದೋರಾ ।

**ಏರ ॥** ಮತಿವಂತ ಕೇಳ ನೀ ಯಾರ ನೀನ ಕಂಡ
ಜತನ ಮಾಡಿ ನಿನ್ನ ಕೇಳಿದೇನ

೭

**ಏರ ॥** ಕಠಿಣ ಹೆಣ್ಣಿನ ಗುಣವ್ರ ನಳಿನಾಕ್ಷಿ ತಳದಾವಾ
ಖೊಟ್ಟಿ ನಿನ್ನ ಮನಸಾ ನಿಜವಲ್ಲ ॥

**ಚಾಲ ॥** ಧರಿಸಿ ನಮ್ಮ ಚಿತ್ರ ನಾಶ, ಸರಿಸಿ ನಮ್ಮ ಚಿತ್ರ ನಾಶ
ಮೈತುನ ಮಾಡಿದರ ರಕ್ತನಾಶ ।

ನೀ ಏನ ಹಾಡೀ ಜೋಡಿಯಲ್ಲ ಖೋಡಿ ಹೆಂಗಸಾ
ಭೆಟ್ಟಿ ಆಗುತತಿ ನಾರಿ ನಟ್ಟೀತ ಮನ್ಮಥನ ಬಾಣಾ
ದಿಟ್ಟ ಚಿತ್ರ ನಿನಮ್ಯಾಲ ದ್ಯಾಸ ।
ಮಾತಾಡಿದರ ಕೈಯಾಗಿನ ಹಣಾ ಕಸಗೊಳುವೆ ಸಾಹಸ
ಕ್ರೀಡಾ ಮಾಡಿದರ ರಕ್ತ ಜಾಡುಣ ಆಗಿ ಹೋಗತೈತಿ
ಒತ್ತಿ ಮಾಡಿ ಹಿಂಡತಿಯ ರಸಾ
ನಾರಿ ನೀನು ಇದ್ದಂಗ ಪ್ರತ್ಯಕ್ಷ ರಾಕ್ಷಸ

**ಏರ ॥** ಖೊಟ್ಟಿ ಮನಸ ನಿಜವಲ್ಲ ನೀ ಬಂದ
ಸೆಟದಾಡಬ್ಯಾಡ ನನಮುಂದಾ ।

೮

**ಏರ ॥** ಹಸಿರ ಸಿಲ್ಕಿನ ಸೀರಿ ಕುಶಲದ ಒಡ್ಯಾಣ
ಕಸರಿಲ್ಲ ನಿನ್ನ ರೂಪದಲಿ ।

**ಚಾಲ ॥** ವಂಕಿ ಸರಗಿ ಬಾಜೂ ಬಂದ ಬಳಿ ಕಟ್ಟಿದಿ ಏಕಾವಳಿ
ನಿನ್ನ ಕೊರಳಲ್ಲಿ ಪಟುತರದ ಪುತ್ಥಳಿ ಎದಿ ಮ್ಯಾಲ ।
ಎಷ್ಟಂತ ನಿನ್ನ ವರ್ಣಿಸಲಿ ಸಂಗಮಾಡಿ ಶೃಂಗಾರದ ಕರಿಮಣಿ ।
ಕೊಡುವೆ ಪ್ರೀತಿಲಿ, ಕೊಡುವೆ ಪ್ರೀತಿಲಿ ।
ನಿನ್ನ ಮ್ಯಾಲೆ ಆಗೇತ ಮನಸಾ ಅದೇ ನಿನ್ನ ಅರಸಾ
ಐತಿನನ ಖಾಸ ನನಖಾಸಾ
ನಿನ್ನ ಸಲುವಾಗಿ ಆದೇನ ಸನ್ಯಾಸಿ
ಏನ ಅಂತಿ ವಚನ ಕೊಡ ಭಾಸಿ ಕೇಳ ಭಾಸಿ ।

**ಏರ ॥** ಕಸರಿಲ್ಲ ನಿನ್ನ ರೂಪದಲ್ಲಿ ಇದೊಮ್ಮೆ
ಹೆಸರ ಮಾಡ ನನ ಕರಕೊಂಡ ।

೯

**ಏರ ॥** ವಾರಿಜಾಕ್ಷಿ ಬಹಳ ಮಾರಿ ಮಾಡಿದಿ ಸಣ್ಣ
ಹಾರತೈತಿ ಯಾಕ ನಿನ್ನ ಎದಿಯ ।

**ಚಾಲ ॥** ಸುಳ್ಳ ಬೆಳದೆ ಬೆಳವಲದಾಗ ಭಾಳ ಭಾಳ ಮಾತ ಹೇಳಿ
ಕಳ್ಳಗಿಂಡಿಲೆ ಹೋಗತಿದ್ದೆ ನೀನು ।
ತಿಳಿಯೆ ಇನ್ನ ನನ್ನ ಕೈಯಾಗ ಸಿಕ್ಕಿ ಆದಿ ಜೀರ್ಣ
ಜೀರ ಜೀರ ಆದಿ ಬಲೆಯಾಗ ಬಿದ್ದಿ
ಕುಣದ ದಣದಿ ಯಾಸಿ ಮಾಡಿ
ಹುಬ್ಬ ಹಾರಿಸಿ ತಿರುವ ಬ್ಯಾಡ ಕಣ್ಣ
ತೋಡಿಗೆ ತೋಡಿ ಡವಲಮಾಡಿ ಫಲವೇನು
ಡಾಮಡೋಲ ಆಗ ಬ್ಯಾಡ ನಮ್ಮದು ನಿಮ್ಮದು ತೀರಲಿ ಇಂದು ।
ಕಾಮ ಕಾಮ ಬಂದೀದೇನ ಇಷ್ಟ ಹಾಡಂತ ನೇಮಿಲ್ಲ
ನಮಗ ಕಡಿಮೇನ ।

**ಏರ ॥** ಹಾರತೈತಿ ಯಾಕ ನಿನ್ನ ಎದಿಯ ನಮ್ಮ ಹಾಡ
ಹಾರಿ ಜಡದಂಗ ಕಲ್ಲಾಗ ।

೧೦

**ಏರ ॥** ಮೇಲ ಬಾಲೆರೊಳಗ ಶೀಲ ಗುಣ ಸಂಪನ್ನಿ
ಕಾಲ ಸರ್ಪಳಿ ಪೈಜಾಣಿ ।

**ಚಾಲ ॥** ನಿಗರಿದಂತ ಮಲಿಗಳು ಬಗರಿಕುಚ ಎದಿಮ್ಯಾಲ
ಸಾಗರಬಿದ್ದ ಕೊಡತೇನ ರುಚಿ ।



ನಿನ್ನಂದ ಚಂದ ಅದರಿಂದ ಕೇಳುವೆ ಮನ ಮೆಚ್ಚಿ
ಮೇದ ಆಕಳದಂತ ನಾರಿ ಸಾದ ಮಾಡಿ ಸಾಕಾತೇ ನನಗ ।
ಸೋದೆ ತಾನಾ ಹೇಳಿ ಹೊಡಿ ನುಣಚಿ
ಕೇಳತೇನ ಬೇದರಷ್ಟೂ ಹೋತ ಅಂತ ಮನದಾಗ ನಾಚೀ ।
ಸಣ್ಣನ್ನ ಕುಡಿಹುಬ್ಬ ನಿನ್ನ ನುಣ್ಣನ್ನ ಗಲ್ಲಕ ಕಡಿ ತಾನೇ
ನಾಚಿ ಹೋದಿತ ನಾಚಿ ।
ನಿನ್ನಂಗ ಚಂದ ಅದರಿಂದ ಕೇಳುವೆ ಮನಮೆಚ್ಚಿ

**ಏರ ॥** ಕಾಲ ಸರಪಳಿ ಪೈಜಾಣ ಇಟಕೊಂಡ
ಲೋಲ್ಯಾಡುತ ಬಂದೆ ದಾರಿಯಲಿ ।

೧೧

**ಏರ ॥** ವಾರಿನೋಟದ ನಾರಿ ಬಾಬಾರೇ ಬಂಗಾರಿ
ಮೀರಿ ಹೋಗುವದು ತರವಲ್ಲಾ

**ಚಾಲ ॥** ಅಲ್ಲಿಕೇರಿ ಮಾಡಿಕೊಂಡ ನಿಲ್ಲದೇ ಬರತೇನಂತ
ಬಿಲ್ಲಿ ದುಡ್ಡಿನ ಬೆಲ್ಲಾ ಓದೆ ಪುಕ್ಕಟ್ಟ
ಬಂದಾಳಂತ ಭರವಸೆ ಮಾಡಿ ಕೊಟ್ಟೆನಲ್ಲ ಮುಕ್ಕಟ್ಟ ।
ಸುಳ್ಳ ಹೇಳಿ ಇಷ್ಟ ದಿನ ಸಳ್ಳವರದ ಹೋಗತಿದ್ಯ
ಕಳ್ಳ ಪೋರಿ ನಿಂದಾರ ಸೊಕ್ಕೆಷ್ಟ ।
ಮಾರಿ ನೋಡಿ ಮೂಗ ಮುರದ ಹೋಗತಿದ್ದೆ ಕೊಕ್ಕಾಲ ।
ಸಲ್ಲಾದಿಂದ ಬಾ ಅಂದರ ಒಲ್ಲಿನಂತ ಓಡತೀಯ
ಜುಲಮಿ ಮಾಡಿ ಜಗ್ಗತೇನ ಮುಕ್ಕಟ್ಟ ।
ಕೆಲಸ ಮಾಡಿಬಿಡತೇನ ಸೀರಿ ಕಳದ ಒಕ್ಕೊಟ್ಟ ।

**ಏರ ॥** ಮೀರಿ ಹೋಗುವದು ತರವಲ್ಲ
ಬಾಗೋಡಿ ಬಸವಣ್ಣನ ಆಣೆ ಬಿಡುದಿಲ್ಲ ॥

೧೨

**ಏರ ॥** ಪಂಚಮಿ ಕುಬ್ಬಸ ಲೆಕ್ಕ ಮುಂಚ್ಯಾಗಿ ತಿರಸಿನ್ಯ
ಹಂಚೆನ್ಯ ಹತ್ತಿ ನಿನಗಾಗಿ ॥ಪ॥

**ಚಾಲ ॥** ಹತ್ತ ಮಂದಿ ಕರಕೊಂಡ ಚಿಂತನಕ ಬಿಡಿಸಿದ್ದ ಹತ್ತಿ
ನಮ್ಮ ಹೊಲದ್ದ ಕಳದೆ ಉಪಕಾರ ।
ಬಿಸಲಹತ್ತಿ ಹೆಚ್ಚ ಚೆಲ್ಲೀನ ನಿನಗ ಪಾವಸೇರ
ಅಜ್ಜನಗದ ತಿಳಿಯಲಿಲ್ಲ

ಗಜ್ಜ ಹಾಕಿ ಬೀಡತೀನಲ್ಲ ಅಜವಾನ ಗಿಡ ಓದೆ ಎರಡ ಮೂರಾ ।
ರಾಜಿ ಆಗಿ ಬಿಟ್ಟೀನಲ್ಲಾ ಮಾಡಲಿಲ್ಲ ಖಬರ ।
ಬೇಕಾದಂಗ ಕಾಕಿ ಹಣ್ಣ ಕೋಕೊಂಡ ತಿಂದೆ ನಮ್ಮ ಹೊಲದಾಗ
ಯಾಕಂತ ಕೇಳಲಿಲ್ಲ ಒಂದ ಚೂರಾ ।
ನನ್ನಂಗ ಯಾವ ಹಡಸಿತಮ್ಮಾ ತಾಳ್ಯಾನ ನಿನ್ನ ಬಾರಾ ।

ಏರ ॥ ಹಂಚಿದ ಹತ್ತಿ ನಿನಗಾಗಿ ಬಾಗೋಡಿ
ಬಸವಣ್ಣನಾಣೆ ಬಿಡುದಿಲ್ಲ ॥

೧೩

ಏರ ॥ ಪ್ಯಾಟಿ ಪಟ್ಟಣದೊಳಗ ನೀಲ ಬಟ್ಟಲ ಬಸವಿ
ವಿಟನೆ ಬಾ ಎಂದು ಕರೆಯೋಳು

ಚಾಲ ॥ ಲೋಕದೊಳಗ ನಿನ್ನಕಿಂತ ಮಿಕ್ಕಿದ ಹೆಂಗಸೋರು ಇಲ್ಲ
ತೆಕ್ಕೆ ಮುಕ್ಕಿ ಹಾದಿದ್ದಿಲ್ಲ ಯಾರೂ ।
ಲೆಕ್ಕಮಾಡಿ ತರಬಿದರ ಅಬರು ಎಲ್ಲ ಚೂರಾ ।
ಛೀಮಾರಿ ಹೆಂಗಸೇನು ಆ ಮಾರಿ ಬ್ಯಾನಿಯೊಳಗ
ಹ್ವಾದಬಾರಿ ಒಯ್ಯಲಿಲ್ಲ ಪರಮೇಶ್ವರ ।
ಸುಮಾರ ರಂಡೆ ನಿನ್ನ ಹೇಳಿ ಬಿಟ್ಟೇನ ಸ್ವಾಮವಾರ ।

ಏರ ॥ ವಿಟನೆ ಬಾ ಎಂದು ಕರೆಯುವಳು
ನಿನಕಿಂತ ನಾಚಿ ಬಿಟ್ಟೇನ ಆಗಿ ಶ್ರೇಷ್ಠ

೧೪

ಏರ ॥ ಕುಂತಿರೇ ದೈವೆಲ್ಲಾ ಮನಸಿಟ್ಟ ಕೇಳೀರಿ
ಹಾಡೀನ ಮೆಟ್ಟ ಬಾಗೋಡಿ ॥ಪ॥

ಚಾಲ ॥ ಹೆಣ್ಣ ಕಂಡೆನಪ್ಪ ನಾನು ಕಣ್ಣ ಮಾತ್ರ ಒಂದ ಇತ್ತು
ಸಣ್ಣ ಕಡ್ಡಿಯಂಗ ಅದರ ಡವಲ
ಜಗಳಾಡಿದಂಗ ಬಾಯಿ ಮಾಡಿ ಮಾತಾಡತಾಳೋ ಕಲಲಾ
ದಿಗರಗುಂಡಿ ಚಿಗರದುಟಿ ಜಿಗದ ನಡಿಗಿ ನಡಿವಾಗ ।
ತಗತಗದ ಒಗಿತಾಳ ಗೊನ್ನಿ ಸುಂಬಳ ।
ಹಲ್ಲ ತುಂಬ ಬೂಸರಗಟ್ಟಿ ನಾರತೈತೇ ಬಾಯೆಲ್ಲಾ
ಹೇಸಿರಂಡಿ ಬೇಸ ಮಾಡಿ ನಾಶಿಪುಡಿ ಸೀನ ಸೀತರ
ಬೀಸಕಲ್ಲ ಒಗದಂಗ ದಢತ ।
ಹುರಕಿನ ಗುಳ್ಳಿ ಒಡದ ನೆತ್ತರ ಸೋರತೈತೊ ಜಲಲ



ಹಸಿ ಬಿಸಿ ತಂಗಳ ರೊಟ್ಟಿ ತಾಸಿಗೆ ಎಂಟ ತಿಂತಾಳಪ್ಪ
ಪುಂಡಿಪಲ್ಲೆ ಹೆಚ್ಚಿಗೇನ ಬೇಕಿಲ್ಲ ।
ಕಾಸ ಕುಂಬಳಕಾಯಿದಷ್ಟ ಮುದ್ದಿ ಸಾಕ ಸುಳ್ಳಲ್ಲ ।
ಹರಕ ಸೀರಿ ಉಟ್ಟ ಒಳ ಮುರಕ ಮಾಡಿ ನಡಿವಾಗ ।
ಪರಾ ಪರಾ ಕೆರಕೋತಾಳ ಮೈಯಲ್ಲಾ
ಹೇನ ಸೀರಾ ಕೂರಿಗಳ ಹರದಾಡತಾವ್ರೋ ಸೀರೆಲ್ಲಾ ।

ಏರ ॥ ಹಾಡಿನ ಮೆಟ್ಟ ಬಾಗೋಡಿ ಊರಾಗ
ಸರಪಣಿ ಹಚ್ಚಿದೇವ ಸಭಾದಾಗಾ ॥

೧೫

ಏರ ॥ ದುಷ್ಟ ಹೆಣ್ಣಿನ ಗುಣವು ಸೃಷ್ಟಿಯೊಳು ಹಿಡಿಸಲಾರದು
ಎಷ್ಟು ಹೇಳಿದರು ಮುಗಿಯದು

ಚಾಲ ॥ ಹುಟ್ಟಿದ ಒಂಬತ್ತು ವರ್ಷಕ ನೆಟ್ಟಗ ರಂಬಿಯ ಮಾನ
ಒಟ್ಟಿಗೆ ತುಂಬಿದರ ಹತ್ತ ವರ್ಷ ಪೂರ್ಣ
ಆಕಿ ಯೋನಿ ಇಂಬ ಆತರಿ ಹತ್ತೀತ ಕೆಟ್ಟ ವ್ಯಸನ ।
ಹನ್ನೊಂದ ವರ್ಷಕ ಹೆಣ್ಣಿನ ಜ್ಞಾನ ಪಲ್ಲಟ ಆಗತೈತಿ ।
ಅನ್ಯರ ಮನಿಗೆ ಹೋಗುವಂತ ದ್ಯಾಸ ।
ಕನ್ನಿ ದ್ಯಾಸಾ ಬ್ಯಾರೆ ನೆನಸತಾಳೊ ಗಂಡಸರನ ।
ಹನ್ನೆರಡ ವರ್ಷ ಆದಮ್ಯಾಲ ಮಾನಿನಿ ನೀನೇ ಜ್ಞಾನಿ ವಾನಿ
ಏರಿ ಬಿಡತಾಳೆಲ್ಲಾ ಅಭಿಮಾನಾ ।
ಕೈಕಾಲ ತಿಕ್ಕಿ ಸೀರಿ ಕುಬಸಾ ಮಾಡತಾಳೋ ಹಸನಾ ।

ಏರ ॥ ಎಷ್ಟು ಹೇಳಿದರೆ ಮುಗಿಯದೋ ಹೆಂಗಸರನ
ಕಟ್ಟಿ ಚಲ್ಲುವೆನೋ ಬಲಿಯೊಳಗ ।

೧೬

ಏರ ॥ ಜಂಬ ಮಾಡುತ ನಾರಿ ಜಾಂಬ ಕೈಯಾಗ ಹಿಡದ
ತುಂಬಿಕೊಂಡ ಜೇನುತುಪ್ಪವನು ॥ಪ॥

ಚಾಲ ॥ ಶೃಂಗಾರವಾದ ನಾರಿ ನಿನ್ನ ಉಂಗರ ಗೂದಲ ಏನ ಚಂದಾ
ಬಂಗಾರದ ವಸ್ತ ಅಂಗದಲಿ ।
ಜಡದ ಇಟ್ಟಿದಿಯಾ ಉಂಗುರ ಬೆರಳಿನಲಿ
ಹಿರ್ದ ಜರ್ದ ಸೀರಿ ಉಟ್ಟಿದಿಯಾ ।
ನೋಡಿ ಪೆಂಗಲಾದೇನ ಖಾಸ ರೇಶ್ಮಿ ಕುಬಸಾ ತೊಟ್ಟಿದಿ

ಮುತ್ತಿನಂತ ಬಾಲಿ ಮತ್ತು ಸತ್ಯಮಾತ ಒಂದ ಹೇಳ
ಅತ್ತಿ ಹೂವಿನ ಸೀರಿ ಒತ್ತಿ ಸಿಗಸಿ ಉಟ್ಟಿದಿಯಾ ।
ಏನ ಸಿಸ್ತ ಕಾಣಸ್ತಾವ ರತ್ನದಂತಾ ತುಟಿ ।
ನಿನ್ನ ಸುತ್ತ ಮುತ್ತ ಗೆಳತೇರು ಇಲ್ಲ ಸಟಿಯ ।
ತಂಗ ಮಾಡಿ ಹೋಗಬ್ಯಾಡ
ಹ್ಯಾಂಗರ ಮಾಡಿ ಕರಿತೇನು ಮುಂಗುರುಳ ತಿದ್ದಿತೀಡಿ
ತುರಬ ಕಟ್ಟಿದಿಯಾ ।

ಬೆಳದಿಂಗಳ ಮುಖಿಯೇ
ತೀರಿಸಿ ಹೋಗ ನನ್ನ ಚಟಿಯೇ ನಿನ್ನ ಕಂಡು ಕಾತುರಗೊಂಡು
ಎರಡು ಪುಟಿ ಚಂಡಿನಂತಾ ಮಲಿಗಳ ಹಿಂಡಿ ಹಿಚಕಿ
ಯಾವಾಗ ಹಿಡದೇನು ।
ಅಕ್ಕರತೀಲಿ ನಾರಿ ನಿಂತ ನಕ್ಕರ ಆತ ಉಮ್ಮೇದ
ತುಪ್ಪ ಸಕ್ಕರಿ ಉಂಡಂಗ ಆನಂದ ।
ಹಿಂತಾ ಮಕ ಹರೇದಾಗ ಚಂದಾ ನೀ ನಕ್ರ ಮಾಡುವೆ ನಾ ದುಂಧ
ತಿಂಗಳ ದಿನಾ ಆತ ನಮ್ಮ ಅಂಗಳದಾಗ ಹಾಯಿತಿಯೆ
ಕಂಗಳಾ ಎತ್ತಿ ನೋಡವಲ್ಲೆ ಹಂಗ ಹೋಗತೀಯ
ಬೆಳದಿಂಗಳ ಮುಖಿಯೇ ತೀರಿಸಿ ಹೋಗ ನನ್ನ ಚಟಿಯೆ ।

**ಏರ** ॥ ತುಂಬಿಕೊಂಡ ಜೇನು ತುಪ್ಪವನು ಪ್ಯಾಟಿಲೆ
ಸಂಭ್ರಮದಿಂದ ಬರತಿದ್ದೆ ।

## ೭

**ಏರ** ॥ ಜುಮರ ಮಾಡುತ ನಾರಿ ಸ್ವಾಮಾರ ಸಂಜೀಲೆ
ತಾಮ್ರಕೊಡ ಹೊತ್ತ ತಲಿಮ್ಯಾಲಾ ॥

**ಚಾಲ** ॥ ಕತ್ತಿಗೆ ಕಟ್ಟಾಣಿ ಸರಾ ಶ್ರೇಷ್ಠವಾದ ಏಕಾವಳಿ
ಅಷ್ಟುಕು ಮಿಗಿಲಾದ ಸೇರಿನ ಸರಿಗಿ
ಮ್ಯಾಲ ದಟ್ಟ ಗೋದಿ ಸರಾ ಮುತ್ತಿನ ಮುರಗಿ
ವಾಚಕೃಷ್ಣ ಚಂದರದಾರ ಹತ್ತೇತಿ ಮಲಿಗಿ
ಹಾರಾ ಏಕಾವಳಿ ಹಾಕಿ ಭಾರ ಕುಚ ತೋರತಾವ್ರ
ಚಾರು ಕುಂಕುಮ ಹಚ್ಚಿ ನಿನ್ನ ಹಣೆಯಲ್ಲಿ
ಮರಳಿ ವಾರಿ ನೋಟಾ ನೋಡತೀಯಾ ಎಳಿ ಹುಡಿಗಿ ।
ನನ್ನ ಸಂಗ ಮಾಡ ಏ ಬೃಂಗ ಕುಂತಾಳಿ ನಿನ್ನಂಗ
ಇಲ್ಲ ಯಾರ‍್ಯಾರಾ ।



ಅಂದಚೇನ ಸತಿಯ ಸೋಮಾರಾ ।
ಹೊಟ್ಟಿ ತಿಳಪ ಬಾಳಿ ಸುಳಿಯಾಂಗ ನಿನ್ನ ಹೊಳಪ ರಮಣ ಸತಿಯಂಗ
ಎಲ್ಲಿ ತಪ್ಪಿಹುಟ್ಟಿದೀಯ ಧರಿಮ್ಯಾಲ
ತುಟಿ ಚೀಪತೇನ ಕಡದೀಗ ॥

**ಏರ** ॥ ತಾಮ್ರ ಕೊಡ ಹೊತ್ತ ತಲಿಮ್ಯಾಲ ನಿನ್ನ ಕಂಡ
ಅಮರುವಂಗಾತು ಮನದೊಳಗ ॥

## ೮

**ಏರ** ॥ ಸುಳಿಗಾಳಿ ತಂಪೀಗೆ ಎಳಿ ಬಾಳಿ ಸುಳಿಯಂಗ
ಬಳಬಳನೆ ಬಳಕಿ ಬೀಳುವಳು

**ಚಾಲ** ॥ ಶಂಕಿನಿ ಜಾತಿಯ ಹೆಣ್ಣಿನ ಟೊಂಕಾ ಕದರ ಕುಂಡಿ ತಿಗಾ
ಡೊಂಕ ನಡಿಗಿ ನಡಿಯುವಳು ।
ಪರೀಕ್ಷೆ ಮಾಡಿ ತಿಳಿಯಲಿ ಆಕಿ ಶಂಕಿನಂಬುವಳೋ
ನಾಲ್ಕು ಬಟ್ಟು ಹಣಿಯವಳು ಮ್ಯಾಲ ನೋಟ ನೋಡತಾಳೋ
ಎಡಬಲಕ ಇಲ್ಲದಿದ್ದರ ನಗತಾಳೋ
ಹಸ್ತಿನಿ ಜಾತಿ ಗಂಡಸಗ ಮಾಯಮಾಡುವಳೋ
ಗುಹ್ಯ ಸ್ಥಾನದೊಳು ಕೂದಲುಮಯವಾಗಿ ಬಾಯಿ ಬಡಿಕಿ
ನ್ಯಾಯ ಮಾಡುವಲ್ಲಿ ಸಿಟ್ಟಿನವಳು
ಹಸ್ತಿನಿ ಜ್ಯಾತಿ ಗಂಡಸಗ ಮಾಯ ಮಾಡುವಳು ।

**ಏರ** ॥ ಬಳಬಳನೆ ಬಳುಕಿ ಬೀಳುವಳೆ ಪದ್ಮಿನಿಯು
ಎರಡು ಬಟ್ಟ ಹಣಿಯ ಬಸಮಣ್ಣ ॥ಪ॥

## ೯

**ಏರ** ॥ ಹೆಣ್ಣಿಗೆ ಹರೆಯ ಬಂದ ಕಣ್ಣ ತಿರುವದು ಕಲ್ತ
ಅಣ್ಣ ತಮ್ಮರದ ದರ್ಜಿಲ್ಲ ॥ಪ॥

**ಚಾಲ** ॥ ಹರೆಯ ಬಂದರ ನಾರಿ ನೆರಮನಿ ದೊರೆಮನಿ ಹೊಕ್ಕ
ಹೊರಹೊರಗ ಇರತೈತಿ ಆಕಿ ದ್ಯಾಸಾ ।
ಮೈ ನೆರೆದ ದಿವಸ ಮಾಡತಾಳೋ ಪುರುಷನ ನೆಪ್ಪಾ ।
ಕಂಡು ಕಾಣದಂಗ ಅವಳ ಗಂಡಸರ ವಾರಿಯ ನೋಟ
ದುಂಡ ಕುಚದ ಮ್ಯಾಲ ಅವಳ ದ್ಯಾಸಾ ।
ಸೀರಿ ನಿರಗಿ ಹೊಯ್ಯದಾಳೊ ಹೆಂತಾ ಖಾಸಾ ।
ಬಣ್ಣಿಸಿ ಬೈತಲಿ ತೆಗದ ನುಣ್ಣಾಗಿ ತುರುಬಾವ್ರ ಕಟ್ಟಿ

ಎಣ್ಣಿ ಬೆವರ ಮಾರಿಗೆ ತುಸಾ
ರಿಕ್ಕ ಮಾಡಿ ಗಳದ ಕಟ್ಟಿದಾಳೋ ಕುಬಸಾ ॥

**ಏರ ॥** ಅಣ್ಣತಮ್ಮರದು ದರ್ಜಿಲ್ಲ ಅವಳೀಗೆ
ತನ್ನ ಪುರುಷನ ಬಿಡುವಳೋ ॥

೨೦

**ಏರ ॥** ಬಡಸುವನು ನಿನ್ನ ಗಂಡ ಕಡಸುವೆ ಬೇಗಿನ ಒಯ್ಯರಿ
ದುಡ ದುಡದ ಮುಪ್ಪನಾಗೇತಿ ।

**ಚಾಲ ॥** ಚೀಲ ಹರಕಿ ನಿನ್ನ ಗಂಡನ ಡವಲ ಮಾಡಿ ಹೇಳ ಬ್ಯಾಡ
ಕಾಲಡೊಂಕ ಮೆಲುಗೈಯ ಕೆಡಕ ।
ನನ್ನಂತ ಚೆಲುವ ಯಾಂವದಾನ ಹುಡಕ
ಎಲ್ಲಾ ಹೆಂಗಸರಕಿಂತ ನಿನ್ನ ಬಲ ಮಾಡಿ ಇಡತೇನ
ಪಲ್ಲಂಗದ ಮ್ಯಾಲ ಮಲಗಿಕೊಳ್ಳ ।
ಹೊಲಮನಿ ಎಲ್ಲಾ ನಿನ್ನ ಸ್ವಾದೀನ ಮಾಡಿಕೊಳ್ಳು ।
ತಾಯಿ ತಂದಿ ಅಣ್ಣನ ಪಾಲಿಗೆ ಮುಂದಾಗಿ ಕಳಿಸಿದೇನ
ಬಂದ ಹೇಣ್ತಿದೈತ ಭಾಳ ಘೋರಾ ।
ನೀ ಬರತೇನಂದ್ರ ಸೋಡಪತ್ರ ಕೊಡತೇನ ಹೋಗಲೆವಳ

**ಏರ ॥** ದುಡ ದುಡದ ಮುಪ್ಪನಾಗೇತಿ
ಗಂಡ ಪಡಿಕಾಳಾ ತರುವ ಪಡಿಸೆಂಟ ॥

೨೧

**ಏರ ॥** ಗಂಗಾಳ ಮಾರಿಯ ಹುಡಗಿ ಮುಗಳ ನಗಿ ನಕ್ಕೊಂತ
ಅಂಗಳದಾಗ ಹಾದ ಬರತಿದ್ದೆ ॥ಪ॥

**ಚಾಲ ॥** ಯಾರ ಹೇಳ ನಾರಿ ನಿನ್ನ ನೀರ ಹಾದ್ಯಾಗ ನೋಡಿನಿ
ಹರಿಯಾನ ಸುಟ್ಟು ಉರಿಯತಿಯ ದುಮ್ಮ ದುಮ್ಮ ।
ಒಮ್ಮಿ ಕೇಳಿದರ ಕೇಳವಲ್ಲಿ ಗುಮ್ಮಿ ಗುಸಿಗ ಹಂಗಾ ಹೊಂಟಿ ।
ಅಮ್ಮಿ ಹಿಡದ ಗುಮ್ಮತೀನ ಸುಮ್ಮ ಸುಮ್ಮನೇ
ನಿನ್ನ ಧ್ಯಾನದೊಳು ।
ಬ್ರಹ್ಮಿ ಬಡದ ಕುಂತಿದೇನು ಕಾಮ ಏರಿ ಮೈ ಅಂತದ ಜುಮ್ಮ ಜುಮ್ಮ ।
ನಲ್ಲಿ ಒಲ್ಲಿ ನೀ ಅನ್ನಬ್ಯಾಡ ಇಲ್ಲೇನಿಂದ್ರ ಮಾತನಾಡ ।
ಮಲ್ಲಿಗೆ ಹೂವ ಮುಡದಂಗ ಗಮ್ಮ ಗಮ್ಮ ಗಟ್ಟಿ
ಮಾತ ಮಾತ ಹೇಳವಲ್ಲಿ ।
ಮಿಟ್ಟಿಮುಸಗಿ ಮಾತಾಡವಲ್ಲೇ ಎಷ್ಟಾರ ಖಾಲಿ ನಿನ್ನ ದಮ್ಮ ದಮ್ಮ ॥



ನಾಗರ ಹಾವಿನ ಹಂಗ ಇಬ್ಬರೂ ಸಾಗರಬಿದ್ದು ಮಾಡೋಣು
ನಗಾರಿ ಹೊಡದಂಗ ಧುಮ್ಮ ಧುಮ್ಮ

**ಏರ ॥** ಅಂಗಳದಾಗ ಹಾದ ಬರತಿದ್ದೆ ಹೆಂತಾ ಲಗ್ಗ
ನಿಗಾ ಆದಿಯ ಮೈನೆರದೆ

೨೨

**ಏರ ॥** ಹಿಂತಾ ಶಾಸ್ತ್ರದ ಮಾತ ಕುಂತ ಕೇಳತಿ ಚದುರಿ
ಪಂಥಾ ಮಾಡಿ ಸುಳ್ಳೆ ಕೆಡಬ್ಯಾಡಾ ॥

**ಚಾಲ ॥** ಎಂದೆಂದು ಹಾಡಿದರ ಹಳಿ ಪದಾ
ಒಂದ ಹೊಸದ ಹಾಡಲಿಲ್ಲ ಠೀಕಾ
ಗೀಳ ಪದ ಹಾಡಿ ಬೆಳಿತನಕಾ ಯಾಳೆಗಳದ ಹೊರಟಿ ಆತ ಬೆಳಕಾ ।
ಇನ್ನೇನೈತಿ ಕಣ್ಣೀಗೆ ಕೈಯ್ಯ ಹಾಕತೇನ ತಳತನಕ । ಕೇಳ ತಳತನಕಾ ।
ಅನುಮಾನ ಇಲ್ಲದ ಹಾಡಹಾಡಿ ಹಿಡದ ಎಳದಾಡಿ
ಹೊಡಿಯತೇನ ಜ್ಯೋಲಿ ಕೇಳ ಜ್ಯೋಲಿ ।
ಎಷ್ಟಂತ ಹೇಳತೀಯ ತಗಲಾ । ಮಟ್ಟೀಯ ತೊಗಲಾ
ಜೋತಾಡತಾವ ಮಲಿ ಕೇಳ ಮಲಿ ।
ತೀರಿ ಹೋತ ನಿನ್ನ ಹಂಗಾಮು
ನಾಯಿಗಂಜಿ ಹೋದಂಗ ಜಂಗಮಾ ।
ಇನ್ನಾರ ಹೋಗ ತಣ್ಣಗ ।
ನಿಮ್ಮ ಅಣ್ಣಗ ಹೇಳ ಈ ವಾರ್ತಿ
ಬಾಗೋಡಿಯವರು ಹಾಡುವಲ್ಲಿ ಕೀರ್ತಿ ।
ರಾಜ್ಯ ರಾಜ್ಯಕ ಎಲ್ಲ ಹೆಸರಾತಿ
ಬಸಲಿಂಗ ಬಸಮಂತ ಹಾಡೋದು ವಾಸಂತ
ಕಾಲದ ರೀತಿ ಕಾಲದ ರೀತಿ ॥

**ಏರ ॥** ಪಂಥಮಾಡಿ ಸುಳ್ಳೆ ಕೆಡಬ್ಯಾಡ ಇಂಚಲದ
ಸ್ವಂತ ಕವಿಗಳು ಹೇಳಿದರು ॥

೨೩

**ಏರ ॥** ಆತ ಇಲ್ಲದ ಹೆಣ್ಣ ತೂತ ಇಲ್ಲದ ಮುತ್ತ
ಹೋತಿನ ಕೊರಳಿನ ಮಲಿ ಹಂಗಾ ।

**ಚಾಲ ॥** ಮಲಿಯ ಕುಡಿಸೇನಂತ ಬಾಳ ಬಲದಿಂದ ಹೇಳತೀಯ
ಕುನಾಲಿ ತಿಳದಲ್ಲಿ ಹಾಲಿನ ಗುರ್ತಾ

ನಾನ ಸಲವೇನಂತ ಹೇಳತೀಯ ಬಡಿವಾರಾ
ಕೇಳ ಎಲ್ಲಿಂದ ಬಂದವ್ರ ಹಾಲಿನ ದ್ವಾರಾ।
ಮಾಡುವ ಗಂಡಸಿನಿಂದ ದೊರೆದಾವ ಹಾಲಿನ ಮಜಕೂರಾ।
ಸುಗುಣೀಗೆ ಹಾಲ ಇಲ್ಲದ ಮೂಲಾ।
ಉಗಡ ಒಡದ ಹೇಳತೇನ ಅಗಡ ತಿಗಡ ಹಚ್ಚಬ್ಯಾಡಾ
ಏನು ತಕರಾರಾ।
ತಳಾಬುಡಾ ಒಡದ ಕೇಳೆನೇ ಒಳಗಿನ ಆಕಾರ।
ಕಲ್ಲಾನ ಕಪ್ಪಿಗಿ ಎಲ್ಲಿ ಅನ್ನ ಇಟ್ಟಸಲುವ್ಯಾನ ಮಲ್ಲಿಕಾರ್ಜುನಾ।
ಇದನ ಯಾವ ಬಲ್ಲ ಭಗವಾನಾ।
ಅವರ ಹೊರತ ಗೊತ್ತಿಲ್ಲ ಯಾರಿಗಿ ಏನಾ।

**ಏರ** ॥ ಹೋತೀನ ಕೊರಳಾನ ಮಲಿ ಹಾಂಗ ನೀ ಇರು
ದಾತ ಗಂಡಸನು ಇಲದಿದ್ರ।

**೨೪**

**ಏರ** ॥ ಕುಲ್ಲಪದ ಹಾಡುವ ಚಿಲ್ಲರ ನಾವಲ್ಲ
ಮಲ್ಲಿಗೆ ಹೂವಿನಂತ ಜಮದಗ್ನಿ ॥ಪ॥

**ಚಾಲ** ॥ ಕೊಲ್ಲುವ ಜೀವ ಉಳಸತಾಳ ಉಳಸುವ ಜೀವ
ಕೊಲ್ಲತಾಳ ಬೇಕಾದಂಗ ಮಾಡತಾಳೋ ಹಂಚಿಕಿ।
ಮನಸಿಗ ಬಾರದಿದ್ದರ ಮದ್ದ ಹಾಕಿ ಬಿಡತಾಳ ಹಿಚಿಕಿ।
ಮಕ್ಕಳಂದರ ನೋಡೂದಿಲ್ಲ ದುಃಖ ಇಲ್ಲದ ಕೊಲ್ಲಸತಾಳೊ
ಚೆಕ್ಕಾಮಲಿಕಿ ಕೀಳ ಗಾಲಗಡಿಕಿ।
ಸೊಕ್ಕ ಬಂದ್ರ ತಾಯಿ ತಂದಿನ ನೋಡೂದಿಲ್ಲ ಆಕಿ
ರೊಜ್ಜು ರಾಡಿ ಹೇಸಿ ಹೆಣ್ಣಿನ ಗೋಜ ಬೇಡಂತ
ಉಪಮನ್ನೇರು ಸಜ್ಜಬಂದ
ಹೊಕ್ಕಾರ ಮನ್ಯಾಗ ಜನಿಸಿ।
ಇಂಚಲಪದಾ ಬೀಜದಂತಾವ ಕೇಳ ಪುರಮಾಸಿ॥

**ಏರ** ॥ ಮಲ್ಲಿಗಿ ಹೂವಿನಂತಾ ಜಮದಗ್ನಿ
ಎಲ್ಲಮ್ಮ ಕೊಲ್ಲಸ್ಯಾಳ ಗಂಡನ್ನ॥

**೨೫**

**ಏರ** ॥ ಕಾಲ ಸರಪಳಿ ರುಳಿಯೇ ವಡ್ಯಾಣ
ವಾಲಗಿ ಮೂರ ಕೊಳತುಂಬ॥



**ಚಾಲ** ॥ ಕುಟಿಲ ಕುಂತಳಿ ನಿನ್ನ ತುಟಿಯ ತೊಂಡಿ ಹಣ್ಣ
ಇಟ ಜ್ಞಾನ ದೊಳು ಸಣ್ಣ
ನಿನ್ನ ಬಣ್ಣ ವರ್ಣಿಸಲಾರೆ ಕಣ್ಣೆರಡು ಎರಳಿಯ ನೋಟಾ
ನೋಡಿ ಮನ್ಮಥನು ಬಾಣ ಬಿಟ್ಟ
ಕೊಂಕ ಮಾಡುತ ಹೊಂಟಿ ವಂಕಿಯೊಳು ಚಿಂತಾಪಟ್ಟಿ
ಟೊಂಕಕ ವಡ್ಯಾಣ ಇಟ್ಟಿ ಪಂಕಜಾಕ್ಷಿಯ ಭೆಟ್ಟಿ
ನಿನ್ನ ಕಂಡ ಉಂಡಂಗ ಆತ।
ಮಂಡಲದೊಳು ಚಲುವೆ ದುಂಡದೋಳಿನ ವಯ್ಯಾರಿ
ಮನಗಂಡಾದೇನ ಗಾಬರಿ।

**ಏರ** ॥ ವಾಲಗಿ ಮೂರ ಕೊಳತುಂಬ ಇಟಕೊಂಡ
ಲೋಲ್ಯಾಡುತ ಬಂದ್ಯ ದಾರಿಲಿ।

* * *

## ೩. ಹೆಣ್ಣು ಗಂಡಿನ ಹೋಳೀ ಪದ (೧)

ದುಂದುಂ ಎಂದು ಜಾಣರೆಲ್ಲಾ
ಚಂದದಿಂದ ಒಂದುಗೂಡಿ
ಗಂಧ ಕಸ್ತೂರಿ ಪೂಸಿ ಆ
ನಂದದಿಂದ ಪಾಡುತ್ತ ॥೧॥

ಗುರುವೆ ನಿಮ್ಮ ಚರಣಕಮಲ
ಕ್ಕೆರಗಿ ನಾನು ಬೇಡುವೇನು
ಹರುಷದಿಂದ ಕರುಣಿಸಯ್ಯ
ತರಳಗಿಷ್ಟು ಮತಿಯನು ॥೨॥

ಸುರತ ಸುಖದ ಸಾರವನ್ನು
ಅರಿಯದೀಗ ಪೇಳುವೇನು
ಸರಸಿಜಾಕ್ಷಿ ನಾರ‍್ಯಾರೊಳು
ಮೀರಿ ರೂಪ ತೋರುತ ॥೩॥

ನಾರಿ ಸ್ವರೂಪಕ್ಕೆ ಸರಿ
ಯಾರು ಇಲ್ಲ ಮರ್ತ್ಯದೊಳು
ತಾರೆಯೊಳಗ ಮೂಡಿದಂಥ
ಚಂದ್ರಾಮನಂಗಿರುವಳು ॥೪॥

ಬರದ ಬ್ರಹ್ಮರೂಪ ಅವಳ
ವರ್ಣ ಮಾಡಲಾಗದೆನಗ
ಮಾರನರತಿ ಆಗಿ
ತೋರುವಳು ಕಳಿಗಳನು ॥೫॥

ಕನ್ನೆ ಪ್ರಾಯದ ಹೆಣ್ಣು ದೊಡ್ಡ
ಕಣ್ಣು ನಿಂಬಿ ಹೋಳಿನಂಗ
ಬಣ್ಣ ಬಂಗಾರ ವರ್ಣದಂತೆ
ಮೈಯ ಕಿರಣ ಹೊಳೆಯುತ ॥೬॥



ಎರಳಿ ನೋಟದ ಹೆಣ್ಣ
ಸಿರದ ಕೂದಲ ಬೈತಲ ಸಣ್ಣ
ಬೆರಳಿನೊಳಗ ಹರಳಿನುಂಗರ
ತರಳಿ ತಿರುಗುತ ॥೭॥

ಜರದ ಶಾಲನುಟ್ಟುಕೊಂಡು
ಗುಲ್ಜರ ಕುಪ್ಪಸ ತೊಟ್ಟು ಕೊಂಡು
ನಾರ‍್ಯಾರೊಳಗ ಶಿರೋಮಣಿ
ನೀರಿಗ್ಹೊರಟು ಬರುವಳು ॥೮॥

ದಾರಿ ಹಿಡಿದು ಹೋಗುವಂಥ
ನಾರಿಗೊಬ್ಬ ಮುದುಕ ಕಂಡು
ಕರವ ಕಣ್ಣಿಗೆ ಹಚ್ಚಿ
'ಪೋರಿ ಬಾ ಬಾ' ಎಂದು ಕರೆಯುತ ॥೯॥

ಬೆದರಿದೆರಳಿಯಂತೆ ಕಣ್ಣ
ಚದರಿ ಅವನ ನೋಡಿ ನಿಂತು
'ಒದರಿದ್ಯಾಕೋ ಎನ್ನ' ಎಂದು
ಹೆದರಿಸಿ ಅವನನು ಕೇಳುತ ॥೧೦॥

ಸುದತಿ ನಿನ್ನ ನಡಿಗೆಯನ್ನು
ಮದಗಜದ ಪರಿಯ ಕಂಡು
ಮದನಬಾಣದಿಂದೆ ಹಾದಿ
ಕದಲದಂಗ ಆಯಿತು ॥೧೧॥

ಮಂದಿಮಕ್ಕಳ ಬಂದಾರೀಗ
ನಿಂದರ ಬ್ಯಾಡಾ ಮುಂದಕ್ಹೋಗು
ಬಂಧು ಬಳಗ ನೋಡಿದರ
ಕುಂದು ಎನಗ ಬಂದಿತ್ತು ॥೧೨॥

ಕುಂದು ನಿನಗ ಬರುವದ್ಯಾಕ
ಮಂದಗಮನಿ ಕೇಳೇ ಮಾತು
ಸಂದೇಹವಿಲ್ಲದೆ ನೀನು
ಹೊಂದಿಕೊಂಡು ಇರುಬಾರೆ ॥೧೩॥

ಯಾಕೋ ಮುತ್ತ್ಯಾ ಇಂಥಾ ಮಾತು
ಚಿಕ್ಕವಳೀಗಿ ಆಡೂದಲ್ಲಾ
ಸಾಕು ನಿನ್ನ ಕಾಕು ಬುದ್ಧಿ
ನೂಕಿಸಿ ನಿನಗ ಬಿಡುವೆನು ॥೧೪॥

ಧಕ್ಕೆ ಹೊಡೆದು ಕೆಡವಲಿಕ್ಕೆ
ಸೊಕ್ಕು ನಿನ್ನದೆಷ್ಟು ಐತೆ
ಕಕ್ಕಸ ಕುಚಗಳ ಪಿಡಿದು
ತೆಕ್ಕೆಗಪ್ಪಿಕೊಂಬುವೆನು ॥೧೫॥

ತೆಕ್ಕೆಗಪ್ಪಿಕೊಳ್ಳಲಿಕ್ಕೆ
ರೊಕ್ಕ ನಿನ್ನಲ್ಲೆಷ್ಟು ಐತೆ
ತಕ್ಕ ಪುರುಷನಲ್ಲೊ ಮುದಕ
ದಕ್ಕ ಹೋಗೋ ಮನಿ ಕಡೆ ॥೧೬॥

ಮುಪ್ಪಿನವನೆಂದು ನೀನು
ತಪ್ಪು ಹಚ್ಚಿ ಆಡ ತಿದ್ದಿ
ಇಪ್ಪತ್ತೈದು ವರುಷದ ಮ್ಯಾಲ
ಹತ್ತು ತಿಂಗಳಾಯಿತ್ತು ॥೧೭॥

ಚಿಕ್ಕ ಪೋರನೆಂದು ನೀನು
ಲೆಕ್ಕ ಮಾಡಿ ಹೇಳುತಿದ್ದಿ
ಮುಕ್ಕ ಮೂಳಾ ಇಷ್ಟೊಂದ್ಯಾಕ
ಬೊಕ್ಕಬಾಯಿ ಆಗ್ಯಾದ ॥೧೮॥

ಕಲ್ಲು ಸಕ್ಕರಿ ತಿಂದ ತಿಂದು
ಹಲ್ಲು ತುರ್ತ ಬಿದ್ದವಲ್ಲಾ
ಬಲ್ಲವರಿಗೆ ಕೇಳೇ ನೀನು
ಬಾಲನಂತ ಹೇಳುವರು ॥೧೯॥

ಬಲ್ಲವರಿಗೆ ಕೇಳುವದ್ಯಾಕ
ಎಲ್ಲಾ ನನಗ ತಿಳೀತಾದ
ಎಲ್ಲಾ ಇಷ್ಟೊಂದು ತಲಿತುಂಬ
ಬೆಳ್ಳಗ್ಯಾಕ ಆಗ್ಯಾದೊ ॥೨೦॥



ನೆತ್ತಿ ಬೆಳ್ಳಗಾದ ಸುದ್ದಿ
ಒತ್ತಿ ನಾನು ಹೇಳುವೇನು
ಚಿತ್ತ ವಿಟ್ಟು ಕೇಳೇ ಚದುರಿ
ಮುತ್ತ್ಯಾಗ ನಾನು ಹೋತೇನು ॥೨೧॥

ಮುತ್ತ್ಯಾಗ ಹೋತರ ಒಳ್ಳೇದಾತು
ಸುತ್ತ ಚರ್ಮ ಜೋಲುತಾದ
ನೆತ್ತರಿಲ್ಲದ ದೇಹದೊಳಗ
ಸೋತಿಯಾಕೋ ಇಷ್ಟೊಂದು ॥೨೨॥

ಕಾಂತೆ ನಿನ್ನ ಚಿಂತಿ ಹತ್ತಿ
ಭ್ರಾಂತನಾಗಿ ಸೋತೆ ನಾನು
ಕಾಂತೆ ಶಿರೋಮಣಿ ಎನ್ನ
ಭ್ರಾಂತಿ ನೀನು ತೀರಿಸು ॥೨೩॥

ಮುಪ್ಪಿನ ಕಾಲಕ ಇಂಥ ಮಾತು
ಅಪ್ಪ ನಿನಗ ಸಲ್ಲುವದಲ್ಲ
ಸಪ್ಪಳಿಲ್ಲದೆ ನಿನ್ನ ಮನಿಗೆ
ಗಪ್ಪಾಗಿ ಹೋಗಿನ್ನು ॥೨೪॥

ಗಪ್ಪಾಗಿ ಹೋಗಲಿಕ್ಕೆ
ತಪ್ಪುಗಳೇನು ನಾ ಮಾಡಿದ್ದು
ಒಪ್ಪದಿಂದ ಕರಿಯಬ್ಯಾಡಾ
ನಿನ್ನಪ್ಪ ಗಳಿಯನಾಗುವೆ ॥೨೫॥

ಬಲ್ಲಾ ಬಟ್ಟೆ ಆಡುವದಲ್ಲ
ಗಲ್ಲ ಸೊಟ್ಟು ಬಿದ್ದಾವಲ್ಲ
ಜೊಲ್ಲ ಸೋರತದ ಕೋಲ ಊರಿ
ಮೆಲ್ಲಕ ಯಾಕ ನಡೀತೀ ॥೨೬॥

ಹೇಡಿ ಸರಕಾರ ಕಾಯದೆಕಾಗಿ
ಬಡಿಗಿ ಎನ್ನ ಕೈದಾಗೈತಿ
ತಡುವಿದಾರೆ ಬಡಿಗಿಲಿಂದ
ಹೊಡೆದು ಕೆಡವಿ ಬಿಡುವೆನು ॥೨೭॥

ಬಡಿವಾರ ಮಾತನಾಡಬ್ಯಾಡ
ನಡುವ್ರ ನಿಂದು ಬಾಗ್ಯಾದೀಗ
ಸುಡಗಾಡ ಮನಿಯ ಸನಿಯಕ್ಕಾಗಿ
ಹುಡುಕುತ ನಿನಗ ಬರುವದು ॥೨೮॥

ಅಣಕದ ಮಾತನಾಡಬ್ಯಾಡ
ಕಣ್ಣ ಕಾಲ ಹಿಡಿದು ವಾಯಸೇರಿ
ಸೊಣಕು ಸ್ವಲ್ಪ ಬಾಗ್ಯಾದೀಗ
ಕಣಕ ತುಪ್ಪ ಉಣತೀನಿ ॥೨೯॥

ಪತ್ತೆ ಮಾಡಲಿಕ್ಕೆ ಬ್ಯಾನಿ
ಹತ್ತೇದೇನೋ ಮುತ್ಯಾ ನಿನಗ
ಹತ್ತಿ ಕಾಳಿನಂಗ ಕಣ್ಣು
ಒತ್ತಿ ಬೆಳ್ಳಗಾಗ್ಯಾವ ॥೩೦॥

ಜಾಣೆ ನಿನ್ನ ರೂಪ ನೋಡಿ
ಕಣ್ಣು ತಾರಗಟ್ಯಾವೀಗ
ಮಣಿದು ಬಾರೇ ಮಹಲಿಗಿನ್ನು
ಉಣಿಸಿದಂತೆ ಆದೀತು ॥೩೧॥

ಹಸ್ತ ನಾಯಿಯಂತೆ ಬಾಯಿ
ಕಿಸ್ತು ನಿಂತು ಕೇಳುವದ್ಯಾಕ
ಸಸ್ತ ಮಾತನಾಡಿ ಹೋಗೋ
ರಸ್ತೆ ಹಿಡಿದು ಮನಿ ಕಡಿ ॥೩೨॥

ನಾಯಿ ಅನ್ನಬೇಡ ನಿನ್ನ
ತಾಯಿ ಎನ್ನ ಸೋದರತ್ತಿ
ಬಾಯಿ ತಪ್ಪಿ ನುಡಿದರೆ
ಮಾವನೆಂದು ಕರೆಯಬಹುದು ॥೩೩॥

ಮಾವನೆಂದು ಕರೆಯಲಿಕ್ಕೆ
ತಾಯಿ ಸೋದರೇನೋ ನೀನು
ಭಾವ ಕೇಳಿದರೆ ನಿನ್ನ
ಜೀವ ಕೊಂಡು ಬಿಡುವನು ॥೩೪॥



ಸೋದರಾಗಿ ಇದ್ದ ನಾನು
ಭೇದಮಾಡಿ ಅಡದಿರೆ
ಶೋಧ ಮಾಡಿ ನೋಡು ಗಂಡ
ಮೊದಲಿಗಿ ಇರುವನು ॥೩೫॥

ಕಂಡಾಬಟ್ಟೆ ಆಡಬ್ಯಾಡ
ಪುಡ ಹಾನ ನನ್ನ ಗಂಡ
ಕಂಡರ ನಿನ್ನ ತುಂಡಿಸಿ ಹಾಕ್ಯಾನು
ಮೊಂಡ ಮನಿಗಿ ಹೋಗಿನ್ನು ॥೩೬॥

ಪುಂಡನೆಂದು ಆಡಬ್ಯಾಡ
ಷಂಡ ಹಾನ ನಿನ್ನ ಗಂಡ
ರಂಡಿ ಹೆಣ್ಣಿನಂತೆ ಕುಂಡಿ ಬೆಳಸಿ
ಕೊಂಡು ತಿರುಗತಾನ ॥೩೭॥

ಮರುಳ ಇಷ್ಟೊಂದು ನೀನು
ಒರಲ ತಿದ್ದಿ ಬಾಯಿ ತುಂಬ
ಮರಳಿ ಕೇಳಿದರೆ ನಿನ್ನ
ಕೊರಳ ಕೊಯ್ಸಿ ಬಿಡುವೆನು ॥೩೮॥

ಜೀಂವ ಹೊಡಿಸಲಿಕ್ಕೆ ಸಣ್ಣ
ಹಾಂವ ಆಗಿ ಹುಟ್ಟಿಲ್ಲ ನಾನು
ಸಾವು ನೂರು ವರ್ಷ ಪಡದೇವ
ನಾವು ನಿನ್ನ ಸಲುವಾಗಿ ॥೩೯॥

ಮುದಕಾ ಇಷ್ಟೊಂದ ಯಾಕೋ ನಿನಗ
ಬದುಕು ಆಸೆ ಸತ್ತ ಹೋಗೋ
ಒದಗಿ ಬಂದಿಲ್ಲೇನು ಮರಣ
ಹುದುಗಿ ಎಲ್ಲಿ ಕುಳಿತೈತೆ ॥೪೦॥

ಸತ್ತು ಹೋದರ ಸುಮ್ಮನಾಗಿ
ಹತ್ತ ನಾನು ಬಿಡುವದಿಲ್ಲ
ಎತ್ತ ಹೋದರು ಸುತ್ತಿ ನಿನ್ನ
ಗೊತ್ತಿಗಿ ತಂದು ಬಿಡುವೆನು ॥೪೧॥

ಮುಪ್ಪು ಆದಮ್ಯಾಲ ಪ್ರಾಯ
ಒಪ್ಪುವದೇನೋ ಮುತ್ಯಾ ನಿನಗ
ಒಪ್ಪತ್ತೊಟು ಮಾಡಿ ನಿನ್ನ
ಛಪ್ಪರದೊಳಗ ಇರು ಹೋಗೋ ॥೪೨॥

ಉಪ್ಪ ಉಂಡ ಕಾಯ ನಂದು
ಛಪ್ಪರದೊಳಗ ಸೇರೂದಲ್ಲಾ
ಮುಪ್ಪಿನ ಕಾಲಕ ಒಮ್ಮೆ ಬಾರೆ
ಉಪಕಾರ ಎಷ್ಟೊಂದಾದೀತು ॥೪೩॥

ಪುಣ್ಯಾ ಎನಗೆ ಬೇಕಾಗಿಲ್ಲ
ಟೊಣ್ಯಾ ಮಾತನಾಡುಬ್ಯಾಡ
ಅಣ್ಣ ಕಂಡರ ನಿನ್ನ ಕಣ್ಣ ಕಿತ್ತಿ
ಮಣ್ಣ ಮಾಡ್ಯಾನೂ ॥೪೪॥

ಬಡಿವಾರ ಯಾಕ ಇಷ್ಟ ನಿನಗ
ಅಡಿಯಾಳಾಗಿ ಬಾರೆ ನೀನು
ಒಡಿವಿ ವಸ್ತ ಮಾಡಿಸಿಡುವೆನು
ಜಡಿದು ನಿನ್ನ ಮೈತುಂಬ ॥೪೫॥

ವಸ್ತ ಮಡವಿ ಅತ್ತಿ ಮಾವ
ಮಸ್ತ ಮಡಿಸ್ಯಾರ ನನಗ
ಜಾಸ್ತಿ ಮಾತನಾಡಬ್ಯಾಡ
ಮಸ್ತಿ ಇಳಿಸಿ ಬಿಡುವೆನು ॥೪೬॥

ತರ್ಕ ಮಾಡಬೇಡ ಪೋರಿ
ಗರ್ಕ ಮಾಡಿ ಇಡುವೆ ನಿನ್ನ
ಅರಿಕಿ ಇಲ್ಲ ಏನ ನಿನಗ
ವರಕ ಸಮನೆಂಬೂದು ॥೪೭॥

ವರಕ ಸಮನೆಂಬೂದಕ್ಕೆ
ಸರ್ಕಾರ ಆದಿ ಏನೋ ನನಗ
ದರಕಾರಿಲ್ಲದೆ ಕೇಳುತ್ತೀ
ಚರಕಿ ತೆಗೆಸಿ ಬಿಡುವೆನು ॥೪೮॥



ಮುರ್ಖದ ಮಾತ ಆಡಬ್ಯಾಡ
ಮುಖಾ ಇಷ್ಟೊಂದ ಒಳ್ಳೇದಲ್ಲ
ಸರಕ್ಕನೆದ್ದು ಬಾರೆ ಪೋರಿ
ಹರಕೊತ್ಯಾಕ ಇಷ್ಟೊಂದು ॥೪೯॥

ಮರ್ಕಟನಂತಾ ಮಾರೀ ಮುದಕ
ನರಕ್ಯಾನಂಗ ಇದ್ದೀ ನೀನು
ಹೊರಕಡಿಗಿ ಕುಂತ ಎದ್ದೆನೆಂದರೆ
ಬರ್ಕತ ಇಲ್ಲ ಮೈಮ್ಯಾಗೆ ॥೫೦॥

ಕ್ವಾಡಗನಂಗ ಆಡಬ್ಯಾಡ
ಖೋಡಿ ಖುಲ್ಲಾ ಗುಣದವಳೆ
ಗಾಡಿನತ್ತಾ ಮಾಡಿಸಿ ಇಡುವೆ
ನಡಿಯ ರಂಗ ಮಾಲೀಗಿ ॥೫೧॥

ಅತ್ತ ಇತ್ತ ಬರುವದಕ್ಕ
ಪಾತರದವರ ಪೋರಿಯಲ್ಲ
ರೀತಿ ತಪ್ಪಿ ಆಡದಿರೋ
ಪ್ರೀತಿ ಯಾಕೊ ಇಷ್ಟೊಂದು ॥೫೨॥

ಪ್ರೀತಿಯಿಂದ ನಿನ್ನಗೂಡ
ನೀತಿಯಿಂದ ಆಡುವೇನು
ಸೋತು ಬಾರೆ ಸದನದೊಳು
ಪ್ರೀತಿ ಕಾಂತೆ ಕಾಮನಾಟಕೆ ॥೫೩॥

ಕಂಗಾಲಿಷ್ಟೊಂದು ಯಾಕೊ ನೀನು
ಹಂಗು ಹರಿದು ಕೇಳುತಿದ್ದೀ
ಹಿಂಗಿ ಹೋಗೇದ ನಿನ್ನ ಪ್ರಾಯ
ಸೋಂಗು ಯಾಕೋ ಇಷ್ಟೊಂದು ॥೫೪॥

ಕಂಗಾಲಿಲ್ಲ ಮನಿಯಾಗ
ಮಸ್ತ ಬೆಳ್ಳಿ ಬಂಗಾರ ತುಂಬ ವಸ್ತು
ಸಂಗ ಮಾಡಿ ಪ್ರೀತಿಯಿಂದ
ಬಂಗಾರದೊಂಕಿ ಕೊಡುವೇನೊ ॥೫೫॥

ಕಾಂತೆ ತನ್ನ ಮನಸಿನಲ್ಲಿ
ಚಿಂತಿ ತಾಳಿ ಕುಳಿತುಕೊಂಡು
ಎಂತು ಹೇಳಲಿ ಇವನಿಗಿ ನಾನು
ಎಂಥ ಮೂರ್ಖ ಇರುವನು ॥೫೬॥

ಚಿಂತಿ ಮಾಡಬ್ಯಾಡ ಗುಣ–
ವಂತಿ ಕೇಳ ಶಾಂತಳಾಗಿ
ಅಂತಃಕರಣ ಇಟ್ಟು ಎನ್ನ
ಪಂಥ ಗೆಲಿಸಿ ಪೋಗಿನ್ನು ॥೫೭॥

ಕಾಂತ ಕೇಳೋ ಕಾಮನಾಟದ
ಭ್ರಾಂತಿ ಇಂದೇ ತೋರಿಸುವೆ
ಚಿಂತಿ ಬಿಟ್ಟು ಬಾರೋ ಕಾಂತಾ
ಶಾಂತದಿಂದ ಮಾಲೀಗೆ ॥೫೮॥

ಸುದತಿ ಸುಂದರಾಂಗ ಮಾಹಲಿ
ನೊಳಗ ಇಬ್ಬರೇಕವಾಗಿ
ಮಧುರಮಾವಿನ ಹಣ್ಣಿನಂತೆ
ಅದರಸಾರ ಸವಿಯುತ್ತ ॥೫೯॥

ಹಾಲು ಸಕ್ಕರಿ ಕೊಡಿದಾಂಗ
ಮಾಲಿನೊಳಗ ಪ್ರೀತಿಯಿಂದ
ಲೀಲ ಮಾಡಿ ಬಾಲಿ ಕುಂತು
ನಲ್ಲಗ ಹೇಳುತಿದ್ದಳು ॥೬೦॥

ಅರಗು ಬಂಗಾರ ಕೂಡಿದಂಗ
ಇರಲಿ ನಿಮ್ಮ ಮಮತೆಯಿನ್ನು
ಕರವು ಮುಗಿದು ಸೀರಿ ಸೆರಗ
ಜಾರಿಸಿ ಪಾದಕೆರಗುತ ॥೬೧॥

ದೇಶಕಧಿಕವಾದ ಸಿರಸಗಿ
ಖಾಸಪುರದ ಬಸವಣ್ಣ
ಲೇಸಾಗಿ ಪಾಡಿರಣ್ಣ
ದಾಸಹೇಳಿದ ನುಡಿಗಳು ॥೬೨॥

* * *



## ೪. ಹೆಣ್ಣು ಗಂಡಿನ ಹೋಳೀ ಪದ (೨)

೧

**ಚಾಲ** ॥ ಊಟ ಉಡಿಗೆಯ ಮಾಡಿ ತೋಟಕ್ಹೋಗುವ ನಾರಿ
ನೀಟ ನಿನ ನೋಡಿ ನಗಿ ಬಂತ
ಶೃಂಗಾರಿ ಬೆರಳಾಗ ಕಾಲುಂಗರ ನೀಗಿ ಮೆರಿದಾವ।
ಬಂಗಾರದಂತಾ ನಿನ್ನೀ ಮುಖಾ ಕಂಡಾಕ್ಷಣಕ
ಮುಂಗಾರಿ ಸಿಡಿಲಿನ ಪರಿ ಬೆಳಕ
ಜಾಣಿ ನಿನ್ನ ನೋಡಿ ನನ್ನ ಪ್ರಾಣ ಹಾರಿ
ಬಾಣ ನಟ್ಟಾವು ಎದಿಯೊಳು ಪಕ್ಕಾ।
ನೀ ಏನ ಚೆಲುವಿ ಮೂಗ ಸಂಪಿಗೆ ಗಣಿಯಂತೆ ಜುಳಕಾ
ಕಾಣೆ ನೀನು ನಿನ ಕಂಡೆನ್ನ ಸುದ್ದಿ
ಹಣ್ಣ ನೀರಿನ ಆಸೆಯಿಲ್ಲ ಮನ್ನೆ ಉಂಡಿದೇನ
ಇನ್ನೂ ತನಕಾ ಕುರಿಲ್ಲ ನಾರಿ
ಉಪವಾಸವಿದ್ದೇನ ನಿನ ದುಸಕಾ ॥

**ಏರ** ॥ ನೀಟ ನಿನ ನೋಡಿ ನಗಿ ಬಂತ
ಮನ್ಮಥನಾಟ ನಿನ್ನಲ್ಲಿ ಪರಿಪೂರ್ಣ ॥

೨

**ಏರ** ॥ ಪೂರ್ಣ ಕೇಳ ನೀನು ಹರಣ ಕಳಕೊಂಡಿಯೋ
ಕಾರಣವೇನೋ ನನ್ನ ಕೇಳುವದು

**ಚಾಲ** ॥ ಬಗಸಿದ ರೂಮಾಲ ಒಂದ ಪುಗಸೆಟ್ಟಿದ ಸುತಗೊಂಡ
ಅಗಸ್ಯಾಗ ನಿಂತಾರ ಹರಕಾತಿ
ನೀ ಮಾಡಬ್ಯಾಡ ಹಂಗೇನಪ್ಪ ಬಿಟ್ಟು ಬಿಡು ಚಿಂತಿ
ಎಲ್ಲಾ ನಾರಿಯರಂಗ ನಾ ಅಲ್ಲೆ ಇಲ್ಲೆ ತಿರಗವಳಲ್ಲಾ
ಬಲ್ಲವ ಆದರ ತಿಳಕೋತಿ ತರವಲ್ಲೊ ತಗಿ
ಎಲ್ಲ್ಯಾವ ಹೇಳೊ ತಿಳಿಗೇಡಿ ಕೋತಿ
ಪಾಪ ಅಂತ ಬಿಡತೇನೊ ನಿನ್ನ ಒಪ್ಪತ್ತಿನೊಳಗ
ಕಡದ ಗುಪ್ಪತ್ತೆ ಮಾಡ್ಯಾರ ಕತ್ತೊತ್ತಿ॥
ಪರನಾರಿಯರ ಮ್ಯಾಲ ನದರ ಇಡೋದಲ್ಲೋ ನಿನ್ನ ರೀತಿ

ಏರ ॥ ಕಾರಣವೇನೋ ನನ್ನ ಕೇಳುವದು ಪರ
ನಾರಿಯರನ್ನ ಕೇಳಿ ಜೀರ್ಣವಾಗಿದಾರೋ ಬಲ ಮಂದಿ ॥

೩

ಏರ ॥ ಬಲ ಮಂದಿ ಮಾತವನು ಲಲನೆ ಹೇಳಲಿ ಬ್ಯಾಡ
ಹಲವು ಮಾತುಗಳು ನಿನಗ್ಯಾಕ ॥

ಚಾಲ ॥ ಮುದ್ದು ಮುಖದ ಬಾಲಿ ನೀ
ಸಧ್ಯ ಬಾ ಮುದ್ದು ಕೊಡತೇನ
ತಿದ್ದಿ ಮಾಡಿದ ಗೊಂಬಿಹಂತಾಕಿ
ಮಾತಾಡ ಸ್ವಲ್ಪ ಪದ್ಮಗಂಧಿಯಂತಾ ಚೆಲವಿಕಿ
ನಿಗರಿದ ಕುಚಗಳು ಎರಡು ಬಗರಿಯಂಗ ತೋರತಾವ
ಉಗುರ ಒತ್ತಿ ಬಿಡುವೆನು ಜೋಕೆ
ಗಮಗಮ ಗರ್ಧಿ ಅಗರ ಗಂಧ ಕರ್ಪುರ
ಸಖೀ ಇಂದ್ರಲೋಕದಿಂದ ಇಳದೆ
ಸುಂದ್ರಿ ನಿನ್ನ ಸುರತ ನೋಡಿ ನಿಂದ್ರಲಾರೆ ಬಾ ಬಾರೆ ಸಖೀ
ನೀ ಒಲ್ಲಿನೆಂದ್ರ ತೊಂದರೆಯೈತಿ ಬ್ಯಾಸರಿಕಿ ॥

ಏರ ॥ ಹಲವು ಮಾತುಗಳು ನಿನಗ್ಯಾಕ
ಬಲಿ ಹೆಣ್ಣ ಬಿಡವನ್ನ ಒಡಗೂಡ ॥

೪

ಏರ ॥ ಒಡಗೂಡನ್ನಲಿ ಬ್ಯಾಡ ಕಡುಮೂರ್ಖ ಕಡಿಸುವೆನು
ಜಡಿಸುವೆನು ಬೇಡಿ ತಿಳಿಯಪ್ಪ।

ಚಾಲ ॥ ಎಂಥಾ ಮಾತನಾಡಿದಿ ನಿನಗ ಪತ್ತುಳ್ಳ ಗರತಿ ಮ್ಯಾಲ
ಇಂಥಾ ಕೃತ್ಯ ಮಾಡುವರೇನೋ ಮೂಳಾ।
ವರಗೆಡಿಸ್ನೆನ್ನ ಜತ್ತಿನಂಥವ ಹಾಕಿಸು ವೇಳಾ
ಬಡವನಿಗೇಕೋ ಹೆಡಿಗೆ ಜಾತ್ರಿ
ಅಡವಿ ಒಳಗ ಅರವಿ ಕಾಣದ
ದುಡುಕೊಂಡ ತಿನುವೆ ಪಡಿಕಾಳಾ
ತರದಿದ್ದರ ನಿನ್ನ ಹೆಂಡತಿ ಸಹಿತ ಅಳತಾವೋ ಮಕ್ಕಳಾ
ಹದ್ದಮೀರಿ ನಿಂತೀದಿ ತಮ್ಮಾ ಕದನ ಬ್ಯಾಡೋ
ಚಲೋದಲ್ಲಾ ಎದಿಗಾರ ನಿನಗೊಮ್ಮೆ ಇಲ್ಲೊ ಕೂಳಾ
ಉಪವಾಸದಿ ಮನಸ್ಯಾ ನಿನಗ್ಯಾಕೊ ಇಂಥ ಗೋಳಾ ॥



೫

ಏರ ॥ ಜಡಿಸುವೆನು ಬೇಡಿ ತಿಳಿಯಪ್ಪ
ನನಕಂಡ ಬಡಿವಾರ ಮಾಡಿ ಮಾತಾಡತಿ ॥

ಚಾಲ ॥ ಮಾತನಾಡಲಾಕೇನ ಸೋತು ಹೋಗವನಲ್ಲ।
ಕಾಂತೆ ನಿನ ಕಂಡ ಖಬರ್ಧಾರಿ ಅಪ್ಪುವೆನು ನಾರಿ ನಿನ್ನ
ಅಪ್ಪುವೆನು ತುಟಿಗಳ ಕಡದ
ಸೀಬತೇನೋ ಅಮೃತದ ಹನಿ
ಪ್ರಿಯನ ಮ್ಯಾಲೆ ಕೃಪಾ ಯಾಕ ಬಿಡ ಬಿಡ ಜಾಣೀ
ಸಕ್ಕರಿಯಂಥಾ ನಾರಿ ನಿನ್ನ
ಅಕ್ಕರಲಿಂದ ಭೋಗಿಸುವೆನು
ಸಿಕ್ಕರ ನಾಕ ಜೋಡ
ಮುತ್ತಿನ ಗೊನಿ ಬಂದಂತೆ ಜಾಣಿ
ಮಕರ ಹರೆ ಅದರ ದೆಸೆಯಿದ ಬನ್ನೆ
ಎರಕದ ಗೊಂಬಿ ಹಂತಾಕೆ
ಸಿಕ್ಕರ ಹರಕಿ ಹೊರುವೆ ನೀ ಬಂಕನಾಥಗ
ಅರಕೆ ಬರತಿಯಾದ ಕರ್ಪೂರ ಕಣ್ಣೆ॥

ಏರ ॥ ಗುಗ್ಗಳ ದೀಪ ಜೋಡಕಾಯಿ ಒಡಿವೆನ ಹೆಣ್ಣೆ
ಕಾಂತಿ ನಿನ ಕಂಡ ಖಬರ್ಧಾರಿ ನಿಂತೇನ
ಜಾತ ಪದ್ಮಿನಿ ನಡೆ ಮನೆಗೆ ॥

೬

ಚಾಲ ॥ ಮನಿಯ ಮುರಕೊಂಡಿಯೋ
ದನದಂಥಾ ಜಮಗೇಡಿ ಗನ ಬುದ್ಧಿ ನಿನಗ ಅನಬ್ಯಾಡಪ್ಪ
ತಂಗಿ ಸರಿ ತಿಳಕೊಂಡು ನೋಡೋ।
ನನ್ನ ಕಂಡು ಢೋಂಗ ಮಾಡುದ ಬಿಟ್ಟು ಬಿಡೋ।
ಉತ್ತಮ ನಾರಿಯರ ಮ್ಯಾಲೆ ನಜರ ಇಟ್ಟೆ
ಬಲಮಂದಿ ಸತ್ತ ಹೋದಾರ ಒದಸಗೊಂಡೋ
ನಾ ಹಂತಕ್ಕೆಲ್ಲಾ ಮುತ್ತಿನಂಥವ ನನ ಗಂಡ ಜೋಡೋ
ಹೆಚ್ಚೇನ ನನ್ನ ಮನಿಯ ಪುರುಷಾ ವಜ್ರದಾ ತೆನಿ ಅಂತಾವಾ
ಸೊಚ್ಚ ಅಬರುದಾರ ಇರುವನ
ಪಾಡ ನಿನ್ನಂಥವರದ ಆಗಾಕಿಲ್ಲಾ
ಮೆಚ್ಚಿ ಬೆಲಿ ನೋಡೋ ॥

ಏರ ॥ ಗನ ಬುದ್ಧಿ ನಿನಗ ಇರಬೇಕೋ ।
ನೀ ನನ್ನ ಕೆಣಕಿ ಕೇಳುವರೆ ಕಡು ಮೂರ್ಖ ॥

೭

**ಚಾಲ** ॥ ಮೂರ್ಖನೆನ್ನಲಿ ಬ್ಯಾಡ ತರ್ಕ ಮಾಡಲಿ ಬ್ಯಾಡ
ಮುರಕ ಮಾಡಿ ಮಾಡಿ ನಡಿಬ್ಯಾಡ ।
ಜೋಡಿನ ನಾರಿ ಕೂಡಿ ನೋಡ ಕ್ರೀಡಾರಂಗ
ಕೂಡತೀನ ನೋಡತೇನ
ಮಾರಿಗೆ ಮಾರಿ ಕೂಡಸ್ತೇನ
ತೊಡಿಗೆ ತೊಡಿ ಹಚ್ಚಿ ಉಮೇದವಾರಿ ॥

ಸಹಜ ಬಂದ ಮೋಜ ಮಾಡ ।
ವಾಜಮಿ ರೀತಿಂದ ಹೇಳತೇನ
ಬೀಜಮಾತ ಹೋಗಬ್ಯಾಡ ಮೀರಿ
ಯಾತರದೇನು ಭೋಜಬ್ಯಾಡ
ಕಳದ ಚೆಲ್ಲ ಸೀರಿ ಬಡವನೆನ್ನಲಿ ಬ್ಯಾಡ

ನಿನ್ನ ನಡಮಟ ಬಂಗಾರ ನೀಡುವೆನ
ಕೊಡುವದರೊಳಗ ಯಾವ ನನ್ನ ಸರಿ
ಬಿಡಬ್ಯಾಡ ನನ್ನ ಕಡಗಿನ ಕಾಲ
ಆಗತೇನ ನಿನ್ನ ಸರಿ ॥

ಏರ ॥ ಮುರಕ ಮಾಡಿ ಮಾಡಿ ನಡೀ ಬ್ಯಾಡ ।
ಸವತೇರು ಸರಕಾರ ಬಂದ್ರು ಬಿಡೋದಿಲ್ಲ ॥

೮

**ಚಾಲ** ॥ ಇಲ್ಲ ಅನ್ನುವ ಮಾತು ಕುಲ್ಲ ಆಡಲಿ ಬ್ಯಾಡೋ
ಹಲ್ಲ ಮುರಿಸುವೆನ ಹದಿನಾರ,
ಅರಿವಿಲ್ಲೇಲೋ ತೆರವಾಯಿ ಪರನಾರಿಯರೆಂಬುದು ನಿನಗ
ಪರಿವಿಲ್ಲದಂಥಾ ಪಡಿಶೆಂಟಾ
ಒಳೆ ಧೀರ ಮಾಡಿ ಬಾ ಅಂತ ಕರೆಯೋದ ತಿಳದೈತಿ ಇಷ್ಟ
ಹೆಣ್ಣ ನಾಗರಹಾವ ನಿನ್ನ
ಮಣ್ಣಗೂಡಿಸಿ ಬಿಟ್ಟೇನ ತಿಳಿಯೋ
ಬಣ್ಣಗೆಟ್ಟ ಜಗಳ ಬ್ಯಾಡೋ ಕೆಟ್ಟ ॥
ಪೆಟ್ಟ ತಿಂದಿಯೋ ತಮ್ಮಾ ಕೆನ್ನೆಯ ಮ್ಯಾಗ ಯಾಕೋ



ಹುಡುಗಾಟ ಇಲ್ಲದ್ದ ಮಾತಾಡಿದರ
ಸಲ್ಲದೇನೊ ತಿಳದ ನೋಡೋ ಕೊಲ್ಲಿಸಿ ಹಾಕಿಸುವೆ
ತಿಳಿ ಸ್ವಷ್ಟ ಕಳದಾನ ಜೀವ ಬಲ್ಲಿದವ ನನ ಗಂಡಾ ಭಾಳ ದಿಟ್ಟ ॥

ಏರ ॥ ಹಲ್ಲ ಮುರಿಸುವೆನ ಹದಿನಾರ
ಪಾರ್ವತಿ ವಲ್ಲಭಗಂಜಿ ನಡೆಸಣ್ಣ ॥

೯

**ಚಾಲ** ॥ ಸಣ್ಣ ಪ್ರಾಯದ ಬಾಲಿ ಕಣ್ಣ ಎರಳಿಯ ನೋಟ
ಬಣ್ಣದ ಸೀರಿ ಬಲಗಡಿಕಿ
ಹಲಬಿ ಸಾವತೇನ ಬಾರ ಗುಲಾಬಿ ಹೂವಿನಂಥಾ ನಾರಿ
ಕುಲ್ಲಾ ಮಾಡಿ ಹೇಳುವದಿಲ್ಲ ನಾನಾ
ಮನಸ್ಸಿಗೆ ಬಂದ ವಲ್ಲಭಿ ನಿನ್ನ ಜ್ಞಾನಾ
ನಿಂಬೆಯಂತಾ ಬಟ್ಟ ಕುಚ ಗಟ್ಟಿಯಾಗಿ
ಹಿಡದ ಹಿಚುಕುವ ಮುಟ್ಟೆ ಸಂತೋಷ ಪಡುವೆ ನಾ
ಮನ್ಮಥ ಕೆಟ್ಟ ಒಟ್ಟೆಗೆ ತಿಳಿದು ಕೊಳ್ಳಾ ನೀನಾ ॥

ಏರ ॥ ಬಣ್ಣದ ಸೀರಿ ಬಲಗಡಿಕಿ
ನಿನ ಕಂಡ ಉಣ್ಣುವ ಹಸಿವು ನನಗಿಲ್ಲ ॥

೧೦

**ಚಾಲ** ॥ ಹಸಿದರೇನಾಗುವದೋ ವಿಷ ಕುಡಿದರೇನೋ

ಏರ ॥ ಬಿಸಲೊಳಗ ನಿದ್ರಿ ಮಾಡುವರೆ ನೀ ನನ್ನ
ಕಿಸವಾಯಿ ಬಂದ ಕೇಳುವರೇನ ॥

೧೧

**ಚಾಲ** ॥ ಮಂದಮತಿ ನೀ ನನ್ನ ಬಂದ ಕೇಳುವವರೇನೋ
ಹೆಂತಿ ಅಳತಾಳೋ ನಿನ್ನ ಹೆಂಕ ।
ಜೀತಾ ಇದ್ದ ಮದುವಿ ಆಗಿ ವಾತ ತಂದ ಕಾಳಿನ್ಯಾಗ
ಮಾತನಾಡಿ ದುಡದ ಮುಟ್ಟಸಲಿಲ್ಲಾ
ನಡ ಮುಚ್ಚಿ ಜೀತ ಮಾಡಿ ಬಿಟ್ಟ ಬಂದೆ ಪಾಪ
ನಿಚ್ಚ ನೀ ಒಪ್ಪತ್ತುಂಡರ ಒಪ್ಪತ್ತಾರ ಉಪವಾಸ ಇರತಿಯೋ
ನಿನ್ನ ವಿಪತ್ತು ಬಂಕನಾಥ ಬಲ್ಲಾ
ಇಂಥಾದ್ದ ಹೊಟ್ಟ್ಯಾಗ ಗುಪ್ತ ಇಟಕೊಂಡ
ಮಾಡತೀಯೋ ಡೌಲ ವಾರಿಗಿ ಗೆಳತಿಯರೊಳಗ

ನಿನ್ನ ಹೆಣತಿ ಮರಗತಾಳೋ
ತಿರಗಿ ನಿನ್ನ ಮನಿ ನೋಡಲಿಲ್ಲಾ
ನಿನ್ನೆದಿ ಗಟ್ಟಿನೋ ಬಾರಿಗೇ ನನ್ನ ಕೇಳಿದಲ್ಲೊ ಅಕಲಾ ॥

ಏರ ॥ ಹೆಣತಿ ಅಳತಾಳೋ ನಿನ್ನ ಹೆಣಕ ಮನಿಯಾಗ
ಹಣತಿ ಇಲ್ಲಲ್ಲೋ ಹಚ್ಚೋದಕ

೧೨

ಚಾಲ ॥ ಹಚ್ಚಕೊಂಡ ಮಾತಾಡಿದರ ಹುಚ್ಚೆದ್ದ ಬಯ್ಯುವರೇ
ಹೆಚ್ಚಿನ ನಾರಿ ನೀ ನಡಿ ಮನೆಗೇ
ಬಾಯಿಗಿ ಬಂದಂಗ ಬಯುವಲ್ಲಿ ಮಾಯ ನಿನ ಮ್ಯಾಲ ಹುಡಿಗಿ
ನ್ಯಾಯ ಮಾಡಬ್ಯಾಡ ನನಗೂಡಾ
ನಿನ್ನ ತಕ್ಕ ಪುರುಷ ಒಲ್ಲಿನೆಂದ ಮರಜಿ ಮರಿಯಬ್ಯಾಡ
ಬಂಗಾರದ ಗುಡಿಯಾಗ ಲಿಂಗ ಕಲ್ಲಿಂದಿರತೈತಿ
ಹಂಗ ನಿನ ಮನಸಿಗೆ ತಿಳಿದ ನೋಡ
ಅದರಂತ ತಿಳದ ನೋಡ ನನ್ನ ಸಂಗಮನು ಮಾಡ ॥

ಏರ ॥ ಹೆಚ್ಚಿನ ನಾರಿ ನಡಿ ಮನಿಗೆ ನಾನಿನಗ
ಮೆಚ್ಚಿದೇನ ಯಾಕ ಬರವಲ್ಲೆ ॥

೧೩

ಚಾಲ ॥ ಒಲ್ಲದವರು ಮನಸು ನಿಲಿಸುವರ‍್ಯಾರ
ಬಲ್ಲಿದವನು ನನ್ನ ಮನಿ ಪುರುಷ

ಏರ ॥ ಬಲ್ಲಿದವನು ನನ್ನ ಕೇಳಿದರ
ಕೊಲ್ಲಿಸುವನು ನಿನ್ನ ಪ್ರಾಣವನು

೧೪

ಚಾಲ ॥ ಪ್ರಾಣಸಖಿ ನಾ ನಿನ್ನ ಕಾಣದಲೆ ನಿಲಲಾರೆ
ಶ್ಯಾಣೆತನದಲಿ ಬಹುಕುಶಲೆ

ಏರ ॥ ತಿಳಕೊಂಡ ಮಾಣಿಕವ
ನೀಡುವೆ ನಡಿ ಮನಿಗೆ

೧೫

ಚಾಲ ॥ ಮನಿಗೆ ಕರೆಯುವರೇನೋ
ಗುಣವಿಲ್ಲ ನಿನ್ನ ಬದೀಲಿ ಹಣವಿದ್ದರೆಷ್ಟು ಕುಣಿದಾಡಿ



ಏರ ॥ ಹಣವಿದ್ದರೆಷ್ಟ ಕುಣಿದಾಡಿ
ನೀ ನನ್ನ ದನಿ ಕೇಳಿ ಓಡಿ ಬರಬ್ಯಾಡ ॥

೧೬

ಚಾಲ ॥ ಬ್ಯಾಡೆಂದರ ಬಿಡಲಿಕ್ಕೆ ಮೂಢ ಬ್ರಾಹ್ಮಣನೇನೆ
ನೋಡಿಕೋ ಮುಂದ ಕೆಡಿಸುವೆನು ।
ಮಂದಗಮನಿ ನಿಂದರ ನಿನ್ನ ಹೊಂದಿ ಕೆಡಿಸದಿದ್ದರೆ
ನಮ್ಮ ತಂದಿ ಹೊಟ್ಟಿಲೆ ಹುಟ್ಟಿ ಫಲವೇನ ।
ನಿಮ್ಮವರ ಬಂದರ ನಂದದೇನ ಹರಕೊಂಡಾರ
ಎಲ್ಲಿ ಹೊಕ್ಕರ ಬಿಡುವುದಿಲ್ಲ ;
ಕಲ್ಲಲೊಗದು ಕೊಡಗಳ ಒಡದ ಬಲ್ಲಂಗ ಕಳದೇನ ನಿನ್ನ ಮಾನಾ
ನೀ ಬಾರದಿದ್ದರ ಗಟ್ಟಿ ಕೊಲ್ಲತೇನ ನಿನ್ನ ಪ್ರಾಣ
ಅರ್ಧ ಮಾನಾ ಹೊರವಕ್ಕೆಲ್ಲಾ
ಶುದ್ಧ ಮಾನಾ ಹೊರವಕ್ಕಿ ಜಿದ್ದಿಗಾದಿ ಏನ
ನನ್ನ ಸವನ ಹಾತೋರೆ ಬ್ಯಾಡಾ

ಏರ ॥ ಹರದಿ ಆಗ ನನ್ನ ಸ್ವಾಧೀನ
ನೋಡಿಕೋ ಮುಂದೆ ಕೆಡಿಸುವೆನ
ನಿಮ್ಮ ಮನಿಯ ಸುಡಿಸುವೇನ, ನೋಡಿ ತಿಳದ್ಹೇಳ ॥

೧೭

ಚಾಲ ॥ ತಿಳಿದತಿ ಒಳಗಿಂದು ಅರಗಿಳಿಯಂದವನೆ
ಗೆಳೆಯರ ಮುಂದ ಬಡದಾಡಿ ಸುದ್ದಿ ಆದೀತ ಊರಾಗೆಲ್ಲಾ
ಕದ್ದಕದ್ದಲೆ ಮಾತಾಡಿ ಜನಾ ಬದ್ದು ಮಾಡಿಬಿಟ್ಟಾರ ನಿನ್ನ
ಅತ್ತಿ ಮಾಮಾ ಇದ್ದದ್ದ ತಿಳಿತೇನ, ಕಾಯತಾರ ನನ್ನ
ನಾದಿನಿ ಒಬ್ಬಾಕಿ ನನ್ನ ಕಾಯಕೊಂತ ತಿರಗತಾಳೊ ಚಿನ್ನ
ಹೊರಬಿದ್ರ ಸ್ವಲ್ಪ ಬಂದ್ರ ಎಲ್ಲಾರ ಬೆಯತಾರೋ ನನ್ನ

ಏರ ॥ ಗೆಳೆಯರ ಮುಂದ ಬಡದಾಡಿ ಅಂತೇನೊ
ವ್ಯಾಳೆ ನೋಡಿ ಹೇಳಿ ಬರುವುದಕ ವ್ಯಾಳೆ ಸಾಧಿಸುದಕ
ವೀಳ್ಯೆ ಮಡಚುದರೊಳಗ
ಭಾಳ ಮಂದಿ ಹಾದರಮಾಡುವರ ॥

೧೮

ಚಾಲ ॥ ತಗದೇನ ಇಷ್ಟ ದಿನ ಬಾಯಿ
ಮುಗಳುನಗಿ ನಗುವಂತಾ ಸುಗುಣಿ ನಿನ ಮ್ಯಾಲೆ

ಬಲು ಪ್ರೀತಿ
ನಾರಿ ನಿನ್ನ ಮಾರಿ ನೋಡಿ ನ್ಯಾರಿ ಮಾಡಿದಂಗ
ಕೂಡಿ ಇಬ್ರೂ ಸಮಜೋಡಿ
ಕೂಡಿ ಕಂಡ ನಿನ್ನ ಮುಖವ್ರ ಕೂಡಿ ಉಂಡಂಗ ಸುಖ ಬರುವದು
ದುಂಡ ಮಲ್ಲಿಗಿ ಮುಡಿ ಮಾಲಿ ಮಾಡಿದಂಗ ಕೂಡ
ಮ್ಯಾಣದ ರಂಭಿ ತಿದ್ದಿ ಮಾಡಿದ ಗೊಂಬಿ
ಮುದ್ದು ಮುಖದ ಬಾಲಿ ನಡಿ ನ್ಯಾರಿ ಮಾಡಿದಂಗ ಕೂಡಿ ॥

**ಏರ** ॥ ಸುಗುಣಿ ನಿನ ಮ್ಯಾಲೆ ಬಲು ಪ್ರೀತಿಯಿಂದಲೇ
ನೋಡುತಲೆ ಬಾಗಿಲೊಳಗೆ ನಿಲುತಿರುವೆ

೯

**ಚಾಲ** ॥ ಬಂದ ಹೊಕ್ಕಳ ಮನಿಯ ಚಂದ ಮಂಚದ ಮ್ಯಾಲೆ
ಗಂಧ ಕಸ್ತೂರಿ ತಾಂಬೂಲ
ಪಟ್ಟೆ ಮಂಚದ ಮ್ಯಾಲೆ ಅಷ್ಟಗಂಧ ಉತ್ಕೃಷ್ಟವಾದ
ತಾಂಬೂಲ ಕೊಟ್ಟಾಳ ಶ್ರೇಷ್ಠ ಗೆಳೆಯಾಗ
ಮುಟ್ಟಿದ ಕುಚ ಬಿಟ್ಟ ಅಮಕಿ
ಏರಿ ಮನ್ಮಥ ಮಹಾ ಜ್ವಾಲಾ
ಇಬ್ಬರ ಸುರತ ಕ್ರೀಡಾ ಮೇಲ್ಮೆಲಾ
ಭೃಂಗ ಕುಂತಳಿ ಅಂಗ ಶೃಂಗಾರ ರಂಗಬಾಣಗಳ ತಲಾ
ಮನ್ಮಥ ಹೇಂಗ ಮಾಡೋದು ಪ್ರಬಲ ।
ನಡಸ್ಯಾರ ಅಂಗಜಾರ ನಾಟಕಾ ಕಬರಿಲ್ಲಾ ನಗನಗತ
ತೆಕ್ಕೆ ಹಾಯುವಳಲ್ಲಾ ಉಮೇದ ಉಕ್ಕುತೈತಿ ಅಳತಿಲ್ಲ ॥

**ಏರ** ॥ ಗಂಧ ಕಸ್ತೂರಿ ಗೆಳೆಯನಿಗೆ ।
ತಂದ ಸಲಿಸಿದಳು ಪ್ರೀತಯಲಿ ॥

೧೦

**ಚಾಲ** ॥ ಪ್ರೀತಿ ಗೆಳೆಯನೆ ನಿನ್ನ ಆಸೆ ತೀರಿಸಿಕೊಳ್ಳು
ಸುರತ ಸುಖದಲ್ಲಿ ಸೂರ್ಯಾಡೋ ।
ಹೊರಸಿನ ಮ್ಯಾಲ ಸರ ಸರದಾಡಿ ಬಿರುಸು ಬಾಣ ಹಚ್ಚಿದಂಗ
ನಿರಸ ಮಾಡಿ ಹೊಡಿತಾನ ಏನ ಕಾಸಾ
ಎನ್ನರಸ ಬಿಡೋ ಶಾಂತಿ ಆದೀತೋ ಮನಸಾ
ಗಂಧದೆಣ್ಣಿ ಸುವಾಸ ವರಸತಾಳ ಊದದೆಣ್ಣಿ ಒಂದು ತುಸಾ
ತೊರದ ಎಮ್ಮಿ ಹಿಂಡಿದಂಗ ನೆರೆದ ಹೆಣ್ಣ ದೊರೆತನ



ನಿನಗ ಕರದ ಕರಚಿಕಾಯಿ ಉಂಡಂಗ ಜೀನಸಾ
ನೀರ ಎರದ ಮಲಗಿಸಿದಂಗ ಹಸಗೂಸಾ
ನನ್ನ ಜರದ ಸೀರಿಯೆಲ್ಲಾ ತೋದ ಆತ ಹೊಲಸಾ ।
ಹಿಂದ ಕೆಂಚನಾಯ್ಕ ಕವಿಯ ಕಳಸಾ ॥

**ಏರ** ॥ ಸುರತ ಸುಖದಲ್ಲಿ ಸುರ್ಯಾಡೋ ಗೆಣಿಯಾ
ಬೆರತೇನೋ ಮನಿಯ ಮರತೇನೋ ॥

೧೧

**ಚಾಲ** ॥ ಮರತರೇನಾಯಿತು ಗುರತ ಇರಬೇಕಾಜಾಣಿ
ವ್ಯರ್ಥ ಈ ಬಾಳಿ ಸಂಸಾರ
ಬೆಳಕಾಯಿತು ಜಾಣ ಕೋಳಿ ಕೂಗತಾವ ದನಿ ಕೇಳತಾವ
ಗಾಳಿ ಕಿಡಕಿಯೊಳಗ ಸುನಾದಾ ವೃಕ್ಷದಲಿ ಕೇಳತಾವ
ಅಳಿ ಗಿಳಿ ಶಬ್ದ ನಾಗವೇಣಿ ವೇಳೆ ಆತ ಹೋಗ ನಿಮ್ಮನಿಗಿ
ಇನ್ನು ಬೇಗ ಹೇಳುವೆನ ಮಮತದಿಂದ
ಇರಬಾರದೀ ಜಾಗಾದಾಗ ಬರುವದಪವಾದ
ಜಾಣಿ ಕೇಳ ನನ್ನ ಮಾತ ಓಣ್ಯಾಗ ಮಂದಿ ನೋಡಿಗೀಡ್ಯಾರ
ಕಾಣಾ ಕಾಣಾಧಂಗ ತಲೆ ಶೋಧಾ ॥

**ಏರ** ॥ ಮುಚ್ಚಕ್ಕಿ ಹಂಗ ನಾವ್ರ ಇರಬೇಕ
ಆದರದ ವ್ಯರ್ಥ ಈ ಬಾಳ್ವೆ ಸಂಸಾರ ನನ ಗೆಣತಿ
ತುರ್ತು ಹೋಗ ವೇಳೆ ಆಗೇತಿ

೧೨

**ಚಾಲ** ॥ ಆಗೋದಾಗಲಿ ಗೆಳೆಯಾ ಹೋಗಲಾರೆನು
ನಾನು ಭೋಗ ಮಂದಿರವನು ಬಿಡಲಾರೆನು ।
ಕ್ರೀಡಾ ಆಗಿಲ್ಲ ನನಗ ಬೆಸರಾ
ಇನ್ನೂ ಕಾಮತ್ವ ಏರಿ ಇಳದಿಲ್ಲ
ನಿನ್ನ ಮ್ಯಾಲೆ ನನ್ನ ಹಂಬಲ ಸಮರಸವಾತ ಮನ್ಮಥನ ಅಮಲ ।
ಹೆಂಗ ಹೋಗಲಿ ಗೆಣೆಯಾ ಅಂಗಜನಾಟಕ ಸಾಕಿಲ್ಲಾ ।
ಆಟ ಸಾಕಿಲ್ಲಾ ನಿನ್ನ ಮ್ಯಾಲೆ ಐತೆ ನನ ಧ್ಯಾಸಾ ಮಾಡೋ
ವಿಲಾಸ ಇನ್ನೊಮ್ಮೆ ಗುರಿ ಹೂಡೋ ಗುರಿ ಹುಡೋ ॥
ಎಲ್ಲಿ ಕಲತೆ ಬಂಗಾರ ಪುತ್ಥಳಿ
ಪರಿಪರಿ ಭೋಗದ ಅರಗಿಳಿ
ನಿನ್ನಂಥ ಪ್ರಿಯ ಎಂದೆಂದೂ ಹುಟ್ಟಾಕಿಲ್ಲೊ ಗೆಣೆಯಾ

ಧರಿಮ್ಯಾಗ ಬ್ರಹ್ಮ ಬರಿ ನಮ ನಿಮಗ ಸಕ್ರಿ
ಹಣ್ಣು ಹಾಲು ಕೂಡಿದಂಗ ನಿನ್ನನಗಲಿ ನಾನೀ ಕ್ಷಣದಲಿ ಮನಿಗಿ ಹೋಗಲೆಂಗ ॥

ಏರ ॥ ಭೋಗ ಮಂದಿರವನು ಬಿಡಲಾರೆ
ಹೇ ಪ್ರಿಯಾ ಸಾಗವಲ್ಲದು ದಾರಿ ನನಗ ॥

೨

ಚಾಲ ॥ ದಾರಿ ಹಿಡಿ ನನ ಕಾಂತಿ ನೆರೆ ಹೊರೆಯ ನೋಡ್ಯಾರ
ಆರೇರ ಈರಿ ಬಲು ಕೆಡಕಿ
ಹಾದರ ಮಾಡುವ ಚದುರಿಯರೊಳಗ
ಅದರಿಂದ ಆ ಈರಿ ಬಲ್ಲಾಕ್ಕಿ
ಮಧುರ ಮಾತಾಡುವ ನಿವುಳ ಹೆಂಗಸರೊಳಗ
ಭಾಳ ಬೆರಿಕಿ ಇಲ್ಲಿ ಅಂಥವಳು ಸ್ವಲ್ಪ ನೋಡಿದರ
ಬಾಜಾರ ಮಾಡ್ಯಾಳ ಅಲ್ಪ ಬುದ್ಧಿ ರಂಡಿ
ಹಂಚಿಕೆ ಕಲ್ಪಿಸಿ ತಗದ ಹಾಕೋಳ ಗೋಳಾ
ನೀ ದಾಟಿ ಹೋಗ ಬೆಳಕಾಗಿ ಹರದೀತ ಕತ್ತಲ ಕಾಳಾ ॥
ಎಷ್ಟು ಹೇಳಿದರೇನ ಇಲ್ಲೆ ಗಟ್ಟಿಯಾಗಿ ಕುಂತಿಯ ನಾರಿ
ಬಿಟ್ಟ ಹೋಗ ಮನಿಮಾರಾ ।
ಅದಾವ ಹಾಳು ನಿಮ್ಮವರು ಕೇಳಿ ಕೆಟ್ಟ ಮಾಡ್ಯಾರ
ನಮ್ಮ ವ್ಯಾಪಾರ ॥

ಏರ ॥ ಆ ಕೇರೀಲಿ ಬಲು ಕೆಡಕಿ ಹಾಳ
ಅವಳಿಗಿ ಮಾರಿ ತಪ್ಪಿಸಿ ಮನಿಗೋಗ ॥

೪

ಚಾಲ ॥ ಹೋಗತೇಮ ಸುಖಜಾಣಾ
ದಾಗ ಹತ್ತದಂಗ ಮ್ಯಾಗ ಮ್ಯಾಗ ಬಾರೋ ನಮ್ಮನಿಗೆ
ರಂಭಿ ಪುತ್ಥಳಿ ಗೊಂಬೆ ಬಾರೆ ಮುಖವು ತೋರೆ
ಹೆ ರಂಗಾ ಬಾರೊ ಅಂಗ ಸಂಗ ಮುಖವ ತೋರೋ ॥
ಧಂಗ ಬಡದೇನ ಭೃಂಗ ಕುಂತಳಿ
ತುಂಗ ತುಟಿಗಳ ಹೀರೋ ಅಂಗಸಂಗದ ಮುಖವ ತೋರೋ ॥
ಬೇಸರಿಲ್ಲದ ಗಾಸಿ ಮಾಡೋ ಎನ್ನೊಡನೆ ಬಾಳೋ ।
ಸಾಸ ಮಾಡಿ ಬಂದ ಕೂಡೋ ॥
ಬಲು ಮೋಸವಾದೇನು ಕಾಸ ಮನ್ಮಥನಾಟ ಆಡೋ
ವರ ರತಿಯ ಕೊಡೋ ।



ಏಸು ಕಾಲಕೆ ಸಂಶಯವಿಲ್ಲ ಈ ಸತೀಯಳ ಸೇರೋ
ಅಂಗಸಂಗದ ಮುಖವ ತೋರೋ
ದುರುಳ ಕಾಮನ ಸರಳ ಹಗಲೆಲ್ಲಾ
ಇನ್ನಿರುಳು ಹಗಲಿ ಬಳಲತೈತಿ ಜಲ್ಮ ॥
ನಾ ಮರುಳ ಗೊಂಡೇನು
ಕರುಳು ನಿನಗ ಸ್ವಲ್ಪಾದರೂ ಇಲ್ಲಾ ಮನ್ಮಥ ಲೀಲಾ ॥
ಹರಳ ಮುತ್ತಿನ ಹಾರದಂತೇರು ॥
ಕೊರಳ ಮುಟ್ಟಿ ಸವಿದೋರೋ
ಎಂದ ಮಾಡುವೆ ದುಂದ ಪ್ರೇಮಾ
ಶ್ರೀ ಚಂದ್ರರಾಮ ಇಂದ್ರನಂಥಾ ಹೋಳಿ ಕಾಮಾ ॥
ಸುಂದರ ಇಂಚಲ ತಂದಿ ಬಂಕೇಶನಿಂದ ಈ ಜಲ್ಮ ॥

ಏರ ॥ ಮಾಡಿದ ಕ್ಷೇಮ ದ್ವಂದ್ವ ಚರಣಕ್ಕಂತ ಎರಗಿ ಮುಂದೆ ಭವಿ ಬೇಡ
ಬಾರೋ ಅಂಗಸಂಗವ ಮುಖವ ತೋರೋ ॥

೫

ಚಾಲ ॥ ಜಾಣೆ ಕೇಳೆನ್ನ ಮಾತ ಮಣಿಯಂತವಳೆ
ಥಾಣದೀವಿಗೆಯ ಪರಿಯಂತೆ ।
ಸುಂದರಿ ಕೇಳೆನ್ನ ಮಾತ ಮಂದಿರಕೆ ನೀ ಬರಬೇಡ
ಬಂದ್ರ ಮಾತನಾಡಿ ಕೆಡಬೇಡ
ಆಗಸುಳ್ಳೆ ಪಂದ್ರಾ ಸುತ್ತ ಸುಳ್ಳ ಹೇಳ ಬ್ಯಾಡಾ ॥
ಕೇಳೆ ಎನ್ನ ಮಾತ ನಿನ್ನ ಬಾಳೇಕ್ಹಚ್ಚೇನ
ಆಗೋದಾತು ಸುಳ್ಳ ಬಾಯೊಳಗ ಬೇಯ ಬ್ಯಾಡಾ ॥

ಏರ ॥ ನೆರಿಹೊರಿಗೆ ನನ್ನ ಬಾಳೆ ಮಾಡಿ ಸಂಗ ಬಿಟ್ಟ ಬಿಡ
ಒಲ್ಲೆನೆಂದ್ರ ಜುಲುಮಿಯಿಂದ ಅಲ್ಲದ್ದ ಮಾತಾಡಬ್ಯಾಡ
ಸಲ್ಲದ್ದನ್ನು ತಿಳದ ಒಳಗ ನೋಡ ಇಂಥಾದಕ
ಹಲ್ಲ ಮುರಿಸಿ ಕೊಂಡೀಯ ಆದೀಯ ಕೇಡ
ಠಾಣ ದೀವಿಗೆಯ ಪರಿಯಂತೆ ಹಾದರಕ ॥

೬

ಚಾಲ ॥ ಶಾಣೇರು ಪಾರಾಗುವರು ಪಾರಾಗಿ ಹೋದಾನೋ
ಪರ ನಾರಿಯ ಸಲುವಾಗಿ ಪಾರಗಂಡನೋ ಅನಿರುದ್ಧ
ಒಲ್ಲೆನುವ ರೋ ನಲ್ಲ
ವಲ್ಲಭಿಗೆ ಆಗಿಸಲ್ಲ ಒಲ್ಲೆನುವರೋ ನಲ್ಲ

ಯಾರ್‍ಯಾರು ಮನಿಯಾಗಿಲ್ಲ ಒಲ್ಲೆನೆನುವರೋ ನಲ್ಲ
ಅಂಗಜನಾಟಾರಂಗಜನಾಗಿ
ಕೂಟಶರಗ ಇರೋಲ್ಲ ಇಲ್ಲೆನೆನುವರೋ ನಲ್ಲ
ನಾರೇರ ತಾಪ ಪುರುಷರಿಗೋಪ ಬಾರೆ
ಬಾರಿಗೇನಕಲಾ ಒಲವಿಗಾಗಿ ಸಲ್ಲ ಒಲ್ಲೆನೆನುವರೋ ನಲ್ಲ

ಏರ ॥ ಬಡಸದ ಗ್ರಾಮ ಒಡಿಯ ನಮ್ಮ ಕಲ್ಮೇಶ
ಆಡಿ ಆಣಿ ಕೊಟ್ಟಿದ್ದೆಲ್ಲ ಒಲ್ಲೆನೆನುವರೋ ನಲ್ಲ ॥

೭

ಏರ ॥ ಪಾರಾಗಿ ಹೋದ ಅನಿರುದ್ಧ
ಭೇತ ತಗದ ಯಾರಾದರೂ ಹೇಳುವರು ॥

೮

**ಚಾಲ** ॥ ಯಾರ ಗೊಡವಿ ನನಗ ತೋರಬ್ಯಾಡೆಲೆಗ
ಯರೆಂದರೆ ಮಡಿಯನ್ನೊನೆ ನಲ್ಲ
ಚಂದ್ರಮುಖಿ ಸಾಕ ಇನ್ನು ಚಂದ ಮಂದಿ ನೋಡ್ಯಾರಂತೇನ
ತೊಂದರಿ ಬ್ಯಾಡ ನಮ ನಿಮಗ ಹಗಲೆಲ್ಲಾ
ನೀ ಬಂದ್ರ ಅಗದಿ ನ್ನ ಜೀವ ಸರೇ ನಿಲ್ಲಾ
ಹಾಳ ಮಂದಿರದಾಗ ಬಿದಂಗ ಆಗೇದ ಸಕಲ

೯

**ಚಾಲ** ॥ ಹೇ ಸಖಿ ಕೇಳ ನಿನ್ನ ಕಕ್ಕಸ ಕುಚಗಳನ್ನು
ತಿಕ್ಕಿ ತೀಡಿ ಹಿಚುಕುವೆ।
ಅಕ್ಕರತೇಲೆ ಮಾಡುವೆ ಕದ್ದ ಕದ್ದ ಇದ್ರು
ಹೇಸಿ ಸುದ್ದಿ ಹಾದರ ಹೋಗೋದ ಮಾನಾ
ಬದ್ದು ಆದೀ ತಂತ ಹೇಳತೇನ ನಾನಾ।
ಇದ್ದ ಕಷ್ಟ ಇರಬೇಕ ಸಮಾಧಾನಾ
ನಾರಿ ನಿನ್ನ ಮಾರಿ ನೋಡಿ ಧೀರ ಹೊತ್ತಗಳದೇನ
ಸಾಕು ಕುಚಗಳನು ಎತ್ತಿ ಹಿಡಿಯುವೆನೊತ್ತೊತ್ತಿ
ವೈಯಾರಿ ನಿನಮ್ಯಾಗ ಭಾಳ ನನ್ನ ಪ್ರೀತಿ
ಹೇ ವಾರಿಜಾಕ್ಷಿ ಮಂದಿ ನೋಡ್ಯಾರಂತು
ಮಳ್ಳಿ ಸುಮ್ಮನಿರ ಮನ್ಯಾಗ ॥

ಏರ ॥ ಒಮ್ಮೆ ಆದದ್ದಾಗಿ ಹೋಗಿ ಕಮ್ಮಗಿರು ಮನಿಯ ಒಳಗ
ಕಾಂತಿ ನೀ ನೇಮ ಮಾಡಿಕೊಂತಿ ಇರಬ್ಯಾಡ ಚಿಂತಿ



ಮರೀ ಅಂದರ ಮರಿ ಒಲ್ಲೇನ
ನಿನ್ನ ಸಂಗ ಯಾಕ ಮಾಡೇನ ದುಗ್ಗಾಣಿ ॥

೧೦

**ಚಾಲ** ॥ ದುಗ್ಗಾಣಿ ಅನಬ್ಯಾಡೋ ಹಿಗ್ಗುವೆನು
ಮಲ್ಲಿಗೆಯ ಮಗ್ಗಿಯಂಥವನೇ ಮುಖ ತೋರೋ।
ಬಗರಿ ಮಗ್ಗಿ ಮಲಿ ನಿಗರಿ ಹೂವ ಬಾಡತಾವ
ಉಗರ ಊರಿ ನೋಡ್ರಿ ಮನ್ಮಥ ಹಗರ ಮಾಡೋ ನನ್ನ ದೊರಿ ॥
ಧರಿಸುವೆ ಅಗರ ಗಂಧ ಕಸ್ತೂರಿ
ಚಿಗರ್‍ದುಟಿ ಚುಂಬನ ಹೀರಿ
ಅದರ ಒಗರ ತಕ್ಕೊ ಕಾಮನ್ಯಾಪಾರಿ ॥
ಕೊಕ್ಕರ ಮೀಸಿಒಳಗ ನಕ್ಕರ ನನಗ
ಅಕ್ಕರತಿ ಬರೋದ ನನಗ ಉಮೇದವಾರಿ
ಹಾಲು ಸಕ್ಕರಿಯಂಥಾ ಹಾದರ ಸೌತಿ
ಬಕ್ಕಳ ಹರೇ ಮಾಡೋ ಸೂರಿ
ತೆಕ್ಕಿ ಮುಕ್ಕಿ ಹಾದ ತಕ್ಕೋರಿ ಹಕ್ಕಿಯಂಗ ಆಗಿ ಇರೂನ ಇಬ್ರುಸರಿ ॥

ಏರ ॥ ಮಗ್ಗಿಯಂಥವನೇ ಮುಖದೋರೋ।
ನಾ ನಿನ್ನ ಮಗ್ಗುಲಕ ಒಪ್ಪು ಸಖೀಯಳೊ ॥

೧೧

**ಚಾಲ** ॥ ಸತಿಯರ ಸಲುವಾಗಿ ಗತಿಗೆಟ್ಟ ಬಹು ಜನರು
ಮತಿಮಾನ್ಯರೊಳಗ ಯಜಮಾನ।
ಮಾನಿನಿ ನಾ ಒಲ್ಲೆನ ನೀನ ಕೂಡ ಪ್ರಾಣವನು
ಕೊಡಲಾರೆನ ಮೀನಾಕ್ಷಿ ನಿನ ಗಂಡ
ಜ್ಞಾನವಂತನ ಕೂಡ ನೀನೇ ಬಾಳೇವ ಮಾಡ
ಹಂಬಲ ರಂಡಿ ಒಲ್ಲೇನ
ನೀ ನನ್ನ ಮುಂದ ಜಂಬ ಮಾಡತೀ ಹಂಬಲ ಇಟ್ಟ
ನನ್ನ ದುಂಬಾಲ ಬೀಳ ಬ್ಯಾಡಾ
ಹಂಬ್ಲಾಗಿ ದೂರ ಹೋದೇನ ಕೂನ ಇಲ್ಲದಂಗ ಇರ ಒಳಗ
ತಿಳಿದ ನೋಡ ಕೂನ ಹಿಡದರ ನಮ್ಮ ಮಾನಾ ಸಖಿಯೆ
ಹಾನಿಯೆ ಬಂದು ತಟ್ಟುವದು
ಹೆಣ್ಣಿನ ಮೋಹ ಸುಡಲೆ ಬಣ್ಣಕ್ಕಾಗಿ ಕಣ್ಣ ಬಿತ್ತ
ಹೆಣ್ಣ ನೀ ನನ್ನ ಮ್ಯಾಗ ಕಣ್ಣ ಇಡಬ್ಯಾಡ
ಸರಿಮಣ್ಣಗೂಡಿಸಿ ಬಿಟ್ಟೆನಂತಲೇ ॥

ಏರ ॥ ಮಾನ್ಯರೊಳಗ ಯಜಮಾನ
ಮನ್ಮಥನಾದ ಹೊಲೆಯರ ಮನಿಯೊಳಗ

೩೨

ಚಾಲ ॥ ಹೊಲಿಯ ಕಾಮನು ನನಗ ಬಲಿಯ ಹಾಕಿದನು ಜಾಣ
ತಲಿ ನೆಲ ತೊಡೆಗಾಗಿ ಷಂಡ ನೀನು ಬಂಧನ ಸುಟ್ಟು
ಉಂಡೆನಂದ್ರ ಹಸಿವಿಲ್ಲ ಗಂಡ ನನ್ನ ಕೂಡ ಜಗಳ ಹಗಲೆಲ್ಲಾ
ಸ್ವಲ್ಪ ಉಂಡೇನೆಂದ್ರ ಬಳಗ ಬರಗೊಡವೊಲ್ಲಾ ।
ಹರಲಿ ಮಾಡಿದೊ ನನ್ನ ಹೊಲಸ ಮಾಡಿದೊ ಇನ್ನ
ಯಾವಲ್ಲಿರಲಿ ನಗೀಗೇಡಾಗೋ ಹೊತ್ತ ಬಂತೊ ಇಂಥಾ ಕಾಲಾ ॥

ಏರ ॥ ನಿನ್ನ ಅಂತ ತಿಳಿಯವಲ್ಲದೊ
ಹಾಕಿದಿ ಗಾಲಾ ಕರಿನೆಲ ತೋರಿ ಕಡಿಗಾದೆ ನೀ ಇಂದ
ಅಲಬತ್ತ ಬಾರೋ ಕೈ ಮುಗಿವೆ ॥

೩೩

ಚಾಲ ॥ ಕೈಯ ಮುಗಿಯಲಿ ಬ್ಯಾಡ ನ್ಯಾಯಮಾಡಲಿ ಬ್ಯಾಡಾ
ಬಾಯಿ ತೆರೆದೆನ್ನ ಕರಿಬ್ಯಾಡಾ
ಒಳ್ಳೆ ಮಾತಿಲಿ ಕೇಳವಳಲ್ಲ
ತಳ್ಳಿ ಮಾಡಿ ನಿನ್ನ ಮ್ಯಾಲ ಮುಳ್ಳ ಹಾಕಬೇಕ ಬಾಳ ದಂದಲ
ಹಂಗಾದರ ನೀನೊಬ್ಬೆ ಹೋಗತಿ ಮತ್ತು ಕರಿಯವನಲ್ಲಾ
ಹಿತವಿಲ್ಲದ ಮಾನಿನಿ ನೀನು
ಗತಿಯೆಂದು ಕುಂದ್ರ ಬ್ಯಾಡಾ
ಮರಿಗೇಡಿ ಮರುಳನ್ನತಾರಾ ॥

ಏರ ॥ ಹೆಣ್ಣಿಗಾಗಿ ಕ್ಷಿತಿ ಮ್ಯಾಲೆ ಕೆಟ್ಟಾರ ಎಂಥೆಂಥವರಾ
ಬಾಯಿ ತೆರೆದೆನ್ನ ಕರೀ ಬ್ಯಾಡಾ
ಬರಲಾರೆ ಬಾಲಿ ಉಡಿಯ ಒಡ್ಡ ಬ್ಯಾಡಾ ॥

೩೪

ಚಾಲ ॥ ಕರದ ಬ್ಯಾಸತ್ತೇನು ಮರ್ಯಾದೆ ಕಳಕೊಂಡೇನು
ಮರಮರಾ ಮರುಗಿ ಬಳಲುವೇನು ।
ಷಂಡ ನಿನ್ನ ಸಂಶೆ ಮಂದಿ ಕಂಡಂಗ ಮಾತಾಡತಾರ
ಗಂಡನ ಮ್ಯಾಲ ಇಲ್ಲೊ ನನ ಧ್ಯಾಸಾ ।
ಇಳಸೋ ಕಾಮದಂಡ ಕುಚಾ ಹಿಚಕಿ ರಂಗರಸಾ



ಧೀರ ನಿನ್ನ ಸುರತ ಮಾರಿ ನೋಡಿದರ ಎನಗ
ನ್ಯಾರಿ ಮಾಡಿದಂಗ ಆತಿ ಹರುಷಾ
ಪ್ರಿಯ ನಿನ್ನ ಮ್ಯಾಲ ನನ್ನ ಉಲ್ಲಾಸಾ
ಒಲ್ಲೆನೆನ್ನುವ ಕಾರಣವೇನು
ಕಲ್ಲುಸಕ್ರಿಯಂಥಾ ಪ್ರಿಯಾ ನಿಲ್ಲ ಹೋಗಬ್ಯಾಡೋ ರಾಜಹಂಸ
ನಿನ್ನ ಮ್ಯಾಲಿನ ಪ್ರೀತಿ ಮಲ್ಲಿಗೆ ಹೂವಿನಂತೆ ಸುವಾಸಾ ॥

ಏರ ॥ ಮರ ಮರ ಮರಗಿ ಬಳಲುವೆನು ನನ ಗೆಳೆಯಾ
ವರ ಪುರುಷ ಒಲ್ಲೆನೆನಬ್ಯಾಡೋ ॥

೩೫

ಚಾಲ ॥ ಒಲ್ಲಾಳಿ ಸಲುವಾಗಿ ಊರ ಕೆಟ್ಟೆತ ಕೇಳ
ವಿಜಯಭೂಪ ಅಲ್ಲಿ ಮಡದಾನ ।
ಅಗ್ಗದ ರಂಡೆ ಮನಿಗೆ ಹೋಗ ಮಗ್ಗಲ ಎಲವ ಮುರಿಸಿಕೊಂಡಿ
ಜಗ್ಗ ಬ್ಯಾಡಾ ಹಿಡದ ಧೋತರ ಪದರ
ಅಗದಿ ನೀಗವಲ್ಯಾದಂತೆ ಬಿಟ್ಟ ವಿಚಾರಾ
ಅಲ್ಲ ಲಗ್ಗ ಹೋಗ ಬೇದಾರ ನಿಮ್ಮವರ
ಕದನಗಡಕಿ ಕೇಳ ನಿನ್ನ ವದನ ಯಾರ ನೋಡಬೇಕ ।
ಹದ ಬಂದಲ್ಲೆ ಅನಿವಾರ್ಯ ನಿನಗ ಅದ ಆದಮೇಲೆ
ಮದ ಬಂದಲ್ಲೆ ಕರದರ ಅದನ ಇಳಸವರ್‍ಯಾರಾ ॥

ಏರ ॥ ವಿಜಯ ಭೂಪ ಅಲ್ಲಿ ಮಾಡದಾನ
ನನ ಕೂಡ ಗೋಜಗಟ್ಟಿ ಬ್ಯಾಡ ಮನಿಗ್ಹೋಗ ॥

೩೬

ಚಾಲ ॥ ಮನಿ ಮಾರ ಮರತೇನ ವಿನಯ ನಿನ ಸಲುವಾಗಿ
ಘನ ರೋಷದಿಂದ ಬಯ್ಯುವರೇ ।
ಸುಂದರ ನಿನ್ನ ಸಲುವಾಗಿ ಮಂದಿರದಿ ನಾ ಪೋಗಿ
ತೊಂದ್ರಿ ಒಡಲೊಳಗ ಪಂದ್ರಾ ದಿವಸಾತ ತಿರಗಿ
ನಾ ಬಂದ್ರ ನೋಡವಲ್ಲಿ ಇಂದ್ರಲೋಕದ ರಂಭಾ ನನ ರೂಪ
ಪ್ರಿಯ ಎಂದೆಂದೂ ಬ್ಯಾಡೋ ರೋಷಾ
ಆಣಿ ಭಾಷೆಯ ಕೊಟ್ಟು ಜಾಣೀನ ಕೈಬಿಟ್ಟೆ
ಜಾಣ ಅದುಂಬರಿ ಕಟ್ಟಿ ಪ್ರಾಣ ಮಾಡಿದ ಲೂಟಿ
ನಾನು ಮನಗೇಡಾದೇನು ಜಾಣ ಶೇಖರ ಬಲ್ಲ
ಮಾನಿನಿಯ ಹಾಸ್ಯ ಮಾಡಿ ಬಾರೋ ಸಾನಂದದೋಡಿ

ಮುನ್ನೋಡಿ ಬಾರ ಪ್ರಾಯದ ನಾರಿ
ಚಾರು ಮನ್ಮಥ ವೈರಿ ಪೂರಾ ಆದಾನ ಬರ್‍ರಿ
ವಾರಿಜಾಕ್ಷರಿಯ ಮಾರಿ ನೋಡು ಆರಿಗರಿಯುವೆ ನಾನು
ದೂರ ನೋಡಲು ಬ್ಯಾಡಾ ಕಾರಣ ಕರ್ತ ಬಾರೋ
ಶರಧಿ ವಾಣಿಜೋದ್ಭವನ ನೀ ತೋರೋ

**ಏರ** ॥ ಘನರೋಷದಿಂದ ಬೈಯುವರೆ ।
ಧನ ದ್ರವ್ಯ ಸೂರೆ ಮಾಡಿದೇನೋ ನೀ ನನಗಾಗಿ ॥

೩೭

**ಚಾಲ** ॥ ಸೂರೆ ಮಾಡಿದರೇನೋ ವಾರಿಜಾಕ್ಷಿಯೆ ನಿನ್ನ
ಜಾರದ ಲೆಕ್ಕಾ ನಾ ಬಲ್ಲೆ ।
ಕೆಟ್ಟ ಕಾಮನದಿಂದ ಜನ ನಷ್ಟಾಗಿ ಹೋಯಿತು
ಬಿಟ್ಟ ಆಶ್ರಮ ಅರಣ್ಯ ವಾಸಾ
ಶ್ರೇಷ್ಠ ಕೊಣ್ಣೂರಾಗ ಪ್ರಾಣ ಮಾಡಿದ್ಯೊ ಹಿಂಸಾ
ಅವನ ಸುಖಕೊಂಡು ತಿಂದಿತೋ ರಾಕ್ಷಸಾ
ಬಾಣಾ ತಾಗಿ ಬೆನ್ನ ಹತ್ತಿ ನೀನೇ ನನ್ನ ಗಂಡನೆಂದು
ಅವನ ಕಾಣಾ ಕಾಣಾ ಪ್ರಾಣಾಹರಣ ಮಾಡಿಬಿಟ್ಟೊತ್ತಿದಾ
ನಾಗವೇಣಿ ಒಲ್ಲಿ ಹೋಗ ನಿನ್ನ ವಿಶ್ವಾಸಾ ।
ನೀ ಹೆಣ್ಣ ಮಾಯದ ಸಖೀ ಮುನಿ ಮುನಾದಿಗಳಿಗೆ
ಪಾಸಿ ಹಾಕಿ ರಕ್ತ ಮಾಂಸದ ಕೂಡ ಯಲುಬಿನ ಗೂಡ
ಸಾಧು ಸಂತಾರ ಬಿಟ್ಟಾರ ನೂಕಿ ॥

**ಏರ** ॥ ಜಾರ ಬರು ಕೃತ್ಯಕ್ಕೆ ನಾ ಒಲ್ಲೇನ ।
ಹೆಂಗಸರನ ದೂರ ಮಾಡಿದರ ಸಾಧುರಾ ॥

೩೮

**ಚಾಲ** ॥ ಸಾಧು ಸಂತರ ಶಾಸ್ತ್ರ ಓದಿ ಹೇಳಲಿ ಬ್ಯಾಡೋ
ಗಾದಿ ಮಾತಿಗೆ ಮನಸ್ಯಾಕೋ ।
ಸುಂದರ ನನ್ನ ಮನಿಯನ್ನ ಜಿಂದಗಿಯಲ್ಲಿ ನೆನಯೂದಿಲ್ಲೊ
ತಂದ ಕೊಟ್ಟೇನ ಬಿಂದಿಗಿ ಹೊನ್ನ ನಿನಗ
ಗಂಡ ನೋಡಿ ನಿಂದ್ರಗೊಡವಲ್ಲ ಮನಿಯಾಗ ಹೋದ್ರ
ಒಯ್ಯುವಲ್ಲೊ ಗೆಳಿಯಾ ಆಧಾರ ತೋರಿಸೋ ಎನಗ
ಹಾದರಮಾಡಿ ಹದಾಗಣ್ಣೋ ನಾನು
ನನ ಗಂಡ ಬಾರಂದವನ ಬಿಟ್ಟೇನೋ



ಕೂಳ ಇಲ್ಲದಲೆ ಸಾವತೇನ ಕಾಳ ಕೊಡವಲ್ಲ ಎನಗ
ಭಾಳ ಭಾಳ ಹೇಳಿದ್ದೆಲ್ಲೊ ನೀನು ಹೆಂಗಸ ನಾನು ಹಾಳ
ಅದೇನು ಸಡ್ಲ ಸಿಕ್ಕಿತು ನಿನ್ನ ಕೈಯಾಗ
ಹಡ್ಲಿ ಕೊಡೊ ನನ್ನ ಕೈಯಾಗ
ಕಡ್ಲಿ ಬುಟ್ಟಿ ಕೊಟ್ಟ ಹಿಡಕೊಂಡ ಕಡಿಯಾಕೆ ಬಂದೆ ನೀನು

**ಏರ** ॥ ಗಾದಿ ಮಾತಿಗೆ ಮನಸ್ಯಾಕೊ
ಪಂಚಮಿಗೆ ಗೋದಿ ಕೊಡವಲ್ಲಿ ಗುಣವಂಥಾ ॥

೩೯

**ಚಾಲ** ॥ ಪಂಚಮಿ ಕುಬುಸದ ಲೆಕ್ಕ ಮುಂಚಿ ತೀರಿಸಿದೇನ
ಹಂಚಿದೇನ ಹತ್ತಿ ನಿನಗಗಿ ।
ಅಕ್ಕಲಗೇಡಿ ರಂಡೆ ನಮ್ಮ ಒಕ್ಕಲತನ ಗತಿಗೆ ಹಚ್ಚಿದೆ
ಹಕ್ಕಲಾರಸಾಕ ಬಂದಿದ್ದ್ಯೊಂದು ದಿನಾ
ಗೋದಿ ಶಿವಡ ಕೊಟ್ಟೆನ್ನೆ ಆ ದಿನಾ
ಗೂಡ ಮುರಿವಾಗ ನಮ್ಮನ್ನ ನೋಡಿಕೊಂಡ ಕುಂತಿದ್ದಿ
ಛೀ ಕೋಡಿ ರಂಡೆ ಹೊಕ್ಕೆ ನಮ್ಮ ಕಣಾ
ಇಂಥಿಂಥ ಪಿಂಡ ಕೈ ತೆನಿ ಬಿಟ್ಟೆನ್ನೆ ಆ ದಿನಾ
ಬೆದರಸಬಾರದಂಥ ಸುಮ್ಮನಿದ್ದೆ ಆ ದಿನಾ
ಒಂದ್ರಾಗೊಂದ ಬಂದೀತಂತ.
ಅದರದೇನ ಹೆಚ್ಚಿನ ಶಾಣೇತಾನ ಹಿಂತಾದಕ್ಕೆಲ್ಲಾ
ನೆದರ ಮಾಡಿ ನೋಡವನಲ್ಲಾ ॥
ಹತ್ತಿ ಹೊಲಕ ಬರತೇನಂತ ಅತ್ತ ಅತ್ತ ಹೇಳಿದ್ದೆಲ್ಲ
ಮತ್ತು ಎಲ್ಲಾ ಕಳದೆ ಉಪಕಾರಾ ।
ಬಿಸಲತ್ತಿ ನಿನಗಂತ ಚೆಲ್ಲಿನ್ನ ಪಾವಸೇರಾ
ಹಂಚಿದೇನ ಹತ್ತಿ ನಿನಾಗಿ
ಇಂಚಲದ ಬಂಕನಾಥನ ಆಣಿ ಬಲ್ಲೇನಾ ॥

**ಏರ** ॥ ಒಲ್ಲೆನ್ನುವ ಮಾತ ನಲ್ಲ ಆಡಬ್ಯಾಡೋ
ಬೆಲ್ಲದಂತವನೆ ಬೆರೆತೇನೋ ॥

೪೦

**ಚಾಲ** ॥ ಚದುರ ನಿನಮ್ಯಾಲ ನೆದರ ಇಟ್ಟಿ ನಾ
ಪದರ ಹಾಸಿ ಪಂಥ ಗೆಟ್ಟೆನೊ ನಿನ್ನ
ಧರದೋಳಗಧರ ಇಟ್ಟೆನೋ ।

ಸದರ ಸುದ್ದ ಹಾದರ ಮುದ್ದ ಕೊಟ್ಟೇನೋ
ಮದನ ಪ್ರಾಯವೆನ್ನ ಅದನೂ ನೋಡೋ
ನಿನ್ನೆದಿಗೆ ಎದಿ ಹಚ್ಚಿ ಅವಚೇನೋ
ಗಟ್ಟಿ ಕುಚಾ ತಟಾತಟಾ ಹೊಡೀತಾವ
ಚಟಾ ಹಚ್ಚಿ ಇಷ್ಟಕ ನೀನು ಹಟಾ ಮಾಡಿ ಶೆಟದ ಕಾರಣೇನು ।
ಪಟುತರದ ಮಾತನಾಡಬಲ್ಲವನು
ಕುಟಿಲ ಕುಂತಳಿಗ ಗಟಿಸೋ ಈ ದೇಹಾ
ಪಟಾನೇ ಬಿಟ್ಟ ಹೋಗಬ್ಯಾಡೋ ನೀನು
ಬಾರೋ ಸೂರಾ ಬಿದ್ದು ಧೀರ ಮುಖ ನೋಡೋ ನಂದು
ಮೂರು ಲೋಕವು ಬೆಂದು ಮಾರಿ ನೋಡುವೆ ನಿಂದು

ಏರ ॥ ಹರದಾಡಿ ಹಾತೊರೆದು ಕಾಮ
ಸುರಿಸುತಲಿ ಬಂದು ಮರತೇನೋ ಮನಿಯ ಮರತೇನೋ ॥

೪೧

ಚಾಲ ॥ ಚಿತ್ತಿಟ್ಟಕೇಳ ಹೆಣ್ಣ ಕುತ್ತಿಗೆಯ ಕೊಯಿಸಿದಳು
ಮೃತ್ಯು ನಿಮ್ಮ ರತ್ನಿ ಎಂಬವಳು ।
ಕೋಮಲಾಂಗಿ ಕೋಮರಾಮಂಗೆ ಬಯಸಿದಳು
ಕಾಮಾತುರಕೊಳಗಾಗಿ ರತ್ನಿ ಬ್ರಮಾ ಆದಾನೋ ಮಗ ಅದಕ
ಇದ ನಿಮ್ಮ ಹೆಂಗಸರ ಜಾತಿ ಅಜ್ಞಾನಿ ।
ಮಗನೆಂದು ನೋಡದಲೆ ಭೋಗಕ್ಕೆ ಕರದಾಳು
ಸೋಗ ಮಾಡಿದಳು ಸಂಗ ಜಾಣೆ
ಒಲ್ಲೆನೆಂದನೊ ರಾಮು ಫುಲ್ಲಲೋಚನೆ ತಾನೇ
ಹಲ್ಲ ಕಡದ ಮಾಡಿ ಶಪತ ನಾ ನಿನ್ನ ಕೊಲಿಸುವದೀಗ
ಖಚಿತಾ ಹೀಗೆಂದು ಬಲ್ಲಂಗ ಆಡಿದಳು
ಮತ್ತಾ ಗಂಡಗ್ಹೇಳಿ ನಿನ್ನ ಚೆಂಡ ಹೊಡಿಸುವೆ
ಮಲಿಯ ಹಿಂಡಿ ಹಿಚಕು ಈಗ ತುರ್ತು
ಮಂದಗಮನಿಯೆ ತಾನು ಬಂದಾಳು ಕುವರಗೆ ಅಂದಾಳು
ಹೀಗೆಂದು ರಾಯ ನಿನ್ನ ಅಯ್ಯ ಕಂದ, ಮಾಡಿದನೋ
ಅನ್ಯಾಯ ಬಂದೆನ್ನ ಮಂದಿರದಿ ಹಿಡಿದಾನೋ
ಕೈಯ ಬಿಗಿದಪ್ಪಿ ನಿನ್ನ ಮಗನು ನಗಿಗೇಡ ಮಾಡಿದನು ।

ಏರ ॥ ಲಗುಬಗೆಯ ಹೊಡಿಸೇನ ತಲಿಯ
ಮೃತ್ಯು ನಿಮ್ಮ ರತ್ನಿ ಎಂಬವಳು
ಪುತ್ರನ ಚಿತ್ತ ಬಾಜೂಕ ಕರದಾಳೋ ॥



೪೨

ಚಾಲ ॥ ಕರದ ಬ್ಯಾಸತ್ತೇನ ಹೊರಳಿ ನೋಡವಲ್ಲಿ
ದುರುಳುತನ ಯಾಕ ಬಿಡವಲ್ಲಿ ।
ಸಲಿಗೆ ಹಚ್ಚಿ ನನ್ನ ಬಲಿಗೆ ಹಾಕಿದೋ
ನೆಲೆಯ ಹಚ್ಚಲಿಲ್ಲ ಕೈ ಬಿಟ್ಟಿ
ಉಲುವ ತಗ್ಗಿ ಮಂದಿ ಮಲಗಿದ ಮ್ಯಾಲ
ಚಿಲಕ ಹಿಡಕೊಂಡು ನಿಲತಿದ್ದೆ
ಸೊಟ್ಟ ನಮ್ಮವರ ಕೇಳಿದ್ರ ಗುಂಮಿಗಿಮ್ಯಾಕಂತ
ಸುಮ್ಮನ್ಹೋಗತಿದ್ದೆಲ್ಲೋ ದಾಟಿ
ಅಂತ ಬಂದವ ಸ್ವಂತ ದಾಟಿ ನಿನ್ನ ಹಂತೇಕ ಬರತಿನ್ನಿ ಮರತ ಬಿಟ್ಟಿ ॥

ಏರ ॥ ಬಾರೋ ಶೂರಾ ಎದ್ದು ಧೀರಾ ಮುಖನೋಡು ನಂದು
ಮೂರು ಲೋಕವು ಬೆಂದು ಮಾರಿ ನೋಡುವೆ ನಿಂದು
ಹರದಾಡಿ ಹಾ ತೊರೆದು ಸುರಿಸುತಲಿ ಬಂದು
ದುರುಳತನ ಯಕ ಬಿಡವಲ್ಲಿ
ನಿನ್ನ ಬಿಟ್ಟು ಅನುವಿಲ್ಲೋ ನನಗ ಮಾರಾಯಾ ॥

೪೩

ಚಾಲ ॥ ಮಾರಾಯನೆಂಬಾಕೆ ಮಾರನಾಟವ ಮಾಡ
ಮರಿ ನನ್ನ ಸಂಗಕ ಕರಿ ಬ್ಯಾಡ ।
ಭಂಗ ಕುಂತಳಿ ನಿನ್ನ ಸಂಗ ಮಾಡಿ
ಕಂಗೆಟ್ಟು ಅಡವಿಯನ್ನು ಸೇರಿದರು
ಸ್ತ್ರೀ ಸಂಗ ರಘುವೀರರೆಂಬವರು
ಕಂಗೆಟ್ಟು ಅರಣ್ಯಕ ನಡದಾರು ತಿಂಗಳ
ದಶರಥನ ಅರ್ಧಾಂಗಿ
ಅವರು ಹಂಗ ಹರದು ಶ್ರಾಪ ಕೊಟ್ಟಾರು ।
ಸುಂದರಮಗ ರಾಮಚಂದ್ರ ಲಕ್ಷ್ಮಣ ಅಂದ ಅಡವಿ ಪಾಲಾದ್ರು
ಎಂದೆಂದು ಇಂಥಾ ತೊಂದರಿ ಮಾಡತಾರ ಹೆಂಗಸರು
ಎಂದೆಂದು ನಂಬಬಾರದು ಜನರು
ಬಂದೊಡಿತನ ಮಾಡಿ ಕೊಂಡು ಬಿಡುವರು ॥

ಏರ ॥ ಅವರಂದಾಜ ತಿಳದು ಮಾಡು
ಮರಿ ನಿನ ಸಂಗ ಕರಿಬ್ಯಾಡ
ನಿನ ಕೂಡ ಬರಲಾರೆ ಚ್ಯಾಲಿ ಉರಿಯಬ್ಯಾಡ ॥

೧೪

ಚಾಲ ॥ ವಸುಧೆಯೊಳು ಲೇಸಾದ ದಶರಥ ರಾಯನಿಗೆ
ಹೆಸರಾದ ಮಕ್ಕಳು ವಸುಧೆಯೊಳಗೆ
ತಾಯಿ ಸೀತಾನ ನ್ಯಾಯವಿಲ್ಲದೆ
ಅನ್ಯಾಯದಿಂದ ಆಕೆಯ ಕಡೆಯಿಂದ
ಅತಿ ಸಾಯಮಾಡಿ ಪವನಜ ತಂದ
ದೇಹ ಸಹಿತ ರಘುವೀರ ಅಗ್ನಿ ಕೆಡವಿದಾ
ಸೀತಾಬಾಯಿ ಬಂದಾಳ ಆನಂದ ॥
ಜ್ಞಾನಮತಿ ಜಾನಕಿ ತಾ ದಹನ ಆಗಲಿಲ್ಲ
ಪ್ರಾಣ ಕಾಯದಾ ಮಾನು ಭಾನೂ
ಶಂಕೆ ಅಲ್ಲಗಳದ ಸಾಹಸ ಆಗಿ ಬಂದಾಳಾ ತನ್ನ ಗುಣದಿಂದ
ತಿಳದ ನೋಡು ನೋಡು
ಹೆಣ್ಣಿನಾಗೆ ಮಾಡಬ್ಯಾಡಾ ನಿಂದಾ ॥

ಏರ ॥ ಕರುಣಿಟ್ಟು ಕೊಡೋ ನೀ ಬಂದು ।
ವಸುಧೆಯೊಳು ಪುಟ್ಟಿ ನಾಲ್ವರು ಸೀತಾಗ
ಅಸದಳವ ಯಾಕ ತೆರವಿದರು ॥

೧೫

ಚಾಲ ॥ ತಿರಗಿ ಮಾತಾಡಿದರ ಏರಗಟ್ಟಿ ಇರತೇನ ।
ಬರಬರತ ನೀನು ಮುದಿಕ್ಯಾದೆ ॥
ಬಾರಿಬಾರಿಗಿ ಕುರ್ಡಾರಿ ಬೀಳತಿ
ಎರಡು ಕುಚಾಗಳ ತೆರಕೊಂಡ
ಮಾರಿ ನೋಡತಲೆ ಹರಕೊಂಡ ಡವಲ ಮಾಡತಿದ್ದಿ
ನೀನಾದಿ ನಾಯಿ ಕೆರಕೊಂಡು

ಏರ ॥ ಬಿಟ್ಟ ವಿಚಾರ ಈ ಸರತೆ ।
ಕ್ರೂರತನಾ ಬಾಳ ಮನಗಂಡು ॥

೧೬

ಚಾಲ ॥ ಹಂಗ ಹರದ ಮ್ಯಾಲ ಲಿಂಗದ ಪರಿವೇನು
ಸಂಗತಿಯಿಲ್ಲದ ಹಾಕೇವ ಗುಂಡು ॥
ಈಗ ತಿಂಗಳಾತಿ ಯಾಕಳತಿ
ಬಂದ ನಮ್ಮಂಗದಾಗ ನಿಂತ ಹೊಯಕೊಂಡೆ
ಬಲು ಬಲಗಡಿಕೆ ಬೈಲಿಗೆಳೆದರೆ ಲೋಲಾಡಿಯ ನನ ಕಂಡ ಕಂಡು



ಹೋಗತೀ ಮುರಗಣದ ಗಂಟಾ ಉಗದ ಮ್ಯಾಲೇನ ಉಂಟಾ
ಅಷ್ಟು ತಿಂದೇನು ಬಂದಾ
ಬಂದ ಹಚ್ಚಿದೆ ಅಂಟಾ ನಿನ್ನ ಕಡಿಸೆಂಟಾ ॥

ಏರ ॥ ಸುಳ್ಳ ಹೇಳತಿ ಪಂಟಾ
ಬರಬರತ ನೀನು ಮುದಿಕ್ಯಾದೆ ।
ನಿನ್ನಿಂದ ಹೊರತಾದೆ ನನ್ನ ಹೆಣತಿಗೆ ॥

೧೭

ಚಾಲ ॥ ಹೆಣತಿಯಾದರೇನು ಗೆಣತಿಯಾದರೇನು ।
ಗುಣವಂತನು ಸರಿಯ ಆಳುವನು ॥

ಏರ ॥ ಗುಣವಂತನು ಸರಿಯ ಆಳುವನು
ನಿನ್ನ ಬಿಟ್ಟು ಆಗುದಿಲ್ಲೊ ಎನಗ ಮಾರಾಯಾ ॥

೧೮

ಚಾಲ ॥ ಬಾಲಿ ಉರಿಯುವೆ ನಾನು ।
ಮೂಲ ಪುರುಷನೆ ಕೇಳು ಆಲಯಕ್ಕೆ ಎನ್ನ ಕರೆದೊಯ್ಯೋ ।

ಏರ ॥ ಆಲಯಕ್ಕೆ ಎನ್ನ ಕರೆದೊಯ್ಯೋ
ನಾ ನಿನ್ನ ಮಾಲಿನ್ಹಾಗ ಬಂದ ಲೋಲ್ಯಾಡುವೆ ॥

೧೯

ಚಾಲ ॥ ಲೋಲ್ಯಾಡು ಶೃಂಗಾರಿ ಲಾಲಿಸೆನ್ನಯ ಮಾತು ।
ಕೀಲು ಬಲ್ಲವಳು ಹಾದರವು ।

ಏರ ॥ ಕೀಲುಬಲ್ಲವಳು ಹಾದರಕ ।
ಸವಿಗಾರಿ ಜಾಲ ಹಾಕಿ ಎನ್ನ ಬಿಡಲಿಲ್ಲ

೨೦

ಚಾಲ ॥ ಬಿಟ್ಟೇನು ನಾ ನಿನ್ನ ಆ ತ್ವಾಟ
ಬಂಗಾರ ಮುಂದೆ ಬತ್ತೀಸ ಕೂಟ ಕಳೆಗಾರಾ ।
ಅಂತಿಗಂತ ಇದ್ಯೋ ನಿನ್ನ ಭ್ರಾಂತಿ ತೀರಲಿಲ್ಲೋ
ಗೆಳೆಯಾ ಸಂತೋಷ ಮಾಡಿ ಹೋಗೋ ಇಂದಿನ ರಾತ್ರಿ ।
ನಾವಿಬ್ರು ಏಕಾಂತದಲ್ಲಿ ಇರುವೇನ ಹೊರಬರ್ರೀ
ಧರಿಸ್ಯಾಳೋ ಗಂಧದೆಣ್ಣೆ ಒರಿಸ್ಯಾಳೊ ಸಂಪಿಗಿ ತೈಲಾ

ಬೆರಿಸ್ಯಾಳೋ ತನುಮನಾ ಉಮೇದ್ವಾರಿ
ಕಾಜಿನ ಗ್ಲಾಸು ಮೋಜಿಲೆ ನೋಡುವಳು ಗೆಣಿಯನ ಮಾರಿ

ಏರ ॥ ಬತ್ತೀಸ ಆಟ–ಕೂಟ ಕಳೆಗಾರ
ಒಂದೊಂದು ಆಟ ತೋರೊ ವಿಪರೀತ ॥

೫

**ಚಾಲ** ॥ ಚೆಂದಾಗಿ ನಾವಿಬ್ರೂ ಹೊಂದಿಕೊಂಡಿರುವೇನ
ಬಂದದ್ದು ಬರಲಿ ಅದಕ್ಯಾಕ ॥
ಮನಿಯಾಗ ನಿದ ಹಿರಿತಾನ ಕೊಡತೇನ ॥

**ಚಾಲ** ॥ ಹಾದಿ ವಸ್ತಿ ಬಡಸದ ಗ್ರಾಮಾ
ಕವಿಯು ಆರಾಮಾ ಮಾಡಿದ ಕೆಂಚ ನಾಯ್ಕ
ಪ್ರಭಾಬಿದ್ದಂಗ ರತ್ನದ ಬೆಳಕಾ
ಪ್ರಾಸ ಹೆಚ್ಚ ಕಡಿಮಿ ಇಲ್ಲ ಸಮತೂಕ ।
ಎಲ್ಲರ ಪಾದದೊಳು ಬಲ್ಲವನಲ್ಲ ನಾ ಮೂರ್ಖ
ಅಲ್ಲಮೂರ್ಖ ಬಸನಗೌಡನ ಖಣಿ ಕಲ್ಲಣ್ಣನ ಧ್ವನಿ
ಬಂಗಾರದ ಖಣಿ ಗಂಟಿ ಹೊಡದಂಗ ಹೊಡದಂಗ ।
ಹೋಳಿ ಪದ ಹಾಡ ಮಾಡಿ ಹೊಸದಾಗಿ
ಬಳಿಕ ಅಂಥ ಜನಾ ತಲೆದೂಗಿ ಜ್ಞಾನ ಕೊಟ್ಟಾನ ಕಲ್ಮೇಶ್ವರಾ ।

ಏರ ॥ ಜ್ಞಾನಸಾಗರ ಕಾಳಪ್ಪಗ ವಶವಾಗಿ
ಕಾಮ ಕ್ರೋಧ ಮತ್ಸರಾ ನೀಗಿ
ಗುರುಭಕ್ತ ಭಜನೆ ಒಳಗಾಗಿ
ಪಾರ್ವತಿಯ ಕರುಣ ಸಾಗರ ।
ಪಾರ ಮಾಡೋ ಹೋಳಿ ಪದಗಳಿಗೆ ಹೋಳಿ ಪದಗಳಿಗೆ

* * *



## ೫. ಕಾಮಣ್ಣದೇವರ ದುಮ್ಮಸಾಲಿ ಪದ

ಧುಮ ಧುಮಣ್ಣ ಧೂಮ್ಮಸಾಲಿಗಣ್ಣ
ಧುಮ ಧುಮ್ಮ ಧೂಮ್ಮಸಾಲಿಗೆ

ಶ್ರೀ ಗುರುವೆ ಮತಿ ಕೊಡು ನೆನಸುವೆ ಮುಂದಾ
ವರಗಳು ಬಂದಿವೆ ಕರವಿಡಿದು ನಿಂತೀನಿ ನಾ ನಿನ್ನ ಕಂದಾ
ಹೋಳಿಯ ಪದಗಳು ಸಾರುವೆ ಮುಂದಾ ॥೧॥

ನಮೋ ನಮೋ ಕರವಿಡಿದು ತಾಯಿ ಸರಸ್ವತಿ
ನಾಲಿಗೆ ಮ್ಯಾಲೆ ಕೊಡುವ ಮಾತೆ
ಆದಿಬ್ರಹ್ಮನ ಸತಿ ಜನ ಆದಿಕಾರ್ತಿ
ನವಲಮ್ಯಾಲೆ ಕುಂತು ಮೆರೆಯುತ ಬರತಿ ॥೨॥

ವಾರಿಗೆ ಹೆಣ್ಣೆಂದು ಕರೆದು ಕೇಳಿದೆನೇ
ಮಾರಿ ಬಣ್ಣಕ್ಕ ನಾನು ಮರುಳಾದೆನೇ
ಓಣಿಯೊಳಗೆ ನಿಂತು ಭಾಳ ಹೇಳಿದೆನೇ
ಮೀರಿ ಹೋಗಲಿ ಬ್ಯಾಡ ಮಿತ್ರನಾಗುವೆನೇ ॥೩॥

ಮಿತ್ರನಾಗಲಿಕೆ ಮೀರಿದವನೇನು ಬತ್ತು
ಮನಸ್ಯಾರೊಳು ಊರೊಳಗೆ ನೀನು ಗೊತ್ತು
ಅರಿಯದ ಮಾತು ಆಡಬಹುದೇನು
ಅತ್ತಿ ಮಾವನ ಮುಂದೆ ಹೇಳುವೇ ನಾನು ॥೪॥

ಇಂಥ ಮಾತಿಗೆ ನಾನು ಅಂಜಬಲ್ಲೆನೇ
ಪಂಥ ಗೆಲಿಸಿಕೊಂಡು ಹೋಗಬಂದೀನೇ
ಅಂತರಂಗದೊಳು ತಿಳಕೋರೆ ನೀನೇ
ಭ್ರಾಂತಿ ತೀರಿಸಿಕೊಂಡು ಹಾರಾ ಹಾಕುವೆನೇ ॥೫॥

ಹಾರ ಒಯ್ದು ನಿನ್ನ ಹರವಿಗೆ ಹಾಕು
ಜಾರತನದ ಬುದ್ಧಿ ಅಳದಿರಬೇಕು
ಪರಸ್ತ್ರೀಯರ ನಿಂದೆ ಆಡುವುದು ಸಾಕು
ಮಾರಾಯನ ಬಾಧೆಗೆ ಮರೆತು ಬಿಡಬೇಕು ॥೬॥

ಕೇಳು ಕೇಳಲೇ ಹೆಣ್ಣೆ ಬಾಳ ಹೊನ್ನು ಕೊಡುವೆ
ಬೇಡಿದ ವಸ್ತುಗಳ ಮಾಡಿಸಿ ಕೊಡುವೆ
ಬೆಳ್ಳಿ ಬಂಗಾರ ನಿನ್ನ ಥರ ಥರಕೆ ಜಡಿವೇ
ವ್ಯಾಳ್ಯಾ ಕಳಿಯಬ್ಯಾಡ ಇನ್ಯಾಕೆ ತಡವೇ ॥೭॥

ತಿಳಿಯದೆ ಮಾತುಗಳ ಆಡಿದೆ ಮೂರ್ಖ
ಬಡಿವಾರ ದನದ ಬುದ್ಧಿ ನಿನಗಿಲ್ಲ ತರ್ಕ
ನಡೆಸಲಿ ಹೋಗಬ್ಯಾಡ ನನಗೂಡ ತರ್ಕ
ಹೊಡೆದು ಹೆಣ ಹಾಕುವರು ತಿಳಿಯೋ ಮೂರ್ಖ ॥೮॥

ಮೂರ್ಖನಾದರೆ ಭ್ರಮಿ ಭಾಳ ಉಂಟು ತರ್ಕ
ತಗೀನೀನು ಕಾಡೋದು ಎಷ್ಟು ತರ್ಕ
ಮಾಡಿ ನಾನು ಹಾಕುವೆ ಗಂಟು ಹರಕತ
ತಡ ಇಲ್ಲ ಹೆಣ್ಣ ಜಾತಿ ಇಷ್ಟ ॥೯॥

ಜಾತಿ ಮಗನಾದರ ತಿಳಕೋ ಮನದೊಳಗ
ಜ್ಯೋತಿ ಮುತ್ತಿನಂಗ ಹೊಳಿಯೋ ಜನದೊಳಗ
ಜತನ ಮಾಡಿಕೊಳ್ಳು ರತನ ನಿನ್ನೊಳಗ
ಜತೀನ ನಿಂತು ಬೆಲಿ ಏರಿಸ ಎನಗ ॥೧೦॥

ಬೆಲಿಯ ಮಾಡಲಿಕ್ಕೆ ಬಂದಿಲ್ಲೆ ನಾನು
ಬೇಲ್ಯಾನ ವ್ಯಾಪಾರ ತೀರೀಸೆ ನೀನು
ಬಲಿ ಒಡ್ಡಿ ಬ್ಯಾಟೆಕಾರ ಕುಂತಿನೇ ನಾನು
ಬಾಲ ಹುಡುಗನ ಪ್ರೀತಿ ದಕ್ಕಸೇ ನೀನು ॥೧೧॥

ಪ್ರೀತಿ ದಕ್ಕಸಲಿಕ್ಕೆ ನೀನ್ಯಾರೋ ಮೂರ್ಖಾ
ಪೃಥ್ವಿಯ ಆಳುವ ಗಂಡನು ಚೊಕ್ಕ
ಎನ್ನ ಮೈದುನರಿಗೆ ಬಾಳ ಅದೋ ಸೊಕ್ಕ
ತಿಳಿದು ನೀ ಜಾರಲೋ ತಿಳಿಯಲೋ ಮೂರ್ಖ ॥೧೨॥

ಇಂಥ ಪಂಥಗಳೆಲ್ಲಾ ನಾನು ಬಲ್ಲೇನೆ
ಖೊಟ್ಟಿ ಗುಣದವಳೆಂದು ಸುದ್ದಿ ಕೇಳೀನೆ
ಗಟ್ಟಿ ಪೀತಾಂಬರ ತಂದು ಉಡಿಸುವೆನೇ
ಸಿಟ್ಟನಾಗಲಿ ಬ್ಯಾಡ ಗುಣವಂತಿ ನೀನೇ ॥೧೩॥

ಗುಣವಂತನಾದವನಿಗೆ ಸಿಟ್ಟುತರವಲ್ಲಾ
ಎಣಕಿ ಇಲ್ಲದ ಮಾತು ಎಂದೂ ಭಯವಿಲ್ಲಾ



ಅಣಕದ ಮಾತುಗಳು ಎಂದೂ ನಿನಗ ಸಲ್ಲಾ
ಜಾಣನಾಗಿರು ಹೋಗುವೇ ನಲ್ಲಾ ॥೧೪॥

ಸುಮ್ಮನೆ ಇದ್ದರ ಸುರು ಅಂಬುವರು ಹಾಂಗೆ
ಸಮಯ ಹೋದೀತೆಂದು ತಡವಿದೆ ನಿನಗೆ
ಹಮ್ಮು ಮಾಡಿದೆನಲ್ಲಾ ನಾ ನಿನ್ನ ಮ್ಯಾಲೆ
ಉಮ್ಮೇದ ರತಿಕಾಲ ತೀರಿಸರೆ ಬಾರೆ ॥೧೫॥

ರತಿ ತೀರಿಸಲಿಕ್ಕೆ ಸತಿ ಪುರುಷನೆ ನೀನು
ಹಿತವಾಗಿ ಇರಹೋಗು ಮತಿಗೇಡಿ ನೀನು
ನಿನ್ನಂಗ ನನಗ ನಾಚಿಕೀ ಇಲ್ಲೇನು
ಹತ ಮಾಡಿಕೋ ಬ್ಯಾಡ ನಿನ್ನ ಜೀವವನು ॥೧೬॥

ಜೀವದ ಹಂಗುನಾ ಇಟ್ಟಿಲ್ಲೆ ಹೆಣ್ಣೆ
ಭಾವಕ್ಕ ನೋಡಿ ಇಟ್ಟೀನೆ ಕಣ್ಣು
ಯಾವ ಹಾನ ಬಲವಂತ ನಿಮ್ಮಣ್ಣ
ಅವನಿಗೆ ತರುವೆನು ಕುತನಿಯ ಚೊಣ್ಣ ॥೧೭॥

ಚೊಣ್ಣೆಯ ತರಲಿಕ್ಕೆ ಕಾಣದವನೇನು
ಕಣ್ಣಲ್ಲಿ ಕಂಡರೆ ಕಡಿದು ಹಾಕುವನು
ಅಣ್ಣ ಹಾವ ಬಾಳ ಬಲವಂತನು ನಿನ್ನ
ಚಣ್ಣ ಕಳೆದು ಬಯಲೀಗೆ ಇಳಿಸುವನು ॥೧೮॥

ಬೈಲಿಗಿಳಿಸುವಂಥ ಜೋರು ಅಂವಗಿಲ್ಲ
ಕೊಲ್ಲಲು ಮನುಜಾಗ ಧೈರ್ಯವು ಇಲ್ಲ
ಗಂಡ ನನ ಮದನೋಡಿ ಎದೆ ಒಡೆದನಲ್ಲ
ಇಲ್ಲಿ ತನ ಬಂದರೆ ಮುರಸೂವೆ ಹಲ್ಲ ॥೧೯॥

ಹಲ್ಲ ಮುರಿಸಲಿಕ್ಕೆ ದೊರಿಯೇನೋ ನೀನು
ಕಲ್ಲಗಾಣಕ್ಕೆ ಹಾಕಿ ಎಳಸುವೆ ನಾನು
ಗಲ್ಲಿಗೇ ಹಾಕಿ ನಿನ್ನ ಇಲ್ಲ ಅನಿಸುವೆನು
ಬಲವಿದ್ದ ಭಾವಗ ಹೇಳಿ ವದಿಸುವೆನು ॥೨೦॥

ಎಲ್ಲಿ ಕಡದ ಹೆಸರ ಆಗ್ಯಾನ ಅವನು
ಚಿಕ್ಕಂದಹಿಡಿದ ಗುಣ ನೋಡಿನೋ ನಾನು
ಯಾತಕ್ಕ ಹೇಳುತ್ತಿ ಬಡಿವಾರ ನೀನು
ಇಲ್ಲಿ ತನ ಬಂದರೆ ಹಿಚುಕಿಸುವೆ ಗೋಣು ॥೨೧॥

ಗೋಣ ಹಿಚಕಲಿಕ್ಕೆ ಅರಸೇನು ನೀನು
ದೂರ ನಿಲ್ಲು ಎನ್ನ ಪುರುಷ ಬರುವನು
ನಿನ್ನನ್ನು ಕಂಡರೆ ಸೀಳಿಹಾಕುವನು
ವಾರಿ ಬಿದ್ದು ಓಡಿ ಹೋಗುವೇ ನೀನು ॥೨೨॥

ವಾರಿ ಬಿದ್ದು ಓಡಲಿಕ್ಕೆ ಹೆಂಗಸಲ್ಲೇ ನಾನು
ನಿಲ್ಲಲಾರ ಎನ್ನ ಧೈರ್ಯಕ್ಕೆ ಅವನು
ಬಿಲ್ಲು ಬಾಣ ಹಿಡದ ನಿಂತೇನು
ಕಡದ ಹಾಕಿ ಅವನ ವಂಶ ಕಳದೇನು ॥೨೩॥

ಹಮ್ಮು ಮಾಡಿ ಹರಿ ಬ್ರಹ್ಮನು ಕೆಟ್ಟ
ಹೆಂಗಸಿನ ಕಾಲಾಗ ಮನಿಮಾರು ಬಿಟ್ಟ
ಅಡಿ ಅಡಿ ತಿರುಗಿ ಆಗಿದ್ಯೊ ಬಟ್ಟಾ
ಸುಳ್ಳಲ್ಲ ಶಾಶ್ವತ ಹಾಕೋ ನೀ ಗಂಟಾ ॥೨೪॥

ಹೌದೆ ಬಾಲೀ ಶಾಸ್ತ್ರಹೇಳೀದಿ ಎಷ್ಟ
ಹೊಟ್ಟೆ ಮಗಳೀಗೆ ಸ್ವಯಂ ಬ್ರಹ್ಮ ಕೆಡಿಸಿಟ್ಟ
ಧ್ರುವರಾಜ ಗೆದ್ದಾನ ಹೆಣ್ಣಾದ ಸಿಟ್ಟ
ನಿನಗ ನನಗ ಕೂಡಿ ಬಂದಾವ ಕೂಟ ॥೨೫॥

ಕೂಟ ಕಲಿಯಲಿಕ್ಕ ಪತಿ ಏನೋ ದುಷ್ಟ
ಮೂಢ ಮಾತುಗಳು ಆಡತೀ ಎಷ್ಟ
ದ್ರೌಪತಿ ಕಾಲಾಗ ಕೀಚಕ ಕೆಟ್ಟ
ಪಾಠಶಾಲೆಯಲ್ಲಿ ಪ್ರಾಣವ ಕೊಟ್ಟ ॥೨೬॥

ಕೀಚಕ ಸುದ್ದಿ ನೀ ಹೇಳತಿ ಎಷ್ಟ
ಪಾಂಡವರ ತಲಿಮ್ಯಾಲ ಕೃಷ್ಣ ಹಸ್ತ ಇಟ್ಟ
ಕೌರವರ ಸಲ್ಯಾಗ ಸ್ವಯಂ ವೇಷವ ತೊಟ್ಟ
ಬಂದಂಥ ಗ್ರಹಚಾರ ದೂರಮಾಡಿಬಿಟ್ಟ ॥೨೭॥

ಕಟಪ ಕೃಷ್ಣನ ಸುದ್ದಿ ನೀ ಹೇಳತಿ ಏನೋ
ಗೌಳಗಿತ್ತಿ ಮನ್ಯಾಗ ಬೆಳದಾನ ಅವನು
ಹಾಲ ಮೊಸರು ಕದ್ದು ಬಿದ್ದ ಓಡ್ಯಾನು
ಸಿಗಬಿದ್ದ ಮಾತಿಗೆ ಹಸ್ತ ಜೋಡಿಸ್ಯಾನು ॥೨೮॥

ಹಸ್ತವ ಎಂದಿಗೆ ಜೋಡಿಸಿಲ್ಲಾ ಅವನು
ಸಂದಿ ಸಂದಿಯ ಹಿಡದು ಸುಂಕ ಬೇಡ್ಯಾನು



ಬಿಂಕ ಬಿದ್ದ ಬಾಲಿಗೆ ಎಡವಿ ಕೆಡವ್ಯಾನೋ
ದೂರ ನಿಂತು ಅಕಿಯ ಆಟ ನೋಡ್ಯಾನು ॥೨೯॥

ಎಡವಿ ಕೆಡವಿದ್ದು ಎನಗ ಗೊತ್ತಿಲ್ಲವೇನೋ
ಯಾತಕ್ಕ ಹೇಳುತೀ ಬಡಿವಾರ ನೀನು
ಬಳ್ಳಿಯ ಬಲ್ಲಿ ಓಡ್ಯಾಡಿದವನು
ಸುಟ್ಟ ಹಡಿ ಗಂಡಸರು ನವಿಲು ಮೋಹಿನೋ ॥೩೦॥

ಬಾಯಿಗೆ ಬಂದಂಗ ಆಡುವುದು ಏನೋ
ಏನ ತಿಳದೀಗನೀ ಮಾತಿನ ಗೌಣ
ಗೋಕುಲ ಗ್ರಾಮಕ ಧನಿ ಆಗಿಯಾನೋ
ಮೋಹಿನಿ ಮಾಡಿದಂಗ ಸರ್ವ ಸ್ತ್ರೀಯರನ್ನು ॥೩೧॥

ಮೋಹಿನಿ ಮಾಡಲಿಕ್ಕೆ ಗೊಡ್ಡೇನು ಅವನು
ತೊಡ್ಡ ಹೊಡದಂಗ ಹೋಗಿ ಕದ್ದ ಕುಂತಾನೋ
ಬಿದ್ದ ಹೆಣ್ಣಿಗಿ ಹೋಗಿ ಮುದ್ದ ಕೊಟ್ಟಾನೋ
ಕಂಸಗ ಅಂಜಿ ಊರ ಬಿಟ್ಟಾನೋ ॥೩೨॥

ಕಂಸನ ಅಂಜಿಕಿ ಯಾತರದೋ ಏನೋ
ಕಾಲೀಯ ಮರ್ಧನ ಮಾಡೀದನವನು
ಸೊಕ್ಕ ಇದ್ದವನಿಗೆ ಸೀಳಿ ಒಗದಾನೋ
ಗೋವರ್ಧನ ಗುಡ್ಡ ಎತ್ತಿ ಒಗದಾನೋ ॥೩೩॥

ಗುಡ್ಡವ ಹಿಡಿದದ್ದು ಗೊತ್ತಾದ ಅನ್ನು
ಕಾಲಿಯವನಿಗೆ ನೋಡಿ ಅಂಜಿ ಹೇತಾನು
ಮರಣವು ಬಂದಿತು ಓಡಿ ಹೋಗ್ಯಾನು
ಮುಚಕುಂದ ಬೆನ್ನಿಗಿ ಹೋಗಿ ನಿಂತಾನೋ ॥೩೪॥

ಓಡಿ ಹೋಗದ ಸುದ್ದಿ ನಿನಗ ಗೊತ್ತೇನು
ಹಿಂದಕ್ಕೆ ವಚನವ ಕೊಟ್ಟು ಬಂದಾನೋ
ಅದಕಾಗಿ ಅವನಿಗೀ ಕೊಟ್ಟ ದರುಶನೋ
ಮುಚಕುಂದ ಜನ್ಮವು ಆಯಿತು ಪಾವನವು ॥೩೫॥

ಧುಮ್ಮ ಧುಮ್ಮಣ್ಣ ಧುಮ್ಮ ಸಾಲಿಗಣ್ಣ
ಧುಮ್ಮ ಧುಮ್ಮ ಧುಮ್ಮಾ ಸಾಲಿಗೆ

* * *

## ೬. ಮುಚಖಂಡಿಯ ದುಂದುಮೆಯ ಪದಗಳು

ಶ್ರೀಶ ಮೈದುನನಿಗೆ ಪಾಶುಪತವನಿತ್ತ
ಸರ್ವನಮಿತ ಮಹೇಶನೇ
ಗಿರಿಜೇಶನೇ ಮೂರ್ಜಗದೀಶನೇ
ಪರಮೇಶನೇ ಕೈಲಾಸವಾಸನೇ ಸುಪ್ರ
ವೇಶನೇ ಅಂಬರಕೇಶನೇ ಮದನ ವಿನಾಶನೇ ಬೇಗನೇ
ಪಾಲಿಸೆನ್ನ ದಯದಿ ॥೧॥

ಧಾತ್ರಿಯೊಳು ಮುಚಖಂಡಿ ಕ್ಷೇತ್ರದಿ ನೋಡಿದೆ
ಪಾತ್ರದವರನು ಆ ಜಾತಿಯೊಳು ಕಂಡು
ರಾತ್ರಿಯೊಳ್ಕಳಿತು ಚರಿತ್ರೆ ಮಾಡಿದೆನಿಟ್ಟು
ಮಾತ್ರ ಮಾಡದೆ ವಿಚಿತ್ರ ಕೇಳುವದು ॥೨॥

ಪ್ಯಾಟಿಗಳೊಳಗೆಲ್ಲಾ ನೀಟಾದ ಬಾಗಲಕೋಟೆಯ ಸಖಿಯರ
ಧಾಟ ಬೇರೆ ದೇಹದಾಟವು ಎದಿ ಮೇಲೆ ಮಾಟ ಬೇರೆ ರತಿ
ಬೇಟವು ಕಣ್ಣಿನ ನೋಟವು ಬೇರೆ ಕಾಮನಾಟದೊಳಗ ಮಹಾ
ಬೂಟಕರ್‍ವೆ ಇವರಾಟವು ತಿಳಿಯದು ನೋಟಕ್ಕೆ ಜನಕೆ ॥೩॥

ಹೆಚ್ಚಿನ ಸಖಿಯರು ಸ್ವಚ್ಛಾದಿ ಘಣಿಯೋಳು
ಹಚ್ಚಿ ಬಟ್ಟಿನ ರೇಖಾ ಚುಚ್ಚಿಹರು ಮೇಲೆ
ಅಚ್ಚ ಕಸ್ತೂರಿ ತಿಲಕಾ ನಿಟ್ಟಿಹರು ಜಾತ್ರಿ
ವೆಚ್ಚಕ್ಕೆ ಪೊನ್ಗಳ ಬಿಚ್ಚಿಹರು ತಮ್ಮ
ಇಚ್ಚೆಗ ಪುರುಷರ ಮೆಚ್ಚುತ ಕರಕೊಂಡು
ಮುಚ್ಚುಖಂಡಿಗೆ ಬಂದಾರುತ್ಸಾಹದಿಂದಾ ॥೪॥

ಮುಟ್ಟಿದರೀಗಳೆ ಕೆಟ್ಟೀತೆಂಬುವ ಮೈಗೆ
ಪಟ್ಟ ಪೀತಾಂಬರವನುಟ್ಟಿಹರು
ತೊಳ್ಗೆ ನಟ್ಟಿಹ ಕುಪ್ಪಸ ತೊಟ್ಟಿಹರು
ಮನಕೆಷ್ಟು ಬಂದಷ್ಟೊಸ್ತ ನಿಟ್ಟಿಹರು ಮುನ್ನ
ದೃಷ್ಟಿಲಿ ನೋಡಿ ನಾನೆಷ್ಟೆಂತ ವರ್ಣಿಸ
ಲೊಟ್ಟಿಗೆ ಚಲ್ವಿಕಿ ಘಟ್ಟಿಗಳೇನು ॥೫॥



ಕಾಲ ಸರ್ಪಳಿ ರುಳಿ ಕಾಲಂದಿಗೆಯ ಗೆಜ್ಜಿ
ಕಾಲುಂಗರ ಮೀನಪಿಲ್ಲೆಗಳು ವಜ್ರ
ನೀಲದುಂಗರ ಮುತ್ತಿನೋಲೆಗಳು ಕಂಠ
ಮಾಲಿಯು ಪದಕ ಜೋಮಾಲಿಗಳು ಇಂಥಾ
ಮೇಲಾಭರಣನಿಟ್ಟು ಲೋಲ್ಯಾಡುತಲಿ
ಚಲ್ವ ಬಾಲೇರು ಬರುವ ವಿಶಾಲವನೇನೆಂಬೆ ॥೬॥

ಹೆರಳು ಹಾಕುತ ಚೌರಿಗಳಿಗಳೆಡಕ ಬಲಕಾ
ಹಣೆತುಂಬ್ಹಚ್ಚಿದ ಚಲ್ವ ಚೌಕಳಿಯು
ಮೂಗಿನೋಳ್ ನತ್ತು ಮುತ್ತಿನ ಜುಳಜುಳಿಯು
ಕರಗಳಿಗಿಟ್ಟ ಕಡಗ ಕಂಕಣ ಬಳಿಯು ಕೊರ
ಳೊಳು ಪಟ್ಟಿ ಮುತ್ತೇಕಾವಳಿ ಮೊದಲಾದೊಸ್ತಾಳನಿಟ್ಟು
ನೀಳ ಕುಂತಳೆಯರು ಬರಲು ॥೭॥

ಹರಳು ಕೆಚ್ಚಿದ ಪಟ್ಟಿ ಸರಗಿ ಪುತ್ಥಳಿ ನೆಲ್ಲಿ
ಸರ ಚಿಂತಾಕವು ಮುತ್ತಿನ್ಹಾರಗಳು
ದೋರೆ ಹರಡಿ ಕೈಕಟ್ಟು ಕೈಹಾರಗಳು ವಂಕಿ
ಮುರಡಿ ಸರ್ಪಳಿ ತೋಳ್ಬಾಪುರಿಗಳೂ ಮೀನ
ಹಿರಿಪಿಲ್ಲಿ ಕಿರಿಪಿಲ್ಲಿ ಸುರಳಿ ಸಹಿತವಾಗಿ
ಪರಿ ಪರಿ ವಸ್ತುವ ಧರಿಸಿ ಕೊಂಡಿಹರು ॥೮॥

ಜಾಣೇರು ಸುಗುಣ ವಿಶ್ರೇಣೇರು ಕಾಳಾಹಿ
ವೇಣೇರು ಪಲ್ಲವ ಪಾಣಿಯರು ಮೃದು
ವಾಣೇರು ವಚನ ಪ್ರಮಾಣಿಯರು ಕರ
ತ್ರಾಣೇರು ಘನ ಧುರೀಣಿಯರು ಸುಪ್ತ
ವೇಣೆರು ಮನ್ಮಥನಾಣೇರು ಇನ್ನು ಈ
ಕ್ಷೋಣಿಯೊಳೆಲ್ಲಿ ನಾ ಕಾಣೆನಿಂಥವರಾ ॥೯॥

ಕಂಬು ಕಂಧರ ಮರಿದುಂಬಿ ಕರಿಗುರಳಿಯರು
ಬಿಂಬಾಧರದ ಸೊನ್ನಿ ತುಂಬಿಯರು ಬಣ್ಣ
ಲಿಂಬೀ ಹಣ್ಣಿನಂತಾದ ಬೊಂಬಿಯರು ಸ್ವರ್ಣ
ಕುಂಭ ಕುಚದ ಮಹಾರಂಭಿಯರು ಸರ್ವ
ಸಂಭ್ರಮದಿಂದಲ್ಲಿ ಕುಂಭಿನಿಯೊಳು ಪೊಸ
ತೆಂಬಂತೆ ತೋರಿದರಂಬುಜಾಕ್ಷಿಯರು ॥೧೦॥

ಬೆದರಿದೆರಳಿ ನೋಟ ಕದಪು ಕನ್ನಡಿ ನಡಿ
ಮದಗಜ ಬಟುತರ ವದನಿಯರು ಕೆಂಪ
ಧರದ ಮಲ್ಲಿಗಿ ಮಗ್ಗಿನ ದನಿಯರು ಚೆಲ್ವ
ಮದನನ ಕದನಕ್ಕೆ ಸದನಿಯರು ಮಾಡುವ
ಹದರೀಗೆ ನೋಡುವ ನದರೀಗೆ ಇನ್ನೊಬ್ಬ
ರಿವರಿಲ್ಲವೆಂಬೂವ ಚದುರಿಯರಿರಲು ॥೧೧॥

ಪುಂಡತನದಿ ಸೊಕ್ಕಿ ಕೂಡಿರ್ದ ಹರೆಯದ
ಮಿಂಡಿಯರ್ಕುಚದೊಪ್ಪು ಚಂಡುಗಳು
ಒಳ್ಳೆ ದುಂಡು ಕಟಿದ ಗೋಲಿ ಗುಂಡುಗಳು
ಮುತ್ತಿನುಂಡಿಯು ಕನಕದ ಗಿಂಡಿಗಳು ಇಂಥಾ
ಮಿಂಡೇರ ಮೊಲೆಗಳ ಕಂಡು ವಿಟರ್ಮರು
ಳ್ಗೊಂಡು ಬೆನ್ಹತ್ತುವ ಭಂಡರನೇನೆಂಬೆ ॥೧೨॥

ನೀಟ್ಕುಚಗಳಿಗೊಳ್ಳೆ ಥಾಟ್ಕಾಂಬು ತುಂಬುಜರ
ಪಾಟ್ಕುಪ್ಪಸವ ತೊಟ್ಟು ಥಾಟ್ಕಾಂಬೋರು ರತಿ
ಬ್ಯಾಟ್ಕಂಥ ಇವರೊಳ್ಳೆ ಘಾಟ್ಕಾಂಬೋರು ಕಾಮ
ನಾಟ್ಕಂತು ನೋಡಲು ಝೂಟ್ಕಾಂಬೋರು ತಮ್ಮ
ಕೂಟ್ಕ ಸೋತವರ್ವೆಸೆ ತಾಟ್ಕಯ್ಯ ನಡಿಸುವ
ರಾಟ್ಕೌಟನುಳ್ಳಂಥ ನಾಟ್ಕ ನಟಿಯರು ॥೧೩॥

ಹಾಡ್ವರೆಲ್ಲರು ತಲಿಗೂಡ್ವರು ಸರಸಗ
ಳಾಡ್ವರು ಶಿರವನಲ್ಲಾಡ್ವರಯ್ಯಾ ಮಂದಿ
ನೋಡ್ವರು ಹಾಸ್ಯ ಮಾಡ್ವರಯ್ಯಾ ಬಡಿದಾಡ್ವರು
ಕೈ ಹೊಡಿ ದೋಡ್ವರಯ್ಯಾ ಸುಳಿ
ದಾಡ್ವರು ಸವಿಮಾತನಾಡ್ವರು ಖರ್ಚಿಗೆ
ಬೇಡ್ವರು ವಿಟಗಾರ್ನ ಕಾಡ್ವರು ಬಿಡದೆ ॥೧೪॥

ಚೊಕ್ಕಟವಾದಂಥ ಬೆಂಡು ಬೆನಕ ಬರ್ಫೆ
ತುಕ್ಕಡಿ ಕಲ್ಯಾಣಿ ಶಾವಿಗಳು ಮನ
ಕಕ್ಕರ ತೋರುವ ಬುಂದೆಗಳು ಕರಿ
ದಿಕ್ಕುವ ಜಿಲ್ಬಿಲಿ ಲಡ್ಡುಗಳು ಚಿನ್ನಿ
ಸಕ್ಕರಿ ಬೆನಕನ್ನೆ ಸೊಕ್ಕು ಜವ್ವನಿಯರು
ರೊಕ್ಕಗಳನು ಕೊಟ್ಟು ತಕ್ಕೊಂಬುತಿಹರು ॥೧೫॥



ಚುರ್ಮುರಿ ಬುಂದೇವು ಪೇರ್ಮೋದಲಾಗಿ ವಿ
ಚಾರ್ಮಾಡಿ ತರಿಸಿ ತಯಾರ್ಮಾಡುತ
ವಿಟರ್ಗೆ ಮಂದಿ ಕೂಡ ಫರಾ ಮಾಡುತ ಬಹು
ಪೇರ್ಮಾಡಿ ತಿನಸು ತಯಾರ್ಮಾಡುತ ಮಹಾ
ಕೂರ್ಮಿಯಿಂ ತುಸ ಉಪಕಾರ್ಮಾಡಿ ಹೊನ್ನಿನ
ಕಾರ್ಮಳಿ ಸುರಿಸುವ ವಾರ್ಮಡದಿಯರು ॥೧೬॥

ಜಾತ್ಕಾಳನತ್ಕುಣಸುತ್ಕಂಣಂಗಳತಿರು
ವುತೆ ಕೈಯ್ಯ ಸೊನ್ನಿ ಮಾಡುವ ಬೇತ್ಕಾರರುಬರ
ವುತ್ಕಲಿತ್ಹಾಡುವ ಸಂಗೀತ್ಗಾರರು ಅತಿ
ಪ್ರೀತ್ಕಾಣಿಸುವ ಸವಿಮಾತ್ಗಾರರು ತಾವೆ
ಸೋತ್ಕಾರದ್ಹಾಂಗ ಮಾಡಿ ಘಾತ್ಯಾದಿ ಸುಲ
ಕೊಂಬುವರ್ಯಾತ್ಗೇನು ಕಡಿಮಿಲ್ಲ ಜಾತ್ಯಾಸಖಿಯರು ॥೧೭॥

ತರಳಣ್ಮಿಯರು ಮಂದಿ ಮುರುಳ್ಮಾಡುವ ನೆವದಿಂದ
ಎರ್ಳಿಮರಿ ನೋಟದಿ ಹೊರ್ಳಿನೋಡಲು ತುದಿ
ಬೆರ್ಳ ಮೊನಿಯಿಂದೆ ಮುಂಗುರ್ಳ ತೀಡಲು ಚೆಲ್ವ
ಕೊರ್ಳ ಮಧ್ಯದ್ಹಾರವ ಸರ್ಳ ಮಾಡಲು ಕಂಡು
ದುರ್ಳ ಮಾರ ಹೊರಡುವಂಥ ಸರ್ಫ ಮೊನಿ ಬೆನ್ನಿಗೆ
ನೆರ್ಳ ಮನದೊಳು ಹಗಲಿರ್ಳ ಮರಿಯಾದೆ ॥೧೮॥

ರೇಶ್ಮಿಯಿಂದ್ಮಾಡುವ ಹಾಸ್ಮಲಗು ಸಾಮಾನು
ದಾಸ ಮಡದಿಯರಿಂದ ಖಾಸ್ಮಾಡಿಸಿ ತಮ್ಮ
ಹಾಸ್ಮಂಚದೊಳು ಹಾಸ್ಗಿ ಬೇಸ್ಮಾಡಿಸಿ ಒಳ್ಳೆ
ಬಾಸ್ಮಲ್ಲಿಗಿಯ ಮೇಲೆ ಸೂಸ್ಮಾಡಿಸಿ ವಿಟರ್
ಯೇಸ್ಮರದಿ ಬಂದರ ಆ ಸ್ಮರನಾಟ ತ
ಮಾಸ್ಮಾಡಿ ತೋರುತ ವಿಲಾಸ್ಮಯದಿಹರು ॥೧೯॥

ಎಲ್ಲಾ ಕ್ಷೇತ್ರಗಳೊಳು ಬಲ್ಲಿದ ಮುಚಖಂಡಿ
ಅಲ್ಲೆ ಕಾಮಿನಿಯರ ಥಾಟವನು ತಮ್ಮ
ನಲ್ಲರ ಕರಸುವ ಬ್ಯಾಟವನು ಅವ
ರಲ್ಲಿ ಮಾಡಿದ ಮೋಹದಾಟವನು ಹೇಮ
ಗಲ್ಲೊಳು ಗುರುನಂಜನೊಲ್ಮಿಯಿಂದಿರುವಂಥ
ಅಲ್ಲಮ ಕಂಡಿದನೆಲ್ಲ ಪೇಳುವನು ॥೨೦॥

* * *

## ೭. ಹುಬ್ಬಳ್ಳಿಯ ಹಾಡು

ಶ್ರೀಗುರು ನಿತ್ಯ ನಿರ್ಗುಣನೆ ನಿರ್ಮಲ ನಿಗ
ಮಾಗಮ ನರನುತ ರಂಜಿತ ದಯಾಗನನೇ ದಿವ್ಯ
ಭೋಗಿ ಕಂಕಣ ನಗ ಗೇಹನನೇ ಶಿವ
ಯೋಗಿ ಜನರ ಭವನೀಗಿಹನೇ ಕೃತಿ
ಸಾಗಿಸೆನ್ನವಗುಣ ನೀಗಿ ಸದ್ಗುಣವಿತ್ತು
ಬೇಗದಿ ಸಲಹೆನ್ನ ಶ್ರೀ ಗುರುನಾಥಾ ॥೧॥

ಧರೆಯೊಳಗಧಿಕವಾಗಿ ಮೆರೆವಂಥ ಹುಬ್ಬಳ್ಳಿ
ಪುರವ ಮೋಹಿಸುವೆ ವಿಸ್ತಾರದಿಂದ ಕಣ್ಣಿ
ವರ ರಮ್ಯವಾದ ಸೌಧಾಗ್ರದಿಂದ ಪುಷ್ಪ
ಸರಗಳಿಂದಿಡಿದ ಬಜಾರದಿಂದಿ ಇದು
ವರ ತೀರದಿರಲಿನ್ನು ಸೂಳಿಗೇರಿಯೊಳಿರ್ಪ
ನೆರೆ ವಾರನಾರಿಯರ್ಗಡಣವ ಪೇಳ್ವೆ ॥೨॥

ಕನ್ಯೆಯರ್ಸುಗುಣ ಸಂಪನ್ನೆಯರ್ಕುಡಿ ನೋಟ
ಸೊನ್ನೆಯಿಂ ವಿಟರನ್ನು ಕರೆಯುತಲಿ
ರನ್ನಗನ್ನಡಿಯೊಳು ಮುಖದೋರುತಲಿ ಚಲ್ವ
ಪನ್ನಗವೇಣಿಯನುತಲಿ ಸುಖ
ಸಮ್ಮೋಹದಿಂದಲಿ ವಿಟರನ್ನ ಮರುಳ್ಮಾಡಿ
ಮನ್ಮಥನಾಟಕ್ಕೆ ಮರುಳದಿಂದಿಹರು ॥೩॥

ಸುಗುಣೇರು ಸುರತದ ಹಗಣೇರು ಪೊಸ್ಗಳ
ಸೊಗಸಿಂದ ಕೊಡುವರ್ಗೆ ಬಗೆಗೊಂಬರು ಮಿಥ್ಯೆ
ಹಗರಣ ಸುರಿಸಲು ನಾಳ್ಗೆಂಬರು ಅವ
ರ್ಬಗೆ ಬಗೆ ಬದುಕನ್ನು ಸೂರ್ಗೊಂಬರು ಮತ್ತೆ
ಸೊಗಸುಳ್ಳ ಸಖಿಯರ್ಗೆ ನೂರ್ಪೊನ್ನು ಕೊಡುಯೆಂದು
ಹಗರಣವನು ತೋರಿ ಜಗಳದಿಂದಿಹರು ॥೪॥

ಸರ್ರನೆ ಮನೆಯಿಂದ ಬರ್ರನೆ ಹೊರಡೂತ
ಘುರ್ರ ಘುರ್ರನೆ ಕಂಬು ತಿರವೂವರು ರಂಗ
ವರ್ಣದ ಮಣಿಗಳಿಂದ ತೋರುವರು ವಿಟ



ಸರ್ವಮಂದಿಯ ನೋಡಿ ಕರೆಯುವರು ಮಹಾ
ಮರ್ಮವ ತಿಳಿದು ವರ್ತನೆ ತರ್ಗಿಸುವರು
ಸರ್ವಶಾಸ್ತ್ರದ ಕಳ ಕೀರ ವಾಣಿಯರು ॥೫॥

ತರುಳೇರು ಮನ್ಮಥ ಸರಳೇರು ಉರುಗನ
ಹೆರಳೇರು ಮುರಿದುಂಬಿಗುರುಳೇನು ಕರಿ
ಕರದೊಳ್ಮೆರೆವ ವಜ್ರದರ್ಥಳೇಯರು ಇಟ್ಟ
ಬೆರಳಿನುಂಗುರ ಶಂಖಗೊರಳೆಯರು ಬಂದು
ಭರದಿಂದ ವಿಟರೆದೆಗ್ಗುರಳ ನೊಗೆದು ನಕ್ಕು
ಪುರುಷರ ಮರುಳ್ಮಾಡಿ ಸರಸದಿಂದಿಹರು ॥೬॥

ಹರದಿಕಂಕಣಗಯ್ಯ ತಿರವೂತ ವಿಟರನ್ನ
ಮರುಳ್ಮಾಡಿ ಮನೆಯೊಳ್ಕರದೊಯ್ಯುತಲಿ ಪಂಚ
ಶರಣ ಬಾಣಗಳನ್ನ ಸುರಿಸುತಲಿ
ಸುರ ಕರಿ ತೋಳ ಪಾಶದಿ ಕಟ್ಟುತಲಿ ಚೆಲ್ವ
ಸ್ಮರರಾಜನಾಜ್ಞೆಯಿಂ ಪಿಡಿದ ತಮ್ಮಯ ಕುಚ
ಗಿರಿಯನ್ನು ಉರದಲ್ಲಿ ಪೇರುತ್ತಲಿಹರು ॥೭॥

ಬೇಡ್ವರು ಹಣಗಳ ಮಾಡ್ವರು ಮುನಿಸನು
ನೋಡ್ವರು ನಲ್ಲರ್ವಾರೆನೋಟದಲಿ ಮತ್ತೆ
ಕೂಡ್ವರು ಸೊಗಸು ಮಾತಾಡ್ವರಲ್ಲಿ ಸುಸ್ತಿ
ಮಾಡ್ವರು ಮನಸಿಜನಾಟದಲಿ ಮನ
ನೋಡ್ವರು ತೋಡ್ವರು ಪಾಡ್ವರು ಜನ ಮರು
ಳ್ಮಾಡ್ವರು ಕಾಡ್ವರು ನಾಡ್ವನಿತೆಯರು ॥೮॥

ಚೆಂದುದರ ಪಾದ ಮಂಡೆಯರು ಮಳ
ಲ್ದುಂಡೆಂಬ ಘನತರಕುಂಡೆಯರು ಕುಚ
ಚೆಂಡೆಂಬ ಹೊಡೆಚಂಡ ಕೊಟ್ಟು ನಲ್ಲರತಿಯ
ದಂಡಿಸಿ ಕೊಳುತಿಹ ಪುಂಡ ಗರತಿಯರು ॥೯॥

ಅಚ್ಚ ಮುತ್ತಿನ ಬೊಟ್ಟ ಹಚ್ಚುತ ಫಣಿಯಲಿ
ಬಿಚ್ಚಿ ಕಂಚುಕ ಗಂಧ ಹಚ್ಚುತಲಿ
ನಿಚ್ಚ ನಿಚ್ಚ ಕಾಡಿಗಿ ಕಣ್ಗೆ ತೊಡೆಯುತಲಿ ನಮ್ಮ ದೃಷ್ಟಿ
ಹಚ್ಚಿ ಮದನಬಾಣ ಚುಚ್ಚುತಲಿ ವೆಚ್ಚಕ್ಕೆ
ಬಿಚ್ಚಿ ಕೊಡು ಪಚ್ಚದುಂಗುರವೆಂದು
ಮೆಚ್ಚಿದವರ್ತೆಲಿಗ್ಗುಚ್ಚಿ ಎಣ್ಣಿಯನು ॥೧೦॥

ಮೇಲ್ಮನಿಯೊಳ್ತಮ್ಮ ಮೇಲ್ಮಂಚದೋಳ್ಕುಳಿತು
ಸಾಲ್ಗನ್ನಡಿಗಳನ್ನು ನೋಡುವರು
ಒಲ್ಮೆಯೊಳ್ಮನ ಭರದಿಂದ ವೋಡ್ಡುವರುಬಹು
ಜಾಲ್ಮಂದಿಗಳ ಪೊನ್ನ ಬಿಡಿಸುವರು ಚಿರ
ಕಾಲ್ಗಳಿಸಿದ ಪೊನ್ನ ಹಾಳ್ಮಾಡಿ ಸುರಿಸುವ
ಸಾಲ್ಸಾಲ ಚೀಲ್ಗಳ ತುಂಬಿಡುತಿಹರು ॥೧೧॥

ರೊಕ್ಕವು ಘನವಾಗಿ ಠಕ್ಕಿಸಿ ವಿಟರನ್ನ
ಸೊಕ್ಕಾನೆಯಂದದಿ ತಿರಗುವರು ಇವ
ರ್ಬೊಕ್ಕಸದೊಳು ರೊಕ್ಕ ಸುರಿವರು ತಮ್ಮ
ತಕ್ಕಂಥ ವಿಟರನ್ನು ಜೈಸುವರು ಅವ
ರ್ತಕ್ಕಂಥ ವಿಟರ್ಬರಲು ಕುಚದೊಳ್ಕೈ ಇಕ್ಕಿ
ಕ್ಕಿಸುವರು ಸರ್ವರೊಕ್ಕಗಳಾ ॥೧೨॥

ಹೆಚ್ಚಿನ ಪೊನ್ಗಳ ಬಚ್ಚಿಟ್ಟು ಸರಗಿಯು
ಅಚ್ಚ ಭಂಗಾರ ಬಳಿ ತೊಡುವರು ಈ ನವ
ಪಚ್ಚೆಯ ನೀಲ್ಮಣಿ ಹಾಕುವರು ಮತ್ತೆ
ನಿಚ್ಚಳದೋಲೆಯ ಬೇಡುವರು ಹೀಗೆ
ಹೆಚ್ಚಿನಾಭರಣಗಳ್ಮೆಚ್ಚಿನ ರಾಗುಟಿ
ರಚ್ಚಿನ ಚೌರಿಯ ಹುಡುಕಾಡುತಿಹರು ॥೧೩॥

ರೊಕ್ಕವ ಕಳಕೊಂಡು ಮುಕ್ಕುತ ಮಣ್ಣನು
ಸಿಕ್ಕ ಸಿಕ್ಕವರನ್ನು ನೋಡುವರು ಜನ
ಪಕ್ಕ ಪಕ್ಕನೆ ಕಂಡು ನಗುವುವರು ನಮ್ಮ
ತಕ್ಕ ಶಿಕ್ಷವು ಸಿಕ್ಕಿತೆಂಬುವರು ಮುಂದೆ
ಮುಕ್ಕಣ್ಣ ಪರಶಿವನ್ನೊಕ್ಕಳದಿಂದಲಿ
ಭಕ್ಕರೆ ನಮಗೆಂಟು ಸಿಕ್ಕಿತೆಂಬುವರು ॥೧೪॥

ಮುಪ್ಪಾಗಿ ಗಲ್ಲವು ಸೊಪ್ಪಾಗಿ ಕುಚಗಳು
ಹಿಪ್ಪಾಗಿ ದಂತಗಳು ಬೀಳುತಲಿ ಕೇಶ
ವಪ್ಪದ ಬೈತಲೆ ಕದಡುತಲಿ ಮಸ್ತಕ
ಪೋಗಿ ಶುಭ್ರವು ತೋರುತಲಿ ಹಡ್ಲಿ
ತಪ್ಪದೆ ತಲೆಯೊಳು ಪೊತ್ತು ಭಿಕ್ಷವ ಬೇಡಿ
ತುಪ್ಪ ಹೋಳಿಗೆಯನ್ನು ಬಯಸುತ್ತಲಿಹರು ॥೧೫॥



ಪುರುಷನ ಸರಿಯೆಂದು ಹರುಷದಿ ವಿಟನೊಳು
ಸರಸದಿ ರಮಿಸುವರ್ನೈಷ್ಠೆಯಲಿ
ಪರಪುರುಸರ ಜರಿವರ್ತತ್ಕಾಲದಲಿ ತಮ್ಮ
ಶರೀರವನೊಪ್ಪಿಸಿ ಹರುಷದಲಿ ಇಂಥಾ
ಹರದೆಯರ್ಭಕ್ತಿಗೆ ಪುರಹರ ಮೆಚ್ಚುತ
ಭರದಿ ಕೈಲಾಸಕ್ಕೆ ಕರೆದೊಯ್ಯುತಿಹರು ॥೧೬॥

ಅತಿಶಯದ ವಿದ್ಯೆದ ಮತಿಯೆನಗಿಲ್ಲದೆ ಮಂದ
ಮತಿಯಿಂದ ರಚಿಸಿದೆ ಸ್ಥಿತಿ ಮಾತವ ಕುಶಲ
ಮತಿವಂತ ಜನರಿದರಿತಿಹಾಸದ ಸದ
ಗತಿಯಂತೆ ಹಾರುವ ಅಡಿಪ್ರಾಸವಾ ನಿಮ್ಮ
ರತಿಯುಳ್ಳ ಶಿಶುವಿನ ಸಮವೆಂದು ತಿದ್ದಿಸು
ಮತಿಯಿಂದಲೋದಿರಿ ಖತಿಯನ್ನು ಬಿಟ್ಟು ॥೧೭॥

ಧಾರಿಣಿಯೊಳ್ತಿ ಮೀರಾರಿಯ ಪ್ರಭೆಯಂತೆ
ತೋರುವ ಧಾರ್ವಾಡ ಪುರವಾಸನು ತತ್ರ
ಪುರತರ್ಬಿಯತ ಸಾಲಿಮಠವಂತನು ಮದ
ನಾರಿವಾಹನನಾಲಿಂಗಾಭ್ಯನು ಇವ
ರ್ಚಾರು ಪುತ್ರ ಚನ್ನಬಸವಯ್ಯ ಸಾರಿದ
ನೀರಜಾಕ್ಷಿಯರ ವೈಯ್ಯಾರವ ಕಂಡು ॥೧೮॥

* * *

## ೮. ಹೆಂಗ ಮಾಡಲೆವ್ವ ತಂಗಿ

ಹೆಂಗ ಮಾಡಲೆವ್ವ ತಂಗಿ
ಗಂಡ ಗಂಟ ಬಿದ್ದ ಕೊಂಗಿ ॥ಪ॥

ಕೊಂಡ ತಂದಾ ಹೆಂಡಾ ಭಂಗಿ
ಪುಂಡ ಹೋಲಾ ಕಳದ ಝುಂಗಿ
ಉಂಡಕೂತ ಹೊಗಿಯ ನುಂಗಿ
ತೊಡಲಾಕಿಲ್ಲ ಅಂವಗಂಗಿ ॥೧॥

ಬಂಗಾರಬಳಿ ಸಿಂಗಾರ ಸರಗಿ
ಮಾರಿದವ್ವ ಗಂಗಾಳ ಚರಗಿ
ಕೊಡ್ಲಿ ಕುರಪಿ ಕೊಮ್ಮಣಗಿ
ಉಳಿಯಲಿಲ್ಲ ಊದಗೊಳಗಿ ॥೨॥

ಮನಿಯಾಗ ಉಳದು ಒಡಕ ಗಡಗಿ
ಮಾಡಲಿಲ್ಲ ನಾನು ಅಡಗಿ
ತಿರಿಗಿ ಬಂದ ತಗೊಂಡ ಬಡಗಿ
ಕುತ್ತೀನವ್ವಾ ಗದ್‌ಗದ್‌ನಡಗಿ ॥೩॥

ಹೇಳಲಾರೆ ನಾ ಯಾರೀಗಿ
ಮನ್ಯಾಗಿಲ್ಲ ಕಸಬರಗಿ
ಬೀಳತೀನ ಭಾವಿ ಕೆರಿಗಿ
ಕೂತೀನವ್ವ ಮನದಾಗ ಮರಗಿ ॥೪॥

ಮನಸ್ಯಾನ ಮೃತ್ಯು ಭಂಗಿ
ಸಿದ್ಧನ ಪ್ರಸಾದ ಅಂತಾರ ತಂಗಿ
ಹಗ್ಗಾ ಹಚ್ಚಿ ಹರಕ ಚಪ್ಲಿಗಿ
ಜಗ್ಗಿ ಒಗಿರೆವ್ವಾ ಅವನ ಮಾರೀಗಿ ॥೫॥

ಗುಣದಾಳ ಈಶಾ ಯೋಗಿ
ಗಂಡಸ ಹಚ್ಚ ಹಾದೀಗಿ
ಬಾನಾ ಕೊಡತೀನ ಬಿಳಿಗೋದಿ ಹುಗ್ಗಿ
ಹೊಡಿಲಿ ರಾಮಾಪೂಜಾರಿ ಜಗ್ಗಿ ॥೬॥

* * *



## ೯. ಹಸಗೇಡಿ ಹೆಣ್ಣು

ಹೆಚ್ಚಿನ ಹೇಣ್ತಿ ಗಂಟ ಬಿತ್ತೊ ಪಡಶೆಂಟಾ ॥ಪ॥

ತಿರಗೂಳ ಪತ್ತಲ ಉಟ್ಟ
ತಿಳೂವಾದ ಜಂಪರ ತೊಟ್ಟ
ಬೈತಾಲಿ ಭಾಳ ನೇಟ
ಬಳಿ ಕೈಯಾಗಿಲ್ಲ ಒಟ್ಟ ॥೧॥

ಬಡತನಾ ಭಾಳ ಕೆಟ್ಟ
ದುಡಿಲಾರ್ದ ಕೈ ಕಟ್ಟ
ಮನಿಯಾಗ ಮಕ್ಕಳೆಂಟಾ
ಹಿರ್‍ಯಾರದಿಲ್ಲೊ ಗಂಟಾ ॥೨॥

ಚಟಾಕೇಳ ಹದಿನೆಂಟಾ
ಚಹಾ ಬೇಕ ನೇಮಾ ನಿಟ್ಟಾ
ಹೇಸಿ ಎಲಿ ಅಡಕಿ ಚುಟ್ಟಾ
ನಾಸೀ ಸೇದೂಳ ನಾಚ್ಕೆ ಬಿಟ್ಟಾ ॥೩॥

ಗಾಣದ ಎಣ್ಣಿ ತಂದಿಟ್ಟ
ತಾ ಮುಟಗಿ ಮಾಡಿ ಹೊಡದಾಳ ಗೋಟಾ
ಹಾಕಿತಿರುವಿ ಇಟ್ಟಾಳ ಹಿಟ್ಟ
ತಿನವಲ್ಲಂದ ನನ್ನ ಹಾಟಾ ॥೪॥

ನಾರಿಕೈಮಾಗ ಇಲ್ಲ ಗಂಟ
ತೀರಬೇಕಲ್ಲಾ ಚ ಟಾ
ಮಾರಿದಾಳ ಮನ್ಯಾನ ಹಿಟ್ಟ
ತರಾಂವ ಬ್ಯಾರೆ ಅಕಿಗೇನ ಸೆಂಟಾ ॥೫॥

ನಡತಿ ನೋಡಿ ಬತ್ತ ಸಿಟ್ಟಾ
ಬಡದ ಮುರಿಬೇಕಂದ್ರ ಸೊಂಟಾ
ಮನಿ ತುಂಬ ಮಕ್ಕಳೆಂಟ
ಮಾಡವರ್‍ಯಾರ ಸೋಸಕಟ್ಟಾ ॥೬॥

ಗುಣದಾಳ ಈಶಾನೆ ಶ್ರೇಷ್ಠ
ಪೂಜಾರಿ ರಾಮನ ಕೆಟ್ಟಾ
ಹೆಂಡತಿ ಮಾಡೋ ಮಾಟಾ
ನಡೀ ಬೇಕ ಚೈನಿ ಒಟ್ಟ ॥೭॥

* * *

## ೧೦. ಹೆಂಡಾ ಕುಡಿಯುವ ಗಂಡನ ಸಂಸಾರ

ಕುಡದ ಕೂಳಿಗಿ ಬಂದ । ಕುಗರಾಮ ನನ ಗಂಡಾ
ಕೋಳಿ ಕೋದಿಲ್ಲಂದಾ । ಕೊಡಲಿ ತಗೊಂಡಾ ॥ಪ॥

ಭಾಗ್ಯ ಹೀನರವ್ವ ಬಡತನ ಭುಂಡಾ
ಬಲುಗೋಳು ಮನಿಯಾಗ ಮಕ್ಕಳ ಹಿಂಡಾ
ಉದ್ಯೋಗಿಲ್ದ ಊರಾಗ ತಿರಗಾಂವ ಉಂಡಾ
ಗುದ್ಯಾಡಿ ಸಾವತೀನ ಇವನ ಮಾಡಿಕೊಂಡ ॥೧॥

ಕುಟದ ಕಲ್ಲಿನ ಮಠದವರಪ್ಪಾ ಪುಂಡಾ
ಹಟಕೋರ ಹದಗೇಡಿ ಕೇಳವ್ವ ಗಂಡಾ
ಚಟಕಾಗಿ ಕುಡಿಯಾಂವ ಛೀಮಾರಿ ಹೆಂಡಾ
ಕಟುಕರ ಮನಿಗ್ಹೋಗಿ ತಂದವ್ವ ಖಂಡಾ ॥೨॥

ಬಡ್ವ್ಯಾಗ ಹೊಲ ಹೋತ ಒಡ್ಡ ಮನಗಂಡ
ಗುಡ್ಡದಂಥಾ ದೊಡ್ಡ ಎತ್ತೆರಡು ಹಂಡ
ಕೊಡ್ಲಿ ಉಳಿಲಿಲ್ಲ ಕೂರಗಿದಿಂಡ
ಅಡ್ಡುಣಗಿ ಅಳೂ ಸೇರು ಕಲಬತ್ತ ಗುಂಡಾ ॥೩॥

ಸೀರಿ ಹರಕ ಆರ ಹಾಕೀನ ದಿಂಡ
ಕೂರಿ ಮೈಯಾಗ ಕುಬಸೊಂದ ಕೊಂಡ
ಆರ ತಿಂಗಳಾತ ಎಣ್ಣಿಲ್ದ ಎರಕೊಂಡ
ಕರಿಮಣಿ ಹೊರತಿಲ್ಲ ಗುಳದಾಳಿಗುಂಡ ॥೪॥

ಗುಣದಾಳ ಊರಾಗ ಗುಮ್ಮ ನೀರಿನ ಹೊಂಡ
ಬಿದ್ದೀನ ಬಂದಾರು ಮಕ್ಕಳ ಕರಕೊಂಡ
ನೀರೀಗಿ ಬಂದ ರಾಮ ನೋಡಿ ಹೊಯ್ಕೊಂಡ
ಕುಡಿಯಬಾರದಂದ ಕುಲಗೇಡಿ ಹೆಂಡ ॥೫॥

* * *



## ೧೧. ದೇವದಾಸಿ ಪದ

ಸತ್ ಎಂಬುವ ಪತ್ತಲುಟ್ಟು
ಚಿತ್ ಎಂಬುವ ಕುಬಸಾ ತೊಟ್ಟು
ಆನಂದ ಎಂಬುವ ನತ್ತನಿಟ್ಟು
ತಿರಗೀನವ್ವಾ ನಾ ಜಲ್ಲ ಬಿಟ್ಟು ॥೧॥

ನಾಮವೆಂಬುವ ಬಳೆಯು ಎಂಟು
ನೇಮವೆಂಬುವ ಹಚ್ಚೇಬಟ್ಟು
ಕಾಮವೆಂಬುವ ಕುಳ್ಳ ಸುಟ್ಟು
ಪ್ರೇಮವೆಂಬುದ ನೊಸಲಿಗಿಟ್ಟು ॥೨॥

ಮೌನದಿಂದಲಿ ಕೂದಲುಚ್ಚಿ
ಜ್ಞಾನವೆಂಬುವ ಎಣ್ಣೀ ಹಚ್ಚಿ
ಹೀನಗುಣಗಳ ಹೊಲಸ ಹಿಕ್ಕಿ
ಪುಗ್ಗಾ ತಗದೀನ ಹೆಳಲ ಹಾಕಿ ॥೩॥

ಕರ್ಮ ಚಂಚಿಯ ಖಾನೆ ಹುಡಕಿ
ಧರ್ಮವೆಂಬುದ ಇಟ್ಟೇನ ಅಡಕಿ
ಮರ್ಮವೆಂಬುವ ಎಲಿಯ ಪುಟಕಿ
ಕೊಂಡ ಕೊಟ್ಟವ್ವ ಗೆಣೆಯ ಬೆರಕಿ ॥೪॥

ಕರ್ಮದ ಹುಡಗೊಬ್ಬಕರದ ನೆಚ್ಚಿ
ಹಿಡದ ಕೇಳವ್ವ ನನ್ನ ಗಚ್ಚಿ
ಕೆಡಸಲಾಕಂವ ಕಳದ ಕಚ್ಚಿ
ಹೊಡದನೆವ್ವಾ ಚಪ್ಲಿ ಉಚ್ಚಿ ॥೫॥

ಮುಕ್ತಿ ಹುಡುಗನ ರೂಪ ನೋಡಿ
ಕರದನೆವ್ವಾ ನಾ ಕೈ ಮಾಡಿ
ನೋಡ್ದ ಹೋದನವ್ವಾ ಅಲ್ಲಿಂದೋಡಿ
ಆದನೆವ್ವಾ ಅತ್ತ ಮಾನಗೇಡಿ ॥೬॥

ಎಂಟು ಮಂದೀನ ಇಟ್ಟೇನವ್ವ
ಆರಮಂದೀನ ಬಿಟ್ಟೇ ನವ್ವ
ಇಬ್ಬರಿಗಿನಾ ಕೆಟ್ಟೇನವ್ವಾ
ಎಲ್ಲಾರೊಳು ನಾ ನಟ್ಟೇನವ್ವಾ ॥೭॥

ಖಾಸಗುಣದಾಳಧೀಶ ಗೆಣಿಯ
ಸ್ವರ್ಗ ಲೋಕ ಅವನ ಮನಿಯ
ಮಾಡಲೆಳಸುವೆ ನಾನು ಸನಿಯ
ಒಳಗ ಬಿಡಲು ರಾಮ ಹೊಣಿಯ ॥೮॥

* * *



## ೧೨. ಬೆಕ್ಕಿನ ಬೈಬ್ಯಾಡ

ಬೆಕ್ಕಿನ ಬೈಬ್ಯಾಡ
ಬಾಲಿ ನಿನಗದಲ್ಲ ಜೋಡ ॥ಪಲ್ಲ॥

ಬ್ಯಾಳಿ ತಿಂದದ ಬೆಕ್ಕ ಒಳ್ಳೆ ಹರ್ಷ ನಿನಗನಸ
ಅದರ ಮ್ಯಾಲ ನೀ ಮಾಡೀದಿ ಮನಸ
ಬೆಕ್ಕ ಬರಲಿಕದರ ಬಿದ್ದೀತ ಕನಸ
ಬಿದ್ದೋಡಿ ತಗಿ ಅದರ ಮ್ಯಾಲಿನ ಮನಸ ॥೧॥

ಉಂಡ ಹಾಸಿದಾಳವ್ವ ಹೊಸದೊಂದ ಕೌದಿ
ಬೆಕ್ಕ ಬರಲಿಲ್ಲಂತ ನೋಡತಾಳ ಹಾದಿ
ಬಾಲಿಗಿ ಬರಲಿಲ್ಲ ಬೆಳಗಾನಾ ನಿದ್ದಿ
ಅಕ್ಕನ ಕೇಳತಾಳ ಬೆಕ್ಕಿನ ಸುದ್ದಿ ॥೨॥

ಬೆಕ್ಕ ಬಾವುಗ ಬಂದಿತ್ತ ಭಾರಿ
ನೆಕ್ಕಲಾಕ ತೆಳತನಾ ಹಾಲಿನ ಸ್ವಾರಿ
ಬಿದ್ದಲ್ಲೆ ಎತ್ತ್ಯಾಳ ಎದಿಮಟ ಸೀರಿ
ಗುದ್ದಿತ ಎರಡೂ ಮಣಕಾಲ ಊರಿ ॥೩॥

ಬೆಕ್ಕ ಓಡಿತವ್ವ ಗ್ವಾಡೀಯಹಾರಿ
ಮುಕ್ಕಾಗಿ ಹೋಯಿತ ಮಣ್ಣೀನ ಸ್ವಾರಿ
ಬಳಾಬಳಾ ಹಾಲೆಲ್ಲ ಮನಿತುಂಬ ಸೋರಿ
ಊರೀಗ ಊರ ಹೊಲಸೆದ್ದು ನಾರಿ ॥೪॥

ಬೆಕ್ಕ ಕಟ್ಟ್ಯಾಳವ್ವ ನೆರಮನಿ ರಂಭಾ
ತೆಕ್ಕೆ ಹಾಕಿ ಹಿಡದ ನಡಮನಿ ಕಂಬಾ
ಅಕ್ಕನ ಮುಂದನಿತ್ತ ಹೊಡದಾಳ ಬೊಂಬಾ
ಕಾಮದ ಹಾಲಿಳುದು ಕುಂಭದ ತುಂಬ ॥೫॥

ಗುಣದಾಳ ಈಶನ ಗುಡಿ ಸೇರಿತ ಬೆಕ್ಕ
ಗುರುಬೋಧ ಕೊಟ್ಟಾನ ರಾಮಣ್ಣ ಅದಕ
ಮಾಡಿಸಿ ಹೊಂಡದಾಗ ಮೂರ್‍ಹೊತ್ತ ಜಳಕ
ಬಿಟ್ಟಾನ ಬಾಲೀದು ಹರಿಸಿ ತಾ ತಳಕ ॥೬॥

* * *

## ೧೩. ಮೋಸ ಮಾಡಿದ ಹೆಣ್ಣು

ಮಂದೀದ ಮಾಡಬೇಕಂದ್ರ ಮೋಸ
ತಂದಾಗೂದು ಮದಲ ನಾಶ
ಇಂದು ಹೇಳುವೆ ಬಂದ ನಾ ಕೂಸ
ತಂದಿ–ತಾಯಿಗಿ ಮಾಡಿ ಶರಣ ॥ಪಲ್ಲ॥

ಬಿದ್ದೋಡಿ ಇದ್ಲ ಬೆರಕಿ ಹೆಂಗ್ಸ
ಸಾಧೂನ ಮ್ಯಾಲ ಮಾಡಿ ಮನ್ಸ
ಕೊಂದ್ಲಕೇಳ ಆರ ಕೂಸ ॥ ಕೆಟ್ಟ ಕಾಮನಾ

ಭಾರಿ ಗುಣದಾಳ ಊರ ಮುಂಡಿ
ನಾರಿ ಇದ್ಲ ಭಾಳ ಹಂಡಿ
ಉರಿ ಬಂದ ಸತ್ತ ಗಂಡ ಸತ್ಯವಂತನಾ
ಮಕ್ಕಳಿದ್ದು ಆರ ಗಂಡ
ತಿಂದ ಆಗ್ಯಾಳ ತೊಲಿ ತುಂಡ
ಹರೇದ ಹುಡಗರ ಕಂಡ । ಹಾಕೂಳ ಗೋಣ

ಊರ ಬಿಟ್ಟ ದೂರ ಮ್ಯೆಲ
ಬಾವಾ ಇದ್ದ ಭಾಳ ಸೇಲ
ಭಿಕ್ಷಾ ಬೇಡಾಂವ ನಿತ್ಯಕಾಲ । ಊರ ಒಳಗನಾ
ಆತ ಮನಸ ಅಂವನ ಮ್ಯಾಲ
ಸಿಸ್ತ ಕಾಸಿ ಸೇರ ಹಾಲ
ಬಿದ್ದ ಕರ್ದ್ಲ ಅವನ ಕಾಲ । ಕುಡೀ ಬರ್ರೆಂತ

ಭಾರಿ ಭಕ್ತಿಲಿಂದ ರಂಭಿ
ಬಾವಾ ಬಂದ ಕೇಳಿ ನಂಬಿ
ಕುಡಿಬೇಕ ಅಂದ ಖಿಬಿ । ಕಾಸಿದ ಹಾಲನಾ
ಹಾಲ ಕೊಟ್ಲು ಸಕ್ರಿ ಹಾಕಿ
ಹಾದರಗಿತ್ತಿ ಹಾದ್ಲು ತೆಕ್ಕಿ
ಬಾವಾ ಭಾಳ ಅಂಜುಬುರಕಿ । ಹೊರಗ ಜಿಗದಾನಾ



ಹೆಂಗ್ಸಮದಲ ಭಾಳ ಕೊಂಗಿ
ಸಾಧೂನ ಮೈಯಾಗ ಇಲ್ಲ ಅಂಗಿ
ಕೈಗಿ ಸಿಕ್ತು ಕಳೀತು ಲುಂಗಿ । ಬಲೇ ಓಡ್ಯಾನ
ಸಾಧು ಮಾಡಲಿಲ್ಲ ಸಂಘ

ಆದ್ಲ ಕೇಳ ಮಾನಭಂಗ
ಅಂವನ ಮ್ಯಾಲ ಇಟ್ಲುಖಂಗ । ಖೊಟ್ಟಿ ಹೆಂಗಸಾ

ಸಾಧೂನ ಕೊಲಬೇಕಂತ ಖೋಡಿ
ಆರ ಕರ್ಚಿಕಾಯಿ ಮಾಡಿ
ವಿಷಾ ತುಂಬ್ಯಾಳ ತೀಡಿ ತೀಡಿ । ಊರ ತಿಳಗೇಡಿ
ಬರತಾನಂತ ಭಾಳ ಮಾಡಿ
ಹಾದಿನೋಡತಾಳ ಲೌಡಿ
ಇರಬಾರ್ದ ಇಂಥಾ ಗುಣಗೇಡಿ । ಹೆಣ್ಣುಮಗಳ

ಮರುದಿವಸ ಭಾವಾ ಬಂದ
ಅಡ್ಡ ಬಿದ್ಲ ಹೋಗಿ ಮುಂದ
ಉಳ್ಯಾಕ ಏಳ್ರಿ ಅಂದ್ಲ । ಒಳ್ಳೇಕ್ಕಿನಾ
ಸಾಧು ಹೇಳ್ದಕಿ ಮುಂದ
ಶನಿವಾರ ಉಪವಾಸನಂದ
ಒಲ್ಲೇಳ ತಾಯೀ ಅಂದ । ಕೈ ಮುಗದ'

ಊಟಾದ್ರ ನಿಮ್ಮದೀಗ
ಒಯ್ಯರಂದ್ರ ಜೋಳಗ್ಯಾಗ
ತಂದ ಹಾಕೀದಾಳ ಬೇಗ । ಕರ್ಚಿಕಾಯೀನಾ
ಸಾಧೂಗಿದೇನ ಗೊತ್ತ
ನಾರಿ ನಗತಾಳ ನಿತ್ತ
ರಾತ್ರಿ ಹೋಗತಾನ ಸತ್ತ । ಚಿಂತಿ ಹೋಯ್ತು

ಸಾಧೂ ಹ್ವಾದ ಅವಸರ ಮಾಡಿ
ಮಳಿ ಇಳಿದಿತ್ತ ಸುತ್ತೂಕಡಿ
ಜೋಳಗಿ ಇಟ್ಟ ಚಾಟ ನೋಡಿ । ಮಲಗಿಕೊಂಡಾನ
ಹಬ್ಬ ಇತ್ತ ಕೇಳ್ರಿ ಮುಂದ
ಕರಿಲಾಕ ಅಕಿ ಅಣ್ಣ ಬಂದ
ಮಳಿಗಿ ಸಿಕ್ಕ ಒಳಗಬಂದ । ಸಾಧೂನ ಜೋಪಡ್ಯಾಗ

ಸತ್ಕಾರ ಮಾಡಿ ಸಾಧು ಅಂದ
ನೀ ತೋಸಗೊಂಡ ಬಂದಿ
ಗಂಟ ತಗದಕೊಟ್ಟ ಉಣ್ಣಂದ । ಕರ್ಚಿಕಾಯಿನಾ
ಬಡತನಾ ಅಂದ್ರ ಭಾಳ ಕೆಟ್ಟ
ಬರಿಗೈಲೆ ನಾ ಬನ್ನಿ ಹೊಂಟ
ತಂಗಿ ಮಕ್ಕಳಿಗಿರ್ಲಿ ಗಂಟ । ಕಟ್ಟಿ ಮಲಗಿದನಾ

ಹೊತ್ತ ಹೊಂಟ ಅವಸರ ಮಾಡಿ
ತಂಗೀ ಮನೀಗಿ ಬಂದ ಓಡಿ
ಮಾಂವ ಬಂದಾನಂದ ನೋಡಿ । ಹಾದೂ ತೆಕ್ಕೀನಾ
ತಡಾ ಮಾಡಲಿಲ್ಲ ಬಂಟ
ಬಿಚ್ಚಿಕೊಟ್ಟ ಮಕ್ಕಳ್ಗಿ ಗಂಟ
ಆರೂ ಮಕ್ಕಳ ತಗೊಂಡ ಹೊಂಟು । ಕರ್ಚಿ ಕಾಯೀನಾ

ಬೆಳಿಯುವಂಥಾ ಎಳಿ ಕೂಸಾ
ತಿಳೀಲಾರ್ದ ತಿಂದೂ ವಿಷಾ
ತೇಕತಾವ ವಸಾವಸಾ । ಸಂಕಟಾಗೈತಿ
ಬಿದ್ದ ಬಿದ್ದಾಡಿ ಸತ್ತೂ ಕೂಸು
ಗಾಬರಿರ್‍ಯಾಗಿ ನಿಂತ್ಲ ಹೆಂಗ್ಸು
ಬೈಯ್ಯತಾಳ ಮಾಡಿದಿಮೋಸ । ಅಣ್ಣಗನಕೋತಾ

ಹೇಳತಾನ ಗಾಬರ್‍ಯಾಗಿ
ಊರ ಹೊರಗ ಇದ್ದ ಜೋಗಿ
ನಿಂತೆ ನಾ ವಸ್ತಿ ಹೋಗಿ । ಕೊಟ್ಟ ಕರ್ಚಿಕಾಯಿನಾ
ಬರಿಗೈಲಿ ಬನ್ನಿ ಹೊಂಟ
ತಂಗಿ ಮಕ್ಕಳಿಗಿರಲಂತ ಗಂಟ
ಉಪವಾಸ ಮಲಗಿಕೊಂಡ । ತಂದಿದ್ದಿನಿ ನಾ

ಮಾತ ಖರೆ ಅಂದ್ಲ ಹೆಂಗ್ಸ
ಮಂದೀದ ಮಾಡಬಾರ್ದ ಮೋಸ
ತಂದ ಆಗತೈತಿ ಮದಲನಾಶ । ಈಗ ತಿಳಿದಳಾ
ಅಣ್ಣಾತಂಗೀನ ಅರೆಷ್ಟ ಮಾಡಿ
ಶಿಕ್ಷಾ ಕೊಟ್ರು ಸರಕಾರ ನೋಡ್ರಿ
ತಂಗಿ ಸೆರಗ ಬಡದ ನಡ್ದ ಆತ ಜೇಲಿಗಿ



ಗುಂಪು ಜೋರ ಗಿಡಗಳ
ತಂಪ ಊರ ಗುಣದಾಳ
ಸುತ್ತಮುತ್ತ ತ್ವಾಟಾ ಪಟ್ಟಿ । ಸೃಷ್ಟಿ ಸೌಂದರ್ಯ
ಹಳದಾಗ ಹಾವಸಿ ಚಿಂಗ
ಮರದಾಗ ಆಡೂ ಮಂಗ
ತಂದ ಒಡೀರಿ ಲಿಂಗಕ ಟೆಂಗ । ರಾಮಕವೀನಾ

* * *

## ೧೪. ಬಾಳೇವಂತ ಬೋಳಿಮಗಾ ಖಾಸ ಶರಣ

ಬಾಳೇವಂತ ಬೋಳೀಮಗಾ ಖಾಸ। ಭಕ್ತ ಕಬೀರದಾಸ
ಕಮಾಲವನ ಕೂಸ। ಕೇಳ್ರಿ ಕತೀಸಾರಾ
ಭಕ್ತಿಯಲ್ಲಿ ಬಲ್ಲಿದನಿಸಿಕೊಂಡ್ರೊ ಅವರಾ ॥ಪಲ್ಲ॥

ಪಣಲೇಖ ಪತಿದಾತು ಮರಣ ಸತಿ ಅತಿ ತರುಣ
ರೂಪವತಿ ಪೂರ್ಣ ಜಾತಿಲಿಂದ ಬ್ರಾಹ್ಮಣ
ಭಾರಿಗುಣದ ನಾರಿ, ಮಾಡಿದಾಳ ಜಾರಿ ಘಟಿಂಗ ತನಾ ॥೧॥

ಹೇಸಿ ಕಾಮವಿಲಾಸ ಹೆಣ್ಣಿಗೆ ಬಲು ತ್ರಾಸ
ಮನಸಿಗಿಲ್ಲ ಹರುಷ ಜನರಾಡೂರ ಹಾಸ್ಯ ನೋಡಿ ಕೇಳಿನ್ನ
ತುಂಬಿ ನವಮಾಸ ಗಂಭೀರಕೂಡ ಗಂಡ ಹಡದಾಳ ರತನಾ ॥೨॥

ಪತಿ ಇದ್ದಾಗ ಪೂರ್ಣ ನಾ ಬಂಜಿ ಅಬರೂಕ ಅಂಜಿ
ಮೂರು ಸಂಜಿ ಮಂದಿ ಮಲಗಾಣಾ ಘಳಿಯಮ್ಯಾಲ
ಕೂಸೀನ ಕಟ್ಟಿ ಬಿಟ್ಟಾಳ ಹೊಳಿಯ ಒಳಗ ॥೩॥

ಕೂಸ ಹೋತ ತೇಲೂತ ಕಾದ ಭಗವಂತ
ಸ್ವತಾ ತಾ ನಿಂತ ಸೃಷ್ಟಿಪಾಲಕನೂ
ಮೋಮೀನ ತೊಳೂತಿದ್ದ ನೂಲ ತೆಳಗ ಮುಸಲ್ಮಾನ ॥೪॥

ಇತ್ತ ಚೈತ್ರಮಾಸ ಹೊತ್ತೇರಿ ತಾಸ
ಬತ್ತ ತೇಲುತ ಕೂಸ ನಿತ್ತ ನೋಡಿದ ಪುರುಷ
ಎತ್ತಿಕೊಂಡ ಕಂದ ಮನಿಗಿ ತಂದ ಮಾಡೂರುಜೋಪಾನ ॥೫॥

ಮುಸಲ್ಮಾನ ಪದ್ಧತಿ ಪ್ರಕಾರ ಹೆಸರಿಟ್ರು ಕಬೀರ
ಸುಲ್ತಿ ಮಾಡಿದಾರ ಕಲ್ತ ಖಾಜಿಗಳಾ
ಹಣಿಮ್ಯಾಲ ನಾಮ ಬಾಯಲ್ಲಿ ರಾಮ ನಿತ್ಯ ಮಾಡುತಿದ್ದ ಭಜನಾ ॥೬॥

ರಾಮ ನಾಮದಲಿ ಮಗ್ನ ಮನಿಯಾಗ ಹತ್ತಿ ವಿಘ್ನ
ಮಾಡಿ ಅವನ ಲಗ್ನ ಊರ ಬಿಡಿಸ್ಯಾರವನ
ಬೇರೂರಾಗ ಭಾರಿ ಸಾವಕಾರನಲ್ಲಿ ಸೀರಿ ನೇಯತಾನ ॥೭॥



ಸಾವುಕಾರ ಇದ್ದ ಬಲು ಖೊಟ್ಟಿ ಪಗಾರ ಇಲ್ಲಿ ತುಟ್ಟಿ
ಅದರ ಮ್ಯಾಲ ಹೊಟ್ಟಿ ನಡಸಿದನ, ಹಸ್ತದಲಿ ನೂಲ ಶಿಸ್ತ
ಮಗ್ಗದ ಮ್ಯಾಲ ಮಲಗಿ ಮಾಡತಾನ ಭಜನಾ ॥೮॥

ನಿದ್ದಿ ಜೋರ ಮಲಗಿದ ಕಬೀರಾ
ಖೊಟ್ಟಿ ಸಾವುಕಾರ ಕೊಡೂದಿಲ್ಲ ಪಗಾರಾ
ತಿಳದ ಶ್ರೀರಾಮ ತಾ ಇಳದ ಬಂದ ಸೀರಿ ನೇದಾನ ॥೯॥

ಎಚ್ಚರಾಗಿ ಎದ್ದ ಭಕ್ತ ಭಾರಿ ನೇಯ್ದಾನಂದ
ಶ್ರೀಹರಿ ಸೀರಿ, ಕೊಯ್ದು ಅದರ ಕರಿ ಒಯ್ದು ಸಾವಕಾರ ಮನೀಗಿ
ಹೇಸಿ ಸಾವಕಾರ ಹೇಳಿದ ಬೇಸಿಲ್ಲ ಮಾರಂದ ನೀನಾ ॥೧೦॥

ಸಂತಿಗಿ ಹೋದ ಕಬೀರ ಕುಂತ ಮಾರ್ಲಾಕ ಸೀರಿ ವ್ಯಾಪಾರ
ಸಂತರ ಬಂದ್ರ ಐದಾರ ಶಾಂತ ನಡೀತ್ರಿ ಹರಿಭಜನಿ
ಸೀರೀ ನೋಡಿ ಜನಾ ಭಾರಿ ಕೂಡಿತು, ಮಾಲಕ ಮಾಡ್ತಾನ ಭಜನಿ ॥೧೧॥

ಹರೀದು ಹತ್ತಿತ ಹಸ್ತ ಸೀರಿ ಇತ್ತ ಬಲಮಸ್ತ
ಮಾಡಲಿಲ್ಲ ಕಿಮ್ಮತ್ತ ನೋಡಿ ಜನ ಸುಮ್ಮಾಕ ಕೇಳ್ರಿ
ಬಿಟ್ಟ ಭಜನಿಮ್ಯಾಳ ಕಟ್ಟಿಕೊಂಡ ತಾಳ ಹೊಂಟ ಹೋದರಿನ್ನ ॥೧೨॥

ತುಂಟ ಸೂರ್ಯ ಹೋದ ಸಾರಿ ಎಂಟ ಭಕ್ತರು ಗಂಟ ಕಟ್ಟಿ ಸೀರಿ
ಹೊಂಟ ಹೋದರೊ ಊರಾನ ಧರ್ಮಸಾಲಿಗಾಗ
ಭಕ್ತಿ ಪರೀಕ್ಷಾಕ ಶಕ್ತಿ ಬಂದಾಳೋ ಆಗಿ ಮುಪ್ಪಾನ ಮುದಕಿ ॥೧೩॥

ಮುದಕಿ ಬಂದ ತೆರದಾಳ ಬಾಯಿ ಬಾಳಾ ನಾ ಬಾಳ ಬಡವಿ
ಉಡಲಾಕಿಲ್ಲ ಅರಿಬಿ ನನಗ ಕೊಡರಿ ಪುಣ್ಯಾಕ ಸೀರಿ ಒಂದ
ಹಿಂದಮುಂದ ನೋಡಲಾರ್ದ ಕುಶಿಲಿನಿಂದ ಕಬೀರ ಕೊಟ್ಟುಬಿಟ್ಟ ಸೀರೀನಾ ॥೧೪॥

ಖಾಲಿ ಹೊಂಟ ಕಬೀರ ಸುಮ್ಮ ಬಾಯಲ್ಲಿ ರಾಮನಾಮ
ಬಡವರ ಮ್ಯಾಲ ಪ್ರೇಮ ಬಾಳ ಅಂವಗ ಕೇಳ್ರಿನ್ನ
ಹೋಗೂದರಾಗ ಸುದ್ದಿ ಹತ್ತಿ ಸಾವಕಾರ ಸಿಟ್ಟಾಗಿ ಕೂತಿದ್ದಾ ॥೧೫॥

ಹೋಗಿ ಕಬೀರ ಕಾಲ ಹಿಡದಾನ ಗಚ್ಚಿ
ಸಾವಕಾರ ಮುಂದ ಹೇಳತಾನ ಸ್ವಚ್ಚಿ ಇಡಲಿಲ್ಲ ಮುಚ್ಚಿ
ಸಾವಕಾರ ಮಚ್ಚಿಲೆ ಹೊಡದ ಹೊರಗ ಹಾಕಿದಾನ ॥೧೬॥

ಸತ್ಯವಂತ ಸುಗುಣ ಶ್ರೇಷ್ಠ ಸಾವಕಾರರ ಮನಿ ಬಿಟ್ಟ
ಸತಿ ಸಂಗಾಟ ಸುತ ಕಮಾಲನಾ
ಸ್ವಂತಮನಿ ಮಾಡಿ ನಿಂತ ಸತಿಪತಿ–ಬಾಳ ಬಡತನ ॥೧೭॥

ಸತಿಪತಿ ನಿವಳ ಸಂಸಾರ ವೊಳೆ ಸರಳ
ಸಂಜಿಕಿಲ್ಲ ಜ್ವಾಳ, ಸಂತ್ರ ಬಂದ್ರ ಏಳ
ಸಾಲ ಇತ್ತ ಭಾಳ, ಕಾಲ ಹಿಡದ್ರು ಸಿಗುದಿಲ್ಲ ಕಾಳ
ಸಂತರಿಗಿಲ್ಲ ಕೂಳ ಭಾಳ ಕಠಿಣಾ ॥೧೮॥

ಸಾಲ ತರಲಾಕ ಹೊಂಟ ಬಾಲ ಸ್ವತಾ ಕಮಾಲ ಶೆಟ್ಟಿ ಇದ್ದ ಶೇಲ
ಗಟ್ಟಿ ಹಿಡದ ಕಾಲ ಕೆಟ್ಟ ವ್ಯಾಳೇನಾ
ಕಂದ ತೆರದ ಬಾಯಿ ಕೊಡರೊಂದ ರೂಪಾಯಿ
ಮುಂದೆ ಕೊಡುವೆನಾ ॥೧೯॥

ಖೊಟ್ಟಿ ಸಾವಕಾರ ಕಮಾಲಗಂದ, ನಿಮ್ಮ ತಾಯೀನ
ತಂದಕೊಡ ರಾತ್ರಿ ಇಂದ ಬೇಕಾದಟ್ಟ ಹಣಾ ಒಯ್ಯೋ ಅಂದ
ಮುಂದ ಬೇಕಾದಂಗ ತಂದ ತೀರಿಸೋ ನನ್ನ ರುಣಾ ॥೨೦॥

ಹೇಸಿ ಸಾವಕರ್‍ನ ಮಾತು ಕೂಸ ಕೇಳಿ ನಿಂತ
ತ್ರಾಸ ಒಳೆ ಬಂತು ಸ್ಮರಿಸಿದ ಅನಂತನಾ
ಒಲ್ಲೆಂದ್ರ ಸಿಗೂದಿಲ್ಲ ಸಾಲ ತಂತ್ರ ಮಲಗೂರ ಉಪವಾಸ ॥೨೧॥

ಸಂತರ ಸಲುವಾಗಿ ಕಂದ ಸ್ವಂತ ತಾಯೀನ ತಂದ
ಕೊಡತೀನೊ ಅಂದ ಕೊಟ್ಟ ಕೇಳೋ ವಚನ
ಕಾಮದಾಸೆ ಕೆಟ್ಟ ಪ್ರೇಮದಿಂದ ಕೊಟ್ಟೊ ಸಾಮಾನ ॥೨೨॥

ಸಾಮಾನ ತಂದ ಬಾಲ ಶ್ರೇಷ್ಠ ಸಂತ್ರದಾತ ಊಟ
ಮಾಡುತ ಹುಡುಗಾಟ ಮಲಗಿಕೊಂಡಾರಿನ್ನ
ಕಮಾಲ ಕೂಸ ಕರದ ತಾಯೀನ ಕಾಸ ಹೇಳುತಾ ॥೨೩॥

ಕಣ್ಣೀರ ತಂದ ಬಾಲ ತಾಯಿದ ಹಿಡದ ಕಾಲ
ತಂದೀನವ್ವ ಸಾಲ ಇಂದ ನಿನ ಮ್ಯಾಲ ನಾ
ಸುತನ ಮಾತ ಕೇಳಿ ಕರದಾಳ ಕಬೀರನಾ ॥೨೪॥

ಪತಿ ಶ್ರೇಷ್ಠ ಹಿಡದ್ಲ ಪಾದ ಕೊಟ್ಟ ಆಶೀರ್ವಾದ
ಸುತನ ಸಂಗಾಟ ಎದ್ದ ಶೆಟ್ಟಿ ಮನಿಗಿನ್ನ
ಹೋಗುದರಾಗ ಶೆಟ್ಟಿ ಹೆಣಾ ಸುಡಗಾಡಕ ಒಯ್ದಿದರಾ ॥೨೫॥

ತಾಯಿ ಮಗಾ ಮನದಾಗ ಮರಗಿ ತಿರಿಗಿ ಬಂದ್ರ ಮನಿಗಿ
ಹೇಳತಾರ ಕಬೀರನ ಮುಂದ ಶೆಟ್ಟಿ ರುಣಾ ಮುಟ್ಟಲಿಲ್ಲ
ಕಟ್ಟಿಕೊಂಡ ಹೋದ ಯಮನು ॥೨೬॥



ಸತಿ ಪತಿಗಿ ಶಾಂತಿಯಿಲ್ಲ ಮನದಾಗ ಕುಂತ್ರ ಮನಿಯಾಗ
ಸಂತ್ರ ಬಂದ್ರ ಹೊರಗ ನಿಂತು ಹೊಡೆದಾರ ತಾಳನಾ
ಕಾಲಬಿದ್ದ ಕಮಾಲ ಕುಡಿಲಾಕ ಕೊಟ್ಟ ನೀರನಾ ॥೨೭॥

ಹತ್ತಮಂದಿ ಸಂತ್ರ ಬಂದ ಕುಂತ್ರ ಮನಿಯಾಗ ಚೆಂದ
ಸತಿಪತಿ ಆಗಂದ ಸುತ ಕಮಾಲನಾ
ಜ್ವಾಳಾ–ಕಾಳಾ ಇಲ್ಲ ಮನಿಯಾಗ ಗೋಳ ಮಾಡೂದೇನ ॥೨೮॥

ಕಾಲ ಹಿಡದ್ರ ಸಿಗುದಿಲ್ಲ ಕಾಳ ಸಾಲ ಇತ್ತ ಬಾಳ
ಸಂತರಿಗಿಲ್ಲ ಕೂಳ, ಹೊಂಟೊ ಕಳವಿಗಿನ್ನಾ
ಸಾವಕಾರ ಮನಿ ಬೋಕಮಾಡಿ ಹೊಕ್ಕ ಕಮಲ ॥೨೯॥

ಕಬೀರನ ಕೈಯಾಗ ತಂದ ಕೊಟ್ಟ ಮಾಲ, ಬೊಕಿನಲ್ಲಿ ಬಾಲ
ಸಾವಕಾರ ಹಿಡದ ಕಾಲ ಎಚ್ಚರಾಗ್ಯಾನ
ಕಬೀರ ಜಗ್ಗತಾನ ಕಮಾಲನ ಹೊರಗ ॥೩೦॥

ಕಬೀರಗ ಬಂತು ಕೆಟ್ಟ ಪ್ರಸಂಗ ಕಮಾಲ ಮಾಡೂನ ಹೆಂಗ
ಸಾವಕಾರ ಬಾಳ ಮಂಗ ಬಿಡುದಿಲ್ಲ ನಮ್ಮನಾ
ಚೌಡಿಗೋದ ಗೌಡ ಕುಲಕರ್ಣಿ ಮಾಡತಾರ ಶಿಕ್ಷೆನಾ ॥೩೧॥

ಸಿಟ್ಟಿಗೇರಿ ಕಮಾಲ ಕಬೀರಗ ಅಂದ ಖೊಟ್ಟಿ ಭಕ್ತಿನಿಂದ
ಬಿಟ್ಟ ಬಿಡೋ ಇಂದ ಹೊಂಡಿ ಎನ್ನ ರುಂಡನ್ನ
ಸಾಮಾನ ಒಯ್ಯೊ ಸಂತ್ರ ಮಲಗೂರ ಉಪವಾಸ ॥೩೨॥

ತಂದಿಬಿಟ್ಟ ಮಗನ ಮ್ಯಾಲಿನ ಪ್ರೇಮ ಬಾಯಲ್ಲಿ ಅಂದೊ ರಾಮ
ಹೊಡದ ರುಂಡ ಹುಮ್ಮ ಹೊತ್ತ ಸಾಮಾನಾ
ಹೋಗುದ್ರೊಳಗ ಸಂತ್ರ ಮಾಡಿತಿದ್ರ ಭಜನಾ ॥೩೩॥

ಹೆಣತಿ ಮಂದ ಹೇಳಲಿಲ್ಲಗಂಡ ಮುಚ್ಚಿಟ್ಟ ರುಂಡ
ಅಡಿಗಿಮಾಡಿ ಉಂಡ ಮಲಗಿಕೊಂಡರಿನ್ನಾ
ಕುಂತು ಕಬೀರ ಹೊಟ್ಟಿಕಳ್ಳ ಕೆಟ್ಟ ಬಾಳನಾ ॥೩೪॥

ಸತ್ಯವಂತ ಕಮಾಲ ಮುಂಡ ಸತ್ತ ಸ್ವರ್ಗ ಕಂಡ
ದಡಾ, ಇಲ್ಲದ ರುಂಡ, ಸಾವಕಾರ ಹೊತಗೊಂಡ ಹೋದಾನಾ
ಗೌಡ ಕುಲಕಣ್ಣಿ ಚಾವಡಿಯೊಳಗ ಇಟ್ಟಾರ ಅದನಾ ॥೩೫॥

ಸತ್ಯವಂತನ ಹೆಣಾ ಹತ್ತಲಿಲ್ಲ ಖೂನಾ ಸುತ್ತಹೂಡಿತು ಜನಾ
ನಿತ್ತಾರ ಸುಮ್ಮನಾ ಗುರ್ತ ಆಗಲೆಂದ
ಚಾವಡಿ ಮೂಲಕ ಹಾಕಿದರದನಾ ॥೩೬॥

ಕಡೀಕ ಕಬೀರನ ಸಂತರ ಮ್ಯಾಳ, ಹೊಡೆಯುತ ಬಂದು ತಾಳ
ಚವಡಿ ಮುಂದ ನಿವಳ ನಿಂತಾರಿನ್ನ
ರುಂಡಿಲ್ಲ ದಡಾ ಕಂಡ ಬಡೀತು ಚಪ್ಪಾಳೀನಾ ॥೩೭॥

ಸಾವಕಾರ ಗೌಡ ನೋಡಿ ಕುಲಕರ್ಣಿ ಹ್ವಾದ ಓಡಿ
ಕಬೀರ ಅವಸರ ಮಾಡಿ ತಂದ ರುಂಡಾನಾ
ಮಂತ್ರ ಅಂದ ಮ್ಯಾಲಿಟ್ಟ ಸಂತ್ರ ಇಳಿಸಿ ಕೊಂಡಾರ ॥೩೮॥

ನಿಂತ್ರ ಜನಾ ಬಡದ ದಂಗ ಸಂತ್ರ ಅಂದ್ರ ಅಭಂಗ ಒಂದ
ಒಡದರ ತೆಂಗ ಹೊಂಟ ಹೋದಾರಿನ್ನ
ಸತಿ–ಪತಿ ಶಾಂತ ಸುತ ಭಕ್ತಿವಂತನಾ ॥೩೯॥

ಭಕ್ತ ಕಬೀರ ಶ್ರೇಷ್ಠ ಮುಪ್ಪಾದ ದೇಹ ಬಿಟ್ಟಾ ಹತ್ತಿ ಬಡದಾಟ
ಹಿಂದು ಮುಸಲ್ಮಾನರೆಲ್ಲ ನಂದ ನಂದ ಹೆಣಾ ಅಂದ
ಕುತ್ತಾರ ಎಡಬಲಕ–ಅತ್ತಾರ ಬಡಕೋತ ॥೪೦॥

ಹೆಣಾ ಹೋತ ಗಪ್ಪಾಗಿ ಹಿಂದು ಕೂತಕಡೆ ಮಲ್ಲಿಗಿ
ಮುಸಲ್ಮಾನರಿಗಿ ಕಾಮಕಸ್ತೂರಿ
ಅಂದಿನಿಂದ ಇಂದಿನವರಿಗಿ ಬಂದಾವ ಅದೇ ಪದ್ಧತಿ ॥೪೧॥

ಇಂಥಾ ಭಕ್ತರಿದ್ದುದು ಹಿಂದುಸ್ತಾನ ಓದ ಪುರಣಾ
ಧರ್ಮ ಅರ್ಜುನ ಶಿರಿಯಾಳ ಬಾಲಧ್ರುವ
ಭಕ್ತ ಪ್ರಹ್ಲಾದ ಅಂಬರೀಶ ಅತ್ರಿ ರುಷಿಗಳನಾ ॥೪೨॥

ಗುಣದಾಳ ಊರವಾಸ ಹಳ್ಳ ಹರೂದು ಸೂಸ
ಬಂದ ಇಳದ ಈಶ ಭಕ್ತಿ ಬಾಳನಾ
ಬಂಗಾರ ಕಳಸ ಗುಡಿ ಒಳೆ ನಿರಸಾ ॥೪೩॥

ರಾಮು ಅವನ ದಾಸ ಪ್ರೇಮದ ಕೂಸ
ಸೋಮವಾರ ಉಪವಾಸ ಮಾಡೂವನಾ
ದಿಟ್ಟಕವಿ ಕಾಸ ಗಟ್ಟಿ ಮಾಡಿದ ಪ್ರಾಣ ಇಟ್ಟ ಭಕ್ತನಾ ॥೪೪॥

* * *



# ಭಾವಗೀತಾತ್ಮಕ ಹಾಡುಗಳು

## ಭಾಗ – ೧

೧) ಪ್ರಾರ್ಥನೆ
೨) ಸ್ಥಿರವಿಲ್ಲ ನನ್ನ ಮನದಾಗ
೩) ತೊಗರಿಯ ಲೆಕ್ಕ ಮರತಾಳೊ
೪) ಉಂಡಿ ಕೊಂಡಕೊಡ
೫) ಬೀದೀಲಿ ಹೊಂಟೆ ನಗನಗತ
೬) ದೈವಾನಕ ನಾನು ಬಡವಲ್ಲ
೭) ಮದವಿ ಗಂಡನ್ನ ಮರತಾಳೊ
೮) ಬಂದ ಕರಿಯಲಿ ಬ್ಯಾಡ
೯) ಎಂದು ಮೈನೆರೆದೆ ಎಲೆ ಬಾಲಿ
೧೦) ಬೇಕಾದ್ದಾದರ ಬಿಡಾಂವಲ್ಲ
೧೧) ಗುಲ್ಲ ಕೊಡತೇನ ಎಡಬಲಕ
೧೨) ಉಂಡಿಲ್ಲ ಮಾರಿ ತೊಳದಿಲ್ಲ
೧೩) ಕೊಡತೇನ ಹರಕ ಪಡಿಕೊಂದ
೧೪) ಇಡ ನಿನ್ನ ಪ್ರೀತಿ ಮರಿಬ್ಯಾಡ
೧೫) ಉಸರ ಹಾಕತೀನ ಉಣುವಾಗ
೧೬) ಸುಗ್ಗಿಮ್ಯಾಲ ಬತ್ತ ಕೊಡತೀನ
೧೭) ಖಂಡೀತ ನಿನ್ನ ಬಿಡೂದಿಲ್ಲ
೧೮) ಗ್ವಾಡಿ ಜಿಗದ ಬಾರ
೧೯) ಮದವಿ ಹೇಣತಿ ಮರತೀನ
೨೦) ವಜ್ಜರ ತೇದ ಕುಡಿದೇನ
೨೧) ಅಂಗಜನ ಬಾಣ ಹೊಡದಾವ
೨೨) ಇಂಚಲಕೊಮ್ಮಿ ಬಂದ್ಹೋಗ
೨೩) ಮದರಂಗಿ ಗೊನಿಯ ಮರಿಮಾಡ
೨೪) ಏನ ಬೇಡತಿ ಬೇಡ
೨೫) ಶೀಲವಂತಿ ಸಿಟ್ಟ ಮಾಡಬ್ಯಾಡ
೨೬) ಚೆದುರಿ ಚಿಗರಿಮರಿ ಹಂಗ
೨೭) ಹೆಚ್ಚೇನ ವಂಕಿ ಕೊಡತೇನ

**ಸಂ. ಡಾ. ಮ.ಗು. ಬಿರಾದಾರ ಅವರ ಹೋಳೀ ಹಾಡುಗಳು**

## ೧. ಪ್ರಾರ್ಥನೆ

ಆಗ ಬಸವಣ್ಣ ತಾನು
ದೇವಲೋಕನ ಬಿಟ್ಟು
ಮಾನವ ಲೋಕಕ ಇಳದಾನೊ ॥

ಮಾದರಸ ಮಾದಲಾಂಬಿ
ಎಂಬುವರ ಉದರದಲ್ಲಿ
ಉತ್ಪನ್ನ ಆದಾನೊ ಬಸವೇಸೂರಾ
ಹೊಟ್ಟಿ ಬಿಟ್ಟು ಬರುವಾಗ
ಅಂತಾನೊ ಹರಹರಾ ॥

ಮಾದಲಾಂಬಿ ಎಬ್ಬಸೊತಾನಾ
ಮಾರಿನಿತ್ತ ನೋಡ ತಾನೊ
ಹುಟ್ಟಿದಾಂವ ಮುಟ್ಟವಲ್ಲೊ ಜನಿವಾರಾ
ಕೈಲಾಸದಿಂದ ಇಳದ ಬಂದಾನೊ ಈಶ್ವರಾ
ಕುಂತ ಹೊತೀಗಿ ಓದಿದಾನು ಬಸವೇಸೂರಾ
ಬೇಡಿದ ಪದಾರ್ಥವ ನೀಡಿದಾನೊ ॥

ಆಗ ಬಸವಣ್ಣ ತಾನು
ದೇವಲೋಕನ ಬಿಟ್ಟು
ಮಾನವ ಲೋಕಕ ಇಳದಾನೊ ॥

* * *



## ೨. ಸ್ಥಿರವಿಲ್ಲ ನನ್ನ ಮನದಾಗ

ಹಣವಿಲ್ಲ ಅಂತ ಅನಬ್ಯಾಡ
ತಿರುವ ನನ ಕಡೆ ಮಾರಿ
ಸಿರಿವಂತಿ ನಿನ್ನ ನೋಡಿ
ಸ್ಥಿರವಿಲ್ಲು ನನ್ನ ಮನದಾಗ ॥

ನಿನ್ನ ನೇತ್ರಗಳೆರಡು
ಕಮಲದ ಮಗ್ಗಿ ಅರಳಿದಂಗ
ಸೂತ್ರದ ಗೊಂಬಿ ಹಂಗ ನಿನ್ನ ದೇಹ
ಹೋಗಿ ನೋಡಿ ಬನ್ನಿ
ಯಾತ್ರಾಗೇನ ಕಸರಿಲ್ಲ ಛಾಯಾ ॥

ಮುದ್ದು ಮುಖದ ಬಾಲಿ ನೀನು
ಮುದ್ದು ಕೊಡುವೆನು ಸದ್ದೆ ಬಾರಾ
ಬುದ್ಧಿವಂತಿ ತೆರೀತೇನ ಬಾಯ
ಹೇ ಪ್ರಾಣಸಖಿ
ಕದ್ದ ಕದ್ದ ಮಾಡ ಕಾಮನ ಕತೆಯ
ಕೂಡಿದರ ಸುರವುತೇನ ಹಣವ ನಿನ್ನ ಉದ್ದ ॥

ತಿರುವ ನನ ಕಡೆ ಮಾರಿ
ಸಿರಿವಂತಿ ನಿನ ನೋಡಿ
ಸ್ಥಿರವಿಲ್ಲ ನನ್ನ ಮನದಾಗ

* * *

## ೩. ತೊಗರಿಯ ಲೆಕ್ಕ ಮರತಾಳೊ

ಮಧುರ ಮಾತಿನ ಚೆದುರಿ ಯಾವೂರವಳೊ
ನದರಿಗಿ ಬಿದ್ದಾಽಳೊ ಸಂತ್ಯಾಗ
ಚೆದರ ಸುದ್ದಾ ನೋಡಿ ನಕ್ಕ ॥

ಇದರ ನಿಂತ ಮಾತನಾಡಿ
ಬೆದರಿದೆರಳಿ ನೋಟದಂತ ಕಣ್ಣಾ
ಅದರ ಸುತ್ತ ದೀಪದಾಂಗ
ಕೆಂಪಗ ತೊಂಡಿ ಹಣ್ಣಾ
ರೂಪ ನೋಡಿ ತಾಪವೇರಿ
ಗಪ್ಪ ನಿಂತರ ಮುಚ್ಚತಾವ ಕಣ್ಣಾ
ಹೊಡದಂಗ ಆತ ಮನಮಥನ ಬಾಣಾಽ ॥

ಕಂಚಿಕಾಯಿಯಂತ ಕುಚ
ಮಿಂಚತಾವ ಎರಡು ಗಲ್ಲ
ಅಂಚ ರೇಶ್ಮಿ ಜುಳಕ
ನೀ ಬಂದರ ಆಗೋದು ನನಗ ಸಂತೋಷ

ಮಧುರ ಮಾತಿನ ಚೆದುರಿ ಯಾವೂರವಳೊ
ನೆದರಿಗಿ ಬಿದ್ದಾಳೊ ಸಂತ್ಯಾಗ
ನನ ಕಂಡ ತೊರಗಿಯ ಲೆಕ್ಕ ಮರತಾಳೊ ॥

* * *



## ೪. ಉಂಡಿ ಕೊಂಡಕೊಂಡ

ಬಡವ ಅಂತ ಹೀಗಳಿ ಬ್ಯಾಡ
ಅಯ್ಯೋ ಅನಬ್ಯಾಡ ಬಾಲಿ
ದೈವ ನನಮ್ಯಾಲ ಇರಲಿ
ಪೈ ನಿನಗೊಂದ ಕೊಡತೇನ ॥

ನನ್ನ ಸಂಗಾಟಽ ಬಂದರ ನಂದು
ಲಂಗಟಾ ಒತ್ತೆ ಇಡತೇನ
ಊರಾಗ ಅದಾರ ಸಾವಕಾಽರ
ಬೇಡಿದಂಗ ರೂಪಾಯಿ ಕೊಡತಾಽರ ॥

ಇಟಗೊ ಬಂಗಾರ ಥಾಟ
ಹತ್ತುವೆಲ್ಲ ಹತ್ತೊತ್ತಿ ಇಟ್ಟ
ಮಾತು ನಿನಗ ಹೇಳತೇನ
ಪುತಳಿಸರಾ ಮಾಡಸ್ತೇನ ಒಂದ
ಕಿಂವ್ಯಾಗ ವಾಲಿ ಜೋಡ ಮಾಡಸ್ತೇನ ಪಾಡ

ಪೈ ನಿನಗೊಂದ ಕೊಡತೇನ
ಎಲೆ ಹುಡುಗಿ
ಬೈ ಮಂಗದ ಉಂಡಿ ಕೊಂಡ ಕೊಡ

* * *

## ೫. ಬೀದಿಲಿ ಹೊಂಟಿ ನಗನಗತ

ಕ್ಯಾದಿಗಿ ಹೊಡಿ ಹಂಗ
ಸ್ವಾದ ಸುವಾಸದ ಹೆಣ್ಣ
ಬೀದೀಲಿ ಹೊಂಟಿ ನಗನಗತ ॥

ಕಟ್ಟಾಣಿ ಗುಂಡಿನೊಳಗೆ
ಪುಟ್ಟದಳದ ಪುತಳಿಸರ
ರತನದಂತ ಏಕಾವಳಿ ಹಾಕಿದಾಳೊ
ಹಿಂಗ ಪದುಮವ ಕಾಡಿಗಿ ತೀಡಿದಾಳೊ
ಹಣಿ ಮ್ಯಾಲ ಕುಂಕುಮ ಬಟ್ಟ ಇಟ್ಟಿದಾಳೊ ॥

ಚಂದದ ಹೆಣ್ಣ ಕಂಡೆನಪ್ಪ
ದೊರತಾಳೇನೊ ನನಗ ಇವಳ
ಜರದ ಸೆರಗಿಲೆ ಸಿಂಬಿ ಮಾಡಿ
ನೀರ ತರವಳೊ ॥

ಬೀದಿಲೀ ಹೊಂಟಿ ನಗನಗತ
ಎಲೆ ಹುಡಗಿ
ಮಾರ‍್ಯಾಳ ಗಂಭೀರನ ಕೂಡ ಮುದ್ದಾಡ

* * *



## ೬. ದೈವಾನಕ ನಾನು ಬಡವಲ್ಲ

ಸೌಗೇಡಿ ಹೋಗ ಅಂದಾಗ
ಸೌಗೇಡಿ ಅನುಬ್ಯಾಡ ಒಯ್ಯುವೆನು ಸದರಿಗಿ ನಾನು
ದೈವಾನಕ ನಾನು ಬಡವಲ್ಲ ॥

ಕೂಡುವೇನ ಸೂರ‍್ಯಾದರಾಗಲಿ ಹೊಲಮನಿ
ಹುಡುಗಿ ನಿನ್ನ ಬಿಡೋದಿಲ್ಲ
ಪಾಡ ನೋಡಿ ಬಡಿತೆನಗಿ ಭ್ರಾತಿ ॥

ಸಡಗರದಿಂದ ವಸ್ತ್ರಾ ಒಡವಿ
ಇಡ ನೀನು ಏನಂತಿ
ಯಾವುದರೇನು ಕಡಿಮಿಲ್ಲ ॥

ಹ್ಯಾಂವಾ ಬಿಟ್ಟ ಒಡಗೂಡ
ಜೀಂವೊದ ಹೊರತ
ಏನ ಬೇಡತಿ ಬೇಡ ॥

ದೈವಾನಕ ನಾನು ಬಡವಲ್ಲ
ನನ್ನ ಹುಡಗಿ
ಮಾರ‍್ಯಾಳ ಬಸವಣ್ಣ ನನಗೆ ಒಲದಾನ ॥

* * *

## ೭. ಮದವಿ ಗಂಡನ್ನ ಮರತಾಳೊ

ಚಿಗರಿ ಮಾಟದ ಹೆಣ್ಣ
ಇದರೀಗಿ ಬಂದರ
ಬಾಣ ಬಡದಾಂಗಾತೊ ಎದಿಯಾಗ ॥

ಸಂಸೆದ ಹೆಣ್ಣ ನೀನು
ದಾಂವಸಿ ಬಂದ ಕೇಳತೇನ
ಗಾಂವಸಾಲವಸ್ತಿ ಮಾಡ ಇಂದ
ಭೂಮ್ಯಾಗ್ಯಾರು ಇಲ್ಲ ಕೂಡಿ ಬಂತ ಸಂದ ॥

ಕೊಟ್ಟೆನಂದರ ಕೈಯಾಗಿಲ್ಲಾ
ಬಿಟ್ಟೇನಂದರ ಮರ್ಜಿ ಇಲ್ಲ
ಸಿಟ್ಟ ಬಂದರೆ ಬಡಿವಲ್ಲೆ ಒಂದ
ಹಸದಂವಗ ಊಟ ಮಾಡಸ
ಕೀರ್ತಿ ಆಗಲಿ ನಿಂದ ॥

ಬಂದಾಳ ಮಾರ್‍ಯಾಳ ಬಜಾರಕ
ಆ ಹುಡುಗಿ ಸಿದ್ದಪ್ಪನ್ನ ನೋಡಿ
ಮದವಿ ಗಂಡನ್ನ ಮರತಾಳೊ ॥

* * *



## ೮. ಬಂದ ಕರಿಯಲಿ ಬ್ಯಾಡ

ಮಂದಮತಿ ನಮ್ಮನ್ನ
ಬಂದ ಕರಿಯಲಿ ಬ್ಯಾಡs
ಗಂಧ ಕಾಂವಿದೊ ನಮ್ಮ ಧ್ಯಾಸ ॥

ಕುಸ್ತಿ ಮ್ಯಾಗ ಪ್ರೀತಿ ಬಾಳ
ಕುಸಿ ಬಂದ ತಾಲೀಮದೊಳಗ
ಕುಶ್ಯಾಲದಿಂದ ಮಾಡತೇವ ಶಕ್ತಿs ॥

ಬ್ಯಾಡ ಹೋಗ ಅದರ ಕುಸಲಾ
ತಿನಸಬೇಕ ಕಂತಿ
ಚೆಂದದಿಂದ ಕೂಡ ತಾಯ ತಂದಿ ॥

ಗಂಧ ಕ್ಯಾಂವಿ ಹಚ್ಚಲೆಂತ
ಬಿಟ್ಟ ಬಿಟ್ಟದಾರ ಕೇಳ ಸತಿ
ಬಾಳ ಮಂದ್ಯಾಗ ಕರದೆಂದರ
ಆದಿ ಫಜೀತಿ ॥

ಗಂಧ ಕಾಂವಿದು ನಮ್ಮ ಧ್ಯಾಸ
ಎಲೆ ಹುಡುಗಿ
ಮಾರ್‍ಯಾಳ ಬಸವಣ್ಣನ ಹೋಗಿ ಬರ್ತೇವ ॥

* * *

## ೯. ಎಂದು ಮೈನರೆದೆ ಎಲೆ ಬಾಲಿ

ಚೆಂದಾದ ತೋಳಿಗಿ
ಮುಂದ ಹೆಸರ ಬಳಿಯಿಟ್ಟ
ಎಂದು ಮೈನೆರದೆ ಬಲುಜಾಣೆ ॥

ಹಡ್ಡದ ತೆಳಗ ತೋಡೆ ಇಟ್ಟ
ಬಡ್ಡಿ ಎತ್ತಾಕ ಬರ್ತಿದ್ಯ ಬಾಲಿ
ದೊಡ್ಡಾವರಂತ ಅಂಜಿದೇನ ನಾರಿ ॥

ಕುತನಿ ಕುಬಸಮ್ಯಾಲ ಹೊಳೆವ
ರತನಹಾರ ಏಕಾsವಳಿ
ಒತನದಾರಗ ಕೊಟ್ಟಾರ ಒಯ್ಯಾರಿ ॥

ನಾನು ಬಡವಂತ
ತೆಗಿಯಬ್ಯಾಡ ಜಗಳ
ನೋಡ ನನ್ನs ಮಾರಿ ॥

ಎಂದ ಮೈನೆರದೆ ಬಲುಜಾಣೆ
ನಿನ ಕಂಡs
ಹೊಂದಬೇಕಂತ ಕೆಣಕಿದೇನ ॥

ಎಂದ ಮೈನೆರದೆs ಎಲೆ ಬಾಲಿ
ಮಾರ್ಯಾಳ ಬಸವಣ್ಣಗ
ಒಮ್ಮೆ ಬಂದ್ಹೋಗ ॥

* * *



## ೧೦. ಬೇಕಾದ್ದಾದರ ಬಿಡಾಂವಲ್ಲ

ಚೆಕ್ಕಿ ಆದೇನ ಒಣಗಿ
ತೆಕ್ಕಿ ಹಾಯುವೆ ನಾನು
ದಕ್ಕಿ ತಿಂದsರ ಚಿಂತಿಲ್ಲ ॥

ಕನಸಿನೊಳಗ ಬಂದ ನೀನು
ಮನಸಿನೊಳಗ ಕರದಂಗಾತು
ಕೈ ಹಿಡಿದು ಜಗ್ಗಿ ಹೊಡೆದಂಗ ಜೋಲಿ
ಅಡರಾಸಿ ನೋಡುವದರೊಳಗ ಇದ್ದಿಲ್ಲ ಬದಿಯಲಿ ॥

ತಾಳಲಾರದ ಜೀಂವ ನಂದು
ತೋಳ ತೊಡಿಯಾಗ ಇಟಗೊಂಡು
ಹೋಳ ಮೈಯಿಲೆ ಬೀಳತೇನs ಹೊರಳಿ
ಸುಳ್ಳಲ್ಲ ಜಾಣೆ ನಿನ್ನಾಣೆ ಹೇಳಾವಲ್ಲ ಕಾಲಿ ॥

ಕೆಂಪ ರೂಪಾ ಕಂಡ ನನಗ
ಜಂಪ ಹತ್ತಾಕಿಲ್ಲ ರಾತ್ರಿ
ಸಂಪ ಆಗೋದಿಲ್ಲ ನೋಡಿದರ ॥

ದಕ್ಕಿ ತಿಂದರ ಚಿಂತಿಲ್ಲ
ನಿನ್ನ ಸಲುವಾಗಿ ಬೇಕಾದ್ದಾದರ ಬಿಡಾಂವಲ್ಲ
ಮಾರ್ಯಾಳ ಬಸವಣ್ಣನ ದಯಾನನ ಮ್ಯಾಲ ॥

* * *

## ೧೧. ಗುಲ್ಲ ಕೊಡತೇನ ಎಡ ಬಲಕ

ಭಲರೇ ಜಾಣೆ ನನ್ನ
ಹಲ್ಲ ಮುರಸವರೇನ
ನಲ್ಲೆಯರ ಗಲ್ಲ ಕಚ್ಚುವೆನು ॥

ನಡದರ ನಡಿಯಲಿ ಖಟ್ಲೆ
ಒಡದರ ಒಡಿಯಲಿ ಸಾಕ್ಷಿ
ಬಡದರ ಬಡಿವಲ್ಲ ಪೊಲೀಸ ॥

ಒಳಗಿಂದೊಳಗ ನೂರಾರ ರೂಪಾಯಿ
ಕೊಡೊ ಉಮ್ಮೇದವಾರ
ಅಲ್ಲಿಂದತ್ತ ಫಜೀತಿ ನಾರಿ ॥

ಹಚ್ಚೇನ ಪರಾರಿ ಸೀರಿ
ಹಳ್ಳ ಒಗದ ಹಂಚ ಚೂರಾ ಚೂರಾ
ಅಬರೂಕಂಜಿ ತಿರಗ್ಯಾಡ ಊರೂರಾ ॥

ಬಂದರ ಚೊಲೋದಾತ ಗೆಣತಿ
ಹಚ್ಚೇನಿ ನಿಮ್ಮನಿಗಿ ಬೆಂಕಿ
ಜೀಂವದ ಖಬರಿಲ್ಲಽ ನನಗೀಗ ॥

ಈಗಿಂದೀಗ ಪಾಸಿ ಕೊಡವಲ್ಲ
ಇಂಗ್ರೇಜಿ ಸರಕಾರ
ನಲ್ಲೆಯರ ಗಲ್ಲ ಕಚ್ಚುವೆನ ಕ್ಯಾರೆಣ್ಣೆ
ಗುಲ್ಲ ಕೊಡತೇನ ಎಡ ಬಲಕ

* * *



## ೧೨. ಉಂಡಿಲ್ಲ ಮಾರಿ ತೊಳದಿಲ್ಲ

ಕಳೆವಂತಿ ನಿನ ಕಂಡ
ಉಳಿವಲ್ಲದ ನನ ಜೀಂವ
ಚಳಿ ಹತ್ತಿ ಜರದ ಬೀಳುವೆನ ॥

ಜರದ ಕುಬ್ಬಸದೊಳಗ ಮಲಿ
ತೊರದ ನಿಗರಿ ನಿಂತಿದಾವ
ಹಿರದ ಪ್ರಾಯ ಬಾರದ ಬಂದಽತಿ ॥

ಏ ಹೆಣ್ಣ ನೀನು ನೆರದ
ಮೂರು ನಾಕ ತಿಂಗಳಾತ
ತಿಂಗಳ ದಿನ ಆತ ನಿನ್ನ
ಅಂಗಳದಾಗ ನಾ ಸುಳದಾಡತೇನ ॥

ಮಂಗಳವಾರ ದಿನ ಭಾಗೋಡಿ ಸಂತಿ
ಆ ದಾರಿಯೊಳಗ ನಿನ್ನ
ಮಂಗಳಿಸಿ ಓದರ ಏನ ಮಾಡತಿ ॥

ಎಲ್ಲೆಲ್ಲಿ ಹೋದಲ್ಲಿ ನೀನು
ಅಲ್ಲಲ್ಲಿ ನಾನು ದುಂಬಾಲ ಬಿದ್ದ
ಇಲ್ಲದ್ದ ಮಾಡಿ ಒಡದೇನ ಸತಿ
ಬಾಳ ಮಂದ್ಯಾಗ ಕರದ್ಯಂದರ ಆದಿ ಫಜೀತಿ ॥

ಚಳಿ ಹತ್ತಿ ಜರದ ಬೀಳತೇನ
ನಿನ ಕಂಡ
ಉಂಡಿಲ್ಲ ಮಾರಿ ತೊಳದಿಲ್ಲಽ ॥

* * *

## ೧೩. ಕೊಡತೇನ ಹರಕ ಪಡಿಕೊಂದ

ಆಡಮುಟ್ಟ ಕಡಿಮಿಯ ಹೆಣ್ಣ
ಹಿಡಿ ನನ್ನ ಹಿಡತಿವ
ಇಡತೀನ ನಿನ್ನ ದೂರೋದ ॥

ಒಳ್ಳೆದಲ್ಲ ಹುಚ್ಚರಂಡಿ
ಒಳ್ಳೆ ಹುಡುಗನ ಅಬರು ಕಳದಿ
ಕೆಟ್ಟರ ನಿನ್ನ ದಸೀಂದ ಕೆಡತೇನ
ಹಿತ್ತಲದಾಗ ಕುಳ್ಳ-ಗಿಳ್ಳ ಒಟ್ಟಿ ಕೋಡತೇನ ॥

ಸಾಲ ಅದರ ಅಟ್ಟಿ ಹೋತು
ಹೊಲಾ ಮಾರಿ ಬರತೇನ
ಟರಾವ ಗಿರಾವ ಹೇಳತೇನ
ಕರಾರ ಪತ್ರ ಬರಕೊಡತೇನ ॥

ಸೀರಿ ಹರದ ಪರಾರಿ ಹಚ್ಚಿ
ಮೋಜಾ ನೋಡತೇನ
ಇಡತೀನ ನಿನ್ನ ದೂರೋದ
ನಾ ನಿನಗ ಕೊಡತಿನ ಹರಕ ಪಡಿಕೊಕೊಂದ ॥

* * *



## ೧೪. ಇಡ ನಿನ್ನ ಪ್ರೀತಿ ಮರಿಬ್ಯಾಡ

ಹುಡಹುಂಟ ಅನಬ್ಯಾಡ
ಅಡಮೂಟ ಆದೇನ
ಕಡಿತಾನ ನಾರಿ ಕರುಣಿರಲಿ ॥

ಪುಟಚೆಂಡ ಎರಡು ಮಲಿಗಳು
ಸೆಟದ ಬಂದಾವ ಕುಟದ ಬಗರಿ
ಮಟಮಳ್ಳ ನನಕೂಡ ಮಾತನಾಡ
ಸೆಟ ಸೆಟದ ಅತ್ತತ್ತ ಹೋಗಬ್ಯಾಡ ॥

ಉಮ್ಮೇದ ಬಂದೀತ ಮಲಿಮ್ಯಾಲ
ಒಮ್ಮೆರೆ ನಾ ಹಿಡಿತೇನೇನ
ಸುಮ್ಮನ ನನ ಬಂದಕೂಡ
ಕದನವು ಬ್ಯಾಡ ಸುಮ್ಮಗ
ಮಾಡೋಣ ರತಿಕ್ರೀಡೆ ॥

ಕೋಗಿಲೆಂತ ಸ್ವರ ನಿಂದು
ಮೂಗ ಸಂಪಿಗಿ ತೆನಿ ಕಾಣ
ಭೋಗ ಸಂವಿ ತೋರಸ್ತೇನ ನೋಡ
ರುಚಿ ಹತ್ತಿದ ಬಳಿಕ
ಹೋಗ ಅಂದರ ಹೋಗಾಕ್ಕಿಲ್ಲ ಪಾಡ ॥

ಕಡದಿಟ್ಟ ನಾರಿ ಕರುಣಿರಲಿ
ನನ್ನ ಮ್ಯಾಲ
ಇಡ ನಿನ್ನ ಪ್ರೀತಿ ಮರಿಬ್ಯಾಡ ॥

* * *

## ೧೫. ಉಸರ ಹಾಕತೀನ ಉಣುವಾಗ

ಹೆಸರ ಇಡಬ್ಯಾಡ ಬಾಲಿ
ಕಸರ ಇಲ್ಲದಾಂವ ನಾನು
ಉಸರ ಹಾಕತೇನ ಉಣುವಾಗ ॥

ಗಂಡನಂಜಿಕಿ ನನ ಮುಂದ ಹೇಳಬ್ಯಾಡ
ನೋಡಿ ಬಿಟ್ಟಿದೇನ ಮನಗಂಡ
ಕುಂಡಿಯ ತಿರವಿ ಕೈ ಬೀಸಿ
ನಡಿತಾನ ಹೇಸಿ ಸೂಳೀಮಗ ॥

ನಂದು ನಿಂದು ಕೂಡಿತ ಬಾಳ ಮಿಗಲ
ದೇಸ ದೇಸ ಹುಡುಕಿದರೆ ಸಿಗಾಣಿಲ್ಲಾ
ತಾಸ ಮಾಸ ಹೇಳತೀನ ದೋಸಿಲ್ಲಾ ॥

ರಾಶಿ ಮಾತಿದು ನಾ ಸಾಗೋದಿಲ್ಲಾ
ಉಸರ ಹಾಕತೀನ ಉಣುವಾಗ
ನೆಂಪಾಗಿ ಉಣ್ಣೋದ ಬಿಟ್ಟ ಬಂದೇನ ॥

* * *



## ೧೬. ಸುಗ್ಗಿಮ್ಯಾಲ ಬತ್ತ ಕೊಡತೇನ

ಇದ್ದೂರಾಗಿನ ಗೆಣತಿ
ಮುದ್ದಾಗಿ ಇರಬೇಕಽ
ಸುಗ್ಗಿ ಮ್ಯಾಲ ಬತ್ತ ಕೊಡತೇನ ॥

ಆಷಾಡ ದಿನದಾಗ ಕಾಡಿ ನನ್ನ
ಕುಬಸದ ಲೆಕ್ಕ ಬೇಡಬ್ಯಾಡ
ಈ ವರ್ಷ ಭೂಮಿ ಆಗಿದಾವ ಕರಿಸಾಲ ॥

ಮುಂದಿನ ವರ್ಷ ಮಾಡತೇನ
ಮತ್ತೊಂದ ಹೊಲಾ
ಕೊಟ್ಟ ಹರಿತೇನ ನಿನ್ನ ಸಾಲಾ ॥

ಸುಗ್ಗಿ ಮ್ಯಾಲ ಬತ್ತ ಕೊಡತೇನ
ಎಲೆ ಹುಡಗಿ
ಇಡ ನಿನ್ನ ಪ್ರೀತಿ ಮರಿಬ್ಯಾಡ ॥

* * *

## ೧೭. ಖಂಡೀತ ನಿನ್ನ ಬಿಡೂದಿಲ್ಲ

ಉಂಡಾನೊ ಕೀಚಕನು
ಭಂಡ ಮಾತುಗಳನಾಡಿ
ಮುಂಡ ಭೀಮಸೇನ ಸೀಳೂಗದೊ ॥

ದ್ವಾಪರದೊಳಗಿನ ಮಾತ ತಂದ
ಸೋಪರಿಸಿ ನೀ ಹೇಳಬ್ಯಾಡ
ಗೋಪಾಲ ಕೀಚಕ ಮಾಡಿಟ್ಟ ॥

ಇಂದಿನವರಿಗಿ ಹೆಸರಾತ
ಈ ಕೀರ್ತಿ ಮಾಡಿಬಿಟ್ಟ
ಅವನಂಗ ಹೆಣ ಆಗಲಿ ನಂದು ॥

ಪ್ರಾಣ ನಿನಗ ಕೊಡತೇನ
ಅನುಮಾನ ಯಾಕ ಇನ್ನ ಆಸೆ ಬಿಟ್ಟ
ಮನ ಒಡದ ಆಗೇತಃ ಮಾ ಕೆಟ್ಟ ॥

ಬಿಟ್ಟರ ನಾನು ಗಂಡಸನಲ್ಲ
ಸೊಟ್ಟ ಮಾತಿನ ದುಷ್ಟ ನಾರಿ
ಕೊಟ್ಟ ಮಾಡ ಈಗ ಭೋಗಾಟ
ತುಟ್ಟಿ ತುದಿಗೆಃ ಮುಟ್ಟುವೆ
ಬಸವಣ್ಣನ ತಿಳಿ ಒಟ್ಟಾ ॥

ಗೊಂಡೇದ ಹೆರಳಾ
ಹಿಡದೇನ ಈ ಮಾತಾ
ಖಂಡೀತ ನಿನ್ನ ಬಿಡೋದಿಲ್ಲಾ ॥

* * *



## ೧೮. ಗ್ವಾಡಿ ಜಿಗದ ಬಾರ

ಕೂಡು ಮನಸ ಇದ್ದರ
ಗ್ವಾಡಿ ಜಿಗದ ಬಾರಃ
ನೋಡತಾರ್ಥೆಂಗ ನಿಮ್ಮವರಾ ॥

ಹೊತ್ತ ಮುಳಗಿದ ಬಳಿಕ ನಿಮ್ಮ
ಹಿತ್ತಲದಾಗ ಕುಂತಿರತೇನ
ಸುತ್ತ ಮುತ್ತ ಗೊಂಜಾಳ, ಬೆಳಿ ಜಡದಃ ॥

ಹಂತಾದರೊಳಗ ಒತ್ತರಮಾಡಿ
ಕಳದ ಬಾರ ದೀಪ
ನೋಡತಾರ್ಥೆಂಗ ನಿಮ್ಮವರ ॥

ನೋಡತಾರ್ಥೆಂಗ ನಿಮ್ಮವರ
ಎಲೆ ಹುಡಗಿ ಹಿತ್ತಲ ಬಾಗಿಲ
ಅಗಳಿ ಹಿರದಿಡ ॥

* * *

## ೧೯. ಮದವಿ ಹೇಣತಿ ಮರತೇನ

ವಸ್ತಾನ ಇಟಗೊಂಡ
ಶಿಸ್ತಾಗಿ ಬರುವಳೊ
ವಸ್ತಿ ಮಾಡಿಂದ ಮಾಳಿಗ್ಯಾಗ ॥

ಕೂಡಿದ ಕುಡಿ ಹುಬ್ಬ
ತೀಡಿದ ಬೈತೇಲಿ
ಹೆಣ್ಣ ಕಂಡೇನೊ ಯಾರವಳಾ
ಶಿವನ ಮನಿಯ ರಂಬಿ
ಪುತ್ತಳಿ ಹಂತವಳಾ ॥

ಏಳು ಮಂದಿ ಗೆಳತೇರು ಕೂಡಿ
ಬಾವಿಗಿ ನೀರಿಗಿ ಹೋಗುವಾಗ
ನಾ ನಿಂತ ನೋಡೀನು ಹಣಕಿ
ನೀ ಏನ ಬೇಡತಿ ಬೇಡ ಗೆಣತಿ
ಕೊಡತೇನ ಬಂಗಾರ ವಂಕಿ ॥

ಸುಳ್ಳುಪಳ್ಳ ಹೇಳಬ್ಯಾಡ
ಸಳ್ಳಹೊಡದ ಹೋಗಬ್ಯಾಡ
ಕಳ್ಳ್ಯಾಗ ಸಿಕ್ಕೀ ಒಮ್ಮ್ಯಾರ
ಅಂಜಿಕಿಲ್ಲದ ಮಂಚಾನೇರಿ
ಮಾಡೋಣ ಕಾಮಸುಖಾ

ವಸ್ತಾನ ಇಟಗೊಂಡ
ಶಿಸ್ತಾಗಿ ಬರುವಳೊ
ವಸ್ತಿಮಾಡಿಂದ ಮಾಳಿಗ್ಯಾಗ
ನಿನ ಸಲುವಾಗಿ
ಮದವಿ ಹೇಣತಿಮರತೇನ ॥

* * *



## ೨೦. ವಜ್ಜರ ತೇದ ಕುಡಿವೇನ

ಗೆಜ್ಜಿ ಪೈಜಣ ಕಟ್ಟಿ
ಹೆಜ್ಜಿ ಚೆಲ್ಲುವಳ್ಯಾರೊ
ಗುಜ್ಜರ ಹುಡಗಿ ನಡದಂಗ ॥

ಎಲಿಯ ತಿಂದ ಹೊಂಟಾಳಣ್ಣ
ಮಲಿಯ ಮ್ಯಾಲಿನ ಸೆರಗ ಒಗದ
ಬೆಲಿಯ ಇಲ್ಲದ ದೇವಲೋಕದ ರಂಭಾ
ನೆಲಿ ಮುರದ ಹೋದಂಗಾತೊ
ಹಿರಿ ಹೊಳಿ ತುಂಬ ॥

ಸುಂದರಿ ಕಂಡಾಕ್ಷಣಕ್ಕ
ನಿಂದರುವಲ್ತ ಧರಣೀಮ್ಯಾಲ
ಇಂದ್ರ ಹೋತ ನನ್ನ ಧೋತರ ತುಂಬ
ನೀ ಬಂದರ ಆಗೋದ
ನನಗ ಆರಂಭ ॥

ಗೆಜ್ಜಿ ಪೈಜಣ ಕಟ್ಟಿ
ಹೆಜ್ಜಿ ಚೆಲ್ಲುವಳ್ಯಾರೊ
ಗುಜ್ಜರ ಹುಡಗಿ ನಡದಾಂಗ
ಎಲೆ ಹುಡಗೀ ನೀ ಬರದಿದ್ದರ
ವಜ್ಜರ ತೇದ ಕುಡಿವೇನ ॥

* * *

## ೨೧. ಅಂಗಜನ ಬಾಣ ಹೊಡದಾವ

ಬಂಗಾರದ ಬಳಿಯಿಟ್ಟ
ಅಂಗಡಿಗೆ ಹೋಗುವಳೊ
ಮುಂಗುರುಳ ತಿದ್ದಿ ಒನಪೀಲೆ ॥

ಬಾಲಿ ನಿನ್ನ ಕಂಡಾಕ್ಷಣಕ
ನೀಲದ ಹರಳ ರತ್ನದಂಗ
ಮ್ಯಾಲ ಹೊಳಿತಾವ ವಾಲಿ ಜೋಡಾ
ಗಿಳಿಯ ರೂಪ ದ್ರಾಕ್ಷಿ ಬಳ್ಳಿ
ಸುರುಳಿ ಸುತ್ತಿದ ಪಾಡಾ ॥

ಪುತಳಿ ಸರದ ಮ್ಯಾಲ ಹೊಳೆವ
ರತನದ ಹಾರ ಏಕಾಽವಳಿ
ಒತನದಾರಗ ಕೊಟ್ಟಾರ ಒಯ್ಯಾರಿ
ನಾ ಬಡವಂತ ಮತ್ತನ ಬ್ಯಾಡ ॥

ನೋಡ ನನ್ನ ಮಾರಿ
ಮುಂಗುರುಳ ತಿದ್ದಿ ಒನಪೀಲೆ ॥
ಹೋಗುದ ಕಂಡ
ಅಂಗಜನ ಬಾಣ ಹೊಡದಾವ ॥

* * *



## ೨೨. ಇಂಚಲ ಕೊಮ್ಮಿ ಬಂದ್ಹೋಗ

ಹಂಚಿ ಬಟ್ಟಿನ ಮ್ಯಾಲ
ಮಿಂಚ ಕುಂಕುಮ ರೇಖ
ಪಂಚ ವರಣೈತಿ ನಿನ ಸೀರಿ

ಸಾವಕಾರ ಮನಿಗಿ ಕೊಟ್ಟಾರೇನ
ಒಡ್ಯಾಣಂತು ನಿವಳೈತಿಽ
ಶುಭ ಕಾರ್ಯ ತೀರಿದಂಗ ಕಾಣೋದಿಲ್ಲ
ಮೈನೆರದೆ ಏನಽ
ಕನ್ನಡಿ ಪರಿ ಮಿಂಚತಾವ ಗಲ್ಲ ॥

ಕಟ್ಟಾಣಿ ಗುಂಡಿನೊಳಗ
ಪುಟವರದ ಪುತಳಿಸರಾ
ರತನದಂತಾ ಏಕಾವಳಿ ಹಾಽರ ॥

ಪಂಚರ್ವಣದ ಹೆಣ್ಣಾ
ನೀ ಹೆಚ್ಚುತ ನಾ ಬನ್ಯ
ಪಂಚರ್ವಣೈತಿ ನಿನ ಸೀರಿ
ಎಲೆ ಬಾಲಿ ಪಂಚರ್ವಣೈತಿ ನಿನ ಸೀರಿ
ಇಂಚಲಕೊಮ್ಮೆ ಬಂದ್ಹೋಗ ॥

* * *

## ೨೩. ಮದರಂಗಿ ಗೊನಿಯ ಮರಿಮಾಡ

ಕುದರಿಯ ಕುಣಸುತ
ಚದುರ ಎದುರಿಗೆ ಬಂದ
ಮದರಂಗಿ ಗೊನಿಯ ಮರಿ ಮಾಡ ॥

ಕಾಲಿಗಿ ಕಾಲುಂಗರ ತನ್ನ
ಮೇಲ ತೋಡೇನ ತನ್ಯ
ಮೂಗಿನ್ಯಾಗ ಮೂಗಬಟ್ಟ ತನ್ಯ
ನಡಿನ್ಯಾಗ ಒಡ್ಯಾಣ ತನ್ಯ
ಕಿವಿನ್ಯಾಗ ಹೂವನ ತನ್ಯ
ಹಚ್ಚಾಕ ಕುಂಕುಮ ತನ್ಯ ॥

ಕೊಳ್ಳಾಗ ಚಿಂತಾಕ ತನ್ಯ
ಚಿಂತಿ ಮಾಡಬ್ಯಾಡ ಅನ್ಯ
ಜರದ ಕುಬಸ ತನ್ಯ
ತರದ ಮಡಿಯ ತನ್ಯ
ಮಲಗು ಮಂಚವ ತನ್ಯ
ತೆಲಗುಂಬ ಲೋಡನ ತನ್ಯ
ಹಾಸು ಗಾದೀನ ತನ್ಯ
ಹಚ್ಚಾಕ ಸಮಯನ ತನ್ಯ
ಒಳ್ಳೆ ಸಮಯಕ ಬನ್ಯ
ಕೂಡಿ ಮಲಗಾಕ ಬನ್ಯ

ಮದರಂಗಿ ಗೊನಿಯ ಮರಿ ಮಾಡಿ
ಗೆಣಿಯಾಗಿ ಇದರಗೊಳ
ಎಲೆ ಹುಡುಗಿ ಇರುಳಲ್ಲಿ ॥

* * *



## ೨೪. ಏನ ಬೇಡತಿ ಬೇಡ

ಜಾಕ ಪಾಕ ಜೋಕ ನಾರಿ
ನೋಕ ತಾರಿ ಹಂಗ
ಚಕಮಕಿ ಕುಟದಂಗ
ತಾರಕ್ಕಿ ಮೂಡಿದಾಂಗ
ಚಿಟ್ಟುಚೌಡ್ಲ ಸಿಡಿದಾಂಗ
ಸುಂಟರಗಾಳಿ ಸುಳಿದಂಗ
ನಿನ ಸುರತ ಕಂಡಿನಲಾ ಒಂದ ಜರಾ
ಮರತ ಬನ್ಯ ಮನಿಮಾರಾ ॥

ಏನ ಹಿಂದ ಮುಂದ ನಡಿತಾಳ
ಸೂಸ ಗಾಳಿ ಬಡಿದಾಂಗ
ಹೊಳಿ ನೆಲ ಮುರದಂಗ
ಬಾಳಿಗೊನಿ ಬೆಳೆದಂಗ
ಏನ ಬಾಗಿ ಬಂತ ನಿನ್ನ ಭಾರಾ
ಊರಾಗ ಇಲ್ಲ ನಿನ್ನ ವರಾ ॥

ಏನ ನಿನ್ನ ಕುಚ ರುಚಿ
ಊಚ ನಿಂತಿ ಹಣ್ಣಿನಾಂಗ
ಒತ್ತಿದರ ಅತ್ತಿ ಹಣ್ಣಿನಂಗ
ತಿಂದರ ಪೇರು ಹಣ್ಣಿನಂಗ
ನಿನ್ನ ಸವಿಯ ತಕ್ಕೊಂಡಿಲ್ಲ ಯಾರ್‍ಯಾರಾ
ಹೆಂಗ ಹೋತ ನಿನ್ನ ಹರೆ ಭಾರಾ ॥

ಹೊಸಬಾವಿ ನೀರ ಜಳಜಳಾ
ಕೊಡಬೆಳಗಿ ತರತಿದ್ದಿ ಥಳಥಳಾ
ಹೊಳೆವುತಿತ್ತ ಬಾಳಸವಳಾ
ಕಾಮ ಏರಿದಾಂಗ ಆತ ಏಕಾ ಏಕಿ ॥

ಏನ ಬೇಡತಿ ಬೇಡ
ವಾಲಿ ಕೊಡತೇನ ಎಲೆ ಹುಡಗಿ
ಒಲ್ಲಿ ಅನಬ್ಯಾಡ
ಬಾ ನನ್ನ ಹಿಂಬಾಲಿ
ಹೊಡವತೇನ ಜೋಲಿ ॥

* * *

## ೨೫. ಶೀಲವಂತಿ ಸಿಟ್ಟ ಮಾಡಬ್ಯಾಡ

ಇರೂನಿಬ್ಬರು ಕೂಡಿ
ವರಾಸುದ್ದ ಕಾಣೋನ
ಶೀಲವಂತಿ ಸಿಟ್ಟ ಮಾಡಬ್ಯಾಡ ॥

ಹೋದ ವರ್ಷ ಸಣ್ಣಕಿದ್ದಿ
ಹೊಲಸಿ ಗತೆ ಕಾಣತಿದ್ದಿ
ಹೊಲಕ ಮನಿಗಿ ಓಡ್ಯಾಡತಿದ್ಯನೀನ
ಈ ವರ್ಷ ಎಂತಾಬರಾ
ಕಣ್ಣಕಿತ್ಯ ಬಾಲಿ ॥

ಹೋಳಿಯ ನೀರಿಗಿ ಹೋಗುವಾಗ
ಎಳಿಯ ಬಿಲಿಸಿಗಿ ಕುಂತಿನ್ಯನಾನಾ
ಥಳಾಥಳಾ ಹೋಳಿಯತಿತ್ತು ಗೆಜ್ಜಿಟಿಕ್ಕಿ
ಏನ ಸುದ್ದ ಸುಳದಾಂಗಾದೆ ॥

ಸೂತರ ಗೊಂಬಿ ಹಂಗ
ಏನ ಬೇಡತಿ ಗೆಣತಿ
ಕೊಡತೇನ ಬಂಗಾರ ವಂಕಿ ॥

ಶೀಲವಂತಿ ಸಿಟ್ಟ ಮಾಡಬ್ಯಾಡ
ನನ ಮಾತಾ
ಅರುವಿಟ್ಟು ಕೇಳ ಗುಣವಂತಿ ॥

* * *



## ೨೬. ಚೆದುರಿ ಚಿಗರಿಮರಿಹಂಗ

ಯಾರವಳು ಸ್ತ್ರೀಯಳೊ
ಭಾರಕ ಬಂದಿಹಳೊ
ಮೈ ನೆರೆದ ನೋಟ ಮುಖದಲಿ ॥

ಚೆದುರಿ ಚಿಗರಿಮರಿಹಾಂಗ
ಬೆದರಿ ನಿಂದರಬ್ಯಾಡ ಪೋರಿ
ನಿಗರಿ ಬಂದಾವ ಎದಿ ಮ್ಯಾಗ ಕುಚಗೋಳ
ಸರಸ ಕುಚ ನಿರಸವಾಗಿ
ಕೊಡ ಕೈ ಒಳಗ ॥

ಶಾಮುಸುಂದರನಂತ ಹುಡಗ
ಕಾಮವೇರಿ ಕೇಳತೇನ
ನೇಮ ಒಂದ ಹೇಳವಲ್ಲಿ ಮಾತ ॥

ಮೈನೆರೆದ ನೋಟ ಮುಖದಲಿ
ಏ ಬಾಲಿ ಕಣಾ ನೋಡಿ
ಹೊರಳಿ ಬೀಳುವೆನ ॥

* * *

## ೨೭. ಹೆಚ್ಚೇನ ವಂಕಿ ಕೊಡತೇನ

ಕಿಚ್ಚ ಬೆಂಕಯಂಥ ಕೆಂಚನಾಯ್ಕ
ಅಚ್ಚ ಕೊಂಕಿನ ಬಾಲಿ
ಹೆಚ್ಚೇನ ವಂಕಿ ಕೊಡತೇನ ॥

ಸುರಳಿಗೂದಲ ಸುಗುಣಿ ನೀನು
ಸರಳಾಗಿ ಬೇತಲ ತಗದ ಕೊಂಡ
ಎರಳಿ ಹೊಂಟ್ಯ ನಮ್ಮ ಓಣಿ ಹಿಡದಽ
ನಿನ್ನ ನೋಡಿ ನಿಂತಿದೇನ
ನಾನು ದಂಗಬಡಽದ ॥

ಜರದ ಧಡಿ ಸೀರಿ ಉಟ್ಟು
ತರದ ಕುಬಸಾ ತೊಟ್ಟ ಬಾಲಿ
ಕರದೇನಂದರ ಬರವಲ್ಲಿ ನನ್ನ ಹಿಂಬಾಲಿ ॥

ಹೆಚ್ಚೇನ ವಂಕಿ ಕೊಡತೇನ ಬಾಲಿ
ಇಂಚಲದ ಬಂಕನಾಥ ಗೊಮ್ಮಿ ಬಂದೋಗ ॥

* * *



## ಭಾವಗೀತಾತ್ಮಕ ಹಾಡುಗಳು

### ಭಾಗ – ೨

೨೮) ಚೆಂದಾಗಿ ಪೂಜಿ ಮಾಡುವೆನೊ
೨೯) ಸೇವೆ ಮಾಡುವೆ ಮನಪೂರ್ಣ
೩೦) ದಯಪೂರ್ಣ ಮಾಡು ನಮ ಮ್ಯಾಲ
೩೧) ಶಂಕೆ ಇಲ್ಲದಲೆ ಭಜಿಸುವೆನೊ
೩೨) ಮನ್ನಿಸಿರಿ ಎನ್ನ ಮಾತು
೩೩) ಹ್ಯಾವಕ ಬೀಳುವ ಜನರು
೩೪) ತಾನೆ ತಾನಾಗಿ ಅರಿಬೇಕ
೩೫) ಈಶ್ವರನ ಮಹಾತ್ಮೆ ಒಬ್ಬರಿಗೆ ತಿಳಿದಿಲ್ಲ
೩೬) ದೂರೈತೊ ತಮ್ಮಾ ಗೆದೆಯುವುದಾ
೩೭) ಹದ್ದಿಗಿ ಸರ್ಪ ಈಡೇನೊ
೩೮) ಕಡ್ಲೆ ಎಲ್ಲೋ ಕಲ್ತುಬಂದಿ
೩೯) ಹೇಳ್ತಿ ಮ ಂದೀಗಿ ಕರಕರದು
೪೦) ಕೋಳಿ ಹಾಂಗ ಕಾಲಕೆದರುವಿಯೊ
೪೧) ಹಿಂಗ್ಯಾಕ ತಪ್ಪ ಕಲಸೀದಿ
೪೨) ದೀಪ ಲಯವಾಗಿ ಹೋಗುವುದು
೪೩) ಹಾಡತಾವ ಹಾಡ ಹುಡುಹುಡುಕಿ
೪೪) ಒಂದಾರ ಹಾಡು ಹಿಂತಾದು
೪೫) ಬಿಟ್ಟು ನಾಚಿಕೆಯ ಹೇಳುವೆನೊ

ಸಂಪಾದಕರು
**ಡಾ. ಮ.ಗು. ಬಿರಾದಾರ**

## ೨೮. ಚಂದಾಗಿ ಪೂಜಿ ಮಾಡುವೆನೊ

ಗಂಧ ಅಕ್ಷತಿ ಧರಿಸಿ
ಇಂದು ನಮಗ ಗಣಪಯ್ಯ
ಚಂದಾಗಿ ಪೂಜಿ ಮಾಡುವೆನೊ ॥

**ಚಾಲ** ॥
ಲಂಬೋದರ ನಾ ನಿನ್ನ ।
ನಂಬುವೆನೊ ಸಭಾದೊಳು ।
ಶಂಭು ಶಂಕರ ಕೊಡೋ ನಮಗ ಜ್ಞಾನ ।
ತಾಳ ಮೃದಂಗ ತಂಬೂರಿಯೊಳಗ
ಮಾಡೇವ ನಿಮ್ಮ ಸ್ತವನಾ ।
ವಾಯಿನಿ ಸಂಗೀತದೊಳು
ಮಾಯಿನ್ನ ಮಾಡೇರಿ ನಿಮ್ಮ ।
ಗಾಯನ ಹೆಚ್ಚ ನಿಮ್ಮ ವರ್ಣ
ತಪ್ಪಂದ ನಿಮ್ಮ ಗಾಯನ್ನಿ ಮಾಡುವೆ ಒಂದಸವನ ।
ಚಂದಾಗಿ ಪೂಜಿ ಮಾಡುವೆನೋ
ಗಣಪಯ್ಯಾ ಬಂದ ವಿಘ್ನವನು ಪರಿಹರಿಸೊ ।

* * *



## ೨೯. ಸೇವೆ ಮಾಡುವೆ ಮನಪೂರ್ಣ

ದೇವಿ ಸರಸ್ವತಿ ನಿನ್ನ ಕವಿಗೆ ನಾ ಮೊದಲಾಗಿ
ಸೇವೆ ಮಾಡುವೆನು ಮನ ಪೂರ್ಣಾ

**ಚಾಲ** ॥
ಮುತ್ತಿನ ನುಡಿಗಳ ನಿನ್ನ ।
ಚಿತ್ತದಲ್ಲೆ ಇಡವೂತೇನ ।
ಮತ್ತ ಪ್ರಸನ್ನಾಗ ಏ ತಾಯಿ ।
ನಾಲಿಗಿ ಮ್ಯಾಲೆ ನಿಂತ ಕೊಡ ವಿದ್ಯೆದ ಬಾಯಿ ।
ಪರಿಮಳ ಪುಷ್ಪದ ಶಾಲಾ ।
ವರ ಚರಣಕ್ಕೆ ಧರಿಸುವೆನ ।
ವರಗಳ ಬೇಡುವೆನ ಮುಗದ ಕೈ ।
ಪ್ರಾಸ ನಿನ್ನ ಏರಿಸಿ ಬೇಡುವೆನೆ ಭಿಕ್ಷಾಂದೇಹಿ ।
ಸೇವೆ ಮಾಡುವೆ ನಮನ ಪೂರ್ಣ ಸರಸ್ವತಿಯ
ದೇವಿ ಇಂಚಲಕ ದಯವಾಗ ।

* * *

## ೩೦. ದಯಪೂರ್ಣ ಮಾಡು ನಮ ಮ್ಯಾಲ

ತಾಯೀ ಸರಸ್ವತಿ ನಿನ್ನ ಕವಿಗೆ

**ಚಾಲ** ॥

ತಾಯಿ ಸರಸ್ವತಿ ಸೇವೆ ಮಾಡುವೆನು
ಸಹಾಯ ಆಗ ಈ ಸಭಾದಲ್ಲಿ
ಸಹಾಯ ಆಗ ಈ ಸಭಾದಲ್ಲಿ ॥
ಚರಣಕೆ ಎರಗಿ ಶರಣ ಮಾಡುವೆನು
ಕರುಣ ಇಡವ್ವ ಭಕ್ತರ ಮ್ಯಾಲಿ ।
ಬಂದ ವಾಕ್ಯಗೋಳ ಚಂದಾಗಿ ಕೊಡ ತಾಯಿ
ಹೊಂದುವೆ ನಾ ನಿಮ್ಮ ಚರಣದಲಿ
ವಂದನ ಮಾಡುವೆನು ಬಂಧನ ಕಡಿ ತಾಯಿ
ಬಂದ ನಿಂತ ನಾಲಿಗಿ ಮ್ಯಾಲ ॥

**ಚಾಲ** ॥

ತಾಯಿ ಸರಸ್ವತಿ ನೀನು ।
ಲಾಲಿಸೆನ್ನ ವಚನವನು ।
ನಿಂತ ಬೇಡಿ ಕೊಂಬುವೆನು ।
ಪ್ರಸನ್ನಳಾಗವ್ವ ನೀನು ।
ಸೇವೆ ಮಾಡುವೆ ನಮನ ಪೂರ್ಣ ಸರಸ್ವತಿಯ
ದಯ ಪೂರ್ಣ ಮಾಡ ನಮ ಮ್ಯಾಲ

* * *



## ೩೧. ಶಂಕೆ ಇಲ್ಲದಲೆ ಭಜಿಸುವೆನೊ

ಶಂಕ ಚಕ್ರಾಯುಧದ ಶಂಕರನ ನಂದನನೆ
ಶಂಕೆ ಇಲ್ಲದಲೆ ಭಜಿಸುವೆನೊ ॥

**ಚಾಲ** ॥

ಪಾರ್ವತಿ ವರಪುತ್ರಾ ನಿನ್ನ ।
ಪರಿಪರಿಯಿಂದ ಸ್ತುತಿಸುವೆನು ।
ಪರಿಹರಿಸೊ ವಿಘ್ನವ ಗಣನಾಥಾ ।
ಹರುಷದಿಂದ ಸ್ಮರಿಸುವೆನು ಈಗ ಏಕದಂತಾ ।
ವಂದಿಸಿ ಕರಗಳ ಮುಗಿದು ।
ಬಂದು ಚರಣಕ್ಕೆರಗುವೆನು ।
ಬಂಧನ ಕಡಿಯೋ ಬಂದಂಥಾ ।
ದೈವಾಗೊ ಗೌರಿನಂದನ ನನ್ನ ಮ್ಯಾಲಿಟ್ಟು ಚಿತ್ತ ॥
ಶಂಕೆ ಇಲ್ಲದಲೆ ಭಜಿಸುವೆನೊ
ಇಂಚಲದ ಬಂಕನಾಥನ ವರಪುತ್ರ ॥

* * *

## ೩೨. ಮನ್ನಿಸರಿ ಎನ್ನ ಮಾತು

ಶ್ಯಾಣೆರಿಗೆ ಕರ ಮುಗಿವೆ ಮನ್ನಿಸರಿ ಎನ್ನ ಮಾತು
ಪನ್ನಗಾಧರನ ಭಜನಿಯನು ।

**ಚಾಲ** ॥
ಅಳದ ಆರಗುಣ ಬಿಡಬೇಕು ನೀ
ಕಳದ ಮೂರಮಲ ತೊಳಿಬೇಕು
ಒಳಗ ಹೊರಗ ಒಂದಿರಬೇಕು
ತಿಳಿಯ ನೀರಿನ್ಹಾಂಗ ನಿರ್ಮಳವಿರಬೇಕು ।
ಚರ್ಮ ತೊಳದರ ಕರ್ಮ ಹೋಗುವದೇನು
ವರ್ಮ ಮಾಡಿಯೇನ ಸುಡಬೇಕು
ಧರ್ಮಗುಣ ನಿನ್ನಲ್ಲೆಯಿದ್ದರ ನಾಚಿಕಿ ಹಿಡಬೇಕು ।
ಗುರು ಚರಣಕ ನಂಬಿಕಿಯಿರಬೇಕು
ಬಲ್ಲ ಹಿರಿಯರು ಹೇಳಿದ್ದು ಅರಿಬೇಕು
ಧರೆಯೊಳು ಇಂಚಲ ಊರ ಹೊಕ್ಕು
ಹರ ಬಂಕನಾಥನ ಪದ ದೊರಿಬೇಕು

**ಏರ** ॥
ಪಂ ಬಂ ಮಾಡಿದರ ಮುನ್ನ
ಮುಕ್ತಿಯನು ಕೊಡವುವನು ॥

* * *



## ೩೩. ಹ್ಯಾವಕ ಬೀಳುವರು ಜನರು

ಕವಿಯ ಮಾಡುವೆನೆಂದು
ಹ್ಯಾವಕ ಬೀಳುವರು ಜನರು
ಸವಿಯು ಒಳಗಿಂದು ತಿಳದಿಲ್ಲಾ ॥

**ಚಾಲ** ॥
ಪ್ರಾಸಯುಕ್ತ ಪದಾ ಮಾಡಿ
ತ್ರಾಸದಾಗ ತೂಗಿದ್ಹಾಂಗ
ರಾಸ ಇಡಬೇಕೆಣಿಸಿ ಅಕ್ಷರ ।
ಹೆಚ್ಚು ಕಮ್ಮಿ ಬಗಳ ಬಾರದ ಮಜಕೂರ ।
ಎಲ್ಲಾರು ಮಾಡೋರು ಕವಿ ಬಲ್ಲವರಂತ
ಮನಿಮನಿಗೆ ಎಲ್ಯೋ ಎನೋ ಉಳದ ಕವೀಶ್ವರಾ ।
ಪೃಥ್ವಿ ಮ್ಯಾಲೆ ಲಕ್ಷೊಬ್ಬ ಶಾಣ್ಯಾ ಚತುರಾ ॥
ಆಸಿಹಂತಾ ಕವಿ ಮಾಡಿ ಹಾಡತೇವಂತ್ಹೇಳತಾರು ।
ಕುದರೀಗೆ ಸರಿಯೇನೊ ಚಯ್ ಟಗರಾ ।
ಥೋಡೆ ಬುದ್ಧಿ ಕಡಿಮೆ ಕವಿಯವರ ಬಾಯಿ ಹಗರಾ ॥

**ಏರ** ॥
ಸಂ ವಂ ತಿಂ ಇಂಚಲದ ಶಿವ ಬಂಕನಾಥ ವಲದಿಲ್ಲಾ ।

* * *

## ೩೪. ತಾನೆ ತಾನಾಗಿ ಅರಿಬೇಕ

ಮಾನದಿಂದ ಘನ ಜ್ಞಾನವಂತರ ಕೇಳಿ
ತಾನೆ ತಾನಾಗಿ ಅರಿಬೇಕು ।

**ಚಾಲ** ॥

ಹಿಡಿ ಸಾಧು ಸಂತರ ಹಾದಿ
ಸುಳ್ಳ ಓದೋದಿ ಕಲತಿದಿಯೋ
ಮಾಯ ಮಡವಿನೊಳು ಕಡಕೊಂಡು ಬಿದ್ದಿ ।
ನನಗ ಬಂದಿತ ಕೇಳ ಮಾಯದ ನಿದ್ದಿ ।
ಯೋಗಿ ಜನಕ ಮಾಡಬೇಕ ಶರಣ
ಅಂದವಗಿಲ್ಲ ಮರಣ ಹೀಂಗ ಶಾಸ್ತ್ರ ಶಾಸ್ತ್ರ
ನಮ್ಮ ಹಾಡ ಬಂಗಾರದ ತೂಕ ಹಿರಿದ ಹೊಸತರ ॥
ಕೇಳಿದ ಪದ ಆಗಿ ಆನಂದ ಆನಂದ ।
ಗುರು ಶಿಷ್ಯರ ಆಗಬೇಕ ಬಂದಾ ಕೇಳಿ ಬಂದಾ ।

**ಏರ** ॥

ತಾಂ ತಾಂ ಆಂ ಇಂಚಲದ ಭೂನಾಥನ ಪಾದ ದೊರಿಬೇಕು ।

* * *



## ೩೫. ಈಶ್ವರನ ಮಹಾತ್ಮೆ ಒಬ್ಬರಿಗೆ ತಿಳಿದಿಲ್ಲ

ತತ್ವಜ್ಞಾನಿಗಳೆಲ್ಲಾ ತತ್ವದೊಳಗ ಇರುವ
ಪರತ್ವಗೆಡಹಿದರು ಜನರೆಲ್ಲಾ ॥

**ಚಾಲ** ॥

ಸುತ್ತಮುತ್ತಯಿರುವ ಜನರು
ತಮ್ಮ ತಮ್ಮವರೊಳಗ ಒಂದಾಗಿ
ಹಿತವಾಗಿ ಪ್ರಪಂಚ ಮಾಡಿ ಮೂಢ।
ಯತಿ ಮಾನ್ಯಗಳ ಪಾದಗತಿ ಮರತಿ ಮೂಢ।
ಸುಮ್ಮನ ದಿನಗಳ ದಮ್ಮಿಲಿ
ಒಮ್ಮಿಂದ ಕಳಿಯಬ್ಯಾಡಾ ।
ಸತಿಸುತರೊಡಗೂಡಿ ಮರಿಯ ಬ್ಯಾಡ ।
ದಿನಗೋಳ ಬಹಳ ನಾಜೂಕ ಬಂದಾವ ತಿಳಿಯೊ ಮೂಢಾ ।
ಪರ ಉಪಕಾರ ಮಾಡಿ ಪರಮೇಶ್ವರನ ಕಾಣೊ ಅತಿ ದವಡಾ ।
ಬಂಕನಾಥನ ಚರಣವ್ರ ಹಿಡಿ ಹಿಡಿ ಮರೆಯಬೇಡಾ ।

**ಏರ** ॥

ಪಂ ಗಂಜಂ ಈಶ್ವರನ ಮಹಾತ್ಮೆ
ಒಬ್ಬರಿಗೆ ತಿಳದಿಲ್ಲಾ ॥

* * *

## ೩೬. ದೂರೈತೊ ತಮ್ಮಾ ಗೆದೆಯುವುದಾ

ಮೂರ ಹಾಡೋದರೊಳಗ ತೀರಿತ ನಿನ ಸಂತಿ
ಯಾರಿಗೇರ ಒಂದ ಹಾಡಂತಿ ॥

**ಚಾಲ** ॥
ಅರಿಯದವರ ಮುಂದ ಬಹಳ ಹೆಮ್ಮಿ ಮಾಡಿ ತೋರಸತಿ
ಗೋರ ಬಿಟ್ಟು ಒಂದು ಅರದಾಕಲ್ತಾ ।
ಜಿಗದಾಡತಿದ್ದಿ ಪೂರಾ ಬಂತೊ ಈಗ ನಿನ್ನ ಸುತ್ತಾ ।
ಹೆಂತಾ ಹುಲಿ ಮುಂದ ನಿಂತ ಅತ್ತ ಮಾತಾಡಿದರೆ
ಒಂದ ಬೇತ ಮಾಡತತಿ ತಿನಬೇಕಂತ ।
ಅದರಂತ ಸೋತ ಬಿದ್ದ ಹೋಗತೇರಿ ತುರ್ತು ಅತ್ತಾ ॥
ಹೋಳಿ ಹುಣ್ಣಿವಿ ಸವಿ ಕೂಳ ತಿಂದ ಬಹಳ ಉಮೇದ
ತಾಳಲಾರದ ತಾಳಗೆಟ್ಟ ಹಾಡತಿ ಕಂಡಂತಾ
ತಾಳದೊಳಗ ಹೇಳಿದರ ನಿನಿಗೇನ ಗೊತ್ತಾ

**ಏರ** ॥
ಯಾರಿಗೇರ ಒಂದ ಹಾಡಂತಿ ಸಭಾದಾಗ
ದೂರೈತೋ ತಮ್ಮಾ ಗೆದೆಯುವದಾ

* * *



## ೩೭. ಹದ್ದಿಗೆ ಸರ್ಪ ಈಡೇನೊ

ಬಿದ್ದ ಹಾಡೇವು ನಾವು ಜಿದ್ದ ಮಾಡಲಿ ಬ್ಯಾಡ
ಉದ್ದ ಆದದ್ದು ಮುರಿಯುವದು ॥

**ಚಾಲ** ॥
ಹಮ್ಮ ಬಂದ ಹರಿ ಬ್ರಹ್ಮಾದಿಗಳೆಲ್ಲಾ
ತಮ್ಮ ತಮ್ಮೊಳು ನಾಚ್ಯಾರು
ಕಮ್ಯಾವ ನೀ ಏನ ಬಲ್ಲ್ಯೊ ಈ ಸಾರು ।
ಒಮಿಂದೊಮ್ಮೆ ಈವಿಟ ಹಾಡವರು ।
ಬ್ರಮಾಬಡದ ನಿಂತಿ ಯಾಕೆ ನೀ ದೂರ ।
ತಮ್ಮಾ ಇದ ಒಮ್ಮೆ ಹೇಳತೇನ ಹುಸಿಯಾರು ।
ಆಗಿನ್ಹಾಂಗ ಬೇಗಳ ಪದ
ಈಗ ಬೆಯ್ಯೋ ಹಾಂಗ ಕಾಣತತಿ
ಬೇಗ ನಿನ್ನ ಮೂಗ ಕೊಯ್ಯವರು
ತೂಗಿ ನೋಡೊ ಜಾಣಾ ಪಾಯಾ ಪ್ರಾಸಗಳಕ್ಷರ ॥
ಬಾಗತೆಲಿ ಹೋಗಯಿನ್ನ ಮರತಿ ಇದರಾಗ ಫೇರು
ಮುಗಳ ನಗಿ ನಗತಾರ ಜನರು ।
ಜಗಳ ಬ್ಯಾಡ ಬೊಗಳಿ ಹಿಂತ ಹಾಡ ಮಾಡಿ ತೋರು ।

**ಏರ** ॥
ಉಂ ಆಂ ಮುಂ ಇಳಿವೊಗಳ
ಹದ್ದಿಗೆ ಸರ್ಪ ಈಡೇನೊ ॥೪॥

* * *

## ೩೮. ಕದ್ದಲೆ ಎಲ್ಲೊ ಕಲ್ತಬಂದಿ

ತಿದ್ದಿಪದ ಮಾಡಕ್ಕಿ ಬುದ್ದಿ ನಿನಗೆಲ್ಲೀದೊ
ಕದ್ದಲೆ ಎಲ್ಲೊ ಕಲ್ತಬಂದಿ ।

**ಚಾಲ** ॥
ನಿನ್ನೊಳಗ ನೀ ಶಾಣ್ಯಾನಾದಿ
ನನ್ನ ಹಾಂಗ ಯಾರೂ ಇಲ್ಲ ಅಂದಿ
ಹನ್ನೆರಡ ತಿಂಗಳಾತಿ ಹಾಡ ಮಾಡಿದಿ
ನಿನ್ನ ಸರಿ ಕುನ್ನಿ ಅಳತತಿ ಏನ ತೋರಿದಿ ।
ಅಲ್ಲೆ ಇಲ್ಲೆ ಬಲ್ಲವರ್ಧುತ್ಯಾಕ
ಇಲ್ಲದ ನುಡಿ ಒಂದ ಕಲಕೊಂಡಿ ।
ಹಾಡೊ ಹಿಂತಾವ ಹೆಂತಾವ ಸುಮ್ಮನ ಬರಕೊಂಡಿ ।
ನೀ ಕುಲತಿಲ್ಲ ಬಲತಿಲ್ಲ
ನಿಲ್ಲತೀಯ ಗೇಣಸಿ ತೆಲಿ ಕೆರಕೊಂಡಿ ।

**ಏರ** ॥
ತಂ ಬಂ ಕಂ ಈ ಹಾಡಾ ಖುದ್ದ ಮಾಡಿಲ್ಲೊ ಮಂದೀವ್ರು ॥೫॥

* * *



## ೩೯. ಹೇಳ್ತಿ ಮಂದೀಗಿ ಕರಕರದು ನಿನ್ನ ಹಾಡಾ

ಬೆಳತನಕ ಗೇನಸಿದಿ ಅಳತಿ ಮಾಡಿದಿ ಹಾಡಾ ಹೇಳ್ತಿ
ಮಂದೀಗಿ ಕರಕರದು ।

**ಚಾಲ** ॥
ಅರೇದವರ ಮುಂದ ದೊಡ್ಡ ಹಿರ್‍ಯಾನ್ಹಾಂಗ ಹೇಳತಿಯೊ
ಗೋರ ಬಿಟ್ಟ ಮಾಡಿನ್ನಂತಿ ಪದಾ ।
ಸುಡಗಾಡ ಸಂತಿಯವರ ಕೇಳಬೇಕೊ ಹಿಂತಾದ ।
ಅವೇನ ಬಲ್ಲವ್ರು ನಿಮ್ಮ ಹುಡುಗೋರು
ಉಪ್ಪುಖಾರಾ ತಿಳಿಯಾಣಿಲ್ಲ ।
ಹಾಡ ಅಂದ್ರ ತಿಳಿಯೊಣಿಲ್ಲ ।
ಹಾಡ ಅಂದ್ರ ತಿಳಿಯೊಣಿಲ್ಲ ।
ಹಾಡ ಅಂದ್ರ ಹಿಗ್ಗತಾವ ಬಂದಾ ।
ಕಲಕೋತಾವ ನೀ ಹೆಂತಾದ ಕಲಸಿದಾಂತಾದಾ ।
ಪ್ಯಾಲಿ ಹುಡಗುರು ಮುಂದ ನೀನು
ಬಲ್ಲವನ್ಹಾಂಗ ಗುಲ್ಲ ಮಾಡಿ
ಹಲ್ಲತಿಂದ ಹೇಳ್ತಿ ತಪ್ಪಿದ್ದಾ ।
ಅಲಲಲ ಅಂತಾವ ತಿಳೀದುಲ್ಲ ಹಿಂದ ಮುಂದ ॥

**ಏರ** ॥
ಹೇಳತಿ ಮಂದಿಗಿ ಕರಕರದು ನಿನ ಹಾಡಾ
ಹುಳತ ಗುರಿಯಳ್ಳಯಿದ್ದಾಂಗ ॥

* * *

## ೪೦. ಕೋಳಿ ಹಾಂಗ ಕಾಲ ಕೆದರುವಿಯೊ

ಹೇಳವರ ಇಲ್ಲ ನಿನಗ ಗೀಳ ಪದಗಳ ಮಾಡಿ
ಕೋಳಿ ಹಾಂಗ ಕಾಲ ಕೆದರುವಿಯೊ ।

**ಚಾಲ ॥**
ಚಂದಾಗಿ ಹಾಡಿರೆಂತ ಮಂದಿ ಒಳಗ ತಂದ ನಿಲ್ಲಿಸಿದಿ
ಅಂದ ತರಸೊ ಅವರ ತಪ್ಪತಾರು ।
ಹಿಂದ ಮುಂದ ಆಗಿ ನಿನ್ನ ಮಾರಿ ನೋಡತಾರು ॥
ಜೀವದಾಗ ಸನಮಂತಿಲ್ಲಾ ಏನ ಮಾಡ್ಯಾವಪ್ಪಾ
ಎದಿ ಡವ ಡವ ಅಂತ ಬೆವತಾರು ।
ತಗದ ನೋಡ್ರಿ ಬಗಲ ಗೂಡ ಹೋಗ್ತಾವ ನೀರು ।
ಮುಗುವೆನ ಕಯ್ಯಾ ನಗಬೇಡರೆಣ್ಣಾ
ಅಗದಿ ಖರೆ ಆದ ಮಾತ ನಂದು
ಬಿಗಿ ಬಂತಂತ ಉಸರುಗಳುತಾರು ।
ಅವರಿಗೆ ಬರದಿರ ಏನ ಮಾಡ್ಯಾರಪ್ಪ ಕೆಲಸವರು

**ಏರ ॥**
ಕೊಂ ಹಾಂ ಕಾಂ ಕೆಂಬೆಕ್ಕ ಬಂದ್ರ ಮಾಳಿಗಿ ಹತ್ತಿ ನೋಡುವಿಯೊ ॥

* * *



## ೪೧. ಹಿಂಗ್ಯಾಕ ತಪ್ಪ ಕಲಸೀದಿ

ರಂಗಾಗಿ ಬಂದಿದ್ದ ಹ್ಯಾಂಗ ಹಾಡುವರಂತ
ಹಿಂಗ್ಯಾಕ ತಪ್ಪ ಕಲಸೀದಿ ॥

**ಚಾಲ ॥**
ಹಗಲರಾತ್ರಿ ನಿನ್ನ ಮಾತ
ದಗದ ಬಿಟ್ಟ ಕೇಳಿದಾರು
ಬುಗನೆ ಸುರಿಸಿ ಮಾಡಿದಿ ಬೇತಾ ।
ಅವೇನ ಬಲ್ಲವು ಒಗದತ್ತ ಬೀಳತಾವ ಕೊಟ್ಟ ಚಿತ್ತ।
ಉಮೇದ ಕೊಡತಿ ಅವರಿಗೆ ನಿಮ್ಮ ಸರಿ ಯಾರಿಲ್ಲಂತ
ಉಮೇದ ಬಂದ ಹಾಡತಾವ ನಗತ।
ನಿಮ್ಮ ಬುದ್ಧಿ ಹೆಚ್ಚ ಅತಿ ನಮ್ಮ ಮಗನಕಿಂತಾ ।
ರೀತಿಲೆ ಮಾತಾಡಬೇಕೊ ಯಾತಕ್ಕ
ಹಾಡುವಿಯೊ ಕಡಕ ಕೂತ ಜನಕ ಬರಬೇಕ ಸನಮಂತ
ಹಾಡನ್ನು ಹಂಗ ಸೋತ ಒಂದ ಪದಾ ಹೇಳೊ ಹಿತಾ ।

**ಏರ ॥**
ಹಿಂ ತೆಂ ಕಂ ನಿನ್ನ ಹೆಣಕ ಹಾಂಗ ದುಡದಾರ ವರಸಾತಿ ॥

* * *

## ೪೨. ದೀಪ ಲಯವಾಗಿ ಹೋಗುವದು

ಪಾಪ ಮಾಡಲಿ ಬೇಡ ವ್ಯಾಪಿಸಿತ್ತ ನಿನ್ನ ಮೈಯ್ಯ
ದೀಪ ಲಯವಾಗಿ ಹೋಗುವದು ॥

**ಚಾಲ** ॥
ಹಿಂದಿನ ಕರ್ಮಾ ನೋಡಣ್ಣಾ ನೀನು
ಮಂದ್ಯಾಗ ಹುಟ್ಟಿ ಬಂದೆಣ್ಣಾ
ತಂದೆ ತಾಯಿ ಬಂದು ಬಳಗವ್ರ ನಂದೆಂದು ।
ಬಂದಿನೊಳಗ ಸಿಕ್ಕು ನೊಂದು ಬಳಲುವಿಯೋ ॥
ಎಲ್ಲಾರು ಸಾಯುದು ನೋಡು ನೀನು
ಅಲ್ಲಿ ಅದನ ಮರಿಬೇಡ
ಬಲ್ಲಿದ ಬಡವನು ನಿಲ್ಲದೆ ಹೋಗುವನು ॥
ಕುಲ್ಲ ಮನುಜ ನಿಶ್ಚಯ ಇಲ್ಲೆ ಇರುವಿ ಏನು ॥।
ಹೀನ ಗುಣವ ಜಜ್ಜಿ ಪಡಿಯೊ ನೀನು
ದಾನ ಧರ್ಮ ಮಾಡಿ ಪಡಿಯೋ ।
ಅನಾಥ ಜನರಿಗೆ ಅನ್ನ ದಾನವ ಮಾಡಿ ।
ಸ್ವಾಮಿ ಬಂಕೇಶನ ಚನ್ನಾಗಿ ಒಲಿಸಯ್ಯಾ ॥

**ಏರ** ॥
ದಿಂ ಬಂ ಹೊಂ ಇದ ತಿಳಿದು ಕಪ್ಪಗೊರಳನ
ಮೊರಿಗೊಳ್ಳೊ ॥

* * *



## ೪೩. ಹಾಡತಾವ ಹಾಡಾ ಹುಡಹುಡಕಿ

ಯಾವದ ಹಾಡೂನಂತ ಅವನ್ನೇನ ಕೇಳತಿ
ಹಾಡತಾವ ಹಾಡ ಹುಡಹುಡಕಿ ॥

**ಚಾಲ** ॥
ಬಿಂಕಮಾಡಿ ಹೇಳತಿದ್ದಿ ತರಕ ನಿನ್ನಿಂದಾಗವಲ್ಲದ
ಮೂರ್ಖ ಏನ ಬಲ್ಯೊ ಇದರ ತೂಕಾ ।
ಸುಳ್ಳೆ ಹಾಡಿನ ಮುರಕ ಮಾಡತೇರಿ ವಣಾ ಡೊಂಕಾ ॥
ಮಧುರ ವಾಕ್ಯಗಳ ನಮ್ಮ
ಅಧರೀಲೆ ಮುತ್ತ ಸುರಿದಾಂಗ
ಚದುರತನದಿ ಕವಿ ಕೇಳ್ಬೆಕಾ ।
ನಿನ್ನಂಥಾ ಹೇಡಿ ಒದರಿದರೇನ ಆಗುವುದಿಲ್ಲ ಚೊಕ್ಕಾ ।
ಗೊಂಡಿನಿಶಾನಿ ಹಚ್ಚಿ ನಾವು ಖಂಡಿತವಾಗಿ ಹಾಡತೇವ್ರ
ಪಂಡಿತರೆಲ್ಲಾ ಕೇಳಿ ಅಂತರ ಟೀಕಾ ।
ಇಂಚಲ ಪದಗಳ ದುಂಡಮುತ್ತಾ ಬಂಗಾರದ ಬಾಣಾ ।

**ಏರ** ॥
ಹಾಂ ಹಾಂ ಹುಂ ನಿನ ಎದಿಯ
ಡವಡವ ಅಂತೊ ಮಿಡಿ ಮಿಡಿಕಿ ॥

* * *

## ೪೪. ಒಂದಾರ ಹಾಡು ಹಿಂತಾದು

ಎಂದೆಂದ ಹಾಡಿದರ ಮಂದ ಬುದ್ಧಿಗೆ ಎಳಸಿ
ಒಂದಾರ ಹಾಡು ಹಿಂತಾದು ।

**ಚಾಲ** ॥
ಚಲುವ ಹಾಡ ಮಾಡೇನಂತ
ಉಲವ ಇಲ್ಲದಾಗ ಕಲಸಿ
ಮಲುವು ಬಿದ್ದಂತಾತ ಮುಂದಿಂದರ ।
ಹುಲಿಯ ಬಣ್ಣಕ ನಕಲಿ ಮಾಡಿಕೋತ
ಮೈ ಸುಟ್ಟು ಕೊಂಡ ನರಿ ॥
ನನ್ನಂಗ ಅನಬೇಕಂತ ಹನ್ನೆರಡ ತಿಂಗಳ ಕಲತಿ
ಇನ್ನುವರಿಗೆ ಸಿಕ್ಕಿಲ್ಲ ಹಾಡಿನ ಜರಿ ।
ನೀ ಏನಮಾಡಿ ನಿನಗ ಕಲಿಸಿದಂಥವ ಮಳ್ಳ ಕುರಿ ।
ಅವಲ ಪದಾ ಹಾಡೊನು ಬಾರೊ
ನವಲ ಕುಣದಾಂಗ ಆಗಬೇಕು
ಸಾವಲ ದನಿ ತಗದ ಅಳತೇರಿ ।
ಹಾಡವರೊಳಗ ಕೇವಲನಸಿಕೊಂಡೆ ಛೀಮಾರಿ ।

**ಏರ** ॥
ವಂ ಹಾಂ ಹಿಂ ಬಸಾಪೂರದ ತಂದಿ ಬಸವೇಶನೊಲವಿಂದ ।

* * *



## ೪೫. ಬಿಟ್ಟು ನಾಚಿಕೆಯ ಹೇಳುವೆನೊ

ಕೆಟ್ಟ ಅನಬಾರದಂತ ಇಟ್ಟೊತ್ತ ತಾಳಿನಿ
ಬಿಟ್ಟು ನಾಚಿಕೆಯ ಹೇಳುವೆನೊ ॥

**ಚಾಲ** ॥
ಭಾಳ ಮಾತ ಹೇಳಬ್ಯಾಡೊ
ಸೂಳಿ ಮಗನ ಬೋಳಿಮಗನ
ಬ್ಯಾಳಿ ತುಡಗಮಾಡಿ ಕಟ್ಟಿದ್ದಿ ಒಲ್ಯಾಗ
ಅಲ್ಲ ಹೋಗೋ, ಹಲ್ಲ ಬಿಟ್ಟೀನ ನಿಮ್ಮವ್ವನ ಬಲ್ಯಾಕ ।
ಸೊಲ್ಲಿಗೊಮ್ಮೆ ಬೇಯತೇನೊ
ಮಲ್ಲಿಗಿ ಹೂವಿನಂಥಾ ಬೇಗಳಾ
ಗುಲ್ಲ ಮಾಡಬ್ಯಾಡ ಕುಂದ್ರ ಮೂಲ್ಯಾಗ ।
ನನ್ನ ಹಾಡ ಕೇಳಿ ನಿಮ್ಮಕ್ಕ
ಪ್ರೀತಿ ಬಂದ ಹಾಲ ಕುಡಸ್ಯಾಳಾ ಬಾಲಿ ದೊಡ್ಡ ಥಾಲ್ಯಾಗ

* * *

# ಭಾವಗೀತಾತ್ಮಕ ಹಾಡುಗಳು

## ಭಾಗ – ೩

೪೬) ಸೋಜಿಗದ ಹೆಣ್ಣ ಮಾರಿವಳೊ
೪೭) ಭಾರಕ ಬಂದ ಹೆಣ್ಣ ನೀನು
೪೮) ಸ್ತ್ರೀಯಳೆ ನಿನ್ನ ಬುದ್ಧಿ
೪೯) ನಾರಿ ತವರಿಗೆ ಸಾಮ್ಯ ಕೊಡುವರು
೫೦) ರಂಗದುಟಿ ರತನದಂಥವಳೆ
೫೧) ವರಶ್ರೇಷ್ಠ ಬಾಣ ಹೊಡದಾನ
೫೨) ತುಪ್ಪದಂಥವಳ ಬೆಯ್ಯಬ್ಯಾಡ
೫೩) ಪಂಟ ಹೇಳಬ್ಯಾಡ ಸುಂದರಿ
೫೪) ಅಗಸ್ಯಾಗ ನಿನ್ನ ಹುಗಸೇನ
೫೫) ಅಂಗಿಮ್ಯಾಲ ಅಂಗಿ ತೊಟ್ಟು
೫೬) ಕೊಡಿಯ ನೆರಳಾಗ ನಿಂತಿದ್ದ
೫೭) ಚೊಕ್ಕ ಬಂಗಾರದ ಖಡೆನಿಟ್ಟ
೫೮) ಕೈ ಹಿಡದ ಒಳಗ ಕರದಾಳೊ
೫೯) ಸಣ್ಣ ಶ್ಯಾವಿಗಿ ಬಸದಾಳೊ
೬೦) ದಗದಂದರ‍್ಯಾಕ ಅಳತಾಳೊ
೬೧) ಏನಾತೊ ಅವಳ ಬಾಳೇವೊ
೬೨) ಮಿಡಕತೇನ ಕಂಡು ಮನದೊಳಗ
೬೩) ಅಂಗಜನ ಬಾಣ ಬಡದೀತ
೬೪) ಕುಂಡಿ ಹೊಸದೀನೆ ಮೂರುವರ್ಷ
೬೫) ಚಿಲಕಿನ ತೆನಿಯ ಮುರಿದಿದ್ದೆ
೬೬) ಕವಣೀಯ ಕಲ್ಲ ಒಗದಂಗ
೬೭) ಬಡಿವಾರ ಬಿಡೋ ಬಿಡೊ
೬೮) ಸ್ರಾಪ ಇದ್ದಂಗ ಋಷಿಗಳದಾ

**ಸಂಪಾದಕರು**

**ಡಾ. ಮ.ಗು. ಬಿರಾದಾರ**



## ೪೬. ಸೋಜಿಗದ ಹೆಣ್ಣ ಯಾರಿವಳೊ

ರಾಜಬೀದಿಯ ಹಿಡಿದ ಮೋಜಿಲೆ ಹೋಗುವಳೊ ।
ಸೋಜಿಗದ ಹೆಣ್ಣ ಯಾರಿವಳೊ ।

**ಚಾಲ** ॥
ಕಾಂತಿಯುಳ್ಳ ನಾರಿ ನಿನ್ನ ಪ್ರಾಂತದೊಳು ಕಾಣಲಿಲ್ಲ ।
ಭ್ರಾಂತಿ ಬಡದ ನಿಂತೇನ ಹೌವ್ವ ಹಾರಿ ।
ಏನಂತಿ ಹೇಳ ಈಗ ವಚನಾ ಕೊಡ ವೈಯ್ಯಾರಿ ।
ಬಳುಕುತ ನಡುವಿನ ಬಾಲಿ ಕೇಳ ಎಳಿಯ ಪ್ರಾಯದೊಳು ।
ನಿನ್ನ ಸುಳವ ಕಂಡ ನಿಂತೇನ ಬೆದರಿ ।
ಅರಗಿಳಿಯೆ ಕೇಳ ನನ್ನ ಮಾತಿನ ಮಧುರಿ ।

**ಏರ** ॥
ಸೋಜಿಗದ ಹೆಣ್ಣ ಯಾರಿವಳೊ ಎಲೆ ಬಾಲಿ
ಮೂರು ಜಗದೊಳು ಸರಿಯಿಲ್ಲಾ

* * *

## ೪೭. ಭಾರಕ ಬಂದ ಹೆಣ್ಣ ನೀನು

ಭಾರಕ ಬಂದ ಹೆಣ್ಣ ನೀನು ಮುರಕಾಮಾಡಿ ಹೋಗಬ್ಯಾಡ
ಎರಕದ ಗೊಂಬಿ ನಡುವಿನಲ್ಲಿ ವಡ್ಡ್ಯಾಣ ।
ಮೆಲ್ಲಕ ಮೆಲ್ಲಕ ಹೆಜ್ಜಿ ಚೆಲ್ಲಿ
ಗುಲ ಗುಲ ಗೆಜ್ಜಿ ನುಡಿಸಿ ಪಿಲ್ಲಿ
ಕಾಲುಂಗರ ಕಾಲಲ್ಲಿ ಪೈಜಾಣ ।
ಚೆನ್ನದಾರ ಚೌಕ ಕಾಳಿನ ಚಂದ್ರಕಾಳಿ ಸೀರಿನುಟ್ಟು
ತಾಟ ನೀಟ ಫಾಟ ಮಾಡಿ ಹೊಂಟಿ ಗರ್ತಿ ॥೧॥

ಒಪ್ಪುವಂಥ ಪಪ್ಪಳಿ ಕುಬಸದಮ್ಯಾಗ ಕುಶಲ ಮಗ್ಗಿ ತಗಿಸಿ
ಸೊಗಸದಿಂದ ಅಗಸಿಯೊಳಗ ನಿಂತ ನಗತಿ ।
ಏನ ನೆಟ್ಟನ ಮೂಗ, ಬಿಟ್ಟ ಕಣ್ಣು ಹಂಚಿ ಬಟ್ಟು
ಹಲ್ಲ ಗಲ್ಲ ಹವಳದುಟಿ
ಹಂಚಿ ಬಟ್ಟಿನ ಕಲಿ ನಿನಗ ಒಪ್ಪತ್ತೈತಿ ॥೨॥

ಈಬತ್ತಿ ಪಟ್ಟಾ ಕುಂಕುಮ ಬಟ್ಟ
ಕುಡಿ ಹುಬ್ಬ ಕುಶಲ ಕನ್ನಡಿ ಹಿಡಿದ ಕಾಡಿಗಿ ಹಚ್ಚಿ
ಮೆಚ್ಚ ಮಾಡತಿ ।
ಗಿಡಗನ ಮಾರಿ ಹಂತಾ ಪೋರಿ
ದಡಗ ದಿಡಗ ಬಂದ ಕ್ಯಾರ
ನಡಗಿ ನಡುತೀಯ ನವಲ ಕುಣದಂಗ ॥
ಹೂವ ಕಾಯಿ ಮಗ್ಗಿ ಜಗ್ಗಿ ಗಿಡಬಾಗಿ ಮುಂದ ಟೊಂಗಿ
ಊಚ ಮಾವಿನಹಣ್ಣು ಬಹಳ ಸಂವಿ ಅತಿ ।
ಹಸ್ತ ಪಾದ ಹೊಟ್ಟೆ ತಿಳಪ ನಿನ್ನ ರೂಪ ಬ್ಯಾಂಗಡಿ ಹೊಳಪ
ಏನ ಕೆಂಪ ಪೋರಿ ನಿನ್ನ ಮೈ ಬಣ್ಣ ॥೩॥

* * *



## ೪೮. ಸ್ತ್ರೀಯಳೆ ನಿನ್ನ ಬುದ್ಧಿ

ತಿರಸ್ಕರಿಸಿ ಬಿಟ್ಟಾರ ಸ್ತ್ರೀಯಳೆ ನಿನ್ನ ಬುದ್ಧಿ
ಸ್ಥಿರವಿಲ್ಲ ಅಂತ ಬಹು ಜನರು ॥

**ಚಾಲ** ॥
ಹೀಂಗ ಶಾಸ್ತ್ರಾ ಹೇಳತಾರು ಹೆಂಗಸರ ಬುದ್ಧಿ ಸ್ಥಿರವಲ್ಲಾ
ಮಂಗ್ಯಾನ್ಹಾಂಗ ಒಳಗ ತಿರಗತತಿ ।
ಅತಿ ಉತ್ತಮಾದರು ಅಂಗಜನಾಟಕ ಬಲು ಪ್ರೀತಿ ॥

ಹೆಣ್ಣಿನಬರು ಕಡಿಮಿ ಅಂತ
ಮಾನ್ಯ ಮಾನ್ಯರು ಹೇಳತಾರು
ಏನ ಬಲ್ಲರು ಜನರು ಒಳಗಿನ ರೀತಿ ।
ಏನೇನು ಜರಾ ಸ್ವಲ್ಪ ಮುಟ್ಟಿದರಾತು ಮಾಣ ಕ್ಷತಿ ॥

ಗಂಡಸನ ಒಂದ ಹೆಂಗಸ ಮುಟ್ಟಿದರ
ಅಕಿ ಅಬರು ಹೋಗತತಿ
ಗಂಡಸ ಮುಟ್ಟಿದರಂತು ತೀರಿ ಹೋತು ॥
ಎರಡುದರಾಗ ಅಬರು ಕಮ್ಮ ಅಕಿದ ಹೋಗಿರತೈತಿ ॥

**ಏರ** ॥
ಸ್ಥಿಂ ಅಂ ಬಂ ಜಂ ಹೇಳುವರು ಅಸ್ಥಿರ ವರ್ಣ
ಯಾವತ್ತು ।

* * *

## ೪೯. ನಾರಿ ತಾವರಿಗೆ ಸಾಮ್ಯ ಕೊಡುವರು

ಭುವನದೊಳಗ್ಹೇಳುವರು
ವಿವರ ತಿಳಿಯದೆ ನಾರಿ ತಾವರಿಗೆ ಸಾಮ್ಯ ಕೊಡುವರು ।

**ಚಾಲ** ॥
ಹದಿನಾರ ವರುಷದ ಮದವೇರಿ ಪುರುಷನು
ಹದಬಂದು ನಿನ್ನ ಕೇಳಿಶ್ಯಾನು ।
ಸುದತೇರನ್ನಾಳಿಯೆಂದು ಬೆಳಿಸ್ಯಾನು ।
ವದನಕ ಕಮಲ ಸಾದೃಶ್ಯವ ಕೊಟ್ಯಾನು ।
ಇದಿಮಾಯಿ ಹೆಂಗಸ ಕೇಳ ನೀನು ॥

ಆದ ಹಿಗ್ಗಿ ಮದಿವ್ಯಾದ ಗಂಡಗಾದಿ ಹೀನ ।
ಮೂಗ ತೊಗಲ ನೋಡು ಕಣ್ಣಿ ಪಿಚ್ಚ ಪುಂಜಿ ಹೇಸಿ ಹೆಣ್ಣು ॥
ಸೋಗ ಬಿಡ ಬಾಯ ಕೊಳಚಿ ಗಲ್ಲದ
ತೊಗಲ ನಿಂದು ಹಣ್ಣು ।
ಡೂಗ ನಡದ ಗತಿ ಹೋದ ಮ್ಯಾಗ ಇಲ್ಲ ಏನು ।
ಬಾಗಿ ನಡದಿ ಆಗ ತಿಳದಿ ನೀನು ।
ನಾರಿ ನಿನ್ನ ಭೋಗ ಯಾರಿಗಿ ಬೇಕ ಹೋಗ ನೀನು ।

**ಏರ** ॥
ತಾಂ ಸಾಂ ಕೊಂ ತಮ್ಮ ಪ್ರಾಯಾ ಅವರಿಗೆ ಮೀರಿ ನಿಂತಾಗ ॥

* * *



## ೫೦. ರಂಗದುಟಿ ರತನದಂಥವಳೇ

ಶ್ರಿಂಗಾರದ ಕರಿಮಿಯ
ಭಂಗಾರದ ಬಳಿನಿಟ್ಟ
ರಂಗದುಟಿ ರತನದಂಥವಳೇ ।

**ಚಾಲ** ॥
ತೋಳ ತೊಡಿಗಳು ಸಣ್ಣ ।
ಬಹಳ ಸೂಕ್ಷ್ಮದ ಹೆಣ್ಣ ।
ಹೇಳಲಾರೆ ನಿನ್ನ ಚೆಲ್ವಿಕಿ ।
ಏಕಾಏಕಿ ಕೇಳಲಾರದೆ ಬಂತ ಬವಳೀಕಿ ।
ಇಂದ್ರಲೋಕದಾಗ ಸುಂದ್ರಿ ರಂಭಿಗತಿ ಕಾಣಸ್ತೀಯೆ ।
ಸುಂದ್ರತನಕ ಮೆಚ್ಚಿದೀನಿ ಚಂದ್ರಮುಖಿ ।
ನೀ ಬಂದ್ರ ಬಂಕನಾಥಗ ಎರಗುವ ಸಖಿ ॥
ರಂಗದುಟಿ ರತನದಂಥವಳೇ
ನಿನ್ನ ಕಂಡು ಅಂಗಜನ ಬಾಣ ಬಡದೀತು ।

* * *

## ೫೧. ವರಶ್ರೇಷ್ಠ ಬಾಣ ಹೊಡೆದಾನ

ಹರಿ ಹರಗ ಬಿಟ್ಟಿಲ್ಲಾ ಭರದಿಂದ ಮನ್ಮಥನು
ವರ ಶ್ರೇಷ್ಠ ಬಾಣ ಹೊಡೆದಾನು ।

**ಚಾಲ** ॥
ಟೀಕ ಮಾಡಿ ಟಿಕ್ಕೆ ಕಟ್ಟಿ ।
ಜೋಕ ಮಾಡಿ ಹೋಗುವಾಗ ।
ಡಾಕ ಬಡಿತ ಎನ್ನ ಎದಿಯಾಗ ।
ಭಪ್ಪರೆ ಬಂಗಾರ ಬಾಕಿನಂಥಾ ಹೆಣ್ಣ ಹಿತ್ತಲದಾಗ ॥

ಚಂದರಕಾಳಿ ಸೀರಿನುಟ್ಟು
ಚಂದಾದ ಕುಪ್ಪಸತೊಟ್ಟು
ಮಂದಿವೊಳಗ ಹಾದ ಹೋಗುವಾಗ ।
ನಿನ್ನ ಕಂಡು ನಿಂದರಲಾರದ ಬಿದ್ದೇನ ಕಟ್ಟಿ ತೆಳಗ ॥

ವರಶ್ರೇಷ್ಠ ಬಾಣಾ ಹೊಡದಾನ
ಹರಿ ಅಜನು ಪರಿವಿಲ್ಲದ ನಾರಿ ಬಯಸಿದನು ॥

* * *



## ೫೨. ತುಪ್ಪದಂಥವಳ ಬಯ್ಯಬ್ಯಾಡ

ಕಪ್ಪಿಗಾಶವ ಮಾಡಿ ಒಪ್ಪತ್ತಾನಿಂತೇನ
ತುಪ್ಪದಂಥವಳ ಬಯ್ಯಬ್ಯಾಡ ॥

**ಚಾಲ** ॥
ಬಾಯಿಗೆ ಬಂದಾಂಗ ಬಯ್ಯವಲ್ಲಿ ।
ಮಾಯ ನಿನ್ನ ಮ್ಯಾಲೆ ಹುಡುಗಿ ।
ನ್ಯಾಯ ಮಾಡಬ್ಯಾಡ ಬಂದ ಕೂಡ ।
ನಿನ ತಕ್ಕ ಪುರುಷನಿಲ್ಲಂತ ಮರಿಜಿ ಮುರಿಬ್ಯಾಡ ।
ಭಂಗಾರದ ಗುಡಿವೊಳಗ ।
ಲಿಂಗ ಕಲ್ಲಿಂದಿರತೈತಿ ।
ಹಾಂಗ ನಿನ್ನ ಮನಸ್ಸಿಗೆ ತಿಳದ ನೋಡ ।
ನಿನ್ನ ತಕ್ಕ ಪುರುಷ ಅಂತ ಅಂಗಸಂಗವನ್ನು ಮಾಡ ॥
ತುಪ್ಪದಂಥವಳೇ ಬಯ್ಯಬ್ಯಾಡ ಎಲೆ ಹುಡಗಿ
ಕಪ್ಪಿಯ ಕಿಂವಿಗೆ ಮರುಳಾದೆ ॥

* * *

## ೫೩. ಪಂಟ ಹೇಳಬ್ಯಾಡ ಸುಂದರಿ

ಎಷ್ಟು ಹೇಳಿದರು ನಿನ್ನ ಬಿಟ್ಟವನು ನಾನಲ್ಲಾ
ಪಂಟ ಹೇಳ ಬ್ಯಾಡ ಸುಂದರಿ ॥

**ಚಾಲ** ॥
ಯಾಕ ಇಕ್ಕೆ ನಿಮ್ಮವ್ವ ನಮ್ಮಕ್ಕ
ಸೋದರ ಸೊಸಿ ಆಗಬೇಕ ನೀ ನನಗ ।
ಬಂದಾಳಂತ ಬರೋಸ ಮಾಡಿ
ಬಾಯಿ ತಗದು ಕೇಳತೇನ
ಬರದಿರ ಸತ್ತಾಯಿಲ್ಲ ನಿನ್ನ ಮ್ಯಾಗ ॥

ಹೆಂತ ವಟ್ಟ ಮೈ ಮುಟ್ಟ ಬಿದ್ದಿ ಗಂಟ
ಒಂದಿನರ ಧೀರ ಹಿಡಿ ಮನದಾಗ ।
ವಡಕ ಬಾಯಿಂದ ವಾಳಿ ಗಂಡಸ
ಯಾರ ಮುಂದ ಹೇಳಿ ಅಂತ
ಇದರಿಂದ ಹಾರತೈತಿ ಎದಿಯಾಗ ।
ಪಂಟ ಹೇಳ ಬ್ಯಾಡ ಸುಂದರಿ
ನಾ ನಿನ್ನ ಬಿಟ್ಟರುದಾಸ್ಟಾಂಗ ನಿನ ಸೀರಿ ।

* * *



## ೫೪. ಅಗಸ್ಯಾಗ ನಿನ್ನ ಹುಗಸೇನ

ವಟ್ಟಗೇಡಿ ಮೂಳಾ ಖೊಟ್ಟಿ ಮಾತಾಡಬ್ಯಾಡೊ
ರಟ್ಟಿ ಕಟ್ಟಿ ನಿನ್ನ ಬಡಿಸುವೆನೊ ॥

**ಚಾಲ** ॥
ಚದುರ ಕೇಳ ನನ್ನ ಇದರ ಬಂದ ಸೀರಿ
ಪದರ ಹಿಡದ ಜಗ್ಗುವದಿಲ್ಲಾ ।
ಮಧುರ ಮಾತಿಲೆ ಒದರಿ ಹೇಳುವೆನೋ
ಇದರವೊಳಗ ಏನು ಸುಖವಿಲ್ಲ ।
ಧೀರ ನನ್ನ ಗಂಡ ಶೂರ ಊರಾಗ
ಮಾರಿ ನೋಡಿದರ ಉಳಿಯಾಕಿಲ್ಲಾ ।
ಪಾರ ಕೇಳೊ ನಿಂದ ಸೂರಿ ಆದೀತು
ಯಾರ ಏನ ಉಳಸವರಿಲ್ಲಾ ॥

**ಚಾಲ** ॥
ಊರಾಗ ತಿರಗತಿ ಡೌಲ ಬಹಳ ।
ಮಂದೀ ರುಮಾಲ ಧೋತರಗೋಳ ।
ನಿನ್ನ ಹೆಣತಿ ಅಳತಾಳೊ ಗಳಗಳಾ ।
ಉಪಾಸ ಸಾವತಾವ ಮಕ್ಕಳಾ ।
ಮನ್ಯಾಗ ನೋಡೇನಂದ್ರ ಇಲ್ಲ ಕರಿ ತಳಾ ।
ಬಲ್ಲಿನ್ಹೋಗೊ ನಿನ್ನ ಎಲ್ಲಾ ಬಡ್ಡತಾಳಾ ।
ರಟ್ಟಿ ಕಟ್ಟಿ ಬಡಿಸುವೆನೋ
ಸೂಳಿಭಾಂವಿ ಅಗಸ್ಯಾಗ ನಿನ್ನ ಹುಗಸೇನೊ ।

* * *

## ೫೫. ಅಂಗಿ ಮ್ಯಾಲ ಅಂಗಿ ತೊಟ್ಟ

ಅಂಗಿ ಮ್ಯಾಲಂಗಿಯ ತೊಟ್ಟ
ಬಂಗಾರದ ಖಡೆನಿಟ್ಟ
ಶೃಂಗಾರದ ಕುದರಿ ಕುಣಿಸುತ್ತಾ।

**ಚಾಲ** ॥
ಕುದರಿ ಮ್ಯಾಲೆ ಕುಂತಿದ್ದವ್ವ
ಚದುರ ನದರಿಗೆ ನಟ್ಟ ಬಂದ
ಸದರ ಶುದ್ಧ ಕಾಣಸ್ತಾನ ಯಾವೂರ ಧನಿ।
ಇವನ ಕಣ್ಣ ಹುಬ್ಬ ಮಾವಿನ ಹೋಳಿನಂಥಾವ್ರ।
ಮೂಗ ಸಂಪಿಗಿ ತೆನಿ
ಬಹಳ ಮದಿ ನೋಡಿದರ।
ಬರಷಣ ಆದಿತಂತೇನ ಪುರುಷನ।
ವರ್ಣ ಏನ ಹೇಳಲಿ।
ಅರಷಿಣ ತೆನಿ ತೆನಿ।
ಇಂಥವ ಸಿಕ್ಕರ ಬಾಳೆ ಬದಕ ಎಲ್ಲ
ಸೂರಿ ಮಾಡುವೆನ ಮನಿ ಮನಿ ॥

**ಚಾಲ** ॥
ಶೃಂಗಾರದ ಕುದರಿ ಕುಣಿಸುತ್ತ
ಸೂಳಿಭಾಂವಿ ಒಡಿಯ ಕಲ್ಮೇಶನ ಗುಡಿಮುಂದ ॥

* * *



## ೫೬. ಕೊಡಿಯ ನೆರಳಾಗ ನಿಂತಿದ್ದ

ಧಡಿಯಧೋತರ ಹೊತ್ತ
ಮಡಿಯ ಪರಕಾಳಿ ಉಟ್ಟ
ಕೊಡಿಯ ನೆರಳಾಗ ನಿಂತಿದ್ದ ॥

**ಚಾಲ** ॥
ಪುರುಷನ ನೋಡಿದರ ಏನ ಶುದ್ಧ।
ಹುಣವಿ ಚಂದ್ರಾಮ ಹೊಂಟಾಗಾತಿ।
ಎಲ್ಲರ ಒಳಗ ಕಾಣಸ್ತಾನ ಚಡತಿ।
ವರುಷ ದಿನ ಹೋದೇನ ನಾನು
ಪುರುಷನ ಬೆನ್ನ ಹತ್ತಿ ॥

ಕರೆವ್ವಗ ನಾನು ಬೇಡಿ ಕೊಂಡೆ।
ಕಬ್ಬಿನ ಹಂದ್ರ ಹಾಕೇನಂತ।
ಗಬ್ಬದ ಬ್ಯಾಟಿ ಮಾಡೇನು ಇಟ್ಟ ಭಕ್ತಿ।
ಸುಂದ್ರ ಬಂದರ ಇಂದ ಎನಗ।
ಕೈಲಾಸ ದೊರತಾಂಗಾತಿ ॥

**ಏರ** ॥
ಕೊಡಿಯ ನೆರಳಾಗ ನಿಂತಿದ್ದ
ಸೂಳಿಭಾಂವಿ ಒಡಿಯ ಕಲ್ಮೇಶನ ಗುಡಿಮುಂದ ॥

* * *

## ೫೭. ಚೊಕ್ಕ ಬಂಗಾರದ ಖಡೆನಿಟ್ಟ

ಲಕ್ಕಿಪೈರಣ ತೊಟ್ಟ ನಕ್ಕ ಓಣಿಲೆ ಹೊಂಟ
ಚೊಕ್ಕ ಬಂಗಾರ ಖಡೆನಿಟ್ಟ ॥

**ಚಾಲ** ॥
ಇಸ್ತ್ರಿ ಮಾಡಿದ ಕೋಟ ತೊಟ್ಟ।
ಮೇಸ್ತ್ರಿ ಯಾವೂರಾಂವ ತಂಗಿ।
ಕೇಸರಿ ಗಂಧ ಹಚ್ಚಿದ ಹಣಿಮ್ಯಾಗ।
ಬೆಳಗಾಂವಿ ನಾಡೊಳಗ ಸರಿ ಇಲ್ಲ ಇವನಾಂಗ।
ಮಜಲೀ ನೊಳಗ ಹಾದ ಹೋದಾ।
ಖಜೀಲ ಆತೆ ನೋಡಿ ಜೀವಾ।
ಬಿಜಲಿ ಬತ್ತಿ ಹೊಳದಾಂಗ ಆತ ನನಗ।
ಗುಜಾರಿಮಾಪುರ ಆಡತೀನ ಸರಿ ಗೆಣತೀರೊಳಗ।
ಚೊಕ್ಕ ಬಂಗಾರದ ಖಡೆನಿಟ್ಟಿ ಸೂಳಿಭಾಂವಿತಕ್ಕ
ಪುರುಷಗ ಬರಹೇಳ ॥

* * *



## ೫೮. ಕೈ ಹಿಡದ ಒಳಗ ಕರದಾಳೋ

ಮಧುರ ಮಾತನು ಕೇಳಿ ಚದುರಿ ಮನಸೋತಾಳೊ
ಇದರಿಗೆ ನಿಂತ ನಗತಾಳೊ ॥

**ಚಾಲ** ॥
ಮತ್ತೊಬ್ರ ಮುಂದ ಹೇಳಬ್ಯಾಡೊ
ಅತ್ತಿ ಮಾವಾ ಮನಿಯಾಗಿಲ್ಲಾ
ಹಿತ್ತಲ ಕಡೆಯಿಂದ್ಹಾದ ಬಾರೋನಲ್ಲಾ।
ತಾಳಲಾರೆನೊ ಒತ್ತರದಿಂದ ಬಂದ ಕಡಿಯೊ ಗಲ್ಲಾ ॥
ಸಂಜಿಯಾದರ ಚಿಂತಿ ಇಲ್ಲಾ ಅಂಜಬ್ಯಾಡೊ
ನನ್ನ ಕಾಂತಾ ಮೋಜದಿಂದ ಮಾಡೊ ಕಾಮಲೀಲಾ।
ಕುಸಿಯಾಗಿ ತೇಜಬರು ಹಾಂಗ ಮಾರಿ ಮ್ಯಾಲಾ ॥

**ಚಾಲ** ॥
ಇಷ್ಟು ಮಾತ್ಹೇಳಿ ಗೆಣಿಯಾನ್ನ ಕರದಾಳೊ ನಾರಿ। ಕಾಮವೇರಿ
ಇಬ್ಬರದು ಝಟಪಟಿ ನಡದೀತೊ
ಹೊಂಟಿತೊ ಬೆಳಗಿನ ತಾರೀ
ಅಂತಾಳ ಬಿಡರಿ ॥

ಹೆಪ್ಪ ಮುರದ ಕಡದಂಗಾತೊ ಮಸರ। ಇಲ್ಲ ಕಸರ।
ಕೊಂಡಾಡ್ಯಾಳೊ ಫಕೀರಣ್ಣನ ಹೆಸರಾ। ಹಾಕ್ಯಾಳು ಸರಾ।
ಇದರಿಗಿ ನಿಂತ ನಗತಾಳೊ ಆ ಬಾಲಿ
ಕೈ ಹಿಡದ ಒಳಗ ಕರದಾಳೊ ॥

* * *

## ೫೯. ಸಣ್ಣ ಶ್ಯಾವೀಗ ಬಸದಾಳೊ

ನಲ್ಲ ಬರತಾನಂತ್ಹೇಳಿ ನಿಲ್ಲಕ್ಕಿಗಿ ಹೆಸರಿಟ್ಟ
ಸಣ್ಣಕ್ಕಿ ಶ್ಯಾವಿಗಿ ಬಸದಾಳೊ ।

**ಚಾಲ** ॥
ಸಣ್ಣ ಸ್ಯಾವಿಗಿ ಬಸದಿದೇನ
ಚಿನ್ನಿ ಸಕ್ಕರಿ ತರಸಿದೇನ
ಬೆಣ್ಣೆ ಕಾಸಿದ ತುಪ್ಪ ತಗೋರಿ ಮಾವಾ ।
ಉಂಡ ತಿನ್ನೊ ಎಲಿ ಅಡಿಕಿ
ಕುಂತ ಮಂಚದ ಮ್ಯಾಲ ॥
ಜರದ ರುಮಾಲ ಸುತ್ತೊ ನೀನು
ಸರದಾರನಾಂಗ ತಿರಗಾಂವ
ಪೈಟ್ನಿ ಪಡಕಿ ಉಟ್ಟ ಮಾಡರಿ ಡೌಲಾ ।
ಕಂಟಿ ಗೋಪಾ ತಂದ ಕೊಡುವೇನ
ಕೈಯಾಗ ಬಂಗಾರ ಗೋತಾ ॥

**ಚಾಲ** ॥
ಇಷ್ಟು ಶ್ರೀಂಗಾರ ಮಾಡ್ಯಾಳೊ ಗೆಣಿಯಾಂದ
ನೋಡ್ಯಾಳೊ ಮಾರಿ ಇಲ್ಲ ಖಬರ ।
ಆಗ ಕೈ ಹಿಡದ ಕರಕೊಂಡ ಹೋಗ್ಯಾಳೊ ಮಂಚವನೇರಿ ।
ಆದಿತ ಸೂರಿ ಹಾಲಿಗಿ ಕೊಟ್ಟಾಂಗಾತ್ರಿ ಹೆಪ್ಪಾ ।
ಸಕ್ರಿ ಸ್ಯಾವಿಗಿ ಉಂಡಾಂಗ ಗಪ್ಪಾ ।
ಆಗ ಮಾಡ್ಯಾಳೊ ಗೋವಿಂದಣ್ಣನ ನೆನಪಾ ।
ಅರಗ ಬಂಗಾರಕ ಹಚ್ಚಿದಾಂಗ ವಪ್ಪಾ ।
ಸಣ್ಣಕ್ಕಿ ಬಾನ ಬಸದೇನ ನೆರಮನಿ ಮಲ್ಲವ್ವಾ
ಬೆಣ್ಣೆ ಕೊಡ ಬಾರೇ ॥

* * *



## ೬೦. ದಗದಂದರ್‍ಯಾಕ ಅಳತಾಳೊ

ಹಸಿಗೇಡಿ ನನಗೆಣತಿ ಹಗಲೆಲ್ಲಾ ತಿಂತಾಳೊ
ದಗದಂದರ್‍ಯಾಕ ಅಳತಾಳೊ

**ಚಾಲ** ॥
ದಗದಂದರ ಅಳತಾಳೊ ಈಕಿ ।
ತಿನ್ನಾಕ ಸಾವತಾಳೊ ಹುಡುಕಿ ॥

ಮೂರ ಪಾವ ಗುಗ್ಗರಿ ಹಾಕಿ ।
ಒಂದ ಉಸರೀಗಿ ತಿಂತಾಳೊ ಬೆರಕಿ ।
ಸರಗಿ ಸರಗೋಳೊ ಬೇಡತಾಳೊ ಈಕಿ ।
ಬಹು ಓಣಿಗುಂಟ ಹರಗ್ಯಾಡುವಾಕಿ ।
ಸೂಳಿಭಾಂವಿ ಪ್ಯಾಟಿಯ ಓಣ್ಯಾಗ ಹೊಕ್ಕಿ ।
ಕಡ್ಲ್ಯಾಳ ಸಿಬಸಪ್ಪನ ಕೈಯೊಳಗ ಸಿಕ್ಕಿ ॥

ನಿನ್ನ ಕಾಲ ಮ್ಯಾಲಕ ಮಾಡಿ ತಿಕ್ಕಿ ।
ನಿನ್ನ ಹಿರದ ಕಳವ್ಯಾನವ್ವ ಹಿಕ್ಕಿ ॥

ದಗದಂದರ್‍ಯಾಕ ಅಳತಾಳೊ ಇಕಿನ್ನೊಮ್ಮೆ
ಹರಗುಣ್ಯಾಗ್ಹಾಕಿ ಬರಲಿಲ್ಲೊ ॥

* * *

## ೬೧. ಏನಾತೊ ಅವಳ ಬಾಳೇವೊ

ತೋಳಿಗಿ ಕುಬಸಿಲ್ಲದ ಏಳೂರ ತಿರಗಿದಳೊ।
ಏನಾತೊ ಅವಳ ಬಾಳೇವೊ ॥

**ಚಾಲ** ॥
ಮನ್ಮಥ ಚದುರನ ಮಾರಿ ನೋಡಿ
ನಾರಿ ಗ್ವಾಡಿ ಜಿಗದಾಳೊ ಅಲಕ್ಕ।
ಬಾಗಿಲಿಗಿ ಹಾಕಿ ನಿಂತಿದಾಳೊ ಚಿಲಕ್ಕ।
ಬಂದು ಕುಬ್ಬಸ ತೊಟ್ಟು ಬಿಂದಿಗಿ ಹೊತಗೊಂಡ
ನಾರಿ ಬಂದಾಳ ನಮ್ಮ ಹೊಲಕ್ಕ।
ಭಾಂವಿ ನೀರ ಮಾಡಿದಳ ಕಲಕ್ಕ।
ಊರಾಗ ರಂಡಿನ್ನ ಯಾಂವ ಕೇಳುವದಿಲ್ಲ
ಹತ್ತಿದಾವ ಒಂಟಿಹುರಕ್ಕ।
ನನ್ನ ಮುಂದ ಆಗಿ ತಿರಗತಾಳೊ ಪರಕ್ಕ।
ಮುನ್ನೂರ ರೂಪಾಯಿ ಇವರಪ್ಪ ಎಣಿಸಿಕೊಂಡ ಹೋದಾನ
ಸುಂಬಳ ಬುರಕ್ಕ।
ಇವರವ್ವನ ಸೀರೆಲ್ಲ ಹರಕ್ಕ।
ಏನಾತ ಅವಳ ಬಾಳೊವೊ।
ಸೂಳಿಭಾಂವಿ ಒಂಟಿ ಅಪ್ಪಯ್ಯನ
ಹುಡುಕಿದಳೊ।

* * *



## ೬೨. ಮಿಡಕತೇನ ಕಂಡು ಮನದೊಳಗ

ಅಡಿಕಿ ಬಣ್ಣದ ಸೀರಿ ಖಡಕ ಬಣ್ಣದ ಕುಬಸ
ಹೆಡಕಿನ ಮ್ಯಾಲೆ ಸೆರಗೊಗದ ॥

**ಚಾಲ** ॥
ಬಿಲ್ವರದ ಬಳಿಯನಿಟ್ಟು।
ನಾಲ್ವರೊಳಗ ಕುಂತಿದ್ದೆಲ್ಲ।
ಎಲ್ಲರ ಒಳಗ ಕಾಣಸ್ತಿದ್ದೆ ಮಿಗಲ ಮಿಗಲ್ ಮಿಗಲ್ ॥
ನಿನ್ನ ಕಂಡು ನನ್ನ ಎದಿ ಅಂತ ಆಗ ಭಗಲ್ ಭಗಲ್ ಭಗಲ್ ॥

ಸುಂದ್ರಿ ನಿನ್ನ ಕಂಡ ಜೀವ।
ನಿಂದ್ರವಲ್ಲದು ನೆಲದ ಮ್ಯಾಲೆ।
ಇದನ ನೋಡಿ ನಿನ್ನ ಎದಿ ಕಲ್ ಕಲ್ ಕಲ್।
ಸರದ ನಿಂತ ಗ್ವಾಡಿಗೆ ಹಾಯಿತೀನ
ಈಗ ಢಗಲ್ ಢಗಲ್ ಢಗಲ್ ॥

**ಏರ** ॥
ಹೆಡಕಿನ ಮ್ಯಾಲೆ ಸೆರಗೊಗದ ಹೋಗುವಳೊ
ಮಿಡಕತೇನ ಕಂಡು ಮನದೊಳಗ।

* * *

## ೬೩. ಅಂಗಜನ ಬಾಣ ಬಡದೀತ

ಶಿಂಗರದ ಕರಿಮಣಿಯ
ಬಂಗಾರದ ಬಳಿಯಿಟ್ಟು
ರಂಗದುಟಿ ರತನದಂಥವಳೇ ॥

**ಚಾಲ** ॥
ಟಿಕ್ಕೆ ಕಟ್ಟಿ। ಟೀಕ ಮಾಡಿ
ಜೋಕ ಮಾಡಿ ಹೋಗುವಾಗ।
ಡಾಕ ಬಡಿತ ಎನ್ನ ಎದಿಯಾಗ।
ಬಾ ಬಾರೆ ಬಂಗಾರ ಬಾಕಿನಂಥಾ ಹೆಣ್ಣ ಹಿತ್ತಲದಾಗ॥
ಶಿಂಗಾರ ಕರಿಮಣಿ। ಬಂಗಾರ ಬಳಿ
ಗುಂಗರ ಗೂದಲದ್ಹೆಣ್ಣ ನನ್ನ।
ಸಂಗಮಾಡ ಸಾವತೇನ ಸೊರಗಿ।
ನೀ ಬಂದರ ತಂದು ಕೊಡುವೇನು ॥
ಇದ್ದಷ್ಟೆಲ್ಲಾ ಜಿಂದಿಗಿ ॥

**ಏರ** ॥
ರಂಗದುಟಿ ರತನದಂಥವಳೇ ನಿನ್ನ ಕಂಡು
ಅಂಗಜನ ಬಾಣ ಬಡದೀತ॥

* * *



## ೬೪. ಕುಂಡಿ ಹೊಸದೀನೆ ಮೂರವರ್ಷ

ರಂಡಿ ಸೋಬತಿ ಮಾಡಿ ಬಂಡ ಅದೇನ ಭಾಳ
ಕುಂಡಿ ಹೊಸದೀನೆ ಮೂರವರ್ಷ।

**ಚಾಲ** ॥
ಕೆಟ್ಟ ರಂಡಿ ಸೆರಗ ಹತ್ತಿ
ನಷ್ಟ ಆತ್ರಿ ನನ್ನ ಜೀವ।
ತಟಾ ತಟಾ ಸೋರತೈತಿ ಕೀವಾ।
ರಾತ್ರಿ ಹಗಲ ಚುಟ್ಟ ಚುಟ್ಟ ಹೊಡಿತೈತ್ರಿ ನೋವಾ ॥

ರಸಿಕಿ ಆಡಿತ ಆಗ ಬಹಳ।
ಖುಸಿಕಿದಾಂಗ ಧೋತರೆಲ್ಲ।
ಖಸಕ್ ಅಂತತ್ರೆವ್ವಾ ನನ್ನ ಜೀವಾ।
ಮಾರ್ವ್ಯಾಳ ತಟಗಾರ ಕಾಸೀಮ ಕೊಟ್ಟ
ಹೆಂತ ಅಕಸುದ್ಯಾವ ॥
ಬಲ್ಲವರಾಂಗ ತಟ್ಟಗಾರ ಕಾಸೀಮ।
ಹುಲ್ಲಸರವಿ ಅಕಸುದ್ದಿ ಕೊಟ್ಟ।
ಗೊಲ್ಲರಾಂಗ ಬಿಚ್ಚಿದಾನ ಗಂಟಾ।
ಒಲ್ಲಿನಂದರ ಮಾರ್ವ್ಯಾಳ ಶಾಮರಾಯ
ಕೊಡಿಸಿದ ಮಾಡಿ ಬ್ಯಾಟಾ।
ಇಪ್ಪಿಕುಂತ ಆದಾವರೆಪ್ಪ ಹುಳಾಹುಳಾ।
ಹೆಜ್ಜಿ ಇಟ್ರ ಬೀಳತಾವ್ರಿ ಬಳಾ ಬಳಾ॥
ಅನ್ನೆವಿನ್ಯ ಆದೆನ್ರೆಪ್ಪಾ ಬಹಳ ಗೋಳಾ।
ಹೊಟ್ಯಾಗ ಆಗತೈತ್ರಿ ತಳಾಮಳಾ।

**ಏರ** ॥
ಕುಂಡಿ ಹೊಸದಿನ್ನೆ ಒಂದಸಮುನ ಮೂರ ವರ್ಷ
ಕಂಡ ಬನ್ರೆಪ್ಪಾ ಯಮನೂರ॥

* * *

## ೬೫. ಚಿಲಕಿನ ತೆನಿಯ ಮುರಿದಿದ್ದೆ

ಮಲಕ ಹೇಳಿದಿ ರಂಡೆ ಹೊಲಕ ಬಂದಿದ್ದೆ ಮನ್ನೆ
ಚಿಲಕಿನ ತೆನಿಯ ಮುರಿದಿದ್ದೆ।

**ಚಾಲ** ॥
ದರಜಿಲ್ದ ನಮ್ಮ ಹೊಲಕ ಬಂದೆ।
ಗೊರಜಿ ಪಲ್ಲೆ ಕೋಕೊಂಡ ಹೋದೆ।
ಮರಜಿದಿಂದ ಬಿಟ್ಟಿ ನ ಕೈ ಕಾದ।
ಮತ್ತೊಬ್ಬಾದರ ಕುಲಕರ್ಣಿ ಕಡಿಗೆ ಅರ್ಜಿ ಮಾಡತಿದ್ದ॥
ಒಳ್ಳೊಳ್ಳೆವರ ಬಂದರ ನಾ ಒಂದ
ಬಳ್ಳೊಳ್ಳಿ ಕಿತ್ತಿ ಕೊಟ್ಟವನಲ್ಲ
ಹಳಾಳಿ ಹೋಗವಲ್ಲದ ಜೀವದಂದ॥

ಹೊಲಸರಂಡೆ ಹಾಳಮಾಡಿ ತಾಳಲೆಷ್ಟ ನಿಂದ॥

**ಏರ** ॥
ಚಿಲಕಿನ ತೆನಿಯ ನೀನು ಮುರದಿದ್ದೆ ಛೀಮಾರಿ
ಮೆಲಕಿನ ಮ್ಯಾಲೆ ಬಡದೇನ॥

* * *



## ೬೬. ಕವಣೀಯ ಕಲ್ಲ ಒಗದಂಗ

ನವಣೀಯ ಹೊಲದಾಗ ಹವಣೀಸಿ ಕುಂತಿದ್ದೆ
ಕವಣೀಯ ಕಲ್ಲ ಒಗದಾಂಗ॥

**ಚಾಲ** ॥
ಸೊಕ್ಕಿನ ರಂಡೆ ನಮ್ಮ ಹೊಲಕ್ಕೆ ಬಂದ।
ಮೆಕ್ಕಿಕಾಯಿ ಕೋಕೊಂಡ ಹೋದೆ।
ಒಕ್ಕಲತನಾ ಗತಿಗ್ಗಟ್ಟಿ ಬಿಟ್ಟೆ॥
ದರಜ ಇಲ್ಲದ ದಾಗಡಿ ಪಲ್ಲೆ ಕೋದೆ ಉಡಿ ಕಟ್ಟೆ।
ಹೇಳದ ಕೇಳದ ಹೊಲದಾಗ ಬಂದ।
ಹಾಳ ಮಾಡಿ ಬಿಟ್ಟಿಯೆಲ್ಲಾ।
ತಾಳಲೆಷ್ಟ ಮಾಡಿದಿ ಮೂರಾಬಟ್ಟೆ।
ನಿನ್ನೆ ಬಂದ ಕಾಳಜೀರಿಗೆ ಕೋದ ತೂರಿ ಬಿಟ್ಟಿ॥

**ಏರ** ॥
ಕವಣಿಯ ಕಲ್ಲ ಒಗದಾಂಗ ನಮ್ಮ ಹೊಲಕ
ಹವಣಿಸಿ ಎಂದ ಕುಂತಿದ್ದೆ॥

* * *

## ೬೭. ಬಡಿವಾರ ಬಿಡೋ ಬಿಡೊ

ಬಡಿವಾರ ಬಿಡೊ ಬಿಡೊ
ಹುಡಗ ಮುಂಡೇ ಗಂಡ
ಕಡಿಸಿ ಹಾಕುವೆನೊ ಕ್ಷಣದಾಗ ।

**ಚಾಲ** ॥
ಉತ್ತಮ ನಾರೇರ ಮ್ಯಾಗ
ಮತ್ತ ನದರ ಇಡುವರೇನೋ ।
ಗೊತ್ತಗೇಡಿ ಬಂತು ನಿನಗ ಮರಣಾ
ಸುದ್ದಿ ಹತ್ತಿದರ ಗುದ್ದಿ ಹಾಕ್ಯಾರ್‍ಹೋಗೋ ಹೈವಾನಾ
ಗಂಡನುಳ್ಳ ಬಾಲೆಯರನ
ಕಂಡಕಂಡಲ್ಲಿ ಕೇಳಬ್ಯಾಡೊ ।
ಚಂಡ ಕೋಸಕೊಂಡಿ ಗಂವ್ಹಾರಾ
ಕೇಳಿದರ ನನ್ನ ಗಂಡ ಹಾರಿಶ್ಯಾನಪ್ಪ ಶಿರಾ ।
ಕಡಿಸಿ ಹಾಕುವೆನೊ ಕ್ಷಣದಾಗ
ನನಕೂಡ ಇಡ ತಾಯೀದ ಮಾತು
ಸಾಯೂವ ಮಾತ ನುಡಿ ಬ್ಯಾಡೊ

* * *



## ೬೮. ಸ್ರಾಪ ಇದ್ದಾಂಗ ಋಷಿಗಳದಾ

ಪರಹೆಣ್ಣ ನೋಡವಗ ಪಾಪ ಬರತೈತಿ ಮುಂದ
ಸ್ರಾಪ ಇದ್ದಾಂಗ ಋಷಿಗಳದಾ ॥

**ಚಾಲ** ॥
ಸೀತಾನ ಓದ ರಾವಣಾ
ಮಡದ್ಹೋದ ಲಂಕಾ ಸುಟ್ಟ ಆದಿತ ಹಾಳ ।
ಲಂಕಾ ಸುಟ್ಟ ಆದಿತ ಹಾಳ ।
ಹಂತವರುದ ಆ ಹಾಡ ಆಗಿ ಹೋತಿ
ಸುಮ್ಮನ ಬಾಳೆ ಮಾಡ ಹೋಗೋ ಮೂಳಾ ॥

ಭಸ್ಮಾಸುರ ಸುಟ್ಟ ಸುಟ್ಟ ಬೂದಿ ಆಗಿ ಹದ
ತಿಳಿ ಬೇಕ ಮನಸಿಗ ಬಹಳ ।
ಜಲ್ಮದಾಗ ಬಂದ ಪುಣ್ಯ ಗಳಿಸಬೇಕ
ಹೇಳತಾರ ಯೋಗಿ ಋಷಿಗೋಳ ।
ಸಾಧುರ ಮಾಡ್ತಾರ ಶಿವಧ್ಯಾನಾ ।
ಮಾರ್ಗ ಹುಡಕತಾರ ಒಂದ ಸವನಾ ।
ತುಕರಾಮ ಇದ್ದ ಬಹಳ ಭಕ್ತಿವಾನಾ ।
ಕೈಲಾಸಕೋದ್ಹಾನ ನೋಡ್ರಿ ಜನಾ ।

**ಏರ** ॥
ಶಾಪ ಇದ್ದಾಂಗ ಋಷಿಗೊಳದ ಈಶ್ವರ ।
ಮಾಫು ಮಾಡತಾನ ತಿಳದಾಂಗ ॥

* * *

## ಸಂಕೀರ್ಣ ತ್ರಿಪದಿಗಳು

### ಭಾಗ – ೪

೧

ಅಡಕೀ ಬಣ್ಣದ ಸೀರಿ ಅವರಿ ಹೂವಿನ ಕುಬಸ
ಹೆಡಕೀನ ಮ್ಯಾಲ ಮಗಿದುರಬ । ಕಟಗೊಂಡ
ಖಿಡಕೀಲಿ ನೀರ ತರತಾಳೋ

೨

ಅಡಕೀ ಏಣಿಯ ಮ್ಯಾಲ ಆಡ್ಯಾಳ ಡೊಂಬತಿ
ನೋಡಿ ಬಂದ್ಹುಡಗ ಉಣಲಿಲ್ಲೋ । ಬೆಳತಾನ
ಕಾಡಿ ಬೇಡ್ಯಾನೋ ಅವಳನ್ನ

೩

ಅಡವ್ಯಾಗ ಆಕಳಬಿಟ್ಟು ಗಿಡದಾಗ ಕುಂತಾನ
ಹಿಡದಾನ ಕೊಳಲ ಊದ್ಯಾನ । ಶ್ರೀಕೃಷ್ಣ
ಮಿಡಿನಾಗರ ಹೆಡಿಯ ತಗದಾವ್ರೊ

೪

ಅಡವಿ ಗಿಡ–ಮರ ಏರಿ ಹೂ ಹರಿದು ತಂದಾನ
ರಾಮನ ತಮ್ಮ ಲಕ್ಷ್ಮಣ । ತಂದ ಹೂ
ಹರಿದಿ ಸೀತವ್ವನ ತುರಬೀಗಿ

೫

ಅಣಕದ ಮಾತಾಡಬ್ಯಾಡ ಮಣಕೆಮ್ಮಿಯಂಥವಳ
ಒಣಕಿ ತುಂಡಾಗ್ಯಾನ ನಿನ ಗಂಡ । ಕೇಳಿದರ
ತುಣತುಣಕ ಮಾಡಿ ಚೆಲ್ಲ್ಯಾನೊ

೬

ಅತ್ತರ ಕಣ್ಣಿಂದ ಮುತ್ತ ಉದರಿದಂಗ
ಚಿತ್ತಿಮಳಿ ಸುರದ ಹರದಂಗ । ಹುಡಗೀಯ
ಚಿತ್ತ ಹೊಳಿಯಾಗಿ ಮಹಾಪೂರ



೭

ಅತ್ತಳೊ ಕರದಾಳೊ ಮತ್ತೇನ ಕೇಳ್ಯಾಳೊ
ಮುತ್ತಿನ ಮೂಗೂತಿ ಮಣಿಸರ । ಮ್ಯಾಲೊಂದು
ಕುತ್ತೀಗಿ ಬೀಳುವ ಕಂದನ

೮

ಅತ್ತಿಯ ಅಂಜಿಕಿ ಇಲ್ಲ ಮಾವನ ಹೆದರಕಿ ಇಲ್ಲ
ಆದ ಗಂಡನ ಆಳಕಿಲ್ಲ । ಈ ಹೆಣ್ಣ
ಹ್ವಾದಲ್ಲಿ ಗೆಣಿಯಾನ ಬಿಟ್ಟಿಲ್ಲ

೯

ಅತ್ತಿಗಿ ಜೌಡಲ ಬೀಜ ಮಾವಗ ಮಾವಿನ ಗೊಟ್ಟಿ
ಗಂಡನ ಕಂಡರ ಗಜನಿಂಬಿ । ಈ ಹೆಣ್ಣ
ಗೆಣಿಯನ ಕಂಡರ ಮೋಸಂಬಿ

೧೦

ಅತ್ತಿ ಹೂವಿನ ಸೀರಿ ಅಚ್ಚೇರ ತೋಳಬಂದ್ಗಿ
ಹೊತ್ತೇರಿ ಹೊಳಿಗಿ ಹೊಂಟಾಳ । ನನಗೆಣತಿ
ಚಿತ್ತಾರದ ತೇರ ನಡದಂಗ

೧೧

ಅತ್ತು–ಕರದು ನೀ ಅಕ್ಕನಮನಿಗಿ ಹ್ವಾದರ
ಅಕ್ಕನ ಗಂಡ ಅವಕೊಂಡ । ಹುಡಗಿ ನಿನ್ನ
ಅಕ್ಕನ ಸೆರಗ ಹರಕೊಂಡ

೧೨

ಅಂತರ ಪಂತರ ಸಿಬಿಕಿಯ ಜಂತರ
ಜಂತರ ಮಾರೂದು ಜಮುಖಂಡಿ । ಸೂಳ್ಯಾರು
ಅಂತರಲೆ ಲಾಗ ಒಗದಾರೊ

೧೩

ಅಂಬಲಿ ಮುತ್ತಿಷ್ಟಗ ಒಂಬತ್ತ ಬಾಗಿಲ
ತುಂಬ ಕುತ್ತಾರ ರೈತರ । ನಡಬರಕ
ತಂದಿ ಕುತ್ತಾನ ಸಿದರಾಯ

೧೪

ಅಂಬಿಗ್ಯಾರ ಹುಡಗನ್ನ ನಂಬೀನ ಗೆಳತೆವ್ವ
ತುಂಬಿದ ಹೊಳಿಯಾಗ ಕೈ ಬಿಟ್ಟ । ಆ ಹುಡುಗ
ರಂಭೀನ ತಂದಿಟ್ಟ ನನಮ್ಯಾಲ

೧೫

ಅಯ್ಯಯ್ಯ ಅನ್ನೂಳ ಅಯ್ಯಗ ಹೋಗೂಳ
ಅಯ್ಯ ನಿನಗೇನ ಕೊಡತಾನ । ಎಲೆ ಹುಡಗಿ
ಸೈಪಾಕದಾಗ ಸರಿಹಿಟ್ಟ

೧೬

ಅಲ್ಲ್ಯಾಕ ನಿಂತಿಯೋ ಹಲ್ಲ್ಯಾಕ ಕಿಸದೀಯೋ
ಹಲ್ಲ ಮ್ಯಾಲೆರಡ ನೊಣಕುತ್ತ । ಎಲೆ ಹುಡಗ
ಲಾವಂಗ ಮಾಡಿ ಕಡದೀಯೊ

೧೭

ಅವಳೀಗಿ ಬೇದರ ಇವಳ್ಯಾಕ ಅಳತಾಳೊ
ನಾ ಬಿತ್ತಿ ಬೆಳದ ಕುಸಬೀಯ । ಬಡದಂಗ
ಬಡದ ಬಿಡಲೇನೊ ಇವಳನ್ನ

೧೮

ಆಚೀಚೆ ನೋಡಿದರ ಸಾಚೆ ಸಣ್ಣದೈತಿ
ನಾಚೀಕಿ ಐತಿ ಮಾರ್ಗ್ಯಾಗ । ಅವರವ್ವ
ಆಚೀಗಿ ಬಿದ್ದ ಕಳಸ್ಯಾಳೊ

೧೯

ಆಜೂರ ಭೂಮ್ಯಾಗ ಆಡ್ಯಾಡಿ ಮೇದಾನೊ
ಅಗರಾಣಿ ನೀರ ಕುಡದಾನೊ । ಬಸವಣ್ಣ
ಆರಂಭ ಮಾಡಿ ಮಲಗ್ಯಾನೊ

೨೦

ಆ ದಂಟ ಈ ದಂಟ ಹಸರ ಹಳದೀ ದಂಟ
ಸೂಳ್ಯಾರ ಕೇಳೂದು ಕರದಂಟ । ಕೊಟ್ಟರ
ಜಿಗದ್ಯಾಡಿ ಮುದ್ದ ಕೊಡತಾರೊ

೨೧

ಆರಸಾವಿರ ಜಂಗ ಮೂರಸಾವಿರ ಗಂಟಿ
ದೂರ ಕೇಳ್ಯಾವ್ರೊ ದುರ್ಗ್ಗಕ । ನಮ್ಮೆತ್ತ
ಧೂಳ ಚಿಮ್ಮ್ಯಾವ್ರೊ ಗಗನಕೊ

೨೨

ಆಲೂರ ಕೆರಿಯಾಗ ಕಾಲೂರಿ ನಿಂತಾಳೊ
ಜಾಲಗಾರ ಹುಡಗ ಜಗಮಿಂಡ । ಅವರಪ್ಪನ
ದೌಲತ್ತ ನೋಡಿ ಜಿಗದಾಳೊ



೨೩

ಆಲೂರ ಹೊಳಿ ಮುಂದ ಪೂಲ ಕಟಿಸ್ಯಾರ ಚಂದ
ಕೀಲ ಬಡದಾರ ವಿಪರೀತ । ಇಂಗ್ರೇಜವರು
ಗಂಗಿ ಮ್ಯಾಲ ಗಾಡಿ ನಡಸ್ಯಾರೊ

೨೪

ಆ ವರುಷ ಹಂಗಾತು ಈ ವರುಷ ಹಿಂಗಾತು
ಲೆಂಡ್ಯಾನ ಹಳದಾಗ ಕೆಲಸಾತು । ಹುಡಗೀಯ
ಬಣ್ಣದ ಸೀರಿ ಹೊಲಸಾತೊ

೨೫

ಇದ್ದ ಹೆಂಡತಿ ಬಿಟ್ಟು ಕದ್ದಸೂಳಿಯ ಮಾಡಿ
ಬಿದ್ದ ಮಣಕಾಲ ಮುರಕೊಂಡ । ಸಾವಕಾರ
ಇದ್ದಟ್ಟ ಬುದ್ಧಿ ಕಳಕೊಂಡೊ

೨೬

ಇದ್ದರ ಇರಬೇಕ ಬುದ್ಧುಳ್ಳವಳ ಗೆಣೆತಾನ
ಕುದ್ದಲಗೇಡಿ ಕುಲಗೇಡಿ । ಗೆಣೆತನ ಮಾಡಿ
ಇದ್ದಟ್ಯ ಬುದ್ದಿ ಕಳಕೊಂಡೊ

೨೭

ಇರಬಿ ಈಯಿಸಿಕೊಂಡು ಹರಬಿ ಗಿಣ್ಣವ ಕಾಸಿ
ಹರದಾರಿ ಗೆಣಿಯಾಗ ಕಾದಾಳೊ । ಅಂವ ಬರಲಿಲ್ಲ
ನೆರಿಕ್ಯಾಗ ಚೆಲ್ಲಿ ಅಳತಾಳೊ

೨೮

ಈಟೀಟ ಮಲಿಯಾಕಿ ಚೀಟಿನ ಕುಪ್ಪಸದಾಕಿ
ಸೋಟ ಅವರಪ್ಪ ಕಾದಾನೊ । ಆ ಹುಡಗಿ
ನೋಟ ಬೀರ್ಯಾಳೊ ನನಮ್ಯಾಲೊ

೨೯

ಈಟೀಟ ಮಲಿಯವಳು ಚೀಟಿನ ಕುಪ್ಪಸದವಳು
ಬಂದಿದ್ದಳೇನ ತ್ವಾಟಕ್ಕ । ಆ ಹುಡಗಿ
ತಂದಿದ್ದಳೇನ ಕರಿಗಡಬು

೩೦

ಈಟೀಟ ಮಲಿಯಾಕೆ ಥಾಟಿನ ನಡಗ್ಯಾಕಿ
ಬ್ಯಾಟಿಗಿ ಹೊಕ್ಕೀನ ಕೈಬಿಡ । ಎಲೆ ಹುಡಗಿ
ಚಿಟಜೇನ ತರತೀನಿ ಸೀ ನೋಡ

೩೧

ಈಟೀಟ ಇರುವಾಗ ಗಂಡ ಕರಿಯಲು ಬಂದ
ಪುಂಡೀಯ ಬೀಜ ಉಡಿಯಕ್ಕಿ। ಹಾಕ್ಕೊಂಡು
ಕಂಡವರ ಕಾಲ ಹಿಡದಾಳೊ

೩೨

ಉತ್ತತ್ತಿ ಬಣ್ಣದ ಸೀರಿ ಉಡಿಯಾಗ ಟೆಂಗಿನಕಾಯಿ
ಎಡಗೈಯಾಗ ಎಡಿಯ ಹಿಡದಾಳೋ। ಆ ಬಾಲಿ
ನಗತಾಳೊ ಗುಡಿಯ ಹೊಗತಾಳೊ

೩೩

ಊರ ಮುಂದಿನ ಹೊಲವ ಹರಗಿ ಹತ್ತಿಯ ಬಿತ್ತಿ
ತಿರತಿರಗಿ ಹೋಗಿ ನೋಡ್ಯಾನೊ। ಆ ಹುಡುಗ
ಕೊರವರ ಕತ್ತಿ ಕಾದಾನೊ

೩೪

ಊರ ಮುಂದಿನ ಹಳ್ಳ ಕುಸಬಿ ಬಡದರ ಜೊಳ್ಳು
ಗಲ್ಲದ ಮ್ಯಾಲ ಕಿರಬಳ್ಳಿ। ಇಟಗೊಂಡ
ನಲ್ಲನಗೂಡ ನಗತಾಳೊ

೩೫

ಊರ ಮುಂದಿನ ತ್ವಾಟ ನೀರುಂಡ ಬಳ್ಳೊಳ್ಳಿ
ಸಾಲ ಮೂಲಂಗಿ ಗಜನಿಂಬಿ। ಬನದಾಗ
ಗೊಲ್ಲನಾಗ್ಯಾನೊ ಕರಿಹಣಮು

೩೬

ಊರ ಮುಂದಿನ ತ್ವಾಟಾ ನೀ ಮಾಡೊ ನನ ಗೆಣೆಯ
ನೀರ ತರಲಾಕ ಬರತೀನಿ। ನಿನ ಗೂಡ
ಯಾರಿಲ್ಲದಾಗ ಇರತೀನಿ

೩೭

ಊರ ಮುಂದಿನ ಗಂಗಿ ನಾಟೀಕಾರಣ ತಂಗಿ
ಏನ ಬೇಡ್ಯಾಳೊ ಚದರಂಗಿ। ಗೆಣೆಯಾನ
ತೋಳ ಬೇಡಾಳೊ ತೆಲಗುಂಬೊ

೩೮

ಊರೀಗಿ ಹೊಕ್ಕೀನಿ ಹೋರಿಯ ತರತೀನಿ
ಊರ ಕಾಯವ್ವ ದುರಗವ್ವ। ನನ ಗೂಡ
ವಾದ ಹಾಕವನ ಒಯ್ಯವ್ವ



೩೯

ಎಂಟ ಹಾಡನು ಹಾಡಿ ಗಂಟಲ ಹರಕೊಂಡ್ಯೊ
ಸುಂಠಿಯ ಹಿಡಿಯೊ ಬಾಯಾಗ। ನನ್ಹಾಡ
ಒಂಟಿ ಮಾಲ್ಗೇರಿ ಬರತಾವ್ರೊ

೪೦

ಎರಿಯ ಹೊಲದಾಗಿನ ಎಳಿಯ ಸಂವತಿಕಾಯಿ
ಹರಿಯಂದರ ಹೆಂಗ ಹರಿಯಲೆ। ನನಗೆಣಿಯಾ
ಮರಿಯಂದರ ಹೆಂಗ ಮರಿಯಲೊ

೪೧

ಎರಿಯ ಹೊಲದ ಬಂಡಿ ಎಳ ಎಳದ ತರುವಾಗ
ಹೊಲಗೇರಿ ಮುಂದ ನಗಾ ಮುರದ। ಮನಿಯಾನ
ಹುಡಿಗಿ ಅತ್ತಾಳೊ ನಡಮುರದ

೪೨

ಎರಿಹೊಲ ಕರಿಹೆಂಟೆ ನರಿನಡಗಿ ನಡಕೊಂಡ
ಹರದಾರ್ಧರದಾರಿ ಬಂದೀನೊ। ನನಗೆಣಿಯಾ
ಕರಿಗಡಬು ಹೆರತುಪ್ಪ ತಂದೀನೋ

೪೩

ಎಲ್ಲವ್ವಗ ಹೋಗುದಕ ಎರವೀನ ತೋಳಬಂದಿ
ಮಗ್ಗಿಯ ಕುಬಸ ಮಂದೀದ। ತೊಟಗೊಂಡ
ಹಿಗ್ಯಾಡಿ ಹಾದಿ ನಡದಾಳೊ

೪೪

ಎಲ್ಲವ್ವಗ ಹೋಗುವರು ಬೆಲ್ಲವ ಒಯ್ಯುವರು
ಮಲ್ಲಿಗಿ ಒಯ್ಯುವರು ತುರಬೀಗೆ। ಪರಶುರಾಮನ
ಬಿಲ್ಲಿಗಿ ಒಯ್ಯುವರು ಬಿಳಿಮುತ್ತ

೪೫

ಏಳೇಳೂ ಕಾಮಣ್ಣ ಎಟ್ಹೊತ್ತ ಮಲಗೀದಿ
ಆನಿ ಬಂದಗಸಿ ತಗದಾವ್ರೊ। ನಮ್ಮೂರ
ಗೂಳಿ ಬಂದ ಧೂಳ ಚಿಮ್ಯಾವ್ರೊ

೪೬

ಒಂಕ ಮಾರಿಯ ಹಣಮ ತೆಂಕಣಕ ಮುಖಮಾಡಿ
ಟೊಂಕದ ಮ್ಯಾಲ ಕೈಯ್ಯ ಇಟ್ಟಾನೊ। ಹಣಮಂತ
ಲಂಕಾಕ ಲಾಗ ಹೊಡದಾನೊ

೪೭

ಒಂದ ಜಿಟ್ಟಿಯ ಕೊಂದ ಒಂಬತ್ತ ನಗಾರಿ ಬಿಗಿಸಿ
ಅಂಗೈಯಗಲದ ತೊಗಲುಳದ । ಹಾಡೀನ
ಭೇದ ಬಲ್ಲಂವ ಒಡದ್ಹೇಳೋ

೪೮

ಓಡಿ ಹೋಗಲಿ ಬ್ಯಾಡೊ ಗ್ವಾಡಿ ಜಿಗಿಯಲಿ ಬ್ಯಾಡೊ
ಗ್ವಾಡಿಯ ತೆಳಗ ತಿಳಿನೀರ । ಇದ್ದಂಗ
ತಿಳದ್ಹಾಡೋ ನಿನ್ನ ಮನದಾಗ

೪೯

ಕಟ್ಟಾಣಿ ಗುಂಡಲ್ಲ ಕೈಗಂಟು ಬದಕಲ್ಲ
ಇಟ್ಟಂಥಾ ಸೂಳಿ ಮಡದಲ್ಲೊ । ಗಂಡನ್ನ
ಬಿಟ್ಟ ಬಾಳಕ್ಕಿ ಗರತೆಲ್ಲೊ

೫೦

ಕಟ್ಟಿರಿಬಿ ಕಂದಾಹಾಕಿ ಎಂಟ ಮಗಿ ಹಾಲ್ಹಿಂಡಿ
ನೆಂಟರು ಉಂಡು ನೆಲನುಂಡು । ಹಟ್ಯಾನ
ಕುರಿ ಹಿಂಡ ಕುಡದ ಒದರ್ಯಾವೊ

೫೧

ಕಡಿಮ್ಯಾಲ ಕಡಿಬಿದ್ದ ಉಡದಾರ ತಿಡಿಬಿದ್ದ
ಬಡಿಗ್ಯಾರ ಓಣ್ಯಾಗ ಬರುವಾಗ । ಹುಡಗನ
ಬೆಡಗ ಕೇಳ್ಯಾಳೊ ಹೊಯಮಾಲಿ

೫೨

ಕಣ್ಣಿಗಿ ಕಸ ಹೀನ ಹೆಣ್ಣಿಗಿ ನಗಿ ಹೀನ
ಹಣ್ಣಿದ್ದ ಗಿಡಕ ಗಿಣಿ ಹೀನ । ಹೆರವರ
ಹೆಣ್ಣ ಬಯಸಾಂವ ಮತಿ ಹೀನೊ

೫೩

ಕತ್ತಲ ಮನಿಯಾಗ ಬತ್ತಲೆ ನಿಂತಾಳೊ
ಕತ್ತಿವರಿಯಂಥ ಕರಿಹುಡಗಿ । ಕಾಲಾಗ
ಒತ್ತಿ ಬಿದ್ದಾವೊ ಹೊಲಮನಿ

೫೪

ಕಪಲೀಯ ಮಾರೆವಳ ತಿಪಲೇನ ಹೇಳಲೆ
ಚಪಲಬಾಳವಳು ಮಾತೀಲೆ । ಹುಡಗರನ
ಸುಪಲ್ಯಾಗ ಹಾಕಿ ಕೇರ್‍ಯಾಳೊ



೫೫

ಕಬ್ಬಲಗ್ಯಾರ ಹುಡಗನ ನಬ್ಬಾಗಿ ಬರ ಹೇಳ
ಒಬ್ಬರಿಲ್ಲವ್ವ ಮನಿಯಾಗ । ಅಂವಗಾಗಿ
ಹಬ್ಬದ ಶ್ಯಾಂವಿಗಿ ಬಸದೀನ

೫೬

ಕಬ್ಬೂರ ಕಸಿ ಅಂಗಿ ಹುಬ್ಬಳ್ಳಿ ಧೋತರ
ಕಮತುಗಿ ಊರೀನ ಗರಿಪಟಕಾ । ನನಗಾಗಿ
ಇಳಕಲ್ಲ ಹುಡಗಿ ಕಳಿಸ್ಯಾಳೊ

೫೭

ಕರದ ಕರಚೀಕಾಯಿ ಮುರದ ಗಂಗಾಳಕ ಹಾಕಿ
ಹರದಾರಿ ಗೆಣೆಯ ಬರಲಿಲ್ಲೊ । ಮನಿಯಾನ
ನೀವಾಳಿ ಗಂಡ ತಿಂದಾನೊ

೫೮

ಕರದ ಕರಚೀಕಾಯಿ ಬಿದರ ಬುಟ್ಟಿಯ ತುಂಬಿ
ಚದರನಿದ್ದಲ್ಲಿ ಕಳುವ್ಯಾಳೊ । ಆ ಬಾಲಿ
ಸದರ ನೋಡಿ ನೆದರ ಇಟ್ಟಾಳೊ

೫೯

ಕರದಂಟ ಬೇಕಂತ ಕಿರಿಕಿರಿ ಮಾಡ್ಯಾಳೊ
ಗೋಕಾಕದಂಟ ಕರದಂಟ । ಕೊಟ್ಟರ
ಮದವೀ ಗಂಡನ್ನ ಮರತಾಳೊ

೬೦

ಕರದ ಕರಚೀಕಾಯಿ ಕರಿ ಅರಬ್ಯಾಗ ಕಟಗೊಂಡ
ಎರಿಯ ತುಳದಾಳೊ ಯಮನೂರ । ಜಾತ್ರ್ಯಾಗ
ಸೆರಗ ಮರಿಮಾಡಿ ಉಣಸ್ಯಾಳೋ

೬೧

ಕರ್ರನ್ನ ಮಾರೆವಳ ಗಲ್ಲ ಗುಳಿ ಬೀಳವಳ
ಒಗಿಯಾಕ ಹ್ಯಾದಹುಡಗಿ ಬರಲಿಲ್ಲೊ । ಹಳದಾಗ
ಕಾಲೆತ್ತಿ ಕೀಲ ಜಡದಾರೊ

೬೨

ಕರ್ರನ್ನ ಹೆಣ್ಣಂತ ಕಿರಿಕಿರಿ ಕೊಡಬ್ಯಾಡೊ
ಹರಕ್ಹಾರೊ ನಿನ್ನ ಗುಳದಾಳಿ । ನಾ ಇನ್ನ
ಊರ ಮಗಳಾಗಿ ಇರತೀನೊ

೬೩

ಕರ್‍ರಾನ ಹುಡಗ್ಯಾರು ಕಾಯ್ಕುಳ್ಳ ತುಡಗ್ಯಾರು
ಕಾಯ್ಕುಳ್ಳ ಗಂಟ ತೆಲಿಮ್ಯಾಲ । ಇಟಗೊಂಡ
ಹೊಯ್ಕೋತ ಊರ ಹೊಕ್ಕಾರೊ

೬೪

ಕರಿಹೆಂಟೆ ಬರಿಗಾಲ ತುಳಿದ ಇಂಗಳ ಮುಳ್ಳ
ಗೆಣಿಯಾ ನಿನ ಕಡಿಗಿ ಬರುವಾಗ । ಕಣ್ಣೀರ
ಕೆನ್ನೆ ತೋಯಿಸಿ ಹರದಾವೊ

೬೫

ಕರಿಹೆಂಟಿ ಬರಿಗಾಲ ನಡುವ ನೆಗ್ಗಿನಮುಳ್ಳ
ಗೆಣಿಯಾ ನಿನ ಕಳುವಿ ಬರುವಾಗ । ಕಣ್ಣೀರ
ಸಣ್ಣ ಮುತ್ತಾಗಿ ಸುರದಾವೊ

೬೬

ಕರಿಯ ಕಂಬಳಿ ಹೊತ್ತು ಜಿರಿಕಿ ಜೋಡನು ಮೆಟ್ಟು
ಕತ್ತಲದಾಗ ನಡದ ಬರಬ್ಯಾಡೊ । ನನಗೆಣಿಯ
ಕಳ್ಳಂತ ತಿಳಿದ ಕಡದಾರೊ

೬೭

ಕಲ್ಲ ಕಟಿಸಿದ ಬಾವಿ ಮಲ್ಲೀಗಿ ಸೋಪಾನ
ಗಲ್ಲಗಲ್ಲಂಬು ಗಜನಿಂಬಿ । ಬನದಾಗ
ಗೊಲ್ಲನಾಗ್ಯಾನೊ ಕರಿಹಣಮೂ

೬೮

ಕಳ್ಳ ಬರತನಂತ ಗುಲ್ಲ ಮಾಡಲಿ ಬ್ಯಾಡ
ಕಳ್ಳಲ್ಲ ನಾನು ನಿನಗೆಣೆಯ । ನಿನ ಮನಿಗಿ
ಕತ್ತಲಾದಾಗ ಬರತೀನ

೬೯

ಕಾಗವ್ವ ಕರಿಯಲಿ ಕುಳಬಾನ ಉರಿಯಲಿ
ಕರಿ ಹುಡಗಿ ನನಗ ಒಲಿಯಲಿ । ಎಲ್ಲವ್ವ
ಇಲ್ಲಿಂದ ಕೈಯ ಮುಗದೇನ

೭೦

ಕಾಡಬ್ಯಾಡ ಎಲ್ಲವ್ವ ಕಾರ್‍ಹುಣ್ಣಿಗಿ ಬರತೀನು
ಕಲ್ಲ್ಯಾ–ಮಲ್ಲ್ಯಾ ಎನುವ ಎರಡ್ಹೋರಿ । ಹೂಡಕೊಂಡ
ನಿಲ್ಲದ ನಿನಗಿರಿಗಿ ಬರತೀನಿ



೭೧

ಕಾಮಕಸ್ತೂರಿ ನಿನ್ನ ಕಾಣದಲೆ ಇಲಾರೆ
ಮಲ್ಲಿಗೆಂತವಳನ್ನ ಮರಿಲಾರೆ । ನೆಗ್ಗಿನ
ಮುಳ್ಳಿನಂತವಳನ್ನು ಬೆರಿಲಾರೆ

೭೨

ಕಾಮ ಸತ್ತಾನಂತ ಭೀಮ ಬೋರ್‍ಯಾಡತಾನ
ಮನಿಗ್ಹೆದು ಕುಳ್ಳ ಕೊಡರೆವ್ವ । ಕಾಮಣ್ಣನ
ಮನ ಮೆಚ್ಚಿ ಕಿಚ್ಚ ಕೊಡವೂನ ।

೭೩

ಕಾಮಣ್ಣನ ಹೆಂಡತಿ ಕಾಡಿಗ್ಗಣ್ಣಿನವಳ
ನೀರ ಕಂಡಲ್ಲಿ ನಗುವಳೊ । ಕಾಮಣ್ಣನ
ಬೂದಿ ಕಂಡಲ್ಲಿ ಅಳುವಳೊ

೭೪

ಕಾಮಣ್ಣ ನಿಮ್ಮವ್ವ ಏನಂತ ಕರದಾಳೊ
ಬಾರೊ ನನ ಮಗನ ಪರದೇಶಿ । ಶಿವರಾಯನ
ಸಿಟ್ಟಿಗಿ ಸಿರವ ಕೊಡಬಾರೊ

೭೫

ಕಾಮನಮಂಡಲ ಸುತ್ತ ಕಾರ್‍ಜೋಳನು ಬಿತ್ತಿ
ಹಾಲ ತುಂಬೊಟಿಗೆ ಗಿಣಿ ಬಡದೊ । ಕಾಮಣ್ಣನ
ಮಾನ ತುಂಬೊಟಿಗೆ ಶಿವನೋದೊ

೭೬

ಕಾಮ ಕಲ್ಲಿಗಿ ಸೋತ ಭೀಮ ಬಿಲ್ಲಿಗಿ ಸೋತ
ರಾವಣ ಸೋತ ರಣದಾಗ । ನಮ್ಮೂರ
ತಳವಾರ ಸೋತ ತಳದಾಗೊ

೭೭

ಕಾಮಣ್ಣನಂಥಾ ಚೆಲುವ ಬಸವಣ್ಣನಂಥಾ ಛಲವ
ಭೂಮಿತಾಯಂಥ ಸಹನೆಯ । ಪಡದರ
ಸಾರ್ಥಕಾದೇನ ಶಿವನಲ್ಲಿ

೭೮

ಕಾಮಣ್ಣ ನಿನ್ನಂಥ ಚೆಲುವ ರ್‍ಯಾರ್‍ಯಾರಿಲ್ಲ
ಭೀಮಸೇನನಂಥ ದುರಳಿಲ್ಲ । ದೇಶದಾಗ
ಸೀತಾ ದೇವಿಯಂಥ ಗರತಿಲ್ಲೊ

೭೯

ಕಾಮಣ್ಣನಂಥವರು ಚೆಲುವ ರ‍್ಯಾರ‍್ಯಾರಿಲ್ಲ
ರಥಿದೇವಿಯಂಥ ಚೆಲುವಿಲ್ಲ । ದೇಶದ ಮ್ಯಾಲ
ಧರ್ಮರಾಜನಂಥ ದೊರಿಯಿಲ್ಲೊ

೮೦

ಕಾಲಾಗ ಪೈಜಾಣ ನಡುವಿನ್ಯಾಗೊಡ್ಯಾಣ
ರಡ್ವ್ಯಾರ ಹುಡಗೀಯ ಗೆಣೆತನಾ । ಮಾಡಿದರ
ಎಡ್ಡೆಮ್ಮಿ ಹೈನ ಉಣಿಸ್ಯಾಳೊ

೮೧

ಕಾಸಿಯ ಕಟ್ಯಾನ ರೇಶಿಮೀ ಉಟ್ಯಾನ
ಮೀಸಿಯ ಮ್ಯಾಲ ಕೈಯ ತಿರುವ್ಯಾನ । ಈ ಚದರ
ಖಾಸ ದೇಸಾಯರ ಮಗನೇನ

೮೨

ಕ್ವಾರಮೀಸಿಯ ಹುಡುಗ ವಾರಿನೋಟಕ ಸೋತ
ಗಾರಗಾಣ್ಣೀನ ಬಿಳಿ ಹುಡಗೀಯ । ನೋಡುತ
ತೇರ ಎಳಿಯೂದು ಮರತಾನೊ

೮೩

ಕುಡ್ಡ ಕೂರಿಗಿ ಹೂಡಿ ರೊಡ್ಡ ಬಳಸಾಲ ಹೂಡಿ
ಯಾಸಿಗಾಲಾಂವ ಎಡಿಹೂಡಿ । ಅವರವ್ವ
ತುದಿಗಾಲಲಿ ರೊಟ್ಟಿ ತರತಾಳೊ

೮೪

ಕುದರೀಗಿ ಕೊಂಬಿಲ್ಲ ಕ್ವಾಣೀಗಿ ಢು ಇಲ್ಲ
ಟೆಂಗಿನ ಗಿಡಕ ಟಿಸಲಿಲ್ಲ । ನನಗೂಡ
ವಾದ ಹಾಕವಗ ಉಸಲಿಲ್ಲೊ

೮೫

ಕುಂಟಲಗಿತ್ತೀಗಿ ಕುಸಬಿ ಹೂವಿನ ದಂಡಿ
ಎಂಟ್ಹುರಿಹಗ್ಗ ಗುಂಡಬಡಿಗಿಲೆ । ಬಡದರ
ಕುಂಟಲತನಾ ಬಿಡಲಿಲ್ಲೊ

೮೬

ಕುಂಬಳ ದಡಿ ಸೀರಿ ಕುಣಕುಣದ ಉಡತಾಳೊ
ಗಂಡನಿಲ್ಲೇನೊ ಇವಳೀಗಿ । ಈಗೀಗ
ಗಂಡೆರಳಿ ಬಣ್ಣ ತಿರಗ್ಯಾವ್ರೊ



೮೭

ಕುಂಬಳ ದಡಿ ಸೀರಿ ಕುಣಕುಣದ ಉಟ್ಟಾಳೊ
ಮಗ್ಗಿ ತೆಗಿಸ್ಯಾಳೊ ಮಲಿಮ್ಯಾಲ । ಈ ಚೆಲುವಿ
ಚಂದ್ರಾಮನ ಬರಸ್ಯಾಳೊ ಬೆನ್ನಾಗ

೮೮

ಕುಂಬಾರ ಕುಡಕಿ ಬಡದೊ ಕಂಬಾರ ಕಬ್ಬಿಣಾ ಬಡದೊ
ಪತ್ತಾರ ಬಡದ ಬಂಗಾರ । ಹಾರೂರ
ಕಿಟ್ಟಪ್ಪ ಬಡದ ದಸಮಿಯ

೮೯

ಕುರಬರ ಹುಡಗೀಯ ತುರಬ್ಯಾಕ ನಿಗರೇತಿ
ತುರಬೀನ ತುಂಬ ಕುರಿ ಉಣ್ಣಿ । ಕಟಗೊಂಡ
ಟ್ರರಂತ ಕುರಿಯ ಹೊಡದಾಳೊ

೯೦

ಕುಲು ಕುಲು ನಗುವ್ರೂಳು ಕುಲಕಣ್ಣಿಗಿ ಹೋಗೂಳು
ಕುಲಕಣ್ಣಿ ನಿನಗೇನ ಕೊಡತಾನ । ಬಾಳಾದರ
ಬಿರಾಡದಾಗ ರೊಕ್ಕ ಬಿಡತಾನ

೯೧

ಕುಸಬೀಯ ಹೂ ಚೆಂದ ಕೋಗಿಲದ ದನಿ ಚೆಂದ
ನಸುಗೆಂಪಿನಾಕಿ ನಗಿ ಚೆಂದ । ಚೊಚ್ಚಿಲ
ಬಸರಾದರ ಹೆಣ್ಣ ಬಲುಚೆಂದ

೯೨

ಕೂಡೀದ ಕುಡಿಹಬ್ಬ ತೀಡೀದ ಬೇತಾಲಿ
ಕಾಡೀಗಿ – ಗಣ್ಣ ನಡಸಣ್ಣ । ನಡದರ
ಮಿಡಿನಾಗರಾಡಿ ಹರದಂಗ

೯೩

ಕೂಡೂ ಮನಸಿದ್ದರ ಗ್ವಾಡಿ ಜಿನದರ ಬಾರೊ
ದಡ್ಡೀ ಬಾಗೀಲ ತೆರಿತೀನೊ । ಆವಾಗ
ಅಡ್ಡ ಬಂದವರನ ಇರಿತೀನೊ

೯೪

ಕೂಸಿನ್ನ ಕೊಲಿಮಾಡಿ ಘಾಸಿ ಗಂಡಗ ಮಾಡಿ
ಹಾಸಿಗಿ ಮಾಡ್ಯಾಳೊ ಗೆಣಿಯಾಗ । ಆ ಗೆಣಿಯ
ಪಾಸಿ ಮಾಡ್ಯಾನೋ ಬರಲಿಲ್ಲ

೯೫

ಕೂಸಿನ್ನ ಕರಕೊಂಡ ಮಾಸೆತ್ತ ಏರ್‍ಯಾಳೊ
ತಾಸೊತ್ತಿನ ಹಾದಿ ಯಮನೂರ । ತೇರಿಗಿ
ಕೂಸೆತ್ತಿ ಕೈಯ ಮುಗದಾಳೊ

೯೬

ಕೂಲಿಕಾರ ಹುಡಗಗ ಹಾಲ ಸಕ್ಕರಿ ಹಾಕಿ
ಮ್ಯಾಲ ಕೊಟ್ಟೀನ ಎಲಿ ಅಡಕಿ । ಹುಡಗಗ
ಕಾಲ್ಹಿಡಿದರ ಕರುಣಿ ಬರಲಿಲ್ಲೊ

೯೭

ಕೆಂಪ–ಜ್ವಾಳದ ರೊಟ್ಟಿ ಗಿಂಜ ಬದನೀಕಾಯಿ
ದುಂದೀಲಿರುವೂದು ಹೊಳಸಾಲ । ಹುಡಗ್ಯಾರು
ಸಂಜೀಕ ದೀಪ ಹೊಡದಾರೊ

೯೮

ಕೆಂಪ ಸೀರಿಯನುಟ್ಟು ಬಾಳಿ ನಿರಗೀ ಮಾಡಿ
ತಂಪೊತ್ತಿನ್ಯಾಗ ಬರತಾಳೊ । ಕೊರವಂಜಿ
ಜಂಪ ಜ್ಯಾಲ್ಯಾಗ ನೆನದಾಳೊ

೯೯

ಕೆಂಪಾನ ಹೆಣ್ಣಂತ ಸಂತೋಷ ಪಡಬ್ಯಾಡ
ಸಂತ್ಯಾಗಿರತೈತಿ ಸವಳುಪ್ಪ। ಆ ಹೆಣ್ಣ
ನಿಂತಲ್ಲಿ ನೀರ ಬರಸೂಳ

೧೦೦

ಕೆಲಸಂಗ ಕ್ಯಾದೀಗಿ ಹೊನವಾಡ ಮಲ್ಲೀಗಿ
ಕಡೆಯ ಬಿಜ್ಜರಗಿ ಕಣಗೀಲ । ದಾಸ್ಯಾಳ ಹೂವ
ಮಡ್ಡೀ ಎಲ್ಲವನ ತುರಬೀಗಿ

೧೦೧

ಕೆಸರ್‍ವ್ಹಾಳ ಹಳದಾಗ ಉಸರ್‍ವ್ಹಿಡದ ಅಳತಾಳ
ಹೆಸರ ಕೇಳಿದರ ನಗತಾಳ । ಹುಡಗೀಯ
ಕುಸಮೋಜಿನ ಬಯಕೆ ತಿಳಿಯವೊ

೧೦೨

ಕೈಯ್ಯಿಲಾಗದ ಸೂಳಿ ಅಯ್ಯಾಗ ಹೋಗ್ಯಾಳೊ
ಅಯ್ಯ ಬೇಡ್ಯಾನೊ ಮನಿ ಮನಿ । ಸೂಳೀಗಿ
ಮ್ಯಯ್ಯ ಬೇಡ್ಯಾನ ಮಲಗಾಗ



೧೦೩

ಕೊಳ್ಳಾಗ ಕಟ್ಟಾಣಿ ಉಡಿಯಾಗ ಪುತಾಣಿ
ನೀ ಎಲ್ಹೋಗಿದ್ದೆ ಚಿಟ್ಟಾನಿ । ನಿನಗಂಡ
ಹುಡಕ್ಯಾಡಿ ಹುಟ್ಟ ಮುರದಾನ

೧೦೪

ಖಂಡ ಇರೂತಾನ ರಂಡ್ಯಾರ ಸಹವಾಸ
ಪುಂಡತನಾ ತೋರೂರ ಊರಾಗ । ಹುಡಗೂರು
ಜೊಂಡಗಾಗುವರು ಮದಿವ್ಯಾಗಿ ॥

೧೦೫

ಗಂಡನ ಮನಿಯಾಗ ಉಂಡ ತಿರಗುವ ಹೆಣ್ಣ
ಕಂಡವರ ಗೂಡ ನಗಬ್ಯಾಡ । ಅದ ಕಂಡು
ಕಂಡಕ ಕಾಗಿ ಮುಕರ್‍ಯಾವ

೧೦೬

ಗುಂಡ ಗುಂಡ್ಯಾರ ಕೂಡಿ ಗುಂಡದ ನೀರಿಗಿ ಹೋಗಿ
ಗುದ್ಯಾಡಿ ಗುಂಡ ಕೆದರ್‍ಯಾರೊ । ರಾತ್ರ್ಯಾಗ
ಒದ್ಯಾಡಿ ಕೌದಿ ಹರದಾರೊ

೧೦೭

ಗಂಡ ಬಡವನಂತ ಕಂಡಂಗ ನಡೀಬ್ಯಾಡ
ಉಂಡೀನಂತ ಇರು ಉಪವಾಸ । ಹುಡಗೀ
ಗಂಡನ ಹೊರತು ಗತಿ ಇಲ್ಲೊ

೧೦೮

ಗಂಡನ ಮನಯಾಗ ಹೆಂಡಿ ಹಿಡದರು ಲೇಸ
ಗಂಡಿಲ್ಲದವಳ ದೌಲತ್ತ। ಎಟ್ಟಿದ್ದರೂ
ಕುಂಡಿಮ್ಯಾಲ ಸೀರಿ ಹರದಂಗೊ

೧೦೯

ಗಾರಗಣ್ಣಿನ ಹುಡಗಿ ಯಾರ ಮಗಳಪ್ಪ ಈಕಿ
ಸೀರಿ ನೋಡದರ ಸಿರಿವಂತಿ । ಇರ್ವಪ್ಪ
ಯಾರೀಗಿ ಧಾರಿ ಎರದಾನೊ

೧೧೦

ಗಾರಿಗಿ ಕಟಗೊಂಡ ತೇರಿಗಿ ಬಂದಾಳೊ
ಮಾರುದ್ದ ಜಡಿಯ ಬಿಟಗೊಂಡ । ಹುಡಗಿನ್ನ
ಊರಿನ ಗೌಡ ಇಟಗೊಂಡೊ

೧೧೧

ಗಿಡದಾಗ ಗಿಡ ಚೆಂದ ಮಾವೀನಮರ ಚೆಂದ
ಹಕ್ಕಿ ಪಕ್ಯಾಗ ಗಿಣಿಚೆಂದ । ಎಲೆ ಹುಡಗ
ಚಿಕ್ಕ್ಯಾಗ ಚೆಂದ ಚುಂದ್ರಾಮ

೧೧೨

ಗಿಡದಾಗ ಗಿಡ ಹುಟ್ಟಿ ಗಿಡಕ ತೊಟ್ಟಿಲ ಕಟ್ಟಿ
ಅಡಿವೆಪ್ಪ ಹುಟ್ಟಿ ಗುಡಿ ಕಟ್ಟಿ । ಕಡೇಮನಿ
ಬಸಗೊಂಡಪ್ಪ ಹುಟ್ಟಿ ಮಠ ಕಟ್ಟೊ

೧೧೩

ಗಿಡ್ಡ ಇದ್ದರು ಹೆಣ್ಣ ತಿದ್ದೀ ಮಾಡಿದಂಗ
ಕಡ್ಡೀ–ಬುಗಡೀಯ ಬಡದಂಗ । ಇದ್ಹೆಣ್ಣ
ಇದ್ದರೆ ಚೆಂದ ಇದರೀಗಿ

೧೧೪

ಗಿಡ್ಡ ಹುಡಗಿಯ ಹೂಂಸ ಗುಂಡಕಲ್ಲಿಗಿ ಬಡದ
ವಾಡೇಕ ಬಡದ ಗಿಮದರಿಗಿ । ಗೌಡರ
ಕ್ವಾಣೀಗಿ ಬಡದ ಹಣಿ ಒಡದ

೧೧೫

ಗುಡ್ಡದವಾರ್‍ಯಾಗ ಕಡ್ಡ ಕೊಯ್ಯವನ್ಯಾರೊ
ಗಡ್ಡ ಇಲ್ಲದ ಎಳಿಹುಡಗ । ನ ಜತಿಗೂಡಿ
ಗುದ್ವಾಡಿ ಬಳಿಯ ಒಡಕೊಂಡ್ಯೊ

೧೧೬

ಗುಡ್ಡದವಾರ್‍ಯಾಗ ಗುಗ್ಗಳ ಹೊಗಿ ಎದ್ದ
ಅಪ್ಪ ಶಿವರಾಮನ ಶಿವಪೂಜಿ । ನಡದಾಗ
ಆಕಾಶದ ಗಂಟೆ ಗಣಲೆಂದೊ

೧೧೭

ಗುಡ್ಡದ ಎಲ್ಲವ್ವನ ಗುಡಿಯೆಲ್ಲಾ ಬಂಗಾರ
ಹಾಸುಗಲ್ಲೆಲ್ಲ ಹವಳವ । ಎಲ್ಲವ್ವನ
ಬೀಸಣಿಕಿಗೆಲ್ಲ ಬಿಳಿಮುತ್ತ

೧೧೮

ಗುಂಡಕಡಬುನು ಮಾಡಿ ಗುಂಡ್ಯಾನ ಮ್ಯಾಲ ಹೇರಕೊಂಡು
ಗಂಡ ಹೋಗೂನ ಪರವುತಕ । ಪವಳ್ಯಾಗ
ಕೂಡುಂಡು ಬ್ಯಾರೆ ಮನಗೂನ



೧೧೯

ಗುಳ್ಳವ್ವನ ಗುಡಿಯಿಲ್ಲ ಜೋಕಮಾರಗ ಮನಿಯಿಲ್ಲ
ಇಬ್ಬರಿಗೂ ಕಾಯಿ ಒಡೂದಿಲ್ಲ । ಇವರನ್ನ
ಭಾಳ ದಿನಾ ಇರ್ಲಾಕ ಬಿಡೂದಿಲ್ಲ

೧೨೦

ಗೆಣಿಯಾ ಬರತಾನಂತ ಹರವಿ ನೀರನು ಕಾಸಿ
ಹರದಾರಿ ಗೆಣಿಯ ಬರಲೊಲ್ಲೊ । ಆ ಹುಡುಗಿ
ತಿರಿಗಿ ಸುರುಸುರಿವಿ ಅಳತಾಳೊ

೧೨೧

ಗೊಂಜಾಳ ಬಿಸಿರೊಟ್ಟಿ ಗಿಂಜ ಬದನಿಕಾಯಿ
ಪಿಂಜಾರ ಹುಡಗಿ ಗೆಣೆತಾನ । ಮಾಡಿದರ
ಪಿಂಜಾಳಿ ಅಂಗಿ ಹೊಲಿಸ್ಯಾಳೊ

೧೨೨

ಗೋಕಾಕದ ಕುಪ್ಪಸ ಬೇಕಂತ ತರಿಸ್ಯಾಳೊ
ಮಗ್ಗಿ ತಗಿಸ್ಯಾಳೊ ಮಲಿಮ್ಯಾಲ । ಆ ಹುಡುಗಿ
ಗೆಣೆಯನ ಬರಸ್ಯಾಳೊ ಎದಿಮ್ಯಗೊ

೧೨೩

ಚಹಾದ ಅಂಗಡ್ಯಾನ ಹೆಣ್ಣ ಚೆಲವಿ ಇದ್ದರೇನ
ಚಂಚಲ ಗುಣದ ಛೀಮಾರಿ । ಗೆಣೆತನ
ಮುಂಚೆ – ಬ್ಯಾಡನ್ನೊ ಮೈದುನಗ

೧೨೪

ಚಪ್ಪರ ಮನಿಯವಳ ಜುಪ್ಪರ ತೆಲಿಯವಳ
ದುಡ್ಡ ಕೊಡತೀನ ಎರಕೋರ । ಎಲೆ ಹುಡಗಿ
ಚೆಂಜಿಕ ಬರತೀನ ಕರಕೋರ

೧೨೫

ಚಂದಕ ನಮ್ಮವರು ಚೆಂಡ್ಹೂವ ಬಿತ್ತ್ಯಾರ
ಉಂಡ್ಹೋಗೊ ರಾಯ ಮುಡದ್ಹೋಗೊ । ನಿನಗೂಡ
ಕೆಂಡ್ಹೋಗೊ ನಿನ್ನ ಗೆಳೆಯರಿಗೆ

೧೨೬

ಚಿಕ್ಕ ನನ ಕಾಮಣ್ಣ ಚೆಣಿಯನಾಡುತ ಬಂದ
ಉಕ್ಕಲಿ ತೆಳಗ ಮನಗೂಳಿ । ಅಗಸ್ಯಾನ
ಚಿತ್ತುದ ಕೊಡಕ ಚೆಣಿ ಬಡದೊ

೧೭
ಚಿಕ್ಕ್ಯಾಗ ಚಂದ್ರಮ ಹಕ್ಕ್ಯಾಗ ಗಿಣಿರಾಮ
ಸೊಕ್ಕಿ ಬಂದರ ಬಲರಾಮ । ಹೆಣ್ಣಿಗಿ
ಮಿಕ್ಕೀದ ಮಾರ ಮಗರಾಮೊ

೧೮
ಚಿಗರಿ ಬಣ್ಣದ ಕುಬಸ ಚೆಲುವಿತಾ ಹೊಲಿಸ್ಯಾಳೊ
ಮಂಗ್ಯಾನ ತಗಿಸ್ಯಾಳೊ ಮಲಿಮ್ಯಾಲ । ಆ ಬಾಲಿ
ಗೆಣಿಯನ ಬರಸ್ಯಾಳೊ ಎದಿಯಾಗೊ

೧೯
ಜಂಗಮರ ಹುಡಗನ ಹೆಂಗಾರೆ ಸಲುವಲೆ
ಜಂಗ ಬೇಕವನ ಕಾಲೀಗಿ । ದುಡ್ಡೀನ
ನಿಂಗ ಬೇಕವನ ಕೊರಳಿಗಿ

೨೦
ಜಾತರಿಗಿಹ್ವಾದ ರಾಯ ರಾತೂರಿ ಬರಲಿಲ್ಲ
ಖಾತರ್ಯಾದಾವ ಮನದಾಗ । ಆ ಊರ
ಪಾತರದ ಹೆಣ್ಣ ಬಿಡಲಲ್ಲೊ

೨೧
ಜಾಲಗಾರನ ಮಗಳು ಜ್ಯಾಲ್ಯಾಗ ಮನಿಕಟ್ಟಿ
ಮೇಲಮದ್ದೊಳಗ ತೊಲಿ ಹೊರಗ । ಹಾಡೀನ
ಭೇದ ಬಲ್ಲಂವ ಒಡದ್ಹೇಳೊ (ಜೇನು)

೨೨
ಟಿಕ್ಕೇಸರ ಕುಪ್ಪಾಳ ಠೀಕಾಗಿ ನಿಂತಾಳ
ಸಿಕ್ಕವರನ ಕಂಡ ನಗತಾಳ । ಈ ಹೆಣ್ಣ
ಈಕೇನ ಅವನೀಗಿ ಇರತಾಳೊ

೨೩
ತಂಬಾಕ ಸೇದುವನ ತಾರೀಫೇನ ಹೇಳಲೆ
ರೇಶಿಮಿ ಅಂಗ್ಯಾಗ ಕಿಡಿಬಿದ್ದ । ಮನಿಯಾನ
ಮಡದಿ ಕೇಳಿದರ ಮುನಿದಾಳೊ

೨೪
ತಳವಾರ ಹುಡಗಗ ತಾಕೀತ ಮಾಡೀನ
ತವರಿಗಿ ಹ್ವಾದರ ಬರಬೇಕು । ಅದ ಬಿಟ್ಟು
ಹಿಂಬಾಲ ಹತ್ಯಾನ ಹಗಲಿರುಳ



೨೫
ತಾಂಬರ ಕೊಡದಾಕಿ ತಾರೀಫೇನ ಹೇಳಲಿ
ಖಾರಿಕ ಹಾಕ್ಯಾಳೊ ಕೊಡದಾಗ । ಗೆಣಿಯಾಗ
ತಾರೀಖು ತಿಳಿಸ್ಯಾಳೊ ಬರಲಾಕೊ

೨೬
ತುಂಬಿದ ತೋಳಿಗಿ ಸಿಂಬಿಸುತ್ತಿದ ವೆಂಕಿ
ರಂಭಿ ನಿನತಕ್ಕ ಒಗತಾನ । ಇರದೀರ
ಬಂಗಾರ ಇದ್ದೇನ ಸುಡುವ್ಹಾದ

೨೭
ತುಂಬಿದ ಹೊಳಿಯಾಗ ಕೊಂಬ ಕಾಣಸತಾವ
ಬಂಗಾರದ ಇಣಿಯ ಬಸವಣ್ಣ । ಕಡಪಟ್ಟಿ
ಇಂಬ ಬಯಲಾಗ ನೆನದಾನೊ

೨೮
ತೆಗ್ಗಿಲ್ಲ ತೆವರಿಲ್ಲ ಮುಗ್ಗ್ಯಾವ ಎರಡಾನಿ
ತೆಗ್ಗಿನ್ಯಾಗೈತಿ ಹಲಗಣಿ । ಹಣಮಪ್ಪನ
ಹುಬ್ಬಿನ್ಯಾಗೈತಿ ಸಿರಿಗಂಧ

೨೯
ತೊಗರಿಯ ಸಾಲಾಗ ಬಗರಿ ಆಡವನ್ಯಾರೊ
ಮದರಿ ರುಂಬಾಲದ ಕಾಮಣ್ಣ । ಆಡಿದರ
ಬಂದಂಥ ಮಾಡ ಬಯಲಾಗೆ

೩೦
ಥಂಡಿ ಹತ್ತೈತಂತ ರಂಭಾಟ ಮಾಡ್ಯಾಳೊ
ಕುಂಡಿ ಮೇಲಾಗಿ ಮಲಗ್ಯಾಳೊ । ಅಕಿಗಂಡ
ರಂಡ್ಯಾರ ಹಂತ್ಯಾಕ ನಗತಾನೊ

೩೧
ಥಾಟಗಿತ್ತಿ ನಿನ್ನ ತಾರೀಫೇನ ಹೇಳಲೆ
ಉಳ್ಳಾಕೇನಿಲ್ಲೊ ಚೆಂಜೀಕ । ಮುದುಕಾದ
ಗಂಡ ಸತ್ತರ ಗತಿ ಇಲ್ಲೊ

೩೨
ಥಾಟಗಿತ್ತಿ ಹೆಣ್ಣ ತ್ವಾಟಕ ಬರಬ್ಯಾಡ
ತ್ವಾಟದಾನ ಹುಡುಗ ಬಲಬಿರಿಕೆ । ಎಲೆ ಹುಡಗಿ
ಈಟೀಟ ಮಲಿಯ ಹಿಡದಾನೊ

೧೪೩

ದನ್ಯಾಳ ದಾಶಾಳ ಎಣ್ಣಿಕಣಮುಚನಾಳ
ಬಣ್ಣ ಆಡೂದು ಬಬಲೇಶ್ವರ । ಅಗಸ್ಯಾನ
ಹೆಣ್ಣ ಬಂದಾವ ಅಪರೂಪ

೧೪೪

ದಾರೂ ಕುಡಿಯಲಿ ಬ್ಯಾಡೊ ದಾರ್‍ಯಾಗ ನಿಲಬ್ಯಾಡೊ
ನಾರ್‍ಯಾರ ನೋಡಿ ನಗಬ್ಯಾಡೊ । ಎಲೆ ಹುಡಗ
ಮಾರಿಕೊಳ್ಳಬ್ಯಾಡೊ ನಿನ ಮಾನ

೧೪೫

ದಾರೂದ ಧಣಗೀಗ ದೈತ್ಯರು ಉಳಿಲಿಲ್ಲೊ
ದೇಶಗತಿ ಎಲ್ಲಾ ನಾಶಾದು । ಎಲೆ ಹುಡಗ
ಹೇಸಿ ನೀನ್ಯಾವ ಲೆಕ್ಕಕ್ಕೊ

೧೪೬

ದಿಂಡಧಿಗಮಾಲಿ ಹೆಣ್ಣ ಕಂಡನಾ ಹೆದರೀನ
ಥಂಡಿ–ಉರಿ ಬಂದ ಮನಗೀನ । ಆ ಹೆಣ್ಣ
ಭಂಡ ಮಾಡ್ಯಾಳೊ ಬೆಳಗಾನ

೧೪೭

ದುಂಡ ಮಾರಿಯ ಹೆಣ್ಣ ಚೆಂಡು ಹೂವಿನ ಬಣ್ಣ
ಕಂಡಲ್ಲಿ ನಿಂತು ನಗಬ್ಯಾಡ । ಹುಡಗೂರು
ಕೆಂಡ ಕಾರ್‍ಯಾರ ಹೊಟ್ಟುರದ

೧೪೮

ದುಂಡ ಮಾರಿಯ ಹೆಣ್ಣ ಚೆಂಡು ಹೂವಿನ ಬಣ್ಣ
ಕಂಡ ಕಂಡಲ್ಲಿ ನಗಬ್ಯಾಡ । ಎಲೆ ಹುಡಗಿ
ಕಂಡಕ ಕಾಗಿ ಮುಕರ್‍ಯಾವ

೧೪೯

ಧನ್ಯಾಳ ದಾಶಾಳ ಗೋದೀಯ ಬೀಸ್ಯಾಳ
ಹಂತಿ ಹೊಡೆಂವಗ ಉಣಸ್ಯಾಳೊ । ಹುಡುಗಿ
ಕಂಕಿ ತುಗಿಯಂವಗ ಮನಗ್ಯಾಳ

೧೫೦

ನತ್ತಿನ್ಯಾನೊಂದಂದ ಮುತ್ತ ಉದರಿದಂಗ
ಹತ್ತ ಮಕ್ಕಳ ಹಡದಾಳೊ । ನಮ್ಮವ್ವ
ಉತ್ತತ್ತಿ ಹಾಂಗ ಬದಕ್ಯಾಳೊ



೧೫೧

ನಮ್ಮೂರ ಗೌಡರ ರತ್ನದ ಸುಣ್ಣದಕಾಯಿ
ಪೀತ–ಪಿಂಜರದ ಎಲಿಚಂಚಿ । ಬಿಚ್ಚಿದರ
ಪತಿವರತ್ಯಾರ ಬಾಯಿ ತೆರದಾರೊ

೧೫೨

ನಲ್ಲನ ಬಾವಲಿ ಗಲ್ಲದ ಬಡಿತಾವೊ
ಹೂಡೇದ ಮುಂದ ಹುಡದೀಯ । ಆಡುದ ನೋಡಿ
ಹೂರಣಕ ಬೆಲ್ಲ ಮರತಾಳೊ

೧೫೩

ನಲ್ಲ ಬರತಾನಂತ ಒಲ್ಲೀಯ ನೇಶಾಳೊ
ನಲ್ಲ ನೆನದಂಗ ಬರಲಿಲ್ಲೊ । ಆ ಒಲ್ಲಿ
ನೆಲ್ಲಿ ಗಿಡಕ್ಹಾಕಿ ಹರದಾಳೊ

೧೫೪

ನಾನು ವಡ್ಡರ ಹುಡುಗ ನೀನು ವಡ್ಡರ ಹುಡಗಿ
ಎಕ್ಕಡ ಪೋದ ಎಮರುಂಡ । ನನ ಗೆಣತಿ
ತಿಕ್ಕಡ ಪೋದ ತಿಮರುಂಡ

೧೫೫

ನಾಯೀಯ ಕೊಳ್ಳಾಗ ನಾಕೆಳಿ ಸರಪಳಿ
ನಾಳಿಗಿ ಕಾಮಣ್ಣನ ಹುಲಿಬ್ಯಾಟಿ । ಆಡಾಗ
ನಾನೂರ ನವಲ ಕುಣದಾವ

೧೫೬

ನೀ ಎಂದ ಹಾಡಿದ್ದೊ ನಿಮ್ಮಪ್ಪೆಂದ ಹಾಡಿದ್ದೊ
ಬೇಲ್ಯಾನ ಬೆಕ್ಕ ಅತ್ತಂಗೊ । ನೀ ಹಾಡಿದರ
ಹೆಂಡರ ಮಕ್ಕಳು ಸತ್ತಂಗೊ

೧೫೭

ನೀ ಎಂದ ಹಾಡಿದ್ದೊ ನಾ ಎಂದ ಕೇಳಿದ್ದೊ
ಕೌದಿ ಮಾರೆವನ ಕಲಕ್ಹಾರೊ । ಹೊತ್ತಿದ
ಹೋಳಿಗಿ ಮಾರೆವ್ನ ಹೊಯ್ಕೋರೊ

೧೫೮

ನೀರಾಗ ಹುಟ್ಟೂದು ನೀರಾಗ ಬೆಳೆವೂದು
ನೀರ ಕಂಡರ ಕರಗೂದು । ಹಾಡೀನ
ಭೇದ ಬಲ್ಲಂವ ಒಡದ್ಹೇಳೊ (ಉಪ್ಪು)

೧೪೯

ನೀರಿಗ್ಹೋಗು ಹುಡಗಿ ನಿಲ್ಲ ನಾ ಬರತೀನಿ
ನೀರಾಣಿ ನಿನ್ನ ಕೊಡದಾಣಿ । ಕೈಯ್ಯಾನ
ಬಳಿಯಾಣಿ ನೀರ ಹೊಳಿಯಾಣಿ

೧೫೦

ನುಚ್ಚ ಅಡತೀನಂತ ಹುಚ್ಚೆದ್ದ ಕುಣದಾಳೊ
ಕಿಷ್ಟೊಟ್ಟಿ ಕೆಳಗ ಕಿಡಿ ಸಿಡದೊ । ಮರ ದಿನ
ಚಿಕ್ಕ ಗುಡ್ಡದಟ್ಟು ಗುಳ್ಳೇದ್ದೊ

೧೫೧

ನೆರಿ ಊರ ಹುಡಗನ್ನ ಪುರಮಾನಿಸಿ ಕರಸ್ಯಾರೊ
ಹರೇದ ಹಾಡ ಹಾಡಾಕ । ಊರಿನ
ನೆರದ ಹೆಣ್ಣವನ ನೋಡಾಕ

೧೫೨

ಪತ್ತಾರ ಮನಿ ಮುಂದ ಅತ್ತತ್ತ ಹೇಳ್ಯಾಳೊ
ನತ್ತ ಮಾಡಿಸೋ ನನಗೊಂದ । ನನ ಗೆಣೆಯಾ
ಅತ್ತೀಮನಿಗ್ಹೋಗಿ ಬರತೀನೊ

೧೫೩

ಪರ್ವತ ಮಲ್ಲಯ್ಯನ ಪರಸಿ ಬರತಾವಂತ
ಬೆರಿಸಿಟ್ಟಾಳ ಬೆಲ್ಲ ನೆನೆಗಡಲಿ । ಆ ಬಾಲಿ
ತರಿಸಿಟ್ಟಾಳೆಲ್ಲ ಪನಿವಾರ

೧೫೪

ಪರ್ವತವೆಂಬೂದ ಅರವತ್ತ ಗಾವೂದ
ಬರಲಾರೆನಯ್ಯ ಗಿರಿದೂರ । ಮಲ್ಲಯ್ಯ
ಇಲ್ಲಿಂದ ಕೈಯ್ಯ ಮುಗದೀನೊ

೧೫೫

ಪರಿಯ ಉಚ್ಚಿದ ಹಾಂವ ಸರಸರ ಹರದಂಗ
ಎರಕೊಂಡ ಎದಿಯ ತೆರಕೊಂಡ । ಹುಡಗಿನ್ನ
ಕರಕೊಂಡ್ಹೋಲಮನಿ ಮಾರ್ಕೊಂಡೊ

೧೫೬

ಪಲ್ಲಕ್ಕಿ ಹೊತ್ತವರು ಮೆಲ್ಲಕ ನಡಿರೆಪ್ಪ
ಕಲ್ಲಾಗ ಕಾಲ ಅದರ್ಯಾವ । ಕಾಮಣ್ಣನ
ಪಲ್ಲಕ್ಕಿ ಮುತ್ತ ಉದರ್ಯಾವೊ



೧೫೭

ಪಿಲ್ಲೇನ ಇಟ್ಟಾಳ ಗಲ್ಲೀಸಿ ನಡದಾಳೊ
ಕಲ್ಲದರಿ ದಾವಣಿ ದನ ಬೆದರಿ । ಮನಿಯಾನ
ನಲ್ಲಯ್ಯ ಹೆದರಿ ಉಣಲಿಲ್ಲೊ

೧೫೮

ಬಟ್ಟಲದಂಥಾ ಕಣ್ಣ ಇಟ್ಟಾಳ ಹುಡಗನ ಮ್ಯಾಲ
ಗಟ್ಟಿ ಮಾಡ್ಯಾಳ ಹೊಲ–ಮನಿಯ । ಆ ಹುಡಗಿ
ಕೊಟ್ಟ ಕಳುವ್ಯಾಳೊ ಕರಿಗಡಬ

೧೫೯

ಬಡವನ ಹೆಂಡತಿ ನಡಿಗೀಲಿ ಬಲುಚೆಲುವಿ
ನಡವೂರಾಗೊಬ್ಬ ಮನಸಿಟ್ಟ । ಕೇಳ್ಯಾನ
ಕಡಾ ಕೊಡ ನಿನ್ನ ಕುಡಿ ಹುಬ್ಬ

೧೬೦

ಬಣಜಿಗರ ಹುಡಗೀಯ ಬಡಿವಾರೇನ ಹೇಳಲೆ
ಸಣ್ಣೆಳಿ ಚೈನ ಕೊಳ್ಳಾಗ । ಹಾಕ್ಕೊಂಡ
ಸಣ್ಣ ಹುಡುಗರನ ಎಳದಾಳೊ

೧೬೧

ಬಣ್ಣದ ಗುಬ್ಯಾರು ಎಣ್ಣಿ ಹೋಳಿಗಿಯಂಗ
ನುಣ್ಣಗಿರತಾರ ನೋಡುದಕ । ಕೂಡಿದರ
ಸುಣ್ಣ ಸುಟ್ಟಂಗ ಸುಡತಾರ

೧೬೨

ಬದಕೀನ ಆಸೇಕ ಮುದಗ ಕೊಡೋದಕಿನ್ನ
ಚಿದಕನ ಗವಿಯಾಗ ಬಿಡಬೇಕ । ಹಡದವ್ವ
ಮಿಡಕದ ಜೀವ ಕೊಡತೇನ

೧೬೩

ಬಬಲೇಶ್ವರದ ಸಂತಿ ಬ್ಯಾಡಪ್ಪ ನನ ಮಗನ
ಬಟ್ಟ ಕುಂಕುಮದ ಬಸವ್ಯಾರ । ಕಂಡರ
ಹುಟ್ಟೀದ ಮನಿಯ ಮರಸ್ಯಾರ

೧೬೪

ಬಲ್ಲಿದ ಶ್ಯಾಣ್ಯಾನಂತ ಬೆಲ್ಲಾ ಮಾಡಲು ಬಂದ
ಇಲ್ಲದ ಹರಲಿ ಕಬ್ಬಿಗೆ । ಕೊಟ್ಟರ
ಒಲ್ಲಿ ಕಳಿ ಕಳಿಸಿ ಒದಿತಾರೊ

೧೨೫

ಬಸವಣ್ಣ ನಿನಪಾದ ಹಸನಾಗಿ ತೊಳದೀನ
ಹೆಸರ ಗಲ್ಲೀಪ ಹೊಲಸೀನ । ಹಾಡಾಕ
ಹಸನಾದ ದನಿಯ ಕೊಡ ನನಗ

೧೨೬

ಬಸವಣ್ಣನ ಹೆಂಡತಿ ಹಸೆಮಗಳು ನೀಲವ್ವ
ಬಸರಾದರೆಂಗ ನಡದಾಳೊ । ಆ ತಾಯಿ
ಸಸಿಯೊಳಗ ನವಲ ಕುಣದಂಗ

೧೨೭

ಬಸವನ ಪತ್ತೂರಿ ಬಿಸಿಲಿಗಿ ಬಾಡ್ಯಾವ
ದುಸಮಾನದಾಂವ ಮಳಿರಾಜ । ತ–ಡದರ
ಬಸವಾ ನಿನ್ಹೆಂಗ ಸಲುವಲೇ

೧೨೮

ಬಾಗೋಡಿ ಬಸವಣ್ಣ ಭಾಳ ದೊಡ್ಡವನಂತ
ಮಾಡೀಸಿಟ್ಟೆನೋ ಮಗಡವ । ಬಸವಣ್ಣಗ
ಪೋಣಿಸಿಟ್ಟೆನೊ ಸರಜಂಗ

೧೨೯

ಬಾಗೋಡಿ ಎಂಬೂದು ಬಾಲ್ಯಾರ ಪಟ್ಟಣಾ
ಮ್ಯಾಲ ಚೆನ್ನವ್ವನ ಅರಮನಿ । ಬಾಗಲದಾಗ
ಬಾಗಿ ನಿಂತಾನ ಬಸವಣ್ಣ

೧೩೦

ಬಾದಾಮಿ ಬಣ್ಣದ ಕುಬಸ ಬಲುಚೆಂದ ತೋಲಿಗೆ
ಬಾಗಿದರ ಬೆನ್ನ ಬಿಗದಾವ್ರೊ । ನಮ್ಮೂರ
ಶ್ಯಾಣ್ಯಾ ಸಿಂಪಿಗ ಹೊಲದಾನೊ

೧೩೧

ಬಾಳೀಪಟ್ಟೆ ಸೀರಿ ಬಾಯಾಗ ಬಿಳಿ ಎಲಿಯ
ಬಾಜಾರ ಹಿಡದ ಬರತಾಳೊ । ಅವಳನ ಕಂಡ
ಬಾಯಾನ ಚುಟ್ಟ ಬಿಟ್ಟಾರೊ

೧೩೨

ಬಿದ್ದ ಕಬ್ಬಿನ ಬೆಲ್ಲ ಬಿದ್ದೋಡಿ ಗೆಣೆತನ
ಗದ್ದ್ಯಾಗಿನ ರಾಡಿ ಗಟ್ಟೆಲ್ಲೊ । ಹೆಣ್ಣನಗೂಡ
ನಿದ್ದಿಗಣ್ಣಾಗ ಇರಬ್ಯಾಡೊ



೧೩೩

ಬಿದ್ದಾನೊ ಕಾಮಣ್ಣ ಬಿಳಿ ಅಂಗ ಮೇಲಾಗಿ
ಒದ್ದ್ಯಾಡತಾನೊ ಶಿವನೆದರ । ಕಾಮಣ್ಣ
ಬಿದ್ದಲ್ಲೇ ಬೂದಿಯಾದಾನೊ

೧೩೪

ಬಿದ್ದೋಡಿ ಅವರವ್ವ ಬುದ್ದೀಯ ಹೇಳ್ಯಾಳೊ
ಗುದ್ದಿ ಬ್ಯಾಡನ್ನ ಗುಳದಾಳಿ । ಇಲ್ಲದೆ
ಕದ್ದ ಗಂಡಸರ ಕೂಡೂನ

೧೩೫

ಬೇಲಿ ಮ್ಯಾಲಿನ ಹೂವ ಬೆಳ್ಳಗಿದ್ದರ ಚಂದ
ಮಲ್ಲಿಗಿ ಹೂವಿನಂಥ ಮದಿವಿಂಡನ । ಬಿಟಗೊಟ್ಟ
ಹುಲ್ಲಕೊಯ್ಯವನ ಹುಡಕ್ಯಾಳೊ

೧೩೬

ಬಿಳಿಯ ಗಲ್ಲದ ಮ್ಯಾಲ ಇಳದೆಳಿಕೂದಲ
ತೆರದ ದಾಳಿಂಬರ ತುಟಿಯವಳ । ಕಂಡರ
ಹರದ್ಯಾಡು ಮನಾ ಹಾಂವಾತ

೧೩೭

ಬಳ್ಳಾನ ಹುಡಿಗ್ಯಾರು ಬಳ್ಳೊಳ್ಳಿ ತುಡಿಗ್ಯಾರು
ಬಳ್ಳೊಳ್ಳಿ ಗಂಟ ಬಗಲಾಗ । ಹಿಡಕೊಂಡ
ಗುಳ್ಳವ್ವನಾಣಿ ಕೊಡತಾರೊ

೧೩೮

ಬೆಳ್ಳಾನ ಮಾರೆಕ್ಕಿ ನೀಯೇನ ಒಳ್ಳೆಕ್ಕಿ
ಕಳ್ಳಿ ಸಾಲಾಗ ಕರಿಯಕ್ಕಿ । ಬಂದರ
ಮುಳ್ಳಾಗ ನುಗಿಸಿ ಬರುವಾಕಿ

೧೩೯

ಮಕ್ಕಳ ಬೇಡವರು ಪಟ್ಟಣಕ ಹೋಗರೆವ್ವ
ಪಟ್ಟಣದ ತೆಳಗ ಅರಕೇರಿ । ಅಮೋಗಸಿದ್ದ
ತೊಟ್ಟೀಲ ಹೊರಿಸಿ ಕಳುವ್ಯಾನ

೧೪೦

ಮಕ್ಕಳು ನಕ್ಕರ ಮಲ್ಲೀಗರಳೀದಂಗ
ಬಕ್ಕಡಬಾಯಿ ಮುತ್ತಜ್ಜ । ನಕ್ಕರ
ರೊಕ್ಕಿಲ್ಲದ ಬೊಕ್ಕಸೊಡದಂಗ

೧೯೧

ಮಗ್ಗಿ–ಕುಬಸಾ ತೊಟ್ಟ ಮಗಿದುರುಬ ಕಟ್ಟ್ಯಾಳೊ
ಮಗ್ಗಿ ಮಲ್ಲೀಗಿ ಮುಡದಾಳೊ । ಆ ಚೆಲವಿ
ಹಿಗ್ಗಿನ ನಗಿಯ ನಗತಾಳೊ

೧೯೨

ಮಟ ಮಟಾ ಮಧ್ಯಾಣ ತಿಟಿ–ತಿಟಿ ಕುಪ್ಪಸ
ಸೇದೂವಹಗ್ಗ ಬಲಗೈಯಾಗ ಹಿಡಕೊಂಡ
ಸೇದೂತ ಶಿವನ ನೆನೆದಾಳೊ

೧೯೩

ಮಠವೆಲ್ಲೊ ಮಠವೆಲ್ಲೊ ಮಠದ ಬಾಗಿಲನೆಲ್ಲೊ
ಕಟದ ರುದ್ರಾಕ್ಷಿ ಕದನೆಲ್ಲೊ । ಶಾಂತ್ವೀರಸ್ವಾಮಿ
ಮಠವೈತೊ ಬಾಳಿಬನದಾಗ

೧೯೪

ಮಠದ ಬಾಗಿಲ ಮುಂದ ಕಟದ ಕಲ್ಲಿನ ಭಾಂವಿ
ಮೆಟ್ಟಲೇರಿ ನೀರ ತರುವಂಥ ಹುಡಿಗಿಯ ಕಂಡ
ಮಟ–ಮಟಾ ಮಧ್ಯಾಣ ಕಳದೀನೊ

೧೯೫

ಮಡಸ ಹೆಣ್ಣಿನ ಮನಸೇನ ದೊಡ್ಡದ
ಕುದಿಸೀದ ಗೆಣಸ ಮಡಿಬೆಲ್ಲ । ತಂದಾಳೊ
ಮನಸಿಗಿ ಬಂದಂಗ ತಿನಿಸ್ಯಾಳೊ

೧೯೬

ಮಣಕೆಮ್ಮಿಯಂಥಾಕಿ ಹಣಿ–ಹಣಿಕಿ ನೋಡ್ಯಾಳೊ
ಕೆಣಕಿದರ ಸಾಕು ಕರದಾಳೊ । ಆ ಹೆಣ್ಣೀಗಿ
ಹಣದಾಸೆಗೇನು ಮಿತಿಯಿಲ್ಲೊ

೧೯೭

ಮದ್ಯಾಣ ಮಳಿ ಬಂದ ಬಿದ್ದಾವ ನೀಲದಹಣ್ಣ
ಗೆದ್ದೀನನ ಬ್ಯಾಡ ಪತಿವರತಾ । ಸೀತಾದೇವಿ
ಬಿದ್ದಾಳ ರಾವಣನ ರಥದಾಗ

೧೯೮

ಮಂಗ ಮುಸಲರ ಹುಡಗಿ ಚ್ಯಾಂಗೇವ ಮಾಡ್ಯಾಳ
ಲಿಂಗವಂತರ ಹುಡಗ ಉಣಲಿಲ್ಲೊ । ಆ ಹುಡಗಿ
ಅಂಗಳಕ ಚೆಲ್ಲಿ ಅಳತಾಳೊ



೧೯೯

ಮಂಡಮೂಗಿನ ಹೆಣ್ಣ ಗಂಡ ಕರಿಯಲು ಬಂದ
ಮಂಡೀಯ ಬೀಜ ಉಡಿಯಕ್ಕಿ । ಹಾಕ್ಕೊಂಡು
ಮಿಂಡನ ಕಡಿ ನೋಡಿ ಅಳತಾಳೊ

೨೦೦

ಮಲ್ಲೀಗಿ ಮಗಿದುರುಬ ಮಕ ಮಲ್ಲ ಮಲಿಕಟ್ಟು
ಹಲ್ಲ ನಕ್ಕರ ದಾಳಿಂಬ । ಇಂಥಾಕ್ಕಿ
ಎಲ್ಲಿ ಸಿಕ್ಕಾಳೊ ಎಲ್ಲಾರಿಗಿ

೨೦೧

ಮಲ್ಲಾಡದ ಹುಡಗಿಯ ಮಲಿ ಕಿನ್ನೂರಿ ಕಾಯಂಗ
ಹೆಡಕೀನ ಮ್ಯಾಲ ಗಡದುರಗಿ । ಇಟಗೊಂಡ
ಖಿಡಕೀಲಿ ನೀರ ತರತಾಳೊ

೨೦೨

ಮಸರ ಮಾರುವ ಹುಡಗಿ ಹೆಸರ ಕೇಳಿದರಾತ
ಬಸರಾದರ್ಥೆಂಗಂತ ಅಳತಾಳೊ । ಅವರವ್ವ
ಹೆಸರ ಬಳಿ ಇಡಿಸಿ ನಗತಾಳೊ

೨೦೩

ಮಳ್ಳ ಮೈನರದ ಹುಡಗಿ ಹಳ್ಳದ ನೀರಿಗಿ ಹೋಗಿ
ಬಳ್ಳ ತಿರುವೂತ ನಿಂತಾಳೊ । ಆ ಹುಡಗಿ
ನೀರ ತುಂಬೂದ ಮರತಾಳೊ

೨೦೪

ಮಳಿಬಂದ ಮರುದಿನ ಹೊಳಿತುಂಬಿ ಹರದಂಗ
ತಿಳಿಬಂದ ಮ್ಯಾಲ ತವರೂರ । ಬಿಡುವಾಗ
ಹೊಳಿಯಾಗಿ ಹರದಾವ ಕಣ್ಣೀರ

೨೦೫

ಮಾಗಿಯ ಮಳಿಗಾಲ ಹೆಂಗಿದ್ಯೊ ಕೋಗೀಲ
ಆಗರ ಭಾಳ ಅಡಕೀಯ । ಬನದಾಗ
ಕೂಗ್ಯಾಡಿ ಹೊತ್ತಗಳದೀನೊ

೨೦೬

ಮಾದರ ಮನಿಮುಂದ ಮಾವೀನ ಗಿಡಹುಟ್ಟಿ
ಮಾದರ ಪೋರಿ ಗೆಣೆತನಾ । ಕಟ್ಟಿದರ
ಗೊಂಡೆದ ಕೆರುವ ಮಾಡಿಸ್ಯಾಳೊ

೨೦೭
ಮಾನೇಪುರದ ಹುಡಗಿ ಮನಿಹೊರಗ ಬಂದಾಗ
ಜಮಖಂಡಿ ಹುಡಗ ಜಡಹಿಡ। ಎಳಿವಾಗ
ಕಡಪಟ್ಟಿ ಪರಸ [ಖ್ಯಾತ ಕುಸ್ತಿಪಟು] ಬಿಡಿಸ್ಯಾನೊ

೨೦೮
ಮಾರೋಳಿ ಹುಲ್ಲಂಗ ಮಾರುದ್ದ ಕೂದಲ
ಜಡಿಯ ಹೆಣದಾಳೊ ಹೆಡಿಹಾಂವೊ। ನೋಡಂವಗ
ಕಡಿಲಾರದ ನಂಜ ಏರೈತೊ

೨೦೯
ಮ್ಯಾಳಿಗಿ ಮ್ಯಾಲಿನ ರವದಿ ಗಾಳಿಗ್ಹಾರಿದಂಗ
ಗಾಲ–ಮೇಲಾತ ಕಿತ್ತೂರ। ಚೆನ್ನಮ್ಮ
ಗಾಳಿಗಿ ಬಾಯಿ ಬಿಡತಾಳೊ

೨೧೦
ಮಿಂಡನ ಸವಿಹತ್ತಿ ಗಂಡನ ಬೈಬ್ಯಾಡ
ಗುಂಡದನೀರ ನಿಜವಲ್ಲ। ತಿರಮಿಂಡಿ
ಕುಂಡಿ ಒಣಗಿತ್ತ ಬಿಸಲಾಗ

೨೧೧
ಮೂರ ಹೋಳಿಗಿ ಮಾಡಿ ನೂರ ಮಂದಿಗಿ ಉಣಸಿ
ಮೂರೂ ಹೋಳೀಗಿ ಉಳದಾವೊ। ಶ್ಯಾಣ್ಯಾ
ಮಾಸ್ತರ ಒಡದ್ಹೇಳೋ

೨೧೨
ಯಮನೂರ ಜಾತ್ರಿಗ್ಗಿ ಕರದರು ಬರವೊಲ್ಲ
ಸರಿ ಇಲ್ಲದವನ ಗೆಣಿತನ। ಮಾಡಿದರ
ಬರಿಗಾಲು ಹಾದಿ ತುಳದಂಗ

೨೧೩
ಯಾಕೊ ಹುಡಗಿಯ ಜೀವ ಏಸ ಹೂ ಬೇಡೈತಿ
ಮಾಚಕನೂರ ಮರನೂರ। ತ್ವಾಟದ
ದಾಸ್ಯಾಳದ ಹೂವ ದವನವ

೨೧೪
ಯಾತಕ ಹುಟ್ಟೈತಿ ಘಾತಕ ಬಬಲೇಸೂರ
ರಾತೂರಿ ಗಸ್ತಿ ಬರಲಿಲ್ಲ। ಗುಜ್ಜನ್ನ
ಘಾತ ಮಾಡ್ಯಾರೊ ಗಳಿಗ್ಯಾಗ



೨೧೫
ಯಾವತ್ತು ನಾತಕ ಯಾಲಕ್ಕಿ ನಾತಾನ
ನಾಗರ ಹಾಂವೀನ ಕುಲದಾಂವ। ಕೂಸಪ್ಪಯ್ಯ
ಮಾಯವಾಗ್ಯಾನೊ ಮಠದಾಗ

೨೧೬
ಯಾವತ್ತು ಉಡುವೂಳು ಎಳ್ಳಹೂವಿನ ಸೀರಿ
ಏನಿಲ್ಲದ ಬಡವಿ ಎಲ್ಲವ್ವ। ಉಡುವೂದ
ವರಸದಾಗೊಮ್ಮಿ ಜರತಾರಿ

೨೧೭
ರಂಡ್ಯಾರ ಗೆಣೆತಾನ ದಂಡಿಗಿ ಹತ್ತದಮಾತ
ಕಂಡ ಹಳಸಿದರ ಉಣಬ್ಯಾಡ। ಎಲೆ ಹುಡುಗ
ದಂಡ ಒಣಗೀತೊ ಹುಳ ಹತ್ತಿ

೨೧೮
ರಂಡೀಯ ಗೆಣಿತಾನ ತಿಂಡಿತೀರೂತನಕ
ಮಿಂಡ ಮತ್ತೊಬ್ಬ ಸಿಗುತನಕ। ಅಂಥಾ
ಮಂಡ ಚಪ್ಪಲಿ ನಾಯಿಗೊ

೨೧೯
ರಂಡೀಯ ಮನಿಯಾಗ ಹೆಂಡದ ಮಜಾ ಏನೊ
ಕಂಡದ ಗಡಿಗಿ ಒಲಿಮ್ಯಾಲ। ಇದ್ದರ
ಮಿಂಡರ ಕೂಡ್ಯಾರೊ ಹದಿನೆಂಟೊ

೨೨೦
ರವದಿಯಂಥಾ ಹೆಣ್ಣ ನಿನಮ್ಯಾಗ ನನ ಕಣ್ಣ
ನಿಮ್ಮಪ್ಪ ನನಗ ಕೊಡಲಿಲ್ಲ। ನಾ ಈಗ
ಸುಂಟರಗಾಳ್ಯಾಗಿ ಬರತೀನ

೨೨೧
ವಡ್ಡರ ಮನಿಮುಂದ ವಟವಟಿ ಗಿಡಹುಟ್ಟಿ
ವಡ್ಡರ ಪೋರಿ ಗೆಣೆತನ। ಮಾಡಿದರ
ಗೊಡ್ಡೆಮ್ಮಿ ತುಪ್ಪ ಉಣಿಸ್ಯಾಳೊ

೨೨೨
ವರಗೇಡಿ ಗಂಡಂತ ಮಾರಿ ತಿರುವ ಬ್ಯಾಡ
ಪರ್ಯಾಣ ನಿನ್ನ ಪಾಲೀಗಿ। ಬಂದರ
ಕಾಲಿಟ್ಟ ಅದನ ಒಡಿಬ್ಯಾಡ

೨೨೩

ವಾಳೀದ ಹೆಣ್ಣಿನಗೂಡ ಬಾಳೇ ಮಾಡೂದ ಕಷ್ಟ
ಗಾಳೀಗಿ ಬಾಯಿ ತಗದಂಗ। ಮನಿಯ
ಮಾಳೀಗಿ ಜಂತಿ ಜರದಂಗ

೨೨೪

ಶಿವನಿಗಿ ಗುಡಿಕಟ್ಟಿ ಸ್ವಾಮಿಗಿ ಮಠಕಟ್ಟಿ
ಹಸದ ಬಸವರಿಗಿ ಉಣಕೊಟ್ಟ। ನಮ್ಮವ್ವ
ಕುಸಮೋಜಿನ ಮಗನ ಹಡದಾಳೊ

೨೨೫

ಷಂಡ ಸಾವಕಾರ ಹುಡಗ ಹೆಂಡ್ತೀನ ಬಿಟ್ಟಾನ
ರಂಡೀಯ ಬೇಡಿ ಅಳತಾನೊ। ಆಕೀಗಿ
ಖಂಡಗ ಹೊನ್ನ ಕೊಡತಾನ

೨೨೬

ಸಣ್ಣನ್ನ ಶ್ಯಾಂವೀಗಿ ಉಣ್ಣಾಕ ಬಸದಾಳ
ಬೆಣ್ಣಿಯ ಮುದ್ದಿ ಕಾಸ್ಯಾಳೊ। ಗೆಣಿಯಾಗ
ಬೆಣ್ಣಿ ಮಾತ್ಹೇಳಿ ಬೆಸದಾಳೊ

೨೨೭

ಸತ್ತರ ಸುದ್ದಿಯ ಕಳುವೊ ನೆತ್ತರ ಅರಬೀ ಕಳುವೊ
ಕತ್ತೀಯ ಕಳುವೊ ನಿನಗುರತ। ನನಗೆಣಿಯಾ
ಮುತ್ತೊಂದ ಕಳುವೊ ಮೂಗುತಿಗೆ

೨೨೮

ಸಂಗಾಪೂರ ಹುಡುಗೂರು ಮಂಗ್ಯಾನ ಮಾರೆವರು
ಗಂಗಾಳ ಚರಗಿ ಬಗಲಾಗ। ಹಿಡಕೊಂಡ
ಸಂಗಯ್ಯನಾಣಿ ಕೊಡತಾರೊ

೨೨೯

ಸಂತಿ ಸವದೀ ಹಣ್ಣ ಸುಲದ ಬಾಳೀಹಣ್ಣ
ಮಾನೇಪುರ ಹಣ್ಣ ಮೈಬಣ್ಣ। ಬಂಗಾರ
ಜಮಖಂಡಿ ಹಣ್ಣ ಕಳಿಬಾಳ

೨೩೦

ಸಂದೀಯ ಮನಿಯವಳ ಮುಂದ ಚಪ್ಪರದವಳ
ಬಂದಿದ್ದಳೇನ ಜಾತ್ರೀಗಿ। ನನಗಾಗಿ
ತಂದಿದ್ದಳೇನ ಕರಿಗಡುಬ



೨೩೧

ಸರಗಿ ಸಾಲಕ ಹೋತು ಬಳಿ ಬಾಳೇಕ ಹೋತು
ಒಡ್ಯಾಣ ಹೋತು ಒಡ್ಯಾಗ। ಆ ಹುಡುಗಿ
ದಡ್ಯಾಗ ಕುಂತ–ಅಳತಾಳೊ

೨೩೨

ಸರಗಿ ಮಾಡಿಸಿ ಕೊಡೊ ಸರದಾರ ನನಗೆಣಿಯಾ
ಸರಿ–ಗೆಳತ್ಯಾರೊಳಗ ಇರತಿನೊ। ನನ ಗೆಣಿಯಾ
ಕರದಾಗ ನಾನು ಬರತೀನೊ

೨೩೩

ಸವತೀ ಮುಳ್ಳ ತುಳದ ಸಾವತಿನ ನನ ಗೆಣೆಯ
ಹೇಳಿ ಕಳುವೆನ್ನ ತವರೀಗೆ। ತಾಯವ್ವನ
ಮಾರೀ ನೋಡಿ ಜೀಂವ ಬಿಡತಿನೊ

೨೩೪

ಸಾಕ ಸಾಕಂದರ ಯಾಕ ನೀರಿಗಿ ಹ್ವಾದಿ
ನಾಕ ತೊಂಡಲದ ಮಳಿ ಬಡದ। ಮಾವಿನ
ಕಗ್ಗಾಯಿ ಉದರಿ ಕೊಡವ್ರೊಡದ

೨೩೫

ಸಾಸವಿಬಣ್ಣದ ಸೀರಿ ರೇಸೀಮಿ ಕುಪ್ಪಸ
ಯಾಸಿ ಬೇತಾಲಿ ತಗದಾಳೊ। ಆ ಹುಡಗಿ
ಕಾಸಿ ಕಟ್ಟಿದವನ ಹುಡಕ್ಯಾಳೊ

೨೩೬

ಸಾಲವ ಮಾಡ್ಯಾನ ಸೂಳೀಯ ಇಟ್ಟಾನ
ಸಾಲಿಗರು ಬಂದು ಎಳಿವಾಗ। ಆ ಸೂಳಿ
ಮ್ಯಾಳೀಗಿ ಏರಿ ನಗತಾಳೊ

೨೩೭

ಸಾಹೇಬ ಇಳದಲ್ಲಿ ಸಾಧೀಸಿ ಮಳಿಯಾಗಿ
ಸಾಹೇಬ ತೋದ ಗುಡಿ ತೋದ। ಒಳಗೀನ
ಗಲ್ಲೀಪ ತೋದ ಗರಿತೋದ

೨೩೮

ಸಿಟ್ಟಮಾರಿಯ ಶಿವನ ದಿಟ್ಟಿಸಿ ನೋಡ್ಯಾನ ಕಾಮ
ಬಿಟ್ಟಾವ ಬೆಂವರ ಎದಿಮ್ಯಾಗ। ಪಾರ್ವತಿಯ
ದಟ್ಟಿ ಸೆರಗ್ಗಿಡದ ನಡದಾನೊ

೧೯
ಸಿಟ್ಟಿನ ಶಾಂತ್ವೀರ ಸ್ವಾಮಿ ಬಿಟ್ಟಾರೊ ಹಿರಿಮಠ
ಮೆಟ್ಟಿ ಮಾಡ್ಯಾರೊ ಹರಳಯ್ಯಾನ । ಗುಂಡಕ
ನಿಟ್ಟುಳ್ಳ ಭಕ್ತರು ಬರತಾರೊ

೨೦
ಸೀತಾನ ಒಯ್ಯಾಗ ಶ್ರೀರಾಮ ಸಣ್ಣಾಂವ
ಆಗ ಹಣಮಂತು ಹಸುಮಗ । ಇದ್ದರ
ಸೀತಾನ ಸೆರಿಯ ಬಿಡಿಶ್ಯಾನೊ

೨೧
ಸಿಂದೀಯ ಗೊಬ್ಬೆವ್ವ ಎಟ್ಟುದ್ದ ಬೆಳದೆವ್ವ
ಒಂಟಿಮ್ಯಾಲೇರಿ ಮೆರೆದೆವ್ವ । ಮಾತಾಯಿ
ಒಳ್ಳೊಳ್ಳೆವರ ಮಾನ ಕಳೆದೆವ್ವ

೨೨
ಸುಣ್ಣುಂಡ ಬಿಳಿಹಲ್ಲ ಕಾಚುಂಡ ಕರಿಹಲ್ಲ
ಎಣ್ಣಿ–ತುಪ್ಪುಂಡ ಮಗಿದುರಬ । ಕಟಗೊಂಡ
ಹೊನ್ನ ಕೊಟ್ಟಂವಗ ಹ್ವಾದಾಳೊ

೨೩
ಸೂಳೀಗಿ ಹೋಗವನ ಸುಲದ ಮಟ್ಟಿಯ ಕಟ್ಟಿ
ಸೂಲಕ ಹಾಕಿ ಎಳದರೂ । ಆ ಮೂಳ
ಸೂಳೆಂಬು ಶಬುದ ಬಿಡಲಿಲ್ಲೊ

೨೪
ಸೂಳಿ ಬ್ಯಾಟಿನಾಯಿ ಗಂಡ ಜೂಗನಾಯಿ
ಸೂಳೀಯ ಅವ್ವ ಹಳಿನಾಯಿ । ನಿಮ್ಮಪ್ಪ
ಬಾಳೇವಂತರ ಬಡನಾಯಿ

೨೫
ಸೂಳೀಗಿ ಹ್ವಾದಾವ ಏನಾದ ಎಂತಾದ
ಕಾಳ ನಾಯಾದ ಕಪಿಯಾದ । ಆ ಮೂಳಾ
ಸೂಳೀ ಕಾಲೀಗಿ ಕೆರುವಾದೊ

೨೬
ಸೊಕ್ಕೀನ ಶ್ರೀಕೃಷ್ಣ ನಿನಗ್ಯಾಕಿಟ್ಟ ಹೆಂಡಿರೊ
ನನಗೊಂದ ಕೊಡು ಅಂದ ನಾರದ । ಶ್ರೀ ಕೃಷ್ಣ
ನಾನಿಲ್ಲದಾಗ ಒಯ್ಯಂದ



೨೭
ಹಚ್ಚಾನ ಮೈಯವನ ಹವಳದ ತುಟಿಯನ
ಎಲ್ಲಿಗಿ ಹೋಗದ್ದೊಗಿಣಿರಾಮ । ಮಲ್ಲಾಡದ
ಹಣ್ಣೀಗಿ ಹೋಗಿದ್ದ ಹಡದವ್ವ

೨೮
ಹಚ್ಚಿಬಟ್ಟಿನ ಕೈಯ್ಯ ಒತ್ತಿ ಹಿಡಿಯಲಿ ಬ್ಯಾಡೊ
ನೆತ್ತಿಳಿರಿಳದಾವೊ ಬೆರಳೀಗಿ । ನನ ಗೆಣೆಯ
ಅತ್ತೆವ್ವ ನೋಡ್ಯಾಳೊ ಕೈಬಿಡೊ

೨೯
ಹಚ್ಚಿಬಟ್ಟಿನ ಮ್ಯಾಲ ಹರದಾಡು ಕುಂಕುಮ
ಇಚ್ಚುಳ್ಳ ಗೆಣಿಯ ಇದರೀಗಿ । ಬಂದರ
ಮೆಚ್ಚಿದ್ದ ಗಂಡನ್ನ ಮರತಾಳೊ

೩೦
ಹಟಗಾರ ಹುಡಗೀ ಅವ್ವ ಕಟ–ಕಟದ ಹೇಳ್ಯಾಳ
ಚಟಗಾರನ ಬೆನ್ನ ಬಿಡಲಾಕ । ಆ ಹುಡಗಿ
ಸೆಟ–ಸೆಟದ ಹಂಗ ತಿರಗ್ಯಾಳೊ

೩೧
ಹಟೇಲದಾಗಿನ ಹೆಣ್ಣ ಹಾದೀ ಗಿಡದಾನ ಹಣ್ಣ
ಹಾದ ಹ್ವಾದವರೆಲ್ಲ ಕಣ್ಹತ್ತಿ । ಹಳಸ್ಯಾವೊ
ತಿಂದರ ತಿಂಗಳದ ಆರ್ಕೈಕೊ

೩೨
ಹಡಸೂ ಹೆಣ್ಣಿನ ಧರ್ಮ ಕೆಡಸೂಳ ಸಂಸಾರ
ಬಿಡಸೂಳ ಮನಿಯ ಮಡದೀನ । ಆ ಹೆಣ್ಣ
ಹೊಡಸೂಳ ರುಂಡ ಹೊತ್ತಿರತ

೩೩
ಹಂಡಬಂಡದ ಕೌದಿ ಹಾಸಂದರ ಹಾಸ್ಯಾಳ
ದುಂಡ ಮಲೀಗಿ ಮುಡದಾಳ । ಎದಿಮ್ಯಾಲ
ಚೆಂಡ ಆಡಿದಂಗ ಆಡ್ಯಾಳೊ

೩೪
ಹೆಂಡ ಹೋರೀ ಮ್ಯಾಲ ಮಂಡ ಮೂಗಿನ ಹುಡಗಿ
ಉಂಡಿ ಕೊಡತೀನ ಉಡಿ ಒಡ್ಡ । ಎಲೆ ಹುಡಗಿ
ಬೆಂಡ ಕೊಂಡತೀನಿ ಬೆನ್ಹತ್ತ

೩೫
ಹೆಂಡಾಕಾಳ ಕಾಯೊತ ಮಂಡಮೊಗಿನ ಹುಡಗಿ
ಕಂಡ ಕಂಡಲ್ಲಿ ತಿರಗ್ಯಾಳೊ । ಅವಳನ್ನ
ಹಿಂಡಿ ಬಿಟ್ಟಾನೊ ಹಂಡ್ಹುಡಗ

೩೬
ಹಣಮಂತ ಹಾರ್‍ಯಾನ ಹನ್ನೆರಡು ಗಾವೂದ
ಸಣ್ಣ ಸೂರ್‍ಯಾನ ಕಿರಣಕ್ಕ । ಹಾರಿದರ
ಕಣ್ಣ ಕಳಕೊಂಡ ತಿರಗ್ಯಾನೊ

೩೭
ಹತ್ತ ಹಾಡನು ಹಾಡಿ ಹಲ್ಲನು ಮುರಕೊಂಡ್ಯೊ
ಹತ್ತೀಯ ಹಿಡಿಯೊ ಬಾಯಾಗ । ನಸ್ಹಾಡ
ಕತ್ತೀ ಮ್ಯಾಲ್ಹೇರಿ ಬರತಾವೊ

೩೮
ಹತ್ತಿ ಹಾಸಿಗೆ ಮಾರಿ ಬಿಸೂಕಲ್ಲನು ಮಾರಿ
ಕೂಸಿನ ಕೈಯಾನ ಕಡೆ ಮಾರಿ । ಗೆಣಿಯಾಗ
ಜೋಡಬಾವಲಿ ಇಡಿಸ್ಯಾಳೊ

೩೯
ಹತ್ತೀಯ ಹೊಲದಾಗ ಅತ್ತತ್ತ ಹೇಳ್ಯಾಳೊ
ಒತ್ತೀ ಬಿದ್ದಾವ ಒಡಿವೆಲ್ಲ । ನನಗೆಣೆಯ
ಹತ್ತೀಯ ಮಾರಿ ಹಣ ಕೊಡೊ

೪೦
ಹತ್ತೀಯ ಕಾಯಂಗ ಒತ್ತಿ ರುಂಬಾಲ ಸುತ್ತಿ
ಹತ್ತ ಮಂದ್ಯಾಗ ಬರತಾನ । ಕಾಮಣ್ಣನ
ಕತ್ತೀಯ ಗುರತ ಹಿಡದೀನ

೪೧
ಹತ್ತೀರ ಕುತ್ತರ ಅತ್ತರ ನಾರಕ್ಕಿ
ಚಿತ್ತರದ ಗೊಂಬಿಯಂಥಾಕಿ । ಹುಡಗೀಯ
ಚಿತ್ತೆಲ್ಲಿ ಅವಳ ಬಗಿ ಎಲ್ಲೊ

೪೨
ಹತ್ತೂರ ಹಲಕಡ್ಡಿ ಒಬ್ಬನ ತಲೆ ಭಾರ
ಸತ್ತವರೇನ್ಹೊತ್ತ ಒಯ್ತಾರೊ । ಕೆಲಸಿಲ್ದ
ಕುತ್ತವರೇನ ಖಂಡಾ ಬೆಳಿಸ್ಯಾರೊ



೪೩
ಹರಕ ಹಾಡಲಿ ಬ್ಯಾಡೊ ತಿರಕ ರಂಡೀಮಗನ
ನೆರಕ್ಯಾಗ ಓದ ತುರಕೀನೊ । ಎಲೆ ಹುಡಗ
ಹರಕ ಮುಚ್ಚೀಲೆ ಹೊಡದೀನೊ

೪೪
ಹಲಗಣಿ ಹಣಮಪ್ಪ ಮಕ್ಕಳ ಕೊಡಪ್ಪ
ನನಗಲ್ಲ ನನ್ನ ಸೂಳೀಗಿ । ಕೊಟ್ಟರ
ಬಲಕ ಬಂಗಾರ ಜಡಿಸೀನೊ

೪೫
ಹಲ್ಲೀಗಿ ಜಾಚೇಲಿ ಗಲ್ಲಕ ಅರಿಸಿಣ ಹಚ್ಚಿ
ಎಲ್ಲಿಗಿ ನಡದಾಳೊ ಹೊಯ್ಕಲ್ಲಿ । ಅಕಿ ಗಂಡ
ಕಲ್ಲೀಗಿ ಕುತ್ತ ಅಳ ತಾನೊ

೪೬
ಹಲ್ಲೀಗಿ ಜಾಚೇಲಿ ಗಲ್ಲಕ ಹಂಚೀ ಬಟ್ಟ
ಬಲ್ಲಂಗ ನಗತ ಬರತಾಳೊ । ಆ ಹುಡಗಿ
ಒಲ್ಲೆಂತ ಇಲ್ಲೆ ಇರತಾಳೊ

೪೭
ಹಸರ ಕುಬಸದ ಮ್ಯಾಲ ಎಸಳ ಕೂದಲ ಬಿಟ್ಟ
ಕುಸ ಮೋಜಿನ ನಗಿಯ ನಗತಾಳೊ । ನಿನ್ನಂಥಾ
ಕಸಬರಿಗ್ಹೆಂಗ ಒಲತಾಳೊ

೪೮
ಹಸರ ಕುಬಸದ ಮ್ಯಾಲ ಎಳಸ ಕೂದಲ ಬಿಟ್ಟ
ಬಿಡಲಿಗ್ಯಾತಕ ಕುಂತಾಳೊ । ಹುಡಗೀಗ
ಕುಸಮೋಜಿನ ಬಯಕಿ ಕಾಡ್ಯಾವೊ

೪೯
ಹಸರಂಗಿ ತೊಟ್ಟಾನ ಬಿಸಲಾಗ ನಿಂತಾನ
ಶಶಿ ಮುಖದವನೊ ನಮಕಾಮ । ನೆರಳೂತ
ಚಂದ್ರಸಾಲ್ಯಾಗ ಸತ್ತನೊ

೫೦
ಹಳದೀಯ ದಡಿ ಸೀರಿ ಬಳದಿನಮ್ಯಾಲ ಉಟ್ಟಾಳೊ
ಹಳಿ ಭಾಂವಿ ನೀರ ತರತಾಳೊ । ಹಾದ್ಯಾಗ
ಹಳಿಗೆಣಿಯಾಗ ಹಣಿಕಿ ಹಾಕ್ಯಾಳೊ

೨೮೧

ಹಳ್ಳದ ಹೊಲಮಾಡಿ ಹವಳ ಮುತ್ತನು ಬಿತ್ತಿ
ಕವಣಿಗಿ ಕಟ್ಟ್ಯಾಳೊ ಹುಲಿಗೆಜ್ಜಿ । ಹೋ ಅಂತ
ಗಿಡ್ಡಿ ಹಾರಸ್ಯಾಳೊ ಗಿಣಿ ಹಿಂಡ

೨೮೨

ಹಳ್ಳ ಹರಿಯೂದ ಕಂಡೆ ಗುಳ್ಳಿ ತೇಲೂದ ಕಂಡೆ
ಗುಳ್ಳವನ ಕಂಡೆ ಗುಡಿಶ್ಯಾಗ । ನಮ ಕಾಮ
ಉಳ್ಳ್ಯಾಡುದ ಕಂಡೆ ಬೂದ್ಯಾಗ

೨೮೩

ಹಾಡ ಬರತಾವಂತ ಏರೇರಿ ಬರಬ್ಯಾಡೊ
ಹಾಡೀನ ದಿಮ್ಮ ಇಳಿಸೀನೊ । ಎಲೆ ಹುಡಗ
ಅಗಸ್ಯಾಗ ನಿನ್ನ ಹುಗಿಸೀನೊ

೨೮೪

ಹಾಡ ಬರತಾವಂತ ಹಾರ್‍ಯಾಡಿ ಬರಬ್ಯಾಡೊ
ಹಗ್ಗದ ಬಲಿಯ ಒಗದೀನೊ । ಎಲೆ ಹುಡಗ
ಮಗ್ಗಲ ಎಲುವ ಮುರದೀನೊ

೨೮೫

ಹಾಡಿದ್ದರ ಹಾಡ್ಬೇಕ ಚೆಲಿವಿದ್ದರ ನೋಡ್ಬೇಕ
ತುರಬ ಇದ್ದರ ಸೆರಗ ತಗಿಬೇಕ । ಹೆಣ್ಣಿನ್ನ
ಗರತಿ ಇದ್ದರ ಮರತ ಬಿಡಬೇಕೊ

೨೮೬

ಹಾಡ ಹಾಡಂದರ ನಾಯೇನ ಹಾಡಲೊ
ಹಾಡೀನ ತಕ್ಕ ಹಲಗಿಲ್ಲೊ । ಎದರೀಗಿ
ಹುಡಗನ ತಕ್ಕ ಹುಡಿಗಿಲ್ಲೊ

೨೮೭

ಹಾಡ ಹಾಡಂದರ ನಾಯೋನ ಹಾಡಲೊ
ಹಾಡ ನನ್ನಲ್ಲಿ ಹಗೆ ಹಾಕಿ । ವಿಜಾಪೂರ
ಹಳಿ ಮಾಪ ತಂದ ಅಳದೊಯ್ಯೊ

೨೮೮

ಹಾಡೀಗಿ ಹಾಡಿಲ್ಲ ಏಡೀಗಿ ತೆಲಿ ಇಲ್ಲೊ
ಮಾಡ ಬಂದಲ್ಲಿ ಬಿಸಲಿಲ್ಲೊ । ಹೆಣ್ಣೀಗಿ
ಓಡಿ ಹ್ವಾದಲ್ಲಿ ಸುಖವಿಲ್ಲೊ



೨೮೯

ಹಾದರಗಿತ್ತಿ ಗುಣ ಹಾಲಿನಂಗನಬ್ಯಾಡೊ
ಹಂಬಲಿಬ್ಯಾಡೊ ಹಗಲಿರುಳ । ಈ ಮಾತ
ತುಂಬಿದ ಹೊಳಿಯಾಗ ಹರಗೋಲೊ

೨೯೦

ಹಾದರಗಿತ್ತೀಗಿ ಹಾಂವ ಕಡದರೇನೊ
ಊರ ತುಂಬೆಲ್ಲ ಗೆಣಿಯಾರೊ । ಅವಳೀಗಿ
ಕರಿಕೆ ಬೇರೆಲ್ಲ ಅಗಸುದ್ದಿ

೨೯೧

ಹಾದೀಯ ಹೊಲ ನೋಡ ಗೋದಿಯ ತೆನಿ ನೋಡ
ಹೋರೀ ಮೇಸೀನಿ ಇಣಿನೋಡ । ಎಲೆ ಹುಡಗಿ
ಕ್ವಾರಿ ಮೀಸೀಯ ಹುರಿ ನೋಡ

೨೯೨

ಹಾರೂರ ಓಣ್ಯಾಗ ಮಾರುದ್ದ ಶ್ಯಾಂವಿಗಿ
ಡೊಣ್ಣಿ ಮ್ಯಾಲ ಡೊಣ್ಣಿ ತಿಳಿತುಪ್ಪ । ಹೊಡದರ
ಹಾರೂನ ಜುಟ್ಲ ನಿಗರ್‍ಯಾವ್ರೊ

೨೯೩

ಹಾರೂರ ಓಣ್ಯಾಗ ಆರ್‍ಯಾರ ಹುಡಗನ್ನ
ಹಾರ್‍ಯಾರಿ ಒದ್ದರ ಖಬರಿಲ್ಲೊ । ಆ ಹುಡಗ
ಹಾರೂರ ಹುಡಗಿನ್ನ ಬಿಡಲಿಲ್ಲೊ

೨೯೪

ಹಾಂವ ಹಗ್ಗವ ಮಾಡಿ ಚೇಳ ಸಿಂಪನು ಮಾಡಿ
ಊದೀನ ಕಡ್ಡಿ ನಗ ಮಾಡಿ । ಹುಡಗೂರು
ಜಾಲಿ ಗಿಡಕೆಡಿಯ ಹೊಡದಾರೊ

೨೯೫

ಹಾಸಗಲ್ಲಿನ ಮ್ಯಾಲ ಹಾದ ಹ್ವಾದವರ್‍ಯಾರ
ಪಾದ ಮೂಡ್ಯಾವ ಪರಿಪರಿ । ಗುರುಪಾದೇಶ
ಹಾದ ಹೋಗ್ಯಾನ ಜಳಕ್ಕ

೨೯೬

ಹಾಸಗಲ್ಲಿನ ಮ್ಯಾಲ ಹಾದ ಹ್ವಾದವನ್ಯಾರೊ
ಮಾಸ ಮರಿಗುದರಿ ರಾಯಣ್ಣ ನಿನ ಕುದರಿ
ಈಸ ಬಿದ್ದಾದೊ ರಣದಾಗ

೨೮೭

ಹುಚ್ಚುಡಗ ಕಾಮಣ್ಣ ಉಚ್ಚೀಯ ಹೊಯ್ದಾನ
ಬಚ್ಚಲ ತುಂಬಿ ಕುಣಿ ತುಂಬಿ । ನೆರಮನಿಯ
ನಿಚ್ಚಣಿಕೆ ತಂದ ನೆಲಿನೋಡ

೨೮೮

ಹುಚ್ಚ ಹಿಡಿಸ್ಯಾಳ ಹುಲಿಗಿಣ್ಣ ತರು ಹುಡಗಗ
ಅಚ್ಚಿ ಮಾಡಿ ಅವಳಪ್ಪ ಬೆಳಿಸ್ಯಾನೊ । ಗಂಡನ
ಇಚ್ಚೇದಾಗಿಲ್ಲದ ನಡದಾಳೊ

೨೮೯

ಹುಟ್ಟೀದ ಮನಿಯಿಂದ ಮೆಟ್ಟಲಿಳಿಯುವಾಗ
ಹೊಟ್ಟೀಗಿ ಸಿಡಲ ಬಡದಂಗ । ಕಣ್ಣೀರ
ಕಟ್ಟೊಡದ ಹೊಳಿನೀರ ಹರದಂಗ

೨೯೦

ಹುಡಗೀಯ ಬೆನ್ಹತ್ತಿ ಹುಡಗ್ಯಾಕ ಸೊರಗ್ಯಾನೊ
ಹುಡದಿ ಅಡ್ಯಾಡಿ ಹಸದಾನೊ । ಮನಿಮಾಗ
ಮಡದಿ ಇಲ್ಲದಕ ಮರಗ್ಯಾನೊ

೨೯೧

ಹುಬಳ್ಳಿ ಹೊಳಿ ಮ್ಯಾಲ ಹುಬ್ಬೀಯ ಮಳಿಯಾತೊ
ಗುಬ್ಬೀಯ ಕಾಲ ಕೆಸರಾತೊ । ಆ ದಿನಾ
ನಿಬ್ಬಣಕ ಬಂದ್ಹುಡಗಿ ಬಸರಾತೊ

೨೯೨

ಹೂಸ ಬಿಟ್ಟಾಳಾಕಿ ಕೂಸಿನ ಮ್ಯಾಲ್ಹಾಕ್ಯಾಳೊ
ಹಾಸಿಗಿ ಸುಟ್ಟ ಉರಿ ಎದ್ದ । ಗಂಡನ
ಮೀಸೆಲ್ಲಾ ಸುಟ್ಟ ಕಮರೆದ್ದ

೨೯೩

ಹುರಕಡ್ಡಿ ಹುರಿಯೂಳ ಚುರಮೂರಿ ಬೆರಸೂಳ
ಹೊರಕಡಗಿ ಹ್ವಾದಲ್ಲಿ ತಿನಸೂಳ । ಆ ಬಾಲಿ
ಹೊರ ಬಳಕಿ ನೀರ ಕುಡಸೂಳ



೨೯೪

ಹೂನೂರ ಹೂಗಾರ ಜಮಖಂಡಿ ಪತ್ತಾರ
ಬಾಗಲಕೋಟ್ಯಾಂವ ಬಳಗಾರ । ಇಡಿಸಿದ ಬಳಿ
ಬಾಗಲಕ ಬಡದ ಬಡದಾಳೊ

೨೯೫

ಹೆಚ್ಚೀಗಿ ಹಾಡಿದರ ಮೆಚ್ಚೀಲೆ ಬಡದೀನೊ
ಮುಚ್ಚಳದಾಗದ್ದಿ ತಗದೀನೊ । ಎಲೆ ಹುಡಗಿ
ಉಚ್ಚೀಲೆ ಬಾಯಿ ತೊಳದೀನೊ

೨೯೬

ಹೆಂಡಾ ಕುಡದ ಮ್ಯಾಲ ಖಂಡದಡಗಿ ಬೇಕೊ
ರಂಡ್ಯಾರು ಬೇಕೊ ಮಲಗಾಕ । ಬಡದಾಡಿ
ದಂಡಾ ಕೊಡಲಾಕ ಹಣಾಬೇಕೊ

೨೯೭

ಹೆರವರ ಹೆಣ್ಣಾನು ಕಂಡು ಹಿರಿಹಿರಿ ಹಿಗ್ಗೀಯೊ
ತೆರವಾಯಿ ನಿನಗ್ಯಾರು ಗತಿಇಲ್ಲೊ । ಕಮಲದ ಹೂ
ಕೆರಿಯಾಗರಳಿದರ ನಿನಗೇನೊ

೨೯೮

ಹೆಸರೀಗಿ ಸಾರ್ಹಾಡ ಮಸರೀಗಿ ನೀರಿಲ್ಲ
ಕುಸಿಲಾದ ಸಿಂಬಿ ಬರಿ ಗೊಡ । ಹೊತಗೊಂಡ
ಉಸಿರ್ಹಾಕಿ ಡೋಣಿ ಏರ್ಯಾಳೊ

೨೯೯

ಹೊನ್ನಿಯ ಹುಳದಂಗ ಮುನ್ನೂರ ದೀವಟಿಗಿ
ಹೊನ್ನಹಿಪ್ಪರಗಿ ಬಯಲಾಗೊ । ರಾವತರಾಯ
ಬನ್ನಿಯ ಮುಡದ ಬರತಾನೊ

೩೦೦

ಹೊಳೆಯ ಆಚೀನ ಹೆಣ್ಣ ಮಳಿಯ ಸುದ್ದಿಯ ಹೇಳ
ಮಳಿಬಾಳ ಇಲ್ಲಿ ಛಳಿ ಬಾಳ । ಬೆಳದಾವ
ಬಿಳಿಮುತ್ತಿನಂಥ ಬಿಳಿಜ್ವಾಳ

೩೦೧

ಹೋಗವನ ಕೈಯಾಗ ಹೊಳೆವ ಉಂಗರ ಛಾಯಾ
ಹೋಗೋ ನಿನ ದಾರಿ ಬಲು ದೂರ । ಸಂಗಮದ
ತೇರ ರತಬ್ಯಾವೊ ನಿನಗಾಗಿ

೩೦೨

ಹೋಗೂತ ಹೊಸಕೋಟೆ ಬರತ ಬಾಗಲಕೋಟೆ
ಬಂಗಾರದ ಕೋಟೆ ಬಬಲಾದಿ । ಕೆಳಗಿನ
ಸಿಂಗಾರದ ಕೋಟೆ ಸೀತೀಮನಿ

೩೦೩

ಹೊಳ್ಳೊಳ್ಳಿ ಹಾಡಿದರು ಹುಳ್ಳಾನುಚ್ಚಿನ ಹಾಡ
ಎಳ್ಳಷ್ಟು ಗಂಧ ಅವಕಿಲ್ಲೊ । ಎಲೆ ಹುಡಗ
ಕಳ್ಳಿಸಾಲಾಗ ಅಳ ಹೋಗೋ

೩೦೪

ಹೋಳಿಗಿ ಹಂಚಿಟ್ಟು ಮ್ಯಾಳೀಗಿ ಏರ್‍ಯಾಳೊ
ಯಾಕೇನೊ ಗೆಣೆಯ ಬರಲಿಲ್ಲೊ । ಮನಿ ಮೂಳ
ಸಾಕಾದ ಗಂಡ ಉಣ ಏಳೊ

೩೦೫

ಹೋಳೀ ಹಾಡಂದರ ಸೂಳ್ಯಾರ ಹಾಡಂತ
ಬಾಳುಳ್ಳವರೆಲ್ಲ ತಿಳದಾರೊ । ಹೊಲಿಯರ
ಹೋಳ್ಯಾಗಿ ಹುಟ್ಟ್ಯಾಳೊ ರತಿದೇವಿ

೩೦೬

ಹೋಳೀ ಹುಣ್ವಿ ಹುಡಗಿ ಹೋಳೀಗಿ ಮಾಡ್ಯಾಳೊ
ಬೋಳೆಮ್ಮಿ ತುಪ್ಪ ಕಾಸ್ಯಾಳೊ । ಆ ಹುಡಗಿ
ಹೋಳಬಾಯ್ಹುಡಿದು ತುರಕ್ಯಾಳೊ

೩೦೭

ಹೋಳೀ ಹುಣ್ಣಿವಿ ಬಂತು ಹೋಳಿಗಿ ಮಾಡುದುಬಂತು
ಸೂಳ್ಯಾರಿಗಿ ಬಂತೊ ಪಡಿಪಾಟೊ । ಹುಡುಗರಿಗೆ
ಹೊಯ್ಕೊಳ್ಳುದು ಬಂತೊ ಮನಿಮನಿಗೆ



೩೦೮

ಹೋಳೀ ಹುಣ್ಣೀಗಿ ಮೇಳಾಗಿ ಹಾಡೂನ
ವಾಳಿತನ ಬ್ಯಾಡ ನನ ಗೆಣತಿ । ಊರೆಲ್ಲ
ಕೇಳಾಕ ಬರತೈತಿ ನಮ್ಹಾಡ

೩೦೯

ಹೋಳಿ ಹಾಡುದಕಂತ ಹೇಳಿಕಳಿಸಿದರೂನು
ಸಾಳ್ಯಾರ ಹುಡಗಿ ಬರಲಿಲ್ಲ । ನಮ್ಮೂರ
ಸೂಳ್ಯಾರಿಗಂಜಿ ಅಳತಾಳೊ

೩೧೦

ಹೋಳೀ ಹಾಡುಗಳನ್ನು ಹೇಳಿಕೊಟ್ಟವರ್‍ಯಾರೊ
ಸೂಳೀಯ ಮಗ ಶಿವರಾಯ । ಆ ಶ್ಯಾಣ್ಯಾ
ಹಾಳಾಗಿ ಹ್ವಾದ ಹಾಡ್ಯಾಡಿ

* * *

# ದುಂದುಮೆ ಪದಗಳು



## ಪರಿವಿಡಿ


| | | |
|---|---|---|
| ಪ್ರಸ್ತಾವನೆ | ..... | ..... |
| ಆದಯ್ಯ | ..... | ..... |
| ಪುರಾತನರ ಪೂಜೆ | ..... | ..... |
| ಕೀಚಕ ವಧೆ | ..... | ..... |
| ಕಿತ್ತೂರ ದುಂದುಮೆ | ..... | ..... |
| ವೀರರಾಣಿ ಚೆನ್ನವ್ವ | ..... | ..... |
| ನುಲಿಯ ಚಂದಯ್ಯ | ..... | ..... |
| ಶ್ರೀಕೃಷ್ಣ ಲೀಲೆ | ..... | ..... |
| ಶಿವನಾಮದಿಂದ ಸವೆದೀತು ಪಾಪ | ..... | ..... |
| ಹುಬ್ಬಳ್ಳಿ ಮಂಗ | ..... | ..... |

## ಆದಯ್ಯ

ದುಂದುಮೆಯೆಂದೆಂದು ಪಾಡಿರಿ ಜಾಣ
ದುಂದುಮೆ ಬಸವಂತನಹಬ್ಬ ||ಪ||

ಶಿವ ಶಿವ ಗಣನಾಥನಂದನಂದನ ತನು
ಭವಹರ ನಿರ್ಜರೊಂದಿತ ಚರಣ । ಗೌರೀ
ಧವಧವಲಾಂಗವರ್ಜಿತ ಮರಣ । ಚಂದ್ರ
ರವಿವಹ್ನಿನೇತ್ರ ಪೂರಿತ ಕರುಣ । ಸರ್ವ
ಭುವನ ಜನರ ರತಿ ಮರಿಯಾದೆ ಪಾಲಿಪ
ಭವನೆ ನಂಬಿದೆ ನಿನ್ನ ಒಲಿದೆನ್ನ ಸಲಹು ||೧||

ಈಶ ಮಾಹೇಶ ಗೌರೀಶ ಗಜಾಂತಕ
ನಾಶ ಮುಕ್ತೀಶ ಮಲ್ಲೇಶ್ವರನೆ । ಪುರ
ನಾಶ ಭೂತೇಶ ಸರ್ವೇಶ್ವರನೆ । ಯಮ
ನಾಶ ಗಿರೀಶ ಮದೀಶ್ವರನೆ । ಜಗ
ದೀಶ ಗಂಗಾಂಬೆಯ ತೋಷ ಭೂಷ ಅಘ
ನಾಶ ರಹಿತ ಆಶ ಸಲಹು ಸೋಮೇಶ ||೨||

ಆದಿಗಣೇಶನು ಹರನ ನಿರೂಪದಿ
ಮೇದಿನೀಸ್ಥಲದೊಳಗುದ್ಭವಿಸಿ । ಪರ
ವಾದಿ ಜಿನ್ನರನೆಲ್ಲ ಸಂಹರಿಸಿ । ಸೌ
ರಾಷ್ಟ್ರ ಸೋಮೇಶನ ಸ್ಥಿರಗೊಳಿಸಿ । ಮತ್ತೆ
ಈ ಧರೆಯೊಳು ತೋರಿ ಮರೆಸಿದಾದಯ್ಯನ
ಮೋದದಿಂದಾತನ ಕಥೆಯ ನಿರ್ವಿಪೆನು ||೩||

ಕರ್ತುಶಂಕರ ಸಿಂಹಪೀಠವಡರಿ ಮತ್ತೆ
ಮೋರ್ತಮಾಡಿರೆ ಸುತ್ತ ಎಡಬಲದಿ । ಲಕ್ಷ್ಮಿ
ಕರ್ತರು ಅಜರಿರ್ಪ ತರತರದಿ । ಭೃಂಗಿ
ನರ್ತನ ಗಾನವೆತ್ತುತ ಸ್ವರದಿ । ಗಣ
ದರ್ತಿಲೆ ಸಂತೋಷದಿಂದಿರ್ಪ ಸಮಯದಿ
ತುರ್ತದಿಂ ನಾರದ ಮರ್ತ್ಯದಿಂದಿಳಿದ ||೪||

ಆ ಕ್ಷಣ ಬಂದು ನಿರೀಕ್ಷಿಸಿ ಇಂದು ಭಾ
ಳಾಕ್ಷ ಸುಮುಕ್ಷವಾಹನ ಜಯತು । ನಿರ



ಪೇಕ್ಷ ನಿರ್ಲಕ್ಷ ನಿರ್ಮಳ ಜಯತು । ಭಕ್ತಾ
ಪೇಕ್ಷ ಮುಮುಕ್ಷದಾಯಕ ಜಯತು । ಲೋಕ
ರಕ್ಷಕ ಪಾಲಕ ಪಕ್ಷಿವಾಹನ ನುತ
ದಕ್ಷ ಸಮ್ಮುಖಶಿಕ್ಷ ಜಯಯೆಂದ ಮುನಿಪ ||೫||

ತಪ್ತನಾಗುತ ಶಿವ ಮುನಿಸ್ತುತಿಗೆ ವಾಣೀ
ವಪ್ತರುಳನೆ ಬಂದ ಕಾರ್ಯವೇನು । ಪೇಳ್ವೆ
ಸಪ್ತಸಾಗರವನು ದಾಂಟಿದೆನು । ದ್ವಿತಿ
ಸಪ್ತಲೋಕವನೆಲ್ಲ ಚರಿಸಿದೆನು । ದೇವ
ಸಪ್ತದ್ವೀಪಾಂತರ ಸುತ್ತಿ ಬರಲು ಎಂಟು
ಸಪ್ತದೇಶದೊಳೊಂದು ಕಂಡೆ ಕೌತುಕವ ||೬||

ಬಲ್ಲಿದ ಪುಲಿಗೆರೆಯಲ್ಲಿ ನಿಮ್ಮಯ ಸುದ್ದಿ
ಎಲ್ಲೆಲ್ಲಿ ನೋಡೆ ಎಳ್ಳಿನಿತಿಲ್ಲವು । ಕುನ್ನಿ
ಖುಲ್ಲ ಜಿನ್ನವು ಹಚ್ಚಿಕೊಂಡಿಹವು । ಪೇಳೆ
ನಲ್ಲಿ ಶ್ರ ಗುರುಲಿಂಗಜಂಗಮವು । ಪೇಳ್ವೆ
ನಲ್ಲಮಭಕ್ತರು ಎಲೆಮರೆ ಕಾಯಂತೆ
ಅಲ್ಲಡಗಿಹರಿಭಪುರದೊಳಗೇ ||೭||

ಚಿನುಮಯ ಕೇಳ್ನಿಮ್ಮ ಮತವನುದ್ಧರಿಸುವ
ದೆನಲಾದಿಗಣಪನ ನಿಟ್ಟಿಸುತ । ನಮ್ಮ
ಘನ ಶಿವಮತವನು ಹೆಚ್ಚಿಸುತ । ಪೇಳಿ
ದನು ಪೋಗಿ ಜಿನ್ನನ ಶಿಕ್ಷಿಸುತ । ಬಾಯೆಂ
ದೆನಲಾಗ ಹರಹರ ಧರೆಯೊಳು ನರನಾಗಿ
ಜನಿಸಲು ನಾ ನಿಮ್ಮ ಚರಣಗಾಂಬುವೆನೆ ||೮||

ಒಳಹೊರಗಿರುವೆನು ಇದಕೇಕೆ ಸಂಶಯ
ಇಳೆಗಿಳಿಯೆಂದು ಅಪ್ಪಣೆಯೀವುತ । ಪೋಗಿ
ಗಳಿಲನೆ ಸೌರಾಷ್ಟ್ರದಲಿ ಪುಟ್ಟುತ । ನಮ್ಮ
ಚಲದಂಕನಾದಯ್ಯನೆಂದೆಂಬುತ । ಘನ
ಮಲಹರ ಭಕ್ತನು ಜಿತಪಾಪ ಮುಕ್ತನು
ನಲವಿಂದೆ ಧರೆಯೊಳಗಿರ್ಪ ಸಂತೋಷದಿ ||೯||

ಅವನಿಯೊಳ್ ಶಿವಭಕ್ತರುದರದಿ ಜನಿಸುತ
ತ್ರಿವಿಧ ಲಿಂಗದ ಕಲೆನೆಲೆ ತಿಳಿದು । ಪಂಚ
ತ್ರಿವಿಧ ಮದದ ಮೂಲಗಳನಳಿದು । ಆಗ
ತ್ರಿವಿಧ ಗುಣಂಗಳ ನೆರೆ ಕಳೆದು । ಮತ್ತೆ
ತ್ರಿವಿಧ ಮಲಂಗಳ ಸುಟ್ಟು ಬ್ರಹ್ಮವ ಕಂಡು
ತವೆ ಗುರುಕರುಣದಿಂದಿರ್ಪನಾದಯ್ಯ ||೧೦||

ಪೃಥ್ವಿಯೊಳೀತನು ಎಸಗು ವ್ಯವಹಾರವ
ಬಿತ್ತರಿಸುವೆನೀಗ ಭೂಮಿಯೊಳು । ಘನ
ರತ್ನನೀಲವು ಪಚ್ಚಪವಳಗಳು । ಸಲೆ
ಮುತ್ತುಗಳೊಜ್ರವೈಡೂರ್ಯಗಳು । ಕಾಯಿ
ಪತ್ರಿ ಲಾವಂಗವ ಲೆಕ್ಕವಿಲ್ಲದೆ ತಾನು
ಎತ್ತುಗಳ್ವೋಡಿಸಿದನಾಗ ದಕ್ಷಿಣದೇಶಕೆ ॥೧೧॥

ಬಂದು ಶ್ರೀ ಪುಲಿಗೆರಿ ಪುರವಳಯದಾಗ
ನಿಂದು ಬೀಡಿಕೆಯನು ಇಳುಹಿಸಿದ । ಸ್ನಾನ
ಇಂದುಧರನ ಪೂಜೆ ತೀರಿಸಿದ । ಪುರ
ವಿಂದು ನೋಡುವೆನೆಂದು ನೇಮಿಸಿದ । ಭರ
ದಿಂದ ಸಿಂಗರವಾಗಿ ತಾ ಹೊರಟನು
ನಂದದಿ ಸೂರ್ಯಚಂದ್ರರ ಬೀದಿಯೊಳಗೆ ॥೧೨॥

ಅನಿತರೊಳೀ ಶಿವಪ್ರೇಮಿ ಬರುತಿರ್ಪ
ನನು ನೋಡಲೆನುತಲಿ ಪೇಳೆ । ಅಂದು
ಇನನಸ್ತನಾದ ಪಶ್ಚಿಮ ಚಲಕೆ । ಪದ್ಮ
ನನೆಯಾಗೆ ತಮ ಮುಸುಕಿತು ಜಗಕೆ । ತಾರೆ
ಮಿನುಗುತ ಗಗನದೋಳಲ್ಲಲ್ಲೆ ಮೂಡಲು
ವಿನಯದಿಂ ನೈದಿಲೆ ನಲಿದವಾಕ್ಷಣದಿ ॥೧೩॥

ಹರಭಕ್ತನಿವನ ಸಂದರುಶನಕೆಂದಾಗ
ತ್ವರಿತದಿ ಬಂದು ಪೂರ್ವದಿಸೆದಿ । ಹಿಮ
ಕಿರಣ ಪ್ರಜ್ವಲಿಸುತ ಸಮ್ಮುದದಿ । ಆಗ
ಸರಸಚಕೋರಗಳ್ ಸಂತೋಷದಿ । ಮುಂದೆ
ಬರುತಿರಲಾದಯ್ಯ ಕಳಸ ಕನ್ನಡಿ ತೋರ್ಪ
ಕರುಮಾಡಗಳ ನೋಡುತ್ತೈತರಲಾಗ ॥೧೪॥

ಎಲ್ಲೆಲ್ಲಿ ನೋಡಲು ಅಲ್ಲಿ ಜಿನ್ನಾಲಯ
ವೆಲ್ಲ ಜಿನ್ನರು ತುಂಬಿ ಪುರವೆಲ್ಲವು । ಮತ್ತಿ
ನ್ನೆಲ್ಲೆಲ್ಲಿ ಶಿವನಿಳಯಗಳಿಲ್ಲವು । ಇದ
ರಲ್ಲೆ ಹರನ ಭಕ್ತರಿರ ಸಲ್ಲವು । ಮನ
ದಲ್ಲಿ ಬಾಳತಿ ನೊಂದು ಮಲ್ಲಿಕಾರ್ಜುನ ಉಮೆ
ವಲ್ಲಭ ಹರಹರಯೆಂದು ಮರುಗಿದನು ॥೧೫॥

ಮುಂದಡಿಯಿಡುತ ನಿಟ್ಟಿಸಿ ಎಡಬಲದೊಳು
ಮಂದಿರ ಮೇಲುಮಂಟಪಗಳನು । ನಯ
ದಿಂದ ತೋರ್ಪ ಶೃಂಗಾರವನು । ಗಜ



ಮಂದಗಮನೆಯರ ವೃಂದವನು । ಭರ
ದಿಂದ ಕಂದರ್ಪನ ಮಾರ್ಬಲವೊಂದಾಗಿ
ಬಂದತ್ತ ನಯನಕೆ ರಂಜಿಸುತಿಹುದು ॥೧೬॥

ತಂಗಾಳಿ ತೀಡಿ ತಿಂಗಳ ಮೂಡಿ ಮನಸಿಜ
ಸಿಂಗಾಡಿವಿಡಿದನು ಕೋಪದಲಿ । ತಾಳ
ದಂಗಾನೆ ಉಡುಪನನು ಬೈವುತಲಿ । ರಾಹು
ನುಂಗಿಬಿಟ್ಟನು ಪಾಪಿಯೆಂಬುತಲಿ । ಅವ
ನಂಗುಳವ ಸುಟ್ಟುಳುಪಿದ ಶಿವನೋರ್ವಳು
ಭೃಂಗವೇಣಿಯಳು ತಾಪದಿ ಬಳಲುವಳು ॥೧೭॥

ಇಂದುಮುಖದಿ ಬೆಮರ್ದುಂಬಿ ನಾಸಿಕದೊಳು
ಮಂದಮಾರುತ ತೀಡೆ ಬಹುಭರದಿ । ಗಂಧ
ಚಂದನ ತಲೆಗೂಡಿ ತನ್ನುರದಿ । ಕಂಚು
ಕಿಂದು ಬಿಚ್ಚಿರೆ ಜಾರಿದಂಬರದಿ । ಅರ
ವಿಂದ ಬಾಣನ ಸಮರಂಗ ತೀರಿಸಿ ಶ್ರಮ
ದಿಂದಲಿ ಮಂದಾನಿಲನ ಬಯಸುವಳು ॥೧೮॥

ಕುಟಿಲಕುಂತಳೆ ತೀಡಿ ಕಟಿಗೆ ನಿರಿಗೆ ಬಿಗಿ
ದುಟಗೊಂಬುತವಳತಿ ಶೀಘ್ರದಲಿ । ದ್ವಯ
ಪಟುತರ ಕುಚಗಂಧ ಕೊಡಹುತಲಿ । ತನ್ನ
ತುಟಿಯ ಪಿಡಿದು ಜಗ್ಗಿ ನೋಡುತಲಿ । ನಾರಿ
ವಿಟನುರೆ ಬೈದು ಚಿಟಕ ಮುರಿವುತಲಿ ಸಂ
ಗಟದಿಂದ ತನ್ನ ಸದನಕ್ಕೈದುತಿರಲು ॥೧೯॥

ಅರವಿಂದಮುಖಿಯೆ ಬಾ ಅರುಣ ಚಂದುಟಿಯೆ ಬಾ
ಗುರುಕುಚ ತಳಿರಡಿ ಸುಗುಣೆ ಬಾರೆ । ಚಲ್ವ
ಕರಿನಡೆ ಹರಿಮಧ್ಯೆ ಜಾಣೆ ಬಾರೆ । ಚಲ್ವ
ಮರಿದುಂಬಿಗುರುಳೆ ಪ್ರವೀಣೆ ಬಾರೆ । ನಿನ್ನ
ಸರಿಯ ನಾರಿಯರುಂಟೆ ಭುವನದೊಳೆಂದೋರ್ವ
ತರುಣಿಯ ಮುನಿಸು ಸಂಬಿಸುತಿರ್ದನವನು ॥೨೦॥

ಬಲ್ಲೆನು ನಾ ನಿನ್ನ ಬಣ್ಣದ ಮಾತುಗ
ಳೆಲ್ಲ ಸಕ್ಕರೆದುಟಿ ಸವಿಯುವದು । ಕುಚ
ದಲ್ಲಿ ನಖದ ರೇಖೆಯೂರುವದು । ದ್ವಯ
ಗಲ್ಲವ ಪಿಡಿದು ಮುದ್ದಾಡುವದು । ಅವ
ಳಲ್ಲೆ ಮನಸನಿಟ್ಟು ಇಲ್ಲೆ ಬಹುರಂಗದ
ಸೊಲ್ಲಿಲೆ ಸಾಕುಸಾಕೆಂದಳು ಮುನಿದು ॥೨೧॥

ಚಿಕ್ಕಂದು ಮೊದಲಾಗಿ ಇವಗೆ ಮೆಚ್ಚಿಕೊಂಡು
ಸಿಕ್ಕರೆ ಬಿಡು ನೀ ತಿರಸ್ಕರಿಸಿ । ಬಹು
ರೊಕ್ಕವನೀವನ ನೀನೊಲಿಸಿ । ಈಗ
ದಕ್ಕಿಸಿಕೋ ದ್ರವ್ಯ ಸತ್ಕರಿಸಿ । ಪ್ರಾಯ
ಮಿಕ್ಕಿದ ಬಳಿಕಿನ್ನು ಗಳಿಸಿಯೆ ಮುಂದಿನ್ನು
ಮಕ್ಕಳಿಗೆ ಬುದ್ಧಿ ಹೇಳುವಳ್ಮದಿಕಿ ॥೨೨॥

ನಾರಿ ನಿನ್ನಯನದಿ ಕೆಂಪೇನೆ ಮೂಗಿನೋಳ್
ಮೇರೆ ಮೀರುತ ಗಾಳಿ ತೀಡ್ವುದೇನೆ । ನಿನ್ನ
ತೋರ ಕುಚವು ಬಿದಿಗಿ ಚಂದ್ರನೇನೆ । ಫಣಿ
ಸಾರಕುಂತಳೆ ತುಟಿಯಸಿತವೇನೆ । ಯತಿ
ಸಾರೆನ್ನೇಕಾಂತದಿ ನೆರೆದು ಬಂದುದು ದಿಟ
ಭೂರಿಕೋಪದಿ ನೀರೆ ಒದೆದಳಾಳಿಯನು ॥೨೩॥

ಇಂತಪ್ಪ ವೈಭವವಂತಕಾಂತಕ ಭಕ್ತ
ಸಂತಸದಿ ನೋಡುತ್ತೈತರುತಾ । ತೋರ್ಪ
ಮುಂತೊಂದು ಮಂಟಪ ರಂಜಿಸಿತು ತಾ । ಭೂಮಿ
ಕಾಂತನ ಸುತೆ ಪದ್ಮವತಿ ಕಾಣುತಾ । ಮದ
ದಂತಿಗಮನೆಯಳ ಕಾಂತಿ ವರ್ಣಿಸುವಡೆ
ಅಂತಪ್ಪ ಬ್ರಹ್ಮಗಸಾಧ್ಯವಾಗಿಹುದು ॥೨೪॥

ಅಳಿಗಿಳಿ ಕಳಹಂಸ ತಳಿರುನಳಿನ ಸುಳಿ
ಕಳಸಕನ್ನಡಿ ಸಲೆ ಕುಂತಳವು । ನುಡಿ
ಗಳು ಕಾಮಿನಿಯ ಚಲ್ವಪದಯುಗವು । ವರ
ಕಳೆಮುಖ ನಾಭಿ ಕುಚದ್ವಯವು । ನೆರೆ
ಹೊಳೆವ ಕದಪಿನಿಂದ ಕೆಳದಿಯರೊಪ್ಪಿರ್ದ
ಎಳೆ ಚಂದ್ರಧರಭಕ್ತ ಕಂಡನಾ ಕ್ಷಣದಿ ॥೨೫॥

ದ್ವಿತಿಸುತನುದರದಿ ಖತಿಯಿಂದೆ ಬಿಗಿದು ಶ್ರೀ
ಪತಿ ತನ್ನ ಅವತಾರ ಇಡಲಿಕೆಂದು । ವಸು
ಮತಿಯೊಳಗೆ ತಾವಿಲ್ಲವೆಂದು । ಸ್ವರ್ಣ
ಲತದೇಹಿ ಇವಳಲ್ಲಿ ಇಟ್ಟನೆಂದು । ಮಂದ
ಗತಿ ಅತಿಜ್ಞಾನ ಸೂಮತಿ ಭೂಪಸುತೆ ಪದ್ಮ
ವತಿ ಸಣ್ಣನಡುವು ಈ ತೆರದಿ ಶೋಭಿಸಿತು ॥೨೬॥

ವರ ಪದ್ಮವತಿಯಳ ಪರಮ ಸುಲಕ್ಷಣ
ಪರಕಿಸಲಾರೆ ಈ ಧರೆಯೊಳಗೆ । ಮತ್ತೆ
ಹರಭಕ್ತ ಭ್ರಾಂತದ ಮನದೊಳಗೆ । ಸ್ಮರ



ಸರಳು ನಡಲು ಗಾಯ ಉರದೊಳಗೆ । ಮನ
ಕರಗಿ ಅವಳ ಮುಖವೀಕ್ಷಿಸುತಿರಲಾಗ
ತರುಣಿಯಾಳಿವನ ಸಮ್ಮುಖವ ನೋಡಿದಳು ॥೨೭॥

ಚದುರೆ ಕಾಂತನ ಕಂಡು ನದರಿಕ್ಕಿ ಆ ಸಖಿ
ಬೆದರಿದೆರಳೆಯಂತೆ ಕಂಪಿಸುತ । ಆಗ
ಮದನಮೋಹದ ಕಲೆನೆಲೆಗುಬ್ಬುತ । ಬಹು
ಹದ ಮೀರಿ ತಾಪ ರೋಮಗಳೇಳುತ । ತನ
ಗೊದಗಿದ ವಿರಹಭ್ರಾಂತಿಗಳಿಂದ ತನ್ನಯ
ಸದನದೊಳಗೆ ನಿಂತು ಪೊಗಳುತಲಿಹಳು ॥೨೮॥

ಹರನುರಿಗಣ್ಣಿಂದ ಮಡಿದ ಮನ್ಮಥನೆಂಬ
ಬರಿಯ ವಚನ ತನ್ನ ರತಿಯಳನು । ಬಿಟ್ಟು
ಧರೆಯೊಳಗಿರ್ಪಂಥ ಸತಿಯರನು । ಸುಖ
ಸುರತಗೊಂಬುವೆನೆಂದು ಮನ್ಮಥನು । ಬಂದ
ಪರಿಯಿಂದಲ್ಲದೆ ಬೇರೆ ಹೊರತಿಲ್ಲವೆಂಬುತ
ಸರಸಿಜನೇತ್ರೆ ಈ ಪರಿಯೊಳಾಡಿದಳು ॥೨೯॥

ಉರ್ವಿಯೊಳೀತನು ಒಲಿಯಬೇಕಾದರೆ
ಪೂರ್ವದ ಪುಣ್ಯವಿಲ್ಲದೆ ಸಿಗನು । ಇವ
ನೋರ್ವನೆ ಸಾಕು ಸೌಭಾಗ್ಯವೇನು । ಅಳೆ
ಉರ್ವಿಸನ್ನಿಭ ಕಾಂತ ಪೇಳಲೇನು । ಈಗ
ಸರ್ವಪಾಲಿಗೆ ಬಿಟ್ಟು ಬಾರದೆ ಕರತಾರೆಂ
ದೊರ್ವಳ ಕಳುಹಿದಳವನ ಸನ್ನಿಧಿಗೆ ॥೩೦॥

ಬಂದು ಆದಯ್ಯನಿಗೊಂದಿಸಿ ಕರತಂದು
ಚಂದದಿಂದೀರ್ವರ ಹೊಂದಿರಿಸಿ । ಅಷ್ಟ
ಗಂಧದ್ರವ್ಯಗಳನೆಲ್ಲ ತಂದಿರಿಸಿ । ನಾರಿ
ಸುಂದರ ದೇಹದೊಳನುಲೇಪಿಸಿ । ಮಕ
ರಂದ ಸೂಸುವ ಪೂಮಾಲೆಗಳ್ಮುಡಿವುತ
ಕಂದರ್ಪ ಆಹವಕನುವಾದರಾಕ್ಷಣದಿ ॥೩೧॥

ಒಬ್ಬರೊಬ್ಬರ ಮುಖವ ಒಬ್ಬರೊಬ್ಬರು ನೋಡಿ
ಒಬ್ಬರೊಬ್ಬರು ತೆಕ್ಕಿಯೊಳಗವಚಿ । ಬೇಗ
ಒಬ್ಬರೊಬ್ಬರಿಗೆ ಆತುರವು ಹೆಚ್ಚಿ । ಆಗ
ಒಬ್ಬರೊಬ್ಬರು ತಾಂ ಚಂದುಟಿಯ ಕಚ್ಚಿ । ಹೀಂಗ
ಕಬ್ಬುವಿಲ್ಲನ ಕೇಳಿಯಬ್ಬರ ತೀರಿಸಿ
ಅಬ್ಜಲೋಚನೆ ಶ್ರಮದಿಂದೊರಗಿದಳು ॥೩೨॥

ಇವಳಿಗೆ ಇಷ್ಟಲಿಂಗವು ಉಂಟೋಯಿಲ್ಲವೊ
ವಿವರಿಸಿ ನೋಳ್ಪೆನೆಂದ್ಯೋಚಿಸಿದ । ಆಗ
ಯುವತಿಯ ಎದೆಮುಟ್ಟಿ ಈಕ್ಷಿಸಿದ । ಇಷ್ಟ
ತವೆ ಲಿಂಗವಿಲ್ಲೆಂದು ಮನ ಹೇಸಿದ । ಎದ್ದು
ಭವಿಯಿವಳ ಸಂಗ ಭವಕಾದೆನಯ್ಯಯ್ಯೊ
ಶಿವಶಿವಯೆಂಬುತ ನಡೆದ ಬೀಡಿಕೆಗೆ ॥೩೩॥

ಮಚ್ಚಂಗಂಗಳೆಗಾಗ ಎಚ್ಚರವಾಗುತ
ಸ್ವಚ್ಛ ಪರ್ಯಂಕದೊಳಿಲ್ಲವಾತ । ಕೂನ
ಹಚ್ಚದೆ ಪೋದನು ಎನ್ನೊಳೀತ । ಇಂಥ
ನೆಚ್ಚಿದ ಕಾಂತೆಯೊತ್ತ ಘಾತ । ಮಾಡಿ
ಮೆಚ್ಚಿಸಿ ಅಗಲಿ ತಾ ಪೋಗುವರೆ ವಿರಹದ
ಕಿಚ್ಚಿಗೆ ಗುರಿಮಾಡಿ ಇಟ್ಟನೆಲ್ಲಕ್ಕೆ ॥೩೪॥

ಹಾಯೆನ್ನ ವಲ್ಲಭ ಹಾಯೆನ್ನ ಕಾಂತನೆ
ಹಾಯೆನ್ನ ಮನದ ಭಾಗ್ಯದ ಸಿರಿಯೆ । ಹಾ
ಹಾಯೆನ್ನ ಜೀವದ ಸಕ್ಕರೆಯೆ । ಹಾ
ಹಾಯೆನ್ನ ಒಲಿಸಬಲ್ಲಂಥ ದೊರೆಯೆ । ಹಾ
ಹಾಯೆಂದು ಹಂಬಲಿಸುತ ಹಳಹಳಿಸುತ
ತೋಯಜಗಂಧಿ ತಾ ಬಿದ್ದುರುಳಿದಳು ॥೩೫॥

ಏ ಕಾಂತನಿಲ್ಲದೆ ಈ ಕಾಯ ಉಳಿಯದು
ಏಕಾಂತ ತಾಪಕೆ ಮಾಡಲೇನು । ಅಯ್ಯೊ
ಈ ಕಷ್ಟ ಪೂರ್ವದ ಬರಹವೇನು । ಉರ
ಲೀ ಕೊರಳಿಗೆ ಮಾಲೆ ಹಾಕಲೇನು । ಈಕೆ
ಶೋಕವ ಸಂಬಿಸಬೇಕೆಂದು ಬಂದು ದಿ
ವಾಕರ ಮೂಡಿದ ಪೂರ್ವಪರ್ವತಕೆ ॥೩೬॥

ತಾವರೆ ನಗಲು ತಾರೆಗಳೆಲ್ಲಪೋಗಲು
ಕಾವಳ ಬಿಟ್ಟೋಡೆ ಕುಮುದಗಳು । ದುಗು
ಡಾವಿಲಾಸದಿ ಚಕ್ರವಾಕಗಳು । ನಲಿ
ದಾವಾಗ ಖಗ ಮೃಗ ಭೃಂಗಗಳು । ಭಾವೆ
ಭಾವಜರೂಪನ ಬಯಸಿ ಕಾಂಬುವೆನೆಂದು
ಕೋವಿನ ಕಾಂತನ ಬಳಿಗೆ ಸಾಗಿದಳು ॥೩೭॥

ಆ ತರುಣಿಯೇಳು ಸಂತಾಪದಿ ಬಳಲುತ
ಆತನ ಪಾದದಿ ಹಣೆಯನಿಟ್ಟು । ಇದು
ನೀತಿಯೆ ನಿನಗೆ ನಾ ಮನಸುಗೊಟ್ಟು । ಅತಿ



ಸೋತು ಬಂದವಳ ಕೂಡ್ಯಾತಕಿಷ್ಟು । ಎನ್ನ
ದಾತ ಮನ್ಮಥ ಪ್ರಖ್ಯಾತ ಭೂಮಿಯೊಳಿರ್ಪು
ದ್ಯಾತರದಯ್ಯಯ್ಯೊಘಾತಕವಿಧಿಯೆ ॥೩೮॥

ನಿನ್ನ ನಂಬಿದ್ದೆನು ಗನ್ನ ಘಾತಕ ಮಾಡಿ
ಇನ್ನಗಲುವರೆ ಎನ್ನೊಳನ್ಯೆ ಹೇಳು । ಕಾಂತ
ಭಿನ್ನ ಭೇದಗಳೆನಗಿಲ್ಲ ಕೇಳು । ಉಂಡ
ಅನ್ನವು ವಿಷವಾಯಿತಿನ್ನು ಏಳು । ಗುಣ
ರನ್ನ ಮೋಹನ್ನ ಸಂಪನ್ನನೆನುತಲಾಗ
ಕನ್ನೆ ಶಿರೋಮಣಿ ಕಳವಳಿಸಿದಳು ॥೩೯॥

ಕುವಲಯ ನೇತ್ರೆ ಕೇಳ್ ಭವಿ ಸಂಗಡ ನುಡಿ
ಭವಿಯ ಸಂಗಡ ಕೂಟ ಪವಡಿಸವು । ಮತ್ತೆ
ಭವಿಯ ಸಂಗಡ ಬಟ್ಟೆ ಗಮನಿಸವು । ಮೇಣ್
ಭವಿಯ ಸಂಗಡದಿ ಸಂಭೋಗಿಸವು । ಮುಂದೆ
ರವರವ ನರ್ಕವು ತಪ್ಪದು ಭವಿ ನೀನು
ಶಿವಭಕ್ತಜನ ನಮಗುಚಿತವಲ್ಲೆಂದ ॥೪೦॥

ಕಮಲಜ ಗಂಧಿ ಕೇಳ್ ಕಾರಣವೇನಿದು
ಗಮನಿಸಿ ಬಿಟ್ಟು ಹಲವು ಭ್ರಾಂತಿಯ । ಈಗ
ಮಮಕಾಂತನೆಂಬುದ ಬಿಡು ಚಿಂತಿಯ । ನಾವು
ಗಮಕಾದಿ ಪೋಪೆವೆಂಬುವ ಗ್ರಂಥಿಯ । ಉಂಟು
ನಮಗೀಗ ದಿವಸ ಸಂದಿದವೆಂಬ ವಾಕ್ಯವ
ರಮಣಿ ಶಿರೋಮಣಿ ಕೇಳಿದಳಾಗ ॥೪೧॥

ಏಕಾಂತ ಎನಗೆ ಬೇಕಿತ್ತು ನಿನ್ನೊಳು ಪ್ರಾಣ
ನಾ ಕೊಡುವೆನು ಸಟೆಯಲ್ಲ ಕೇಳು । ಎನ
ಗೆ ಕಟ್ಟು ಲಿಂಗವ ಹೃದಯದೊಳು । ಇಬ್ಬ
ರೇಕಾಗಿ ಇರುವದು ಭೂಮಿಯೊಳು । ಎಲೆ
ಭೂಕಾಂತಸುತೆ ನಿಮ್ಮ ಕುಲಜರು ಕೂಡ್ವರೆ
ಏಕಾಂತೆ ಶಿವಭಕ್ತಿ ಸುಲಬಲ್ಲ ಕೇಳು ॥೪೨॥

ವದನದ ಕುರಡಿಕುಠಾರ ಕೀಡಿಯೆಂದು ಬಿ
ಡದೆ ತನ್ನಂತೊಡಗೂಡಿದರೆ ತ । ನ್ನ ಪ
ಡೆದ ಭೂಮಿಯನದ ಬಯಸುವರೇನ । ನ್ನ ಪ
ಡೆದವರ್ಗಿಂಗಿಲ್ಲ ಕೂಡಿದರೆ ನೀ । ನು ಹಿ
ಡಿದುದ ಹಿಡಿವೆನು ಹೊರತಿಲ್ಲ ನಿನ್ನೊಳು
ಮೃಡ ಮೂರ್ತಿಯಾದಿಷ್ಟಲಿಂಗವ ಧರಿಸು ॥೪೩॥

ಮಂದಗಮನೆಗಾಗಿ ಪರಮ ಶ್ರೀ ಗುರು ಹಸ್ತ
ದಿಂದಲಿ ಇಷ್ಟಲಿಂಗವ ಧರಿಸಿ । ನಯ
ದಿಂದಲಿ ಬೇರೆ ಮಂದಿರ ರಚಿಸಿ । ನಿತ್ಯಾ
ನಂದದಿ ಚರತೀರ್ಥವನು ಸಲಿಸಿ । ಸುಖ
ದಿಂದ ಈರ್ವರ ಮನವೊಂದು ಬೆಚ್ಚುತೆ
ಚಂದದಿ ಪುರದೊಳಗಿರಲು ಕೇಳಿತ್ತ ॥೪೪॥

ವರ ಪುಲಿಗೇರಿಯೊಳ್ಮೆರೆವ ಜಿನ್ನರ ಗುರು
ಬರಲಾಗ ಬಹು ಬಾಳ ಸಂಭ್ರಮದಿ । ಭೇರಿ
ಬುರುಗು ನಗಾರಿ ವಾದ್ಯದ ರವದಿ । ರಾಜ
ನರಮನೆಯೊಳು ಬಂದು ವೈಭವದಿ । ಬೇಗ
ಪರಮಾನ್ನ ಪಾಯಸ ಪಂಚಾಮೃತ ಸಹ
ಹರುಷದಿಂ ಭೋಜನಕನುವಾದರಾಗ ॥೪೫॥

ಚಂದದಿ ಭೋಜನ ಗೈವುತಿರಲು ಜಿನ್ನ
ವೃಂದಕೆ ಸಾಲದೆ ಬರಲನ್ನವು । ಮಗ
ಳಿಂದ ಮಾಡಿದ ಮೀಸಲಡಿಗೆಯನು । ಇನ್ನು
ತಂದು ನೀಡುವೆನೆಂದು ಬಲು । ದುಡುಕಿ
ಲಿಂದಲಿ ಮಗಳ ಮನೆಯ ಪೊಕ್ಕು ಭೂವರ ಭರ
ದಿಂದಲಿ ಒಯ್ಯಲು ಕಡುಕೋಪಿಸಿದಳು ॥೪೬॥

ಅನಿತರೋಳಾದಯ್ಯ ಚರಮೂರ್ತಿಗಳ ಕೂಡಿ
ಮನೆಗಾಗಿ ಬರೆ ತನ್ನ ವನಿತೆಯಳು । ಕರ
ವನು ಮುಗಿದಾಗ ತಾ ಹೇಳಿದಳು । ಮನೆ
ಸುನಿ ಬಂದು ಹೊಕ್ಕಿತು ಈಗ ಕೇಳು । ಕೆಟ್ಟ
ಬಿನಗುಮಾನವರಿವರಿರಸಲ್ಲದ್ಯೆ ಸ್ವಾಮಿ
ಎನುತಲಿ ವನಜಾಕ್ಷಿ ಇನಿಯಗೆ ಪೇಳೆ ॥೪೭॥

ಆ ಮಾತು ಕೇಳುತ ರೋಮಾಂಚವುಬ್ಬುತ
ನಾ ಮತ್ತೆ ಜಿನ್ನನಿಕರವನು । ಕಿತ್ತು
ಗ್ರಾಮದೊಳಿವನೆಲ್ಲ ಒಡೆಸುವನು । ಈಗ
ಸೋಮನಾಥನ ತಂದು ನಿಲಿಸುವೆನು । ಅಯ್ಯೊ
ಈ ಮಾತು ಬಿಟ್ಟೊಡದರೆ ಯಮಲೋಕದ
ಆ ಮಹಾಪಾತಕ ಬರಲಿ ನನಗೆಂದ ॥೪೮॥

ಇಂದೆಂಟು ದಿನದೊಳು ಇಂದುಧರನ ಕರೆ
ತಂದು ಉಂಬುವೆನೆಂದು ಶಪಥವನು । ಮಾಡಿ
ಮಿಂದು ಮಡಿಯನುಟ್ಟು ಮೂರ್ತಿಯನು । ಪೂಜೆ



ಚಂದದಿಂದರ್ಚಿಸಿ ಬೇಗವನು । ಕಂದು
ಕಂಧರ ಕಾಮಾರಿ ಹರಹರಯೆನುತ
ಮಂದಿರ ಪೊರಮಡಲಾ ವನಿತೆಯಳು ॥೪೯॥

ಬಣಗು ಜಿನ್ನನ ಕಿತ್ತು ತ್ರಿಣಯನ ನಿಲಿಸುವ
ದಣಿಯಾಗಲೆಂದು ಸೇಸೆಯನಿಟ್ಟಳು । ರತ್ನ
ಮಣಿಮಯದಾರತಿಯೆತ್ತಿದಳು । ಗುಹ
ಗಣಪರ ಜನಕನ ಸ್ತುತಿಸಿದಳು । ಒಂದು
ಕ್ಷಣಮಾತ್ರ ಆಲಸ್ಯ ಬೇಡೆಂದು ಸತಿಶಿರೋ
ಮಣಿ ತನ್ನ ಇನಿಯನ್ನ ಕಳುಹಿದಳಾಗ ॥೫೦॥

ಶ್ರೀ ಪುತ್ರಗರ್ವವಿಲೋಪರಹಿತ ಪಾಪ
ತಾಪತ್ರಹರ ಜಯ ಜಯಯೆನುತ । ಅಹ
ಗೋಪಸುತನೆ ಕಮಲಾಕ್ಷನುತ । ಗಿರಿ
ಜಾಪತಿ ಷಣ್ಮುಖ ಗಣಪಪಿತ । ಇಂದು
ಕೋಪಾಗ್ನಿನೇತ್ರ ನೀ ಗತಿಯೆಂದು ಪೊರಮಟ್ಟು
ತಾ ಪಥದೊಳಗಿಂತು ಸ್ತುತಿಸುತ ನಡೆದ ॥೫೧॥

ತೊಡೆಗಳದುರಿ ಬೆರಳೊಡೆದಾಗ ರಕ್ತ ಜೋ
ರಿಡುತಲಿ ಬಹು ಶ್ರಮದಿಂ ಸಾಗುತ । ದೇವ
ಕಡುಕಷ್ಟದಿಂ ನೀನೆ ಗತಿಯೆನುತ । ಬಾಳ
ನಡೆಗೆಟ್ಟೆರಡು ಮೊಣಕಾಲೂರುತ । ಅಡಿ
ಗಡಿಗೊಮ್ಮೆ ಮೃಡನೆ ಮೃತ್ಯುಂಜಯ ಹರನೆಂದು
ದೃಢದಿಂದೆ ಪೊಡವಿಯೊಳ್ನಡೆದನಾದಯ್ಯ ॥೫೨॥

ಹೇಳಲಿನ್ನೇನು ನಾ ಬಾಳ ಶ್ರಮದಿ ಮೊಣ
ಕಾಲೊಡೆದು ರಕ್ತ ಸುರಿಯುತಲಿ । ನೋವು
ತಾಳಲಾರದೆ ದೇಹ ಕೆಡೆವುತಲಿ । ಶಂಭು
ಭಾಳಾಕ್ಷನೆಂದು ತಾನುರುಳುತಲಿ । ಹೀಂಗ
ಏಳು ದಿವಸ ಹಗಲಿರುಳು ಪೋಗಲು ಚಂದ್ರ
ಮೌಳಿಯ ಕುರುಹನು ಕಾಣದೆಯಿರಲು ॥೫೩॥

ಘೋರ ಬಿಡುತಲಿ ಕಾಂತಾರದೊಳಗೆ ಮನೋ
ಹಾರ ನೀ ಒಲಿಯೆಂಬೊ ಸಮಯದಲಿ । ಮದ
ನಾರಿ ಬಂದನು ವೃದ್ಧಚರ ರೂಪಿಲಿ । ಎಲೊ
ದಾರು ಎಲ್ಲಿಗೆ ಪೋಪೆ ಶ್ರಮದಿಂದಲಿ । ಗಿರಿ
ಜಾರಮಣನ ಕರೆತಹುದು ನಮಗೊಂದು
ಕಾರಣವುಂಟೆಂದೆ ಗಮಕಾದಿ ಪೋಪೆ ॥೫೪॥

ಅಂಬುವ ನುಡಿಗೇಳಿ ಕುಂಭಿನಿಯೊಳು ಮಹಾ
ಶಂಭು ತಾ ನಿನಗೆಲ್ಲಿ ಸಿಲ್ಕುವನೊ । ನಿನ್ನ
ಡಿಂಬವ ಕೆಡಹಿ ನೀ ಬರುವದೇನೊ । ನನ್ನ
ಅಂಬಕದಿಂ ನೋಡಿ ಮರುಗಿದೇನೊ । ತಣ್ಣ
ನಂಬಲಿಯೆನ್ನಲ್ಲೆ ಉಂಟೀಗ ಮನುಜನೆ
ಉಂಬುಣ ಹೋಗೆಂದ ವೃಷಭವಾಹನನು ॥೫೫॥

ಏತರ ಮಾತಿದು ಮಾಡಿದ ಶಪಥಕ್ಕೆ
ನೀ ತೆವ ಆತನ ಚರಣದಲಿ । ಪ್ರಾಣ
ಘಾತವಾದರೆ ಮುಕ್ತಿ ಸ್ವರ್ಗದಲಿ । ಸೋಮ
ನಾಥನ ಬಿಡೆ ನಾನು ತಾರದಲಿ । ಉಂಬು
ವಾತುರ ಎನಗಿಲ್ಲ ಬಿಡು ಪಥಯೆಂಬುತ
ಭೂತೇಶ ಭವನಾಶನೆಂದುರುಳಿದನು ॥೫೬॥

ಮರಳಿ ನೋಡಲು ಚರ ಮಾಯವಾಗಿರಲಾಗ
ಹರನೆಂದರಿದು ಅಕಟೇನಾಯಿತು । ದ್ರವ್ಯ
ಕುರುಡ ಎಡಹಿದಂತೆನಗಾಯಿತು । ಭಾಗ್ಯ
ಕರ ಬಡವಗೆ ಸಿಕ್ಕು ಬಯಲಾಯಿತು । ಎಂಬ
ತೆರನ ತೋರಿದೆಯಯ್ಯ ಮುನಿದ್ಯಾ ಎನ್ನೊಡನೆಂದು
ಪರಿಪರಿ ಶೋಕದಿ ಮರುಗಿದ ಶರಣ ॥೫೭॥

ಕಡು ಪರದೇಶಿಯ ಹಿಡಿದು ಕಾಂತಾರದಿ
ಬಿಡುವೆ ಶಿವ ನಿಮ್ಮ ಪದಗಳಿಗೆ । ಮನ
ಸಿಡದೆ ನಾ ಪೊರೆದೆನೆಂದು ಈಗ । ತೋರಿ
ಅಡಗಿ ಪೋದೆಯಾ ಎನ್ನ ದೃಗಗಳಿಗೆ । ದುಃಖ
ನುಡಿಗೇಳಿ ಮೃಡ ತನ್ನ ನಿಜರೂಪದಲಿ ಬಂದು
ಬಿಡುಬಿಡು ಶೋಕವೆಂದ್ಹಿಡಿದು ರಂಬಿಸಿದ ॥೫೮॥

ಬಳಲಿದೆ ಬಾರೆಂದು ಸೆಳೆದಪ್ಪಲಾದಯ್ಯ
ಒಳಿತು ಮಾಡಿದೆ ಮುನ್ನ ಕೈಲಾಸದಿ । ವಾಕ್ಯ
ಒಳಹೊರಗಿರುವೆನೆಂಬುತ ತೋರಿದಿ । ಮುಂದೆ
ಸುಳಿದಾಡಕಾಗುದೆ ನಿರ್ದಯದಿ । ಎಲೊ
ತಿಳಿದೆನು ನಾ ನಿನ್ನ ಮನದ ಸಂಕಲ್ಪವ
ಚಲದಂತೆ ಮಾಳ್ಪೆ ನೀ ನಡೆಯೆಂದ ಹರನು ॥೫೯॥

ಏಳು ದಿವಸ ಹೀಂಗ ಬಾಳ ಶ್ರಮದಿ ಬಂದೆ
ನಾಳೆಗೆ ನಿಲಿಸುವೆ ಶಪಥವನು । ಪಂಥ
ಬೀಳಾಗಿ ಬರುವದು ಕೊರತೆಯೇನು । ಮುಂದೆ



ಹೇಳಯ್ಯ ಬರುವಂಥ ಗುರುತವನು । ಪುರ
ದೋಳಿರು ಅಂಧಕ ಹೆಳವನಿಗೆ ಕಣ್ಣು
ಕಾಲುಗಳ್ಬಂದುದೆ ಕುರುಹು ನೋಡೆಂದ ॥೬೦॥

ಹೀಗೆಂಬು ವಚನವ ಕೇಳಿದಾಕ್ಷಣ ಶಿರ
ಬಾಗಿ ಶಂಕರ ನಮೊ ನಮೊಯೆನುತ । ಅನು
ರಾಗದಿ ತೊಡೆಯ ಮೇಲ್ಪವಡಿಸುತ । ಇಂಥ
ನಾಗಭೂಷಣ ಬಂದ ಸೋಮನಾಥ । ನೀವು
ಬೇಗೇಳಿರೆಂದು ಜನರನು ಎಚ್ಚರಿಸುವ್ರೋಲ್
ಕೂಗಿತು ಕುಕ್ಕುಟ ಪುರದ ಮಧ್ಯದಲಿ ॥೬೧॥

ಹರನ ಮಹತ್ವವನರಿವುದಿನ್ನಾರಿಗೇ
ತೆರಯಲು ಮುಸುಕ ಕಂಡನು ಪುರವ । ತನ್ನ
ಅರಮನೆಯೊಳು ಬರಲಾ ಬರವ । ಕಂಡು
ತರುಣಿಯಳು ನಮಿಸೆಯೆತ್ತುತ ಶಿರವ । ಪುರ
ಹರನ ತಂದಂಥ ವೃತ್ತಾಂತವನುಸುರಿದ
ಅರಸಿಯೊಳೊಡನೆ ತಾನತಿ ಹರುಷದಲಿ ॥೬೨॥

ಮಲತ್ರಯ ಗೆಲಿದನು ಒಲಿಸಿದುದು ದಿಟ
ನೆಲದೊಳಗೀ ಸುದ್ದಿ ಬಾರಲೆಂದು । ಶಚಿ
ಲಲನೆಯಿವಂಥ ಡಂಗುರವ್ರುಯೆಂದು । ಪೂರ್ವ
ಚಲದಿ ದಿವಾಕರ ಮೂಡಿನಿಂದು । ಕಣ್ಗೆ
ಚಲುವಾಗಿ ತೋರಲು ಕೇಳಿತ್ತ ಪುಲಿಗೇರಿ
ಯಲಿ ಜಿನ್ನಪೂಜಕರತಿ ತವಕದಲಿ ॥೬೩॥

ವಾರಣದ ಮೇಲೆ ವಾರಿ ಪುಷ್ಪಾದಿಗ
ಳ್ಹೇರಿ ಬಂದರು ತೋರಬಸ್ತಿಯೊಳು । ಘನ
ದ್ವಾರ ಮುಚ್ಚಿರೆ ಅರೆಕದದೊಳು । ಬಲು
ಘೋರಬಡಲು ಎಲ್ಲಿ ಬರದಾಗಳು । ಪುಲಿ
ಗೇರಿಯನಾಳ್ವ ಪರೇಶನ ಬಳಿಗ್ಹೋಗಿ
ಸಾರಿದರಾಗ ಕೌತುಕದ ಸುದ್ದಿಯನು ॥೬೪॥

ಆಡಿದ ಮಾತನು ಕೇಳಿ ಪರೇಶನು
ಕೂಡಿಸಿ ಚತುರಂಗ ಮಾರ್ಬಲಲಿ । ಬಂದು
ನೋಡಿದ ಜಿನ್ನನ ಬಾಗಿಲಲಿ । ಮುಂದೆ
ತೋಡು ಮಾಡುವದೇನುಯೆಂಬುತಲಿ । ಆಗ
ಜೋಡು ಆನೆಗಳ್ಹಚ್ಚಿ ನೂಕಲೆಲ್ಲೆಲ್ಲಿ
ಕೇಡಾಗದಿರೆ ಭೂಪನಚ್ಚರಿಯ ತಾಳ್ದ ॥೬೫॥

ಬೆರಳ ಮೂಗಿನಲಿಟ್ಟು ಸಿರವನಲ್ಲಾಡಿಸುತ
ಬೆರಗಾಗಿ ಭೂವರನಾಡಿದನು । ಎಲೋ
ಹರಭಕ್ತನಾದಯ್ಯ ಪೋಗಿರ್ದನು । ಹೋಗಿ
ಅರಿದು ಬನ್ನಿರಿಯೆಂದು ಮನುಷ್ಯರನು । ಆಗ
ತ್ವರಿತಾದಿ ಕಳುಹಲು ಚರರಾಗ ಬಂದು ಆ
ತರುಣಿ ಶಿರೋಮಣಿಯಳ ಕೇಳುತಿಹರು ॥೧೬॥

ಏ ದೇವಿ ನಿನ್ನಯ ಮೋಹದ ವಲ್ಲಭನು
ಆದಯ್ಯ ಬಂದ ಹದನವ ಪೇಳು । ನಕ್ಕು
ಮೋದದಿ ಮಾತುಗಳಾಡಿದಳು । ಕಾಂತ
ಹೋದಾತ ಬಾರದೆ ನಿಂತ ಕೇಳು । ಅಂದ
ಆ ದೂತರ ಮಾತ ಕೇಳಿದಾಕ್ಷಣ ಬಂದು
ಮೇದಿನಿಪತಿಗಾಗ ಪೇಳಿದರೊಲಿದು ॥೧೭॥

ಬಾರದೆ ಈ ಪರಿ ತೊರೆದು ವಿಪರೀತ
ಸಾರೆಂದನಾದಯ್ಯ ಅರಮನೆಗೆ । ಪರಿ
ವಾರ ಸಹಿತ ಬಂದು ನೋಡುತಾಗೆ । ಮೃದು
ವಾರಣ ವಚನದಿ ನುಡಿಸಲಾಗೆ । ಎದ್ದು
ಆ ರಾಜನೊಡನೆ ಬರಲು ಮುಂದೆ ಹರ ಪೇಳ್ದ
ಕೇರಿಯೋಳ್ಕಂಡನು ಹೆಳವರಂಧಕರ ॥೧೮॥

ಒಡೆಯ ಬಂದುದು ಸತ್ಯವೆಂದರಿಯುತಲವ
ರೊಡಗೂಡಿ ಅಲ್ಲೆ ದೃಢದಿ ಬರಲು । ಬಹು
ಜಡಿದು ಕಾವಟ ಬಂಧನದಿರಲು । ಹಸ್ತ
ಇಡಲಾಗ ದ್ವಾರ ತೆರದು ನೋಡಲು । ಜಿನ್ನ
ಒಡೆದು ಬಿದ್ದಿರೆ ಬೆನ್ನೊಳಡಿಯಿಟ್ಟು ಮೃಡನಿರೆ
ಪೊಡವಿಪ ಸಹ ನಡುನಡುಗಿದರೆಲ್ಲ ॥೧೯॥

ಆ ಪುಲಿಗೇರಿಯೊಳ್ಸಾಸಿರದೇಳ್ನೂರು
ಆ ಪರಜಿನ್ನವನೆಲ್ಲ ವೀಕ್ಷಿಸುತೆ ಸಹ । ಜಿನ್ನ
ಲೋಪಾಗಿ ಶಿರಬಾಗಿ ಬಿದ್ದಿರಲು । ಲಿಂಗ
ಸ್ಥಾಪನೆ ಸುಸ್ಥಿರವಾಗಿರಲು । ತ್ರಾಹಿ
ಶ್ರೀಪರಮಾತ್ಮ ನಿನ್ನಯ ಸರಿಯೆಂಬುವರ್
ಪಾಪಿಗಳ್ಯೆ ಹಹಯೆಂದನಾ ರಾಯ ॥೨೦॥



ಮನದೊಳು ಮರ್ದನವಾಗುತ ರಾಜನು
ಚಿನುಮಯಾತ್ಮಕ ಲಿಂಗ ದೇಹದಲಿ । ಧರಿ
ಸೆನುತಲಿಟ್ಟನು ಭಕ್ತಿಭಾವದಲಿ । ಪಾದ
ವನಜವ ಪಿಡಿಯಲು ಕರುಣದಲಿ । ಪುರ
ಜನ ಸಹ ರಾಯನೆಲ್ಲರ ಗುರುಕರದಿಂದ
ಮನೋಹರವಾದಿಷ್ಟಲಿಂಗವ ಧರಿಸಿ ॥೨೧॥

ಧರೆಯೊಳು ಮರೆಯದೆ ಶಿವಮತ ಘನವೆಂದು
ಮೆರೆಸಿದ ಮತ್ತೆ ವೆಗ್ಗಳಿಸಿದನು । ಭೂಮಿ
ಗರಿದೆಂಬ ಮಹಿಮೆಯ ತೋರಿದನು । ಅಲ್ಲಿಂ
ದಿರದೆ ಕೈಲಾಸವ ಸಾರಿದನು । ಮಾರ
ಹರಗೆ ವಂದಿಸಲಾಗ ಕರುಣದಿಂ ತಕ್ಕೈಸಿ
ಹರುಷದಿಂ ತನ್ನಲ್ಲಿ ಇರಿಸಿದ ಶಿವನು ॥೨೨॥

ಆದಯ್ಯನ ಪುಣ್ಯಚರಿತೆಯ ಭಕ್ತಿ
ಯಿಂದೋದಿ ಬರೆದು ನೆರೆ ಪಠಿಸಿದರೆ । ಜನ
ರಾದವರೊಲಿದಿದ ಕೇಳಿದರೆ । ಮುಕ್ತಿ
ಸಾಧಿಸುವದು ದಿಟ ಭಜಿಸಿದರೆ । ಮತ್ತೆ
ಈ ಧರೆಯೊಳು ಕಾಮನಾಟದ ಪದಗಳ
ಸಾಧುಸಜ್ಜನರು ಸಾರಸದಿಂದ ಕೇಳಿ ॥೨೩॥

ಮಿತ್ರನ ಪುತ್ರ ಸಪಾತ್ರ ಹರತ್ರಯ
ನೇತ್ರ ಪರಮಗೋತ್ರ ಮಂದಿರವ । ಶತ
ಪತ್ರಜಸ್ತೋತ್ರ ಅಮೃತಕರವ । ಪುಣ್ಯ
ಕ್ಷೇತ್ರ ಶ್ರೀಕುಂದಗೋಳದಲಿರುವ । ಗುರು
ಪುತ್ರನಡಿಭೃಂಗ ಸುಪುತ್ರ ಬಸವಲಿಂಗ
ಧಾತ್ರಿಯೊಳೊರೆದ ಚರಿತ್ರೆಯ ಕೇಳಿ ॥೨೪॥

* * *

# ಪುರಾತನರ ಪೂಜೆ



## ಪುರಾತನರ ಪೂಜೆ

ದುಂದುಮೆ ದುಮ್ಮಿ ಸೊಲ್ಲಿಗೆನ್ನಿ ರಿ
ದುಂದುಮೆ ಬಸವಂತನ ಹಬ್ಬ ॥ಪಲ್ಲವಿ॥

ಸತ್ರಗಮನ ವಂದ್ಯಗರ್ವಗಹನ ಹವಿ
ಸತ್ರಭವನ ಶಿರಃಪಾತ್ರನನೆ । ಚಲ್ವ
ಪತ್ರಶರನ ಮದಲೋಪನನೆ । ಉಮೆ
ಪತ್ರಾನನಕೆಸೆವ ಭ್ರಮರನನೆ । ಸೋಮ
ಪತ್ರಾಪ್ತ ಪಾವಕ ತ್ರಿನೇತ್ರ ಎನ್ನತಾ
ಪತ್ರವ ಪರಿಹರಿಸೆನ್ನ ರಕ್ಷಿಪುದು ॥೧॥

ಜಗದೇಕನಾಥನೇ ಭಕ್ತಸಂಪ್ರೀತನೆ
ಅಗಜೆಯ ಕುಂಕುಮಾಂಕಿತ ವಕ್ಷನೆ । ದೇವ
ಅಗಣಿತ ಮಹಿಮ ಅಸುರಶಿಕ್ಷನೆ । ದಿವ್ಯ
ಸುಗುಣಗಣಾನ್ವಿತಜನ ರಕ್ಷನೆ । ನಿನ್ನ
ಬಗೆಬೆಯಿಂದಲಿ ಪೊಗಳುವೆನನುದಿನ
ಸೊಗಸಿದ ಕೊಡುಯೆನ್ನ ಮತಿಗೆ ಮಂಗಳವ ॥೨॥

ಕಥೆಯಲ್ಲ ಸರ್ವರು ಕಂಡಂಥ ಮಾತಿದು
ಕ್ಷಿತಿಯೊಳಗಾದ ವಿಸ್ತಾರವನು । ಬಲು
ಅತಿಚೋದ್ಯವಾದಂಥ ಪೂಜೆಯನು । ಬಹು
ಹಿತದಿಂದ ಸರ್ವರಿಗೊರೆಯುವೆನು । ನೀವು
ಮತಿಯುತರ್ ಮನಸಿಟ್ಟು ಕೇಳ್ವಡೆ ಮುಂದೆ ಸ
ದ್ಗತಿಯಾಗುವದು ಸತ್ಯ ತಪ್ಪದು ನೋಡಿ ॥೩॥

ಪದುಮಭವಾಂಡದೊಳೈವತ್ತುಕೋಟಿಗಾ
ವುದದೊಳು ಸಪ್ತದ್ವೀಪಾಂತರವು । ಮತ್ತಿ
ನ್ನದರೊಳು ತೋರ್ಪವು ನವಖಂಡವು । ಪೃಥ್ವಿ
ಯದರೊಳಗಿರುವ ಚಪ್ಪನ್ನದೇಶವು । ಸಲೆ
ಯದರೊಳಗೊಂದು ರಾಷ್ಟ್ರದಿ ತೋರ್ಪ ಪುರ ಪುಣ್ಯ
ಸದನ ಸಂಶೀಪುರ ವರ್ಣಿಸಲಳವೆ ॥೪॥

ಮರೆಯದೆ ಗುರುಲಿಂಗಜಂಗಮಸೇವೆಗೆ
ಸರಿಯಾಗಿ ತನುಮನಧನಗಳನು । ಅಂಗಿ

ಕರಿಸದೆ ಸವೆಸುವರೆಂಬುತ ಶಿವನು । ಇದ
ಕಿರಲೆಂದು ಸವಶೆಂಬ ನಾಮವನು । ಇಟ್ಟು
ಕರೆದನು ಪರಮಸಂತೋಷದಿಂದೀ । ಪುರ
ಹಿರಿದು ವರ್ಣಿಸುವಡೆ ಶೇಷುಂಗಸಾಧ್ಯ ॥೫॥

ತೋರುವ ಧನದ ವಿಸ್ತಾರದಿಂದಿರುವ ಕು
ಬೇರನಿರುವ ಅಳಕಾವತಿಯೊ । ಚಲ್ವ
ನಾರಿಯರಿಂ ದ್ವಾರಕಾವತಿಯೊ । ಭೋಗ
ವಾರದಿಂ ಮೆರೆವಮರಾವತಿಯೊ । ಮಹ
ಮೇರುವ್ರೋ ಶಿವಗಣವೃಂದ ಸಹಿತ ಮನೋ
ಹಾರದಿಂ ಕಣ್ಗೆ ರಾಜಿಸುವ್ರುದೀ ಪುರುವ್ರ ॥೬॥

ಅಲ್ಲಲ್ಲೆ ಅನ್ನ ಸಂತರ್ಪಣವನುದಿನ
ಅಲ್ಲಲ್ಲೆ ನೀರಕಾರಂಜಿಗಳು । ತೋರ್ಪ
ವಲ್ಲಲ್ಲೆ ಶಿವಶಾಸ್ತ್ರಗೋಷ್ಠಿಗಳು । ಪಾಡ್ವ
ರಲ್ಲಲ್ಲೆ ವೀಣಾದಿನಾದಗಳು । ಮತ್ತಿ
ನಲ್ಲಲ್ಲೆ ಗೀತಸಾಹಿತ್ಯ ಸುನೃತ್ಯವು
ಅಲ್ಲಲ್ಲೆ ಶೋಭನದಿಂದ ರಾಜಿಪುದು ॥೭॥

ಸಾಲ್ಮಳಿಗೆಗಳು ವಿಶಾಲದಿಂ ತೋರುವ
ಮೇಲ್ಮೇಲಂತಸ್ತದ ಮನೆಗಳಿಂದ । ಇರ್ಪ
ಮಾಲ್ಮನೆ ಗೋಪುರ ಚಿತ್ರದಿಂದ । ಬಹು
ಚಾಲ್ಮಹ ಮಾಟದ ಕಿಡಿಕಿಯಿಂದ । ಬಿದ್ದು
ಕಾಲ್ಮರಿದಿಹ ಸಿರಿಲೋಲ್ಮನದವನ ಪುರ
ಆಲ್ಮನಕರಿದು ವಿಶಾಲ್ಮತಿಯರ್ಗೆ ॥೮॥

ದುರುಳರು ದುಷ್ಕರ್ಮ ದುರ್ನೀತಿ ದುರ್ಮೋಹ
ಹಿರಿದಾದ ಮದಮತ್ಸರಂಗಳಿಲ್ಲಾ । ನೋಡ
ಲರಿಗಳು ಕೇಡ ನುಡಿ ನೀಚರಿಲ್ಲಾ । ತಾವ್ರು
ಪರರಿಗನ್ಯಾಯವ ಮಾಡ್ವರಿಲ್ಲಾ । ತೊಂಟ
ಕರು ಕಂಟಕಿಗಳು ಕಠಿಣಹೃದಯರು । ದುರಾ
ಚರಣೆ ಚಾಟಕರಿಲ್ಲ ಎಂದಿಗಾ ಪುರದಿ ॥೯॥

ಬಡಿಬಡಿಯೆಂಬುದು ಭೇರಿಯೊಳಲ್ಲದೆ
ಹೊಡಿಹೊಡಿಯೆಂಬುದು ಪೈರಿನಲಿ । ಮತ್ತೆ
ಕಡಿಕಿಡಯೆಂಬುದು ನೂಲಿನಲಿ । ನೆರೆ
ಮಡಿಮಿಡಯೆಂಬುದು ವಸ್ತದಲಿ । ಇನ್ನು
ಸುಡುಸುಡುಯೆಂಬುದು ಮೆಡಕೆಯೊಳಲ್ಲದೆ
ಕೆಡೆನುಡಿ ಕಾಣೆ ಕಲ್ಯಾಣದಂತಿರಲು ॥೧೦॥



ಇಂತಪ್ಪ ಶುಭಕರವಾದಂಥ ಪುರದೊಳು
ಕಂತುಮರ್ದನ ಶ್ರೀಶಂಕರಲಿಂಗನು । ಬಹು
ಸಂತೋಷದಿಂದಲಿ ನೆಲೆಸಿಹನು । ಭಕ್ತ
ರಂತರಂಗದ ಇಚ್ಛೆ ಸಲಿಸುವನು । ಇರ
ಲಿಂತು ವಿಸ್ತಾರವನಂತವಿಹುದು ಶಿವ
ಸಂತತಾತುಳ ಭಕ್ತರನು ವರ್ಣಿಪೆನು ॥೧೧॥

ಆರೊಳು ಕಲಹವ್ರು ತಲೆದೋರದಂತೆ ಸರ
ಕಾರ ಕಾರಭಾರ ಹುಶಾರದಿಂದ । ಸುವಿ
ಚಾರ ಸದ್ಗುಣ ಮಣಿಹಾರದಿಂದ । ದಯ
ಪೂರ ಸತ್ಕೀರ್ತಿ ವಿಸ್ತಾರದಿಂದ । ಇರ್ಪ
ಮೇರು ಸಮಾನವ್ರು ಧೀರನು ಪರವ್ರುಪ
ಕಾರ ಹಿರೇಬಣದ ಶಿವನಗೌಡನನು ॥೧೨॥

ಆವ ಕಾಲದಲಿ ಸದ್ಭಾವದಿಂದಿರುವಂಥ
ಭಾವಜರೂಪವ ಪೋಲುವನು । ನಿತ್ಯ
ಕೇವಲ ಭಕ್ತಿ ಪರಾಯಣನು । ಮತ್ತೆ
ಸಾವಧಾನದಿ ಸತ್ಯವಾಕ್ಯವನು । ತಾ ಸಂ
ಜೀವನು ಬಡಜನಕಾವನು ಜನ । ಕತಿ
ಜೀವವಾಗಿರುವಂಥ ಜೀವನಗೌಡ ॥೧೩॥

ಸರಸಲಾವಣ್ಯದಿಂದಿರುವನು ಸಜ್ಜನ
ನೆರೆದ ಮಂಡಲಿಯೊಳು ಕೂಡಿಹನು । ನಿತ್ಯ
ಹರಗುರುಭಕ್ತಿಯ ಮಾಡುವನು । ಜೀವ
ಕರುಣಸಾಗರದಂತೆ ತೋರುವನು । ಇಂತು
ಪರಿಯಿಂದ ಮೆರೆಯುವ ಪರಮ ಸಂತೋಷದಿಂ
ದಿರುವಂಥ ಲಿಂಗನಗೌಡನೇನೆಂಬೆ ॥೧೪॥

ಸಿಂಧುಸಮಾನವ್ರು ಸತ್ಕೀರ್ತಿ ನಿರುತದಿ
ಕುಂದದೆಯಿರುವ ಫಕೀರಗೌಡನು । ಭಕ್ತಿ
ನಿಂದ್ರದೆ ಮಾಡ್ವ ದ್ಯಾವನಗೌಡನು । ತಾವ್ರು
ಇಂದುಧರನ ಪೂಜೆ ಚಂದದಿ ಮಾಡುವ
ರಂದು ಇಂದಿಗೆ ಇವರ್ಮೂವ್ವರೇನೆಂಬೆ ॥೧೫॥

ನೀಟಾಗಿ ಮನೆ ಬಲು ಮಾಟಾಗಿ ಮೆರೆಯುವ
ಪ್ಯಾಟಿದೈವಕೆ ಶ್ರೇಷ್ಠವೆನಿಸುವನು । ಚರ
ದಾಟ ದಾಸೋಹವ ಮಾಡುವನು । ನೋಡ್ವ
ನೋಟಕಚ್ಚರಿಯಾಗಿ ಬೀರುವನು । ಗಣ
ಕೋಟಿ ಬರಲು ಅನ್ನವನೀವ ಕೊಟ್ಟರಶೆಟ್ಟಿ
ಗಾಟದಿಂದಿರುವಂಥ ಅನ್ನದಾನಪ್ಪ ॥೧೬॥

ಪಂಚಾನನರೂಪ ಜಂಗಮ ಸಮೂಹಕೆ
ಕಿಂಚಿತುಭೇದವ ಮಾಡದಲೆ । ನಿತ್ಯ
ಪಂಚಭಕ್ಷಾನ್ನವ ನೀಡುತಲೆ । ಮಹಾ
ಪಂಚಸೂತಕಕೆ ತಾ ಸಿಲುಕದಲೆ । ತಾ ನಿ
ರ್ವಂಚಕ ಪಂಚಕ ಪರುಷ ತಾಳಿದಂಥ
ಪಂಚರೊಳಗೆ ಇರ್ಪ ಕೋರಿ ಪಂಚಪ್ಪ ॥೧೭॥

ಪರಮಪರ್ವತ ಕುಲಿಶದಂದದಿಯಿರ್ಪ
ಸರಿಯಾಗಿ ಪೇಳುವ ನ್ಯಾಯವನು । ಸುಳ್ಳು
ಹರಕತು ಮಾತಯಿನ್ನಾಡನವನು । ಬುದ್ಧಿ
ಪಿರಿದು ಸಜ್ಜನರೊಳು ಕೂಡಿಹನು । ತಾ ಸು
ಚರಿತನು ದುರ್ಗುಣ ಮರತನು ಸದ್ಗುಣ
ಭರಿತನು ಕೋರಿಯ ಶಿವಲಿಂಗಪ್ಪನು ॥೧೮॥

ಹರಮತವಾರಿಧಿವರ್ಧನ ಚಂದ್ರಮ
ಅರಿಕುಲಕರಿಹರಿಯಂದದಲಿ । ನಿತ್ಯ
ಪರತರ ಶಿವಪೂಜೆ ಸ್ಮರಣೆಯಲಿ । ದಯ
ಭರಿತನು ಭಯಭಕ್ತಿಭಾವದಲಿ । ಇರ್ಪ
ಮರುಳ ಶಂಕರನಂತೆ ಮೆರೆವ ಲಾವಂಗದ
ಮರುಳ ಸಿದ್ಧಪ್ಪನ ನಾನೇನ ಬಣ್ಣಿಪೆನು ॥೧೯॥

ಶಂಭುಶಂಕರಗತಿಪ್ರೀತಿ ಭಕ್ತರ ನಿಕು
ರಂಭರವಿಂದಕೆ ಸೂರ್ಯನನು । ಸಿರಿ
ಸಂಭ್ರಮದಿಂದಲಿ ಕೂಡಿಹನು । ಭಕ್ತಿ
ಡಂಭಕವಿಲ್ಲದೆ ಮಾಡುವನು । ಮತ್ತೆ
ಕುಂಭಿನಿಯೊಳು ಚಲ್ವ ಕುಂಭಿಯೋಲಮೃತ
ಕುಂಭದಂತಿರುವಂಥ ಕುಂಬಿ ಫಕೀರಪ್ಪ ॥೨೦॥

ಮುದ್ದು ಮಾತಾಡುವ ದೊಡ್ಡ ಬಸಪ್ಪನು
ಶುದ್ಧಮನದ ಚನಬಸಪ್ಪನು । ತಾ ಪ್ರ
ಸಿದ್ಧ ತೆಂಗಿನಕಾಯಿ ಫಕೀರಪ್ಪನು । ನಗೆ
ಮುದ್ದು ಮೊಗದಲಿರ್ಪ ಸಂಗಪ್ಪನು । ಅಲ್ಲೆ
ಯಿದ್ದ ಪಟ್ಟಣಸೆಟ್ಟಿ ಮೊದಲಾದ ದೈವವ
ಶುದ್ಧಾಗಿ ವರ್ಣಿಪೆ ಉಳಿದವರರಿಯೆ ॥೨೧॥

ನಾರಿಯರ್ ಬಲು ಹೊಂತಕಾರಿಯರ್ ದುರ್ಗುಣ
ದೂರೆಯರ್ ಪರಮ ಉದಾರಿಯರು । ಮದ
ವಾರಣನಡೆ ಕುಚಭಾರಿಯರು । ಚಲ್ವ



ವಾರಿನೋಟದ ಸುವಿಚಾರಿಯರು । ತೋರ್ಪ
ವಾರಿಗಿ ಸಖಿಯರು ರತಿರೂಪ ಪೋಲುವ
ವಾರ ಸಖಿಯರಲ್ಲಿ ಶೋಭಿಸುತಿಹರು ॥೨೨॥

ಶಿತಿಕಂಠ ಶಿವನವತಾರ ಜಂಗಮರೂಪ
ಯತಿಗಳು ಬರಲು ಕಾಣುತಲವರು । ಬಹು
ಹಿತದಿಂದ ಉಪಚಾರ ಮಾಡುವರು । ಸ್ವಲ್ಪು
ಖತಿಯಿಲ್ಲದನ್ನವ ನೀಡುವರು । ತಮ್ಮ
ಪತಿಸೇವೆಯಲ್ಲದೆ ಗತಿಯೆಮಗಿಲ್ಲೆಂಬ
ಸತಿಯರು ನಿರುತದಿ ಕಾಣಿಸುತಿಹರು ॥೨೩॥

ಪೃಥ್ವಿಯೊಳಗೆ ಜಾತಮುತ್ತಿಗೆ ತಾ ನೀರ
ಮುತ್ತು ತಂದಿಡೆ ಮುತ್ತ ಹೋಲ್ವದೆ । ನವ
ರತ್ನಕೆ ಕಾಜಿನ ಮಣಿ ಹೋಲುದೆ । ಗುಡಿ
ಕರ್ತೃಲಿಂಗಕೆ ಗುಡಿ ಕಲ್ಲೋಲುದೆ । ಗಣ್ಣ
ಪತ್ರಕಚ್ಚುರಿಯಾಗಿ ತೋರುವ ಶರಣರ್ಗೆ
ಪ್ರತ್ಯೇಕ ಜನರನುಪಮಿಸಬಹುದೆ ॥೨೪॥

ಪಂಕದೊಳಗೆ ಮೃದು ಪಂಕಜ ಪುಟ್ಟಿ ತಾ
ಪಂಕವ ಪಂಕಜ ಕೂಡುವದೆ । ಭ್ರಮ
ರಂ ಕೀಟ ಸೋಂಕೆ ಕೀಟಾಗುವದೆ । ಘೃತ
ಅಂಕುರ ಮರಳಿ ಪಾಲಾಗುವದೆ । ತಾಸು
ಕಿಂಕರ ಶ್ರೀಗುರುಕರುಣವ ಪಡೆದರೆ
ಕಿಂಕರನಾಗಿ ತಾ ಮರಳಿ ಪುಟ್ಟುವನೇ ॥೨೫॥

ಇಂತು ಪ್ರಕಾರದಿ ಇರುವಂಥ ಶರಣರು
ಸಂತತ ಕಲ್ಯಾಣದಂದದಲಿ । ತೋರ್ಪ
ದಂತಿರಲ್ಮುಂದೆ ಸವಿನಯದಲಿ । ಪೇಳ
ನಂತಪುರದ ಸ್ವಾಮಿ ಭೂಮಿಯಲಿ । ತಾ ಸ್ವ
ತಂತ್ರದಿಂದಲಿ ದೇಶ ಸಂಚಾರ ಮಾಡುವ
ದೆಂತು ಪೇಳಲಿವರನೆಂತು ವರ್ಣಿಸಲಿ ॥೨೬॥

ಘೋರ ಸಂಸ್ಕೃತಿಬಂಧದೂರ ಷಟುಸ್ಥಲ
ವಾರಕೆ ಕಲಶದೋಲಂದದಲಿ । ನಿತ್ಯ
ಸಾರವಿಚಾರ ಸಂಪೂರದಲಿ । ಭವ
ವಾರಿಧಿ ಭೈತ್ರನು ಧರಣಿಯಲಿ । ಇರ್ಪ
ಧೀರ ಶಾಂತವೀರಸ್ವಾಮಿಯವರ ಚರ
ಣಾರವಿಂದವ ನಾನು ಪೊಗಳುವೆ ಮನದಿ ॥೨೭॥

ಆರು ವರ್ಣಿಸುವರೀ ಷಟುಸ್ಥಲ ಮೂರ್ತಿಯ
ಆರುವರ್ಗ ಹಿಟ್ಟುಗುಟ್ಟಿಹನು । ಎರ
ಡಾರು ಮನವ ದೂರ ಬಿಟ್ಟಿಹನು । ಮತ್ತೆ
ಮೂರು ಮಲದ ಲತೆ ಸುಟ್ಟಿಹನು । ಹದಿ
ನಾರುಯಿನ್ನೂರು ಸಕೀಲವ ತಿಳಿದೊಂದು
ಮರಿದುನ್ಮನಿ ಸುಖ ಸೂರಾಡ್ವಯತಿಯು ॥೨೮॥

ಅಂದಳೈಶ್ವರ್ಯದಿ ಚಂದದಿ ಕುಳಿತಿಹ
ಹೊಂದಿಲೆಯಿರುವ ಅಪ್ತಾಗಿರಿಯು । ಬಹು
ಅಂದವಾಗಿಹ ಛತ್ರಚಾಮರವು । ಮುಂದೆ
ಸುಂದರ ತೇಜಿಗಳ್ ಹಿಡಿದಿಹವು । ವಾದ್ಯ
ಸಂದಣಿಯಿಂದಲಿ ಬೆಳ್ಳಿಬೆತ್ತದವರು
ಮಂದಹಾಸದಿಂದ ಪೊಗಳುವರೆಂತು ॥೨೯॥

ಮಂಡಲಧೀಶ ಪ್ರಚಂಡ ಬರ್ಪ ನಿಮ್ಮ
ಮಂಡೆ ಬಾಗಿಸಿರೆಂದು ದಂಡವನು । ಪಿಡ
ಕೊಂಡು ವಾದಿಸುವರ ಗಂಡವನು । ಜಗ
ಭಂಡ ಕತ್ತಲೆಗೆ ಮಾರ್ತಾಂಡವನು । ತಿಳ
ಕೊಂಡು ಬಾಳಿರಿ ಎಚ್ಚರೆಂದು ಕೂಗುತ ಬರ್ಪ
ದಂಡಿಗೆ ಪಾಠಕರ ನಾನೇನುಂಬೆ ॥೩೦॥

ಈಶನ ರೂಪನು ಪಾಪವಿಲೋಪನು
ಭಾಸುರ ಕೀರ್ತಿ ಪ್ರಕಾಸನನು । ಭವ
ನಾಶನು ಮುಕ್ತಿಯ ಕೋಶನನು । ಸರ್ವ
ದೇಶವನೆಲ್ಲವ ನೋಡಿದನು । ಸುವಿ
ಲಾಸದಿ ಬರುತಿರೆ ಕಂಡನು ಪುಣ್ಯ ನಿ
ವಾಸವೆಂದೆನುತಲಿ ಹೊಕ್ಕನು ಸಂಶೀ ॥೩೧॥

ಕಂಡರು ಭಕ್ತರು ದಂಡ ಮೂರುತಿಯನು
ತಂಡ ತಂಡದಿ ಜನ ಕೂಡುತಲಿ । ಇದಿ
ರ್ಗೊಂಡು ವಿರತಮಠಕಿಳಿಸುತಲಿ । ಧೀರ್ಘ
ದಂಡ ನಮಸ್ಕಾರ ಮಾಡುತಲಿ । ಮಹಿ
ಮಂಡಲದೊಳು ನಿಮ್ಮ ಕಂಡಕ್ಷಣವೆ ಪಾಪ
ಭಂಡಾಗಿ ಹೋಯ್ತೆಂದು ಸ್ತುತಿಯ ಮಾಡಿದರು ॥೩೨॥

ಬಂದಿತು ರುಧಿರೋದ್ಗರಿ ವತ್ಸರ
ವಿಂದು ಈ ಶ್ರಾವಣಮಾಸದಲಿ । ಇಲ್ಲೆ
ಒಂದು ತಿಂಗಳ ಪಾದಪೂಜಾಗಲಿ । ಕಾರ್ಯ



ಕುಂದದೆ ಮಾಡುವೆವು ಭಕ್ತಿಯಲಿ । ಮನ
ಸಂದೇಹವಿಲ್ಲದೆ ಆಗಲೆಂಬುತ ಭಕ್ತ
ವೃಂದವು ಕೂಡಿ ಬಿನ್ನೈಸಲಾಕ್ಷಣದಿ ॥೩೩॥

ಎಂದ ಭಕ್ತರ ಮಾತ ಚಂದದಿ ಕೇಳಿ ಆ
ನಂದದಿ ಬಿನ್ನಹ ಕೈಕೊಳುತ । ಒಬ್ಬ
ರೊಂದೊಂದು ಪ್ರಸ್ತವ ನೇಮಿಸುತ । ಮತ್ತೆ
ಹಂದರ ಹಾಕೆಂದು ಹೇಳಿಸುತ । ಆಗ
ತಂದರು ಪೂಜೆ ಸಾಹಿತ್ಯವ ಇಮ್ಮಡಿ
ಯಿಂದ ಸಂಭ್ರಮವದು ನಡೆದಿತೇನೆಂಬೆ ॥೩೪॥

ಅಷ್ಟಮದವಿದೂರ ಆಗಮನಿಕರಕೆ
ಶ್ರೇಷ್ಠ ಮುಳಗುಂದ ಸ್ವಾಮಿಗಳವರು । ಮಹಾ
ನಿಷ್ಠೆವಂತರು ಸರ್ವಗುಣಯುಕ್ತರು । ಬಹು
ದುಷ್ಟನಿಗ್ರಹ ಶಿಷ್ಟ ಪ್ರತಿಪಾಲರು । ಪದ
ಅಷ್ಟವಿಧಾರ್ಚನೆ ಷೋಡಶ ಉಪಚಾರು
ತ್ಕೃಷ್ಟದಿಂದಲಿ ಪೂಜೆ ನಡೆದಿತೇನೆಂಬೆ ॥೩೫॥

ಹರಪಾದ ಪೂಜೆಯು ಪರಮ ಸಂತೋಷದಿ
ಪರಿಯಿಂದ ಮಠದೊಳು ನಡೆಯುತಲಿ । ಹೀಂಗ
ಎರಡೊಂದು ಪ್ರಸ್ತವು ಸಾಗುತಲಿ । ಸುದ್ದಿ
ಪರದೇಶದೇಶಕೆ ತೀವ್ರದಲಿ । ತರು
ಳರು ತರುಣೇರು ಕೂಡಿಕೊಂಡು ಜನ
ಬರುವದು ದಾರಿಯ ಹಿಡಿಯದಂದದಲಿ ॥೩೬॥

ಪುಂಡ ಜಂಗಮರಾಗ ಮಿಂಡಜಂಗಮರೆಷ್ಟು
ಖಂಡಿತ ಕೋಲ ತಾ ಪಿಡಿದವರು । ಚೆಲ್ವ
ಮಂಡೆಯು ನಡಗುವ ವೃದ್ಧರರು । ದಿನ
ಗಂಡಂಥವರು ಹಲ್ಲು ಬಿದ್ದವರು । ನೆರೆ
ಜೊಂಡು ಬಿಟ್ಟಂಥವರು ಗಂಡು ಜೋಳಿಗೆ ಚರ
ತಂಡವು ದಾರಿಯೊಳ್ ಬರುತಿಹುದಾಗ ॥೩೭॥

ಗಡಬಡಿಯಿಂದಲಿ ಜಂಗಮ ಸಮೂಹವು
ಎಡವುತ ಬಂದು ಹೊಕ್ಕರು ಅಗಸಿ । ಜನ
ಹಿಡಿಯದ್ಯಾವಲ್ಲಿ ನೋಡಿ ಸಂಶೀ । ಭಿಕ್ಷ
ಕೊಡುವರು ಪಾವಲೆಂಬುತಲಾಸೆ । ಮಾಡಿ
ಹುಡುಗರು ಹಿರಿಯರು ಹರೆಯದವರು ಬಂದು
ಗುಡಿ ಮಠ ಮನೆಯೊಳು ಇಳಕೊಂಡಿಹರು ॥೩೮॥

ಹೊತ್ತು ಆಗುವದೆಂದು ಊಟಕ್ಕೆ ಊರೊಳು
ಒತ್ತರದಲಿ ಕಂತೆಭಿಕ್ಷದಲಿ । ಕಜ್ಜ
ತುರ್ತದಿ ತಂದದ ಸಲಿಸುತಲಿ । ಮಧ್ಯಾ
ಹ್ನೊತ್ತಿಗೆ ಊಟಕೆ ಹೋಗುತಲಿ । ಚರ
ಮೊತ್ತವು ಸುತ್ತಲೆ ಜಲ್ಲೀಲೆ ಉಣುವಂಥ
ಉತ್ತಮ ಅಡಿಗಿಯನೇನ ಬಣ್ಣಿಪೆನು ॥೩೯॥

ಸಂಡಿಗೆ ಶರ್ಕರ ಪರಮಾನ್ನ ಬುಂದೇದ
ಉಂಡಿಗಳ್ಗಾರಿಗೆಯ ನೀಡುವರು । ಘೃತ
ಮಂಡಿಗೆ ಶಾವಿಗೆ ಮಾಡುವರು । ಕಂಚಿ
ಹಿಂಡಿ ಹೋಳಿಗೆ ಹದ ಮಾಡುವರು । ಮಾಲ್ದಿ
ಉಂಡಿ ಸಜ್ಜಿಕ ಬೋನಸರನು ದಿನದಿನ
ಉಂಡು ದಕ್ಷಿಣೆಯನು ತರುವದೇನೆಂಬೆ ॥೪೦॥

ಎಷ್ಟು ಹೇಳಲಿ ನಾನು ಕಾಡ್ವ ಜಂಗಮರನು
ಉಟ್ಟುಕೊಳ್ಳಲ್ಕೆ ಧೋತ್ರವೆಂಬುವರು । ಬೇಕು
ಕಟ್ಟಲ್ಕೆ ವಸ್ತ್ರವೆಂಬುವರು । ನಮ
ಗಿಷ್ಟು ಭಿಕ್ಷವು ಸಾಲದೆಂಬುವರು । ಭಕ್ತಿ
ನಷ್ಟವಾಗುವದೆಂದು ಬೇಡಿದ ಬಯಕೆಯ
ಕೊಟ್ಟು ಸಮ್ಮತವನು ಮಾಡ್ವರೇನೆಂಬೆ ॥೪೧॥

ಇರದೊಂದು ಮಾಸವೀ ಪರಿಯಿಂದ ನಡೆದಿರೆ
ಒರೆದರೊಂದ್ಯುಕ್ತಿ ಸ್ವಾಮಿಗಳವರು । ಇಲ್ಲೆ
ಅರುವತ್ತು ಮೂರು ಪುರಾತನರು । ಪೂಜೆ
ತ್ವರಿತದಿಂದಾಗಬೇಕೆಂತವರು । ಬೇಗ
ಕರಿಸಿ ಭಕ್ತರನೆಲ್ಲ ಪೇಳಿದರಾಕ್ಷಣ
ಹರುಷದಿಂದಾಗಲೆಂಬುತಲಿ ಪೇಳಿದರು ॥೪೨॥

ಒತ್ರದಿಂದಲಿ ತಮ್ಮ ಗೊತ್ತಿಲೆ ಬಿನ್ನಹ
ಪತ್ರವನಾಕ್ಷಣ ಬರೆಸುತಲಿ । ಜಗ
ಕರ್ತರ ಪಾದಕೆ ಕಳಹುತಲಿ । ಸುಚ
ರಿತ್ರ ಚರಮೂರ್ತಿಗಳ್ ಕೂಡುತಲಿ । ತಮ್ಮ
ಮಿತ್ರ ಬಾಂಧವರನು ಕರಿಸಿಕೊಂಡಿತು ಜನ
ಚಿತ್ರದಿ ರಚಿಸುವ ಹಂದರವನೇನೆಂಬೆ ॥೪೩॥

ಮಾಲಿನಂದದಿ ಪೂಜೆ ಮಂಟಪದೊಳು
ಸಾಲುಸಾಲಿಂದ ತೋರುವ ಕಂಬಗಳು । ಸುತ್ತ
ಜೋಲಿಟ್ಟ ಮುತ್ತ ಜಲಾರಗಳು । ಜ್ಯೋತಿ



ಜಾಲ ಬೆಳಗು ಬಿಲ್ಲದ್ವಾರಗಳು । ಬುದ್ಧಿ
ಸಾಲದು ವರ್ಣಕೆ ಮೇಲ ಸಮಾನ ವಿ
ಶಾಲ ಕಣ್ಣಾಲಿಗಾಶ್ಚರ್ಯವಾಗಿಹುದು ॥೪೪॥

ಏನೆಂಬೆ ಸುತ್ತರುವತ್ತುಮೂರ ಕಾನಿ ಕ
ಮಾನದೊಳಗೆ ಲತೆತರುಗಳಿಂದ । ಮಾಲೆ
ತಾನಿಟ್ಟ ಕನ್ನಡಿಮಾಲಿನಿಂದ । ಬಹು
ಚಾನವಾಗಿರುವಂಥ ಚಾನದಿಂದ । ಈ ನ
ವೀನ ಮಂಟಪವ ವರ್ಣಿಸುವದಾಗದು ಧರೆ
ಮಾನವರಿಂಗೆ ಬ್ರಹ್ಮಂಗೆ ಅಸಾಧ್ಯ ॥೪೫॥

ಸುರಪತಿಪುರದಂತೆ ರಂಭಸಹಿತವಾಗಿ
ಹರನಂತೆ ಕುಮುದ ಶೋಭಿತಗಳಿಂದ । ರತಿ
ವರನ ಅಸ್ತ್ರದಂತೆ ಕಮಲಗಳಿಂದ । ಮುರ
ಹರನಂತೆ ವರ ಸುದರ್ಶನಗಳಿಂದ । ಲಂಕ
ಗಿರಿಯಂತೆ ನವರತ್ನ ರಂಜಿಪ ಪಣಜೆಯ
ಮೆರೆವ ಮಂಟಪವನು ವರ್ಣಿಸಲಳವೆ ॥೪೬॥

ಪದುಳದಿಂ ನೋಡಲು ಮಂಟಪ ಮಧ್ಯದಿ
ಕದಳಿಯ ಫಲಗಳ ಕಟ್ಟಿಹರು । ಚಲ್ವ
ಮೃದು ನಾರಿಕೇಳಿಳೆ ಬಿಟ್ಟಿಹರು । ಮತ್ತೆ
ಸದಮಲ ತೋರಣ ಕಟ್ಟಿಹರು । ಮತ್ತಿ
ನ್ನದರ ಮೇಲಿರುವ ಪತಾಕೆಗಳ್ ನೋಡುವ
ನೆದರಿಗೆ ಮನೋಹರವಾಗಿ ರಾಜಿಪುವು ॥೪೭॥

ಬಿಡದೆ ಹಂದರವು ಸಿಂಗರದಿಂದ ನಡೆದಿರೆ
ಪೊಡವಿ ದೇಶಕೆ ಸುದ್ದಿ ದೂರದಲಿ । ಜನ
ಬಿಡದೆ ಬಂದಿತು ನೋಡ್ವಪೇಕ್ಷೆಯಲಿ । ಬಂದ
ಗುಡಿ ಮನೆಮಾಳಿಗೆ ಸಾಲದಲಿ । ಈಶ
ದೃಢ ಚರಮೂರ್ತಿಗಳ್ಮೆರವಣಿಗೆಯು । ದಂಡಿ
ಗಡರಿಸಿ ಬರುವ ಸಂಭ್ರಮವೇನೆಂಬೆ ॥೪೮॥

ಪೊಡೆವ ತಮ್ಮಟ ಭೇರಿ ಗಿಡಿಬಿಡಿ ನಿಸ್ಸಾಳ
ಹಿಡಿವಂಥ ಕಾಳಿ ನಪೂರಿಗಳು । ಕರ್ಣಿ
ನುಡಿವ ಸುಸ್ವರದ ಸ್ವದಾನಿಗಳು । ಅಲ್ಲೆ
ಫಡಫಡೆಂಬುವ ಸಂಪ್ರದಾನಿಗಳು । ವಾದ್ಯ
ಗಡಣದಿಂ ಪಾತ್ರಸಮ್ಮೇಳದಿ ಪುರದಿಂದ
ನಡೆದಿತು ಸಂಭ್ರಮದಿಂ ಮೆರವಣಿಗೆ ॥೪೯॥

ಕುಡಿಕೆ ಹೂಬತ್ತಿ ಬಿರಸು ತಾರಮಂಡಲ
ಅಡಿಗಡಿಗಲ್ಲಿಗೆ ಹಚ್ಚುವರು । ಕೋಲ
ಪಿಡಿದು ಹಗಲಪ್ರಭೆ ಚುಚ್ಚುವರು । ಜನ
ಹುಡುಗರು ಪರವಿಲ್ಲ ನೋಡುವರು । ಚಲ್ವ
ಮಡದೇರು ತಮ್ಮಯೆದಿಯ ಮೇಲಿನ ಕುಚ
ಹಿಡಿದರೆ ಎಚ್ಚರಿಲ್ಲದಲೆ ನಿಂತಿಹರು ॥೫೦॥

ಧರಣಿದೇವತೆಯವಳು ಪರಮ ಸಿಂಗರವನು
ಧರಿಸಿ ಸಂಭ್ರಮವನ್ನು ಬೀರುವಳು । ಇಲ್ಲಿ
ಪರಮವೈಭವವನ್ನು ನೋಡಿದಳು । ಮತ್ತೆ
ನರರ ಮನಕೆಯೆಲ್ಲ ಅರಿತೆಂದಳು । ಸುದ್ದಿ
ಒರೆವೆನು ಸ್ವರ್ಗದ ಪರಿಗಂಬದೋಲಾಗ
ಭರದಿಂದ ಬಾಣ ಅಂಬರಕೇರುತಿಹವು ॥೫೧॥

ಬಂದರು ಇಂತಪ್ಪ ವೈಭವದಿಂದಲಿ
ಹಂದರದೊಳು ತಾವು ನಿಲ್ಲುತಲಿ । ಒಬ್ಬ
ರೊಂದೊಂದು ಮಂಟಪ ಹೊಂದುತಲಿ । ಪೂಜಾ
ನಂದಕನನುಕೂಲವಾಗುತಲಿ । ನಾವು
ಎಂದೆಂದು ಕಾಣೆವೀ ಪುರದೊಳಗೆಂಬುತ
ವೃಂದಗಣಾಧೀಶರೆಂಬುತಲಿಹರು ॥೫೨॥

ಮೃಡನ ರೂಪದ ಪುರತನರ ಪೂಜೆಗೆವೊಂದು
ಕಡಿಮೆಯಾಗದೆ ಬಂದು ಕೂಡುತಲಿ । ಅಲ್ಲೆ
ಪೊಡೆವ ಜೇಗಟೆ ಗಂಟೆ ನಾದದಲಿ । ಕಪ್ರ
ಸುಡುವರು ಧೂಪದ ಹೊಗೆಯಿಂದಲಿ । ಕಾಯಿ
ಒಡೆವರು ಗಣನೆಯಿಲ್ಲದಾಶೀರ್ವಾದ
ಕೊಡುವರೀ ಪರಿ ಪೂಜೆ ಮುಗಿದಿತೇನೆಂಬೆ ॥೫೩॥

ಮಜ್ಜನ ನೀಡಿಸಿ ಉಳಿದಂಥ ಚರವಾಗ
ಸಜ್ಜಿಗೆ ಪಂಕ್ತಿಯ ಕೂಡ್ರುತಲಿ । ಘೃತ
ಸಜ್ಜಕದುಂಡೆಯ ನೀಡುತಲಿ । ತಾವು
ಹೆಜ್ಜೆಹೆಜ್ಜೆಗೆ ನಿಂತು ಕೇಳುತಲಿ । ಮೋಟ
ಮರ್ಜಿಯಿಲ್ಲದೆ ಬೇಡಿದಂಥ ಪದಾರ್ಥವ
ಸಜ್ಜನರ್ನೀಡಿ ಊಟವ ಮಾಡಿಸಿದರು ॥೫೪॥

ಅರುವತ್ತುಮೂರು ಪುರಾತರ ಪಾದಕ್ಕೆ
ಸರಿಯಾಗಿ ಉಡುಗರೆ ಸಲ್ಲುತಲಿ । ಮಿಕ್ಕ
ಚರಸಮೂಹಕೆ ಅರ್ಧಶುಭ್ರದಲಿ । ಹಿಂದೆ



ಸರಿದುಳಿದವರ್ಗೆ ತಾಬಂಡಿಯಲಿ । ಭಿಕ್ಷ
ಪರಿಯಿಂದ ನಾಲ್ಕು ಸಾವಿರಕಾಗ ಕೊಟ್ಟರು
ಹರಸುತ ಗಣ ಬಲು ಹರುಷದಿಂದಿಹರು ॥೫೫॥

ಹವಣಿಸಬಾರದು ಹಲವು ಪ್ರಕಾರದಿಂ
ಸವನಿಲ್ಲ ಸ್ವಾಮಿಗಳೆತ್ನಕಿನ್ನು । ಸಾಹಿ
ತ್ಯವು ಕಡಿಮಿಲ್ಲ ಇನ್ಯಾತಕಿನ್ನು । ನಿತ್ಯ
ದಿವರಾತ್ರಿಯೊಳು ನಿದ್ರೆ ದೊರಕದಿನ್ನು । ಕಂಡು
ಭುವನದೊಳ್ ಪ್ರಖ್ಯಾತವಾಗಲೆಂಬುತಲೀಗ
ಅವಸರದಿಂದ ಈ ಕವಿತೆ ಮಾಡಿದೆನು ॥೫೬॥

ಬಿಂದು ವ್ಯಂಜನ ಅಡಿನೇಮ ಪ್ರಾಸಗಳನು
ಒಂದರಿತವನಲ್ಲ ಕಂದನನು । ಮನ
ಬಂದಂತೆ ಹಾಡಿದೆ ಚರಿತೆಯನು । ಇದ
ಕೊಂದಡಿ ಪ್ರಾಸಗಳ್ ಬಿದ್ದುದನು । ಮುದ್ದು
ಕುಂದಗೋಳದ ಗುರುಬಸವಲಿಂಗಾಖ್ಯನ
ಕಂದನ ಜರಿಯದೆ ತಿದ್ದಿವೋದುವುದು ॥೫೭॥

* * *

# ಕೀಚಕ ವಧೆ



## ಕೀಚಕ ವಧೆ

ದುಂದುಮೆ ಎಂದೆಂದು ಪಾಡಿರಿ ಜಾಣಾಽ
ದುಂದುಮೆ ಬಸವಂತನ ಹಬ್ಬ । ॥ಪ॥

ಶ್ರೀಗುರು ನಿಮ್ಮಯ ಚರಣಾರವಿಂದ
ದಾಗರಕೇನುಸುರ್ವೆ ಖಾತ್ರಿಗಳನು । ದಯ
ದೀಗ ಕೌತುಕ ಮಾತುಗಳನು । ಅತಿ
ಪ್ರಾಸ ಬೀಳದ್ದಾಂಗ ಪದಗಳನು । ಮುಂದೆ
ಲೇಸಾಗಿ ಖಾತ್ರಿಯನು ಸಾಗಿಸುಯೆಂದು–
ಲ್ಲಾಸದಿಂದಲಿ ಎನ್ನ ಮಾತಿಗೆ ಮಂಗಳವ ॥೧॥

ಉರ್ವಿಯೊಳಗ ಶ್ರೇಷ್ಠವಾದ ವಿರಾಟನ
ಪರ್ವದ ಕಥನವ ಪೇಳುವೆನು । ಕೇಳು
ಉರ್ವಿ ಜನರಿಗೆಲ್ಲ ಹೇಳುವೆನು । ಎನ್ನ
ಗರ್ವವನೆಲ್ಲ ಸಂಹರಿಸುವೆನು । ಮುಂದೆ
ತಂದೆಯ ಕರುಣದಿ ಮಾಡುವೆ ಪದವನು
ಚಂದದಿ ಗಣಪನೆ ಕೊಡು ಬೇಗ ಮತಿಯ ॥೨॥

ಕ್ಷತ್ರಿಯ ವಂಶದೊಳಿರ್ದ ಧರ್ಮರಾಜ
ಧಾತ್ರಿಯೊಳು ವನವಾಸ ಪೋಗುತಲಿ । ದೊಡ್ಡ
ಕ್ಷೇತ್ರಗಳೆಲ್ಲವನರಸುತಲಿ । ಅಂದು
ಧಾತ್ರಿಯೊಳಗೆ ತಾನು ತಿರುಗುತಲಿ । ಮುಂದೆ
ಪಾರ್ಥ ನಕುಲ ಸಹದೇವ ಭೀಮರು ಮತ್ತೆ
ಗುರ್ತವನು ತಪ್ಪಿಸಿ ತಿರುಗುತಲಿಹರು ॥೩॥

ವನವಾಸ ತಿರುಗುತ ವನಿತೆ ದ್ರೌಪತಿಯನು
ವಿನಯದಿ ಬಾರೆಂದು ಕರೆವುತಲಿ । ತಮ್ಮ
ಮನದೊಳು ಚಿಂತೆಯ ಮಾಡುತಲಿ । ಅಕೊ
ಧರ್ಮರಾಜನ ಮುಂದೆ ಹೇಳುತಲಿ । ಪಾರ್ಥ
ವರ್ಮವು ತಿಳಿಯದು ಉರ್ವಿಯ ಮೇಲಿನ್ನು
ಕರ್ಮವ ಕಳೆವುದು ಇಂದು ಧರ್ಮಜನು ॥೪॥

ವನವಾಸ ತಿರುಗುತ ವನಿತೆಯ ಕರಕೊಂಡು
ವಿನಯದಿ ಕಾನನದೊಳಗಿರಲು । ದೊಡ್ಡ
ಘನವೃಕ್ಷ ಬನ್ನಿ ಮಹಾಕಾಳಿರಲು । ತಾವಾ

ಗ ನಾಲ್ವರು ತಿರುಗುತಲ್ಲಿಗೆ ಬರಲು । ಮುಂದೆ
ವಿನಯದಿ ತಮ್ಮ ಕರೊದೊಳು ಇದ್ದಂಥ
ಘನ ಸರಳುಗಳನು ಇಟ್ಟರು ಬೇಗದಲಿ ॥೫॥

ಇಟ್ಟು ಕೈದುಗಳನು ಮುಟ್ಟಿ ಶರಣು ಮಾಡಿ
ಕೊಟ್ಟೇರಿ ಯಾರಿಗೆ ಎಂದೆನುತ । ಬಹು
ನಿಷ್ಠೆಯಲಿ ಬನ್ನಿ ಮಾತಾಡಿಸುತ । ತಾಯಿ
ಇಟ್ಟೇವು ಕೈದುಗಳ ಬೇಗೆನುತ । ನಮ್ಮ
ಹುಟ್ಟಿದ ವನವೇ ಸಾಕ್ಷಿಯೆಲೆ ದೇವಿ
ಘಟ್ಯಾಗಿ ಕಾಯವ್ವ ಬನ್ನಿ ಮಹಾಕಾಳಿ ॥೬॥

ವನವಾಸದೊಳು ಒಂದು ವರ್ಷ ಅಜ್ಞಾತ
ವನು ಕಳೆಯಲಿ ಬೇಕು ಸತ್ಯಕಾಗಿ । ನಾಮ
ರೂಪ ಮಾಜಿಕೊಂಡು ಸುಮ್ಮನಾಗಿ । ಧರ್ಮ
ರಾಜನು ತಾನೀಗ ಶ್ರೇಷ್ಠನಾಗಿ । ಎಲ್ಲ
ಅನುಜರು ತಮ್ಮ ರೂಪ ಬದಲಿಸಿಕೊಂಡು
ಮೌನದಿ ವಿರಾಟನಗರಕೈದಿದರು ।೭॥

ಬಂದು ವಿರಾಟನ ಸದರಿನೊಳಗೆ ತಾವು
ಚಂದದಿ ನಿಂತುಕೊಂಡೇಳುತಲಿ । ನಮ
ಗೊಂದೊಂದು ಚಾಕರಿ ಬೇಕೆನುತಲಿ । ನೀವೆ
ತಂದೆಯು ಎಂದು ಕೊಂಡಾಡುತಲಿ । ಯಮ
ನಂದನ ಪೇಳಲು ಅಂದು ವಿರಾಟನು
ಚಂದವಾಯಿತೆಂದು ಮುಂದಕ್ಕೆ ಕರೆದ ॥೮॥

ಮುಂದಕ್ಕೆ ಬಂದು ಶರಣುಮಾಡಿ ನಾಲ್ವರು
ಹಿಂದಕ್ಕೆ ಸರಿವಂಥ ಸಮಯದಲಿ । ದ್ರೌಪದಿ
ಕಂಡು ವಿರಾಟನ ಮನಸಿನಲಿ । ಚಂದ್ರ
ಮುಖಿಯಳ ಮುಖನೋಡಿ ಚಿಂತಿಯಲಿ । ತನ್ನ
ಮಂದಗಮನೆಯಳ ಕರೆದು ಹೇಳಿದನಾಗ
ನಂದಿನಿಯಳ ಕರಕೊಂಡು ಹೋಗೆಂದ ॥೯॥

ದ್ರೌಪತಿಯನು ತನ್ನ ಸತಿಯ ಬಳಿಯಿಟ್ಟು
ಬೇಕಾದ ಕೆಲಸವ ಹೇಳೆನುತ । ತಂಗಿ
ಒಳೆಯಕ್ಕ ಬಾರೆಂದು ಕರೆದೊಯ್ಯುತ । ದಿನ
ಊಟಕ್ಕೆ ಮಾಡು ನಮಗೆಂದೆನುತ । ಇಂದು
ಬಾಳುಳ್ಳ ಮಗಳಿಗೆ ಬಡತನ ಬಂದಿದೆ
ಬಾರವ್ವ ಭಾಮಿನಿಯೆಂದು ಕರೆದಳು ॥೧೦॥



ಬಂದೆನಕ್ಕ ಎಂದು ಸಂದೇಹವಿಲ್ಲದೆ
ಚಂದದಿ ಒಳಯಕ್ಕೆ ಹೋದಳಾಗ । ಅಕ್ಕ
ಇಂದೇನು ಕೆಲಸವು ಹೇಳಿರೀಗ । ಇಂದು
ಎಂದಾಗ ಮನಿಯೊಳು ಕೇಳುತಾಗ । ಮನ
ನೊಂದು ಹೃದಯ ಕಳೆಗುಂದಿ ದ್ರೌಪದಿ ತಾನು
ಚಂದದಿ ಅನ್ನವ ಮಾಡುತ್ತಲಿಹಳು ॥೧೧॥

ಧರ್ಮರಾಜನು ಪಾರ್ಥ ನಕುಲ ಸಹದೇವರು
ನಿರ್ಮಲದಿಂದಲ್ಲಿ ಇರುತಿರಲು । ಭೀಮ
ತಾ ಮಡಿಹೊತ್ತು ನೀರ ತರುತಿರಲು । ತಮ್ಮ
ರೂಪವ ತಿಳಿಯದೆ ಇರುತಿರಲು । ಮುಂದೆ
ಆಗುವ ಕಥೆಯನು ಹೇಳುವೆ ಕೇಳಿರಿ
ಭೋಗವಂತರು ಬೇಗ ಮನಸಿಗೆ ತಂದು ॥೧೨॥

ವನವಾಸ ತೀರೋದು ಸನಿಯಕ್ಕ ಬಂದಿತು
ಮನೆಯೊಳಗ ಇದ್ದಂಥ ಕೀಚಕನು । ತಾನು
ಒಂದಿನ ದ್ರೌಪದಿಯ ಕಂಡಾನು । ಆಗ
ಮನ ಮರುಳುಗೊಂಡು ನಿಂತಿಹನು । ಇವ
ಳೆಲ್ಲಿಯವಳು ಎಂದು ಅಕ್ಕನ ಕೇಳಲು
ಎಲ್ಲಾನು ತಮ್ಮಗೆ ಹೇಳುತಲಿಹಳು ॥೧೩॥

ಬಾಲೇರ ಕೂಡಿ ಈ ನಾರಿ ಬಂದಳೊ ಈಕಿ–
ದಾರು ನಾನರಿಯೆನು ಕೇಳೊ ತಮ್ಮ । ಬಲು
ವಯ್ಯಾರ ಮಾಡುತಾಳೆ ಕೇಳಿರಮ್ಮ । ಬಹು
ಭಾರಿ ಕಾಣಸ್ತಾಳೆ ನೋಡಿರಮ್ಮ । ಇಂದು
ನಾರೇರ ಸಮೂಹದಿ ಸೂಚು ಬಡಿದು ಮತ್ತೆ
ವಾರಿಗೆ ನಿಂತಳು ಕೀಚಕನಕ್ಕ ॥೧೪॥

ಭ್ರಾಂತಿ ಹತ್ತಿ ಆಗ ನಿಂತು ಮಾಡಾಡುತ
ಕಾಂತೆ ನೀ ಯಾರವ್ವ ಎಂದೆನುತ । ಬಲು
ಚಿಂತೀಲಿ ತಾನು ಮಾತಾಡಿಸುತ । ಕಾಮ
ತಂತ್ರಕ್ಕೆ ದೇಹದ್ದುತ್ತರ ಹೋಗುತ । ಕೀಚ
ಕಂತು ತಾ ನಿಂತನು ಕಾಂತೆಯಮುಖ ನೋಡಿ
ಭ್ರಾಂತನಾಗಿ ತಾನು ಬಿಟ್ಟಾನ ಬಾಯ ॥೧೫॥

ನಳಿತೋಳುತಳ ಕಂಡು ಕಳವಳಗೊಳ್ಳುತ
ಇಳಿದನು ಚಿಂತಿಲೆ ಭೂಮಿಗಿಂದ । ಛಾಳ
ಹಲ್ಲು ಬೆನ್ನು ಬಾಯಿ ತೆಗೆದು ಮುಗಿಲಿಗಿಂದ । ಇಂಥ

ಹೆಣ್ಣನು ಕಣ್ಣಿಲೆ ಕಾಣೆನೆಂದ । ಮುಂದೆ
ಇನ್ನೇನು ಉಳಿಯೆನು ಈಕಿ ರೂಪವ ನೋಡಿ
ಕನ್ನೆಯ ವಶಮಾಡಿಕೊಡಿಂದು ನನಕ್ಕ ॥೧೬॥

ತೋಳ್ತೊಡಿ ಬಾಳೆಯ ದಿಂಡಿನಂಥವಳ
ಕಾಲ್ಬೆರಳುಗಳ್ ಸಣ್ಣಾಗಿ ಕಾಣಿಸುತ । ಕುಚ
ಬಟ್ಟುದರ ಇಂಪಾಗಿ ತೋರಿಸುತ । ವಾರಿ
ನೋಟದಿಂದ ನೋಡುತ ಪೋಗುತ । ಇಂಥ
ನಾರಿಯು ಕೈ ವಶವಾಗದಿದ್ದರೆ ಎನ್ನ
ಶರಿರ ವ್ಯರ್ಥವೆಂದು ನುಡಿದ ಕೀಚಕನು ॥೧೭॥

ಮಧುರ ಕೋಕಿಲವೆಣ್ಣು ಸ್ವರವೆತ್ತಿ ನುಡಿದರೆ
ಕಿವಿಯೊಳು ಹಾರಿಯು ಹಾಕಿದಂತೆ । ಎನಗೆ
ಸಿಡಿಲು ಹೊಡೆದು ಜೀವ ಝಲ್ಲೆಂದಂತೆ । ಘುಡಿ
ಘುಡಿಸುವ ಹುಲ್ಲೆಯ ಆರ್ಭಾಟದಂತೆ । ಇಂದು
ಮಡದಿಯ ಕಂಡು ನಾ ಬಿಡಲಾರೆನೆಂಬುತ
ಗಡಗುಟ್ಟಿ ಹೊರಳುತ ನೆರಳುತಲಿಹನು ॥೧೮॥

ಕನ್ನಡಿ ಕದಪಿನ ಮುಖವನು ಕಾಣುತ
ತಾನು ಎಚ್ಚರದಪ್ಪಿ ನಿಂತಿಹನು । ಮತ್ತೆ
ಇನ್ನೇನು ಗತಿಯೆಂದು ಆಡಿದನು । ಬೇಗ
ತನ್ನ ಅಕ್ಕನ ಕರೆದ್ಹೇಳಿದನು । ಇಂಥ
ಚನ್ನೆಯ ವಶಮಾಡಿ ಕೊಟ್ಟರೆ ಎನ್ನಯ
ಪುಣ್ಯಕ್ಕೆಣೆಯುಂಟೆ ಮೂರು ಲೋಕದಲಿ ॥೧೯॥

ಒಬ್ಬ ದೂತನ ವಾರಿಯೊಳು ನಿಂತು ತನ್ನಯ
ಹುಬ್ಬಿಗೆ ಕೈಹಚ್ಚಿ ನೋಡಿದನು । ಇಂಥ
ಹೆಣ್ಣಿನ ಸಮನಿಲ್ಲ ನೋಡೆಂದನು । ಬಣ್ಣ
ನಿಂಬಿಯ ಹಣ್ಣು ಕಾಣೆಂದನು । ಇಂಥ
ಹೆಣ್ಣಿನ ರೂಪವ ಕಂಡು ಸೈರಿಸಲಾರೆ
ಇನ್ನೇನು ಗತಿಯೆಂದು ಅಂದ ಕೀಚಕನು ॥೨೦॥

ಬಡನಡು ಬಳಕುವ ಹೆಣ್ಣಿನ ನಡಿಗೆಯು
ನಡೆದರೆ ಮದ್ದಾನೆಯಂದದಲಿ । ಬಲು
ನುಡಿವಳು ಸ್ವರ ಕೋಕಿಲೆಯಂದದಲಿ । ತಾನು
ಕಡೆಗಣ್ಣ ನೋಟದಿ ನೋಡುತಲಿಹಳು । ಇಂಥ
ಸುಂದರಿ ಸುಗುಣಿ ಇಂದಾಗದಿರೆ ಎನಗೆ
ಇನ್ನೆಂದಿಗೆ ಆಗೋದು ಎಂದ ಕೀಚಕನು ॥೨೧॥



ಸ್ಮರನ ತಾಪವು ಹೆಚ್ಚಿ ಮರುಗುತಲಾಕ್ಷಣ
ಕರೆದನು ಬಾರೆ ನೀ ಬಾರೆನುತ । ಬಾಯಿ
ದೆರೆದನು ಹೇಳು ಹೇಳೆಂದೆನುತ । ಕೈಯ
ಮುಗಿವೆನು ನೀರೆ ನೀ ಪೇಳೆನುತ । ನಿನ್ನ
ನಗೆಗೆ ನಾ ಮರುಳಾದೆ ಲಗುಬಗೆಯಿಂದಲಿ
ಬಗೆಯ ನಿನ್ನದು ಹೇಳು ಎಂದ ಕೀಚಕನು ॥೨೨॥

ಎನ್ನ ಬಗೆಯ ಭಾವ ಇನ್ನೇನು ನೀ ಕಂಡೆ
ಬಿನ್ನಾಣ ಮಾತನಾಡುದು ಸಲ್ಲವೊ । ಪರ
ಹೆಣ್ಣಿಗೆ ಮರುಳಾಗುದುಚಿತಲ್ಲವೊ । ನಿನ್ನ
ಕಣ್ಣು ಕೀಳಿಸುವೆನು ಪೋಗೆಲವೊ । ಎಂದು
ಘರ್ಜಿಸಿ ನುಡಿಯಲು ಮಡದಿ ದ್ರೌಪದಿ ತಾನು
ಸರ್ಜಿಸಿ ಹಿಂದಕ್ಕೆ ಸರಿದ ಕೀಚಕನು ॥೨೩॥

ಸರಿದು ಹಿಂದಕೆ ನಿಂತು ಸರಸದಿ ಮಾತಾಡು
ತಿರೆ ಹೆಣ್ಣೆ ನೀನಿಗ ಏಳೆನುತ । ನಿನ್ನ
ನಾಳ್ವರ ಹೆಸರು ಹೇಳೆಂದೆನುತ । ಬಂದು
ಕೂಳಿಗೆ ಸೇರೀರಿ ಎಂದೆನುತ । ಇಂಥ
ಖೂಳ ಕೀಚಕ ನುಡಿವಂಥ ನುಡಿಯ ಕೇಳಿ
ಘೋಳಿಟ್ಟು ಮನದಲ್ಲಿ ಚಿಂತೆ ಮಾಡಿದಳು ॥೨೪॥

ಬಡವರಿಗೆ ಹೊತ್ತು ಬಂದ ವ್ಯಾಳ್ಯೇದಲ್ಲಿ
ಕಿಡಿಗೇಡಿ ಮಾತನಾಡೋದು ಸಲ್ಲವೊ । ನಿನ್ನ
ತುಡುಗ ಬೆರಸುವದು ಇದು ಸಲ್ಲವೊ । ನೀನು
ಕಿಡಿಗೇಡಿತನ ಮಾಡುದುಚಿತಲ್ಲವೊ । ಎಂದು
ಮಡದಿ ದ್ರೌಪದಿ ತಾನು ನುಡಿಯಲಾಕ್ಷಣ
ಗಡಬಡಿಸುತ ಕಾಡುತಲ್ಲಿರ್ದ ಕೀಚಕನು ॥೨೫॥

ಬಡತನ ಬಂದರೆ ದುಡುಕು ಮಾಡುದು ಸಲ್ಲ
ಕೊಡುವೆನು ವಸ್ತವಡವಿಯೆನುತ । ಕೈಯೊ
ಳಿಡುವೆನು ವಂಕಿ ಹರಡಿಯೆನುತ । ಎನ್ನ
ಮಡದಿ ನೀನಾಗು ಇಂದಿಗೆ ಎನುತ । ಮತ್ತೆ
ತುಡುಗು ಬುದ್ಧಿಯಲಿಂದ ಬಿಡದೆ ಕಾಡುತಲಿಹನು
ಕಡುಚೆಲ್ವೆ ದ್ರೌಪದಿಯನು ಕಂಡು ಖಳನು ॥೨೬॥

ದುಡುಕು ಮಾಡೂದು ಸಲ್ಲದೆಂದು ದ್ರೌಪದಿ ತಾನು
ಕಡುಸಿಟ್ಟಿನಿಂದಲಿ ನುಡಿಯುತಲಿ । ನಿನ್ನ
ವಡವಿ ವಸ್ತುಗಳೆಲ್ಲ ತೋರುತಲಿ । ಮತ್ತೆ

ತುಡುಗ ಬುದ್ಧಿಯು ಸಲ್ಲದೆಂಬುತಲಿ । ಹೀಂಗೆ
ದುಡುಕೂದು ತರವಲ್ಲ ಕಡಿಸಿ ಹಾಕುವೆ ನಿನ್ನ
ಕೊಡಸೂದೆ ಯಮನಿಗೆ ಇಡಸಲ್ಲ ನಿನ್ನ ॥೨೭॥

ಸಿಟ್ಟು ಮಾಡಲಿ ಬೇಡ ನಿನ್ನ ಮನಸಿನೊಳು
ಘಟ್ಯಾಗಿ ಎನಗೆ ನಂಬಿಗೆಯ ಕೊಟ್ಟು । ನಿನ್ನ
ಹೊಟ್ಟೆಯ ಒಳಗಿನ ಸಿಟ್ಟು ಬಿಟ್ಟು । ರತಿ
ಯಿಟ್ಟು ಎನಗೆ ಮಾತು ಪೂರ್ಣಕೊಟ್ಟು । ಮನ
ಸಿಟ್ಟು ಎನ್ನಯ ಮಾತು ಕೇಳೆಂದು ಕೀಚಕ
ಗಟ್ಯಾಗಿ ದ್ರೌಪದಿಯ ಕಾಡಿದ ಖಳನು ॥೨೮॥

ಭ್ರಷ್ಟ ಮಾತುಗಳಿಂದ ಫಲವಿಲ್ಲವೆಂಬುತ
ಕೆಟ್ಟಿ ನೀ ಬೇಡವೊ ಸುಮ್ಮನ್ಹೋಗು । ರಟ್ಟಿ
ಕಟ್ಟಿಸಿಕೊಂಡಿಯೊ ಸಲ್ಲ ಹೋಗು । ಹಲ್ಲು
ಕುಟ್ಟಿಸಿ ಹೊಯ್ಸುವೆ ಅಲ್ಲ ಹೋಗು । ಎಂದು
ಸಿಟ್ಟಿಲಿ ದ್ರೌಪದಿ ನುಡಿವುತ್ತಿರಲು ಮತ್ತೆ
ಕೆಟ್ಟ ಕೀಚಕ ಆಡಿದಂಥ ಮಾತುಗಳ ॥೨೯॥

ಉಟ್ಟೆನೆಂದರೆ ನಿನ್ನ ಮನಕೆ ಬೇಕಾದಂಥ
ಪಟ್ಟಾವಳಿಯ ಸೀರಿ ಹಿಡಿಯೆನುತ । ಮುತ್ತ
ಪಟ್ಟಿನ ಸರವನು ಹಾಕೆನುತ । ಕರ್ಣ
ಕಿಟ್ಟುಕೊ ಬುಗುಡಿ ಬಾವಲಿ ಎನುತ । ರತಿ
ಯಿಟ್ಟು ನಾ ಹೇಳುವೆ ಸಿಟ್ಟು ಮಾಡಲಿ ಬೇಡ
ಕಟ್ಟಾಣಿ ಮುತ್ತಿನ ಮುದ್ದು ಹೆಣ್ಣೆ ॥೩೦॥

ಪರಹೆಣ್ಣು ಕಂಡರೆ ಸರಸ ಮಾಡುದು ಸಲ್ಲ
ಗುರಿಯಾದಿ ಯಮನಿಗೆ ಬೇಡೆಲವೊ । ನಿನ್ನ
ಶರಿರವ ಸೀಳ್ಯಾರು ಕೇಳೆಲವೊ । ಕಾಮ
ಗುರಿಗೆ ನೀ ಈಡಾಗಬೇಡೆಲವೊ । ತಿಳಿ
ದರಿದು ಕೇಳೆಲೊ ನಿನ್ನ ಸರಸ ಮಾಡುದು ಸಲ್ಲ
ಪರದೇಶಿ ಛೀ ಎಂದು ನುಡಿದಳು ಖಳಗೆ ॥೩೧॥

ಪರದೇಶಿ ಅಂಬುದು ತರವಲ್ಲ ನೀ ಬಾಲೆ
ಅರಸು ವಿರಾಟನ ಸತಿಯು ಕಾಣೆ । ನಮ್ಮ
ಹಿರಿಯಕ್ಕ ನಿನಗೆ ಹೇಳುವೆನು ಜಾಣೆ । ಭಾಗ್ಯ
ವಂತನು ಕೇಳೆ ಪನ್ನಂಗವೇಣಿ । ನಿನ್ನ
ಸರಸರೂಪಕೆ ನಾನು ಮರುಳಗೊಂಡೆನು ನಾರಿ
ಕರುಣಿಟ್ಟು ಎನ್ನ ನೀ ನೋಡೆ ವೈಯಾರಿ ॥೩೨॥



ವೈಯಾರಿ ಎಂಬುವದು ತರವಲ್ಲ ನಿನಗೀಗ
ಜಾರ ಹೆಣ್ಣುಗಳಲ್ಲ ಕೇಳೊ ಜಾಣಾ । ನಗೆ
ಯಾಡುವಳು ಅಲ್ಲ ಬೇಡೋ ಕಾಣಾ । ಮುಂದ
ಕ್ಕಾಗಿ ಸಾಗಿ ಹೋಗೊ ಅಪ್ರವೀಣಾ । ನಿನ್ನ
ಬಗೆಯನು ತಿಳಿದೆನು ಶ್ವಾನ ನೀ ಹೋಗೆಂದು
ಮುಖವ ತಗ್ಗಿಸಿ ಮಾತನಾಡಿದಳು ನಾರಿ ॥೩೩॥

ಮುಖವ ತಗ್ಗಿಸಿ ಮಾತನಾಡುವವಳ ಕಂಡು
ಪಿಕಸ್ವರವಾಣಿ ನೀ ಕೇಳೆಂದನು । ಚಕ
ಚಕನೆ ಎನಗೆ ಮಾತು ಕೊಡು ಎಂದನು । ನಿನ್ನ
ಮುಖನೋಡಿ ನಾ ಮರುಳಾಗಿದ್ದೆನು । ಮುಂದೆ
ಅಂತಃಕರಣವಿಟ್ಟು ಸಂತೋಷ ಮಾಡೆಂದು
ನಿಂತು ಮಾತು ಹೇಳುತ್ತಿರ್ದನು ಖಳನು ॥೩೪॥

ಖಳನ ಮಾತನು ಕೇಳಿ ಕಾಮಿನಿ ಕುಲಮಣಿ
ಬಳಬಳ ಬಳಲುತ ಮನಸಿನಲ್ಲಿ । ನೀರ
ಸುರಿಸ್ಯಾಳು ತನ್ನಯ ಕಣ್ಣಿನಲ್ಲಿ । ಎನ್ನ
ಫಣಿಯೊಳು ಬರೆದಿಹ ಬ್ರಹ್ಮನಲ್ಲಿ । ಆಗ
ಬೆದರು ಹುಟ್ಟಲಿಯೆಂದು ಸುದತಿ ಶಾಪವ ಕೊಟ್ಟು
ಮನದಲಿ ಮರುಗಿ ಸುಯ್ಗರೆದಳಾ ಬಾಲೆ ॥೩೫॥

ಹಿಂದೆ ನಾ ಮಾಡಿದ ಪಾಪದ ಫಲದಿಂದೆ
ಮುಂದೆ ಇಂಥ ಘಾತ ಬಂದಿತೆಂದು । ಎನ್ನ
ತಂದೆತಾಯಿ ಇದಕ್ಕಾಗಿ ಹಡೆದರೆಂದು । ಒಮ್ಮೆ
ಅಣ್ಣ ಮುಕ್ಕುಂದನು ಮುನಿದನೆಂದು । ತಾನು
ಮಂದಗಮನೆಯಳು ನೊಂದು ಹೃದಯ ಕಳೆ
ಗುಂದಿ ಚಿಂತಿಸುವಾಗ ನಿಂತಾಳ ನಾರಿ ॥೩೬॥

ಚಿಂತಿ ಮಾಡುವದು ಸಲ್ಲದೆಂದು ನಾ ಹೇಳಿದರೆ
ಯಾತಕ್ಕೆ ಕರುಣವು ಬರಲೊಲ್ಲದು । ನಿನಗೆ
ಭ್ರಾಂತಿ ಹತ್ತಿ ಮನಸು ತಾ ನಿಲ್ಲದು । ಮಾರನ
ತಂತ್ರವು ಯಾರಿಗೆ ನಿಲುಕುವದು । ಇಂಥ
ಕಾಂತೆ ನೀನು ಪ್ರಾಯವಂತೆ ಎನಗೆ ಮನ
ಸಂತೋಷ ಮಾಡೆಂದು ಸೆರಗನು ಹಿಡಿದ ॥೩೭॥

ಸೆರಗ್ಹಿಡಿದಾಕ್ಷಣ ಮರಮರನೆ ಮರುಗುತ
ಕರೆದಳು ಅಣ್ಣ ಕೃಷ್ಣನೆ ಎನುತ । ಬಾಯಿ
ದೆರೆದಳು ಮನದಿ ಯೋಚನೆಗೈವುತ । ನಾಲ್ವ

ರರಿಯದೆ ಆದಿತು ಎನಗೆ ಘಾತ। ಇಂದು
ಕರಗಿ ಕೊರಗಿ ತಾನು ಸೊರಗಿ ಮರುಗಿ ಮತ್ತೆ
ಹರಣದ್ಹಂಗನು ಬಿಟ್ಟು ಹೊರಳ್ಯಾಳೆ ನಾರಿ ॥೩೮॥

ಹೊರಳ್ಯಾಳು ಭೂಮಿಯೊಳ್ಮರುಗ್ಯಾಳು ಮನಸಿನೊಳ್
ಹರಹರ ಅನುಚಿತವಾಯಿತೆಂದು। ಬಾಯಿ
ದೆರದಾಳು ಮುಗಿಲಿಗೆ ಕಾಂತೆ ಅಂದು। ಬೆರ
ಳೆಡ ಮುರಿದೇಳುತ ಅಳುತ ನಿಂದು। ಅಯ್ಯೊ
ಸುಡು ಹೆಣ್ಣು ಜನ್ಮವ ಸಾಕಯ್ಯ ಅಣ್ಣನೆ
ಬಿಡಿಸಯ್ಯ ಎನ್ನ ಮನದ ಖತಿಯನ್ನು ॥೩೯॥

ಮುದ್ದುಮುಖದ ಬಾಲಿ ಬಿದ್ದಳು ಭೂಮಿಯೊಳ್
ಶುದ್ಧದೇಹವು ಕುಂದುತಲ್ಲಿ। ತನ್ನ
ಮುದ್ದು ಮುಖವು ಬಾಡಿ ಬಳಲುತಲ್ಲಿ। ಎದಿ
ಗುದ್ದಿ ಹಣೆಗೆ ಕೈಯನೂರುತಲ್ಲಿ। ಮುಂದೆ
ನೊಂದಾಳು ಕಂದ್ಯಾಳು ಕಾಮಿನಿ ಕುಲಮಣಿ
ಇಂದು ಅಣ್ಣನೆ ದಯಮಾಡೆಂದಳಾಗ ॥೪೦॥

ಗೋಪಿಯನಾಥನೇ ಗೋಕುಲದರಸನೇ
ಪಾಪಿ ಕೀಚಕ ತಾನು ಕಾಡುವನು। ಇಂಥ
ಪಾಪವ ಕಾಣುತ ನೋಡುವೆನು। ಧರ್ಮ
ಭೂಪಗೆ ಸುದ್ದಿಯ ಹೇಳಿರೇನು। ಎಂದು
ತಾಪ ಚಿಂತೆ ಹೆಚ್ಚಿ ಈ ಪರಿಯಿಂದಲಿ
ಪಾಪರಹಿತ ದ್ರೌಪದಿ ಮರುಗಿದಳು ॥೪೧॥

ಮಂದಗಮನೆಯಳು ನೊಂದಳು ಕಣ್ಣೀರ
ತಂದಳು ತನ್ನಯ ದುಃಖದಿಂದ। ವಿಧಿ
ಬೆನ್ಹತ್ತಿ ಕಾಡುವದು ಹಗೆಯಿಂದ। ಮನ
ನೊಂದಳು ದ್ರೌಪದಿ ಚಿಂತಿಲಿಂದ। ಸುಖ
ವಿನ್ನಿಲ್ಲವೆಂಬುದು ಎನ್ನ ಮನಕೆ ಬಂತು
ಇನ್ಯಾಕೆ ಈ ಜನ್ಮ ಇಡಲಾರೆ ನಾನು ॥೪೨॥

ಸುಡು ಸುಡು ಹೆಣ್ಣಿನ ಜನ್ಮವು ಕಷ್ಟವೆಂ
ದೊಡಲೊಳು ಉರಿಬಿದ್ದು ಹೊರಳುತಲಿ। ತನ್ನ
ಎಡೆಯ ಬಾಯಿಯ ಬಡಿಬಡಿವುತಲಿ। ಸರಿಯ
ಮಡದೇರ ಮುಂದೆಲ್ಲ ಹೇಳುತಲಿ। ಎನ್ನ
ದುಡುಕು ಮಾಡುತಲಿಹನು ತುಡುಗು ಬುದ್ಧಿಗಳಿಂದ
ಹಿಡಿಯಲಾಕ್ಷಣ ಭೂಮಿಗುರುಳ್ಯಾಳು ನಾರಿ ॥೪೩॥



ಮರುಳುವ ನೆರಳುವ ಧ್ವನಿಯ ಕೇಳುತಾಗ
ಅರಸು ವಿರಾಟನ ಸತಿಯು ಬೇಗ। ತನ್ನ
ತಮ್ಮ ಕೀಚಕನನ್ನು ಕರೆದಳಾಗ। ಇದು
ಇನ್ನೇನು ಗದ್ದಲವೆಂಬುತಾಗ। ಕೇಳಿ
ತನ್ನ ಅಕ್ಕನ ಮುಂದೆ ಹೇಳಿ ಸುದ್ದಿಯ ರಂಭೆ
ದ್ರೌಪದಿಯನು ಕೂಡಿಸಬೇಕೆಂದನಾಗ ॥೪೪॥

ಇವತ್ತು ಒಂದಿನ ತಡೆದರೆ ಆಕೆಯ
ಭಾವ ತಿಳಿದು ಕರೆ ತರುವೆನೆಂದು। ತಮ್ಮ
ನೀ ಮರುಳಾಗುದುಚಿತವಲ್ಲೆಂದು। ಸುಮ್ಮ
ನೇಳೇಳು ಊಟಕ್ಕೆ ಹೋಗು ಎಂದು। ತಾನು
ಹೇಳಿದಾಕ್ಷಣ ಕಾಮಿನಿ ಕುಲಮಣಿ ಕೇಳ
ದ್ರೌಪತಿ ನಿನಗ್ಹೇಳುವೆ ಮಾತನೊಂದ ॥೪೫॥

ಬಂದಳು ದ್ರೌಪದಿ ಸಂದೇಹವಿಲ್ಲದೆ
ಚಂದಾಗಿ ಕರೆದು ಕುಳ್ಳಿರಿಸಿಕೊಂಡು। ಎನ್ನ
ಸಂದೇಹವೊಂದನೆ ನಡಿಸಿಕೊಂಡು। ಎನ್ನ
ತಮ್ಮ ಕೀಚಕ ನಿನ್ನ ಪುಣ್ಯ ಕಂಡು। ರತಿ
ಯನ್ನಿಟ್ಟ ಅಬಲೆಯೆನ್ನ ಮಾತನು ಮೀರದೆ
ಚನ್ನಾಗಿ ನಡಿಸಿಕೊಡೆಂದು ಹೇಳಿದಳು ॥೪೬॥

ಬಡವರ ಕೂಡಿರ್ದು ಬಾಲೆ ನೀ ಬಲು ಕಷ್ಟ
ಬಿಡುವದ್ಯಾತಕೆ ನೀನು ಹೇಳೆನುತ। ಎನ್ನ
ಒಡಹುಟ್ಟಿದವನೊಳು ಇರು ಎನುತ। ನಿನ್ನ
ಬಡತನ ಹರಿವುದು ಕೇಳೆನುತ। ಹೀಂಗ
ಮಡದಿ ದ್ರೌಪದಿಗೆ ತಾ ಕಡು ಮೋಹದಿಂದಲಿ
ಒಡೆಯ ವಿರಾಟನ ಸತಿಯು ಹೇಳಿದಳು ॥೪೭॥

ಕೇಳಿದಾಕ್ಷಣ ನಾರಿ ಬಹಳ ದುಃಖದಿಂದ
ಕಾಳೋರಗವೇಣಿ ಚಿಂತಿಸುತ। ಕೃಷ್ಣ
ವ್ಯಾಳೆ ಎಂಥದು ತಂದೆ ತಮಗೆನುತ। ನಮ್ಮ
ಬಾಳುಳ್ಳವರಿಗ್ಹೊತ್ತು ಬಂತೆನುತ। ಆಗ
ಮೋರೆ ತಗ್ಗಿಸಿಕೊಂಡು ವನಿತೆ ದ್ರೌಪದಿ ತನ್ನ
ದಾರಿ ಹಿಡಿದು ಧರ್ಮರಾಜನ ಬಳಿಗೆ ॥೪೮॥

ರಾಜರಾಜರಿಗೆಲ್ಲ ಶ್ರೇಷ್ಠವಾದ ಧರ್ಮ
ರಾಜ ಭೂಪನ ಬಳಿಗೆ ಬಂದಳಾಗ। ಖಳನು
ಕಾಡಿದಂಥ ಸುದ್ದಿ ಹೇಳ್ದಳಾಗ। ಎನ್ನ

ಮಾನಕ್ಕೆ ಕೊರತೆಯು ಬಂತೆಂದಳಾಗ । ಹೀಂಗ
ಮಾನಿನಿ ಹೇಳ್ದ ಮಾತಿಗೆ ಧರ್ಮರಾಜನು
ತಾ ಒತ್ತಿ ಹೇಳಿದಂಥ ಮಾತನು ಕೇಳಿ ॥೪೯॥

ಅನ್ನ ಕೊಡುವ ದಾತರಾಜ್ಞೆಯ ಮೀರಲು
ಇನ್ನು ಎಮಗೆ ಶಿವ ಮೆಚ್ಚುವನೆ । ಸಂ
ಪನ್ನೆ ಎನ್ನಯ ಮಾತು ಕೇಳು ನೀನೆ । ಇದಕೆ
ಅನ್ಯ ಉತ್ರವ ಕೊಡಲ್ಯಾಂಗ ನಾನೆ । ಎಂದು
ಸುಮ್ಮನೆ ಧರ್ಮರಾಜನು ಕೇಳುತ್ತಿರಲಾಗ
ಘಮ್ಮನೆ ತಿರುಗ್ಯಾಳು ಪಾರ್ಥನ ಬಳಿಗೆ ॥೫೦॥

ಬಂದಳು ದ್ರೌಪದಿ ಮುಖಬಾಡಿ ಪಾರ್ಥನಿ
ಗೆಂದಳು ತನ್ನಯ ಚಿಂತಿಲಿಂದ । ಇಂದು
ಇದಕೇನು ಗತಿ ನಾನು ಮಾಡಲೆಂದ । ಹೊತ್ತು
ತಂದಾನೆ ಶಿವ ನನಗಿಂಥಾದ್ದೆಂದು । ಪಾರ್ಥ
ಅಂದ ನುಡಿಯ ಕೇಳಿ ದ್ರೌಪದಿ ದುಗುಡದಿ
ಬಂದಳು ನಕುಲ ಸಹದೇವರ ಬಳಿಗೆ ॥೫೧॥

ಮುಖಬಾಡಿ ನಕುಲ ಸಹದೇವರಿಗೆ ಅಂದು
ಅಕಟಕಟೆನಗೇನು ಗತಿ ಎಂದಳು । ನಾರಿ
ಮುಖವ ತಗ್ಗಿಸಿ ನಿಂತು ಹೇಳಿದಳು । ತನ್ನ
ದುಃಖದಿ ಕಣ್ಣೀರ ಸುರಿಸಿದಳು । ಮತ್ತೆ
ಸಖಿ ಕುಲಮಣಿ ನಾವು ಕಿರಿಯರು ನೀನಿದಕೆ
ಧರ್ಮಪಾರ್ಥರ ಬಳಿಗ ಹೋಗೆನ್ನಲಾಗ ॥೫೨॥

ಹೀಗೆಂದು ನುಡಿಯನು ಕೇಳುತಲಾಕ್ಷಣ
ಕೋಗಿಲಸ್ವರದಿಂದ ಅಳುತಲಾಗ । ಮತ್ತೆ
ಬೇಗ ಬಂದಳು ಭೀಮನ್ನುಡುಕುತಲಾಗ । ದಯ
ವಾಗು ನೀ ಎನಗೆಂದು ನುಡಿದಳಾಗ । ಇಂಥ
ಶೋಕ ಮಾಡುದ ಕಂಡು ಯಾಕೆಂದು ಭೀಮನು
ಆಕೆಯ ಮುಖವನ್ನು ಹಿಡಿದು ಕೇಳಿದನು ॥೫೩॥

ಹೇಳು ಹೇಳು ನಾರಿ ಬಹಳ ದುಃಖದಿಂದ
ತಾಳಲಾರದೆ ಎನ್ನ ಒದರಿದ್ಯಾಕೆ । ಹಳ
ಹಾಳಿಯಾಗದೆ ನಿನ್ನ ಮನಸು ಯಾಕೆ । ನಾನು
ಹೇಳುವೆ ಇದಕೆ ಸುಳ್ಳಲ್ಲ ಜೋಕೆ । ಎಂದು
ಕೇಳಲು ಆ ಕ್ಷಣ ಖೂಳ ಕೀಚಕ ತಾನು
ಬಾಳ ಕಾಡಿದ ಬಗೆಯನೆಲ್ಲ ಹೇಳಿದಳು ॥೫೪॥



ಕೇಳಿದಾಕ್ಷಣ ಭೀಮ ಬಹಳ ಸಿಟ್ಟಿನಿಂದ
ಖೂಳ ಕೀಚಕನನ್ನು ಹೊಡೆವೆ ಜಾಣೆ । ಇದಕೆ
ಚಿಂತೆಮಾಡುದು ಸಲ್ಲ ಸುಪ್ರವೀಣೆ । ನಾನು
ಬಿಟ್ಟರೆ ಧರ್ಮನ ಪಾದದಾಣೆ । ಎಂದು
ಇಟ್ಟುಕೊಂಡನು ತಾನು ಗಟ್ಟಾಗಿ ಶಪಥವ
ಥಟ್ಟನೆ ಹೇಳು ವಿರಾಟನ ಸತಿಗೆ ॥೫೫॥

ಕೇಳು ಕಾಮಿನಿ ನೀನು ಬಹಳ ಚಿಂತಿಸಬೇಡ
ನಾಳೆ ನಾ ನಿನ್ನ ವೇಷವ ಧರಿಸಿ । ಇಂಥ
ಖೂಳ ಕೀಚಕನನ್ನು ಸಂಹರಿಸಿ । ಚಿಂತಿ
ಹರಿಸಿ ಬಿಡುವೆನೇಳ ಎನ್ನರಸಿ । ಅವಗೆ
ಸರಸದಿ ಬರುವೆನೆಂದ್ಹರುಷದಿ ಹೇಳೆಂದು
ಅರಸಿ ದ್ರೌಪದಿಗಾಗ ಹೇಳಿ ಕಳುಹಿದನು ॥೫೬॥

ಹೇಳುವೆ ಬಗೆಯನು ಸರಸದಿ ನಾರಿ ನೀ
ಕೇಳೆಂದು ಭೀಮನು ನುಡಿದನಾಗ । ಹೋಗಿ
ಹೇಳು ವಿರಾಟನ ಸತಿಗೆ ಬೇಗ । ನಿಮ್ಮ
ಕೀಚಕನಿಗೆ ಹೇಳು ಬರ್ಪನೀಗ । ಇಂದು
ನಾ ಹೋಗಿ ಗರಡಿಯ ಶಾಲೆಯೊಳಿರುವೆನು
ನೀ ಮಾತ್ರ ಕಳುಹೆಂದು ಹೇಳಿ ಬಾರೆಂದ ॥೫೭॥

ಹೇಳಿ ಬಂದಳು ನಾರಿ ಬಹಳ ಸಂತೋಷದಿ
ನಾಳೆ ನಾ ಸಂಜೆಗೆ ಬರುವೆನೆಂದು । ಬೇಗ
ಭೂಪ ಕೀಚಕನಿಗೆ ಬರಹೇಳೆಂದು । ಅಕ್ಕ
ಮರೆಯಬ್ಯಾಡವ್ವ ಈ ಮಾತನೆಂದು । ಹೇಳಿ
ತಿರುಗಿದಳಾಕ್ಷಣ ತ್ವರಿತದಿ ದ್ರೌಪದಿ
ಭರದಿಂದ ಬಂದಳು ಭೀಮನಿದ್ದೆಡೆಗೆ ॥೫೮॥

ಹೇಳಿ ಬಂದೆನು ನಾನು ನಾಳೆ ಬರುವೆನೆಂದು
ಧೂಳ ಸಂಜಿಲಿ ಗರಡಿಶಾಲೆಯೊಳು । ನಿಮ್ಮ
ತಮ್ಮ ಕೀಚಕನಿಗೆ ಬೇಗ ಹೇಳು । ಗುಲ್ಲು
ಮಾಡದೆ ಈಕ್ಷಣ ಹೋಗೆಂದಳು । ಎಂದು
ಹೇಳಿ ಬಂದಳು ತಾನು ಬಹಳ ಸಂತೋಷದಿ
ಕೇಳಿರಿ ನೀವೆಲ್ಲ ಭೀಮನ ಬಗೆಯ ॥೫೯॥

ಭೀಮಸೇನನು ಆಗ ಕೇಳಿರಿ ತಾಳಿದ
ಕಾಮಿನೀರೂಪವ ಕಪಟದಲ್ಲಿ । ತಾನು
ಪ್ರೇಮದಿ ಹೊಂಟನು ಗರಡಿಯಲ್ಲಿ । ಖೂಳ

ಕೀಚಕ ಹೊತ್ತನು ನೋಡುತಲ್ಲಿ । ಸೂರ್ಯ
ಅಸ್ತವಾದ ಮೇಲೆ ಮಸ್ತಿಕೋಣನ್ಹಂಗ
ಸಿಸ್ತೀಲಿ ಕೀಚಕ ಗರಡಿಗೆ ಬಂದ ॥೬೦॥

ಬಂದಾಕ್ಷಣದಿ ಬಹಳ ಭ್ರಾಂತಿಯಿಂದ ಸಖಿ
ಗೆಂದನು ಕಾಮಿನಿ ಕಾಡುವರೆ । ಇಷ್ಟು
ಹೇಳ್ದರೆ ಹುಡುಗಾಟ ಮಾಡುವರೆ । ಇಂದು
ಎನ್ನೊಳು ಕೈವಶವಾಗುವರೆ । ತಾನು
ಹಮ್ಮಿಲೆ ಮಾತಾಡುತಿರಲಾಗ ಭೀಮನು
ಸುಮ್ಮನೆ ಮಂಚದ ಮೇಲೆ ಕುಳಿತಿಹನು ॥೬೧॥

ಹರಡಿ ಕಂಕಣಕೈಯ ಹಿಡಿದೆಳೆದು ಅವನು
ಮಡದೀ ನೀ ಬಾರೆಂದು ಕರೆಯುತಲಿ । ಕುಚ
ಪಿಡಿಯಲಿಚ್ಛೆಸಿದನು ಪ್ರೀತಿಯಲಿ । ಚುಂಬ
ನವ ಕೊಡು ಎಂಬ ಸಮಯದಲಿ । ದುಡುಕಿ
ದುಡುಕುವ ಸಮಯದಿ ತಡಿರೆಂದು ಹೇಳಲು
ಮಡದಿ ಸೈರಿಸಲಾರೆ ವಿರಹತಾಪವನು ॥೬೨॥

ಚೆಂದುಟಿಯಳೆ ನಿನ್ನ ಚುಂಬನ ಕೊಡುಯೆಂದು
ಮುಂಬಾಗಿ ಸೆರಗನು ಹಿಡಿದೆಳೆದು । ಎದೆ
ಗಿಂಬಾಗಿ ತೆಕ್ಕೆಯೊಳಗೆ ಎಳೆದು । ನಗೆ
ಯಿಂದಲಿ ಸೀರೆಯ ತಾ ಸೆಳೆದು । ಮತ್ತೆ
ಚೆನ್ನಾಗಿ ಭೋಗಕೆ ಎಳೆಯುತಿರಲು ಆಗ
ಇನ್ನೇಕೆ ಅನುಮಾನ ಎಂದನು ಭೀಮ ॥೬೩॥

ಚೆನ್ನಾಗಿ ನಿಮ್ಮಕ್ಕನ್ಹೋಳಿ ಬಂದಿಯಿಲ್ಲೊ
ಕುನ್ನಿ ಎನ್ನ ಕೈಯೊಳು ಸಿಕ್ಕಿದೆಲ್ಲೊ । ನಿನ್ನ
ಸೀಳಿ ಹಲ್ಲು ಮುರಿಗುಟ್ಟೇನಲ್ಲೊ । ಮೇಲೆ
ಯಮಪಟ್ಟಣಕ ನಿನ್ನ ಅಟ್ಟೇನಲ್ಲೊ । ಎಂದು
ಬಿರಿನುಡಿಯಿಂದಲಬ್ಬರಿಸೆ ಭೀಮಸೇನನು
ಮರಿ ಆಡಿನ್ಹಾಂಗ ತಾ ನಿಂತನು ಖಳನು ॥೬೪॥

ಗಾರುಡಿಸಿ ಗೆದ್ದು ಪೋಗು ನೀ ನಮ್ಮೊಳು
ಶೂರತನವನಿಂದು ನೋಡುವೆನು । ರಣ
ಧೀರನಹುದೆಂದು ನಾ ಆಡುವೆನು । ಮಹಾ
ಶೂರನೆಂದು ನಾ ಕೇಳಿದೆನು । ಎನ್ನೊಳ್
ಪೂರ ಶೌರ್ಯವನೀಗ ತೋರೆಂದು ಭೀಮನು
ಖೂಳ ಕೀಚಕನಿಗೆ ಕೇಳುತಲಿರ್ದ ॥೬೫॥



ಬೆದರಿ ಬೆಂಡಾಗಿ ಚೇತನಗುಂದಿ ಕೀಚಕ
ಒದರಿದ ತನ್ನಯ ಬಳಗವನು । ಈಗ
ಖೂಳನ ಕೈಯೊಳು ಸಿಕ್ಕಿದೆನು । ಬೇಗ
ಯಾರರೆ ಬಂದೆನ್ನ ಉಳಿವಿರೇನು । ಇಂದು
ಪೂರ ಘಾತವಾದಿತೆಂದು ಕೀಚಕ ತಾನು
ಬೋರ್‍ಯಾಡಿ ಕಣ್ಣೀರು ತಂದನು ಆಗ ॥೬೬॥

ಕಣ್ಣೀರು ತರುವಂಥ ಕೆಲಸವ ಮಾಡಿದಿ
ಇನ್ಹ್ಯಾಂಗ ಬಿಟ್ಟೀತು ಎಂದ ಭೀಮ । ನಿನ್ನ
ಸೀಳಿ ಒಗೆವೆ ನಿನಗೀಗಿಲ್ಲೊ ಕ್ಷೇಮ । ಯಮ
ದಾಳಿ ನಿನಗೆ ತಂದಿತೆಂದ ಪ್ರೇಮ । ಈಗ
ಬಾಳುಳ್ಳ ಹೆಣ್ಣನು ಕಾಡಿದ ತಪ್ಪಿಗೆ
ಓಡಿ ಬಂದಿತು ನಿನ್ನ ಜೀವಕೆ ಮೂಲ ॥೬೭॥

ಭೀಮನ ಕೈಯೊಳು ನಿನ್ನ ಪ್ರಾಣವಿತ್ತೆಂದು
ಪ್ರೇಮದಿಂದ್ಯಾರ್‍ಯಾರು ಹೇಳಲಿಲ್ಲೆ । ನಿಮ್ಮ
ಅಕ್ಕ ಪಂಚಾಂಗವ ಕೇಳಲಿಲ್ಲೆ । ವ್ಯರ್ಥ
ಸಾಯಾಕ ಬಂದೆಲ್ಲೊ ಹುಚ್ಚುಮಲ್ಲೆ । ಎಂದು
ಬಾರೆಂದು ಮುಂದಕೆ ಕರೆಯಲು ಭೀಮನು
ವಾರಿಗೆ ಹಿಂದಕ್ಕೆ ಸರಿದನು ಖಳನು ॥೬೮॥

ಸರಿದು ಹಿಂದಕೆ ನಿಂತು ತಿರಿಗ್ಹೋಗು ಸಮಯದಿ
ತ್ವರಿತದಿ ಭೀಮಗೆ ಸಿಟ್ಟು ಬಂದು । ಖಳನ
ಎರಡು ಕಾಲ್ಗಳ ಬೇಗ ಹಿಡಿದು ನಿಂದು । ನೆಲ
ಕ್ಕೊಗೆದು ಸೀಳಿ ಬಿಟ್ಟ ಕ್ರೋಧದಿಂದ । ಹೀಗೆ
ಸತ್ತನು ಕೀಚಕ ಎಲ್ಲಿಗೆ ಕಥೆಯನು
ಉತ್ತಮರು ತಿಳಿದು ಕೇಳ್ವುದು ಜನರು ॥೬೯॥

ವಸುಧೆಗೆ ಒಪ್ಪುವ ಎಸೆವ ನವಲಗುಂದ
ಪುರದೊಳಗಿರುತಿಹ ಮೂರ್ತಿಗಳ । ಪಂಚ
ಗೃಹದ ಹಿರಿಮಠದ ಕರ್ತೃಗಳ । ಪಟ್ಟ
ದೇವರ ಚರಮೂರ್ತಿ ಸ್ವಾಮಿಗಳ । ಅವರ
ವರಪುತ್ರನಾದಂಥ ತರುಳ ಬಸವಲಿಂಗನು
ಹರುಷದಿ ಪೇಳ್ದನು ಸರಸದೀ ಕಥೆಯ ॥೭೦॥

* * *

# ಕಿತ್ತೂರ ದುಂದುಮೆ



## ಕಿತ್ತೂರ ದುಂದುಮೆ

ದುಂದುಮೆ ಕೇಳ್ರಿ ದುಂದುಮೆ ॥ಪ॥

ಚಂದಾದಿ ಕೇಳಿರಿ ಕಂದುಗೊರಳ ಭಕ್ತ ಮ
ಲ್ಲೇಂದ್ರನು ಗಂಧ ಸಿಂಧುರವಾಹನ
ನೆಂದು ಮರ್ತ್ಯದಲ್ಲಿ ಶಿವಕೃಪೆಯಿಂದ ಜನಿಸಿ
ಬಂದು ರಾಜಿಸುವಂಥ ದೇವೇಂದ್ರನು ॥೧॥

ಛಪ್ಪನ್ನ ದೇಶದೊಳೊಪ್ಪುವ ಕಿತ್ತೂರ
ಮುಪ್ಪಿನ ಮಡಿವಾಳ ಸ್ವಾಮಿಯರ
ಸರ್ಪಭೂಷಣ ಶಿವಭಕ್ತ ಮಲ್ಲೇಂದ್ರರ
ತಪ್ಪದೆ ಸಲಹುವಾ ಶಿವಶಂಕರ ॥೨॥

ಅರಸು ಮಲ್ಲೇಂದ್ರನ ಬರವನು ಕಂಡು
ಧರೆಯೊಳು ಕಿತ್ತೂರ ಪುರದೊಳು ದಂಡು
ಮೂರು ಪಂಚೇರಿನ ತೋಫಿನ ಗುಂಡು
ಅದರ ವಿಸ್ತಾರವು ಪರಿಪರಿದಂದು ॥೩॥

ಛತ್ರಚಾಮರ ನಿತ್ಯ ಆನೆಯಂಬಾರಿ
ಚಿತ್ರದ ಪಾಲಕಿ ಸುತ್ತ ವಿಸ್ತಾರ
ಮುತ್ತಿನ ಪಾಲಕಿ ಹತ್ತುವರಾರು
ಸತ್ಯುಳ್ಳ ಮಲ್ಲೇಂದ್ರ ಭೂಪನೆಂಬವರು ॥೪॥

ಸರಳಗಟ್ಟಿಗೆ ಸಾಲು ಕುದುರೆಯ ಮುಂದ
ನಿವಳಾಗಿ ಮುರ್ಭಾಲು ಎಡಬಲದಿಂದ
ಭೂವರ ಮಲ್ಲೇಂದ್ರ ಬರುವದು ಚಂದ
ವರ ಪುಣ್ಯ ವಿಸ್ತಾರ ಹೇಳುವೆ ಮುಂದ ॥೫॥

ಶಿವಪೂಜೆ ಸಂಭ್ರಮ ಕೇಳಿರೆಲ್ಲಾರು
ತಾವರೆ ಪುಷ್ಪವು ಮೂರು ಸಾವಿರು
ದೇವರ ಅಭಿಷೇಕ ಪರಿಪರಿ ಕ್ಷೀರು
ದೇವ ಸೇವೆ ಮಾಡುವಂಥ ಶರಣಾರು ॥೬॥

ಪರಸ್ತ್ರೀಯರೆಲ್ಲರು ತಾಯಿ ಸಮಾನ
ಪತಿವ್ರತ ಆಚಾರ ನಡಿಸುವ ನೇಮ

ಶರಧಿಯ ಧರಿಸಿದ ಭಕ್ತನ ಗ್ನಾನ
ಗುರುಸಿದ್ಧ ಚರತಿಯ ಗುರುವಿನ ಧ್ಯಾನ ॥೭॥

ಆಷಾಢ ಮುಂದಿನ ಮಾಸದ ಭಕ್ತಿ
ಲೇಸಾಗಿ ಪೇಳುವೆ ಕೇಳಿರಯ್ಯ
ಸಾಸಿರ ಸಾಕು ಕಡೆಮನಿ ವಿಲಕ್ಷಣ
ಭಿಕ್ಷೆ ನೀಡುವಂಥ ಭಕ್ತ ಕಾಣಯ್ಯ ॥೮॥

ಶ್ರಾವಣ ಮಾಸದಿ ಭಕ್ತಿಯ ನೋಡು ದೈವ
ಜಂಗಮ ಕೂಡಿ ಸಾವಿರ್ದನ್ನೆರಡು
ಭವ ಶುದ್ಧ ಆಶೀರ್ವಾದ ಕೊಂಡು
ಭೂವರ ಮಲ್ಲೇಂದ್ರಗಿನ್ನಾರು ಜೋಡು ॥೯॥

ಮಾರಾರಿ ಭಕ್ತ ಮಲ್ಲೇಂದ್ರನು ಧೀರ
ಆರು ಆನೆಯ ದಾನ ಕೊಟ್ಟಾನು ಸೂರ
ಧರೆಯೊಳು ಮಲ್ಲೇಂದ್ರ ವರ ಪುಣ್ಯಗಾರ
ಸಿರವೈದು ಉಳ್ಳಾನ ದಯ ಪರಿಪೂರ ॥೧೦॥

ಚೆನ್ನಿಗ ಚೆಲ್ವಿನ ಭಕ್ತ ಪ್ರತಾಪ
ಪುಣ್ಣೇದ ಶ್ರೀಮಂತ ಕೇಳಿದಾ ಭೂಪ
ಮಾನ್ಯ ಮಾನ್ಯರೊಳು ನುಡಿದ ಶ್ರೀಮಂತ
ಆನೆ ನೆರಳ ಭೂಪ ಭೋಗ ಸುರಪ ॥೧೧॥

ಕಿತ್ತೂರ ನಗರಕ್ಕೆ ಹೋಗಿ ಬಾರೆಂದು
ಮುತ್ತಿನ ಮಾಲೆಯ ಸರವನು ತಂದು
ಸತ್ಯಸುವಿಚಾರನಂದು ಅಚ್ಚ ಹೊನ್ನಿನ
ಹತ್ತುಸಾವಿರ ದ್ರವ್ಯ ಹಾರಿಸುಯೆಂದ ॥೧೨॥

ಪಟ್ಟದ ಹಿರಿಬಾಜೀರಾಯನು ಬೇಗ
ಶ್ರೇಷ್ಠ ಕಾರಭಾರಿ ಮಾಣಿಕೇಶ್ವರನಾಗ
ಸೃಷ್ಟಿಯೊಳಗೆ ಕಿತ್ತೂರರಸಿನ ಈಗ
ಎಷ್ಟು ಹೇಳಲಿ ಅವರ ಪುಣ್ಯವಿಂದಿಗೆ ॥೧೩॥

ಕಾರ್ತಿಕಸ್ವಾಮಿ ಬೆಟ್ಟ ನೇಮವ ಮಾಡಿ
ಹೊರಟಾನು ಮಣಿದು ಶಹರವ ಬಿಟ್ಟು
ಅರ್ತಿಯ ಎಡಬಲ ನಿತ್ಯದಿ ಪೊಗಲಾರು
ಗುರುತದ ಬಲಹೊಸ್ತು ಅಭಯವ ಕೊಟ್ಟು ॥೧೪॥

ರಸ್ತೆ ಮಾಧವರಾಯ ಬಂದನು ಪುಂಡ
ವಿಸ್ತಾರದಿ ಅಲ್ಲೆ ತಂದನು ದಂಡ



ಹಸ್ತಿ ಕುದುರೆ ಮಂದಿ ಕೂಡಿತು ಹಿಂಡ
ಮಸ್ತದಿ ಸಾಲಾಗಿ ನಡೆದ ಪ್ರಚಂಡ ॥೧೫॥

ಹೊರಟಿತು ಐವತ್ತು ಸಾವಿರ ಫೌಜು
ಪಟವರ್ಧನರೆಡಬಲ ಬಂದರು ಬಾಜು
ಆನೆ–ಕುದುರಿ–ಒಂಟಿ ಕಟ್ಟೀತು ರೇಜು
ತಾನೊಂದು ಶ್ರೀಮಂತ ಮಾಡಿದ ಮೋಜು ॥೧೬॥

ಪಂಢರ ಪುರದೊಳು ಕೂಡಿತು ದಂಡು
ಮಂಡಲ ಕುದುರೆಯ ದೂಡಿತು ದಂಡು
ಹೆಂಡರ ಮಕ್ಕಳನಾ ಕೂಡಿಕೊಂಡು
ಝುಂಡೆಗಟ್ಟಿತು ಹಿರಿಹೊಳಿಯೊಳು ದಂಡು ॥೧೭॥

ನಾಲ್ಕಾರು ದಿನ ಅಲ್ಲಿ ಛಾವಣಿ ಮಾಡಿ
ಏಕಚಿಂತಾಮಣಿರಾಯನ ಕೂಡಿ
ಪಂಕ್ತಿಯ ಜೋಡಿ ಹೋಳಿಗಿ ತುಪ್ಪಾ ನೀಡಿ
ರೊಕ್ಕರೂಪಾಯಿ ವರ ಭಿಕ್ಷಾವ ಮಾಡಿ ॥೧೮॥

ಅಪ್ಪ ದೇಸಾಯಿ ತಾ ಬಂದಾನು ಧೀರ
ತೋಫು ತಂದಾನು ನೋಡುತ ಹದಿನಾರ
ಅಪ್ಪ ನಿಪ್ಪಾಣಿಯ ಅವ ಶಮಶೇರ
ಒಪ್ಪಿತು ಫೌಜವು ಹತ್ತು ಸಾವಿರ ॥೧೯॥

ಣಾದಿಗೀ ಹಳ್ಳಕ ಇಳಿಸಿದ ತಂದು
ಖಣಖಣ ದ್ರವ್ಯ ನಿವಾಳಿಸಿ ನಿಂದು
ಹಣಗಳ ಸೂರಿಮಾಡಿದ ಬಾಳೊಂದು
ಜಾಣ ದೇಸಾಯಿ ಅಪ್ಪಾಸಾಹೇಬನಂದು ॥೨೦॥

ಎಲ್ಲಾರು ಒಂದಾಗಿ ಮುಂದಕೆ ಸಾಗಿ
ನಿಲ್ಲದೆ ಗೋಡ್ಗೇರಿಗೆ ಇದಿರಾಗಿ
ಬಲ್ಲಿದ ಚಂದಿರ ಗುಣವತಿ ಸಾಗಿ
ಇಲ್ಲೆ ಬಂದಿಳದೀತು ಹೊಂಗಲಿಗೆ ॥೨೧॥

ಹೊಂಗಲ ಪುರದೊಳು ಕಂಡಾನು ತೋಟ
ಮಂಗಲಕರವಾಗಿ ಕಂಡೀತು ನೋಟ
ಶೃಂಗಾರ ವನದೊಳು ಹಾಕಿದ ಊಟ
ಗಾಂಗೇಗ ಶ್ರೀಮಂತ ಆಡಿದ ಆಟ ॥೨೨॥

ಒಂದು ದಿನ ಅಲ್ಲಿ ಛಾವಣಿ ಮಾಡಿ
ಮುಂದಕ್ಕೆ ಕೆರೀಪಾಳೆವ ನೋಡಿ
ಬಂದಿತು ಬಾಜೀರಾಯನ ದಳಗೂಡಿ
ಚೆಂದದಿ ಕುದುರೆಯ ರಥಗಳ ಹೂಡಿ ॥೨೩॥

ಮರುದಿನ ಹೊತ್ತೇರಿ ಇಳಿವಿದ ದಂಡು
ಬೆರಗಾದ ಬಾಜೀರಾಯ ಪ್ಯಾಟಿಕಂಡು
ಹರದಾರಿ ಅಂಗಡಿ ಜವಳಿಯ ದಿಂಡು
ಕರೆದು ದೈವದವರ ಸೆಟ್ಟರ ಹಿಂಡು ॥೨೪॥

ಎಲ್ಲ ದೈವಕೆ ಕೊಂಡೆಸೆದ ವಸ್ತ್ರಪಾತ್ರಗಳ
ನಿಲ್ಲದೆ ನುಡಿಸಿದ ಭೇರಿ ಕಹಳೆಗಳ
ಅಲ್ಲಿಂದ ಸೊಂಡೂರ ದೇವ ಯತಿಗಳ
ಬಲ್ಲಿದ ಕಾರ್ತಿಕಸ್ವಾಮಿ ಜಾತ್ರೆಗಳ ॥೨೫॥

ಪಾರ್ವತೀ ಪುತ್ರನ ಕಂಡು ಶ್ರೀಮಂತ
ಪರ್ವತ ಗಿರಿಯನು ಹತ್ತಿದ ಸಮರ್ಥ
ಉರಗ ಭೂಷಣರೂಪ ಕಾರ್ತಿಕ ಕರ್ತ
ಬೇಕೆಷ್ಟು ಧರ್ಮ ಮಾಡಿದ ಬಾಳರ್ಥ ॥೨೬॥

ಬಾಜೀರಾಯನು ಭಕ್ತಿ ಮಾಡಿದ ಬಾಳ
ಮೂಜಗದೊಡೆಯನು ಮುಂದೆ ಧರ್ಮಗಳ
ರಾಜೇದ ಬ್ರಹ್ಮರಿಗೆ ಅನ್ನದಾನಗಳ
ಪೂಜೆಗಟ್ಟಿದ ಮುತ್ತುಮಾಲೆ ರತ್ನಗಳ ॥೨೭॥

ಅಕ್ಷರ ಮೂರುಳ್ಳ ಶಿಖರಕ್ಕೆ ಒಂದು
ಲಕ್ಷವರದ ಕಳಸ ಇಟ್ಟಾನು ತಂದು
ಸಾಕ್ಷಿ ತಾ ಕಾರ್ತಿಕೇಶ್ವರಗ ಮತ್ತೊಂದು
ಅಪೇಕ್ಷ ಮಾಡಿದ ಸುತರು ಬೇಕೆಂದು ॥೨೮॥

ಪುತ್ರನ ಬಯಸಿದನು ಬಾಜೀರಾಯ
ಕಾರ್ತಿಕೊಜ್ರ ಉಡುಗರೆ ತುರಾಯ
ಪ್ರಾರ್ಥನೆ ಮಾಡಿದ ಭಕ್ತಿ ಸಾರಾಯ
ಪರ್ವತ ಗಿರಿಯಿಂದ ಇಳಿದ ಮಹಾರಾಯ ॥೨೯॥

ರಂಗಮಂಟಪ ಚಂದ್ರ ಸತಿಗೆ ಪರಮ
ಭಂಗಾರ ಕಳಸ ಹೊಳೆವ ದೇವಾರವ
ಗಂಗಾಧರನ ವರಪುತ್ರನ ಕರವ
ಮಂಗಲ ಪದವಿಯ ಕೊಡುವನು ಪವರ ॥೩೦॥



ಹಂಪಸಾಗರ ನಡೆದು ಗೂಡೂರ ದಾಟಿ
ಕೆಂಪು ಕನಕಗಿರಿಯ ಹೊಸ ಪ್ಯಾಟಿ
ಅಪರಿಮಿತವಾದ ಬಾಗಡ ಕೋಟಿ
ತಪ ದೂರವಾಯಿತು ಖಾದಿಯ ಕೋಟಿ ॥೩೧॥

ಬೂದಿಹಾಳದ ಆಚಾರಿಯ ಕಂಡು
ಬಾದಾಮಿಯ ತಳದೊಳು ಇಳಿಸಿದ ದಂಡು
ಆ ದಿನ ಶರಣರ ಬೆಟ್ಟಿ ತಕ್ಕೊಂಡು
ಹೋದಾನು ದೀಕ್ಷಿತರ ಪಾದಕ್ಕೆಯೆಂದು ॥೩೨॥

ಗುರ್ಲಹೊಸೂರ ಹೊಕ್ಕ ಶ್ರೀಮಂತ
ಆರು ಮೂರು ತಾಸು ಹರುಷಾಗಿ ನಿಂತ
ಧರೆಯೊಳು ದೀಕ್ಷಿತರ ಪಾದ ಪವಿತ್ರ
ಭರ್ಜರಿ ತಸರೀಪ ಕೊಡಿಸಿದ ವಸ್ತ್ರ ॥೩೩॥

ಕಿತ್ತೂರ ಮಲ್ಲೇಂದ್ರ ಭೂಪನು ಕೇಳಿ
ಹತ್ತು ಸಾವಿರ ಮಂದಿ ಹಿಡಿಸಿದ ಕಾಳಿ
ಅತ್ತೆ ನೀಲವ್ವಗ ದುಃಖವ ಪೇಳಿ
ಪುತ್ರರ ಶೋಕೆಂದು ಧೈರ್ಯವ ತಾಳಿ ॥೩೪॥

ಅತ್ತಿಯ ಪಾದಕ್ಕೆ ವಂದನೆ ಮಾಡಿ
ಸತ್ಯುಳ್ಳ ತಾಯಿ ನೀಲವ್ವನ ಕೊಂಡಾಡಿ
ಬಂತವ್ವ ಶ್ರೀಮಂತ ಬಾಜೀರಾಯ ನೋಡಿ
ಇರಬೇಕು ಸತಿಯರು ಪ್ರೀತಿಂದ ಕೂಡಿ ॥೩೫॥

ಹಿರಿಯ ಬಾಪುಸಾಹೇಬನ ಕರೆದ ಮಲ್ಲೇಂದ್ರ
ಮರಗಬ್ಯಾಡ ನನ್ನ ಮಗನೆ ದೇವೇಂದ್ರ
ಬರತೀನಿ ಕೇಳೊ ಬೇಗನೆ ಅಮರಸುಂದ್ರ
ಶರಿರಕೊಪ್ಪುವ ಮುಖ ಸೂರ್ಯಚಂದ್ರ ॥೩೬॥

ಬರೆಸಿದ ಅರಮನಿ ಬಂದರ ಬದಕ
ವರ ವಜ್ರಮುತ್ತುಮಾಣಿಕ ದೊಡ್ಡ ಪದಕ
ಹರುಷದಿ ಗಳಿಸಿದ ಅರಮನಿ ಬದುಕ
ಕರೆದು ಒಪ್ಪಿಸಿದನು ಬಾಪುಸಾಹೇಬನ ಜರಕ ॥೩೭॥

ಆನೆ ಕುದುರೆ ಮಂದಿ ತೋಪೆಲ್ಲ ತರಿಸಿ
ನೀನು ಸಲಹು ಎಂದು ಹಸ್ತಾವ ಇರಿಸಿ
ಜ್ಞಾನುಳ್ಳ ಬಾಪುಸಾಹೇಬನ ಹರಸಿ
ಅನುವಾಗಿ ಮಗನಿಗೆ ಬುದ್ಧಿಯ ಸುರಿಸಿ ॥೩೮॥

ಚಿಕ್ಕ ತಮ್ಮರೊಳು ಪ್ರೀತಿಲಿ ಕೂಡಿ
ಅಕ್ಕರದಿಂದಲ್ಲಿ ಕೂಡಿ ಮಾತಾಡಿ
ಮಕ್ಕಳು ನೀವಿಬ್ಬರೂ ಒಡಗೂಡಿ
ದುಕ್ಕ ಸೈರಿಸೋ ನಿನ್ನ ಹಡೆದಾಕಿ ನೋಡಿ ॥೩೯॥

ಸತಿಯ ಚನ್ನವ್ವನ ಪ್ರೀತಿಯ ಗಂಡ
ಅತಿ ದುಃಖ ಮಾಡಿದ ಮಲ್ಲೇಂದ್ರ ಪುಂಡ
ಸತಿಯಾರು ಭೂಮಿಗೆ ಹೊರಳಿದ್ದು ಕಂಡ
ಪತಿ ಮಲ್ಲೇಂದ್ರಭೂಪ ತಾನೆತ್ತಿಕೊಂಡು ॥೪೦॥

ಅಳಬೇಡ ನೀ ನನ್ನ ಕಳ್ಳುಳ್ಳ ಸತಿಯೆ
ಎಳೆಯ ಮಕ್ಕಳ ಮ್ಯಾಲ ಇರಬೇಕು ರತಿಯ
ಬಳಗಕ್ಕೆ ಕುಡುತಲಿ ನೀ ಮೇಲ್ಮತಿಯ
ಬಾಳಲೋಚನ ಶಿವಪಾದವೆ ಗತಿಯ ॥೪೧॥

ರಾಜಲಕ್ಷ್ಮಿ ಆಳಿಕೊಂಡಿರು ನೀನು
ಬಾಜೀರಾಯನ ಕೂಡ ಹೋದೇನು ನಾನು
ಮೋಜೀನ ಹಿರಿಯತ್ತಿ ನೀಲವ್ವನು
ಭುಜಬಲ ಐದಾನು ಬಾಪುಸಾಹೇಬನು ॥೪೨॥

ಮಡದಿ ಕರೆದು ಅತ್ತಿಕೈಯೊಳು ಕೊಟ್ಟು
ನಡುವಿನ ಪುತ್ರನ ಕರಕೊಂಡು ಹೊಂಟು
ಗಡೆ ಕಿಲ್ಲೆದೊಳು ಶಿವಬಸಪ್ಪನ ಇಟ್ಟು
ಎಡಬಲ ಮಕ್ಕಳೊಳು ನೀನು ಶ್ರೇಷ್ಠ ॥೪೩॥

ಗುರುಪುತ್ರ ವೀರಪ್ಪಗ್ಹೇಳಿದ ಬುದ್ಧಿ
ಬರೆಬರೆದು ಕಳಸಯ್ಯ ಅರಮನಿ ಸುದ್ದಿ
ಪರದಂಡು ಬಂದರ ಹಾಕೈ ಗುದ್ದಿ
ಕರೆದು ಹೇಳಿದನು ಕುರುಬರಿಗೆ ಬುದ್ಧಿ ॥೪೪॥

ಅರಮನಿ ಅಂಗಳ ಹೊರೆಯಕ್ಕ ಬಂದು
ವರಪುತ್ರ ಬಾಪುಸಾಹೇಬನ ಕರೆತಂದು
ಹಿರಿಯಳ ವಾಕ್ಯವ ಮೀರಬೇಡೆಂದು
ಗುರುತದ ವಚನವ ತಕ್ಕೊಂಡ ನೊಂದು ॥೪೫॥

ಆರು ಸಾವಿರ ಫೌಜು ಕೂಡಿ ಮಲ್ಲೇಂದ್ರ
ಸ್ವಾರಿ ಹೊಂಟಿತು ಅಮರಾವತಿಯ ದೇವೇಂದ್ರ
ಏರಿದನಾನೆ ಅಂಬಾರಿಯ ನಂದ
ಭರದಿಂದ ಹೊಂಗಲಕ ಬಂದ ಮಲ್ಲೇಂದ್ರ ॥೪೬॥



ಹರಿಭಕ್ತ ಬಾಜೀರಾಯನು ಸಾಗಿ
ಮರಿಹಾಳ ದಾಟಿ ಇಳಿದಾನು ಹೋಗಿ
ದೊರೆ ಮಲ್ಲಸರ್ಜನು ತಾ ಇದಿರಾಗಿ
ಪರಿಗಟ್ಟಿ ನಿಂತಾನು ತಾ ಚಲುವಾಗಿ ॥೪೭॥

ಕಿತ್ತೂರ ದೇಸಾಯಿ ಬಂದದ್ದು ಕಂಡು
ಹಂತೇಲಿದ್ದವರನ್ನು ತಾ ಕರೆಸಿಕೊಂಡು
ಉತ್ತರದೇಶಕ್ಕೆ ನಡೆಸಿದ ದಂಡು
ಸತ್ಯುಳ್ಳ ಬೆಳಗಾವಿ ಕಿಲ್ಲೇವ ಕಂಡು ॥೪೮॥

ಪುಣೇದ ಮಾರ್ಗವ ಹಿಡಿಸಿದ ಫೌಜು
ಮಾನ್ಯ ಮಾನ್ಯರೆಡಬಲ್ಲ ಬಂದರು ಬಾಜು
ಆನಿ ಕುದುರಿ ಒಂಟಿ ಕಟ್ಟೀತು ರೇಜು
ತಾನೊಂದು ಶ್ರೀಮಂತ ಮಾಡಿದ ಮೋಜು ॥೪೯॥

ಎಡೆಯೂರ ಕೃಷ್ಣನ ಹೊಳೆಯೊಳಗೆಲ್ಲ
ಬಿಡದೆ ನಮ್ಮವರಿಗೆ ಮಾಡಿದ ಗುಲ್ಲ
ನಡುನಾಡ ಹೊಂಗಲದೊಳು ಬರಲಿಲ್ಲ
ಗೌಡ ಶೇಗುಣಿಸಿ ತಾ ಬಂದಾನಲ್ಲ ॥೫೦॥

ಮುಂದಕೆ ಮಿರ್ಜಿಯ ಪುರವನು ದಾಟಿ
ತಂದನು ಶೇಗುಣಿಸಿ ಗೌಡನು ಚೀಟಿ
ಚಂದುಳ್ಳ ತುರಾಯಿ ಮುತ್ತಿನ ಕಂಟಿ
ಮೂರುಸಾವಿರ ಬಿದ್ದ ಜರದ ದುಪ್ಪಟ್ಟಿ ॥೫೧॥

ಅಲ್ಲಪ್ಪ ಗೌಡನು ಹೇಳಿದ ವಾರ್ತಿ
ಬಲ್ಲೀದ ಕಿತ್ತೂರ ದೊರೆಗಳ ಕೀರ್ತಿ
ಎಲ್ಲರೊಳಗೆ ದಯ ಇರಬೇಕು ಪೂರ್ತಿ
ಮಲ್ಲಸರ್ಜಗ ರೊಕ್ಕ ಇಲ್ಲೆಂದ ಕೊರ್ತಿ ॥೫೨॥

ಶ್ರೀಮಂತ ನುಡದಾನು ಗೌಡನ ಜೋಡ
ಜುಮೇದಾರನಾಗಿ ಒಗೆದಾನು ನಾಡ
ಬ್ರಹ್ಮರು ಮರು ಒಗತಾನ ಮಾಡಿದ ಕೇಡ
ನಮ್ಮ ಜೋಯಿಸರ್ನ ಬಡಿತಾನ ನೋಡ ॥೫೩॥

ಸರಕಾರ ಎದುರಿನ ಬಾಕಿಯ ರಸ್ತಾ
ದರಕಾರ ಇಲ್ಲೆಂದು ಇಟ್ಟುಕೊಂಡ ಸ್ವಸ್ತಾ
ಹಿರಿಮಾಣಿಕೇಶ್ವರನೊಳು ಮಾಡಿದ ಕಸ್ತಾ
ದೊರೆ ಮಲ್ಲಸರ್ಜನು ಮಾಡಿದ ಮಸ್ತಾ ॥೫೪॥

ಬಾಕಿಯ ನಕಾರು ಲಕ್ಷವ ಹೊರಿಸಿ
ಹಾಕಿದ ಅಲ್ಲಪ್ಪ ಕತಬಿಯ ಬರಿಸಿ
ವಕೀಲ ಮಾಡಿದ ರಸ್ತಾವ ತರಿಸಿ
ಜೋಕಿಲೆ ಹೇಳಿದ ಮಲ್ಲಸರ್ಜನ ಕರುಸಿ ॥೫೫॥

ಆರು ಲಕ್ಷ ಗೌಡ ಜಾಮೀನ ಆದ
ವೀರಪ್ಪದೇಸಾಯಿ ಭೇಟಿಗೆ ಹೋದ
ಶೂರ ಬಾಜೀರಾಯ ಕೇಳಿದ ಭೇದ
ಬಾರೆಂದು ಹಸ್ತವ ಪಡದವನಾದ ॥೫೬॥

ಮಲ್ಲೇಂದ್ರ ಮಗನಿಗೆ ವಸ್ತ್ರವ ಕೊಡಿಸಿ
ನೆಲ್ಲಿಕಾಯಂಥ ಮುತ್ತುಗಳಿಡಿಸಿ
ಅಲ್ಲಾಬು ಜರತರ ಡಗಲಿಯ ತೊಡಿಸಿ
ಜಲ್ಲಿ ಸತ್ತಿಗೆ ಮುತ್ತಿನ ಗೊಂಡೆ ವಹಿಸಿ ॥೫೭॥

ಮಲ್ಲೇಂದ್ರ ಮಗನಿಗೆ ಮೆಚ್ಚಿ ಶ್ರೀಮಂತ
ಪಾಲಕಿ ಚಾಮರ ಹಿಡಿಸಿದ ಛತ್ರ
ಇಲ್ಲಿಂದ ತಿರುಗಿ ನೀ ನಡೆಯಲೊ ಪುತ್ರ
ಬಲ್ಲೀದ ಶ್ರೀಮಂತ ಹೇಳಿದ ಉತ್ರ ॥೫೮॥

ಕಿತ್ತೂರ ದೊರೆಗಳಿಗೆ ಅಪ್ಪಣೆ ಕೊಟ್ಟು
ಉತ್ತಮ ಬಾಜೀರಾಯನು ದಯವಿಟ್ಟು
ಕುತ್ತೀಗಿ ಕೋದು ಹಿಂದಕ ತಾ ಹೊಂಟು
ಮತ್ತೊಂದು ಗೌಡ ಮಾಡಿದ ಬುದ್ಧಿ ಕೆಟ್ಟು ॥೫೯॥

ಆರು ಲಕ್ಷ ಎನ್ನ ಜಾಮೀನ ಕೊಟ್ಟು
ದಾರಿಯೊಳ್ಳಿಂದಕ್ಕೆ ತಿರುಗಿದಿ ಹೊಂಟು
ಬಾರಯ್ಯ ಶ್ರೀಮಂತ ಸ್ವಾರಿಯ ಗುಂಟ
ಬರುವಂತೆ ಶ್ರೀಮಂತಗೋಸ್ತ್ರವ ಕೊಟ್ಟ ॥೬೦॥

ಅಲ್ಲಪ್ಪಗೌಡನ ಮಾತನು ಮೀರಿ
ಮಲ್ಲೇಂದ್ರ ಹಿಂದಕ್ಕೆ ಬರಲಿಲ್ಲ ಸಾರಿ
ನಿಲ್ಲದೆ ಪಟ್ಟದ ಆನೆಯನೇರಿ
ಇಲ್ಲಿಂದ ಒದಗಿ ಬಂದಿತು ಇದಿಮಾರಿ ॥೬೧॥

ಅರುವತ್ತು ಸಾವಿರ ಫೌಜವ ಕೂಡಿ
ಹರಿಭಕ್ತ ಬಾಜೀರಾಯನ ಒಡಗೂಡಿ
ಸೆರೆಹೊಕ್ಕನು ಪುಣ್ಯದರವಾನೀ ನೋಡಿ
ಭೇರಿ ದುಂದುಭಿ ಕರಿ ತೋಫಿನ ಗಾಡಿ ॥೬೨॥



ಊರ ಬಿಟ್ಟು ಹರದಾರಿ ಇಳಿದಿತು ದಂಡು
ಘೋರಾಗಿ ಫೌಜೆಲ್ಲ ಆದೀತು ಬಂಡು
ನೂರಾರು ವೈರಿಯ ಕಣ್ಣೀಲೆ ಕಂಡು
ಘೋರ ಘಾತವ ಮಾಡಿದ ಅಲ್ಲಪ್ಪಗೌಂಡ ॥೬೩॥

ಸುತ್ತಿನ ದೇಶಪಾಂಡೆಯರೆಲ್ಲರು ಕೂಡಿ
ಹತ್ತು ವರ್ಷದ ಬಾಕಿ ಲೆಖ್ಖವ ಮಾಡಿ
ಎಂತೆಂಥವರಿಗೆ ಹಾಕಿದ ಬೇಡಿ
ಸತ್ತರ ಬಿಡಲಿಲ್ಲ ಕಟ್ಯಾರ ಕೂಡಿ ॥೬೪॥

ಬೈಲೂರ ದೇಶಪಾಡೆರೆಲ್ಲರ ಮನಹೇಸಿ
ಬಲ್ಲೀದ ಬಾಜೀರಾಯನ ಓಲೈಸಿ
ತಲೆಯ ಮೇಲಿನ ಕಳಸ ನೆಲಕ ಅಪ್ಪಳಿಸಿ
ಮಲ್ಲೇಂದ್ರ ಮಾಡಿದ ಉಪದ್ರವ ನೆನಿಸಿ ॥೬೫॥

ಕೇಳಿ ಶ್ರೀಮಂತನು ಆದಾನು ಸಿಟ್ಟ
ಒಳಗ ಮುದೋಳದವರ ಮನೆಯನು ಕೊಟ್ಟ
ತಿಳಿಯ ಬಂದ ಕುದುರಿಯ ಚೌಕಿಯ ಇಟ್ಟ
ಕಳೆಗುಂದಿ ಮಲ್ಲೇಂದ್ರ ಕೈಕಾಲು ಬಿಟ್ಟ ॥೬೬॥

ಕಿತ್ತೂರ ಪುರದೊಳು ನೀಲವ್ವ ತಾಯಿ
ಸತ್ಯುಳ್ಳ ಮಲ್ಲೇಂದ್ರ ಭೂಪಗ ಮಾಯಿ
ಮತ್ತ ಬರಲಿಲ್ಲ ಬಿಡತಾಳ ಬಾಯಿ
ಅತ್ತ ಹೋದನು ಮಲ್ಲಸರ್ಜದೇಸಾಯಿ ॥೬೭॥

ಮಡದಿ ಚನ್ನವ್ವನು ಚಿಂತಿಲೆ ಬಾಳ
ಸಡಗರ ಸಂಪತ್ತು ಬಿಟ್ಟು ಮನೆಯೊಳು
ಒಡೆಯ ಮಲ್ಲೇಂದ್ರನ ಒಡಸಾಗ್ಯಾಳ
ಕೂಡಿ ಮಾತಾಡಿ ಚನ್ನವ್ವತಾಯಿಗಳು ॥೬೮॥

ಗಂಡಮಾಲೆ ಹುಣ್ಣು ಹುಟ್ಟೀತು ಆಗ
ಬೆಂಡಾಗಿ ಒಣಗಿದ ಗೌಡನು ಬೇಗ
ಕಂಡೇನು ಶೇಗುಸಿಣಿ ಪುರವನು ಹ್ಯಾಗ
ಗಂಡುಮಕ್ಕಳ ಕಾಣದಂಗಾದೀತ್ಹೀಗ ॥೬೯॥

ಡೋಲಿಯೊಳಗೆ ಕುಂತು ಪುಣೇವ ಬಿಟ್ಟು
ಮಲ್ಲೇಂದ್ರ ಭೂಪನ ಪುಣ್ಯವಳವಟ್ಟು
ಆಲದ ಶೇಗುಣಿಸಿ ಪುರಕೆ ತಾ ಹೊಂಟು
ಗಲ್ಲವೊಡೆದು ಗೌಡ ತಾ ಪ್ರಾಣವ ಬಿಟ್ಟ ॥೭೦॥

ಶೇಗುಣಿಸಿ ಗೌಡನು ಎಂತೆಂಥ ಧನಿಕ
ಆಗ ಮಲ್ಲೇಂದ್ರನು ಮಾಡಿ ದುಃಖ
ಆಗ ಖರ್ಚಿನು ಮಾಡಬೇಕೆಂದು ರೊಕ್ಕ
ಆಗಲೆ ಹೋದನು ಕಾರಭಾರಿ ಪಕ್ಕ ॥೭೧॥

ಈಗ ಸಂಗಪ್ಪನು ಕರದಾನು ಭೂಪ
ಕರದಾನು ಕಣ್ಣು ಕೆಂಪಗೆ ಮಾಡಿ ಕೋಪ
ದೊರೆ ಮಲ್ಲಸರ್ಜನು ಹೇಳಿದ ಶಾಪ
ದರಬಾರಕ್ಹೋಗಂದ ದಿನ ಹತ್ತು ಕೇಪ ॥೭೨॥

ಮಾಣಿಕೇಶ್ವರನಲ್ಲಿ ಮುನಿದಾರು ಅವರು
ಪ್ರಾಣ ಸಂಕಟವನ್ನು ಮಾಡಿದರವರು
ಜಾಣ ಕಾರಕೂನರು ಕೊಡಲಿಲ್ಲ್ಯಾರು
ಕ್ಷೋಣಿಕ್ಷೋಣಿ ದ್ರವ್ಯ ಸೂರಿಮಾಡಿದರು ॥೭೩॥

ಬಾಜೀರಾಯನ ಭೆಟ್ಟಿ ಮಾಡವರಿಲ್ಲ
ರಾಜರಾಜರ ಕೂಡಿ ಬೆರಗಾದರಲ್ಲ
ತೇಜಿ ಏರಿಹೋದರ ಪರವಾನಿಗಿಲ್ಲ
ರಾಜ ಮಲ್ಲೇಂದ್ರನು ಸೊರಗಿದನಲ್ಲ ॥೭೪॥

ವೀರಸಂಗಪ್ಪಗ ಹೇಳಿದ ಅರಸ
ಕರ್ನಾಡ ತಾಳದೊಳು ಆಯಿತು ಸರಸ
ವೀರಸಂಗಪ್ಪಗ ಮಾಡಿದ ಬರಸ
ಇರಬೇಕು ಮತ್ತೆ ಇನ್ನೇಸು ವರುಷ ॥೭೫॥

ಬಾಜೀರಾಯನು ಬಂದು ಹೊಕ್ಕಾನು ತೋಟ
ರಾಜರಾಜರು ಕೂಡಿ ಆಡಿ ನೀರಾಟ
ಮೋಜೀಲೆ ಮಲ್ಲೇಂದ್ರಗ್ಹೇಳಿದ ಊಟ
ರಾಜಾಧಿಪತಿ ಬಾಜೀರಾಯನು ಶ್ರೇಷ್ಠ ॥೭೬॥

ಶೀಲವಂತನು ಮಲ್ಲಸರ್ಜನು ಭೂಪ
ಒಲ್ಲೆನೂಟಕೆಂದರೆ ಬಂದೀತು ಪಾಪ
ಬಲ್ಲೀದ ಶ್ರೀಮಂತ ಮಾಡ್ಯಾನು ಕೋಪ
ಮಲ್ಲಸರ್ಜನು ಮುಂದಕ್ಹಾಕಿದ ಲಾಪ ॥೭೭॥

ಕಾಂತ ಶ್ರೀಮಂತನಿಗ್ಹೇಳಿದರಲ್ಲ
ಕಿತ್ತೂರ ದೇಸಾಯಿ ಊಟಕ್ಕೆ ಒಲ್ಲ
ಸತ್ಯುಳ್ಳ ಶಿವಭಕ್ತ ಉತ್ತಮ ಶೀಲ
ಮತ್ತೆ ಫರಾಳಕ್ಕೆ ಬರುವ ಕುಶಾಲ ॥೭೮॥



ಅರಮನೀ ರಂಗಮಂಟಪವ ಸಾರಿಸಿ
ಪರಿಪರಿಯ ಹಣ್ಣುಸಕ್ಕರಿ ತರಿಸಿ
ದೊರೆ ಮಲ್ಲಸರ್ಜನನ ಬೇಗನೆ ಬರಿಸಿ
ಪರಿಪೂರ್ಣ ಪಂಚಫಳಾರವ ಬೆರೆಸಿ ॥೭೯॥

ನಾಕು ಸಾವಿರ ಜನ ಮಾಡಿ ಫಳಾರ
ಫಕ್ಕನೆ ತರಿಸಿದ ಪಾತರಮ್ಯಾಳ
ಪಕ್ಕಾಕಾರಕೂನನಿಗೆ ಹೇಳಿ ಕಿವಿಯೊಳ
ಲೆಕ್ಕವಿಲ್ಲದೆ ಜನ ಕೂಡೀತು ಬಾಳ ॥೮೦॥

ಭರ್ಜರಿ ತಸರೀಪ ತರಿಸಿದ ಬ್ಯಾಟಿ
ಮೂರು ಸಾವಿರ ಬಿದ್ದ ಜರದ ದುಪ್ಪಟ್ಟಿ
ಸುರ್ತಿ ಜೋಡಿನೆಳಿ ಮುತ್ತಿನ ಕಂಠಿ
ಮಾಡಿದ ಮಲ್ಲಸರ್ಜಗ ಕೈಮುಟ್ಟಿ ॥೮೧॥

ಕನಸಿನೊಳಗೆ ಬಾಪುಸಾಹೇಬನ ಕಂಡು
ತೊನಸಿಹಾಳ ಗೌಡನ ಮಗಳನೆತ್ತಿಕೊಂಡು
ಮುನಿಸು ಮಾಡಬೇಡ ಮಗನೆ ಪ್ರಚಂಡ
ಅನುವಾಗಿ ಮದುವಿಯ ಮಾಡು ತಕ್ಕೊಂಡು ॥೮೨॥

ಸುಂದ್ರ ಮಲ್ಲೇಂದ್ರನ ನಡುವಿನ ಪುತ್ರ
ಚಂದ್ರಮನಕ್ಕಿಂತ ಚಲುವ ಸಮರ್ಥ
ಅಂದಳದೊಳು ತಾ ಮಾಡಿದ ಮೂರ್ತ
ತಂದನು ಕಿತ್ತೂರ ಪುರಕೊಂದು ಗುರ್ತ ॥೮೩॥

ವೀರಪ್ಪದೊರೆಗಳು ಬಂದದ್ದು ಕೇಳಿ
ಅರಮನಿ ಹಿರಿಯರು ಹರುಷವ ತಾಳಿ
ದೊರೆ ಮಲ್ಲಸರ್ಜನ ಬರಲಿಲ್ಲ ದಾಳಿ
ಹಿರಿಯಣ್ಣ ಬಾಪುಸಾಹೇಬನ ಕೇಳಿ ॥೮೪॥

ಅಳಿಯನ ಕಾಣದ ಅತ್ತೆವ್ವ ಮರುಗಿ
ಕಳೆಗುಂದಿ ಕೈಕಾಲು ಶರಿರವು ಸೊರಗಿ
ಬಳಗ ನೋಡಲಿಕ್ಕೆ ಬರಲಿಲ್ಲ ತಿರುಗಿ
ಹೊಳೆವ ಚಂದ್ರಸಾಲಿ ಮೇಲೆ ಉಪ್ಪರಗಿ ॥೮೫॥

ದೊಡ್ಡವ್ವನ ದನಿಯನು ಕಾಣದೆ ಮತ್ತ
ಹಿಂಡ ಮಂದಿಯ ಮುಂದೆ ನೋಡಿದಳು ಕುಂತ
ಕೆಂಡಗಣ್ಣಿನ ಶಿವ ಕರೆದಾನು ಅತ್ತ
ಮಾಡಿದ ಪ್ರಭುವಿನ ಪಾದವ ನಿತ್ಯ ॥೮೬॥

ಅಪ್ಪ ಮಲ್ಲೇಂದ್ರಗ ಪ್ರೀತಿಯಿಟ್ಟಳು
ಬಾಪುಸಾಹೇಬನಿಗೆ ಧೈರ್ಯ ಕೊಟ್ಟಳು
ಚಪ್ಪಳಿಕ್ಕೆ ಚೆಲು ತೊಟ್ಟಿಲ ಕಟ್ಟಿದಳು
ಮುಪ್ಪಿನತ್ತೆವ್ವ ಪ್ರಾಣ ಬಿಟ್ಟಾಳು ॥೮೭॥

ರುದ್ರವ್ವನ ಹೆಸರು ಅಡಗೀತು ಇಂದು
ಚಂದ್ರಕಾಂತಿವಳ ಪುತ್ರರು ಬಂದು
ಸುಂದ್ರ ಮಲ್ಲೇಂದ್ರಗ ಕಾಗದವೊಂದು
ಮಲ್ಲೇಂದ್ರನ ಕೈಯಾಗ ಕೊಟ್ಟರು ತಂದು ॥೮೮॥

ಬರೆದ ಕಾಗದ ಮಲ್ಲೇಂದ್ರನು ನೋಡಿ
ಧರಣಿ ಮೇಲೆ ಬಿದ್ದು ತಾ ಹೊರಳಾಡಿ
ಮೂರು ಮಕ್ಕಳ ಪರದೇಶಿ ಮಾಡಿ
ಹರನೊಳು ಅತ್ತೆವ್ವ ಹೋದಳೆ ಕೂಡಿ ॥೮೯॥

ಬಾದ್ದುರ ಸೆರೆಯನು ಐದಾಗ ಅತ್ತೆ
ಸಾಧಿಸಿ ಜಪತಪ ಮಾಡಿದಿ ನಿತ್ಯೆ
ಮಹದೇವನ ಪೂಜೆ ಮಾಡಿದಿ ಅತ್ತೆ
ಹೋದಂಥ ದೇಶಗತಿ ನಿಲ್ಲಿಸಿದಿ ಮತ್ತೆ ॥೯೦॥

ಅತ್ತತ್ತು ಮಲ್ಲೇಂದ್ರ ಬಿದ್ದನು ನೆಲಕೆ
ಮುತ್ತಿನ ಸರಗಳು ಹರದಾವು ಪದಕೆ
ಉತ್ತಮ ಶುಭಗಳು ಆಗಲಿಕ್ಕೆ
ಹತ್ತೀತು ಮಲ್ಲಸರ್ಜನ ಜೀವಕ್ಕೆ ॥೯೧॥

ಚಿಂತೀಲೆ ಸೊರಗಿದ ಮಲ್ಲೇಂದ್ರಭೂಪ
ನಿತ್ಯ ದಿನದಿನಕೊಂದಾದನು ರೂಪ
ಹತ್ತೀತು ಶರಿರಕ್ಕೆ ಹಿಮಜ್ವರ ತಾಪ
ಹಂತೇಲಿದ್ದವರಿಗೆ ಮಾಡಿದ ಕೋಪ ॥೯೨॥

ಮೂರು ವರುಷ ಕುಳಿತು ಮಲ್ಲೇಂದ್ರ ಪುಂಡ
ಮರಣ ಕಾಲಗತಿ ಬರುವದ ಕಂಡ
ದೊರೆ ಮಲ್ಲಸರ್ಜನು ಯೋಚನೆಗೊಂಡ
ಬರೆದು ಸಿಕ್ಕೇದ ಪತ್ರ ಕಳಿಸಿದ ಪುಂಡ ॥೯೩॥

ನೇಮದಿ ಪುಣ್ಯದ ಶಹರವ ಬಿಟ್ಟು
ರಾಮಲಿಂಗಪ್ಪನು ಅಲ್ಲಿಂದ ಹೊಂಟು
ತಮ್ಮಗಳಿಗೆ ತಿಗಡಿ ಹೊಂಗಲ ಕೊಟ್ಟು
ಬ್ರಹ್ಮ ಬರೆದ ಬಾವುಸಾಹೇಬನು ಶ್ರೇಷ್ಠ ॥೯೪॥



ಆರು ದಿನಕ ಬಂದು ರಾಮಲಿಂಗಪ್ಪ
ಅರಸಿ ಚನ್ನವ್ವಗ ಹೇಳಿದ ಶಾಪ
ಧರೆಗೆ ಅರಸು ಬಾಪು ಸಾಹೇಬನು ಭೂಪ
ಬಾರವ್ವ ಶಿಕ್ಕೆ ಹಾಕಿ ಹರಸೂನು ತೋಫ ॥೯೫॥

ವಿಸ್ತಾರ ದಿನದಲ್ಲಿ ಸದರವ ಮಾಡಿ
ಸಮಸ್ತರು ಮಕ್ಕಳು ಬಂದರು ಕೂಡಿ
ಮತ್ಸರ ತಾಯಿ ಚನ್ನವ್ವ ದಯಮಾಡಿ
ಸ್ವಸ್ತಾಗಿ ಶಿಕ್ಕೆ ಹಾಕಿ ಮಗನ ಕೊಂಡಾಡಿ ॥೯೬॥

ರಾಮಲಿಂಗಪ್ಪನ ಕೇಳ್ಯಾಳು ಸುದ್ದಿ
ದೊರೆ ಮಲ್ಲೇಂದ್ರಗ ಹುಟ್ಟಿತ್ಯಾಕಿಂಥ ಬುದ್ಧಿ
ಪುರದೊಳು ಮಹಾಪ್ರಸಾದವ ನೀಡಿ
ತರಿಸಬೇಕೆಂದಳು ಪುರುಷನ ಸುದ್ದಿ ॥೯೭॥

ಸಕ್ಕರಿ ಹಂಚಿ ಸಿಕ್ಕೇವ ಹಾಕಿದಕ
ದುಃಖ ಮಾಡುತ ನಡದಾರು ಪುಣೇಕ
ಸುಖದಿಂದ ಅರಮನ್ಯಾಗಿರುವದಿನ್ಯಾಕ
ಗಕ್ಕನೆ ಬಂದಾರು ತಿಗಡಿಯ ಪುರಕ ॥೯೮॥

ಅರ್ಥ ಖರ್ಚು ಮಾಡಿ ಬೆಳದೀತು ವಿಘ್ನ
ಕಾರ್ತೀಕ ಮಾಸದಿ ತುಳಸಿಯ ಲಗ್ನ
ಕರ್ತೃ ಬಾಜೀರಾಯ ಮಾಡಿದ ಆಜ್ಞಾ
ತುರ್ತ ಪ್ರಮುಖರು ಬರುವ ಸಂಜ್ಞಾ ॥೯೯॥

ಹತ್ತು ಸಾವಿರ ಜನ ಬಂದೀತು ಎಲ್ಲ
ಕಿತ್ತೂರ ದೊರೆ ತಾ ನೋಡ ಬರಲಿಲ್ಲ
ಮತ್ತೆ ಶ್ರೀಮಂತನು ಮಾಡಿದ ಗುಲ್ಲಾ
ಛತ್ರಚಾಮರ ರಾಹುತರ ಕಳುಹಿದನಲ್ಲಾ ॥೧೦೦॥

ಕರೆಯ ಬಂದವರೆಲ್ಲಾ ಬೆರಗಾಗಿ ನೋಡಿ
ಶರಿರದ ನಾಡಿಯ ಹಿಡದು ಮಾತಾಡಿ
ಭರದಿಂದ ಬಂದಾರೊ ಅರಮನಿಗೋಡಿ
ದೊರೆ ಮಲ್ಲಸರ್ಜನ ಕಳುಹೊ ದಯಮಾಡಿ ॥೧೦೧॥

ಹೇಳಲಿಲ್ಲ್ಯಾಕೆಂದು ಮಾಡಿದ ಸಿಟ್ಟಾ
ಒಳ್ಳೇ ಬಣ್ಣದ ಮೇಣೇವ ಕೊಟ್ಟಾ
ಬಾಳ ರಾತ್ರಿಯೊಳು ಪುಣೇವ ಬಿಟ್ಟಾ
ತಿಳದು ಬಂದಿಳಿದಾರೊ ಖಾತ್ರಿಯ ಘಟ್ಟಾ ॥೧೦೨॥

ಸಕ್ಕರೆನೀರಿನ ಆಧಾರ ಮಾಡಿ
ಚಕ್ಕನೆ ಬಂದರು ಎಡೆಯೂರ ನೋಡಿ
ಮುಕ್ಕಣ್ಣ ವೀರಭದ್ರನ ಕೊಂಡಾಡಿ
ಲೆಕ್ಕವಿಲ್ಲದೆ ಅಯ್ಯಗೋಳಿಗೆ ನೀಡಿ ॥೧೦೩॥

ಅರಸು ಮಲ್ಲೇಂದ್ರನು ಹರುಷದಿ ಕಂಡು
ತರಿಸಿದ ಕಿತ್ತೂರ ಅರಮನೆ ದಂಡು
ವರ ಸುತಸತಿ ಸೊಸ್ತೇರ ಹಿಂಡು
ಗುರಸಿದ್ಧಪ್ಪ ನೀ ಬಾರೊ ಕರಕೊಂಡು ॥೧೦೪॥

ಶಿವಶಂಕ್ರೆಪ್ಪನ ಪುತ್ರನ ನೋಡಿ
ದೊರೆ ಬಾಪು ಸಾಹೇಬ ವತ್ರವ ಮಾಡಿ
ಹರುಷದಿ ಅಣ್ಣತಮ್ಮರ ಒಡಗೂಡಿ
ಹರ ದುರದುಂಡಿಯ ಪಾದವ ಕೊಂಡಾಡಿ ॥೧೦೫॥

ಮಡದಿ ಚನ್ನವ್ವನು ಪಾಲ್ಕಿಯನೇರಿ
ಸಡಗರ ಕುದುರೆಯ ತಿರವುತ ಪೇರಿ
ಹಿಡದಾರು ದುರದುಂಡಿ ಅರಭಾವಿ ದಾರಿ
ಒಡೆಯ ಮಲ್ಲೇಂದ್ರನ ಬಂದೀತು ಸ್ವಾರಿ ॥೧೦೬॥

ಮಕ್ಕಳ ಪಾಲಿಕಿ ಕಂಡು ಮಲ್ಲೇಂದ್ರ
ಚಕ್ಕನೆ ಮೇಣೇವ ಇಳಿಸಿ ದೇವೇಂದ್ರ
ದುಃಖ ಮಾಡಿದ ಬಾಪುಸಾಹೇಬನ ಸುಂದ್ರ
ತೆಕ್ಕಿಯೊಳಗ ಬಿಗಿದಪ್ಪಿ ಮಲ್ಲೇಂದ್ರ ॥೧೦೭॥

ಪುತ್ರರ ಮೂವರ ಮಕ್ಕಳ ಹರಿಸಿ
ಹೊತ್ತ ಸೆಲ್ಲೇದಿಂದ ಕಣ್ಣೀರ ಒರಿಸಿ
ಮುತ್ತು ಮಾಣಿಕದೊಂದು ಮಾಲಿಯ ತರಿಸಿ
ಪೃಥ್ವಿಪತಿ ಬಾಪುಸಾಹೇಬಗ ಧರಿಸಿ ॥೧೦೮॥

ಹರಹರ ಎನುತಲಿ ಒಳಿಯಾಕ ಬಂದು
ಹರ ದುರದುಂಡಿಗೆ ಕಾಣಿಕೆ ತಂದು
ವರಗಳ ಎಣಿಸಿ ತಂದಾರು ನೂರೊಂದು
ದುರದುಂಡಿ ಪಾದವ ಕಂಡೇವು ಎಂದು ॥೧೦೯॥

ಕಷ್ಟಬಿಟ್ಟು ತಾನು ತಂದಂಥ ವಾರ್ತಿ
ಅಷ್ಟುರ ಮುಂದ ತಾ ಹೇಳಿದ ವಾರ್ತಿ
ಪಟ್ಟದ ಚನ್ನವ್ವ ತಂದಳು ಆರ್ತಿ
ಇಟ್ಟರು ಮುತ್ತುಮಾಣಿಕ ಮನಪೂರ್ತಿ ॥೧೧೦॥



ಮಡದಿ ಮಕ್ಕಳು ಮಾತಾಡುತ ಕುಳಿತು
ಮಡದಿ ಚನ್ನವ್ವನು ಹೇಳ್ಯಾಳು ನಿಂತು
ಒಡೆಯ ಲಾಲಿಸು ಎನ್ನ ಕನಸಿನ ಹೊತ್ತು
ಒಡದೀತು ನತ್ತಿನ ಮೇಲಿನ ಮುತ್ತು ॥೧೧೧॥

ಸತಿಯ ಚನ್ನವ್ವನ ಪ್ರೀತಿಯ ಅರಸ
ಮತಿವಂತಿ ಕೇಳು ನಾ ಹೋಗಿ ಮೂರು ವರ್ಷ
ಮುತ್ತು ಒಡದೀತಂದರ ಕನಸೀನ ಸರಸ
ಚಿತ್ತಕ್ಕ ತಾರದೆ ಮಾಡಿದ ಹರುಷ ॥೧೧೨॥

ಹತ್ತು ಸಾವಿರ ನಿತ್ಯ ಜಂಗಮಕುಣಿಸಿ
ಬೆತ್ತಾಸ ಹಣ್ಣು ಸಕ್ಕರಿ ದಣಿದಣಿಸಿ
ಮತ್ತೊಂದು ರೂಪಾಯಿ ಎಣಿಯೆಣಿಸಿ
ಭಕ್ತಿ ಮಾಡಿದ ಜಂಗಮಜನಕೆ ಉಣಿಸಿ ॥೧೧೩॥

ಬೇಡಿದ ಬಯಕೆಯು ಮನಸಿನ ಇಚ್ಛೆ
ಕೂಡಿಸಿಕೊಟ್ಟನು ಮಹದೇವನು ಮೆಚ್ಚಿ
ನೋಡಿ ಬಂದಾರೊ ಹೊಂಗಲವನು ನೆಚ್ಚಿ
ಓಡಿ ಹೋದಾವು ಇಲ್ಲಿಗಿದಿಗಾಳು ಬಿಚ್ಚಿ ॥೧೧೪॥

ಹೊಂಗಲ ಹೊಕ್ಕಾನು ಮಲ್ಲೇಂದ್ರ ಪುಂಡ
ಜಂಗಮರೆಡಬಲ ಮಾರ್ಬಲ ದಂಡ
ಸಂಗನಬಸವನ ಶರಣರ ಹಿಂಡ
ಮಾಂಗಲ್ಯ ಆಶೀರ್ವಾದವನು ಕೈಕೊಂಡ ॥೧೧೫॥

ಬಳ್ಳೊಡಿ ವೀರನ ಪಾದಕ್ಕೆ ಬಂದು
ಬೆಳ್ಳಿ ಬಂಗಾರ ಮುತ್ತು ಕಾಣಿಕೆ ತಂದು
ಒಳ್ಳೇ ವಜ್ರಮಾಲಿ ಹಾಕಿದ ಒಂದು
ಫಾಳಲೋಚನ ಎನ್ನ ಸಲಹು ನೀನೆಂದು ॥೧೧೬॥

ನಾಲ್ಕಾರು ಸಾವಿರ ಮೂರ್ತಿಗೆ ನೀಡಿ
ರೊಕ್ಕ ರೂಪಾಯಿ ವರಭಿಕ್ಷೆವೀಡಾಡಿ
ಮುಕ್ಕಣ್ಣ ವೀರಭದ್ರನ ಕೊಂಡಾಡಿ
ದುಃಖ ಹೆಚ್ಚಿತು ಮಲ್ಲಸರ್ಜನ ನೋಡಿ ॥೧೧೭॥

ಶರಿರದ ವ್ಯಾಧಿ ಹೆಚ್ಚಾಗಿ ಪ್ರಬಲಾ
ದೊರೆ ಮಲ್ಲಸರ್ಜ ಆದಾನೊ ಗಾಲಮೇಲಾ
ಕರಜುರ ಪಾನ ಸಕ್ಕರೆ ತಾನು ಒಲ್ಲಾ
ಎರಡುದ್ದ ಧರಿಸಿದ ಅವಸಾನ ಕಾಲಾ ॥೧೧೮॥

ಹತ್ತು ಸಾವಿರ ಜನ ದುಃಖಿಸಿಕೊಂಡು
ಕಿತ್ತೂರ ಮಾರ್ಗವ ಹಿಡಿದೀತು ದಂಡು
ಮತ್ತ ಶಿವಬಸಪ್ಪ ತಾ ಹಣ್ಣ ತಕ್ಕೊಂಡು
ಬೆತ್ತಾಸ ಕಜ್ಜೂರ ಸಕ್ಕರಿ ಬೆಂಡು ॥೧೧೯॥

ಮಲ್ಲೇಂದ್ರಗೆರಗಿದನು ಶಿವಬಸಪ್ಪ
ಮೆಲ್ಲನೆ ಎಚ್ಚತ್ತು ಮಲ್ಲೇಂದ್ರ ಭೂಪ
ಅಲ್ಲೇ ಕೇಳಿದ ಶಿವಬಸಪ್ಪನ್ನ ಸಾಪ
ಕಿಲ್ಲೇದ ಮ್ಯಾಲ್ಯಾಕ ಹಾರತಾವ್ರ ತೋಪ ॥೧೨೦॥

ಒಡೆಯಾಗ ಮಾಡಿದ ಕುರ್ಸಿಸ ಬಗ್ಗಿ
ಒಡೆಯ ಬಂದರೆಂದು ನಾಡೆಲ್ಲ ಹಿಗ್ಗಿ
ಬಡಜಂಗಮರಿಗೆ ಆದೀತು ಸುಗ್ಗಿ
ಹೊಡಿತಾನು ಐದು ತೋಫ ಹಿಗ್ಗಿಗ್ಗಿ ॥೧೨೧॥

ಅಂತ್ಯಕಾಲಕ್ಕೆ ಭೆಟ್ಟಿ ಆದೀತು ನಿನ್ನ
ಸತ್ಯುಳ್ಳ ಬುದ್ಧಿ ಹಿಂದಾದೀತು ಎನ್ನ
ಸುತರ ಸವನ ಬ್ಯಾಗಕ್ಕಾಗೋ ನೀ ಬೆನ್ನ
ಹಿತದಿಂದ ದೇಶಗತಿ ನಡಿಸೋ ನೀ ಮುನ್ನ ॥೧೨೨॥

ಶನಿವಾರ ಸಂಜಿಕೆ ಬಂದಿತೊ ಸ್ವಾರಿ
ಚಂದುಳ್ಳ ಹೊಂಡೇದ ಬಸವಾನ ತೋರಿ
ಕಂದರ ಕಾಣದಾಂಗ ಆದೀತೊ ಮೋರಿ
ಇಂದ್ಯಾರಿಗ್ಹೇಳಲಿ ಕಂದನ ಸೂರಿ ॥೧೨೩॥

ಒಡೆಯರ ಚೌಕಿಮಠದೊಳು ಬಂದು
ನುಡಿದನು ಮಕ್ಕಳ ಕೂಡಿ ಮತ್ತೊಂದು
ಸಡಗರ ಅರಮನಿ ಹೊಗಲಿಲ್ಲ ಬಂದು
ಹಿಡಿದು ಆಕಳ ದಾನಕೊಟ್ಟ ನೂರೊಂದು ॥೧೨೪॥

ಮೂರು ತಾಸಿಗೆ ಬಂದು ಅರಮನೆ ಹೊಕ್ಕ
ಬೋರ್‍ಯಾಡಿ ಚನ್ನವ್ವ ಮಾಡ್ಯಾಳೊ ದುಃಖ
ಮಾರಾರಿ ಮಲ್ಲೇಂದ್ರಗ ಹತ್ತಿತೋ ಬಿಕ್ಕ
ಅರಮನಿಯವರಿಗೆಲ್ಲಾ ತಪ್ಪಿತೋ ದಿಕ್ಕ ॥೧೨೫॥

ದುಃಖ ಮಾಡಲಿಬೇಡ ಚನ್ನವ್ವ ತಾಯಿ
ಮುಕ್ಕಣ್ಣ ಮುನಿದ ಮೇಲಿಲ್ಲ ಉಪಾಯಿ
ಭಿಕ್ಷ ಕೊಡಿಸು ವಿರಕ್ತರಿಗೆ ರೂಪಾಯಿ
ಮೋಕ್ಷವಾಗಲಿ ಮಲ್ಲಸರ್ಜ ದೇಸಾಯಿ ॥೧೨೬॥



ಅಳಬೇಡೋ ನೀ ನನ್ನ ಒಡಹುಟ್ಟಿದಣ್ಣ
ಹೊಳೆವ ಗಲ್ಲ ಮೋರಿ ತೀರಿತೊ ಬಣ್ಣ
ತಳಮಗೊಳುತಲಿ ತಿರುವ್ಯಾರೊ ಕಣ್ಣ
ಬಳಗಕ್ಕ ಬ್ಯಾಗಿ ಇಕ್ಕಿದ್ಯೋ ನಮ್ಮಣ್ಣ ॥೧೨೭॥

ಎಡಬಲ ಪುತ್ರರು ಬಿಡುತಾರೋ ಬಾಯಿ
ನಡುವಿನ ಮಗನು ವೀರಪ್ಪ ದೇಸಾಯಿ
ಬಡಕೋಬ್ಯಾಡ ನನ್ನ ಹಡದಂಥ ತಾಯಿ
ಬಿಡತಾರೊ ಪ್ರಾಣ ಮಲ್ಲೇಂದ್ರ ದೇಸಾಯಿ ॥೧೨೮॥

ಅರುಣೋದಯ ಕಾಲಕ್ಕೆ ಶರಣ ಮಲ್ಲೇಂದ್ರ
ಮರಣಾದ ಮರ್ತ್ಯದರಸು ದೇವೇಂದ್ರ
ಹರಣ ಹಾರುದ ಕಂಡು ಮಗ ಮಾರಸುಂದ್ರ
ಧರೆಗೆ ಕರಗಿದಂಥ ಪೌರ್ಣಿಮಿ ಚಂದ್ರ ॥೧೨೯॥

ಒಡೆಯ ಮಲ್ಲೇಂದ್ರನು ಸತ್ತಾನು ಭೂಪ
ಹೊಡೆದಾರು ಎಣಿಯೆಣಿಸಿ ಐವತ್ತು ತೋಫ
ಅಡಗೀತು ಮಲ್ಲೇಂದ್ರ ಭೂಪನ ರೂಪ
ಒಡೆಯ ಶ್ರೀವೀರೇಶ ಮಾಡಿದ ಕೋಪ ॥೧೩೦॥

ಸದರಿಗೆ ತಂದಾರು ಮಲ್ಲೇಂದ್ರ ದೊರೆಯ
ಎದೆಯು ಒಡೆದು ಬಾಪುಸಾಹೇಬನು ಹಿರಿಯ
ಮದನಾರಿ ಮಹಾದೇವ ಹೋಯಿತು ಸಿರಿಯು
ಒದಗೀತು ನಿಮಗೀಗ ಮರಣದ ಪರಿಯು ॥೧೩೧॥

ಕೋರಿಮೀಸಿ ಮುತ್ತು ವಜ್ರವ ಇಡಿಸಿ
ನೂರುವರದೊಂದು ಡಗಲಿಯ ತೊಡಿಸಿ
ಸೂರತಿ ಮುತ್ತಿನ ತುರಾಯ ಮುಡಿಸಿ
ಮಾರಾಯ ಥಾಲಪಟ್ಟಿ ತಾನವ ಕೊಡಿಸಿ ॥೧೩೨॥

ಭರಿಜರಿ ಪೈಠಣಿ ಶೆಲ್ಲೇವ ಹೊಚ್ಚಿ
ಜರದ ಮುಂಡಾಸದ ಮೇಲೆ ಶಿರಪೇಚ ಹಚ್ಚಿ
ಕರದ ಮುಂಗೈಗೆ ಕಟ್ಟ್ಯಾರೊ ಪೋಚಿ
ಗುರದ ಕೊಟ್ಟಾರು ಬಲಗೈಯಗವಚಿ ॥೧೩೩॥

ಹಾರ ಹೂವಿನ ಮಾಲಿ ವಿಭೂತಿಯ ಧರಿಸಿ
ಬೆರಿಸಿ ಕಸ್ತೂರಿ ಪರಿಮಳದ ಹರಿಸಿ
ತರತರಪುದಿನ ಗಿಡವಾನು ಇರಿಸಿ
ದೊರಿ ಕದಕದ ನಗುಹಾಂಗ ಶೃಂಗರಿಸಿ ॥೧೩೪॥

ನೆರೆದ ಜಂಗಮರೆಲ್ಲಾ ಪಾದವ ಇಟ್ಟು
ದೊರೆ ಮಲ್ಲಸರ್ಜಗಾಶೀರ್ವಾದ ಕೊಟ್ಟು
ವರವಸ್ತ್ರ ವರಗಳ ಭಿಕ್ಷವ ಕೊಟ್ಟು
ವರಸುತೆ ಸತಿಯರು ಹೋಗುವರು ಬಿಟ್ಟು ॥೧೩೫॥

ಸತಿಯು ಚನ್ನವ್ವನು ದುಃಖವ ಮಾಡಿ
ಪತಿಯ ಪಾದದ ಮೇಲೆ ಬಿದ್ದು ಹೊರಳ್ಯಾಡಿ
ಕ್ಷಿತಿಯೊಳು ಎನ್ನನು ಪರದೇಶಿ ಮಾಡಿ
ಹಿತದಿಂದ ಹರನೊಳು ಹೋದಿರಿ ಕೂಡಿ ॥೧೩೬॥

ಸತಿಯು ಚನ್ನವ್ವನು ಕಳವಳಗೊಂಡು
ಸತಿಯರು ಒಯ್ದಾರು ಒಳಗೆತ್ತಿಕೊಂಡು
ಸುಂದ್ರ ಮಲ್ಲೇಂದ್ರನ ಮೋರೆಯ ಕಂಡು
ಘಾತವಾದೀತೆಂದು ಎದೆಯ ಬಡಕೊಂಡು ॥೧೩೭॥

ಕಲ್ಲುಮಠದ ಪ್ರಭುದೇವರು ಬಂದು
ಎಲ್ಲ ಮಕ್ಕಳನು ಒಳಿಯಕ್ಕ ತಂದು
ಎಲ್ಲರಿಗೆ ಬುದ್ಧಿ ಹೇಳಿದರೊಂದು
ಮಲ್ಲಸರ್ಜನು ಮುಕ್ತಿಪಡೆದನು ಇಂದು ॥೧೩೮॥

ಮುತ್ತಿನ ಸೆರಗಿನ ಸೀರೆಯನುಟ್ಟು
ಹತ್ತು ಹೊನ್ನಿನ ಜರದ ಕುಪ್ಪುಸ ತೊಟ್ಟು
ಕಸ್ತೂರಿ ತಿಲಕದ ಬೊಟ್ಟುಗಳಿಟ್ಟು
ವಸ್ತ್ರ ಆಭರಣ ಜೋಡಿಸಿ ಇಟ್ಟು ॥೧೩೯॥

ಮುತ್ತಿನ ಆರತಿ ಕೈಯಾಗ ಹಿಡಿದು
ಮತ್ತೆ ಮಲ್ಲೇಂದ್ರಗ ಬಂದಾಳೋ ನಡೆದು
ಎತ್ತಿದಳಾರುತಿ ಕೈಯಾಗ ಹಿಡಿದು
ಸತಿಯು ಸುತರ ಬಿಟ್ಟು ಹೋಗುವರೆ ಮಡಿದು ॥೧೪೦॥

ಒಡೆಯ ಚನ್ನವ್ವನ ಆರ್ಭಾಟ ಬಹಳ
ನಡುವಿನ ಪುತ್ರನು ಹಿಡಿದ ಕೈಗಳ
ಬಡಕೋಬ್ಯಾಡ ತಾಯಿ ಎದಿಯೆದಿ ಬಾಯ್ಗಳ
ನೋಡು ಮಲ್ಲಸರ್ಜನ ವದನಗಳ ॥೧೪೧॥

ಪರದೇಶಿ ವಿರಕ್ತ ಮೂರ್ತಿಗಳೆಲ್ಲ
ದೊರೆ ಮಲ್ಲಸರ್ಜಗಿರಿದಾರು ಇಲ್ಲ
ಶರಣ ಸದ್ಭಕ್ತರ ಭಕ್ತಿಯ ಬಲ್ಲ
ಹರುವಾಯಿತಿಂದಿಗೆ ಧರ್ಮಗಳೆಲ್ಲ ॥೧೪೨॥



ಕರಣಿಕ ಕುಲಕರ್ಣಿ ಕಾರಭಾರಿಯರು
ವರ ಮಕ್ಕಳೆಂಬುವ ನಿಸ್ಪೃಹರು
ಬೋರ್ಯಾಡಿ ಅಳತಾರೊ ಪುಣೇದವರು
ದೊರೆ ಮಲ್ಲಸರ್ಜನ ಮಕ್ಕಳೆಂಬವರು ॥೧೪೩॥

ಹತ್ತು ಸಾವಿರ ಕೂಡಿ ಮಾಡಿ ಆಳಾಪ
ಮತ್ತೆ ಸತ್ತನು ಮಲ್ಲೇಂದ್ರ ಭೂಪ
ಪುತ್ರರ ಅಗಲಿ ಹೋದುದು ಪಾಪ
ಎಂಥ ರಂಡೇರು ನಿನಗ ಕೊಟ್ಟರು ಶಾಪ ॥೧೪೪॥

ಏಳು ಉಪ್ಪರಗಿ ವಿಮಾನವ ಕಟ್ಟಿ
ಬಿಳಿಯ ಜನರ ಶಲ್ಲೆ ತಗೆದಾರೊ ಪಟ್ಟಿ
ಮೇಲೆ ಮುಚ್ಚಿದರು ಜರದ ದುಪ್ಪಟ್ಟಿ
ಬೆಳ್ಳಿ ಮುತ್ತಿನ ಗಂಟಿ ಸರಗಳ ಕಟ್ಟಿ ॥೧೪೫॥

ಕಳಸ ಇಟ್ಟನು ಸೂರ್ಯ ಚಂದ್ರರ ಸಮಾನ
ಒಳಗ ಕಟ್ಟಿದ ನಾಕಾರು ಕಮಾನ
ಇಳಿದು ಬಂದಿತೇನೋ ಕೈಲಾಸದ ವಿಮಾನ
ನಳಿನಾಕ್ಷಿಯರು ಪಾಡಿದರು ಸೋಬಾನ ॥೧೪೬॥

ಕಲ್ಲು ಮಠದೊಳು ನೆಲವನು ಅಗಿದು
ಮಲ್ಲಸರ್ಜಗ ಸಮಾಧಿಯ ತೆಗೆದು
ಬಲ್ಲಿದ ಬಸವನು ತಗದಾನು ಅಗಿದು
ಮಲ್ಲಸರ್ಜನ ಸಮಾಧಿಯು ಮುಗಿದು ॥೧೪೭॥

ಬಾಳಿಕಂಬದ ಮೇಲೆ ಹಾಕಿ ಹಂದರವ
ತಳಿರು ತೋರಣ ಕಟ್ಟಿ ಮಾಡಿ ಸುಂದರವ
ಹೊಳೆವ ನಂದಿಯ ರಚಿಸಿ ಮುಂದೆ ತಂದಿರುವ
ತಳತಳಿ ರಂಗವಾಲಿಯನು ತುಂಬಿರುವ ॥೧೪೮॥

ಸುತ್ತಲೆ ರುದ್ರಾಕ್ಷಿ ಸರವನು ಕಟ್ಟಿ
ಮತ್ತೆ ಬರೆದರೋ ಕೈಲಾಸದ ಸೃಷ್ಟಿ
ಚಿತ್ರ ಬಸವಲಿಂಗ ಕಾಗದ ಪಟ್ಟಿ
ಪತ್ರಿ ವಿಭೂತಿ ನೂರಾರು ಬುಟ್ಟಿ ॥೧೪೯॥

ಕಸ್ತೂರಿ ಸಾರಣಿ ಸುತ್ತಿನ ಗೋಡಿ
ವಿಸ್ತಾರ ಪುನಗು ಜವದಿಯ ತೀಡಿ
ಸಮಸ್ತರು ನಂದಿಮುಖ ಸುತ್ತಲು ಹೂಡಿ
ಸಮಸ್ತರು ಕ್ರಿಯೆ ಸಮಾಧಿಯ ಮಾಡಿ ॥೧೫೦॥

ನೆರೆದ ಜನರೆಲ್ಲಾ ಮರಮರ ಮರುಗಿ
ಪರಿವಾರ ಪ್ರಜೆಯೆಲ್ಲಾ ಬಂದಿತು ತಿರುಗಿ
ದೊರೆ ಮಲ್ಲಸರ್ಜ ಸಮಾನದುಪ್ಪರಿಗಿ
ಹರದಿ ಚನ್ನವ್ವ ಕಂಡು ಶವದ ಮೇಲೊರಗಿ ॥೧೫೧॥

ಪುರುಷನ ಬಿಗಿದಪ್ಪಿ ಸತಿಯು ಮುಂಡಾಡಿ
ಅರಸನ ಸ್ಥಿತಿಗತಿ ಆಗ ಕೊಂಡಾಡಿ
ವರಪುತ್ರ ಬಾಳಾಸಾಹೇಬನ ಮುಖನೋಡಿ
ಮರಣಾಗಲಿಲ್ಲವನ ಲಗ್ನವ ಮಾಡಿ ॥೧೫೨॥

ಮುತ್ತಿನ ಸೆರಗಿನ ಸೀರಿ ಜರತಾರ
ರತ್ನ ಖಚಿತವಾದ ಹೆಳಲ ಭಂಗಾರ
ಪತಿಯ ಕಳಿಸಿಕೊಟ್ಟ ವಸ್ತ ಮನಾರ
ಹಿತದಿಂದ ಇಡುವಾಭರಣ ವಿಸ್ತಾರ ॥೧೫೩॥

ಮದುವೆಯ ಸಂಭ್ರಮ ಮಾಡಿದಿ ಬಾಳು
ಸುದತಿಯ ತಕ್ಕೊಂಡಿ ಸೊಲ್ಲಾಪುರದೊಳು
ಮದುವೆಯ ಮಾಡೊಂದು ಮಾರ್ಗಶಿರದೊಳು
ಇದನೆಲ್ಲ ಹೇಳಿದಿ ಶ್ರೀಮಂತರೊಳು ॥೧೫೪॥

ಮಠದಾಗ ಹೇಳಿದಿ ಪ್ರೀತಿಂದ ಪತಿಯೇ
ಸಿಟ್ಟು ಬಿಡಿಸಿ ಬಹಳ ಮಾಡಿದಿ ರತಿಯೇ
ಸೆಟ್ಟಿ ಸೊಲ್ಲಾಪುರದ ಪಟ್ಟದ ಸತಿಯೇ
ಘಟ್ಟಿ ಮಾಡಿಸಿದೆನು ಕೇಳೊಂದ ಸತಿಯೇ ॥೧೫೫॥

ಬಂದೇರಿ ದುರದುಂಡಿ ಸ್ವಾಮಿಯ ತಳಕ
ಚೆಂದುಳ್ಳ ಬೆಳಗಾಗ ಕೂಡಿದ ಬಳಿಕ
ಚಂದ್ರಸಮಾನ ಪ್ರಭೆ ಕಂಡನು ಬೆಳಕ
ಒಂದೊಂದು ನೇತ್ರವು ತಾರೆಯ ಜುಳಕ ॥೧೫೬॥

ವಂಟಮುರಿ ಪ್ರಭುಗೊಂಡ ದೇಸಾಯಿ ಬಂದು
ಪೈತಾಣಿ ಶೆಲ್ಲೇವ ತಸರೀಪ ತಂದು
ದಿಟವಾಗಿ ಮತ್ತೆ ಕೇಳಿದನು ಒಂದೊಂದು
ಪಟ್ಟದ ವರ್ತಮಾನವು ಹ್ಯಾಂಗ ಮುಂದು ॥೧೫೭॥

ವೀರಪ್ಪ ದೇಸಾಯಿಗ್ಹೊಂಗಲ ಕೊಟ್ಟಿ
ದೊರೆ ಬಾಳಾಸಾಹೇಬಗ ತಿಗಡಿಯ ಕೊಟ್ಟಿ
ಧರೆಗೆ ಅರಸು ಬಾಪುಸಾಹೇಬನು ಹುಟ್ಟಿ
ಹರದಿ ಸಿಕ್ಕೆ ಹಾಕಿದಳು ಕೈಮುಟ್ಟಿ ॥೧೫೮॥



ಕಲ್ಲೂರ ಚನಬಸಪ್ಪನ ಕಳುಹಿಕೊಟ್ಟು
ಸೊಲ್ಲಾಪುರದ ನಿಬ್ಬಣ ಬರಬ್ಯಾಡೊ ಬಿಟ್ಟು
ಅಲ್ಲಿಂದ ಮುಂದಕ ಬಾರೋ ನೀ ಹೊಂಟು
ಶಿವಬಸಪ್ಪಗ ಪತ್ರ ಬರೆದಿರೇಳೆಂಟು ॥೧೫೯॥

ಮದುವಿಗೆ ಬರಬೇಕೊ ವಂಟಮುರಿ ದೊರೆಯೆ
ದಾದಾಸುಬನರಾವ ಪರಿವಾರ ಪ್ರಜೆಯೆ
ಮುದದಿಂದ ಕಳುಹುವೆನು ಕರೆಯೆ
ಕದಕದ ನಗುತಲಿ ಹೇಳಿದಿ ದೊರೆಯೆ ॥೧೬೦॥

ಕಿತ್ತೂರಿಗೆ ಹೋಗಿ ಮುಹೂರ್ತವ ತೆಗೆಸಿ
ಉತ್ತರ ಕಳುಹುವೆನು ವಂಟಮುರಿಗೆ ಬರೆಸಿ
ಪಾತ್ರ ಕೇಳಿದಿ ಪುಣ್ಯದೆಂಕಾಟನರಸಿ
ಆರ್ತಿ ಮಾಡೇನು ಪುಣ್ಯದಾಕೆಯ ತರಿಸಿ ॥೧೬೧॥

ಅರ್ತಿಂದ ಮಠದಾಗ ಹೇಳಿದಿ ಭೂಪ
ವ್ಯರ್ಥ ಮಾಡಿದಿ ಎನ್ನ ಜನ್ಮದ ಪಾಪ
ಗುರ್ತ ಮರಿಯಲಾರೆ ದೊರೆ ನಿನ್ನ ರೂಪ
ಕರ್ತ ಮಲ್ಲೇಂದ್ರ ನೀ ಮಾಡಿದಿ ಕೋಪ ॥೧೬೨॥

ಹರಹರಯೆನುತಲಿ ಜನವೆಲ್ಲಾ ಬಂದು
ದೊರೆ ಮಲ್ಲಸರ್ಜನ ನೀ ಮಾನಕ್ಕೆ ತಂದು
ಗುರುಲಿಂಗಪ್ಪನ ಬಲಭಾಗದಿ ನಿಂದು
ನೆರೆದ ಜನರೆಲ್ಲಾ ಉಗೆಯುಗೆಯೆಂದು ॥೧೬೩॥

ಹಿಡಿ ತೇಜಿ ಎಡಬಲ ಚಾಮರ ಹರಸುತ
ಕಿಡಿಬಿಡಿ ಭೇರಿ ದುಂದಿಭಿ ಬಾರಿಸುತ
ನುಡಿವ ನೌಬತ್ತು ಮೇಲೆ ಏರಿಸುತ
ನುಡಿವ ನೌಬಾಜೆ ಬಿಡದೆ ಬಾರಿಸುತ ॥೧೬೪॥

ಆರ್ಭಾಟ ಇಕ್ಕೀತು ವಾದ್ಯವು ಎಲ್ಲಾ
ಶರ್ಭಾವತಾರದ್ಹಾಂಗ ವಾದ್ಯೇದ ಗುಲ್ಲಾ
ಹರದಾರಿ ಕೇಳುವದು ವಾದ್ಯೇದ ಸೊಲ್ಲಾ
ಆರ್ಭಘೋಲಿ ಫೌಜು ದೊರೆಯ ಎಡಬಲಾ ॥೧೬೫॥

ಒಡೆಯ ಚನ್ನವ್ವನ ಹಿಡಿದಾರು ಮತ್ತ
ಒಡೆಯ ಬಾಪುಸಾಹೇಬನ ದೊರೆಗಳ ಸುತ್ತ
ಬಿಡಿಮುತ್ತು ವಿಮಾನ ಮೇಲೆ ಹಾರಿಸುತ
ಎಡಬಲ ಭಟ್ಟಂಗಿ ಆಗ ಸಾರಿಸುತ ॥೧೬೬॥

ವಿಶ್ಯೇದ ಮುಸುಕಿಲೆ ಮುಚ್ಚಿತೊ ದಾರಿ
ಬೆಳ್ಳಿ ಬಂಗಾರ ಹೂವ ಮಾಡ್ಯಾರು ಸೂರಿ
ಬೆಳ್ಳಿ ಬೆತ್ತದ ಭಟ್ಟಂಗಿ ಭೇರಿ
ಮಲ್ಲಸರ್ಜಗ ಇದಿರಿಲ್ಲೆಂದು ಸಾರಿ ||೧೬೭||

ನೇಮದಿ ಹಡದಿಯ ಹಾಸುತ ಜನರು
ಸಮಾಧಿಯ ಕಟ್ಟೆಗೆ ಬಂದು ಎಲ್ಲಾರು
ದಮ್ಮಯ್ಯಗಳು ಒಳಗಿಳಿದಯ್ಯನವರು
ಶಂಭುರಾರಿಯ ಶತಕ ವೃತ್ತ ಓದಿದರು ||೧೬೮||

ಮಲ್ಲೇಂದ್ರ ಭೂಪನ ಇಳಿವ್ಯಾರು ತೆಳಗ
ಶಲ್ಲೆ ಮೆಂಡಾಸ ಅಂಗಿ ಕಳಿದಾರು ಒಳಗ
ಬೆಲ್ಲಪತ್ರಿ ಧರಿಸಿ ಪೂಜೆಗೊಳ್ವಾಗ
ಮಲ್ಲಸರ್ಜನ ಮೋರೆ ನೋಡಿರಿ ಬಳಗ ||೧೬೯||

ಸತಿಯು ಚೆನ್ನವ್ವನು ಪತಿ ಮೋರೆಯ ಕಂಡು
ಪತಿಯ ಮುಂದೆ ಎದೆಯ ಬಡಬಡಕೊಂಡು
ರತ್ನದ ಗುಳದಾಳಿ ಕರಿಮಣಿ ಗುಂಡು
ಹಿತವಾದ ಕಾಜಿನ ಬಳಿ ಒಡಕೊಂಡು ||೧೭೦||

ಉಡಿಯಕ್ಕಿ ಚಲ್ಲ್ಯಾಳು ದೊರಿಗೋಳ ಮೇಲೆ
ಹಿಡಿದು ಜಗ್ಗ್ಯಾಳು ಹೂವಿನ ದಂಡಿಯ ಮಾಲೆ
ಸಡಗರದ ಕಾಲುಂಗ್ರಾ ಅಣಬುಮೆಂಟಿಗಿ ಪಿಲ್ಲೆ
ಒಡೆದು ಹಾಕ್ಯಾಳು ಮಲ್ಲಸರ್ಜನ ಬಾಲೆ ||೧೭೧||

ಅರಸನ ಹೊಟ್ಟೀಲೆ ಹುಟ್ಟಿ ರಾಜ್ಯವ ಪಡೆದಿ
ಮೂರು ವರುಷ ಹೋಗಿ ಪುಣೇದಿ ತಡದಿ
ಎರವ ಮಾಡಿ ಈಗ ಹರನೊಳು ನಡದಿ
ಮೂರು ಬೊಗಸಿ ಮಣ್ಣ ಒಗೆದಾಳೊ ಮಡದಿ ||೧೭೨||

ಬಾಪುಸಾಹೇಬ ಕಂಡ ತಂದೆಯ ಮೋರಿ
ಇಪ್ಪತ್ತು ಮಂದಿಯು ಹಿಡಿದಾರು ಮೀರಿ
ಅಪ್ಪನ್ನಂತೆಲೆ ಬೀಳಬೇಕೆಂದು ಹಾರಿ
ಬಾಪುಸಾಹೇಬನ ಪ್ರಾಣ ಹೋದೀತು ಮೀರಿ ||೧೭೩||

ನಡುವಿನ ಪುತ್ರನು ಮಾರಿಯ ಕಂಡ
ಒಡೆಯಗ ಮಾಡಿದಾ ದೀರ್ಘದಂಡ
ಬಿಡದೆ ಕಣ್ಣೀರು ಉದರಿಸಿಕೊಂಡ
ಬಡಕೊಂಬುವ ತಾಯಿಯ ಕೈಯ ಹಿಡಕೊಂಡ ||೧೭೪||



ಚಿಕ್ಕಮಕ್ಕಳ ದುಃಖ ಹೇಳಲಿನ್ನೆಷ್ಟು
ಮಕ್ಕಳೆಲ್ಲರನು ಕಳುಹಿ ತಾ ಕೊಟ್ಟು
ಮಕ್ಕಳೊಳಗೆ ಶಿವಬಸಪ್ಪನು ಶ್ರೇಷ್ಠ
ಚಕ್ಕನೆ ಮಲ್ಲೆಂದ್ರಗೆ ಮಣ್ಣಾವ ಕೊಟ್ಟ ||೧೭೫||

ಆಕಳ ನೂರೊಂದು ದಾನವ ಕೊಟ್ಟ
ಮಕ್ಕಳ ರಮಸಾಕ ಅರಮನೆಗೆ ಹೊಂಟ
ದುಕ್ಕ ಸೈರಿಸು ಬಾಪುಸಾಹೇಬ ಅಪ್ಪ ||೧೭೬||

ಹರಹರ ಎನ್ನುತಲಿ ಹರಸಿದರಾಗ
ಹರನೊಳು ಮಲ್ಲೇಂದ್ರ ಬೆರದನು ಬೇಗ
ದೊರೆಯು ಮಲ್ಲೇಂದ್ರ ಮರಣಾದನು ಹೀಗ
ಗುರು ಶಾಂತವೀರಣ್ಣ ಹೇಳಿದನೀಗ ||೧೭೭||

* * *

# ವೀರರಾಣಿ ಚೆನ್ನವ್ವ



## ವೀರರಾಣಿ ಚೆನ್ನವ್ವ

ದುಂದುಮೆ ದುಮ್ಮಿ ಸೊಲ್ಲಿಗೆನ್ನಿರಿ
ದುಂದುಮೆ ಬಸವಂತನ ಹಬ್ಬ ॥ಪ॥

ಹಿತದಿಂದ ಸರ್ವರಿಗ್ಹೇಳುವೆ ಬ್ರಹ್ಮನ
ಸತಿ ಗಣನಾಥನ ಬಲಗೊಂಡು । ಮಾ
ಮತಿಯ ಪಾಲಿಸೆಂದು ತ್ರಿಜಗದೀಶನ
ಸ್ತುತಿ ಮಾಡುವೆನು ದುಂದುಮಿ ಪದದಿ ॥೧॥

ಕಥೆಯಲ್ಲಿ ಸರ್ವರು ಕಂಡಂಥ ಮಾತನು
ರತಿಯಿಟ್ಟು ಲಾಲಿಸಬೇಕೆಂದು । ಮಾ
ಕ್ಷಿತಿಯೊಳು ಕಿತ್ತೂರ ಮೇಲೆ ಹುಟ್ಟಿದಂಥ
ಮಥನದ ಪರಿಯನು ಪೇಳ್ವೆನು ಮುಂದೆ ॥೨॥

ಮೊದಲು ಥ್ಯಾಕರೆಸಾಯ್బ ರಾಜ್ಯ ನಮ್ಮದೆಂದು
ಮುದದಿಂದ ಕಿತ್ತೂರಿಗೆ ಬರಲು । ಮಾ
ಹದುಳಪ್ಪಗೆ ಪಟ್ಟಗಟ್ಟಿ ಅವರು ತಮ್ಮ
ಸದನದಿ ಸುಖದಿಂದ ಇರುತಿರಲು ॥೩॥

ಅದಕಂಡು ಸಾಯ್ಬ ಕೋಪವ ತಾಳುತ್ತೈದಾನು
ಇದಕ್ಯಾರಪ್ಪಣೆ ಕೊಟ್ಟರೆಂದು । ಮಾ
ಇದಿರೋಳಿರುವಂಥ ಬಲ್ಲಾಳು ಮುರಿದಾವು
ಸದರ ಬಿಟ್ಟಿಳಿಯೆಂದು ಸಾಯ್ಬ ನುಡಿದ ॥೪॥

ಬಾಲೆ ಬಾ ಮುಂದಕ್ಕೆ ನಿನ್ನ ಗಂಡ ಎನ್ನ
ಪಾಲಿಗೆ ಬದುಕು ಬರೆದು ಕೊಟ್ಟನು । ಮಾ
ಕಾಲವಾದ ಮಾತು ಸಟೆಯೆನೆ ನೀ ಬಾಲೆ
ವಾಲಿ ನೋಡೆಂದೊಗೆದನು ಮುಂದೆ ॥೫॥

ಆಲಸ್ಯವ್ಯಾತಕ್ಕೆ ಕೇಳೆನ್ನ ಮಾತನು
ವಾಲಿಸಿ ಹೇಳತಾರೆ ಸುಮ್ಮನೆ । ಮಾ
ಮೇಲೆ ಸುತ್ತಲ ದೇಶ ನಮ್ಮದು ಇದರೊಳು
ಕಾಲಿಟ್ಟು ಧಕ್ಕೆ ತಿನಬ್ಯಾಡ ನೀ ॥೬॥

ಆ ಕ್ಷಣ ಅವನೆಂದ ಮಾತನು ಕೇಳುತ
ಕುಕ್ಷಿಯೊಳಗೆ ಬ್ಯಾಗಿ ಜನಿಸಿತು । ಮಾ

ದಾಕ್ಷಿಣ್ಯ ಇಂದಿಗೆ ತೋರಬಾರದೆಂದು
ಸೂಕ್ಷ್ಮದ ಸೊನ್ನೆಯ ಮಾಡಿದಳಾಗ ॥೭॥

ನೂಕಿವನ ಎದೆ ಹಿಡಿದು ಹಿಂದಕ್ಕೆ ಇದರಿಂದ
ಕ್ಕಸ ಬಂದರೆ ನೋಡಬಹುದೆಂದು । ಮಾ
ಆಕ್ಸಿ ಬಾಗಿಲವನ್ನು ಅನುಮಾನವಿಲ್ಲದೆ
ಹಾಕ್ಯಾಳು ಕದನಕ್ಕೆ ಮುಖವಾದಿತಿನ್ನು ॥೮॥

ಜಗಳದ ಪರಿಯನು ಪೇಳುವೆ ಮನಸಿಟ್ಟು
ಸುಗುಣರು ಚೆಂದಾಗಿ ಕೇಳಿರಿ । ಮಾ
ಮಗಿಮಳಿಯಂತೆ ಗುಂಡ್ಹಾರುತಿರೆ ಮದ್ದಿನ
ಹೊಗೆ ಮುಸುಕಿತು ಕಣ್ಣ ಮುಂದೆ ॥೯॥

ಮಿಗಿಲಾದ ಥ್ಯಾಕರೆಸಾಯ್ಬ ತಾ ಮಡಿದಾನು
ಸಿಗಲಾಗಿ ಉಳಿದವರು ಕೈಸೆರೆಯ । ಮಾ
ನಗೆಯಲ್ಲ ನಾಲ್ಕು ದಿಕ್ಕಿನ ದಂಡು ಮುರಿದು
ಹೆಗಲ ಮ್ಯಾಲಿನ ಕೋವಿ ಒಗದೋಡಿತು ॥೧೦॥

ಸತ್ತ ಥ್ಯಾಕರೆಸಾಯ್ಬ ಎಂಬಂಥ ಸುದ್ದಿಯು
ಹತ್ತಿತು ಧಾರವಾಡ ಪುರಕಿನ್ನು । ಮಾ
ವ್ಯರ್ಥವಾಯಿತೆಂದು ಎಲ್ಲಾರು ಮಾತಾಡಿ
ಉತ್ತರ ಬರೆದಾರು ವಿಲಾಯ್ತಿಗೆ ॥೧೧॥

ಅತ್ತಲಾ ಸುದ್ದಿಯು ಹೋದಾಕ್ಷಣದಲ್ಲಿ
ಕಿತ್ತೂರನಾಳ್ವಂಥ ಜಾಣೆಯು । ಮಾ
ಮುತ್ತಿಗೆ ಬರುತದೆ ಬೇಗನೇಳಿರೆಂದು
ಸಾಹಿತ್ಯ ಪೂರೈಸು ಪುತ್ರಿಯೇನೆಂಬೆ ॥೧೨॥

ಮುಚ್ಚಗಾವಿಯ ಚಣ್ಣ ಮುಂಗೈಯ ಸರಪಳಿ
ಬಿಚ್ಚುಗತ್ತಿಯ ಸಾರ ಕ್ಷತ್ರಿಯರು । ಮಾ
ಹಚ್ಚನ್ನ ಮುಂಡಾಸ ಮೇಲೆ ಸುಮಾನ ಗರಿ
ಹೆಚ್ಚೇನ ಬಂಟರ ಕರೆಸಿ ದಳಕೆ ॥೧೩॥

ಮುಚ್ಚಿ ಹೇಳುವದಿಲ್ಲ ಕೇಳಿರಿ ಮುಂದಿನ್ನು
ಕಿಚ್ಚಿನಂಥ ದಂಡು ಬರುತೈತಿ । ಮಾ
ಎಚ್ಚತ್ತುಕೊಳ್ಳಿರಿ ಎನ್ನ ಮಾತ್ರ ನೀವು
ಬಚ್ಚಿಟ್ಟು ಮಾನವ ಕಾಯಬೇಕು ॥೧೪॥

ಕ್ಷೀಣರ ಕೈಯಲ್ಲಿ ಸಿಲ್ಕಿ ಕಟ್ಟಿಗೆ ಎನ್ನ
ಪ್ರಾಣವ ನೀಗುವದು ಹಸನಲ್ಲ । ಮಾ



ಜಾಣತನದಿಂದೆ ಮೊದಲಿಗೆ ಮದ್ದಿನ
ಕೋಣೆಯ ಹೊಗುವದು ಉತ್ತಮವು ॥೧೫॥

ರಾಣಿಯಳಾಡಿದ ನುಡಿಕೇಳಿ ಬಂಟರ
ತ್ರಾಣವಿನ್ನೆಂತು ಹೇಳಲಿ ನಾ । ಮಾ
ಕ್ಷೀಣರೆಲ್ಲರ ತಲೆ ಬೀಳುವನಕ ನಿನ್ನ
ಕಾಣಗೊಡೆವು ಚಿಂತಿ ಬ್ಯಾಡೆಂದು ಸಾರೆ ॥೧೬॥

ಕಡೆಗು ನಿಮ್ಮನ್ನವನುಂಡು ಇಂದಿಗೆ ನಾವು
ಬಿಡಬಲ್ಲೆವೇ ಸುಮ್ಮನಿರು ಎಂದು । ಮಾ
ತೊಡೆಯ ಚಪ್ಪರಿಸಿ ಮೀಸೆಯ ತಿದ್ದಿ ಮುಂಗೈಯ
ಕಡಿವ್ರತ ಮಾತನಾಡಿದರಿನ್ನು ॥೧೭॥

ಬಿಡು ಬೇಗ ಮನದಾನ ಚಿಂತೆಯ ಇಂದಿಗೆ
ಮಡದಿಮಕ್ಕಳ ಆಸೆ ನಮಗಿಲ್ಲ । ಮಾ
ಕಡುಸಿಟ್ಟಿನಿಂದ ಕಾಟಕರೆಲ್ಲ ಒಂದಾಗಿ
ನುಡಿದದ್ದು ಕೇಳಿ ಹಿಗ್ಗುತ ಮನದಿ ॥೧೮॥

ಆಡಿದ ಮಾತನು ಕೇಳುತ ಮನದೊಳು
ಪ್ರೌಢೆ ಸಂತೋಷವ ತಾಳುತ । ಮಾ
ಗಾಡಿ ಕುದರಿ ಮಂದಿ ಇರುವಂಥ ಠಾವನು
ನೋಡಬೇಕೆಂದು ಅಪ್ಪಣೆಗೊಟ್ಟಳಾಗ ॥೧೯॥

ಬೇಡಿದ್ದ ಕೊಡುತಿಹಳೆಂಬಂಥ ಸುದ್ದಿಯು
ನಾಡೊಳು ಬೀರುತ ನಡೆದೀತು । ಮಾ
ಜಾಡಿಸಿ ಅವಳೆಂದ ಮಾತನು ಕೇಳುತ
ಕೂಡಿತು ಹದಿನಾರು ಸಾಸಿರ ದಂಡು ॥೨೦॥

ಕಾಳಿ ಕರ್ಣಿಯು ನಫೂರಿ ನಗಾರಿ ನಿ
ಸ್ಸಾಳದ ಅಬ್ಬರ ಧ್ವನಿಯೆಂದು । ಮಾ
ಆಳವೇರಿಯ ಮ್ಯಾಲೆ ಆರ್ಭಟ ಮಾಡುವದ
ಹೇಳಲಿನ್ನೇನು ಕಿತ್ತೂರಿನೈಸಿರಿಯ ॥೨೧॥

ನಾಳಿನ ಮರಣಿಂದೆ ಬರಲಿ ನಮಗೆ ಎಂದು
ಸೋಳಾ ಸಾಸಿರ ದಂಡು ಪುರದಲ್ಲಿ । ಮಾ
ವ್ಯಾಳೆ ವ್ಯಾಳೆಕೆ ಪಾರಿ ತಿರುಗುತಿರಲು ಮತ್ತೆ
ಕೇಳಿರಿ ಮುಂದಾದ ಕಥೆಯ ಜನರು ॥೨೨॥

ಕುಣಿಯುತ ಕುದುರೆಯು ಮಾರ್ಬಲವೊಂದಾಗಿ
ಹಣಿದಟ್ಟಬೇಕಿನ್ನು ಜಗಳಕ್ಕೆ । ಮಾ

ಕಣಗಂಡ ಸುದ್ದಿಯು ಆದಾ ಕ್ಷಣದಲ್ಲಿ
ದಣಿವ್ರುತ್ತ ಬಂದಿತು ಧಾರ್ವಾಡ ಪುರಕೆ ॥೨೩॥

ಕ್ಷಣಮಾತ್ರ ಆಲಸ್ಯ ಮಾಡಲಾಗದು ಎಂದು
ಗುಣವಂತರೆಲ್ಲರು ತಲೆಗೂಡಿ । ಮಾ
ಒಣ ಮಾತಿನಿಂದೇನು ಫಲವಿಲ್ಲವೆನುತಲ
ಪ್ಪಣೆಗೊಟ್ಟರು ಜಾನ ಮಂಡಲಿಗೆ ಬೇಗ ॥೨೪॥

ಹಿಂಡುಮಂದಿಯೊಳಗೆ ಧೀರನಾದ ಜಾನ
ಮಂಡಲ ಸಾಯ್ಬನ ಕರಿಸ್ಯಾರು । ಮಾ
ದಂಡಿಗೆ ಹೋಗೆಂದು ಆತಗಪ್ಪಣೆ ಕೊಟ್ಟು
ಹೊಂಡಿಸ್ಯಾರು ಬೀಳುಕೊಟ್ಟಾರು ಬೇಗ ॥೨೫॥

ಗುಂಡು ಮದ್ದಿಗೇನು ಕಡಿಮಿಲ್ಲ ತೋಪಿನ
ಬಂಡಿಗಳ ತಯ್ಯಾರ ಮಾಡೆಂದು । ಮಾ
ಹೊಂಡಬೇಕು ನಾಳ್ಗೆಂದು ಚಮತ್ಕಾರ
ಝುಂಡೇವ ಹೊರೆಯಕ್ಕೆ ನಿಲಿಸಿದರಾಗ ॥೨೬॥

ಮುಂಗಾರಿ ಸಿಡಿಲಿಗೆ ಸಾದೃಶ್ಯವಾದ ಫಿ
ರಂಗಿಯ ಚಕ್ಕಡಿ ಇನ್ನೂರು । ಮಾ
ಮುಂಗಡೆ ಏರಿ ಬಾರೊ ನಡುವೆ ಕುದರಿಮಂದಿ
ಹಿಂಗಡೆಯಲಿ ಪಾರಂಗೇರ ಘೋರ ॥೨೭॥

ಹೀಂಗಾಗೆ ಜಾನ ಮಂಡಲಿ ಸಾಯ್ಬ ದಂಡೀನ
ಸಿಂಗಾರ ಮಾಡಿದ ಪರಿಯೆಂತು । ಮಾ
ಮಂಗಳವಾರ ಸಂಜೀ ವ್ಯಾಳೆದಲ್ಲಿ ಬೆಳ
ದಿಂಗಳ ಬೆಳಕೀಲಿ ಇಳದೀತು ಫೌಜು ॥೨೮॥

ಒಂಬತ್ತು ಒಂಟಿಯ ಮೇಲೆ ನಗಾರಿಯು
ಅಂಬಾರಿ ಆನೆಗೆ ಬಿಗಿದಾರು । ಮಾ
ಸಂಭ್ರಮದಿಂದಲಿ ಜಾನ ಮಂಡಲಿ ಸಾಯ್ಬ
ಬೆಂಬತ್ತಿ ಜೋರ್ದಾರ ಜಗಳಕ್ಕೆ ಬಂದ ॥೨೯॥

ಕುಂಭಿನಿಯೊಳು ಬಾಳ ಚೆಲುವಾಗಿ ಮೆರೆವ ಕು
ಸುಂಬೆಯ ಛಾಯದ ದಂಡಿನ್ನು । ಮಾ
ಇಂಬಗಿ ಕಿತ್ತೂರ ಬಿಟ್ಟು ಹರದಾರೀ
ತೆಂಬಕ್ಕೆ ಇಳದೀತು ಕೇಳಿರಿ ದಂಡು ॥೩೦॥

ಇಳಿದಂಥ ಫೌಜನು ಕಾಣುತ ಕಿತ್ತೂರ
ಒಳಗಿರ್ದ ಸರ್ದಾರರೊಂದಾಗಿ । ಮಾ



ಬೆಳೆದಂಥ ಆರ್ಭಟಿ ಹೊರಬಿದ್ದು ಮೂಡಿದ ಜ
ಗಳದ ಪರಿಯೆಂತು ವರ್ಣಿಸಲಿನ್ನು ॥೩೧॥

ಮಳೆಯಂತೆ ನಾಲ್ಕು ದಿಕ್ಕಿಲಿ ಗುಂಡು ಸುರಿಯಲು
ಅಳಿದು ಬಿದ್ದೆಣಗಳ ತುಳಿಯಂತ । ಮಾ
ತಳಮಳಗೊಳ್ಳುತ ನಿಲ್ಲದೆ ಸಾಯ್ಬನ
ದಳ ಮುರಿದೋಡಿತು ದಾರಿಯ ತಪ್ಪಿ ॥೩೨॥

ಸರದಾರರಳಿದಾರು ಜಾನ ಮಂಡಳಿ ಸಾಯ್ಬ
ಇರಿದಂಥ ಈಟೀಯ ಗಾಯದಿ । ಮಾ
ಮರಗೂತ ಬಿದ್ದಾನೆಂಬುವ ಸುದ್ದಿ ಧಾರ್ವಾಡ
ಪುರದೊಳು ಮುಂದಾಗಿ ಹತ್ತಿದಾಕ್ಷಣದಿ ॥೩೩॥

ಮರುದಿನ ಮೈಸೂರ ದಂಡು ಕೂಡಿಕೊಂಡು
ಭರದಿಂದ ಚಾಪಾಲಿ ಸಾಯ್ಬನು । ಮಾ
ಗುರಿ ಮಾಡಿ ಇನ್ನೂರ ತೋಪೊಮ್ಮೆ ಹೂಡಿದ
ಪರಿಯನು ಲಾಲಿಸಿ ಕೇಳಿರಿ ಜನರ ॥೩೪॥

ನೇತ್ರಗಳಿಂದಲಿ ಕೋಟೆಯ ನೋಡಿ ಭಾರಿ
ಶಸ್ತ್ರಗಳ ತರಿಸಿದರೊಳಗಿಂದ । ಮಾ
ರಾತ್ರಿ ಹಗಲೆನ್ನದೆ ರಭಸದಿಂದ್ಹೊಡೆಯಲು
ಧಾತ್ರಿಯು ನಡಗೀತು ತೋಪಿನ ಭರಕೆ ॥೩೫॥

ಒತ್ತಾಗಿ ಗುಂಡುಮದ್ದು ಒಮ್ಮೆಗೆ ಹಾರಲು
ಕತ್ರಿಸಿ ಹೂಡೇವು ಬೀಳುತಲಿ । ಮಾ
ತತ್ರಿಸಿ ಒಳಗಿರ್ದ ದಂಡೆಲ್ಲ ನಡಗೀತು
ಸೂತ್ರ ಹರಿದ ಮೇಲೆ ಕಾದುವರುಂಟೆ ॥೩೬॥

ನಡಗುತ್ತ ಉಳಿದ ಕಾಟಕರೆಲ್ಲ ಒಂದಾಗಿ
ಕಡಿದಾಡೋ ಯತ್ನವು ಮೀರಿತು । ಮಾ
ಪಿಡಿದಂಥ ಕತ್ತಿಯ ನೆಲಕೊಗೆದಾಕ್ಷಣ
ತಡವೇನು ಠಾಣೇವು ಬೀಳ್ವದು ಎನ್ನು ॥೩೭॥

ಹೊಡೆವ ಫಿರಂಗಿಯ ರಭಸಿಗೆ ತಾಳದೆ
ಸಡಲಿತು ಸುತ್ತಣ ಗೋಡೆಯು । ಮಾ
ಮಡಿದಂಥ ಮಂದಿಯ ಎಣಿಕೆಯಗೊಳ್ಳದೆ
ನಡೆಯಿತು ಇಂಗ್ರೇಜಿ ದಳ ಮುಂದಕೊತ್ತಿ ॥೩೮॥

ಹೊಕ್ಕಿತು ಕೇಳಿರಿ ಒಂದಾರು ತಾಸಿಲಿ
ನಾಲ್ಕು ದಿಕ್ಕಿನ ದಂಡು ಏಕಾಗಿ । ಮಾ

ಮುಂಕೋಟೆ ಅಗಸಿಯ ಬಾಗಿಲ ಕಾಯ್ವಂಥ
ಸೊಕ್ಕಿದ ಹಬ್ಸೇನ ಜಗಳವ ಕೇಳಿ ॥೩೯॥

ತೆಕ್ಕಿಯೊಳವಚಿ ಕೊಂದನು ನೂರುಮಂದಿಯ
ಮಿಕ್ಕಿ ಬಂದವರನ್ನು ಕಡಿವುತ । ಮಾ
ಜಕ್ಕನೆ ಜರಿದು ಚಾಪಲಿ ಸಾಯ್ಬ ಮುಂದೆ
ಇಕ್ಕದೆ ಹೆಜ್ಜೆಯ ನಿಂತು ನೋಡಿದ ॥೪೦॥

ಬಲ್ಲಿದ ಹಬ್ಸೇನ ಬಲ ಮುರಿಯಬೇಕೆಂದು
ಎಲ್ಲ ದಂಡನು ಸುತ್ತಗಟ್ಟುತ । ಮಾ
ನಿಲ್ಲದೆ ಎಡಬಲ ಗುಂಡ್ಹಾರಿದಾಕ್ಷಣ
ತಲ್ಲಣಿಸುತ ಬೀಳೆ ನಡೆದನು ಸಾಯ್ಬ ॥೪೧॥

ಹುಲ್ಲುಕಡ್ಡಿಯ ಕಚ್ಚಿದಂಥ ಕಾಟಕರಿಗೆ
ಚಲ್ಲಣ ಕಡಿದು ಲಂಗುಟಿ ಹಾಕಿ । ಮಾ
ನಿಲ್ಲದೆ ಸರ್ದಾರ ಧರ್ಮಸಾಲೆಯ ಬಿಟ್ಟು
ಅಲ್ಲಿಂದ ಅರಮನೆ ಹೊಕ್ಕಾನು ತಾ ॥೪೨॥

ಮಂದಿರದೊಳಗಿರ್ದ ಮಾನಿನಿ ಪೆಸರ್ಗೊಂಡು
ಚೆಂದದಿ ಸಾಯ್ಬನ ಇದರಿಗೆ । ಮಾ
ಮುಂದಕ್ಕೆ ಬಾರೆಂದು ರಾಣಿಯ ಕರೆದಾನು
ಸಂದೇಹ ಬೇಡ ಮನದೊಳಗೆನುತ ॥೪೩॥

ಎಂದ ಮಾತನು ಕೇಳಿ ಆ ಜಾಣಿ ಪೌರುಷದಿ
ಛಂದದಿ ಸಾಯ್ಬನ ಇದರಿಗೆ । ಮಾ
ಸಂದಂಥ ಕಾಂತನ ಕರುಣದಿ ನೀ ಎನ್ನ
ತಂದೆಯ ಸರಿ ಎಂದು ಶಿರಬಾಗಲು ॥೪೪॥

ಸೀಮೆಯೆಲ್ಲವ ಜಾಣೆ ಉಂಭೋಗ ಬರಕೊಟ್ಟು
ನೇಮದಿ ಅಪ್ಪಣೆಗೊಂಡಾಳು । ಮಾ
ಗ್ರಾಮದೊಳಿರುವಂಥ ಬದುಕೆಲ್ಲ ಒಪ್ಪಿಸಿ
ತಾ ಮಾತ್ರ ಹೊಂಗಲಕೆ ನಡೆದಾಳು ॥೪೫॥

ಕುಸುಮಬಾಣನ ಮಾತು ಪೆಸರಿನ ಪುರದೊಳು
ವಶವಾದ ಮಾಗಡಿ ಬಸವನು । ಮಾ
ವಸುಧೆಯೊಳು ತನ್ನ ಕುಶಲದಿ ಪಾಡಿರುತ
ಉಸುರಿದ ಕವಿತೆ ಪೊಸತು ಕೇಳಿ ॥೪೬॥

* * *



# ನುಲಿಯ ಚಂದಯ್ಯ

## ನುಲಿಯ ಚೆಂದಯ್ಯ

ದುಂದುಮೆ ಎಂದೆಂದು ಪಾಡಿರಿ ಜನರೆ
ದುಂದುಮೆ ಬಸವತನ ಹಬ್ಬ । ದುಂದುಮೆ
ದುಂದುಮೆ ನಿರ್ದುಮೆ ಸಾಲಗನ್ನಿರೆ
ದುಂದುಮೆ ಕೇಳ್ರಿ ದುಂದುಮೆ ॥ಪಲ್ಲ॥

ಶ್ರೀಗುರುವೆ ನಿತ್ಯ ನಿರ್ಮಳ ನಿಜಾವರಣ ಶಿವ
ಯೋಗಿಜನ ಹೃದಯ ಮಂದಿರನೆ । ಸಕ
ಲಾಗಮ ಮುಕ್ತಿಯ ಕೊಡುವ ಸುಂದರನೆ । ಶಿವ
ಯೋಗ ಧಾರುಣ ಸುಧಾಕರನೆ
ಬೇಗದಿನ್ನುಲಿಯ ಚೆಂದಯ್ಯನಾ ಸ್ತುತಿಗೆ ದಯ
ವಾಗೆಮಗೆ ಕರುಣಸಾಗರನೆ ॥೧॥

ಕಲ್ಯಾಣ ನಗರದೊಳಗೆಲ್ಲ ಪ್ರಮಥಾವಳಿಯೊಳು
ಉಲ್ಲಾಸದಿಂದ ಮೆರೆದಿಹನು । ಮೆದಿ
ಹುಲ್ಲ ನುಲಿ ಹೊಸೆದು ಮಾರುವನು । ಹಾಗ
ದಲ್ಲಿ ಚರತತಿಗೆ ನೀಡುವನು
ಮಲ್ಲ ಶರಹರನ ಧ್ಯಾನದೊಳು ತದ್ಗತನಾಗಿ
ಅಲ್ಲಮನ ಬರವ ಬಯಸುವನು ॥೨॥

ಲಿಂಗಾಂಗ ಸಮರಸದೊಳಂಗಮನಭಾವದಲಿ ಸ
ರ್ವಾಂಗಮಯ ಲಿಂಗಿ ತಾನಾಗಿ । ಈತ
ರಂಗ ಭೋಗವನೆಲ್ಲ ನೀಗಿ । ತಾನು
ಮಂಗಳಾತ್ಮಕ ಮಹಿಮನಾಗಿ
ಲಿಂಗಾರ್ಚನೆಯ ಬಾಹ್ಯದಲ್ಲಿರಿಸಿ ಜಂಗಮ
ಹಿಂಗದರ್ಚಿಸುವ ನಿಜವಾಗಿ ॥೩॥

ಹರನು ತಾನರಿದು ಈ ತೆರನ ಪ್ರಮಥರ ಮುಂದೆ
ಭರದಿಂದೆ ನೋಡಬೇಕೆಂದು । ತಾನು
ಶರಣ ಸೇವೆಯ ಮಾಡಲೆಂದು । ಇರದೆ
ಶರಣ ಮೆದಿ ಕೊಯ್ಯುತಿರಲಂದು
ಉರದ ಲಿಂಗವು ಸಡಿಲಿ ಕೆರಿಯೊಳಗೆ ಬೀಳೆ
ಶರಣ ನಡೆಯಲು ಲಿಂಗ ಬಂದು ॥೪॥



ಯಾಕೆ ನುಲಿಯ ಚೆಂದಯ್ಯಾಕೆ ದೃಢಭಕ್ತನೆ
ಯಾಕೆನ್ನನಗಲಿ ಹೋಗುವರೆ । ಗುರುವಿ
ನೈಕ್ಯದುಪದೇಶ ಮೀರುವರೆ । ನಿಮಗೆ
ಏಕಾತ್ಮರುಗಳು ಮೆಚ್ಚುವರೆ
ಬೇಕೆಂದು ಜಲದೊಳಗೆ ಬಡಲಿಂಗವ ಬಿಟ್ಟು
ಧಿಕ್ಕರಿಸಿ ನೀನು ಹೋಗುವರೆ ॥೫॥

ತೆರಹಿಲ್ಲದಿಹ ಘನವು ಶರಧಿಯೊಳು ಮುಳುಗಲ್ಕೆ
ಬರಿದೆ ಬಣ್ಣಿಸಲ್ಯಾತಕಯ್ಯ । ನಾನು
ಇರದೆ ಪೂಜಿಸಲಾರೆನಯ್ಯ । ಇನ್ನು
ವರವ ಬೇಡುವರ ಕೂಡಯ್ಯ
ಚರವರತೃಪ್ತಿಗೆ ತಡೆವುದೆಂದು ಭರದಿಂದೆ
ಹೊರೆ ಹೊತ್ತು ನಡೆದ ಚೆಂದಯ್ಯ ॥೬॥

ಇಂದುಧರ ಹೆದರಿ ಮೊದಲಂದಗಳನಡಗಿಸುತ
ಮುಂದೆ ಪುರುಷಾಕಾರವಾಗಿ । ಬಿಡದೆ
ಚೆಂದಯ್ಯನ ಸೆರಗ್ಹಿಡದ ಹೋಗಿ । ಆತ
ಮುಂದಕ್ಕೆ ನಡೆದ ಶಿರಬಾಗಿ
ಇಂದು ಪ್ರಭುರಾಯನಾಣೆ ಎನಗಾವ ಗತಿ
ಹೊಂದಿಸಿ ಹೋಗೊ ನಿಜವಾಗಿ ॥೭॥

ಯಾಕ ಮಡಿವಿಲಿ ಬಿದ್ದಿ ಯಾಕ ಬೆನ್ನಿಲಿ ಬಂದಿ
ಯಾಕ ಕಾಡಿದಿ ದೇವಯೆಂದ । ಎನ್ನ
ಧಿಕ್ಕರಿಸಿ ಹೋಗುವದು ಚೆಂದ । ಇಬ್ಬ
ರೇಕಾಕಿಯಾಗಿ ತರ್ಕೈಸುವದೆಂದ
ಆ ಕರುಣದಿಂ ಮಡಿವಾಳ ಮಾಚಿತಂದೆ ಬರೆ
ತಾ ಕಂಡು ಹರ ಮುಂದೆ ನಿಂದ ॥೮॥

ಕಡಲಜನ ಧರಿಸಿದೆನ್ನೊಡನೆ ಸಮರಸವಾದ
ಮಡಿವಾಳ ತಂದೆ ಕೇಳ್ ಮಾತ । ಈತ
ದೃಢಭಕ್ತ ಚೆಂದಯ್ಯನೀತ । ಲಿಂಗ
ಸಡಲಿದರೆ ತಗಿಯ ಪ್ರಖ್ಯಾತ
ಬಿಡದರ್ಚಿಸುವ ಘನಬಿಟ್ಟು ನಡೆವುದು ನೀತೆ
ಒಡನೆ ಕೇಳಿನ್ನು ಬಲ್ಲಾತ ॥೯॥

ಮೃಡನು ಪೇಳ್ವುದ ಕೇಳಿ ಮುಗುಳನಗೆಯನೆ ನಕ್ಕು
ಮಡಿವಾಳ ಸ್ವಾಮಿ ತಾ ಬಂದ । ಶರಣ
ರಡಿಗೆ ಸಾಷ್ಟಾಂಗ ಶರಣೆಂದ । ಬಿಡದೆ
ದೃಢಭಕ್ತಿಯಲಿ ಬಂದು ನಿಂದ

ಅಡಿಯಿಡಲ್ ಬಾರದಾಕ್ಷಣ ಲಿಂಗವನಗಲಿ
ನಡೆವುದೆಂತೆನಗೆ ತಿಳುಪೆಂದ ॥೧೦॥

ಲಿಂಗಮಧ್ಯದಿ ಜಗವು ಜಗವೆಲ್ಲ ಲಿಂಗಮಯ
ಹೀಂಗಿರುವುದೆಂತೆನ್ನಿರಯ್ಯ । ಪ್ರಾಣ
ಲಿಂಗವೇಕಾತ್ಮವೆಂದರಿಯ । ಈತ
ಭಂಗಿಸಿದನೊಂದು ಪರಿಯ
ಜಂಗಮಾರ್ಚನೆಗೆ ತತ್ಪ್ರಾಣವಾಗಿರೆ ಲಿಂಗ
ವಂಗವಾಗಿರುವದೇನಾಶ್ಚರ್ಯ ॥೧೧॥

ಶರಣರಿಗೆ ಪ್ರತಿ ಉತ್ತರವೆ ನಾಯಕ ನರಕ
ಇರದೆ ನಾನಂಜುತಿಹೆನಯ್ಯ । ನಿಮ್ಮ
ಕರದೀಶನಲ್ಲವೆ ಜೀಯ । ಆವ
ಪರಿಯಾದಡೇನು ಹಿಡಿಕೈಯ
ಚರರೂಪವಾದಡೊಲ್ಲೆನು ನಾನು ಪರಶಿವನು
ಪರಮ ಗಾವುದಿಯಾದೆನಯ್ಯ ॥೧೨॥

ಮಿಡಿವಡೆದ ಬೆರಳುಗಳು ಬಿಡಿಬಿಟ್ಟ ತೊಡೆತೋಳು
ನಡು ಡೊಂಕ ಬಂಕುಣಿಯ ಕಾಲು । ಹಲ್ಲು
ಕಡು ದೊಡ್ಡ ಮೀಸೆ ತುಟಿ ಜೋಲು । ತೋಳು
ನಿಡಿದಾದವೊಡಲು ಹಿರಿಕೇಲು
ಉಡುಗೆ ಅರ್ಧವನುಟ್ಟು ನಡುವಿಗರ್ಧವ ಸುತ್ತಿ
ಉಡುಪದರು ಗಾವುದಿಗೆ ಮೇಲು ॥೧೩॥

ಶರಣಲಿಂಗವನೊಂದು ಮಾಡಿ ಮಾಚಯ್ಯಗಳು
ಭರದಿಂದ ತಾವತ್ತ ಪೋಗೆ । ತಮ್ಮ
ಶರಣ ನುಲಿಹೊಸೆದು ಮಾರಿ ತಾ । ಬೇಗ
ಅರಮನೆಗೆ ನಡೆತಂದರಾಗ
ಹರನು ಸಣ್ಣದೊಡ್ಡ ಸಪ್ಪುರಿಯ ಗಂಟಿಕ್ಕಿ
ಭರದಿಂದ ನುಲಿ ಹೊಸೆದನಾಗ ॥೧೪॥

ಕಲ್ಯಾಣಕೇರಿಯೊಳಗೆಲ್ಲ ಜನರಿಗೆ ತೋರಿ
ಒಲ್ಲೆನೆಂಬುತ ಕೂಡಲು ತಿರಿಗಿ । ನುಲಿಯ
ನಲ್ಲಲ್ಲಿ ತೋರಿ ಮನ ಮರುಗಿ । ಬಸವ
ನಲ್ಲಿಗೈತಂದು ಮನ ಸೊರಗಿ
ನಿಲ್ಲದೆ ನುಲಿ ಕೊಳ್ಳಿರೆಂದು ಮುಂದಿಡಲು
ನಿಲ್ಲು ದಾರೆಂದು ಮನ ಕರಗಿ ॥೧೫॥



ಏನು ಹೇಳಲಿ ವೃಷಭ ಮೇಲು ದೇಶದೊಳೊಂದು
ಕಾನನದ ಪಳ್ಳಿ ಶಿವಪೂರ । ಗೌಡ
ಏನಿಮಯ್ಯನ ಹುಡುಗ ಪೋರ । ಕರಣಿ
ಕನು ತಲೆಯಿಲ್ಲದವನು ಅವಿಚಾರ
ಏನೆಂಬೆವೂರ ಆಚೆಲೆನ್ನ ಹೆತ್ತವರ
ಮೌನದ್ದುಲಿ ತಿಂತು ಗಂಭೀರ ॥೧೬॥

ಅಮ್ಮವ್ವೆ ಎಂಬಾಕಿ ಆಕ್ಷಣದಿ । ಕರೆದೊಯ್ದು
ಸಮ್ಮತದಿ ಸಲಹಿದಳು ಎನ್ನ । ಹೇರೂರ
ಬೊಮ್ಮನೆಂದ್ಹೆಸರಿಡಲು ಎನ್ನ । ಹೆರ ಜನರು
ಒಮ್ಮನದಲಾಡಿಸಲು ಎನ್ನ
ತಮ್ಮ ತಮ್ಮನೆಗೆ ಕರೆದೊಯ್ದು ಅನ್ನವನಿಕ್ಕೆ
ದಮ್ಮಾಯ್ತು ಹೊಟ್ಟೆಗುಣರಣ್ಣಾ ॥೧೭॥

ಮದುವೆಗೋಸ್ಕರವಾಗಿ ಸದ್ಭಕ್ತ ಚಂದಯ್ಯನ
ಸದನಕ್ಕೆ ಆಳಾದೆನಲ್ಲಾ । ಸತ್ತ
ರುದಕ ನೀಡನು ಮುದುಕ ಹೊಲ್ಲ । ಎನಗೆ
ಹೊದಿಯಲಿಕ್ಕೆ ಅರಿವೆ ಮುನ್ನಿಲ್ಲ
ಮೆದಿಯ ಕೊಯ್ಯುತ್ತಿರಲು ಮಡುವಿನೊಳು ನೂಕಿ
ದನು ಮದನಾರಿ ಕೇಳ್ ಭಕ್ತ ಸೊಲ್ಲ ॥೧೮॥

ಶರಣರಾಳಾಗಲ್ಕೆ ಪರಿಭವಂಗಳು ತಪ್ಪಿ
ಇರದೆ ನಿಜಮುಕ್ತಿ ನಿನಗಹುದು । ನೀನು
ಶರಣ ಸೇವೆಯನಗಲದಿಹುದು । ನಿತ್ಯ
ಹುರಿಮಾಡಿ ನುಲಿಯ ತಂದಿಹುದು
ಇರದೆ ಹಾಗವನೈದು ಶರಣರಿಗೆ ಕೊಟ್ಟು ನ
ಮ್ಮರಮನೆಯೊಳುಂಡು ಸುಖಿಯಹುದು ॥೧೯॥

ಎಂದು ಸನ್ಮತ ಮಾಡಿ ಬಸವರಾಜೇಂದ್ರ ತಾ
ಮುಂದೆ ಸಾಸಿರ ಹೊನ್ನ ಕೊಟ್ಟು । ನುಲಿಯ
ಚಂದದಿಂದರಮನೆಯೊಳಿಟ್ಟು । ಹರನು
ಬಂದು ಬಲು ಸಂತೋಷಬಟ್ಟು
ಚೆಂದಯ್ಯ ಶಿವಧ್ಯಾನದೊಳಗೆ ಇರುತಿರಲಾಗ
ಮುಂದೆ ಸುರುಹಿದ ಗಂಟು ಬಿಚ್ಚಿಟ್ಟು ॥೨೦॥

ಹೊನ್ನು ಕಾಣುತ ಶರಣ ಗನ್ನಘಾತಕ ಮಾಡಿ
ಕನ್ನವಿಕ್ಕಿದನೆಂದು ತಿಳಿದು । ಎಲವೊ
ಇವನೆಲ್ಲಿ ತಂದೆ ಮನೆಯಳಿದು । ಬಸವ

ತನ್ನ ಭವನಕೆ ಕೊಟ್ಟನೊಲಿದು
ಇನ್ನು ಸಾಕಯ್ಯ ಇವ ಕೊಟ್ಟು ನುಲಿ ತಾಯೆಂದು
ಮುನ್ನ ಕಳುಹಿದ ಕೋಪ ಬಲಿದು ॥೨೧॥

ಬಸವ ಕೇಡು ಬಂತು ನುಲಿಯ ತಾರೈಯೆಂದು
ಅಸಮಾಕ್ಷ ಬಂದು ತಾ ನಿಂದ । ಚೆನ್ನ
ಬಸವೇಶ ಪ್ರಮಥಗಣ ವೃಂದ । ಸಹಿತ
ಅಸಮ ಭಕ್ತನ ಮನೆಗೆ ಬಂದ
ಜಸವೆತ್ತ ಜಂಗಮಪ್ರಾಣಿ ಸದ್ಗುಣಶ್ರೇಣಿ
ವಸುಧಿಪಾಲಿಪನೆ ಸಲಹೆಂದ ॥೨೨॥

ಬಸವೇಶ ಪ್ರಮಥಗಣ ನಿಕರದೊಳು ಅನುಭಾವ
ಅಸಮಗುರು ಚೆಂದಯ್ಯನೆಂದ । ಆತ
ಗುಸುರಲಳವಲ್ಲ ನಾವೆಂದು । ಚೆನ್ನ
ಬಸವೇಶ ಬಲ್ಲ ಇದನೆಂದು
ಕುಶಲನಿಧಿಕೇಳಿ ಅವರಂದಮಂ ದೃಷ್ಟಮಂ
ವಸುಧಿಪಾಲಿಪನೆ ಸಲಹೆಂದ ॥೨೩॥

ನೆರೆದ ಜನಸಂದೋಹಕ್ಕೆರಗಿ ಬಿನ್ನೈಸುತಲಿ ಪರಿ
ಪರಿಯ ಪ್ರಮಥತತಿಗೂಡಿ । ಪ್ರಭುವಿ
ಗಿರದೆ ಪಾದಾರ್ಚನೆಯ ಮಾಡಿ । ಗಣಕೆ
ಪರಮಾನ್ನ ಭಕ್ಷ್ಯವನು ನೀಡಿ
ಚರಣೋದಕದಿ ನುಲಿಯ ಸುವರ್ಣವನು ಮಾಡಿ
ಚರಕೆ ಕೊಡಲು ಜನರು ಕೊಂಡಾಡಿ ॥೨೪॥

ದಶಭುಜವು ಪಂಚಮುಖ ಮಿಸುಪ ಕಿಡಿಗಣ್ಣಿನಿಂದ
ಅಸಮ ಪ್ರಭು ತನ್ನ ನಿಜದೋರಿ । ಸುರಿವ
ಕುಸುಮದ ಮಳೆ ಸೂಳೈಪ ಭೇರಿ । ರವದಿ
ಎಸೆವ ಸಾಂಬವನೊಯ್ದು ಸಾರಿ
ಜಸವೆತ್ತ ಕರ್ಪುರೇಶನ ಕರುಣದಿಂ ಚೆನ್ನ
ಬಸವ ಸಾರಿದನು ನಲವೇರಿ ॥೨೫॥

* * *



# ಶ್ರೀಕೃಷ್ಣ ಲೀಲೆ

## ಶ್ರೀಕೃಷ್ಣ ಲೀಲೆ

ದುಂದುಮೆ ಕೇಳ್ರಿ ದುಂದುಮೆ ॥ಪ॥

ವಾಣಿಯ ವರದ ಕಲ್ಯಾಣಿಯ ಘನತರ
ವೇಣಿಯ ಕಡುಚಲ್ವಪಾಣಿಯಳ । ಸುಖ
ಶ್ರೇಣಿಯ ಶುಕ ಮೃದುವಾಣಿಯಳ । ಫಣಿ
ವೇಣಿಯ ಕುಶಲ ಸುಪ್ಪಾಣಿಯಳ । ಸುಪ್ರ
ವೇಣಿಯ ಬ್ರಹ್ಮನ ರಾಣಿಯ ಕಲೆ ವಿದ್ಯ
ತ್ರಾಣಿಯ ಬಿಡದಿಂಥ ಜಾಣಿಯ ಪೊಗಳ್ವೆ ॥೧॥

ತಾವರೆದಳನೇತ್ರ ದೇವಕಿವರ ವಸು
ದೇವರ ಗರ್ಭದಿ ಜನಿಸುತಲಿ । ಸರ್ವ
ದೇವತೆಗಳು ನಲಿದಾಡುತಲಿ । ಮೊಲೆ
ಸೇವಿಸಿ ಪೂತನಿ ನೀಗುತಲಿ । ಗೋವ
ಕಾವಲನಾಗಿ ಗೋಕುಲದೊಳು ನೆರೆ ಗೊಲ್ಲ
ರಾವಳಿಯೊಳು ನಲಿದಾಡಿ ಪಾಡುತಲಿ ॥೨॥

ಅರಳೆಲೆ ಬಿಂದುಲಿ ಕೊರಳ ತಾಯತ ಗೆಜ್ಜಿ
ಯೆರಡು ಕಾಲೊಳು ಝಣಝಣರೆನುತ । ರತ್ನ
ದ್ಹರಳಿನುಂಗುರ ಬೆರಳೊಳಗಿಡುತ । ಚಲ್ವ
ಮುರಲಿಯ ನಾದಿಸಿ ಸ್ವರದೋರುತ । ಬಂದು
ಮರುಳುಗೊಳಿಸಿ ತುರಗವನೇರಿ ವೃಕ್ಷದ
ನೆರಳಲಿ ಸರಿಗೆಳೆಯರ ಕುಡಿನೋಟ ॥೩॥

ಬಿಲ್ಲುಹಬ್ಬಕೆ ಪೋಗಿ ಭರದಿಂದ ದೈತ್ಯರ
ಮಲ್ಲ ಮಲ್ಲರನೆಲ್ಲ ಕೊಲ್ಲುತಲಿ । ಅಲ್ಲೆ
ಖುಲ್ಲ ಕಂಸನ ಸಂಹರಿಸುತಲಿ । ಮುತ್ಯ
ಗಲ್ಲಿಂದ ಪಟ್ಟವ ಕಟ್ಟುತಲಿ । ಮತ್ತೆ
ಬಲ್ಲಿದ ಶಕಟನ ಮುರಿದು ದನುಜರೆದೆ
ದಲ್ಲಣ ನಿರ್ಜರಪತಿ ಗರ್ವಹರಣ ॥೪॥

ಕಾಳಿಯ ಮಡುವನು ಧುಮುಕುತಲಲ್ಲಿರು
ಕಾಳೋರಗನನು ಮೆಟ್ಟುತಲಿ । ಅಲ್ಲಿ
ತಾಳಗತ್ತಿಲೆ ನಾಟ್ಯವಾಡುತಲಿ । ಮತ್ತೆ



ತೋಳದಂಡಿಗೆಯೇರಿ ಮೆರೆಯುತಲಿ । ಸಖ
ರಾಳಿಯೊಳತಿ ಚಂಡಬುತ್ತಿ ಬೊಗರಿ ಚಿಣಿ
ಕೋಲಿಂದಾಡುವುದೇನ ಬಣ್ಣಿಪೆನು ॥೫॥

ಆಲಯಗಳ ಪೊಕ್ಕು ಕುಲುಕುಲು ನಗುತಲಿ
ಬಾಲಕಿಯರ ಕಣ್ಣ ಮುಚ್ಚುತಲಿ । ಸಾಲು
ಸಾಲು ನೆಲುವ ಸರಕುಚ್ಚುತಲಿ । ಮೀಸ
ಲ್ಹಾಲು ಬೆಣ್ಣಿಗೆ ಕೈಯ ಹಚ್ಚುತಲಿ । ಸವಿ
ದಾಲಸ್ಯವಿಲ್ಲದ ಪರಿಯಲಿ ಮಾಳ್ಪ ಗೋ
ಪಾಲನ ಲೀಲೆಯಲಿಪ್ಪುದಿನ್ನು ಜನರು ॥೬॥

ಮತ್ತೇಭ ನಡೆಯರು ಮಧುರೆಗೆ ಪಾಲ್ಮೊಸ
ರ್ಹೊತ್ತು ಬರುವ ಸಲೆ ಮುತ್ತುಗಳು । ಗಳ
ಹತ್ತೆಂಟು ಸರಿಗಿ ಚಿಂತಾಕಗಳು । ನವ
ರತ್ನಖಚಿತ ಮುತ್ತಿನ್ಹಾರಗಳು । ಮೆರೆ
ವುತ್ತ ಕಂಗಳ ತಿರುವುತ್ತೆಡಬಲನಿಟ್ಟು
ಸುತ್ತಲಿ ಜತ್ತಿಲಿ ಬಂದರಾ ಪುರಕೆ ॥೭॥

ಬಾಲೇರು ಮದನನುಕೂಲೇರು ಯವ್ವನ
ಕಾಲೇರು ಕನಕ ಕಪೋಲೆಯರು । ಸುವಿ
ಶಾಲೇರು ಪಂಚಕಮಾಲೆಯರು । ಸ್ಮರ
ಲೀಲೇರು ಕಂದರ್ಪನೋಲೆಯರು । ರತಿ
ಗಾಲೇರು ಘನತರ ಲೋಲೇರು ಮೋಹನ
ಜಾಲೇರು ಸಲೆ ಸೀರಮಾಲೇರು ಬರಲು ।೮॥

ಮಜ್ಜಿಗೆ ಮೊಸರು ಪಾಲ್ಬೆಣ್ಣೆಯ ಹೊತ್ತು ಕಾ
ಲ್ಗೆಜ್ಜೆಯು ಝಣಝಣರೆನ್ನುತಲಿ । ನಯ
ಕಜ್ಜಳ ಕಣ್ಣಿಗೆ ತೀಡುತಲಿ । ಸುತ
ಸಜ್ಜೇರ ಮುನಿಗಳ ನೋಡತಲಿ । ಸಾದು
ಸಜ್ಜನರಿದ ಕೊಳ್ಳಿರೆಂದು ಮಧುರೆಪುರಿ
ಗುಜ್ಜೇರಿಯೊಳು ಬಂದು ನಿಂತರಾ ಕ್ಷಣದಿ ॥೯॥

ಮೇಲುಸ್ವರಗಳೆತ್ತಿ ಕೂಗುವ ಧ್ವನಿಗಳ
ಕೇಳಿ ಬಂದನು ಕೃಷ್ಣ ತಾನಲ್ಲಿಗೆ । ಸಾಲು
ಸಾಲು ಕೊಡಗಳೆಷ್ಟು ತೋರ್ಕಣ್ಣಿಗೆ । ಸುಂಕ
ಹೇಳಿರೆಂದನು ಹೊತ್ತ ಪಾಲ್ಬೆಣ್ಣೆಗೆ । ಇಕೊ
ನಾಳಿಗೆಂದರೆ ಕೇಳಿ ಬಿಟ್ಟವನಲ್ಲ ನಿ
ಮ್ಮಾಳೆಷ್ಟು ಲೆಕ್ಕವ ಹೇಳಿ ನೀವೆನುತ ॥೧೦॥

ದುಡುಕು ಮಾಡುವನೀತ ಹುಡುಗನ್ಯಾರವ ನಮ್ಮ
ತಡೆವುದ್ಯಾತಕ ಹೊತ್ತಕೊಡ ಭಾರಿಯ । ಸುಂಕ
ಕೊಡುವವರಲ್ಲವು ಬಿಡು ದಾರಿಯ । ಕೇಡ
ಕೊಡುವವರಾಗೊಡೆದವು ಸೋರಿಯ । ಬಿಡು
ಗೊಡವಿಯಾತಕೆ ಹಾಲು ಕುಡಿದೆನೆಂದರೆ ಹಿಡಿ
ಹಿಡಿಯೆಂದು ಗಲ್ಲವ ಪಿಡಿದು ಮುದ್ದಿಸುತ ॥೧೧॥

ಕಣ್ಣ ಸೊನ್ನೆಗಳಿಂದ ಕೈಯ ಗಲ್ಲಕೆ ತಂದು
ಬಣ್ಣಿಸುವದ ಬಲ್ಲೆನಾ ನಿಮ್ಮದು । ಉಟ್ಟ
ಸಣ್ಣ ಸೀರಿಯ ನಿರಿಗೆ ಚಿಮ್ಮುವದು । ಹೋದ
ರಣ್ಣಪ್ಪನಾಣ್ಯೆತಿ ತಾ ನಮ್ಮದು । ದಿನ
ಕಣ್ಣಿಗೆ ಕಾಣದೆ ಕದ್ದು ಹೋಗುವಿರಿಲ್ಲಿ
ಬಣ್ಣಗಾರಿಕಿ ಬಿಟ್ಟು ಕೊಟ್ಟು ಹೋಗೆಂದ ॥೧೨॥

ಮೊಸರು ಹಾಲಿಗೆ ಸುಂಕವ ವಸುಧೆಯೊಳ್ಕೊಡುವರೆ
ಹೆಸರೇನೊ ನಿನ್ನದು ಹೇಳೆನುತ । ಬಾಯ
ಕಿಸಿದು ಬೇಡುವದ್ಯಾಕ ಹೋಗೆನುತ । ಗಂಡ
ಅಸವಲ್ಲದವ ಕಂಡ್ಯೆ ಕೇಳೆನುತ । ಸುಳ್ಳು
ರಸಿಕಸಿ ವ್ಯಾಪಾರ ಸತಿಯರ ತಡೆವುದು
ಹಸನಲ್ಲ ದಾರಿಯ ಬಿಡುಯೆಂದರವರು ॥೧೩॥

ಹಿಂಡುಗೋಪಿಯರೆಲ್ಲ ಭಂಡಾಗದಿರಿ ಮತ್ತೆ
ಗಂಡ ಲೋಕಕೆ ನಾನು ತಿಳಿಯೆಂದನು । ನಿಮ್ಮ
ದುಂಡು ಕುಚವ ಕೈಯೊಳಿಡುಯೆಂದನು । ಕರ
ಕಂಡಾಕ್ಷಿಯರ ಮುದ್ದು ತಾರೆಂದನು । ಇಳ
ಕೊಂಡೆಮ್ಮ ಮನೆಯೊಳು ಉಂಡುಟ್ಟು ಶ್ರಮ ಕಳ
ಕೊಂಡು ರಾತ್ರಿಯೊಳಿದ್ದು ಹೋಗಿ ನೀವೆನಲು ॥೧೪॥

ಹೋರಾಟದಲಿ ಬಂದು ನಾರಿಯರಿಗೆ ಬಹು
ಭಾರಿ ಯವ್ವನ ಬಾ ಬಾ ಬಾರಂತೀದಿ । ಕೈಗೆ
ತೋರ ಕುಚವ ತಾ ತಾ ತಾರಂತೀದಿ । ಮನೋ
ಹಾರ ರತ್ನದ ಹಾ ಹಾ ಹಾರಂತೀದಿ । ಇಂಥ
ಜಾರತ್ವ ಬಿಡು ನೀ ಬಾಜಾರದೊಳ್ ನೆರೆದ ಹ
ಜಾರ ಮಂದಿಯೊಳು ಬೇಜಾರ ಮಾಡುವೆವು ॥೧೫॥

ಬಾ ಗೊಲ್ಲನಾರಿಯರೀ ಪ್ಯಾಟಿಯೊಳು ಒಂದು
ಸೋಗು ಸುಕಣ್ಗೆ ತೋರುವಿರೆ । ಮತ್ತೆ
ಬಾಗಿ ಬಳುಕಿ ಬಿಂಕ ಬೀರುವಿರೆ । ಮುಂದೆ



ಸಾಗುತಲಡಿಗಡಿಗ್ಹಾರುವಿರೆ । ಕಂಡು
ಹ್ಯಾಂಗ ಸೈರಿಸುವರೆ ಕೊಡು ಲೆಕ್ಕ ತೀರಿಸಿ
ಹೋಗಿರೆಂಬುತ ಸೆರಗ್ಹಿಡಿದು ನಿಲ್ಲಿಸುತ ॥೧೬॥

ವಾಸವುಳ್ಳವನೇನೋ ನೀ ಸೆರಗ್ಹಿಡಿಯುತ
ಲೀ ಸುಂಕ ಕೊಂಬುವನೇನೊ ಪೋರಾ । ನಿನ
ಗೇಸು ಕಣ್ಣುಗಳಿವೆ ಹೇಳೊ ಚೋರಾ । ಸುಳ್ಳೆ
ಫಾಸಿಯಾಗಲಿ ಬ್ಯಾಡ ತಿಳಿಯೊ ಸೂರಾ । ಒಂದು
ಕಾಸು ಕೊಟ್ಟಡೆ ಎದಿಮ್ಯಾಲಿದ್ದ ಕುಚ ಹೊತ್ತು
ಈಸು ನಿರಿಗಳಲ್ಲಿ ಹೋಗುಯೆಂಬವರು ॥೧೭॥

ಬೆಡಗಿನ ಮಾತೆಷ್ಟು ಬಡಿವಾರ ಬಿಡು ನಿಮ್ಮ
ವಡವಿವಸ್ತಗಳೆಲ್ಲ ಹರವುವೆನು । ಮುತ್ತು
ಜಡಿದಂಥ ಮುಜರಿಯ ಮುರಿಯುವೆನು । ಹೊತ್ತ
ಗಡಿಗಿಯೊಡೆದು ಹಾಲ ಸುರುವುವೆನು । ನಿರಿಗಿ
ಸಡಿಲಿಸಿ ಸೆಳೆಮಂಚಕೆಳೆದೊಯ್ದು ಎಲ್ಲರ
ಕೆಡಿಸದೆ ಬಿಟ್ಟರೆ ಹುಡುಗನೇ ಎನಲು ॥೧೮॥

ಚಿಕ್ಕ ಹುಡುಗ ನೀನು ತಕ್ಕಷ್ಟು ಇರು ಕಂಡ್ಯಾ
ಅಕ್ಕ ತಂಗೇರು ಬಾ ಬಾ ಮತ್ತೆನುತ । ಕೈಗೆ
ಸಿಕ್ಕದ್ಹೋಗುವ ಕರ ಕಷ್ಟೆನುತ । ಮುಸು
ಕಿಕ್ಕಿ ಸೆಳೆದು ಬಗಲೊಳಗಿಡುತ । ಇಂಥ
ಮಕ್ಕಳಾಟಿಕೆ ಬಿಟ್ಟು ಮನೆಗೆ ಹೋಗೆಂದು ಮುಂ
ದಕೆ ಹೆಜ್ಜೆಯ ಬಂದು ಮುತ್ತಿಕೊಂಡಿಹರು ॥೧೯॥

ಎತ್ತೆತ್ತ ನೋಡಲು ಮುತ್ತಿದ ಸಖಿಯರ
ಯೆತ್ತಿ ಸೀರೆಯ ಸೆರಗ್ಹಿಡಿಯುತಲಿ । ಮುಖ
ವೆತ್ತಿ ಮುಖಕೆ ಮುದ್ದ ನೀಡುತಲಿ । ಘನ
ವೃತ್ತಕುಚಗಳೊತ್ತಿ ಹಿಡಿಯುತಲಿ । ತನ್ನ
ಒತ್ತಿಲಿ ಸುತ್ತಿಲಿ ಜತ್ತಿಲಿ ನೆರೆ ರಂಜಿ
ಸುತ್ತಲಿ ಗೊತ್ತಿಲಿ ಅರ್ತಿಯಾಡುವನು ॥೨೦॥

ಆಡ್ವನು ಕೊಳಲೂದಿ ಹಾಡ್ವನು ಸತಿಯರ
ಕಾಡ್ವನು ಕಾಮಿನಿನಿಕರದೊಳು । ಚೆಂಡ
ನಾಡ್ವನು ವರ ಕುಚಗಮಕದೊಳು । ಮುದ್ದು
ಬೇಡ್ವನು ಅತಿ ಚಮತ್ಕಾರದೊಳು । ತಂತ್ರ
ಮಾಡ್ವನು ಮನದಿ ಲೋಲಾಡ್ವನು ಸಿಗದೆದ್ದು
ವೋಡ್ವನು ನಿಂತು ಮಾತಾಡ್ವನು ನಯದಿ ॥೨೧॥

ಜಡಜಾಕ್ಷ ತಾ ನಿಂತು ಮಡದೇರೊಳಗೆ ಬಲು
ಬೆಡಗ ತೋರಿಸಿ ಸೀರಿ ಕಳೆಯುತಲಿ । ಗಜ
ನಡೆಯರೆಲ್ಲರು ಬತ್ತಲಾಗುತಲಿ । ತಮ್ಮ
ತೊಡೆತೋಳು ಕುಚನೋಡಿ ನಾಚುತಲಿ । ಕೃಷ್ಣ
ತಡೆಯದೆ ಮುಗುಳ್ನಗೆಯೊಡಗೂಡಿ ಬಂದು ತಾ
ಕಡವಾಲ ಮರನೇರಿ ಬಿಡದೆ ನೋಡುವನು ॥೨೨॥

ಬಾಲೆರೆಲ್ಲರು ಬತ್ತಲಾಗುತ ಗಿಡದಡಿ
ಮೇಲಕೆ ಕರವೆತ್ತಿ ಪೊಗಳುತಲಿ । ಶ್ರೀ ಗೋ
ಪಾಲ ನಿಮ್ಮೊರೆಹೊಕ್ಕೆವೆಂಬುತಲಿ । ಘನ
ನೀಲಮೇಘಶ್ಯಾಮ ಕರುಣದಲಿ । ಹಿಂದೆ
ಪಾಲಿಸಲಿಲ್ಲವ್ರ ಎಂದೆಂಬರೀ ಘನ
ಶಾಲೆಯ ಕೊಟ್ಟೆಮ್ಮ ಕಾವುದೆಂದೆನಲು ॥೨೩॥

ದುರುಳ ದುಶ್ಯಾಸನ ನೆರೆದ ಸಭೆಯೊಳಾಗ
ತರುಣಿ ದ್ರೌಪತಿ ಸೀರೆ ಸೆಳೆಯುತಿರೆ । ಕಂಡು
ಪರಿವಾರ ಜನರೆಲ್ಲ ಮರುಗುತಿರೆ । ಕೃಷ್ಣ
ಪೊರೆಯೊ ಪೊರೆಯೊ ಎಂದು ಸ್ಮರಿಸುತಿರೆ । ಅಂದು
ಪೊರೆಯಲಿಲ್ಲವೆ ದೇವ ಪರಮ ದಯಾಳು ನೀ
ಕರುಣದಿ ಕಾಯಭಿಮಾನ ಎಂಬುವರು ॥೨೪॥

ಮಾರಜನಕ ಮಾಯಾಕಾರ ಮಹಿಮನೆಂದು
ನಾರೇರ ಸ್ತುತಿವಾಕ್ಯ ಸುರಿವುತಿರೆ । ಬಂದು
ಬಾರಿಬಾರಿಗೆ ಬಾಯ್ದೆರೆವುತಿರೆ । ಮನ
ಸೂರ್‍ಯಾಗುದೆಂದಾಲಿ ಪರಿಯುತಿರೆ । ಮತ್ತೆ
ಧಾರುಣಿಯೊಳು ಕುಂದಗೋಳ ಶ್ರೀಗುರು ಸಖ
ಭೂರುಹನಿಳಿದು ನೀರೆಯರ ರಕ್ಷಿಸಿದ ॥೨೫॥

* * *



# ಶಿವನಾಮದಿಂದ ಸವೆದೀತು ಪಾಪ

## ಶಿವನಾಮದಿಂದ ಸವೆದೀತು ಪಾಪ

ದುಂದುಮೆ ಬಸವಂತನ ಹಬ್ಬ ॥ಪ॥

ಜಯ ಜಯ ಲಿಂಗಯ್ಯ ಜನ ಗುರು ಲಿಂಗಯ್ಯ
ಜಯ ಜಯ ಮಂಗಲ ಮನೋಹಾರ । ಮಾ
ಭುವನದೊಡೆಯ ಬಸವೇಶನ ಪಾದವು
ಸುವಿಲಾಸದೋರಿತು ಮನಕಿನ್ನು । ಮಾ ॥೧॥

ಮಡಿವಾಳ ಮಾಚಯ್ಯ ಪಡಿಹಾರಿ ಉತ್ತಣ್ಣ
ನಿಡಗುಡಿ ಮಾರಯ್ಯನಡಿಗಾಳು । ಮಾ
ದೃಢವೀರಶೈವನು ಮೋಳಿಗಿ ಮಾರಯ್ಯ
ನಡಿಗಳ ನಾ ಬಲಗೊಂಬೆನು । ಮಾ ॥೨॥

ತಿರುನೀಲಕಂಠಯ್ಯ ಮೆರೆಮಿಂಡನಾಗಯ್ಯ
ಉರಿಲಿಂಗಪೆದ್ದಯ್ಯ ವಹಿಲಯ್ಯ । ಮಾ
ಗಿರಿಗುಂಟ ಶಾಂತಯ್ಯ ಗುರುಚೆನ್ನಬಸವಯ್ಯ
ತೆರಪಿಲ್ಲದವರಡಿಯ ಬಲಗೊಂಬೆನು । ಮಾ ॥೩॥

ಹಾದರದ ಬ್ರಹ್ಮಯ್ಯ ಮೇದಾರ ಕೇತಯ್ಯ
ಆದಕ್ಕಿ ಮಾರಯ್ಯ ಮಸಣಯ್ಯ । ಮಾ
ಸೇದಿರಾಜಯ್ಯ ಶಂಕರದಾಸ್ಮಯ್ಯನ
ಪಾದಪದ್ಮವ ಬಲಗೊಂಬೆನು । ಮಾ ॥೪॥

ಕಲ್ಯಾಣದೊಳಗಿರುವ ಎಲ್ಲ ಪ್ರಮಥರ ಪಾಡಿ
ನಿಲ್ಲದೆ ಪದಗಳನು ನಡೆಸುವೆನು । ಮಾ
ಕಲ್ಲುಸಕ್ಕರೆ ಹಾಲು ತುಪ್ಪವ ಸವಿದಂತೆ
ಬಲ್ಲಂಥವರಿಗಿದು ತೋರೀತು । ಮಾ ॥೫॥

ಬಾಣನು ಮಲುಹಣ ಜಾಣ ಮಯೂರನು
ಕ್ಷೋಣಿಯೊಳಗೆ ರಾಘವಾಂಕನು । ಮಾ
ಮಾಣದೆ ಹರಿದೇವ ಮೊದಲಾದ ಕವಿಗಳನು
ಧ್ಯಾನಿಸಿ ಪದಗಳನು ಪೇಳುವೆನು । ಮಾ ॥೬॥

ಕೆರೆಯ ಪದ್ಮರಸನು ವರಲೀಲೆ ಚಾಮರಸ
ಗುರುಮಲ್ಲಿಕಾರ್ಜುನನು ಪಂಡಿತರು । ಮಾ



ಗುರುವಾದ ಪಾಲ್ಕುರಿಕೆ ಸೋಮೇಶನಡಿಗಳ
ಸ್ಥಿರವಾಗಿ ನಾ ಬಲಗೊಂಬೆನು । ಮಾ ॥೭॥

ಶಿವಶಿವಯೆಂದರೆ ಸವೆದೀತು ಪಾಪವು
ಅವಿರಳ ಪದವಿಯ ತೋರೀತು । ಮಾ
ವಿವರಿಸುವೆನು ಮುಂದೆ ಸವೆಯದ ಕಥೆಯನು
ಕಿವಿಗೊಟ್ಟು ನೀವಿನ್ನು ಕೇಳಿರಿ । ಮಾ ॥೮॥

ಮಾಳವ ಮಾಗಧ ನೇಪಾಳ ಪಾಂಚಾಳ
ಕಾಳಿಂಗ ಕಾಶ್ಮೀರ ದೇಶವು । ಮಾ
ಲಾಳಗುರ್ಜರ ಪಾಂಡ್ಯ ತಿರುಸಣ್ಯ ತುರುಕಾಣ್ಯ
ಬಾಳ ಸಂಭ್ರಮದಿಂದೆ ಒಪ್ಪ್ಯಾವು । ಮಾ ॥೯॥

ಸಿಂಧು ಬರ್ಬರ ಚೋಳ ಮುಂದೆ ಸೌರಾಷ್ಟ್ರವು
ಚೆಂದುಳ್ಳ ದ್ರಾವಿಡ ದೇಶವು । ಮಾ
ಅಂದುಳ್ಳ ಕುಂತಳ ಕೊಡಗು ಕರ್ನಾಟಕವು
ಚೆಂದದಿ ದೇಶಗಳೊಪ್ಪ್ಯಾವು । ಮಾ ॥೧೦॥

ಆಡುಮಂಡಲದೇಶ ನವಿನ ಕೊಂಕಣದೇಶ
ಪಾಡುಳ್ಳ ಮಧುರೆ ಮಾರಾಟವು । ಮಾ
ನೋಡಲು ಪಿಂಗದೆ ಪರಿಪರಿ ದೇಶವು
ರೂಢಿಯೊಳಗೆ ಒಪ್ಪಿ ಮೆರೆದಾವು । ಮಾ ॥೧೧॥

ಇಂತಪ್ಪ ಚಪ್ಪನ್ನ ದೇಶದೊಳೊಪ್ಪಿತು
ಮತ್ತೊಂದು ಕೈಕೆಯ ದೇಶವು । ಮಾ
ಸಂತೋಷದಿಂ ಕನಕಾವತಿಯೆಂಬ ಪಟ್ಟಣ
ಅಂತು ಪೊಗಳುವರಳವಲ್ಲ । ಮಾ ॥೧೨॥

ಹಾರೂರು ಹರದಾರು ಮೇಲೆ ಚಿನಿವಾಲರು
ಕೇರಿ ಕೇರಿಯೊಳೆಸೆದಿರ್ದರು । ಮಾ
ನೂರೊಂದು ಕುಲ ಹದಿನೆಂಟು ಜಾತಿಗಳೆಲ್ಲ
ತಾರತಮ್ಯದೊಳೆಸೆದಿರ್ದರು । ಮಾ ॥೧೩॥

ಮೂರಾರು ಸಾವಿರ ಹಾರೂರ ಮನೆಯಿರೆ
ಮೀರಿ ದಾನವನೊಬ್ಬ ಹಾರುವನು । ಮಾ
ವಾರಿಜಮುಖಿಯೊಳು ಸೌಮಿನಿಯೆಂದೆಂಬ
ಪೋರಿ ಚಿಕ್ಕದೊಂದು ಮಗಳಿತ್ತು । ಮಾ ॥೧೪॥

ಅದರ ಚೆಲ್ವಿಕೆಯನ್ನು ಹೇಳುವರಳವಲ್ಲ
ಹದಿನೆಂಟು ಲಕ್ಷಣಯಿತ್ತೆಲ್ಲ । ಮಾ

ಮದನನ ಅರಗಿಳಿ ರತಿರೂಪ ನಿಂದಲ್ಲಿ
ಮುದದಿ ಸಂತೋಷದೊಳಿತ್ತಲ್ಲ । ಮಾ ॥೧೫॥

ಚಕ್ಕಂದ ಸಾಕಿನ್ನು ತಕ್ಕಂಥ ವರನೋಡಿ
ಲೆಕ್ಕವಿಲ್ಲದೆ ರೊಕ್ಕ ವೆಚ್ಚವ್ರು । ಮಾ
ಅಕ್ಕರಿಂದಲಿ ಅದರ ಲಗ್ನವ ಮಾಡಿನ್ನು
ತಕ್ಕಷ್ಟು ಸುಖದಲ್ಲಿ ಇದ್ದಾರು । ಮಾ ॥೧೬॥

ಪೂರ್ವವ ಗೆದ್ದವರಾರುಂಟು ಧರೆಯೊಳು
ನಾರೀಗೆ ತುಂಬಿತು ಯೌವನ । ಮಾ
ಮಾರನಾಟಗಳಿನ್ನು ಮನಸಿನಲ್ಲಿರುತಿರೆ
ನಾರೀಯ ಗಂಡನು ಸತ್ತಾನು । ಮಾ ॥೧೭॥

ಗಂಡ ಸಾಯಲಿಕ್ಕೆ ಮುಂಡಿಯಾದ ಮೇಲೆ
ಮಂಡೆಯ ಕೂದಲ ತೆಗಿಸ್ಯಾರು । ಮಾ
ಕಂಡಕಂಡವರೆಲ್ಲ ಹಸುಮಗಳೆನುತ ಭೂ
ಮಂಡಲದವರೆಲ್ಲ ಮರುಗ್ಯಾರು । ಮಾ ॥೧೮॥

ದಿನದಿನಕವಳಸು ತನುವನು ಕೊರೆಯಿತು
ಮನಸಿಜನಾಟಕೆ ದೇಹ ಸವೆದೀತು । ಮಾ
ಇನಿಯರ ಕಾಣುತ್ತ ಮನದಿ ಕಾತುರ ಹೆಚ್ಚಿ
ಹಣಿಹಣಿಯನು ಬಡಕೊಂಡಾಳು । ಮಾ ॥೧೯॥

ಎಲ್ಲರ ಕುಲದಂತೆ ಅಲ್ಲ ಈ ಕುಲದೊಳು
ಇಲ್ಲಿಂದ ಮರಣದ ಪರಿಯನು । ಮಾ
ನಿಲ್ಲದೆ ನೆಲ ಮುಡಿ ಮುಡಿವುದು ಬಂತಿದು
ಎಲ್ಲಿತ್ತು ಮಗಳಿಗೆ ವಿಧಿಹತ್ತಿ । ಮಾ ॥೨೦॥

ಮಾರನ ಕಣೆಗಳು ಪೂರೈಸಿ ಹೊಡೆಯಲ್ಕೆ
ನಾರೀಗೆ ತಟ್ಟುಚ್ಚಿ ಹಾಯ್ದವ್ರು । ಮಾ
ಧೀರತನವನು ಬಿಟ್ಟು ಗಾರುಗೆಡುತಲಾಗ
ಮಾರನಾಟಕೆ ನಾರಿ ಬಿದ್ದಾಳು । ಮಾ ॥೨೧॥

ಆರೂ ಅರಿಯದಂತೆ ನಾರಿ ಹಾದರವಾಡೆ
ಈ ರೀತಿ ಕೆಲದಿನ ನಡೆಯಿತು । ಮಾ
ತೋರಿತು ಗರ್ಭವು ನಾರಿಗೆ ವಿಧಿಹತ್ತಿ
ನಾರು ಮಾಡಿ ಮುಂದೇನಾತು । ಮಾ ॥೨೨॥

ಬೆಳೆಯಿತು ಗರ್ಭವು ಬಿಳ್ಪೇರಿ ವದನವು
ಕಳಸಕುಚವು ಕಪ್ಪೇರ್ಯಾವು । ಮಾ



ತಳಿದಾರು ನೆರೆಹೊರೆ ಬಂಧು ಬಳಗವೆಲ್ಲ
ಕುಲಕೆ ಕುಂದ ತಂದಳೆಂದಾರು । ಮಾ ॥೨೩॥

ತಂದಿ ತಾಯಿಗಳೆಲ್ಲ ಸಂದೇಹ ಮಾಡುತ
ಮುಂದಿದು ನಮಗಪಕೀರ್ತಿಯು । ಮಾ
ಮಂದಗಮನೆ ನಮ್ಮ ಮನೆಯೊಳು ಇರಸಲ್ಲ
ಒಂದಾಗಿ ಹೊರೆಯಕ್ಕೆ ಹಾಕ್ಯಾರು । ಮಾ ॥೨೪॥

ಸಿಸುಹತ್ಯ ಸ್ತ್ರೀಹತ್ಯ ಪಶುಹತ್ಯ ಮಾಡಲು
ಅಸಮ ಪಾತಕವೆಂದು ಬಿಟ್ಟಾರು । ಮಾ
ಕಸಮೂಳಿ ಹೋಗೆಂದು ಹೊರಡಿಸಲಲ್ಲೊಬ್ಬ
ಅಸಮ ಪಾತಕ ಬೇಡ ಕಂಡಾನು । ಮಾ ॥೨೫॥

ಕಾಣುತ್ತ ಸಂತೈಸಿ ಪ್ರಾಣದೊಲ್ಲಭನಾಗಿ
ಮಾನುನಿಯ ಕೊಂಡೊಯಿದಾನು । ಮಾ
ಏನು ಹೇಳಲಿ ಮದ್ದುಮಾಂಸವ ತಿನುತಲಿ
ತಾನು ಹಂಬಲಿಸಿ ಬಳಲ್ಯಾಳು । ಮಾ ॥೨೬॥

ಕುಲಗೆಟ್ಟು ನೆಲೆದಪ್ಪಿ ಬಲುಕಷ್ಟಪಡುತಲಿ
ಕೆಲವು ದಿವಸ ಹೀಂಗ ಕಳದಾಳು । ಮಾ
ಲಲನೆ ತಾ ಮಾಡಿದ ಕೃತ್ಯವ್ರ ಕೇಳಿರಿ
ಇಳೆಯೊಳು ಪೊಸತಾಗಿ ತೋರಿತು । ಮಾ ॥೨೭॥

ಗಂಡಹೆಂಡೀರಾಗಿ ಭಂಡಾಟ ದಿನದಲ್ಲಿ
ಮಂಡಲದೊಳು ನಗೆಗೀಡಾಗಿ । ಮಾ
ಕಂಡಕಂಡವರೆಲ್ಲ ಚೀಯೆಂದು ಬೈವ್ರಾತ
ಬಂಡಾಗಿ ಬದುಕನು ಮಾಡ್ಯಾಳು । ಮಾ ॥೨೮॥

ಹತ್ತೆಂಟು ವರುಷವು ಉತ್ತಮಳೆನಿಸಿದ್ದು
ಪೆತ್ತಳು ನಾಕಾರ ಮಕ್ಕಳನು । ಮಾ
ಇತ್ತ ಗಂಡನು ತಾನು ತವರೀಗೆ ಹೋಗಿರೆ
ತೊತ್ತು ಮಾಡಿದ ಕೃತ್ಯ ಕೇಳಿರಿ । ಮಾ ॥೨೯॥

ಸೆರೆಯವ ಕುಡಿದಿನ್ನು ದೇಹದೆಚ್ಚರ ತಪ್ಪಿ
ಗುರುಗುರುಗುಟ್ಟುತ ಮಲಿಗ್ಯಾಳು । ಮಾ
ಸರುಹೊತ್ತಿನೊಳೆದ್ದು ಮಾಂಸದಪೇಕ್ಷೆಗೆ
ಭರದಿಂದಲವಳಿನ್ನು ಎದ್ದಾಳು । ಮಾ ॥೩೦॥

ಆವೀನ ಕರವೊಂದು ಆಡೀನ ಮರಿಯೊಂದು
ಜೋಡಾಗಿ ತಾವಿನ್ನು ಕಟ್ಟ್ಯಾರು । ಮಾ

ಮಾಡದೊಳಗಿದ್ದ ಮಸೆದ ಚೂರಿಯ ಹಿಡಿದು
ನೋಡದೆ ಕೊರಳನು ಕೊಯಿದಾಳು । ಮಾ ॥೩೧॥

ದೇಹದೆಚ್ಚರ ಹುಟ್ಟಿ ದೀವಿಗೆಯನು ತಂದು
ಮಾಂಸವ ಸೋದಿಸಬೇಕೆಂದು । ಮಾ
ಆವೀನ ಕರುವಾಗಿ ನೋವಾತು ಶಿವಶಿವಾ
ವಿವರಿಸುತಲಾಗ ನುಡಿದಾಳು । ಮಾ ॥೩೨॥

ಕರುವೀನ ಮಾಂಸವ ಭರದಿಂದೆ ಸೋದಿಸಿ
ಹರುಷದಿಂದಲಟ್ಟು ತಿಂದಾಳು । ಮಾ
ಹೊರಿಯಾಕೆ ಬಿಸುಟಲು ಎಲುವು ತೊಗಲೆಲ್ಲ
ಭರದಿಂದ ಹೋಯಿಕೊಂಡತ್ತಾಳು । ಮಾ ॥೩೩॥

ನಾರೀಯ ಗಾರುಡ ದಾರಿಗೂ ತಿಳಿಯದು
ವಾರೆಲ್ಲ ಬಂದಿನ್ನು ನೆರೆದೀತು । ಮಾ
ದೂರ ಹೇಳ್ಯಾಳು ತನ್ನ ತಪ್ಪನೆ ತಪ್ಪಿಸಿ
ಈ ರೀತಿ ಹುಲಿ ಕರವ ಮುರಿಯಿತು । ಮಾ ॥೩೪॥

ಮಲ ಮಲಗುತ ಲಲನೆ ನೀ ಉಳಿಯೆಂದು
ಒಳಿಯಕ್ಕೆ ಆಕಿಯ ಕಳಿಸ್ಯಾರು । ಮಾ
ಹಲವು ಪಾಪಗಳಿಂದ ಕೆಲದಿನ ಕಳೆದಿನ್ನು
ಮಲಗೂತ ಪ್ರಾಣವ ಬಿಟ್ಟಾಳು । ಮಾ ॥೩೫॥

ಬಂದಾರು ಯಮನಾಳು ತಂದು ಪಾಶವ ಹಾಕಿ
ಸಂದೇಹ ಮಾಡದೆ ಎಳದಾರು । ಮಾ
ಮುಂದೆ ಕೇಳಿರಿ ಪುಣ್ಯ ಪಾಪದ ಫಲವನು
ಕಂದರ್ಪ ಹರಶಿವ ಬಲ್ಲನು । ಮಾ ॥೩೬॥

ಪುಣ್ಯವ ಮಾಡಿದ ಹೆಣ್ಗಂಡುಗಳನು
ಮನ್ನಿಸಿ ಸ್ವರ್ಗಕ್ಕೆ ಕಳಿಸ್ಯಾರು । ಮಾ
ಅನ್ಯಾಯ ಮಾಡಿದ ಗನ್ನಘಾತಕರನು
ಬನ್ನ ಬಡಿಸುವದೇನು ಪೇಳಲಿ । ಮಾ ॥೩೭॥

ಮೆಚ್ಚಿದ ಹೆಣ್ಣಿನ್ನು ನೀಚತನಕ ಬಿದ್ದು
ನಾಚದೆ ಹಾದರವಾಡ್ಯಾಳು । ಮಾ
ಬಾಚಿ ಬಾಚಿಲಿ ಕೆತ್ತಿ ಬಡಿವುತಿರ್ಪರು ಅಲ್ಲಿ
ಸೂಚನೆಗಳ ಕಂಡು ಮರುಗ್ಯಾರು । ಮಾ ॥೩೮॥

ಹೆಂಡರ ಬಳಲೀಸಿ ತುಂಡತನಕ ಬಿದ್ದು
ರಂಡಿಮುಂಡೇರ ಸಂಗದಿರುವನು । ಮಾ



ಉಂಡಮನಿಗೆ ಎರಡು ಬಗೆದ ಮಾನವನಿಗೆ
ತುಂಡರಿಸಿ ಬಿಸುಡೂವ ಯಮನಾಗ । ಮಾ ॥೩೯॥

ಕುಂಟಲಗಿತ್ತೀಗಿ ಗಂಟಲ ಗಾಣವು
ಸೊಂಟವ ಮುರಿದಿನ್ನು ಹಾಕ್ಯಾರು । ಮಾ
ಉಂಟಾದ ನ್ಯಾಯವ ಹುಸಿ ಮಾಡಿದವನಿಗೆ
ಕುಂಟಿಯ ಬಳಿ ಕಾಸಿ ಒತ್ಯಾರು । ಮಾ ॥೪೦॥

ಕುಂಟಲಗಿತ್ತೀಗೆ ಗಂಟಲ ಗಾಣವು
ಸೊಂಟವ ಮುರಿದಿನ್ನು ಹಾಕ್ಯಾರು । ಮಾ
ಉಂಟಾದ ನ್ಯಾಯವ ಹುಸಿ ಮಾಡಿದವನಿಗೆ
ಕುಂಟಿಯ ಬಳಿ ಕಾಸಿ ಒತ್ಯಾರು । ಮಾ ॥೪೦॥

ಉಂಡುಟ್ಟು ಮಲಗಿಸಿ ಗಂಡನೊಂಚಿಸಿ ಪೋದ
ಬಂಡದೊತ್ತಿಗೆ ಬಾಧೆ ಬಡಿಸ್ಯಾರು । ಮಾ
ಕಂಡ ಕಂಡವರೊಳು ಕದನವ ಮಾಡಲು
ಹಿಂಡು ರಕ್ಕಸರಿನ್ನು ಎಳದಾರು । ಮಾ ॥೪೧॥

ಮದುವಿಯ ಮನಿಯೊಳು ಕದನ ಹುಟ್ಟಿಸಿ ಮತ್ತೆ
ಬದಲು ಮಾಡುವ ಹೆಣ್ಣು ಗಂಡನು । ಮಾ
ಎದೆ ಮಾಟ ಹುಗದಿನ್ನು ತಿರ್‍ರೆಂದು ಎಳೆವೂತ
ಕುದಿವ ಸೀಸವ ಬಾಯೊಳ್ಹಾಕ್ಯಾರು । ಮಾ ॥೪೨॥

ತಂದೀಯ ಸಲಹದೆ ತಾಯಿಗೆ ನಮಿಸದೆ
ಬಂಧು ಬಳಗ ಬಗೆಗೊಳಿಸದೆ । ಮಾ
ಸಂದೇಹ ಮಾಡದೆ ಸದೆಬಡಿವುತಲಾಗ
ತಂದು ನರಕಕ್ಕೆ ದಬ್ಯಾರು । ಮಾ ॥೪೩॥

ಹೇಳಲು ತೀರದು ಬಾಳ ಬಾಧೆಗಳನು
ಘೋಳಿಟ್ಟು ಬೇರಿನ್ನು ಒದರ್‍ಯಾರು । ಮಾ
ಬಾಳಬಂಧನದಿಂದೆ ಎಳದೊಯ್ದು ಯಮನಾಳು
ಆಳಿದೊಡೆಯನ ಮುಂದೆ ನಿಲಿಸ್ಯಾರು । ಮಾ ॥೪೪॥

ಕರೆಸಲು ಬಂದಾರು ವರಚಿತ್ರಗುಪ್ತರು
ಪರೀಕ್ಷಿಸಿ ಹೇಳ್ಯಾರು ಪಾಪವು । ಮಾ
ಅರಿಯಲೆಮ್ಮಳವಲ್ಲ ವರುಷ ತೀರಲು ಹೇಳು
ನರಕಿ ಮಾಡಿದ ಪಾಪವೆಂದಾರು । ಮಾ ॥೪೫॥

ಕೇಳೂತ ಯಮನಾಗ ಬಾಳ ಕೋಪವ ತಾಳಿ
ಸೀಳಿಸುವೆನು ಎಂದು ಎದ್ದಾನು । ಮಾ

ಏಳೇನು ಜನ್ಮದಿ ಗತಿ ಮೋಕ್ಷವಿದಕಿಲ್ಲ
ಕೀಳು ನರಕಕಿನ್ನು ಹಾಕಿರೆಂದಾನು । ಮಾ ॥೪೬॥

ಎಂದು ಆರ್ಭಡಿಸಲು ಮುಂದೊಂದ ಪೇಳ್ದರು
ಎಂದೆಂದು ಶಿವಯೆದುದಿಲ್ಲವು । ಮಾ
ಕೊಂದಿನ್ನು ಆವೀನ ಕರುವನು ಶಿವಶಿವ
ಎಂದಳೆನುತಲಾಗ ಪೇಳ್ಯಾರು । ಮಾ ॥೪೭॥

ಶಿವಯೆಂದ ಬಳಿಕಿನ್ನು ಹವಣೀಕಿ ನಮಗಿಲ್ಲ
ಜವನ ಬೀದಿಯು ತಪ್ಪಿ ಉಳಿದಾಳು । ಮಾ
ಭುವಿಯೊಳು ಹುಟ್ಟಿನ್ನು ಸವೆಯದ ಪಾಪವ
ಸಲೆತೀರ್ಚಿ ಶಿವನೊಳು ಬೆರೆಯಲಿ । ಮಾ ॥೪೮॥

ಎಂದು ಗೊತ್ತನು ಮಾಡಿ ಅಂದು ಭೂಮಿಗೆ ಕಳುಹೆ
ಮುಂದೆ ಕೇಳಿರಿ ಅದರ ಕಷ್ಟವು । ಮಾ
ಬಂದು ಹುಟ್ಟಿತು ಅಂತ್ಯಜರ ಗರ್ಭದೊಳಿನ್ನು
ಅಂಧಕಳಾಗಿ ತಾ ಕೇಳಿರಿ । ಮಾ ॥೪೯॥

ಹುಟ್ಟುಗುರುಡಿಯಾಗಿ ಹುಟ್ಟೀತು ಆಕ್ಷಣ
ನಷ್ಟವಾದರು ತಂದೆತಾಯಿಗಳು । ಮಾ
ಪಟ್ಟು ಗುಡುಮೆ ಇದು ಬಲು ಪಾಪಿಯೆನುತಲಿ
ಸಿಟ್ಟೀಲಿ ಸೋದರರು ಬಯಿದಾರು । ಮಾ ॥೫೦॥

ಹಿಂದಣ ಪಾಪವು ಬಂದು ಪ್ರಾಪ್ತಿಯಾಗಿ
ಒಂದೊಂದು ಕಷ್ಟವ ಬಿಡಿಸೀತು । ಮಾ
ಹೊಂದೀತು ಮೈಯೊಳು ಕುಷ್ಟವು ಗಿಣ್ಣರೋಗ
ನಿಂದರದೆ ಹುಳಗಳು ಕಡಿದಾವು । ಮಾ ॥೫೧॥

ಕೀವುರಕ್ತವು ಸುರಿಯೆ ಸೀವರಿಸುತಲಾಗ
ಆವಾಗಾರಾರು ಹೊರೆಯಕ್ಕೆ ಹಾಕ್ಯಾರು । ಮಾ
ನೋವೂತ ಬಳಲೂತ ಬಲು ಕಷ್ಟಬಡುತಲಿ
ಸಾವನ್ನು ಬಯಸೂತಲಿದ್ದಾಳು । ಮಾ ॥೫೨॥

ಒಡಲಿಗನ್ನಗಳಿಲ್ಲ ಉಡಲಿಕ್ಕೆ ಮೊದಲಿಲ್ಲ
ಎಡವೂತ ಮುಗ್ಗುತ್ತ ಇತ್ತಲ್ಲ । ಮಾ
ಬಿಡದೆಂಜಲನು ತಿಂದುಣ್ಣು ತಲೆಂಬತ್ತೊರುಷ
ಹಿಡಿಯಿತು ಜೀವವ ಕೇಳಿರಿ । ಮಾ ॥೫೩॥

ಅಂದು ಗೋಕರ್ಣಕ್ಕೆ ಚೆಂದದಿ ಪರಸಿಯು
ಸಂದೋಹ ಮುಂತಾಗಿ ತೆರಳೀತು । ಮಾ



ನಂದಿಧ್ವಜಗಳು ಸಿಂಧುಪತಾಕೆಯು
ಮುಂದೆ ಪುರವಂತರು ತೆರಳ್ಯಾರು । ಮಾ ॥೫೪॥

ಛತ್ರಚಾಮರಗಳು ಮತ್ತೆ ಪಲ್ಲಕ್ಕಿಯು
ಸುತ್ತಲ ದೊರೆಗಳು ತೆರಳ್ಯಾರು । ಮಾ
ಎತ್ತ ನೋಡಲು ಸಣ್ಣ ಬಣ್ಣವನುಟ್ಟಿನ್ನ
ಅರ್ತಿಯಿಂದಲಿ ಇನ್ನು ತೆರಳ್ಯಾರು । ಮಾ ॥೫೫॥

ಹೊಡೆವ ಡಮಾಮಿಯು ನುಡಿವ ಚಿನಿಕಾಳಿಯು
ಮಡದೀಯ ಪಾತ್ರ ಮೇಳವು । ಮಾ
ಎಡಬಲದಲ್ಲಿ ಉಗ್ಗಿಸುತ ನಡೆವಂಥ
ಸಡಗರವಿನ್ನೇನು ಹೇಳಲಿ । ಮಾ ॥೫೬॥

ಬುರುಗು ತಮ್ಮಟ ಶಂಖ ಮೆರೆವ ಭಜಂತ್ರಿಯು
ಪರಿಪರಿ ವಾದ್ಯಗಳಿದ್ದಾವು । ಮಾ
ಧರೆ ಬೆಸಲಾದಂತೆ ತೆರಪಿಲ್ಲ ಪರಸಿಯು
ಹರುಷದಿಂದಲಿ ಮತ್ತೆ ತೆರಳ್ಯಾರು । ಮಾ ॥೫೭॥

ಉಘೆ ಚಾಂಗು ಭಲರೆಂದು ಪೊಗಳುತ ಸೊಗಸಿಂದೆ
ಬಗೆ ಬಗೆ ವರ್ಣದ ಕುಲಗಳು । ಮಾ
ಅಗಲದೆ ಹಿರಿಯರು ಕಿರಿಯರು ಹೆಣ್ಗಂಡು
ಸುಗುಣರು ಸಹವಾಗಿ ತೆರಳ್ಯಾರು । ಮಾ ॥೫೮॥

ಉಲುವನೆ ಕೇಳುತ್ತ ಗಲಿಬೀಲಿ ಏನೆಂದು
ಲಲನೆ ಮಾತಂಗಿಯು ಕೇಳ್ಯಾಳು । ಮಾ
ಇಳೆಗೊಡೆಯ ಗೋಕರ್ಣ ಭಾಳೇಶನಿಗೆ ಪರಸಿ
ತಾಳುವದೇ ಹೋಗುವದೆಂದಳು । ಮಾ ॥೫೯॥

ಅನ್ನ ಅರಿವೆಗಳನ್ನು ಮನ್ನೀಸಿ ಅದರೊಳು
ನಿನಗರ್ಧ ಕೊಡುವೇನು ಎಂದಳು । ಮಾ
ಮನದಿ ತಾ ಬೇಡುತ್ತ ಶಿವಶಿವಾ ಎನ್ನುತ್ತ
ಎನ್ನ ನೀ ಕರೆದೊಯ್ಯೆಂದಳು । ಮಾ ॥೬೦॥

ಎಂದ ಮಾತನು ಕೇಳಿ ಮುಂದೆ ಕೋಲನೆ ಪಿಡಿದು
ಬಂದಾಳು ಮಾತಂಗಿ ಕೇಳಿರಿ । ಮಾ
ಒಂದೊಂದು ಪರಿಪರಿ ಹಳ್ಳ ಕೊಳ್ಳವ ದಾಟಿ
ಹೆದರದೆ ಎಡವೂತ ಮುಗ್ಗೂತ । ಮಾ ॥೬೧॥

ಬೀಳೂತ ಏಳೂತ ಬಹಳ ಸಂಕಟಪಟ್ಟು
ಏಳು ಜನ್ಮಕೆ ಇನ್ನು ಸಾಕಿನ್ನು । ಮಾ

ಘೋಳಿಟ್ಟು ಒದರೂತ ಭಾಳಲೋಚನ ಸ್ಥಾನ
ಗೋಕರ್ಣದೊಳೆಯಕ್ಕೆ ಬಿದ್ದಾಳು । ಮಾ ॥೬೨॥

ಸುತ್ತ ಯೋಜನಪರಿ ಕ್ಷೇತ್ರವು ಮತ್ತಲ್ಲಿ
ಸತ್ತವರಿಗೆ ಮುಕ್ತಿ ಆದೀತು । ಮಾ
ಇತ್ತಲಾ ಕುರಡಿಯು ಅತ್ತ ಮಾರ್ಗದಿ ಬಿದ್ದು
ಅತ್ತು ಕಣ್ಣೊಳು ಮಣ್ಣ ಹೊಯ್ಕೊಂಡಾಳು । ಮಾ ॥೬೩॥

ಪುಣ್ಯದ ಸ್ಥಳವಿದು ಅನ್ನ ಅರಿವೆಯ ಕೊಟ್ಟು
ಇನ್ನು ಪುಣ್ಯವ ನೀವು ಪಡೆಯಿರಿ । ಮಾ
ಕಣ್ಣಿಲ್ಲದ ಪಾಪಿ ಹೆಣ್ಣಿನೊಳಗೆ ಖೋಡಿ
ಉನ್ನತ ದುಃಖದಿ ಹಲುಬ್ಯಾಳು । ಮ ॥೬೪॥

ಕಂಡಕಂಡವರೆಲ್ಲ ಕಡು ಹೇಸಿಕೆವಳೆಂದು
ಮಂಡಿ ತಗ್ಗಿಸಿಕೊಂಡು ನಡೆದಾರು । ಮಾ
ಕಂಡುದಿಲ್ಲವು ತುತ್ತು ಅನ್ನ ಗೇಣರಿವೆಯ
ದಿಂಡ ಮಾತಂಗಿಯ ಕೇಳ್ಯಾರು । ಮಾ ॥೬೫॥

ಹಿಂದಿನ ಜನ್ಮದಿ ಒಂದ್ವೇಳೆ ಶಿವಯೆಂದ
ಳಂದಿನ ಫಲಗಳು ಒದಗ್ಯಾವು । ಮಾ
ಮುಂದಿರೆ ಮುಕ್ತಿ ಹೊಂದುವ ಕಾಲವು
ಬಂದೀತು ನೀವಿನ್ನು ಕೇಳಿರಿ । ಮಾ ॥೬೬॥

ಮಾಘಮಾಸವು ಕೃಷ್ಣಪಕ್ಷ ಚತುರ್ದಶಿಯು
ಆಗ್ಯಾವು ದಿನ ಶಿವರಾತ್ರಿಯು । ಮಾ
ಹಾಗೆ ಒರೆಯುತ ಪ್ರಾಣಬಿಡುಕಾಲದೊಳಿನ್ನು
ಆಗೊಬ್ಬ ಪುಣ್ಯಾತ್ಮ ಬಂದಾನು । ಮಾ ॥೬೭॥

ಶಿವಪೂಜೆ ತಾನಾದ ಶಿವಬ್ರಾಹ್ಮಣನೊಬ್ಬ
ತವೆ ಮಿಂದು ಮಡಿಯುಟ್ಟು ಇದ್ದಾನು । ಮಾ
ಶಿವನ ಪೂಜೆಗೆ ಇಂದು ಬಿಲ್ವತ್ರೆ ಒಯ್ವಾಗ
ನೋವಿನ ನುಡಿಗೇಳಿ ಮರಿಗ್ಯಾನು । ಮಾ ॥೬೮॥

ದಾನದ ವಿಷಯದಿ ಏನಾದರು ಕೊಡಬೇಕು
ಏನೂ ಇಲ್ಲ ಈ ವ್ಯಾಳ್ಯೆದಲಿ । ಮಾ
ಮಾನೂನಿ ಕೈಯೊಳು ಮರುಗೂತ ಒಂದೆಸಳ
ತಾನಾಗಿ ಬಿಟ್ಟಿನ್ನು ಹೋದಾನು । ಮಾ ॥೬೯॥

ಅನ್ನವೆ ಉದಕವೆ ಇನ್ನಿದನು ಮೆಲುವುದೆ
ಮುನ್ನದನು ತವಕದಿ ಪಿಡಿದಾಳು । ಮಾ



ಗನ್ನಘಾತಕ ಮತ್ತೆ ಇದನೇನ ಕೊಟ್ಟೆಂದು
ತನ್ನ ಸಿಟ್ಟಿಲಿ ಅದನು ಒಗೆದಾಳು । ಮಾ ॥೭೦॥

ಒಗದ ತಾವಿಲಿ ಮತ್ತೆ ಅಗಜೆಯ ಅರಸನ
ಮಿಗಿಲಾದ ಶೂನ್ಯಲಿಂಗಿತ್ತಲ್ಲಿ । ಮಾ
ಅಗಲದೆ ಮಸ್ತಕದೊಳು ಬಿತ್ತು ಪೂಜೆಯು
ಸೊಗಸಾಯಿತೆಂದಾಗ ಶಿವನೊಲಿದ । ಮಾ ॥೭೧॥

ಅನ್ನಿಲ್ಲದುಪವಾಸ ಮುನ್ನ ನಿದ್ರಿಲ್ಲದೆ
ಚನ್ನಾಗಿ ಜಾಗರವಾಯಿತು । ಮಾ
ಪನ್ನಂಗಧರ ಮೆಚ್ಚಿ ಬರಹೇಳಿ ಶಿವದೂತ
ರುನ್ನತ ಸಂಭ್ರಮದಿ ಬಂದಾರು । ಮಾ ॥೭೨॥

ದೇವದುಂದುಭಿಯಾಗೆ ಪೂವಿನ ಮಳೆಗರೆಯೆ
ಸಾವಧಾನದಿ ರಥವು ಬಂದೀತು । ಮಾ
ದಿವ್ಯ ತನುವನಿತ್ತು ರಥದೊಳು ಕೂಡ್ರಿಸಿ
ದೇವಲೋಕ ಕೊಂಡೊಯಿದಾರು । ಮಾ ॥೭೩॥

ಉಘೆ ಚಾಂಗು ಭಲರೆಂದು ನೆಗೆದಾವು ಪುಷ್ಪವು
ಅಗಜೆಯರಸನ ಪಾದ ಕಾಣಿಸಿತು । ಮಾ
ಮಿಗಿಲಾದ ಪೊಡವಿಯೊಳು ಜನಗಣ ಕೂಡುತ್ತ
ಸೊಗಸಿಂದೆ ಚಪ್ಪಾಳಿಯಿಕ್ಕಿತು । ಮಾ ॥೭೪॥

ಸಾರೂಪ್ಯ ಸಾಮೀಪ್ಯ ಸಾಯುಜ್ಯ ಸಾಲೋಕ್ಯ
ಮೀರಿದ ಪದವಿಯು ತೋರೀತು । ಮಾ
ಆರರಿವರೀಶನ ಮಹಿಮೆಯ ಶಿವಯೆಂದ
ಡೀ ರೀತಿ ಪದವಿಯು ದೊರೆತೀತು । ಮಾ ॥೭೫॥

ಎಷ್ಟು ಪಾಪವ ಮಾಡಿ ಒಟ್ಟಿಗೆ ಶಿವಯೆಂದ
ಡಿಷ್ಟಾರ್ಥ ತೋರೀತು ಕೇಳಿರಿ । ಮಾ
ಬಿಟ್ಟುಬಿಡದೆ ನೀವು ನಿಷ್ಠೆಯಿಂ ಪೂಜಿಸಿ
ಎಷ್ಟಾಗುವದು ಪದವಿ ತಿಳಿಯಿರಿ । ಮಾ ॥೭೬॥

ಶಿವನಾಮದಿಂದಲಿ ಸವೆದೀತು ಪಾಪವು
ಹವಿಗೊಂಡು ಕರ್ಪೂರವಾಯಿತು । ಮಾ
ಭುವನದೊಳಗೆ ಶಿವನಿಂದುಂಟೆ ದೈವವು
ಕಿವಿಗೊಟ್ಟು ಕೇಳಿನ್ನು ಸುಖಿಸಿರಿ । ಮಾ ॥೭೭॥

ಧರೆಗೆ ದಕ್ಷಿಣಕಾಶಿಯೆನಿಸಿ ರಾಜಿಸುವದು
ವರ ಮಹಾ ಪಂಪಾಕ್ಷೇತ್ರವು । ಮಾ

ಇರುವದು ಪಶ್ಚಿಮ ದೆಸೆಯೊಳು ಮುನಿಪುರ
ವರ ಪ್ರಭುವಿನ ಭಜಿಸೀರಿ । ಮಾ ॥೭೮॥

ಓತೋತು ನಿಮ್ಮಯ ಮನದೊಳಿದ್ದಭೀಷ್ಟೆಯು
ಇತ್ತಲಾಕ್ಷಣ ಇನ್ನು ಆಗುವದು । ಮಾ
ದಾತ ಶಿವನನು ಓತು ಭಜಿಸಲು ತಮಗೆ
ನಿತ್ಯಸುಖ ಪ್ರತಿನಿತ್ಯ ದೊರೆವುದು । ಮಾ ॥೭೯॥

ಜಯ ಜಯ ಹರಯೆನ್ನಿ ಜಯ ಜಯ ಶಿವಯೆನ್ನಿ
ಜಯ ಜಯ ಬಸವೇಶ ಸಲಹೆನ್ನಿ । ಮಾ
ಜಯ ಜಯ ಮುನಿಪುರ ವರಪ್ರಭುವಿನ ಪಾದ
ಸುವಿಲಾಸದಿಂದ ಕೊಂಡಾಡಿರಿ । ಮಾ ॥೮೦॥

* * *



# ಹುಬ್ಬಳ್ಳಿ ಮಂಗ

## ಹುಬ್ಬಳ್ಳಿ ಮಂಗ

ದುಂದುಮೆ ಕೇಳ್ರಿ ದುಂದುಮೆ ॥ಪ॥

ಸಬ್ಬ ದೇಶದಿ ಕಾಣೆ ಇಂಥ ಮರ್ಕಟ
ಅಬ್ಬರಿಸುತ್ತ ಹಾರ್‍ಯಾಡುವವು । ತಮ್ಮ
ಹುಬ್ಬು ಹಾರಿಸಿ ಹಲ್ಲು ಕಿಸಿಯುವವು । ಮತ್ತೆ
ತಬ್ಬುಬ್ಬಿ ಅಲ್ಲಲ್ಲೆ ಕೂಡುವವು । ಮೈಯ
ಉಬ್ಬುತ ಕೊಬ್ಬುತ ಹಬ್ಬುತೂರೊಳಗೆಲ್ಲ
ಹುಬ್ಬಳ್ಳಿಯೊಳು ಮಂಗ ಹುಡದಿಯಾಡಿದವು ॥೧॥

ಅಂಗನೆಯರು ತಮ್ಮ ಅಂಗಳದೊಳು ಮನಿ
ಮುಂಗಡಿಯೊಳಗೆಲ್ಲ ಕೂಡಿದವು । ಮತ್ತೆ
ಹಿಂಗದ ಒಳಪೊಕ್ಕು ನೋಡಿದವು । ದೊಡ್ಡ
ಸಂಗಟಿ ಸ್ವಾರಿ ಈಡಾಡಿದವು । ಇಟ್ಟ
ಗಂಗಳ ತಂಬಿಗಿ ಆಂಬ್ರ ಚೆಲ್ಲಿದವವ್ವ
ಮಂಗಳವಾರ ಪ್ಯಾಟಿ ಮಾನಗೇಡಿ ಮಂಗ ॥೨॥

ದೊಡ್ಡ ಮುಂಡಾಸ ಗಿಡ್ಡಂಗಿ ಜನಿವಾರ
ದೊಡ್ಡ ಗೊಂಗಡಿಯನ್ನು ಹಾಸಿಹರು । ಸಣ್ಣ
ಗಡ್ಡ ಹತ್ತೀ ಮೀಸಿ ಚಿನಿವಾಲರು । ಮುಂದೆ
ಅಡ್ಡ ಹಾಯ್ದರೆ ನೋಡಿ ಕರೆಯವರು । ಹೊನ್ನು
ದುಡ್ಡು ರೂಪಾಯಿ ಚೀಲ ಅಡ್ಡಡ್ಡ ಎಳೆದಾಡಿ
ಎಡ್ಡು ಹಚ್ಚಿತಲ್ಲೊ ಅಡಮುಟ್ಟು ಮಂಗ ॥೩॥

ಹಪ್ಪಳ ಸೆಂಡಿಗಿ ಶಾಂವಿಗಿ ಗುಳಗಿಯ
ಚಪ್ಪರ ಮುಂದೊಣ ಹಾಕಿಹಳು । ಒಂದು
ತುಪ್ಪದ ಚಟಗಿಯ ಮುಂದಿಟ್ಟಿಹಳು । ಕೈಯ
ಚಪ್ಪಳಿಕ್ಕುತ ಮಾತನಾಡುವಳು । ನೋಡಿ
ತಪ್ಪದೆ ಹೊಕ್ಕಲ್ಲಿ ತಿಂದು ತೆಕ್ಕಿಯ ಬಿದ್ದು
ಕುಪ್ಪಸ ಹರಿದಿತು ಕುಲಗೇಡಿ ಮಂಗ ॥೪॥



ಪಂಚಮಿ ಬಂತೆಂದು ಹಂಚಿಟ್ಟು ಅರಳನು
ಹಂಚಿಕೆಯಿಂದ್ಹುರಿದಿಟ್ಟಿದ್ದೆನೆ । ಆಗ
ಮುಂಚೆಳ್ಳುಚಿಗಳಿ ತಂಬಿಟ್ಟು ಕಟ್ಟಿದ್ದೆನೆ । ಹೊಸ
ಕುಂಚಿಗಿ ಕುಲಾಯ ಹೊಲಿಸಿಟ್ಟಿದ್ದೆನೆ । ಮನೆಯ
ಹಂಚು ಒಡೆದೊಳಗ್ಹೊಕ್ಕೆಲ್ಲ ತಿಂದಿತು
ಕಂಚಗಲೋಣಿ ಕಸವಂಟ ಮಂಗ ॥೫॥

ಅಚ್ಚ ಬಾಳಿಯ ಹಣ್ಣು ಬಚ್ಚಿಟ್ಟು ಗಲ್ಲಕೆ
ಹಚ್ಚಿತು ಕೈಯನು ಮುಂಬಿನಲಿ । ಅದು
ತಬ್ಬಿಕೊಂಡೋಡಿತು ಕುಂಬಿಯಲಿ । ಕೂತು
ಬಿಚ್ಚಿತು ತ್ವಾಟಿಯ ಕೈಯಿಂದಲಿ । ಬಾಯ್ಗೆ
ಹಚ್ಚಿತೆನ್ನಯ ಜೀವ ಕಿಚ್ಚಿದ್ದು ಹೊಯ್ಕೊಂಡೆ
ಹೆಚ್ಚಿಂದು ಕಾಣವ್ವ ಹಿರಿಪ್ಯಾಟಿ ಮಂಗ ॥೬॥

ನಲ್ಲೇರ ಕೈಯಾನ ರಾಟಿಯ ಒಳಗಿನ
ಚಿಲ್ಲನು ಕಿತ್ತು ಚಿಮ್ಯಾಡಿತಲ್ಲ । ಬುಟ್ಟಿ
ಯಲ್ಲಿದ್ದ ಕುಕ್ಕಡಿ ಹಿರದೀತಲ್ಲ ಹಾಸಿ । ಗ್ವಾರಿ
ಹಲ್ಲಿಂದ ಹರಿದೋಡಿತಲ್ಲ । ಪ್ಯಾಟಿ
ಯಲ್ಲಿಟ್ಟ ಹಣ್ಣು ಕಾಯಿ ನೀರಲ ಪೇರಲ
ಪಲ್ಲೇವ ತಿಂದಿತು ಪಡಸೆಂಟ ಮಂಗ ॥೭॥

ಎಲ್ಲಿ ಹೋದರು ತಾನು ಅಲ್ಲಿಗೆ ಬರುವದು
ಝಲ್ಲೆಂದಿತಲ್ಲ ಎನ್ನೆದಿಯೊಳಗೆ । ಪಲ್ಲೆ
ಚಲ್ಯಾಡಿತಲ್ಲಿ ಬಾಜಾರದೊಳಗೆ । ನಾನು
ತಲ್ಲಣಗೊಂಡೆನು ಮನದೊಳಗೆ । ತಾನು
ಹಲ್ಲು ಕಿಸಿದು ಕಲ್ಲಬಿಲ್ಲಿಯ ಮಾಡಿತು
ಗುಲ್ಲ ಮಾಡೋಡಿತು ಗುಣಗೇಡಿ ಮಂಗ ॥೮॥

ಬುಟ್ಟೇದ ಕುಪ್ಪಸ ಬುಗುಡಿಯಂಚಿನ ಸೀರಿ
ಉಟ್ಟು ತೊಟಗೊಂಡಿರುತ್ತಿದ್ದೆನೆ । ಅಕ್ಕಿ
ಕುಟ್ಟಿಕೊಂತ ನಾ ಕುಂತಿದ್ದೆನೆ । ಒಂದು
ಕಟ್ಟಿಗೆ ಕೋಲನ್ನು ಇಟ್ಟಿದ್ದೆನೆ । ಬಂದು
ಬಟ್ಟ ಕುಚವ ಮುಟ್ಟಿ ಕಟ್ವಾನೆ ಕಡದೀತು
ಕಟ್ವಾಣಿ ಹರದೀತು ಕವಡಿಯ ಮಂಗ ॥೯॥

ಬುಕ್ಕಿಟ್ಟಿನ ಚೀಲ ಬುಡಮೇಲು ಮಾಡಿತು
ಚಿಕ್ಕ ತಕ್ಕಂಗಡಿ ಹೊಕ್ಕಿತಲ್ಲ । ಕಲ್ಲು
ಸಕ್ಕರೆ ಚೀಲವ ನೆಕ್ಕಿತಲ್ಲ । ಮತ್ತೆ
ತಕ್ಕಡಿ ದಂಡಿಗಿ ಮುರದೀತಲ್ಲ । ಅವ
ಲಕ್ಕಿ ರೇವಡಿ ಬೆಂಡು ಬೆತ್ತಸ ಪುಟಾಣಿ
ಮಕ್ಕಳ ಕರಗೊಂಡು ಮುಕ್ಕಿತು ಮಂಗ ॥೧೦॥

ಪೆಟ್ಟಿಗಿಯೊಳಗಿನ ಪಟ್ಟೆದಂಚಿನ ಸೀರಿ
ಇಟ್ಟು ಬಚ್ಚಲದಾಗ ಕುಂತಿದ್ದೆನೆ । ಎನ್ನ
ಕಟ್ಟಿದ ಕೂದಲ ಬಿಚ್ಚಿದ್ದೆನೆ । ಮತ್ತೆ
ಬಟ್ಟಬತ್ತಲೆ ನಾನು ಕೂತಿದ್ದೆನೆ । ಆಗ
ತಟ್ಟಿ ಮುರಿದು ಬಂದು ಇಟ್ಟ ಸೀರೆಯ ಕೊಂಡು
ಕಟ್ಟು ಕುಲಾಯವ ಕಸಗೊಂತು ಮಂಗ ॥೧೧॥

ದಿಗ್ಗನೆ ಹೊಕ್ಕಿತು ಮಗ್ಗದವರ ಮನಿ
ಹುಗ್ಗಿಯ ಗಡಿಗೆಗೆ ಹಾರಿತಲ್ಲ । ಅದು
ಬಗ್ಗಿಸಿ ಬಾರಲ ಹಾಕಿತಲ್ಲ । ಬಲು
ಸುಗ್ಗಿಯಾಯಿತೆಂದು ಹಿಗ್ಗಿತಲ್ಲ । ಕುಂತು
ಬಗ್ಗಿದವರ ಮೇಲೆ ಹಗ್ಗ ಹರಿದಿಳಿದು
ನುಗ್ಗ ಮಾಡಿತವ್ವ ಅಗ್ಗದ ಮಂಗ ॥೧೨॥

ಹಾರಿತು ಜವಳಿಯ ಅಂಗಡಿ ಸಾಲಿಗೆ
ಬಾರಲ ಹಾಕಿತು ದೌತಿಯನು । ಕಿತ್ತು
ಈಡಾಡಿತಲ್ಲ ಜವಳಿಯನು । ಮಣಿ
ಗಾರಂಗಡಿಗಿಟ್ಟು ದಾಳಿಯನು । ಪಟ್ಟೆ
ಮಾರು ನಾರೇರ ಮಾರಿಯ ಮೇಲ್ಹೊಡೆದು
ನೀರೆಯ ಕಳೆದಿತು ಸಿರಿಗೇಡಿ ಮಂಗ ॥೧೩॥

ಮತ್ತೆನ್ನ ಬಸುರೆಂದು ಬುದ್ಧಿ ಬೋನವ ಮಾಡಿ
ಒತ್ತಿ ಬಳ್ಳೊಳ್ಳಿಯ ಬೆರೆಸಿದ್ದೆನೆ । ಆಗ
ಚಿತ್ತೆಲ್ಲ ನಾನಲ್ಲಿ ಇರಿಸಿದ್ದೇನೆ । ನನ್ನ
ಸುತ್ತಲೆ ಯಾರಿಲ್ಲ ಕುಳಿತಿದ್ದೆನೆ । ಓಡಿ
ಹೊತ್ತು ನೋಡಿ ಬಂದು ಮುತ್ತಿಕೊಂಡಿತೊಂದು
ತುತ್ತಾರ ಬಿಡಲಿಲ್ಲ ತುಡಗಿನ ಮಂಗ ॥೧೪॥



ಹುಡಗೇರುಡಲೊಳು ಕಡಲಿ ಕೊಬ್ಬರಿ ಕಬ್ಬು
ಹಿಡಕೊಂಡು ಹೋಗಲು ತುಡಕಿತವ್ವ । ಗಲ್ಲ
ಹಿಡದೆನ್ನ ಮಾರಿ ನೋಡುತವ್ವ । ಉಟ್ರ
ಸಡಿಲಿಸಿ ನಿರಿಗೆಗಳ ಕಳಚಿತವ್ವ । ದೊಡ್ಡ
ಕಡವೆಯಂತೆ ಮೂಳ ಕಾಲಾಗ ಬಂದಿತು
ಉಡಿಚೀಲ ತಕ್ಕೊಂಡು ಓಡಿತು ಮಂಗ ॥೧೫॥

ಲೋಕದೊಳೆಲ್ಲೆಲ್ಲಿ ನಾ ಕಾಣೆನಿಂಥಾದು
ಸಾಕು ಸಾಕಾಯಿತು ಈ ಜನ್ಮಕ । ಇದರ
ಕಟಕಟಿ ಬಹಳವ್ವ ಅದರುಷ್ಟಕ । ಬೆಂಕಿ
ಹಚ್ಚಲೆವ್ವ ಮಾಡುವ ಬಾಳ್ವೇಕ । ಮುದದಿ
ಶ್ರೀ ಕಂದಗೋಳ ಭೂಕಾಂತ ಗುರುವಿಗೆ ನಾನು
ಕಾಯ ಒಡಸೂವೆ ಸಾಯಲಿ ಮಂಗ ॥೧೬॥

* * *

# ಸಂಕೀರ್ಣ ಪದಗಳು



## ಹೋಳಿ ಹಾಡಿನ ಪ್ರಕಾರಗಳು

**ದೇವಸ್ತುತಿ :**

೧) ಭಕ್ತಿಯ ಮಾಡಬೇಕ ಮುಕ್ತಿಯ ಪಡಿಬೇಕ
ಶಿವಾಯನಮಃ ಶಬ್ದ ಬಿಡಬ್ಯಾಡೋ ಮಾನವ
ನಿನ್ನನ್ನು ಬಿಟ್ಟು ದೂರಿರಲೋ ।

೨) ಬಸವಣ್ಣ ನಿನ್ನಂತ ಭಕ್ತಿಮಾನವರಿಲ್ಲ
ನೀಲಮ್ಮನಂತ ಶರಣೆಲ್ಲೋ ಹೇಮರೆಡ್ಡಿ
ಮಲ್ಲಮ್ಮನಂತ ಸೊಸಿ ಇಲ್ಲೊ ।

೩) ದುಂದೂರ ಬಸವಣ್ಣ ಬಾಳಸಮಾಧಾನನೆಂದು
ಕುತ್ನಿಯ ಟೊಪ್ಪಿಗೆ ತಂದಿನೋ ಬಸವಣ್ಣ
ಟೊಪ್ಪಿಗೆಗೆ ಮುತ್ತ ಬಿಗೆಸೆನೋ ।

೪) ಆಟವೆಲ್ಲಿ ಮಠವೆಲ್ಲಿ ಮಠದ ಬಾಗಿಲವೆಲ್ಲಿ
ಕಟದ ರುದ್ರಾಕ್ಷಿಕದವೆಲ್ಲಿ । ಅಂದಿನ
ಸ್ವಾಮಿ ಮಠವ್ಯೆತೋ ಬಾಳಿವನದಾಗ

೫) ಸೀತಮ್ಮನ ಒಯ್ಯುವಾಗ ಶ್ರೀರಾಮಸಣ್ಣ
ವನು ಆಗ ಹನಮಂತ ಹಸುಮಗನು
ಸೀತಮ್ಮನ ಸೆರೆವಾಸ ಬಿಡಿಸ್ಯಾನ

೬) ಉದ್ದನ ಹನಮಂತ ಬುದ್ದಿಲೇ ಸಮನಾರುಂಟೆ
ಎದ್ದು ಹಾರ್‍ಯಾನ ಗಗನಕ್ಕೆ ಸೀತಮ್ಮನ ಗೆಮ್ಮ
ತರಿದಾನ ಗಳಿಗ್ಯಾಗ

೭) ಹುಡುಕುತ ಹುಡುಕುತ
ಬಂದೆನವ್ವ ಹೋಳಿಕಾಮನಲ್ಲಿ
ಸೂರ್‍ಯ ಚಂದ್ರಮಗಿಡಿದಿತ್ತು ಗ್ರಹಣ
ಭೂಮಿ ಆಕಾಶ ಒಂದೇ ಕಾಣ್ತಿತ್ತು

೮) ಚಂದ್ರಮಗ ಹೇಳತಾನ ಉತ್ತರ
ಸೂರ್‍ಯ ಪ್ರಕಾಶ ಆಗೋದ್ರೊಳಗ

ಗ್ರಾಣ ಹಿಡಿದಿದ್ದು ಆಗಿ ಹೋಯ್ತು
ಹೋಳಿ ಹುಣ್ಣಿವ್ಯಾಗ ಗ್ರಾಣ
ಹಿಡಿದಿತ್ತು ಸೂರ್ಯ ಮುನಗೋದುಳಗ
ಹೋಗಿತ್ತು ಗ್ರಾಣ

ಹೋಳಿ ಹಾಡುಗಳನ್ನು ಹಾಡುವುದಕ್ಕಿಂತ ಪೂರ್ವದಲ್ಲಿ ಮೊದಲು ತಮ್ಮ ಆರಾಧ್ಯದೇವರುಗಳನ್ನು ಆ ದೇವರ ಗುಣಗಳ ಬಗ್ಗೆ ಹಾಡಿ ನಂತರ ವಿವಿಧ ಹಾಡುಗಳನ್ನು ಹಾಡುತ್ತ ಹೋಗುವರು. ಇಲ್ಲಿ ಭಕ್ತಿಯ ಹಾಡುಗಳು ಅವರ ಭಕ್ತಿಯ ಪರಾಕಾಷ್ಠೆಯನ್ನು ಚಿತ್ರಿಸುತ್ತವೆ.

## ನಿಜಗುಣಿ ಶಿವಯೋಗಿಗಳ ಹಾಡುಗಳು

**ಜ್ಞಾನಹೋಳಿ ಪದ : (ರಾಗ–ತಾಳ)**

೧) ದುಂದುಮೆನೆಂದೆನ್ನಿ ಚಂದ್ರಶೇಖರಗೆ । ದುಂದುಮೆಬಿಂದು ನಿಗ್ರಹನಹಬ್ಬ ॥
ಮನರುತನು ಎಂಬಮಂದರಮೇರು ಕೈಲಾಸ । ಸೇರಿರುವಮಹಗುರ ವೆಪಾಲಿನೆನ್ನ ॥
ಘೋರಲಂಪಟದೊಳಗೆಮನಮಗ್ನವಾದಿಂದೆ । ಸಾರಮುಕ್ತಿಯಪದವ ಪಡೆವುದೆಂತಯ್ಯ ॥೧॥

ಸಂಸಾರದೊಳಗೆ ಸದ್ಗತಿಯುಂಟು ಕೇಳ್ಮಗನೆ । ಬಸವಾದಿಪ್ರಮಥರಿಗೇನಿದ್ದಿಲ್ಲವೆ ॥
ಸಂಸಾರಪಿಡಿದು ಸನ್ಮಾರ್ಗದಲಿನಡೆವರಿಗೆ । ಕುಶಲ ಶಂಕರತಾನೆಮೋಕ್ಷವನು ಕೊಡುವ ॥೨॥

ಬಿಡದೆ ತಮ್ಮ ಸಂಸಾರಹಡಗಸಾಗಿಸಿಕೊಳ್ಳುತ್ತ । ವಡೆಯ ಶ್ರೀ ಗುರುಸೇವೆ ಮಾಡುವರಿಗೆ ॥
ಕಡೆಗೆ ಸಂಸಾರದೊಳುನಡೆವ ಪುಣ್ಯಾತ್ಮರಿಗೆ । ಮಡದಿಮಕ್ಕಳಿಗೆ ನಿಜಮೋಕ್ಷ ಕೊಡನೇನು ॥೩॥

ಸಿರಿಯ ಸಂಪತ್ತುಳ್ಳಮರವೆ ಸಂಸಾರೆಂಬ । ಹಿರಿಯ ಹೆಬ್ಬುಲಿಯನ್ನು ಕೊಲ್ಲುತಿಹುದು ॥
ಅರುಹು ಹಿಡಿವುದು ಕಷ್ಟ ಅಜ್ಞಾನ ಮುಸುಕುವುದು । ಕರುಣನಿಧಿಗುರುವೇ ನೀ ಕಡೆ
ಹಾಯ್ಸು ಕಂಡ್ಯಾ ॥೪॥

ಹೊತ್ತುಗಳೆಲಿಬೇಡ ಬದುಕುತೀರಿದ ಮೇಲೆ । ವ್ಯರ್ಥಹರಟೆಯ ಮಾತುದುಸ್ಸಂಗದಿಂದ ॥
ಸತ್ಯಶರಣರಂಗ ಸದ್ಗೋಷ್ಠಿ ಪೂಜೆಯೊಳು । ಹೊತ್ತುಗಳೆದರೆ ಮುಂದೆಬುತ್ತಿ ಕೇಳ್ಮಗನೆ ॥೫॥

ಗುರುವೆಹಿಂದಣಜನ್ಮದರುವಿಡಿದುನಡೆಯಲ್ಕೆ । ಇರದೆ ಮುಂದಧಿಕಾರ ಐಶ್ವರ್ಯ ಬರಲು ॥
ಶಿರವುಬಾಗದಯಿಂದ ಹುಲಿಯಂತೆಯಾಚರಿಸಿ । ಪರಶಿವನೇತಾಪಾದಮರೆವುದೀಮನವು ॥೬॥

ಮನವನೊಕ್ಕಿಸಬೇಡೆಯಂದಿರಲು ಕೆಡಿಸುವುದು । ಧನಮಾರಿಕೋಣನ ಸೊಕ್ಕಸ್ಥಿರವೇನು ॥
ಅನ್ಯಾಯ ಸದ್ದಾಳದಿಂದನಡೆದರೆ ಮುಂದೆ । ಹೀನ ಜವತುಂಡುತುಂಡುಮಾಡಿಕಡಿಸುವನು ॥೭॥

ಅದಕೆ ಹೆದರುವೆನಯ್ಯ ಗುರುರಾಯಸಲಹೆನ್ನ । ಸುದತಿ ಸುತರುಗಳ ಮಹಾಸೌಖ್ಯದೊಳಗೆ ॥
ಮದ ಹೆಚ್ಚಿ ಮೈಮರೆದು ಕೈಮೀರಿ ಹೋಗುವೆನು । ಸದಮಲಾತ್ಮಕ ಗುರುವೇಕೊಡಬೇಡ ॥೮॥

ಹರನು ಬಾಣಾಸುರಗೆ ಸಹಸ್ರಾಭುಜಮಂಕೊಡಲು । ಪರಶಿವನ ಯುದ್ಧಕ್ಕೆ ಬಾರೆಂದು ಕರೆದ ॥
ಹರಿಬ್ರಹ್ಮಸುರರು ಫಲಪದವಹರಿನಿಂಪಡೆದು । ಮರಳಿಹರನಂಕೊಣಕಿ ಕೆಟ್ಟರೆಲಿಮನಸೆ ॥೯॥



ಅರಸುಗಂಧರ ಸನಸಭೆಗೆ ತಾಂಡವಗಣನು । ಭರದಿಂದೆಮನಸು ನೋಡಲ್ಕೆಬರಲು ॥
ಗರುವಂದಿಂತುಳಿತು ದಾಂಡಿಗಮಾತನಾಡಲ್ಕೆ । ಶಿರಬಾಯ್ಲಿ ಪುಳಬಿದ್ದು ಕೆಟ್ಟನೆಲಿ ಗುರುವೆ ॥೧೦॥

ನಾನು ಪೇಳುವ ಮಾತು ನೀನೆ ಪೇಳಿದ ಮೇಲೆ । ಜ್ಞಾನಪುರುಷಗೆ ನಾನು ಪೇಳ್ವುದೇನು ॥
ಮಾನವಜನ್ಮದೊಳಗಿರಿತಪ್ಪ ಅರುವಿರಲು । ನೀನೆಮೋಕ್ಷವ ಪಡೆವ ಚಿಂತೇಕೊ ಮಗನೆ ॥೧೧॥

ನುಡಿದ ಮಾತ್ರಡಿಯೆನಗೆ ಜ್ಞಾನಿಯನಬಹುದೇನೀ । ನಡೆದು ತೋರಿದರೆ ನಾ ಜ್ಞಾನಿಯಾದೆ ॥
ಒಡೆಯಯೇಮಾತೆನಗೆ ಬಾಣ ಹೊಡೆದಂತಾಯ್ತು । ಖಡ್ಗಹಿಡಿದಾಕ್ಷಣ–ಕೇ
ಶೂರನೆನಬಹುದೆ ॥೧೨॥

ಗುರುವು ಶಿಷ್ಯನ ಗುಣಕೆ ಮೆಚ್ಚಿ ಬಾರೆಂದವಗೆ । ಗಿರದಡಹಿಜ್ಞಾನೋಪದೇಶ ಮಾಡಿ ॥
ಪರಮಶಿವ ಮಹಾಂತಲೆಂಗಾಮಗೆ ಮೋಕ್ಷವನು । ಕರುಣದಿಂದ ಕೊಟ್ಟು ಮೋದದಲಿ
ಪೊರೆದ ॥೧೩॥

೨) ಚಿನ್ಮಯರೂಪನೆನ್ನಿರಂಣ । ಚಿನ್ಮಯ ರೂಪನೆನ್ನಿಕೊತ್ರಿನಯ ಶಿಶುಮಹಂತೇನಗೆ ॥ಪ॥

ರಾಗದ್ವೇಷರಹಿತಶಿವ । ಯೋಗಾನಂದಭರಿತ ನಿತ್ಯ । ಭೋಗಮೋಕ್ಷಪ್ರದಮಹ ಗುರುವೆ
ಪಾಲಿಸೆನ್ನನೂ ॥೧॥

ನಾಮರೂಪಕ್ರಿಯಾತೀತ । ಸ್ವಾಮಿನಿಮ್ಮಪಾದಸೇವೆ । ನೇಮವಾಗಿ ಮಾಡುವಂತೆನೆನಪಾಲಿಸು ॥
ಕಾಮಿತಾರ್ಥ ಪ್ರದನಿಮಿತ್ಯ । ಸೋಮಶೇಖರನಾಜ್ಞೆಪಿಡಿದು । ಭೂಮಿಮೇಲವತಾರ
ಮಾಡಿದಾರ್ಯ ಪಾಲಿಸೋ ॥೨॥

ಕುಲವುಬಲವು ಸೋಲುಗೆಲುವು । ನಲಿಯಬೇಸಿನರಮ್ಯಗಕ್ಕೆ । ನೆಲೆಯತಿಳಿಸಿದಂತ ಗೋಪ್ಯ
ಮೂರ್ತಿ ಪಾಲಿಸೋ ॥
ಇಳಿಯ ಸಹಜ ಭಕ್ತಜನಕೆ । ಸುಲಭವಾಗಿ ಬಂದು ಜ್ಞಾನ । ಕಳೆಯ ಜನಿಸಿದಂತ ಮೋಕ್ಷ
ಗುರುವೆ ಪಾಲಿಸೋ ॥೩॥

ಹಾವು ಚೇಳು ಬೇನೆಯಿಂದ । ಕೀವು ರಕ್ತ ಸುರಿವತನವು । ಸಾವುದೀಗೊಪಿಗೊ
ಗುರುವೆನೆಚ್ಚಿರೆಲ್ಲವು ॥
ದಿವಸಪ್ರಾಯಮುಪ್ಪಿನಿಂದ । ನವೆದು ಸವೆದು ಹೋಗುತಿಹುದು । ಯಾವಧೈರ್ಯವಿಲ್ಲೊ
ಗುರುವೆ ಪಾಲಿಸೆನ್ನನು ॥೪॥

ಅರಸಿಗರಸಿನುದ್ದ ದುಃಖ । ಕೊರಸಾಳಿಗಾಳುದ್ದ ದುಃಖ । ಅರಸೆಯೊಳು ಅಳೆಯರ
ಪುಣ್ಯಾಪಾಪದಿ
ಅರುವಿನಿಂದ ಅರಸುಗುದಿಸಿ । ಮರವೆಯಿಂದ ಆಳಾಗುದಿಸಿ । ಅರಸು ಅಳುರ್ಮ
ಮಾಡಮಗೊಂಡವ ಬೀಳ್ವದು ॥೫॥

ಸತಿಯು ಸೋತು ನೆಲಕೆ ಬೀಳೆ । ಸತಿಗುದಾಸೀನಾಗುತಿಹುದು । ಪತಿಯುಸೋತು ನೆಲಕೆ
ಬೀಳಿಪತಿಗುದಾಸೀನ ॥
ಹಿತವು ಇಲ್ಲವೊಂದಕ್ಕೊಂದು । ಕ್ಷಿತಿಯಪಪಕೆಳಸದಂತ । ಮತಿಯ ಪಾಲಿಸಯ್ಯ
ಮಹಂತಲಿಂಗ ಕರುಣದಿ ॥೬॥

ಜ್ಞಾನಹೋಳಿ ಪದಗಳೆಂದು ಕೈವಲ್ಯ ದರ್ಪಣಕಾರರು ಹಾಡುವುದನ್ನು ನಾವು ಕಾಣುತ್ತೇವೆ. ಅಲ್ಲದೆ ಇಲ್ಲಿ ನಿಜಗುಣಿ ಶಿವಯೋಗಿಗಳು ಆಧ್ಯಾತ್ಮದ ಹಾಡುಗಳನ್ನು ಹಾಡಿರುವುದನ್ನು ನಾವು ಕಾಣುತ್ತೇವೆ. ಇವು ಇಲ್ಲಿ ಕಾಮವನ್ನು ಅಳಿಸಿ ನೈಜ ಜೀವನವನ್ನು ಚಿತ್ರಿಸುವ ಅರ್ಥವನ್ನು ನೀಡಿವೆ.

**'ಸಂಗ್ಯಾ ಬಾಳ್ಯಾ' ಬಯಲಾಟದಿಂದ ಆಯ್ದ ಹಾಡುಗಳು :**

**ಕೂಡಿದ ಜನಕ್ಕೆ ವಿನಂತಿ ಪದ :**

ಕೂಡ್ಯೈತಿ ಜನಾ । ಕಲಕಲ ಮಾಡಬ್ಯಾಡ್ರಿ ಗುಲ್ಲಾ । ಮಾಡಬ್ಯಾಡ್ರಿ ಗುಲ್ಲಾ ॥
ನಾವು ನಾಚೀ । ನಾವು ನಾಚಿ ಸುಮ್ಮನ ನಿಂತೇವಲ್ಲೇನ ॥
ಗಂಡು ಹೆಣ್ಣು ಜನಾ । ಕೂಡ್ಯೈತಿ ಸಭಾ ಎಳ್ಳಿ ಭರತಿ । ಸಭಾ ಎಳ್ಳೆ ಭರತಿ ॥
ನಮ್ಮ ಮ್ಯಾಲೆ । ನಮ್ಮ ಮ್ಯಾಲೆ ಇರಬೇಕೊ ನಿಮ್ಮ ಪ್ರೀತಿಯನಾ ॥ ಕೂಡ್ಯೈತಿ ॥

ನಮ್ಮ ತಂದಿ ಶಂಕರ ಮೂರುತಿ । ಲೋಕಕ್ಕೆ ಅದಿಪತಿ । ಲೋಕಕ್ಕೆ ಅಧಿಪತಿ ।
ಮುತ್ತಿನ ಮುತ್ತಿನ ತುರಾಯಿ ಒಳ್ಳೇ ಭರತಿಯನಾ ॥ ಕೂಡ್ಯೈತಿ ॥

**ಪ್ಯಾಟಿ ರಸ್ತೆದಾಗ ಬಾಳ್ಯಾ ಮತ್ತು ಗಂಗವ್ವನ ಭೇಟಿ ಸಂವಾದದ ಪದ :**

**ಬ್ಯಾಳ :** ಯ್ಯಾಕ ? ತಂಗಿ ಎಲ್ಲಿಗ್ಹೊಂವ ಅವಸರಾ । ಆಗಿದೊಳ್ಳೆ ಶೃಂಗಾರಾ ।
ಬಡವರು ನಾವು ನಿಮಗೆಲ್ಲಿ ದರಕಾಲ ॥ ಪಲ್ಲವಿ ॥

ಮಾರಿ ಎತ್ತಿ ನೋಡವಲ್ಲಿ ಒಂದ ಚೂರಾ । ಯಪ್ಪ ? ನಿನ್ನ ಬಡಿವಾರಾ ।
ಲಗೂ ಮಾಡಿ ಹೇಳಿಕೂಡ ನಿನ್ನ ಹೆಸರಾ ।
ದ್ವಾಡ ಮಾಡಿ ಹಿಡದ ಹೊಂಟಿ ನೀ ಬಾಜಾರಾ । ವಸ್ತು ಪಡವಿ ಅಲಂಕಾರಾ ।
ಶೀಲವಂತಿ ಹಣೆ ಮ್ಯಾಲೆ ಚಂದಿರಾ । ಗಂಡ ಮೆಟ್ಟ ಗದುಗಿನ ಶಾಪುರಾ ।
ಬಸವಣ್ಣ ದೇವರಾ । ಆತನ ಪಾದಕ ಮಾಡುವೆ ನಮಸ್ಕಾರಾ ॥

**ಗಂಗವ್ವ :** ಬಿಡೊ ದಾರಿ ಬಿಡೊ ದಾರಿ । ಹುಡುಗಾಟ ತರವಲ್ಲಾ ।
ನಿನ್ನ ಗುರುತಾ ಖುನಾ ನಮಗಿಲ್ಲಾ । ನಮಗೆಲ್ಲಾ ॥ ಬಿಡೋದಾರಿ ॥

ಕಾಡಬ್ಯಾಡಾ । ಕಾಡಬ್ಯಾಡಾ ಬೀಳುವೆ ನಿನ್ನ ಕಾಲಾ । ಹೊತ್ತು ಏರಿ
ಬಂದೈತೊ ನೆತ್ತಿಮ್ಯಾಲಾ । ನೆತ್ತಿಮ್ಯಾಲಾ । ಬಿಡೋ ದಾರಿ ॥

ರೂಢಿಗೊಡೆಯಾ । ರೂಢಿಗೊಡೆಯಾ ಶಾಪೂರ ಬಾಲಾ । ಆಗತ ಕಂಡು
ಹೇಳ್ಯಾರೋ ಹೊಸ ಬ್ಯಾಲಾ । ಹೊಸ ಖ್ಯಾಲಾ । ಬಿಡೋ ದಾರಿ ॥೧॥

ಗಂಡಮೆಟ್ಟ ಶಾಪೂರ । ಪುಂಡ ನನ್ನ ಗಂಡ ಭಾದ್ದೂರಾ ।
ನನಗ ಕೊಟ್ಟಿಲೆ ಹೊಂಗಲ ಶಾಲೇನಾ । ನನ್ನ ತವರ ಮನಿಯ ಬೈಲವಾಡನಾ ।
ದೇಶದೊಳು ಶಾಪೂರ ಮೂರುತೇನಾ । ಅಲ್ಲಿ ನೆಲೆಸ್ಯಾನೊ ಬಸವಣ್ಣ ದೇವರೇನಾ ।
ಆತನ ಪಾದಕ್ಕ ಮಾಡುವೆ ನಮಸ್ಕಾರೆನಾ । ಗಂಡ ಮೆಟ್ಟ.......॥
(ರಸ್ತಾ ಪಡೆದು ಸಂಗಣ್ಣ ಬಾಳಣ್ಣ ಬರುವರು)



**ಸಂಗ್ಯಾ :** ಸೀಸಾ ಹೊಯ್ದಾಂಗಾತೋ ದೇಹದಲ್ಲಿ ಕಾಸೀ । ಆಕಿನ ಇದ್ದಲ್ಲೆ ತರಬೇಕೊ

**ಬಾಳಾ :** ಮನ ಪಡಸಿ । ಉಂಗುರಗೂದಲ ಬೈತಲ ವಳ್ಳೆ ತರಳಾ । ಹೊಟ್ಯಾಗಿನ ಕರುಳ
ಆಗೈತೈತೋ ಕಸವಿಸಿ ॥ ಆಕಿನ ಇದ್ದಲ್ಲಿ ತರಬೇಕೊ ಮನಪಡಸಿ ॥ ಸೀಸಾ ॥

ಪದ್ಮಿನಿ ಜಾತಿ ಹೆಣ್ಣ ನಿವಳ । ತುಟಿ ಕೆಂಪು ಹವಳ । ಕಂಡೆನೋ ಪುರಮಾಸಿ
ಆಕಿನ ಇದ್ದಲ್ಲಿ ತರಬೇಕೊ ಮನಪಡಸಿ ॥ ಸೀಸಾ...॥
ಶಾಪೂರ ಶಂಕರಸ ಹರಸೀತಗದಾರೊ ಧರತಿ । ಆಗತೈತೊ ಕಸವೀಸಿ ॥ ಆಕೀನ....॥

**ಸಂಗ್ಯಾ :** ಬಾಳ್ಯಾ ಕೇಳೋ ಮಾತೈತಿ ನನ್ನೊಂದಾ ।
ಆಕಿ ಬಾಗಿಲ ಮುಂದ । ಖೂನಾ ಹಿಡಿಯೊ । ಮರವೈತಿ ಟೆಂಗಿನ ।
ನೆಟ್ಟಗ್ಹೋಗೋ ಪ್ಯಾಟಿಯ ರಸ್ತೆ ಹಿಡದಾ । ಮಾರ್ಕೆಟೀನ ಮುಂದ
ಮನಿ ಪ್ರಿತೋ ಮೂರ ಮಜಲಿಂದ ॥

ಬತ್ತಿ ಕಟ್ಟೋ । ಬೆಂಕಿಯ ನೆವದಿಂದ । ಬತ್ತಿ ಕಟ್ಟೋ ಬೆಂಕಿಯ ನೆವದಿಂದಾ ।
ಆಕಿ ಬರತಾಳೋ ಒಳಗಿಂದ । ಗಪ್ಪನೆ ಕುಂದ್ರಪ್ಪಾ ನೆಲ ಹಿಡದಾ ॥

ಮೆಲ್ಲಕ–ಎಳಿ ತಗಿ ಮಾತಿಂದ ಮೆಲ್ಲಕ ಎಳಿ ತಗಿ ಮಾತಿಂದ ।
ಬಿಳಬೆಳಸ್ಹೇಳೋ ನಂದ – । ಊರಾಗ ಹಿರೇತಾನ ಸಂಗ್ಯಾಂದ ನಾ ।

**ಗಂಗವ್ವಾ :** ಯಾರಪ್ಪಾ ಯಣ್ಣಾ ನೀನೂ । ಇಲ್ಲಿಗೆ ಬಂದ ಕಾರಣವೇನು ?
ಬಂದ ಕಾರಣವೇನು ? ಗುರುತು ನಮಗೇನು ?
ಬಂದ ಬಗಿ ಬಲ್ಲೆ ನಾನೂ । ಪ್ಯಾಟ್ಯಾಗ ಭೇಟಿಯಾಗಿದ್ಯೋ ನೀನೂ ।
ಭೇಟಿಯಾಗಿದ್ಯೊ ನೀನೂ । ಬಾಳಣ್ಣ ಹೌದೇನು ?
ಬಾರಪ್ಪ ವಳಗ ನೀನೂ । ಯಾರ್ಯಾರಿಲ್ಲಾ ಅಂಜಬೇಡಪ್ಪಾ ನೀನು ॥
ಅಂಜಬ್ಯಾಡಪ್ಪಾ ನೀನು ? । ಭಯವು ನಮಗೇನು ? ॥
ಶಾಪುರ ಶಂಕರನೂ । ಇಂದು ನಮಗ ಕೂಡಿಸಿ ಕೊಟ್ಟಾನು
ಕೂಡಿಸಿ ಕೊಟ್ಟಾನು ? ಹೇಳಲೆ ಇನ್ನೇನು ? ॥ ಬಾರಪ್ಪ ವಳಗ ॥

ಉತ್ತರ ಕರ್ನಾಟಕದ ಬಯಲಾಟದ ಪ್ರಕಾರಗಳಲ್ಲಿ ಸಂಗ್ಯಾ ಬಾಳ್ಯ ನಾಟಕವು ಸಣ್ಣಾಟ ಎಂದು ಪ್ರಸಿದ್ಧಿ ಪಡೆದಿದೆ. ಇದರ ವಸ್ತು ಸಮಾಜದಲ್ಲಿ ಗಂಡು ಹೆಣ್ಣಿನ ಪರಸ್ಪರ ಕುಟುಂಬ ಸಮಾಜ ಹಾಗೂ ಊರಿಗೆ ವಿರೋಧವಾಗುವ ರೀತಿಯಲ್ಲಿ ಪರಸ್ಪರ ಪ್ರೀತಿಸುವ ಹಾಗೂ ಕೊನೆಗೆ ಕೊಲೆಯಾಗಿ ಕೊನೆಗೊಳ್ಳುವ ಸ್ಥಿತಿಯಲ್ಲಿ ಇರುವುದರಿಂದ ಇದರಲ್ಲಿ ಬರುವ ಗಂಡು ಹೆಣ್ಣುಗಳ ಮಾತುಗಳು ಅಶ್ಲೀಲವಾಗಿರುವುದರಿಂದ ಅವುಗಳನ್ನು ಕಾಮನಹಬ್ಬದಲ್ಲಿ ಕಾಮರತಿಯರ ಸಂಕೇತವಾಗಿ ಸಂವಾದದ ರೂಪದಲ್ಲಿ ಹಾಡುವರು. ಅವುಗಳಲ್ಲಿ ಕೆಲವು ಮಾದರಿಗಳನ್ನು ಮಾತ್ರ ಇಲ್ಲಿ ಹೇಳಲಾಗಿದೆ. ಅಶ್ಲೀಲವಾದ ಇನ್ನು ಅನೇಕ ಹಾಡುಗಳನ್ನು ಕೈಬಿಡಲಾಗಿದೆ.

**ಕಥನ ಕವನಗಳು :**

ಕಾಮ ಕ್ರೋಧ ಎಂಬವ ಕಾಮ ಆಯಿತು
ಬಳಲಿಕವ್ವನ ಹೊಟ್ಟೀಲೇ ಹುಟ್ಟಿ ಬಂದ ಕಾಮ
ಹುಣ್ಣಿಮೆದಿನ ಹುಟ್ಟಿ ಬಂದನು ಕಾಮ
ಬಳಲಿಕೆವ್ವನ ಹೊಟ್ಟೀಲೀ ಹುಟ್ಟಿ ಬಂದನು ಕಾಮಣ್ಣ

ಸುಗ್ನನಾಮ ಸಂವತ್ಸರ ದಶಮಿ ಮೀ
ರಿ ಎಳೆವುದು ತೇರ
ಹನ್ನೆರಡು ವರ್ಷದ ಹುಡುಗನು ಬಾರ
ಶಿವ ಮುನಿದನು ಶಂಕರ
ಬಾಳಿ ಸುಳಿಯಂಗ ಬೆಳೆದಿದ್ದನವ
ಬಿಂಡಕ ಜ್ವರ ತಿನ್ನುತಿದ್ದವ
ಹೋಳಿ ಕಾಮನಾಕಾರ

ಕಿವಿಯ್ಯಾಗ ಇಟ್ಟಿದ್ದನು ಮೇಲ್ಮುರುವ
ಧಡಿತೋರ ಬ್ಯೂಟಿನ್ನಂಗಿ
ರುಮಾಲ ಸುತ್ತಿದ್ದನು ಜರತಾರಿ
ಹೋಳಿ ಕಾಮವನಾಕಾರ
ಬಳಲಿಕೆವ್ವನ ಹುಟ್ಟಿ ಬಂದ ನಮುಕಾಮ

ಇಟಗಿ ಬಿಟ್ಟು ಹೊಂಟನ ಊರ ಹೊರಗ
ಕಟಗಿ ಹೊರಿ ಬಂದಾವ್ರೋ ಇದರೀಗೆ
ಗುದ್ದಲಿ ಶಲಕಿ ಹೊತ್ತಾರೋ ಹೆಗಲಮ್ಯಾಲೆ
ಬರೆ ಬುಟ್ಟಿ ಹಿಡಿದಾರೋ ಬರೆ ಕೈಯಾಗ

ತಾಯಿ ಹೇಳತಾಳ ಮಗನಿಗೆ
ಅಪಶಕುನ ಆದೀತು ನಮಗ
ಹಿಂದಿನ ರಾತ್ರಿಯಲ್ಲಿ ಸ್ವಪ್ನ ಬಿದ್ದಿತ್ತು
ಮದುವೆಯಾಗುತ್ತಿತ್ತು ಮಗನಿಗೆ

ಚಂದ್ರ ಪೂಜೆ ಕಟ್ಟಿಸ್ಯಾಳೋ ದೇವರಿಗೆ
ದಾಸೋಗ ಮಾಡ್ಯಾಳೋ ದೇವರಿಗೆ
ಮುದ್ರಿ ಹಾಕ್ಸಿ ಬಿಟ್ಟಾಳೊ ಮಗನಿಗೆ
ಕಂಚಾಣ ಕೊಟ್ಟಾಳೋ ದಾಸರಿಗೆ

ಆಗ ಬಿಟ್ಟರೋ ಹಗಣ್ಯಾರ
ಗುಮಗೋಳಕ ಹೋಗುದು ಒತ್ತರ



ನಿಂತು ಬಾಳ ಅವ್ರ ಚಿಂತಿ ಮಾಡತಾರ
ಅಂತಃಕರಣವಿಲ್ಲ ದೇವರಿಗೆ

ಹೊಳಿಯಾಗ ಹೋಗಿ ಊಟಕ್ಕಕುಂತಾರ
ಸವಿ ಹತ್ತವಲು ಚೂರ
ರೊಟ್ಟಿ ಕೊಟ್ಟಾರು ಹುಡುಗನ ಕೈಯಾಗ
ಪಟ್ಟಂತ ಕಡಿಲಿಲ್ಲ ಬಾಯೊಳಗೆ
ತೇರ ಸಾಗಿತೇನು ಸುದ್ದಿಕೇಳಿ
ರೊಟ್ಟಿ ಜಿಲ್ಲೆದನು ನೀರಾಗ
ಅಬ್ಬರದಿಂದ ಪರಿಸ್ಯಾಗ
ಕಬ್ಬಿಣ ಚೂರ ಅವನ ಕೈಯಾಗ
ಸಿಕ್ಕಿ ತಂದ ಬಾಳ ಪ್ರೇಮದಿಂದ
ತಿನ್ನುತ ನಿಂತನು ಜಾತ್ರ್ಯಾಗ

ಬಡಬಡ ಹೋದನು ಊರಾಗ
ತಡ ಮಾಡದ ಬಿದ್ದಾನೋ ಗಾಲ್ಯಾಗ
ಕುಳ್ಳುಪುಟ್ಟಿ ಬಿದ್ದವರ್ರಿ ಭೂಮಿ ಮ್ಯಾಲ
ರಕ್ತ ಹರಿದಿತ್ತು ಧರಣಿಗೆ

ತಾಯಿ ತಂದೆಗೆ ಮುಟ್ಟಿತು ಮಗನ ಸುದ್ದಿ
ಮುಗಿಲ ಹರದ ಬಿದ್ದಾಂಗಾತು ತಾಯಿ ತಂದೆ ಮ್ಯಾಗ
ಅವಾಗ ಬಂದಾಳೋ ಅವನೆಂಡ್ತಿ
ಮಾರಿ ನೋಡತೇನಿ ಅಂತಾಳ

ಅತ್ತು ಕೊರಳಿಗೆ ದುಃಖ ಮಾಡತಾಳ
ಹೆಂಗತಗಿಬೇಕೋ ರಂಡತನ
ಚಮತ್ತ ಬಂದರು ಜನರು
ಪಂಚರ್ನ ಕರಿಸ್ಯಾರೋ ಸಭಿದಾಗೆ
ಹೆಣ ಬಾತಿತಂತ ಅಪ್ಪಣಿ ಕೊಟ್ಟಿದ್ದಾರೋ
ನಮಗ ಬಂದಿತೋ ಬಾಳ ಗೋರ

ಕಾಳಿ ಸನಾದಿ ನಗಾರಿ ನಂಬತ್ಯ ನೋಡದಾಂಗ
ಪಲ್ಲಕಿ ಹೊರಗೆ ಹೊಂಟಳು
ಗುಮಗೋಳ ತೇರಿನ ವಿಸ್ತಾರ
ಪಟ ಹಚ್ಚಿದ್ದನೋ ಸಾವಿರ
ಅರುಗಾಲಿ ಹದಿನೆಂಟುಸೇರಿ

ಹಾವಹಾವ ಅಂದರ ಹರನೆಲ್ಲೆ ನಡುಗ್ಯಾಗ
ಹಾಯ ಅಲ್ಲಿ ಹಂಪಿ ವಿರೂಪಾಕ್ಷ ಗುಡಿಮುಂದ
ಹಾವಾಗಿ ಹರಿದಾಳ ಗಂಗಿ

ಮುಳಗುಂದ ಹಾರುತ್ತಿತ್ತು
ಓರಿಗಿ ಗೆಳತ್ಯಾರು ಜತ್ತು
ಕರುಣದಿಂದಲಿ ಕೈ ಮಾಡುವರು

ಇಲ್ಲಿ ರಾಮಾಯಣ, ಮಹಾಭಾರತ ಇನ್ನು ಅನೇಕ ಮುಂತಾದ ಆಧ್ಯಾತ್ಮದ ಗೀತೆಗಳನ್ನು ಅವುಗಳ ಒಂದೊಂದು ಭಾಗವನ್ನು ಆರಿಸಿಕೊಂಡು ಕಥನ ಕಾವ್ಯಗಳ ಹಾಗೆ ಹಾಡುವರು. ಅಲ್ಲದೇ ಸಮಾಜದ ಚಿಂತನೆಯನ್ನು ಹಿಡಿದು ಕೂಡ ಇಲ್ಲಿ ಅನೇಕ ಬಗೆಯಾಗಿ ಕಥೆಗಳ ಮೂಲಕ ಹೆಣೆಯುತ್ತಾ ಹೋಗುವರು.

**ಶೃಂಗಾರದ ಹೋಳಿ ಹಾಡುಗಳು**

೧) ಹಳ್ಳದ ದಂಡೀಲೆ ಹಸಿರು ಬಣ್ಣದ ಹಕ್ಕಿ
ಬಸಲಂಗಿ ಬಾಯಿ ಬಿಡತ್ಯೆತಿ
ಆ ಹಕ್ಕಿ ಕುಶಲದ ನಗಿ ನಗತ್ಯೆತಿ

೨) ಕಡಪಟ್ಟಿಯ ಮನೆಯವಳ
ಕಡಗದ ಕೈಯವಳ ಹುಡುಗ
ಬರತಾನ ಕರಕೂಳ ಎಲೆ ಹುಡುಗಿ
ಕಣದನ್ನ ಗೋಧಿ ಅಳಕೋರ

೩) ಬೇಲಿ ಮ್ಯಾಗಿನ ಹೂವು ಬೆಳ್ಳಗಿದ್ದರೇನ
ಮಲ್ಲಿಗಿ ಹೂವಿನಂತೆ ಮನಿಗಂಡನ ಬಿಟಗೊಂಡು
ಹುಲ್ಲ ಕೊಯ್ಯುವನ ಹುಡಿಕ್ಯಾಳ

೪) ಕಾಮಕಲ್ಲಿಗಿ ಸೋತ ಭೀಮ ಬಿಲ್ಲಿಗೆ
ಸೋತ ಅರ್ಜುನನ ಸೋತ ಕಣದಾಗ ಧರ್ಮರಾಜ
ತಾ ಸೋತ ತನ್ನ ಮಡದಿಗೆ

೫) ಕಾಮಣ್ಣನ ಹೆಂಡರು ಕಾಡಿಗೆಗಣ್ಣರು
ಯ್ಯಾರ ಕೂರಿದರು ತಿರುಗಲಾರರು ಅವರು
ಹದ್ದಿನ ಕ್ಷೇತ್ರ ಕಂಡು ತೀರಿಗ್ಯಾರು

೬) ಹತ್ತು ಸಾವಿರ ಮರೆಗುದುರಿಯ ಕೊಟ್ಟರ
ರಕ್ತದ ಕಾವಲಿ ಹರಿಸ್ಯಾಳ
ಮತ್ತೇನ ಬೇಡ್ಯಾಳ ಕಿತ್ತೂರ ಚೆನ್ನಮ್ಮ
ಬ್ರಿಟಿಶರ ಶಿರವ ಬೇಕ ಎಂದಾಳ



೭) ಕಾಮ ಕಲ್ಲಿಗೆ ಸೋತ
ಭೀಮ ಬಿಲ್ಲಿಗೆ ಸೋತ
ರಾವಣ ಸೋತೋ ರಣದಾಗೋ

೮) ನೀ ಎಂದು ಹಾಡಿದ್ದೇ ನಿಮ್ಮಪ್ಪಾ ಎಂದ
ಹಾಡಿದ್ದ ಬೀಲ್ಯಾಗ ಲೆಕ್ಕ ಹಿಡಿತ್ತದ್ದ । ನಿಮ್ಮಪ್ಪಗ ನಾನಾ
ಕಲ್ಲು ಒಗೆದು ಬಿಡಿಸೇನೋ ।

೯) ಯಾಕಪ್ಪ ನನಗೆಣೆಯ ಮಾರಿಸಣ್ಣದ್ಯೆತಿ
ವಾಚ್ಯಾಡಿಯೇನ ಮನಿಯಾಗ । ನಿಮ್ಮವ್ವ
ಹೋಳಿಗೆ ಮಾಡ್ಯಾಳ ಉಣಹೋಗ

೧೦) ಚಂದುಳ್ಳ ನಮಕಾಮ ದುಂದು ಎದ್ದು ಸುಡುವಾಗ
ತಂಗಿದ್ದರ ಎಷ್ಟು ಮರುಗುವಳು ।
ತಾಯಿದ್ದರ ಎಷ್ಟು ಅಳುವಳು

೧೧) ಕುಡಗುಂಟೆ ದಾರ್ಯಾಗ ಗಿಡ ಸಣ್ಣಮಲ್ಲಿಗೆ ಕಿಡಗೇಡಿ
ನಮ್ಮ ಕಾಮಣ್ಣ । ಕಂಡರ
ಗಿಡಕ ಐದ ಮಲ್ಲಿಗಿ ಮೂಡಿಶ್ಯಾನ

ಹೋಳಿ ಹಬ್ಬದ ಹಾಡುಗಳಲ್ಲಿ ಶೃಂಗಾರದ ಹಾಡುಗಳನ್ನು ಒಂದು ಮುಖ್ಯ ಪ್ರಕಾರವಾಗಿ ವಿವರಿಸಬಹುದು. ಕಾಮರತಿಯರ ಶೃಂಗಾರವನ್ನು ಜನಪದರು ತಮ್ಮ ಆಡುನುಡಿಯ ಭಾಷೆಯಲ್ಲಿ ಶೃಂಗಾರದ ವಸ್ತುಗಳಿಗೆ ಕಾಮರತಿಯರನ್ನು ಪ್ರತ್ಯಕ್ಷವಾಗಿ ಹೋಲಿಕೆ ಕೊಡುವುದರಿಂದ ಅನೇಕ ಅಶ್ಲೀಲ ಶಬ್ದಗಳನ್ನು ಬಳಸಿ ಶೃಂಗಾರದ ಪದಗಳನ್ನು ಹಾಡಿ ಸಂತೋಷಪಡುವರು. ಇಲ್ಲಿ ಮಾಮೂಲಾಗಿ ಕೆಲವು ಅಶ್ಲೀಲವಲ್ಲದ ಹಾಡುಗಳನ್ನು ಮಾತ್ರ ಆರಿಸಿಕೊಂಡು ಅಶ್ಲೀಲವಾದ ಅನೇಕ ಶೃಂಗಾರದ ಹೋಳಿ ಹಾಡುಗಳನ್ನು ಕೈಬಿಡಲಾಗಿದೆ.

**ಹಂತಿ ಪದಗಳು :**

೧) ತುಂಬಿದ ಹೋಳಿಯಾಗ ಕೊಂಬ ಕಾಣಿಸುತಾವ
ಬಂಗಾರದ ಇಣಿಯ ಬಸವಣ್ಣ ಬರುವಾಗ
ಕಂದವ್ವ ಕೈ ಮುಗಿದಾಳ

೨) ಬಸವಣ್ಣ ಹುಟ್ಟಲಿ ಹೊಸಪೇಟೆ
ಕಟ್ಟಲಿ ರಸಬಾಳಿ ಕಬ್ಬ ಜಿಗಿಯಲಿ ನಮ್ಮೂರ
ಬಸವಣ್ಣನ ತೇರ ಎಳೆಯಲ್ಲಿ

೩) ಬಸವಣ್ಣನ ಹಣೆಯ ಮ್ಯಾಲೆ ಹಸನುಳ್ಳ
ವಿಭೂತಿ ಹಸರ ಶಲ್ಯವ ಮೈಮ್ಯಾಲೆ ಹಾಕಿಕೊಂಡ
ಹಸನಾಗಿ ಹಂತಿ ತಿರುಗ್ಯಾನ

೪) ಬಸವ ಬಂಡಿಯ ನೇರಿ ಶಿವನು ನಂದಯನೇರಿ
ಪಾರ್ವತಿ ರಥವೇರಿ ಬರುವಾಗ
ಬಂದಂತ ಮೂಡ ಬಯಲಾಗಿ

೫) ತಳಕಲ್ಲಿ ಹಾರೇಗ ತಳಕನಾಗರ
ಕಂಡೆ ಬಳಕುತ ಬರುವ ಇವನ್ಯಾರ ನಮ್ಮ ಬಸವ
ಸರಪಣಿ ಗುರುತ ಹಿಡಿದಾನ

೬) ಸಂಗಮದ ದಾರ್‍ಯಾಗ ಸಾಲ ತೆಂಗಿನಮರ
ಟೊಂಗಿ ಟೊಂಗಿಗೆ ಎಳಿಗಾಯಿ ನಮ ಕಾಮ
ಬಲ್ಲ್ಲೇ ಹೊಡರ ಬಿಳಿಕಾಯಿ

೭) ಬೆಳ್ಳನ್ನ ಎರಡೆತ್ತ ಬೆಳ್ಳಿಯ ಬಾರಕೋಲು
ಬಂಗಾರದ ಸಡ್ಡಿ ಬಲಗೈಯಾಗ ನಮ್ಮ ಬಸವ
ಹೊನ್ನ ಬಿತ್ತೇವ್ರೋ ಹೊಲಕೆಲ್ಲ

೮) ಹಂಡ ಹೋರಿಯ ಮ್ಯಾಲ
ಮಂಡ ಮೂಗಿನ ಹೆಣ್ಣ
ಉಂಡಿ ಕೊಡತೇನಿ ಉಡಿ ಒಡ್ಡ
ಬೆಂಡಕೊಡತೇನಿ ಬಿನ್ನಹತ್ತ

೯) ತಂಗಿನ ಕರಕೊಂಡ ಕರಿದತ್ತ ಹೊಡಕೊಂಡ
ತಂಗಿ ಮಕ್ಕಳಿಗೆ ಬಿಡಿಲೆಂದೋ ಅಣ್ಣಯ್ಯ
ವಲ್ಲಿ ಮರಿಮಾಡಿ ಹಿಡಿದಾನೋ

೧೦) ಮುತ್ತಿನ ಮೂಗುತಿ ಮುತ್ತ ಮಾಡಿಸಿಕೊಟ್ಟ ಮುತ್ತೈದಿ
ತಾನ ಶಿವಕೊಟ್ಟ। ಶಿವರಾಯ
ಮಾದೇವ ಕೊಟ್ಟ ಫಲಗೋಳ

೧೧) ಆ ಕಲ್ಲು ಈ ಕಲ್ಲು ಹಸರ ಹಳದಿಯ
ಕಲ್ಲು ಮುತ್ತಿನ ಕಲ್ಲ ಮುದಿಗಲ್ಲ। ಮುಂದಿರುವ
ರತ್ನದ ಕಲ್ಲ ತಳಕಲ್ಲ

ಹೋಳಿ ಹಬ್ಬದಲ್ಲಿ ಈ ಹಂತಿಯ ಹಾಡುಗಳನ್ನು ಕೂಡ ಹಾಡುವರು. ಇಲ್ಲಿಯೂ ಕೂಡ ಶೃಂಗಾರದ ಹಾಡುಗಳೇ ಸಾಮಾನ್ಯವಾಗಿ ಇರುವವು.

**ಒಗಟಿನ ಹಾಡುಗಳು :**

೧) ಕಾಗಿಯ ಕಾರಿಯಲಿ ಕುಳಬಾನ ಸುರಿಮಲಿ
ಕರಿಹುಡಿಗಿ ನನಗ ಒಲಿಮಲೋ। ನಂದೇಶ್ವರ ಕರಿ
ಹನಮಗ ಕಾಯಿವಡಿದೆನೋ



೨) ಒಂಟಿ ಗೊಂದಿನ ಎತ್ತು ಗಂಟಲ ಮುರು ಇತ್ತು
ಗಂಟಲ ದಾವಳ ಮೇಯುತ್ತಿತ್ತು ನಮ್ಮ ಊರ
ನಮ್ಮ ಹಾರ ಹಾಡ ಬಲ್ಲಣ್ಣ ಹೊಡದೇಳ

೩) ಬಾಳಿ ಪಟ್ಟದ ಸೀರಿ ಬಾಯಾಗ ಎಳದ
ಬಾಲಾಗ ಮಲಿನ ಕೊಡತಾಳ ದ್ಯಾಮವ್ವ
ಬಜಾರ ಹಿಡಿದ ಬರತಾಳ

ಈ ಒಗಟುಗಳಲ್ಲದೆ ಇನ್ನು ಅನೇಕ ಒಗಟುಗಳನ್ನು ಹೇಳಿ, ಹಾಡಿ ಒಗಟುಗಳನ್ನು ಒಡೆದು ಸಂತೋಷದಿಂದ ಹೋಳಿಹಬ್ಬದಲ್ಲಿ ಜನಪದರು ಸಂತೋಷಪಡುವುದು.

ಈ ಒಗಟುಗಳಲ್ಲದೇ ಇನ್ನು ಅನೇಕ ಒಗಟುಗಳನ್ನು ಹೇಳುವರು. ಅವು ಬಹುಶಃ ಎಲ್ಲವೂ ಅಶ್ಲೀಲ ಇರುವುದರಿಂದ ಅವುಗಳನ್ನು ಇಲ್ಲಿ ಕೈಬಿಡಲಾಗಿದೆ. ಮೇಲೆ ವಿವರಸಿದ ಒಗಟುಗಳನ್ನು ಮಾದರಿಗಾಗಿ ಆರಿಸಿಕೊಳ್ಳಲಾಗಿದೆ.

**ನೀತಿ ಹಾಡುಗಳು :**

೧) ಇರುವಾಗ ಇದ್ದಿನ ಹೋಗುವಾಗ ಹೋದಿನ
ನಿನ್ನ ಸಂಗ ಮಾಡಿ ಕೆಟ್ಟೆನೊ। ಶರಣರ
ಹಾದಿಯ ಬಿಟ್ಟು ಸಂಪೂರ್ಣ ಕೆಟ್ಟೆನೋ

೨) ಓಡಿ ಹೋಗಲಿಬ್ಯಾಡ ಹಾರಿ ಬೀಳಲಿಬ್ಯಾಡ
ಎಂಡಿಯ ತೆಳಗ ತಿಳಿನೀರ। ಮನದಾಗ
ತಿಳಿನೀರ ಕುಡಿಸಿ ನಿಚ್ಚಳಾಗ

೩) ಒಳ್ಳೆಯ ಒಳಗಿಟ್ಟು ಜೊಳ್ಳು ದಾನವ ಮಾಡಿ
ಕೊಳ್ಳಿ ಬೆಳಕೀಲಿ ಶಿವಪೂಜೆ। ಮಾಡಿದರೆ
ಶಿವನೆಂದು ಒಲಿಲಾರ ತಿಳಿ ಹುಡುಗಿ

೪) ಗುರುಕೊಟ್ಟ ಗುಳದಾಳಿ ಮನಿಯಾಗ ಇಟಗೊಂಡು
ಬರಿಗೊಳ್ಳಿಲೆವಳು ತಿರುಗಿದ। ಹೆಣ್ಣಿಗೆ
ಕಡಿ ತನಕಾ ನರಕಾ ತಪ್ಪದೋ

* * *

## ಆಕರ ಗ್ರಂಥಗಳು

೧) ಅಕ್ಕಿ ಡಿ.ಎನ್. — ಹಡದವ್ವ ಹಾಡ್ಯಾಳ (೦೯ ಪುಟಗಳು)
ಕವಿ ಕುಂಚ ಪ್ರಕಾಶನ
ಗೋಗಿ (ಪೇಠ)
ತಾ॥ ಶಹಾಪೂರ,
ಜಿ॥ ಗುಲಬರ್ಗಾ, ೧೯೯೯

೨) ಕಾಪಸೆ ರೇವಪ್ಪ — ಮಲ್ಲಿಗೆ ದಂಡೆ (೦೯ ಪುಟಗಳು)
(ಹಲಸಂಗಿ ಹಾಡುಗಳು)
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ

೩) ದೊಡಮನಿ ಹಣಮಂತರಾಯ — ಜಾನಪದ ಹಬ್ಬಗಳು ಮತ್ತು ಜಾತ್ರೆಗಳು (೧೧ ಪುಟಗಳು)
ಕನ್ನಡ ಸಾಹಿತ್ಯ ಪರಿಷತ್ತು,
ಬೆಂಗಳೂರು – ೨೦೦೪.

೪) ಬಿರಾದಾರ ಮ.ಗು. — ಹೋಳಿಯ ಹಾಡುಗಳು (೩೫೨ ಪುಟಗಳು)
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು.

೫) ರಾಮಸ್ವಾಮಿ ಎಸ್.
ನಟರಾಜ ಎಂ.ಬಿ. — ಹಾಡಾಕೆ ಬೈಗುಂಟೆ (೦೪ ಪುಟಗಳು)
ಬೆಳಗುಂಟೆ, ಕನ್ನಡ ಅಧ್ಯಯನ
ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ
ಮೈಸೂರು, ೧೯೭೫

೬) ಸುಂಕಾಪುರ ಎಂ.ಎಸ್ — ಜೀವನ ಜೋಕಾಲಿ ಭಾಗ–೨ (೧೪೩ ಪುಟಗಳು)
ಗಂಗೀ ಗೌರೀ ಸಂವಾದ
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ.

೭) ಸುಂಕಾಪುರ ಎಂ.ಎಸ್. — ಜೀವನ ಜೋಕಾಲಿ ಭಾಗ–೪ (೧೦೬ ಪುಟಗಳು)
ಹೋಳೀಹಾಡು
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ, ೧೯೭೪

೮) ಸುಂಕಾಪುರ ಎಂ.ಎಸ್. — ಜೀವನ ಜೋಕಾಲಿ ಭಾಗ–೫ (೧೨೨ ಪುಟಗಳು)
ದುಂದುಮೆ ಪದಗಳು,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ, ೧೯೭೫





೯) ವೃಷಭೇಂದ್ರ ಸ್ವಾಮಿ ಎಸ್.ಎಂ. — ಜಾನಪದ ಸಾಹಿತ್ಯ ದರ್ಶನ
ಭಾಗ–೧೦, ಕನ್ನಡ ಅಧ್ಯಯನ
ಪೀಠ, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ, ೧೯೮೭

೧೦) ಶಾಸ್ತ್ರೀ ಯಶೋಧರಾ — ಗುಲಬರ್ಗಾ ಜಿಲ್ಲೆಯ ಸಂಪ್ರದಾಯದ (೦೩ ಪುಟಗಳು)
ಹಾಡುಗಳು, ಜ್ಯೋತಿರ್ಮಯ ಪ್ರಕಾಶನ
ಮಾತಾಮಣೀಕೇಶ್ವರಿ ನಗರ,
ಗುಲಬರ್ಗಾ, ೧೯೯೯

## ಸಹಾಯಕ ಗ್ರಂಥಗಳು

೧) ಗದ್ದಗಿ ಮಠ ಬಿ.ಎಸ್. — ಕನ್ನಡ ಜಾನಪದ ಗೀತೆಗಳು
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ,೧೯೮೬

೨) ನಾಯಕ ಡಿ.ಬಿ. — ಲಂಬಾಣಿ ಜನಪದ ಸಾಹಿತ್ಯ
ಬಂಜಾರ ಪ್ರಕಾಶನ, ಗುಲಬರ್ಗಾ ೨೦೦೦

೩) ಬಸವರಾಜ ಆಕಳವಾಡಿ — ಉತ್ತರ ಕರ್ನಾಟಕದ ಜನಪದ ಹಬ್ಬಗಳು
ಸಿದ್ಧರಾಮೇಶ್ವರ ಅಕ್ಷರ ಪ್ರಕಾಶನ
ಕೊಪ್ಪಳ, ೨೦೦೪

೪) ಎಸ್.ಎಸ್. ಹಿರೇಮಠ — ಕರ್ನಾಟಕ ಸಂಸ್ಕೃತಿ ಪರಂಪರೆ (ಭಾಗ–೧)
ಹಬ್ಬಗಳು, ಸಮತಾ ಪ್ರಕಾಶನ
ಹರಪನಹಳ್ಳಿ, ೧೯೮೨

೫) ಶಿವರಾಮು ಮ.ನಂ. — (ಸಂ) ಹಗೇವು ತುಂಬ್ಯಾವೆ ಹದಿನಾರು
ಮಂಡ್ಯ ಜಿಲ್ಲಾ ಜನಪದರ ಕಲಾಮೇಳ
ಹನುಮಂತನಗರ, ಮಂಡ್ಯ ತಾ॥
ಮಂಡ್ಯ ಜಿ॥, ೧೯೯೭

## ಪ್ರಾದೇಶಿಕ ಪದಕೋಶ

### (ಅ–ಆ)

**ಅಗದಿ** – ಬಹಳ
**ಅನ್ಯ** – ಅನ್ಯಾಯ, ತಕರಾರು
**ಅಗರಾಣಿ** – ಅರ್ಷ್ಷವಣಿ, ವರತಿ
**ಅಬರು** – ಮಾನ, ಮರ್ಯಾದೆ
**ಅಗಸಿ** – ಊರಿನಕೋಟೆ ಬಾಗಿಲು
**ಅಮ್ಮಿ** – ಮೊಲೆ
**ಅಚ್ಚ** – ಸಲುಗೆ, ಪ್ರೀತಿ
**ಅಲಬತ್ತ** – ಅವಶ್ಯ, ಅದಕ್ಕಾಗಿಯೇ
**ಅಡರು** – ಹತ್ತು, ಅಪ್ಪಿಕೊಳ್ಳು
**ಅವಗಾಡು** – ಅಸ್ತವ್ಯಸ್ತ, ಸರಳವಲ್ಲದ
**ಅಡರಸು** – ಆರೋಪಿಸು
**ಅವಲ್** – ಗಟ್ಟಿ, ಪ್ರಸಿದ್ಧಿ
**ಅಡ್ಡಾಸು** – ಹಾತೊರೆ
**ಅಸವ** – ಸಹಿಸದ
**ಅಡಿ** – ಅಡವಿ
**ಅಸ್ತ** – ಮುಳುಗು
**ಅಡ್ಲಿ** – ಜೋಗದ ಬುಟ್ಟಿ
**ಆಚ** – ಗರಜು, ಅವಶ್ಯಕತೆ
**ಅಟ** – ಎಂಟು

### (ಇ, ಈ, ಉ, ಊ)

**ಇಣಿ** – ಹೋರಿಯ ಹೆಗಲಿನ ಹಿಂದಿನ ಎತ್ತರವಾದ ಭಾಗ
**ಇಂದು** – ಚಂದ್ರ
**ಇನ** – ಸೂರ್ಯ
**ಇಸಮ** – ಅಭಿಮಾನ
**ಇಳೆ** – ಭೂಮಿ
**ಉಡುಪ** – ಶಿವ
**ಉಂಬುಣ** – ಊಟ ಮಾಡುವಾ
**ಉಮೆ** – ಪಾರ್ವತಿ
**ಉರುಪ** – ಅಂಗಾಗದಲ್ಲಿ ಉರಿಯುವುದು
**ಉಕ್ಕು** – ಕುದಿದು ಹೊರ ಚೆಲ್ಲುವುದು
**ಉಲು** – ಉಲುಹು, ಸಹಜ ಸಪ್ಪಳ
**ಉಗಡ** – ಗುಟ್ಟು
**ಉರ್ವಿ** – ಭೂಮಿ

### (ಎ, ಏ, ಒ, ಓ)

**ಎಗ್ಗು** – ಸ್ತುತಿ, ನಿಂದೆ, ಗಮನಿಸದಿರುವಿಕೆ
**ಒಲ್ಲಿ** – ಧೋತರ
**ಓಪ** – ಪ್ರಿಯಕರ

### (ಕ, ಖ)

**ಕಡ್ಡ** – ಒಂದು ತರಹದ ಹುಲ್ಲು
**ಕಬ್ಬುವಿಲ್ಲ** – ಮನ್ಮಥ
**ಕಟಪಡ** – ಪ್ರಯತ್ನ
**ಕರಗ್ರ** – ತಕರಾರು
**ಕಟವಾಯ** – ಬಾಯಿಯ ಇಕ್ಕೆಲ
**ಕರಿ** – ಆನೆ
**ಕಂದರ್ಪ** – ಮನ್ಮಥ
**ಕರಿಸಾಲ** – ಬಿತ್ತದೇ ಇರುವ ಬರ
**ಕಬಲಾತಿ** – ಒಪ್ಪಗೆ ಪತ್ರ
**ಕಾಮ** – ಇಚ್ಛೆ
**ಕಾಮಾರಿ** – ಶಿವ
**ಕಾಯ್ಕುಳ್ಳು** – ಒಣಗಿದ ಹೆಂಡಿ, ಸೆಗಣಿ
**ಕಾರಭಾರಿ** – ಕಾರ್ಯದರ್ಶಿ
**ಕಾಸೆ** – ಕಾಶೀದಾರ, ಪುರವಂತರ ವೇಷ, ಬಿರುದು ಕಟ್ಟಿದ ದಾರ



**ಕುಂಬಿನಿ** – ಭೂಲೋಕ
**ಕಿಂಕರ** – ಸೇವಕ
**ಕುರುಳು** – ಕುಳ್ಳು, ಹೆಂಡಿಯಿಂದ ದುಂಡಗೆ ಮಾಡಿ ಒಣಗಿಸಿದ್ದು
**ಕುರುಹು** – ರೂಪ, ಆಧಾರ
**ಕುಲ್ಲ** – ಕೆಟ್ಟ
**ಕುಲಜರು** – ಶ್ರೇಷ್ಠರು
**ಕುಳ್ಳ** – ಕುರುಳ
**ಕೂನ** – ಗುರುತು
**ಕೊಕ್ಕಟೆ ಹೊಡಿ** – ಸುಮ್ಮನೆ ನಗುತ್ತ ಕಾಲಕಳೆ, ಒಂದು ಪ್ರಾಣಿಯ ನಗು
**ಕೊಳಮಲಿ** – ಆಡು, ಕುರಿಗಳ ಕೊರಳಮೊಲೆ
**ಕೋದು** – ಕೊಯ್ದು
**ಖಂಗ** – ಕುನುಸು
**ಖಜೀಲ** – ಅಸಹ್ಯ, ಅಪಮಾನ
**ಖಾತ್ರಿ** – ಮನದಟ್ಟು
**ಖಬಿ** – ತೃಪ್ತಿಯ ಸಂತಸ
**ಖೂಳ** – ದುಷ್ಟ

### (ಗ, ಘ)

**ಗದಗಮಸು** – ಮಾನಸಿಕವಾಗಿ ಹೊಯ್ದಾಡದಿರುವುದು
**ಗಲ್ಲೀಪ** – ಕಲ್ಲಿನ ನಂದಿಗೆ ಹಾಕಿದ ಉಡುಪು
**ಹನ್ನಘಾತಕ** – ದೊಡ್ಡಪಾಪ
**ಗಳಗಿ** – ಕಾಳು ಸಂಗ್ರಹಣೆಯ ಸಾಧನ
**ಗಾರಗಣ್ಣ** – ಬೆಕ್ಕಿನ ಕಣ್ಣಿನ ಬಣ್ಣದಕಣ್ಣು
**ಗಾಲಮೇಲ** – ತಟ್ಟನೆ, ಆರೋಗ್ಯ, ಕೆಟ್ಟಸ್ಥಿತಿ
**ಗಿಂಜು** – ಬದನೆಕಾಯಿಯ ಒಂದು ರೀತಿಯ ಲೋಳೆ
**ಗಿಮದಿರುಗು** – ಪೆಟ್ಟಿನಿಂದ ತಲೆ ತಿರುಗಿಸುತ್ತ ತಿರುಗುವುದು
**ಗೀಳ** – ಹಾಳಾದದ್ದು, ನಿರುಪಯೋಗಿ
**ಗುಲ್ಲ** – ದನದ ಮೈಮೇಲೆ ಬಣ್ಣದಿಂದ ದುಂಡಗೆ ಹಚ್ಚಿದ ಗುರುತು
**ಗುಲ್ಲಮಾಡು** – ಇಲ್ಲದ ಆರೋಪ ಹೊರಿಸಲುಕೂಗಾಟ
**ಗೇಣಿಸು** – ಚಿಂತೆಮಾಡು, ಲೆಕ್ಕ ಹಾಕು

### (ಚ, ಛ, ಜ, ಝ)

**ಚಡತಿ** – ಏರಿಕೆ, ಮೇಲ್ಮೆ
**ಚರಕಿ** – ಕೊಬ್ಬು
**ಚುವಕಾಸಿ** – ಬೌಕಾಸಿ, ವಿಚಾರಿಸು
**ಚಾಕರಿ** – ಸೇವೆ
**ಚಂದ್ರಮೌಳಿ** – ಶಿವ
**ಚಾಟ** – ಗಾಳಿಮಳೆಯಿಂದ ಮರೆ
**ಚ್ಯಾಲೂರಿ** – ಒತ್ತಾಯದಿಂದ ಬೇಡು
**ಚಿಣಿ** – ಆಡಲು ಮಾಡಿದ ಚಿಕ್ಕದಾ ಕಟ್ಟಿಗೆಯ ಚೋಟುದ್ದ ತುಂಡು
**ಚಿನ್ನ** – ಕಳೆ (ಚೋಟುದ್ದದ ತುಂಡು)
**ಚಿಂಗ** – ಗಬ್ಬುವಾಸನೆ
**ಚಿಲರೆನತೆನೆ** – ಹಿಡಿದೆನೆ, ಆಯ್ದದೊಡ್ಡತೆನೆ
**ಚೂಕ** – ತಪ್ಪು
**ಜತ್ತಲೆ** – ಜೊತೆಯಾಗಿ
**ಜಲ್ಲ** – ಅಂಜಿಕೆ, ಹೊಟ್ಟೆ ಬೇನೆ
**ಜಾಂಬ** – ಬಟ್ಟಲು, ಗ್ಲಾಸು
**ಜೇಗಟೆ** – ಜಾಗಟೆ
**ಜಿನ್ನನ** – ಜಿನ
**ಜೀತಪಾಪ** – ಪಾಪವನ್ನು ಗೆದ್ದವ

**ಜೇರ್ಣ** – ತೀರ ಹಳೆಯ
**ಝುಂಗೀ** – ಬಹಳ ದೊಡ್ಡ

### (ಟ, ಠ, ಡ, ಢ)

**ಟೀಕ** – ಒಳ್ಳೆಯದು
**ಡಾವ** – ತಂತ್ರ
**ಡಿಂಬ** – ಶರೀರ
**ಡಂಬಕ** – ಮೋಸ, ಠಕ್ಕ
**ಡೋಣಿ** – ವಿಜಾಪೂರ ಜಿಲ್ಲೆಯ ಒಂದು ನದಿ
**ಢರಿ** – ಹೋರಿಯ ಗುಟುರು

### (ತ, ಥ, ದ, ಧ, ನ)

**ತಗಲ** – ಉದ್ದೇಶ ಪೂರ್ವಕ ಸುಳ್ಳು
**ತರಬು** – ನಿಲ್ಲಿಸು
**ತಳ್ಳಿ** – ಗೊಡವೆ
**ತ್ರಾಣ** – ಸಕ್ತಿ
**ತಿಪಲ** – ವಕ್ರಮಾರ್ಗ, ಗೊಂದಲ ಹುಟ್ಟಿಸುವ
**ತುರುಬು** – ಕೂದಲಿನ ದುಂಡನೆ ಕಟ್ಟು
**ತೇಜಿ** – ಕುದುರೆ
**ದಿಂಡು** – ರಾಶಿ
**ಥಾಳಿ** – ವಿಶೇಷವಾಗಿ ಹಾಲು ಕಾಯಿಸಲು ಒಟ್ಟಿದ ಕುಳ್ಳಿನ ಕಿಚ್ಚು
**ದಿಕ್ಕಿ** – ಆಘಾತ
**ದಗದ** – ಹೊಲ ಮನೆ ಕೆಲಸ
**ದರ್ಜ** – ಯಾವುದೇ ಅಂಜಿಕೆ ಇಲ್ಲದ
**ದವಡು** – ಬೇಗ
**ದಸಮಿ** – ಹಾಲಿನಲ್ಲಿ ಹಿಟ್ಟು ಕಲಸಿ ಮಾಡಿದ ರೊಟ್ಟಿ
**ದಸೀಂದ** – ಸಲುವಾಗಿ
**ದಾಗ** – ಕಲೆ
**ದಾರು** – ಯಾರು

**ದಿಂಡ** – ಹರಿದ ಸೀರೆ, ಧೋತರ ಅಡ್ಡ ಕತ್ತರಿಸಿ ಹೊಲಿಯುವುದು
**ದುರುಳ** – ದುಷ್ಟ
**ದುಸಕಾ** – ಸಲುವಾಗಿ
**ಧಣಗಿ** – ಗುಂಪಿನ ಉದ್ದೇಶ ಪೂರ್ಣ ಆಕ್ರಮಣ ಗದ್ದಲ
**ನಬ್ಬ** – ಬೆಳಕೂ ಕತ್ತಲೂ ಅಲ್ಲದ ಸ್ಥಿತಿ
**ನದರ** – ನೆದರ, ದೃಷ್ಟಿ
**ನ್ಯಾರಿ** – ಮುಂಜಾನೆ ಉಪಹಾರ
**ನಿಲಾ** – ನಿಲುವು, ಬೆಳೆಯ ಎತ್ತರ
**ನಿಲಿ** – ನಿರಿಗೆ, ನಿಲಿಗೆ
**ನಿವಳ** – ಶುದ್ಧ, ಒಳ್ಳೆಯ

### (ಪ, ಫ)

**ಪಂಕ** – ನೀರು
**ಪಂಕಜ** – ಕಮಲ
**ಪಕ್ತ** – ಕೇವಲ
**ಪಡಿಕಿ** – ಹಳೇಸೀರಿ
**ಪಟಕಾ** – ರುಮಾಲು (ಅಗಲ ಕಡಿಮೆ ಉದ್ದು ಜಾಸ್ತಿ)
**ಪಂಟ** – ನೆವ, ನೆಪ
**ಪಪ್ಪಳಿ** – ಹೆಂಡಬಂಡ (ಬಿಳಿ–ಕರಿ, ಬಿಳಿ–ಕಪ್ಪು)
**ಪರಸಿ** – ಭಕ್ತರ ದಂಡು, ಜಾತ್ರೆ
**ಪರ್ಯಾಣ** – ತಾಟಿನಾಕಾರದ ಮಣ್ಣಿನ ಪಾತ್ರೆ
**ಪಾಸಿ** – ಹುಸಿಮೋಸ
**ಪಂಜಾಳಿ** – ಸವೆದು ನೀರು ನೀರಾದ ಬಟ್ಟೆ
**ಪಿಂಡ** – ದಪ್ಪ
**ಮಗ್ಗಾ** – ಕಿವಿಯ ಮೇಲೆ ಉಬ್ಬಿಸಿ ಹಿಕ್ಕುವ ಕೂದಲ ವಿನ್ಯಾಸ
**ಪುತನಿ** – ಒಬ್ಬ ರಾಕ್ಷಸಿ
**ಪುರಮಾಸಿ** – ಬೇಕಂತುಲೆ
**ಪೇರ** – ವ್ಯತ್ಯಾಸ



**ಫಟಿಂಗ** – ಕಾಮುಕ
**ಫೇರಿ** – ದುಂಡಗೆ ತಿರುಗುವುದು
**ಫೌಜು** – ಸೈನ್ಯ
**ಪ್ಯಾಟಿ** – ಪೇಟೆ

### (ಬ, ಭ)

**ಬಗಸು** – ಬಯಸು
**ಬಗಳಿ** – ಪೊಳ್ಳು, ಜೊಳ್ಳು, ಚಲ್ಲಾಪಿಲ್ಲಿಯಾದ
**ಬಚಾವ** – ಉಳಿಸು, ರಕ್ಷಿಸು
**ಬಣ್ಣದ ಗಿಣಿ** – ಸೂಳೆ
**ಬದ್ದು** – ಕೆಟ್ಟ ಪರಿಣಾಮ
**ಬರಗೇಡು** – ಎಂದೂ ಕಾಣದವನಂತೆ ವರ್ತಿಸು
**ಬರಷಣ** – ದುಷ್ಪರಿಣಾಮ ಬೀರಬಲ್ಲ, ಬೇಡಾದ
**ಬರ್ಕತ್** – ಶಕ್ತಿ
**ಬಳಸಾಲ** – ಬಿತ್ತಿಗೆ ಬೀಜ ಮುಚ್ಚಲು ಹಿಂದಿನಿಂದ ಹಾಯಿಸುವ ಕುಂಟಿ
**ಬಾರಿಗಿ** – ಕಸ ಪೊರಕೆ
**ಬಿದಿಗಿ** – ಹುಣ್ಣಿಮೆ
**ಬಿದ್ದೋಡಿ** – ಓಡಿ ಬಂದು ಬಿದ್ದವಳು, ನಿರುಪಯೋಗಿ
**ಬಿಡೆ** – ಉಪಕಾರ
**ಬಿನಗು** – ವಿನೋದ
**ಬಿರಾಡ** – ಹೊಲದ ಕರ
**ಬಿಂಗ ಬಿಡಸು** – ಮುಂಗಾಣದಂತೆ ಮಾಡು
**ಬುಗುಡಿ** – ಕಿವಿಯ ಆಭರಣ
**ಬೇತ** – ತಂತ್ರ
**ಬೈಮಂಗ** – ಸೇಂಗಾ
**ಬೋಕ** – ದೊಡ್ಡ ತೂತು
**ಭಕ್ಕರಿ** – ರೊಟ್ಟಿ
**ಭಂಗಿ** – ಅಮಲು ಬರಿಸು ವಸ್ತು

**ಭರ್ತಿ** – ಪೂರ್ಣ ತುಂಬಿದ
**ಭಾರಕ** – ವಯಸ್ಸಿಗೆ ಬರು
**ಭೋಗಿ** – ಹಾವು

### (ಮ)

**ಮಗಡ** – ಎತ್ತುಗಳ ಮುಖ ಸಿಂಗಾರಕ್ಕೆ ಹಾಕಿದ ತೊಗಲಿನ ವಸ್ತು (ಮುಖವಾಡ ?)
**ಮಡದೇರು** – ಮಡದಿಯರು
**ಮಣಕ** – ತಾಯಿಯಾಗುವ ಮೊದಲಿನ ತರುಣ ಎಮ್ಮೆ, ಆಕಳು
**ಮರಗು** – ಸಂಕಟಪಡು
**ಮಲಕ** – ಓಡುವಾಗ ತಟ್ಟನೆ ಹೊರಳುವ ರೀತಿ
**ಮಲು** – ಹಗ್ಗದ ಒಂದು ರೀತಿಯ ಕಟ್ಟು
**ಮಸಲತ್ತು** – ಕುತಂತ್ರ
**ಮೃಡ** – ಶಿವ
**ಮೃತ್ಯುಂಜಯ** – ಮೃತ್ಯುಗೆದ್ದವ
**ಮುಗ್ಗು** – ಎಡವಿ ಬೀಳು
**ಮಾರ್ತಂಡ** – ಸೂರ್ಯ
**ಮುಟಗಿ** – ಬಿಸಿ ರೊಟ್ಟಿಯಲ್ಲಿ ಉಪ್ಪುಖಾರ ಹಾಕಿ ಕುಟ್ಟಿ ಮೆತ್ತಗೆ ಮಾಡಿದ ಉಂಡಿ
**ಮುಂಡಾಸು** – ಪೇಟ
**ಮುರಕ** – ಡೌಲು, ಆಕರ್ಷಿಸುವಂತೆ ಮಾಡು
**ಮುರಗಣ** – ಕರಚೀಕಾಯಿಯಂಥದು ಕುದಿಸಿದ ಖಾದ್ಯ

### (ಯ, ರ, ಲ)

**ಯಾಸಿ** – ಡೊಂಕ
**ರಮಸಾಕ** – ರಮಿಸಲು
**ರಿಕ್ಕ** – ಬಿಡದಂತೆ ಗಟ್ಟಿಯಾಗಿ ಅಂಟಿಕೊಂಡ
**ರುಂಜಿ** – ಹಾಕಿದ ಗೆರೆ
**ರೊಡ್ಡ** – ಎಡಗೈ ಬಳಸುವವ
**ಲಗ್ಗ** – ಬೇಗ

(ವ)

**ವಟ್ಟಿ** – ಹಟಮಾರಿ, ಮಾತು ಕೇಳದ

**ವತ್ತರ** – ಬಹಳ ಬೇಗ

**ವಸುಮತಿ** – ಭೂಮಿ

**ವಾತ** – ಈಗ ತೆಗೆದುಕೊಂಡ ಕಾಳಿಗೆ ಪ್ರತಿಯಾಗಿ ಮುಂದೆ ಒಂದೂವರೆ ಪಟ್ಟು ಕೊಡುವ ಪದ್ಧತಿ.

**ವಾಯಿ** – ಊತ, ಭಾವು

**ವಾರಿ** – ನೀರು

**ವಾಳಿ** – ಯಾರ ಮಾತೂ ಕೇಳದ, ಬೇಡಾದ

(ಶ, ಷ, ಸ, ಹ)

**ಶಪ್ತ** – ಶಪಥ

**ಶೇಲ್ತ** – ಸೇಲ, ಹೆಚ್ಚು, ಮೇಲು

**ಸಟೆ** – ಸುಳ್ಳು

**ಸಡ್ಲ** – ಸಡಿಲು, ಪೊಳ್ಳು

**ಸರು** – ಸರುವು, ಹೊಳೆಯ ಒತ್ತು

**ಸಂಗ್ರಾಮ** – ಸಜ್ಜು, ವ್ಯವಸ್ಥೆ

**ಸಂದ್ರಿ** – ಎರಡು ಮನೆಯ ನಡುವಿನ ಇಕ್ಕಟ್ಟಾದ ಹಾದಿ

**ಸಳ್ಳವರಿ** – ಅಂಜಿ ಎದೆ ಒಡೆ

**ಸ್ವಾರಿ** – ಗಡಿಗೆ, ಹಾಲಿನ ಗಡಿಗೆ

**ಸಿಂಗಾರ** – ಶೃಂಗಾರ

**ಸಿಂಪ** – ಎಡೆಕುಂಟೆಯ ತಾಳ

**ಸುಮಾರ** – ಕೆಟ್ಟ

**ಸುಪ್ಪಲಿ** – ಕಾಳು ಕೇರುವ ಚಿಕ್ಕಮೊರ

**ಸೂಸ** – ಪೂರ್ತಿ ತುಂಬಿದ

**ಸೌಸ** – ಸೌರಸು

**ಹಲ್ಲೆ** – ಚಿಗುರೆ

* * *